‘ಪಾಂಚಾಳ ಜಾನಪದ’

(ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕ

ಶ್ರೀನಿವಾಸಚಾರಿ .ಬಿ

ಮಾರ್ಗದರ್ಶಕರು

ಡಾ. ಮೊಗಳ್ಳಿ ಗಣೇಶ್

ಮುಖ್ಯಸ್ಥರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ


ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬-೦೭

ಪಾಂಚಾಳರು



‘ಪಾಂಚಾಳ ಜಾನಪದ’

(ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕ

ಶ್ರೀನಿವಾಸಚಾರಿ.ಬಿ

ಮಾರ್ಗದರ್ಶಕರು

ಡಾ. ಮೊಗಳ್ಳಿ ಗಣೇಶ್

ಮುಖ್ಯಸ್ಥರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

೨೦೦೬-೦೭

ದೃಢೀಕರಣ

ಬಿ.ಶ್ರೀನಿವಾಸಚಾರಿ ಇವರು **ಪಾಂಚಾಳ ಜಾನಪದ** ಎಂಬ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ನಿಬಂಧವನ್ನು ಈ ಮೊದಲು ಇವರು ಎಲ್ಲೂ ಯಾವುದೇ ಉದ್ದೇಶಕ್ಕೂ ಹಾಗೂ ಪದವಿಗೂ ಬಳಸಿಕೊಂಡಿರುವುದಿಲ್ಲ.

ಸ್ಥಳ : ವಿದ್ಯಾರಣ್ಯ
ದಿನಾಂಕ: ೩.೪.೨೦೦೭

(ಡಾ. ಮೊಗಳ್ಳಿ ಗಣೇಶ)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ

ಪ್ರಮಾಣ ಪತ್ರ

'ಪಾಂಚಾಳ ಜಾನಪದ' ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಮೊಗಳ್ಳಿ ಗಣೇಶ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 2.4.02

(ಶ್ರೀನಿವಾಸಚಾರಿ.ಬಿ)
ಸಂಶೋಧಕ

ಪರಿವಿಡಿ

ಒಂದನೇ ಭಾಗ

ಅಧ್ಯಾಯ ೧

ಪ್ರವೇಶ: ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಅಧ್ಯಾಯ ೨

ಪಾಂಚಾಳ ಸಮಾಜದ ಮೌಖಿಕ ಇತಿಹಾಸ

ಅಧ್ಯಾಯ–೧

ಪ್ರವೇಶ : ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಪ್ರವೇಶ

ಯಾವುದೇ ನಾಡಿನ ಸಂಸ್ಕೃತಿ ನಿರ್ಮಾಣವು ಅಲ್ಲಿನ ಕುಶಲ ಕರ್ಮಿಗಳು ನಿರ್ವಹಿಸುವ ಪಾತ್ರ ತುಂಬಾ ಮಹತ್ವದ್ದಾಗಿರುತ್ತದೆ. ಅನಕ್ಷರಸ್ಥರೆ ಹೆಚ್ಚಾಗಿರುವ ಪಾಂಚಾಳ ಸಮುದಾಯಗಳ ಬಗೆಗೆ ಲಿಖಿತ ದಾಖಲೆಗಳು ದೊರಕುವುದಾದರೂ ಹೆಚ್ಚು 'ಮೌಖಿಕ' ಸಂಪ್ರದಾಯದ ಹಿನ್ನೆಲೆಯಲ್ಲಿ ಸಂಶೋಧಕರು ಪರಂಪರೆಯಲ್ಲಿ ದೊರಕುವ ಮಾಹಿತಿಗಳ ಕಡೆಗೆ ಲಕ್ಷ್ಯವಹಿಸಬೇಕಾಗುತ್ತದೆ. ದಾಖಲೆಗಳ ಜೊತೆಗೆ ಹೆಚ್ಚಾಗಿ ಕ್ಷೇತ್ರಕಾರ್ಯಮಾಡಿ ಪಾಂಚಾಳ ಸಮುದಾಯದ ಬದುಕು ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಫಲವಾದ ಮಹತ್ವದ ಮಾಹಿತಿಯನ್ನು ಎಚ್ಚರ ವಹಿಸಿ ಅಧ್ಯಯನ ಮಾಡಲಾಗಿದೆ.

ಮಾನವ ಸಂಸ್ಕೃತಿಯನ್ನೂ ಅದರ ಸಮಗ್ರ ಹಿನ್ನೆಲೆಯಲ್ಲಿ ಅರಿಯುವ ದೃಷ್ಟಿಯಿಂದ ಒಂದೊಂದು ಸಮಾಜಿಕ ಗುಂಪನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವ ಅಗತ್ಯ ಬಹಳ ಇದೆ. ಮನುಷ್ಯ ಮತ್ತು ಅವನ ಸಂಸ್ಕೃತಿಯನ್ನು ಕುರಿತು ಅಭ್ಯಾಸಿಸುವ ಎಲ್ಲಾ ಮಾನವಿಕ ವಿಷಯಗಳು ಇಂದು ತಮ್ಮ ತಮ್ಮ ದೃಷ್ಟಿಕೋನದಿಂದ ಬೇರೆ ಬೇರೆ ಸಮಾಜಗಳ ಜೀವನ ಮತ್ತು ಸಾಮಾಜಿಕ ವ್ಯವಸ್ಥೆಗಳ ವೈಶಿಷ್ಟ್ಯವನ್ನು ಗುರುತಿಸುತ್ತೇವೆ. ಬೇರೆ ಬೇರೆ ಸಮಾಜಗಳ ನಡುವೆ ಸಂಬಂಧ ಸಂಘಟನಾ ವ್ಯವಸ್ಥೆ ಬಗೆ ಬಗೆಯ ಜೀವನ ಕ್ರಮದ ಮಹತ್ವವನ್ನು ತಿಳಿದುಕೊಳ್ಳುವುದರ ಜೊತೆಗೆ ಈ ವಿವಿಧ ಸಮಾಜಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರವನ್ನು ವಿವರಿಸಲಾಗಿದೆ. ಜನಾಂಗಿಕ ಅಧ್ಯಯನಗಳು ಕೇವಲ ಮಾನವ ಶಾಸ್ತ್ರಜ್ಞರಿಗೆ ಮಾತ್ರ ಮೀಸಲು ಎನ್ನುವಂತಹ ಪರಿಸ್ಥಿತಿಯ ಕಾಲವೊಂದಿತ್ತು. ಆದರೆ ಇತ್ತೀಚಿನ ಹೊಸಹೊಸ ಆಲೋಚನಾ ಕ್ರಮ, ಹೊಸ ಹೊಸ ಶಿಸ್ತುಗಳಿಂದಾಗಿ ಈ ಮನೋಭಾವನೆ ಬದಲಾಗುತ್ತಿದೆ. ವ್ಯವಸ್ಥೆ, ಸಮಾಜ, ಸಮುದಾಯ ಹೀಗೆ ಯಾವುದೇ ಒಂದರ ಬಗ್ಗೆ ತಳಪಾಯದಿಂದ ಸಂಶೋಧನೆ ನಡೆಯಬೇಕಾದಲ್ಲಿ ಅಂತರ್‌ಶಿಸ್ತೀಯ ಅಧ್ಯಯನದ ಮನೋಭಾವನೆ ಇಂದು ಸಂಶೋಧಕರಲ್ಲಿ ಅವಶ್ಯವೇನೋ? ಒಂದು ಜನಾಂಗ, ಒಂದು ಸಮುದಾಯವನ್ನು ಬುಡಕಟ್ಟು ಜನಾಂಗದ, ಜನಾಂಗೀಯ ವಿಭಾಗಿಯವಾಗಿ ಅಧ್ಯಯನ ನಡೆಯುತ್ತದೆ. ಸಾಮಾಜಿಕ, ಆರ್ಥಿಕ, ಧಾರ್ಮಿಕವಾಗಿ ಅಧ್ಯನಗಳು ನಡೆಯುವುದರ ಜೊತೆಗೆ ಒಂದು ಸಮುದಾಯವನ್ನು ಜಾನಪದೀಯ ದೃಷ್ಟಿಯಿಂದ ಅಧ್ಯಯನ ಮಾಡುವ ಶಿಸ್ತು ಇತ್ತೀಚೆಗೆ ನಡೆಯುತ್ತಿರುವುದು ಸಂತೋಷದ ಸಂಗತಿ.

ಕೇವಲ ಮಾನವ ಶಾಸ್ತ್ರಜ್ಞರು ಮಾತ್ರ ಕೈಹಾಕುತ್ತಿದ್ದ ಬುಡಕಟ್ಟು ಸಮುದಾಯಗಳ ಕ್ಷೇತ್ರವನ್ನು ಇಂದು ಜಾನಪದ ವಿದ್ವಾಂಸರು ಪ್ರವೇಶಿಸಿದ್ದಾರೆ. ಒಂದು ಸಮುದಾಯದ ಬದುಕಿನ ರೀತಿ ನೀತಿ ಸಂಸ್ಕೃತಿಗಳನ್ನು ಅರಿಯಬೇಕಾದಲ್ಲಿ ಆ ಸಮುದಾಯವನ್ನು ಆಚರಿಸುವ ನಂಬಿಕೆ, ಸಂಪ್ರದಾಯ, ವಿಧಿ ವಿಧಾನಗಳು ಕುಲಕಸಬುಗಳು ಇಂತಹ ಸಂಸ್ಕೃತಿಯನ್ನು ಜೀವಂತವಾಗಿಟ್ಟಿರುವ ಆ ಸಮುದಾಯದ ಜಾನಪದ ಹಿನ್ನೆಲೆಯ ಅರಿವನ್ನು ಮಾಡಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಇಂದಿನ ಜಾಗತೀಕರಣ ಪ್ರಕ್ರಿಯೆಯಲ್ಲಿ ಎಷ್ಟೋ ಬುಡಕಟ್ಟು ಸಮುದಾಯಗಳು ನಶಿಸಿಹೋಗುತ್ತಿರುವ ಎಂಬ ಹೆದರಿಕೆ ನಡುವೆಯೂ ಅಂತಹ ಪ್ರಕ್ರಿಯೆಗಳನ್ನು ಎದುರಿಸಿ ನಿಂತ ತಮ್ಮ ಮೂಲಬೇರುಗಳನ್ನು ಕಾಯ್ದುಕೊಳ್ಳಲು ಇಂತಹ ಸಮುದಾಯಗಳಲ್ಲಿ ನಿರಂತರವಾದ ಹೋರಾಟ ನಡೆಯುತ್ತಲೇ ಇರುತ್ತವೆ. ದೂರದಿಂದ ನೋಡಿದಾಗ ಭಾರತದ ಒಂದು ಸಮುದಾಯ ಇನ್ನೊಂದು ಸಮುದಾಯಕ್ಕೆ ಯಾವುದೇ ರೀತಿಯ ಭಿನ್ನತೆಯನ್ನು ಗುರುತಿಸುವ ಕೆಲಸ ಮಾಡಬೇಕಾಗಿದೆ. ಆ ಒಂದು ಸಮುದಾಯದ ಸಮೀಪಕ್ಕೆ ನಿಂತು ತಳಕ್ಕೆ ಇಳಿದಾಗ ಆ ಸಮುದಾಯದ ವೈಶಿಷ್ಟಗಳು, ಅದು ಕಟ್ಟಕೊಂಡ ಭದ್ರ ಕೋಟೆಯ ಅರಿವು ನಮಗಾಗುತ್ತದೆ. ಅಂತಹ ಸಮುದಾಯಗಳಲ್ಲಿ ಒಂದಾದ 'ಪಾಂಚಾಳ'ರನ್ನು ಕುರಿತು ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಭಾರತದ ಬಹುಪಾಲು ಬುಡಕಟ್ಟುಗಳು ಆಧುನಿಕ ಜಗತ್ತಿನ ಸಂಸ್ಕೃತೀಕರಣಗೊಳ್ಳುತ್ತಾ ಒಂದು ಮೂಲ ಸಂಸ್ಕೃತಿಯಿಂದ ದೂರವಾದಂತೆ ಪಾಂಚಾಳ ಸಮುದಾಯ ಇನ್ನು ಸಹ ತಮ್ಮ ಮೂಲಸಂಸ್ಕೃತಿಯನ್ನು ಹಾಗೂ ನಿರ್ವಹಿಸುವ ವೃತ್ತಿಗಳನ್ನು ತನ್ನೊಡಲೊಳಗೆ ಅಡಗಿಸಿಟ್ಟುಕೊಂಡಿದ್ದಾರೆ. ಪಾಂಚಾಳರನ್ನು ನಾವು ಗುರುತಿಸುವುದು ವೃತ್ತಿಗಳಿಂದಲೇ ಎಂಬ ಮಾತು ಸತ್ಯವಾಗಿದೆ. ಅದಕ್ಕೆ ಅವರು ನಿರ್ವಹಿಸುವ ಕಸುಬುಗಳೇ ಕಾರಣ. ಜಾನಪದ ಕಣ್ಮರೆಯಾಗುತ್ತದೆ ಎಂಬ ಅಪಾಯದ ಅರಿವಿನಿಂದ ಜಾನಪದದತ್ತ ಆಸಕ್ತಿ ತೋರಲು ಆರಂಭಿಸಿದಾಗ ಜಾನಪದದ ಮೌಖಿಕ ರೂಪಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು. ಆದರೆ ಮೌಖಿಕ ಸಾಹಿತ್ಯ ರೂಪಗಳಂತಿಯೇ ಜಾನಪದದ ವಸ್ತುಸಂಸ್ಕೃತಿ ಕೂಡಾ ಕಣ್ಮರೆಯಾಗುತ್ತಿದೆ. ಅದರತ್ತ ಕೊಡಬೇಕೆಂದ ಗಮನವನ್ನು ವಸ್ತು ಸಂಸ್ಕೃತಿಯು ಕಣ್ಣಿಗೆ ಕಾಣುವಂತಹ ಪ್ರಕಾರಗಳ ಬಗ್ಗೆ ಗಮನವನ್ನು ಕೇಂದ್ರಿಕರಿಸಬೇಕಾಗುತ್ತದೆ. ಇದರಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುವ ಹಾಗೂ ಮೌಖಿಕ ಜಾನಪದದಂತಿಯೇ ಪರಂಪರೆಯ ಪ್ರಭಾವ ಹಾಗೂ ವೈಯಕ್ತಿಕ ಬದಲಾವಣೆಗಳಿಗೆ ಒಳಗಾಗುವ ತಂತ್ರ, ಕುಶಲತೆ, ವಿಧಾನ, ಸೂತ್ರಗಳೂ ಸೇರುತ್ತವೆ. ವಸತಿ, ಉಡುಗೆ–ತೊಡುಗೆ, ಆಹಾರ, ಕೃಷಿ ಉಪಕರಣಗಳ ತಯಾರಿಕೆ, ಪೀಠೋಪಕರಣಗಳ ವಿನ್ಯಾಸ, ಮೂರ್ತಿಶಿಲ್ಪ, ಆಭರಣಗಳು ಇತ್ಯಾದಿಗಳ ಬಗ್ಗೆ ವಸ್ತುಸಂಸ್ಕೃತಿಯ ಅಧ್ಯಯನವು ಈ ಗ್ರಾಮೀಣ ವೃತ್ತಿಗಳಲ್ಲಿ ಕಂಡುಬರುತ್ತವೆ.

ಗ್ರಾಮೀಣ ಬದುಕಿನಲ್ಲಿ ಪರಂಪರಾಗತವಾಗಿ ಮುಂದುವರಿಸಿಕೊಂಡು ಬರುವಂತಹ ವೃತ್ತಿಗಳನ್ನು ಗ್ರಾಮೀಣ ವೃತ್ತಿಗಳಲ್ಲಿ ಈ ಪಾಂಚಾಳ ಕಸಬುಗಳು ಸೇರಿವೆ. ಇವುಗಳನ್ನು ಜಾನಪದದ ಕಸಬುಗಳೆಂತಲೂ ಕರೆಯಬಹುದು. ಈ ವೃತ್ತಿಗಳಲ್ಲಿ ಮಾನವ ಶ್ರಮವೇ ಮುಖ್ಯವಾಗಿದ್ದು ಕೆಲಸಕ್ಕೆ ಅನಿವಾರ್ಯವಾದಂತಹ ಒಂದೆರೆಡು ಸರಳ ಯಂತ್ರಗಳನ್ನು ರೂಪಿಸಿಕೊಂಡಿರುವುದರಿಂದ ಇವುಗಳನ್ನೂ ಕೈಸಬುಗಳೆಂದು ಕರೆಯುತ್ತಾರೆ. ಕೃಷಿ ಪರಿಕಲ್ಪನೆಯೊಂದಿಗೆ ಗ್ರಾಮೀಣ ವೃತ್ತಿಗಳು ಹುಟ್ಟಿ, ಬೆಳೆದುಕೊಂಡು ಬಂದವುಗಳಾಗಿವೆ. ಸ್ಥಿರ ವಸತಿ ಆರಂಭಗೊಂಡು ಜೀವನೋಪಾಯಕ್ಕಾಗಿ ಆಯ್ದುಕೊಂಡ ವೃತ್ತಿಗಳು ಮುಂದೆ ಕುಲಕಸಬುಗಳಾದವು ಅವುಗಳಿಂದಲೇ ವಂಶ ಪರಂಪರೆಯಾಗಿ ವೃತ್ತಿಕಾರರು ಪ್ರಮುಖರಾದರೂ ಒಂದೊಂದು ವೃತ್ತಿಗೂ ಸಾಮಾಜಿಕ ಒಪ್ಪಂದಗಳು ಏರ್ಪಟ್ಟಿರುವುದನ್ನು ಕಾಣುತ್ತೇವೆ. ಆ ಸಾಮಾಜಿಕ ಒಪ್ಪಂದದ ಮೇಲೆಯೇ ಈ ಸಮುದಾಯ ಬದುಕಿರುವುದನ್ನು ಕಾಣಬಹುದು.

ಭಾರತ ದೇಶ ಬಹು ಅರ್ಥಗಳಲ್ಲಿ 'ಗ್ರಾಮೀಣ ಭಾರತ' ಎಂಬ ಹೆಸರಿಗೆ ಅನ್ವರ್ಥಕವಾಗಿದೆ. ಭಾರತದ ಪ್ರಗತಿ ಮತ್ತು ಅಭಿವೃದ್ಧಿಗಳು ಮುಖ್ಯವಾಗಿ ಇಲ್ಲಿಯ ಹಳ್ಳಿಗಳ ಪ್ರಗತಿ ಮತ್ತು ಅಭಿವೃದ್ಧಿಯನ್ನೇ ಅವಲಂಬಿಸಿದೆ. ಶೇ. ೭೦ ಕ್ಕಿಂತ ಹೆಚ್ಚು ಜನ ಗ್ರಾಮಾಂತರ ಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆ. ಶೇ. ೫೦ ಕ್ಕೂ ಹೆಚ್ಚು ಅನಕ್ಷರಸ್ಥರು ಹೊಂದಿರುವ

ಈ ನಾಡಿನ ಗ್ರಾಮ ಜೀವನದಲ್ಲಿ ಪರಂಪರಾಗತವಾದ ಮೌಢ್ಯ, ಅಂಧ ಸಂಪ್ರದಾಯ, ಅಜ್ಞಾನ ಮತ್ತು ಅನ್ಯೋನ್ಯತೆಗಳು ಮನೆಮಾಡಿಕೊಂಡಿವೆ. ಈ ಗ್ರಾಮಗಳ ಬೇಸಾಯದ ಕ್ರಮ, ಆಲೋಚನೆಯ ರೀತಿ ಎಲ್ಲವೂ ಪ್ರಾಚೀನ ನಂಬಿಕೆ ಮತ್ತು ಪದ್ಧತಿಗಳ ಶಿಥಿಲ ಸರಪಣಿಯನ್ನೇ ಆಧಾರವಾಗಿ ಹಿಡಿದುಕೊಂಡಿವೆ. ಆದರೆ ಆದಿಮ ಕಾಲದ ಗ್ರಾಮೀಣ ಜೀವನ ಸಂಸ್ಕೃತಿಯನ್ನು ಇತಿಹಾಸದ ದಾರಿಯಲ್ಲಿ ಹಿನ್ನಡೆದು ಅವಲೋಕಿಸಿದಾಗ ಈ ಜೀವನ ಸಂಪೂರ್ಣವಾಗಿ ಸ್ವತಂತ್ರವೂ, ಸ್ವಾವಲಂಬನಾ ಶೀಲವೂ, ನಿಸರ್ಗಾಧಾರಿತವೂ ಆಗಿತ್ತೆಂಬುದು ನಮಗೆ ಮನವರಿಕೆಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಬಹುಮಟ್ಟಿಗೆ ಸ್ವತಂತ್ರ ಘಟಕಗಳೇ ಆಗಿದ್ದು ಗ್ರಾಮಗಳು ತಮಗೆ ಅಗತ್ಯವಾದ ಆಹಾರ ಬೆಳೆಯಲು ಭೂಮಿಯನ್ನು, ನೀರು ದೊರೆಯುವ ನೆಲೆಯನ್ನು ಸಹಜವಾಗಿ ವಾಸಿಸಲು ಅನುಕೂಲಕರವಾದ ಪರಿಸರವನ್ನು ಹುಡುಕಿಕೊಂಡು ಅಲೆದಾಡುತ್ತಾ ಕೊನೆಗೊಮ್ಮೆ ಸ್ಥಾಯಿಯಾಗಿ ನೆಲೆನಿಂತವು. ಅಲ್ಲಿಯ ಭೂಮಿ, ನೀರು, ಗಾಳಿಗೆ ಅನುಸಾರವಾಗಿ ಆಹಾರವನ್ನು ಬೆಳೆಯುತ್ತಾ, ತಮಗೆ ವಾಸಿಸಲು ಅಗತ್ಯವಾದ ವಸತಿಗಳನ್ನು, ತಮ್ಮ ದೈನಂದಿನ ಆಗುಹೋಗುಗಳಿಗೆ ಅನಿವಾರ್ಯವಾದ ಕೌಟುಂಬಿಕ ಸಂಬಂಧಗಳನ್ನು ಕಲ್ಪಿಸುತ್ತಾ ತಮಗೆ ಆಧಾರವಾಗುವ ನಿಸರ್ಗವನ್ನು ಅದರ ಬಹುಮುಖತೆಗಳಲ್ಲಿ ಅನ್ವೇಷಣೆ ಮಾಡುತ್ತಾ ಬದುದನ್ನು ರೂಪಿಸುವ ನಿಸರ್ಗ ಶಕ್ತಿಗಳನ್ನು ದೈವಗಳೆಂದು ಆರಾಧಿಸುತ್ತ ಪತೀತಗಳನ್ನು ಕಲ್ಪಿಸಿಕೊಂಡರು. ಅವುಗಳನ್ನು ಪೂಜಿಸುವ ವಿಧಿವಿಧಾನಗಳನ್ನು ಅನುಭವದ ಆಧಾರದ ಮೇಲೆ ಸೃಷ್ಟಿಸಿಕೊಂಡರು. ಕೃಷಿಗೆ ಮತ್ತು ಆಹಾರಕ್ಕೆ ಅಗತ್ಯವಾದ ಸಾಧನಗಳನ್ನು ಹಂತ ಹಂತವಾಗಿ ನಿರ್ಮಿಸಿಕೊಂಡರು. ಮುಖ್ಯವಾಗಿ ಮಾಂಸಗಳೇ ಆಹಾರದ ಪ್ರಮುಖ ಭಾಗವಾಗಿದ್ದ ಕಾಲದಲ್ಲಿ ಪ್ರಾಣಿಗಳ ಬೇಟೆಗೆ ಅಗತ್ಯವಾದ ಪ್ರಾಯೋಗಿಕ ಆಧಾರದಲ್ಲಿ ರೂಢಿಸಿಕೊಂಡರು. ಒಂದೆಡೆ ನೆಲೆಸಿದ ಹೆಣ್ಣು ಗಂಡುಗಳ ಕಾರಣದಿಂದ ಅಂತಃಕಲಹ ಆರಂಭವಾಗದಂತೆ ತಮ್ಮ ತಮ್ಮಲೇ ಕೆಲವು ಒಪ್ಪಂದಗಳನ್ನು ಮಾಡಿಕೊಂಡರು. ಮಳೆ, ಗಾಳಿ, ಬಿಸಿಲು ಮುಂತಾದ ಪ್ರಕೃತಿ ವಿಕೋಪಗಳಿಂದ ರಕ್ಷಿಸಿಕೊಳ್ಳಲು ವಾತವರಣಕ್ಕನುಗುಣವಾದ ವಸತಿ ನಿರ್ಮಾಣ ಆರಂಭವಾಗಿ ಕಲಕ್ರಮೇಣ ಅವುಗಳಲ್ಲಿ ಸೌಂದರ್ಯ ದೃಷ್ಟಿಯೂ ನೆಲೆಗೊಂಡವು. ಸಮಾನ ವಯಸ್ಸು, ಸಮಾನ ವೃತ್ತಿ, ಸಮಾನ ಅಭಿರುಚಿಗಳಿಂದ ಕೂಡಿದ ಜನ ಪ್ರತ್ತೇಕ ಪ್ರತ್ತೇಕ ಗುಂಪುಗಳಾದವು. ಆ ಗುಂಪುಗಳಿಗೆ ಸಮಾನವಾದ ನಂಬಿಕೆ, ಆಚರಣೆಗಳು ಚಾಲ್ತಿಯೆ ಬಂದವು. ಹೀಗಿಯೇ ಜೀವನದ ಸಂಕಷ್ಟಗಳನ್ನು ಮರೆಯಲು ಮನಸ್ಸಿಗೆ ಮತ್ತು ಅನುಭವಕ್ಕೆ ಸಹಜವಾದ ಹಾಡು, ಕಥೆ, ಚಿತ್ರ, ಅಲಂಕಾರ ಮುಂತಾದವು ರೂಪಗೊಂಡವು. ಹೀಗೆ ಜಾತ್ರೆಗಳು, ಸಂತೆಗಳು, ಹಬ್ಬ-ಹರಿದಿನಗಳು ಸಾಮಾಜಿಕ ಚಿಂತನೆ ಮತ್ತು ಕ್ರಿಯೆಗಳ ಫಲವಾಗಿ ಮೂಡಿಬಂದವು. ಮೊದ ಮೊದಲು ಕೇವಲ ಹೊಟ್ಟೆಯ ಬವಣೆಯನ್ನು ನೀಗಲು ಆರಂಭವಾದ ಈ ಪ್ರಯತ್ನ ಮತ್ತು ಪ್ರಯೋಗಗಳು ಬರುಬರುತ್ತಾ ಸುಖ ಜೀವನ ಮತ್ತು ಸಂತೋಷದ ಹಾದಿಯನ್ನು ಸ್ವಾಭಾವಿಕವಾಗಿಯೇ ನಿರ್ಮಿತಗೊಂಡವು. ಆದಿಮ ತಲೆಮಾರಿನ ಈ ಜೀವನ ಪದ್ಧತಿಯು ಬಹುಮುಖ್ಯ ಲಕ್ಷಣಗಳನ್ನೆಲ್ಲ ಆನಂತರದ ತಲೆಮಾರುಗಳು ಅನುಸರಿಸುತ್ತಾ ಮತ್ತು ಅಭಿವೃದ್ಧಿ ಪಡಿಸುತ್ತಾ ಬಂದವು.

ವಾಸ್ತವ ಪ್ರಜ್ಞೆಯ ಜೊತೆಗೆ ಸೌಂದರ್ಯ ಪ್ರಜ್ಞೆಗಳು ಬೆಳೆದುಕೊಂಡು ಬಗೆಬಗೆಯ ಕಲೆಗಳ ಆವಿಷ್ಕಾರವೂ ಆಯಿತು. ಈಗಾಗಿ ಜೀವನದಿಂದ ಹುಟ್ಟಿದ ಮತ್ತು ಜೀವನಕ್ಕೆ ಪೋಷಕವಾದ ಈ ಎಲ್ಲಾ ಪದ್ಧತಿಗಳು ದೀರ್ಘಕಾಲದ ಅನುಭವದ ಫಲವಾಗಿ ಸಂಸ್ಕೃತಿ ಎನಿಸಿಕೊಂಡವು. ಈ ಎಲ್ಲಾ ಸಂಸ್ಕೃತಿಯ ಮೂಲಪ್ರಜ್ಞೆ, ಮೂಲಭಾವಾಗಿ ಮತ್ತು ಮೂಲ ಚಿಂತನೆ ಆ ಪರಿಸರದಿಂದ ಜನಿಸಿ ದೇಶಿಯ ಸಂಸ್ಕೃತಿ ಎನಿಸಿಕೊಂಡವು. ಅವುಗಳನ್ನು ಸಂಸಿ ಮಾಡುವ ಕಸಬುಗಳನ್ನು ದೇಶಿಯ ತಂತ್ರಜ್ಞಾನಗಳೆನಿಸಿಕೊಂಡವು. ಅಂತಹ ತಂತ್ರಜ್ಞಾನಗಳ ಪರಿಧಿಗಳಲ್ಲಿ ಪಾಂಚಾಳರ ಪಂಚ ವೃತ್ತಿಗಳು ಹೊರತಾಗಿಲ್ಲ. ಆದರೆ ಆರ್ಯರ ಆಗಮನವಾದ ನಂತರ ಈ ಮೂಲ ಸಂಸ್ಕೃತಿಗಳ ಮೇಲೆ ಅನ್ಯ ಸಂಸ್ಕೃತಿಗಳ ಆಕ್ರಮಣ ಮತ್ತು ಸಂಕ್ರಮಣಗಳಾದವು. ಈ ದೇಶಕ್ಕೆ ತಂಡೋಪತಂಡವಾಗಿ ಬಂದ ಇತರ ಸಂಸ್ಕೃತಿಗಳ ಪ್ರಭಾವವೂ ಗ್ರಾಮೀಣ ಮತ್ತು ಪ್ರಗತಿ ವಿರೋಧಿಯಾದುದು ಎಂಬ ಭಾವನೆ ಬಲಿಯಿತು. ಅವುಗಳನ್ನು ಬಿಟ್ಟುಕೊಡುವುದೇ, ದಾಟುವುದೇ ನಿಜವಾದ ನಾಗರೀಕತೆ ಎಂಬ ಭ್ರಮೆ ಆವರಿಸಿತು. ಈ ಎಲ್ಲಾ ವೃತ್ತಿ ಸಂಸ್ಕೃತಿಗಳ

ಓನ್ನತಿಯಲ್ಲಿ 'ಪಾಂಚಾಳ ಜಾನಪದ' ಎಂಬ ಪ್ರಬಂಧವನ್ನು ಕ್ಷೀಣಿಸುತ್ತಿರುವ ಪಾಂಚಾಳ ವೃತ್ತಿಗಳು ಮರೆಯಾಗುವ ಸಂಸ್ಕೃತಿಯನ್ನು ಕುರಿತು ಕ್ಷೇತ್ರಕಾರ್ಯದ ಮೂಲಕ ಅಧ್ಯಯನದ ಫಲವೇ ಈ ಪಾಂಚಾಳ ಜಾನಪದ.

ವ್ಯಾಪ್ತಿ

ವ್ಯಾಪ್ತಿಯು ವಿಸ್ತಾರವಾದ ಅರ್ಥವನ್ನು ಒಳಗೊಂಡಿದೆ. ಒಂದು ದೇಶಕ್ಕೆ ಸೀಮಿತವಾದ ಗಡಿಯನ್ನು ಗುರುತು ಮಾಡಿಕೊಂಡಂತೆ ತಮ್ಮ ತಮ್ಮ ಹೊಲ ಗದ್ದೆಗಳಿಗೆ ಮೇರೆಯನ್ನು ಗುರುತಿಸಿಕೊಂಡಂತೆ ಈ ಅಧ್ಯಾಯನವು ಸಹ ತನ್ನದೇ ಆದ ವ್ಯಾಪ್ತಿಯನ್ನು ಒಳಗೊಂಡಿದೆ. ಆದರೆ ಒಂದು ಸಮುದಾಯದ ವಿಶಾಲವಾದ ವ್ಯಾಪ್ತಿಯನ್ನು ಗುರುತಿಸಲಾಗಿದೆ. ಸಮುದಾಯವು ತಾನು ಒಳಗೊಂಡಿರುವ ಮತ್ತು ತಾವು ಆಚರಿಸುವ ಸಂಪ್ರದಾಯಗಳು, ನಂಬಿರುವ ನಂಬಿಕೆಗಳು, ನಿಷಿದ್ಧಗಳು ಇತ್ಯಾದಿಯಾಗಿ ಅನುಕೂಲಕ್ಕಾಗಿ ಒಂದು ನಿರ್ಧಿಷ್ಟವಾದ ಅಧ್ಯಯನಕ್ಕೆ ತನ್ನದೇ ಆದ ವ್ಯಾಪ್ತಿಯನ್ನು ಹೊಂದಿದ್ದರೆ ಸೂಕ್ತವಾದುದಾಗುತ್ತದೆ. ಸಂಶೋಧನೆಗೆ 'ಪಾಂಚಾಳ ಜಾನಪದ' ಎಂಬ ಮಹಾ ಪ್ರಬಂಧಕ್ಕೆ ಸೂಕ್ತವಾದ ಮಾಹಿತಿಯೊಂದಿಗೆ ಅಧ್ಯಯನದ ಅನುಕೂಲಕ್ಕಾಗಿ ಒಂದು ಚೌಕಟ್ಟನ್ನು ರೂಪಿಸಿಕೊಳ್ಳಲಾಗಿದೆ.

ಪ್ರಾಚೀನ ಕಾಲದಿಂದಲೂ ತಮ್ಮನ್ನು ಗುರುತಿಸಿಕೊಂಡು ಬಂದಿರುವ ಪಂಚ ಕರಕುಶಲಕರ್ಮಿಗಳ ಅಥವಾ ಪಾಂಚಾಳ ವೃತ್ತಿಗಳಿಗೆ ಹಾಗೂ ಇವರ ಆಚಾರ ನಂಬಿಕೆಗಳಿಗೆ ವ್ಯಾಪ್ತಿಯನ್ನು ನಿರ್ಧಿಷ್ಟವಾಗಿ ಅಳೆಯುವುದು ಬಹುಕಠಿಣವಾದ ಕೆಲಸವೆಂದು ಹೇಳಬಹುದು. ಇವುಗಳಿಗೆ ವ್ಯಾಪ್ತಿಯನ್ನು ನಿರ್ಧರಿಸುವ ಹಾಗೆಯೇ ಇಲ್ಲ. ಅದು ತನ್ನ ವಿಸ್ತಾರವನ್ನು ಎಲ್ಲೆಲ್ಲೂ ಹರಡಿಕೊಂಡು ಬಂದಿರುವುದೆಂದು ಹೇಳಲು ಸಾಧ್ಯವಿಲ್ಲವಾದರೂ ಅಧ್ಯನಕ್ಕೊಳಪಡಿಸಿದ ವ್ಯಾಪ್ತಿಯನ್ನಾದರೂ ನಾವು ನೋಡಬೇಕಾಗುತ್ತದೆ. ಕರಕುಶಲ ಕರ್ಮಿಗಳು ಮತ್ತು ಇತರ ಕಸಬುದಾರರ ಸೀಮೆಯನ್ನು ಅಳೆಯುವುದು ಕೂಡ ಅಷ್ಟೊಂದು ಸಮಂಜಸವಲ್ಲ ಎಂಬ ವಿದ್ವಾಂಸರ ಮಾತು ನಿಜವಾದರೂ ಅದಕ್ಕೊಂದು ಸೀಮಿತತೆಯು ಇಲ್ಲವಾದಲ್ಲಿ ಅಧ್ಯಯನದ ಪದ್ಧತಿಯು ಅಸಮರ್ಥವಾಗಬಹುದೇನೋ ಎಂಬ ಅರ್ಥದಲ್ಲಿ ವ್ಯಾಪ್ತಿಯನ್ನು ಈ ಸಂಶೋಧನೆಯಲ್ಲಿ ಅಳವಡಿಸಲಾಗಿದೆ.

ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪಾಂಚಾಳರು ಬೇರನ್ನು ಹರಡಿಕೊಂಡು ಹೆಮ್ಮರವಾಗಿ ಬೆಳೆದು ನೆಲೆಬರುವವರೆಗೂ ಇವರ ವಿಸ್ತಾರ ಹರಡಿದೆ. ಜೀವನೋಪಾಯಕ್ಕೆ ಕೃಷಿಯನ್ನು ಕಂಡು ಕೊಂಡಾಗಿನಿಂದ ಹಿಡಿದು ಆಧುನಿಕ ಯಂತ್ರಗಳ ಅಡಿಯಲ್ಲಿ ನರಳುವ ಹಂತದವರೆಗೂ ತಮ್ಮ ಚಾಪನ್ನು ಮೂಡಿಸಿದೆ. ಪಾಂಚಾಳರ ಇತಿಹಾಸವನ್ನು ನಾವು ಗಮನಿಸಿದಾಗ ಅವರ ಪರಂಪರೆಗೆ ಮೂಲವೆಂದು ಕಾಣುವ ಕಥೆ, ಪುರಾಣ, ಐತಿಹ್ಯಗಳು, ದಾಖಲೆಗಳು ಇವರ ಇತಿಹಾಸದ ವ್ಯಾಪ್ತಿ ಒಳಗೆ ಕಾಣುತ್ತವೆ. ಜಾನಪದೀಯ ಹಿನ್ನಲೆಗೆ ಇವುಗಳು ಪುಷ್ಠಿಯನ್ನು ನೀಡುತ್ತಿರುವುದನ್ನು ಕಾಣಬಹುದು.

ಪಾಂಚಾಳರು ತಾವು ಬಹುಕಾಲದಿಂದ ತಾವೇ ಮೂಲ ಕಸಬುಗಳನ್ನು ಇತರ ಸಮುದಾಯದೊಂದಿಗೆ ಸಹಕಂಸುತ್ತಾ ಬಡಗಿ, ಕಮ್ಮಾರ, ಕಂಚುಗಾರ, ಸ್ವರ್ಣಗಾರ, ಶಿಲ್ಪಿ ಇವರೆಲ್ಲರೂ ಸಮಾಜದ ಬಹುಮುಖ ಪ್ರತಿಭೆಗೆ ಕಾರಣರಾಗಿದ್ದಾರೆ. ಇತರ ಸಮುದಾಯ, ಇತರ ದೇಶೀಯ ತಂತ್ರಜ್ಞಾನಗಳಿಗೆ ಈ ಪಾಂಚಾಳರ ವೃತ್ತಿ ಬಹು ಉಪಯುಕ್ತವಾಗಿ ಕಂಡುಬರುತ್ತದೆ. ಉದಾಹರಣೆಗೆ ಕೃಷಿ ಮಾಡಲಿಕ್ಕೆ ಕೃಷೋಪಕರಣ, ವಾಸಮಾಡುವ ಮನೆಗಳಿಗೆ ಗೃಹೋಪಕರಣ, ಅಲಂಕಾರಕ್ಕೆ ಆಭರಣ, ಬಳಕೆ ವಸ್ತುಗಳಿಗೆ ಕಂಚುಗಾರಿಕೆಯ ಪಾತ್ರೆಗಳು ಹಾಗೂ ವಿಗ್ರಹಗಳು, ಸಾಂಸ್ಕೃತಿಕ ಸಂಕೇತವಾಗಿ ಪೂಜಿಸುವ, ಆರಾಧಿಸುವ, ಸೌಂದರ್ಯೋಪಾಸನೆಗಳಿಗೆ ಈ ಶಿಲ್ಪಗಾರಿಕೆಗಳು ಸಮುದಾಯದ ಪ್ರತಿಯೊಂದು ವರ್ಗಕ್ಕೂ ತನ್ನ ವ್ಯಾಪ್ತಿಯನ್ನು ಹರಡಿ ತಮ್ಮ ಮಹತ್ವವನ್ನು ತಿಳಿಸಿದ್ದಾರೆ. ಈ ವೃತ್ತಿಕಾರರು (ಪಾಂಚಾಳರು) ಉಪಯೋಗಿಸುವ ಉಪಕರಣಗಳು, ಸ್ಥಳ, ಕಚ್ಚಸಾಮಾಗ್ರಿಗಳ ವಿವರವಾದ ಮಾಹಿತಿ ಈ ವ್ಯಾಪ್ತಿ ಒಳಗೆ ಬರುತ್ತವೆ.

ಒಂದು ವಿಶೇಷವೆನೆಂದರೆ ತಾವು ಉಪಯೋಗಿಸುವ ಉಪಕರಣಗಳನ್ನು, ತಾವೇ ಸ್ವತಹ ತಯಾರಿಸಿಕೊಳ್ಳುತ್ತಾರೆ. ಆದರೆ ಬೇರೆಯಾವುದೇ ವೃತ್ತಿಕಾರರು ತಮಗೆ ಬಳಕೆಯಾಗುವ ಉಪಕರಣಗಳನ್ನು ಯಾರು ತಯಾರಿಸಿಕೊಳ್ಳುವುದಿಲ್ಲ. ಅದರ ಬದಲಾಗಿ ಈ ಪಾಂಚಾಳರ ವೃತ್ತಿಗಳು ಇತರ ವೃತ್ತಿಗಳಿಗೆ ನೆರವಾಗುತ್ತವೆ. ಇವು ಅಧ್ಯಯನದ ವ್ಯಾಪ್ತಿಯೊಳಗೆ ಒಳಪಡಿಸಲಾಗಿದೆ. ಪಾಂಚಾಳ ಅಧ್ಯಯನದ ವ್ಯಾಪ್ತಿಯೊಳಗೆ 'ಆಚರಣೆ ಮತ್ತು ನಂಬಿಕೆಗಳು' ಎಂಬುದನ್ನು ಒಳಗೊಂಡಿದೆ. ಮನುಷ್ಯ ಹುಟ್ಟನಿಂದ ಕೊನೆ ಉಸಿರಿರುವರೆಗೂ ನಂತರ ಅದರಾಚೆ ನಡೆಯುವ ಆಚರಣೆಯನ್ನು ಅಧ್ಯಯನದ ಅನುಕೂಲಕ್ಕಾಗಿ ವಿಭಾಗಗಳನ್ನು ಮಾಡಿಕೊಂಡಿದೆ. ಪಾಂಚಾಳರು ನಿಸರ್ಗದೊಂದಿಗಿನ, ವೃತ್ತಿಯೊಂದಿಗಿನ, ದೈವತ್ವದೊಂದಿಗೆ ಇರುವ ಸಂಬಂಧಗಳು ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಪಾಂಚಾಳರ ದಿನನಿತ್ಯ ಬದುಕು ಸಾಂಸ್ಕೃತಿಕ ಬದುಕಿನಲ್ಲಿ ಒಡಪು, ಕತೆ, ಹಾಡುಗಳು ಅವರ ಸಾಂಸ್ಕೃತಿಕ ಜೀವನದ ವೃತ್ತಿಯ ವೈಶಿಷ್ಟ್ಯಗಳನ್ನು ಒಳಗೊಂಡಿರುವುದರಂದ ಅವು ಅಧ್ಯಯನಕ್ಕೆ ಅವಶ್ಯವೆನಿಸುತ್ತವೆ. ಅವು ಕೂಡ ಈ ಸಂಶೋಧನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಪಾಂಚಾಳರು ಪ್ರಾಚೀನ ಕಾಲದಲ್ಲಿ ಜೀವನ ಹೇಗಿತ್ತು, ಪ್ರಸ್ತುತ ಸಂದರ್ಭದಲ್ಲಿ ಅವರಿಗಿರುವ ಸಮಸ್ಯೆಗಳಾವು? ಹಾಗೂ ಅವರು ಸಮಾಜದಲ್ಲಿ ಇತರ ಸಮುದಾಯದೊಂದಿಗಿನ ಸಂಬಂಧ ಎಂತದ್ದು ಜೊತೆಗೆ ಅವರ ಅಸ್ಥಿತ್ವವನ್ನು ಸಂಶೋಧನೆಯಲ್ಲಿ ಕಾಣಬಹುದು. ಹಾಗೆ ಮುಂದುವರೆದು ಅವರ ಸಂವರ್ಧನೆಗೆ ಸೂಚನೆಗಳು (ಮಾರ್ಗೋಪಾಯಗಳು) ಇದರ ವ್ಯಾಪ್ತಿಯಲ್ಲಿ ಕಾಣಸಿಗುತ್ತವೆ. ಒಟ್ಟಾರೆಯಾಗಿ ಜನನ, ಮರಣಗಳ ನಡುವೆ ಅವರ ಜೀವನ, ವೃತ್ತಿ, ಆಚರಣೆ, ನಂಬಿಕೆ, ತೊಂದರೆ ಹಾಗೂ ವೃತ್ತಿಗೆ ಸಂಬಂಧಿಸಿದ ಚಿತ್ರಗಳು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಮುಖ್ಯವಾಗಿ ಹೇಳಬೇಕಾದುದ್ದೆಂದರೆ ಈ ಸಂಶೋಧನೆಗೆ ನಿರ್ಧಿಷ್ಟ ಪ್ರಾದೇಶಿಕ ಚೌಕಟ್ಟನ್ನು ಹಾಕಿಕೊಂಡಿಲ್ಲ. ಕಾರಣವೆಂದರೆ ಸಾಮಾನ್ಯವಾಗಿ ಪಾಂಚಾಳರ ಏಕ ಪ್ರಕಾರದ ಆಚರಣೆ, ಸಂಪ್ರದಾಯಗಳು, ನಂಬಿಕೆಗಳು ಒಂದೇ ಆಗಿರುತ್ತವೆ. ಅಲ್ಲೊಂದು ಇಲ್ಲೊಂದು ಆಚರಣೆಯಲ್ಲಿ ವ್ಯತ್ಯಾಸ ಕಂಡು ಬಂದರೂ ಅಂತಹ ಸಾಮ್ಯತೆ ಇರುವುದಿಲ್ಲ. ಒಟ್ಟಾರೆಯಾಗಿ ಪಾಂಚಾಳ ಜಾನಪದ ಎಂಬ ಸಂಶೋಧನಾ ಪ್ರಬಂಧದಲ್ಲಿ ಪಾಂಚಾಳರ ಇಡೀ ಜೀವಿತಾವಧಿಯಲ್ಲಿ ಆಚರಿಸುವ ಆಚರಣೆಗಳು ಮಾಡುವ ವೃತ್ತಿ ಕೌಶಲ್ಯ ಮತ್ತು ಇತರ ಎಲ್ಲಾ ವಿವರಗಳನ್ನು ಸಂಶೋಧನೆಯ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಉದ್ದೇಶ

ವ್ಯಾಪ್ತಿಯ ಜೊತೆಗೆ 'ಪಾಂಚಾಳ ಜಾನಪದ' ಎಂಬ ಸದಾದದ್ದೇಶನ್ನು ನಾಳೆ'ಬೇಕಾರುವುದರಿಂದ ಸಂಶೋಧನೆಯ ಉದ್ದೇಶವನ್ನು ವಿವರಿಸಲಾಗಿದೆ. ವ್ಯಾಪ್ತಿ ಸಂಶೋಧನೆಯ ಸುತ್ತಮುತ್ತ ಹೇಳಿದರೆ ಉದ್ದೇಶವು ಯಾವ ಕಾರಣಕ್ಕಾಗಿ ಹೇಗೆ? ಏನು? ಯಾವುದು? ಎಂಬ ಪ್ರಶ್ನೆಗಳ ಜೊತೆಗೆ ಇದರ ಬಗೆಗೆ ಯಾವ ರೀತಿಯ ಮಾರ್ಗದ ಕಡೆ ಸಾಗುತ್ತದೆ ಎಂಬುದನ್ನು ಹೇಳುವುದು ಈ ಮಹಾ ಪ್ರಬಂಧದ ಉದ್ದೇಶವಾಗಿದೆ.

ಭಾರತದ ಬಹುಪಾಲು ಬಡಕಟ್ಟುಗಳು ಅಥವಾ ಸಮುದಾಯಗಳು ಜಗತ್ತಿನಲ್ಲಿ ಸಂಸ್ಕೃತಿಕರಣಗೊಳ್ಳುತ್ತ ತಮ್ಮ ಮೂಲ ಸಮುದಾಯದ ಸಂಸ್ಕೃತಿಯಿಂದ ದೂರವಾದಂತೆ, ಈ ಪಾಂಚಾಳರು ಸಹ ತಮ್ಮ ಮೂಲ ಸಮುದಾಯದ ಸಂಸ್ಕೃತಿಯಿಂದ ದೂರ ಉಳಿಯುತ್ತಿರುವುದು ತಿಳಿದು ಬರುವ ಸಂಗತಿ. ಆದರೂ ಮಧ್ಯಮ ಸ್ಥಾನದಲ್ಲಿರುವ ಪಾಂಚಾಳರಂತಹ ಚಿಕ್ಕ ಸಮುದಾಯವೊಂದು ಇನ್ನು ತಮ್ಮ ಮೂಲ ಸಂಸ್ಕೃತಿಯ ಎಳೆಗಳನ್ನು ತನ್ನೊಡಲಲ್ಲಿ ಅಡಗಿಸಿಕೊಂಡಿರುವುದನ್ನು ಹೇಳುವುದು ಈ ಪ್ರಬಂಧದ ಉದ್ದೇಶ. ಪಾಂಚಾಳರ ಐದು ವೃತ್ತಿಗಳಾದ ಕಮ್ಮಾರಿಕೆ, ಬಡಗಿತನ, ಕಂಚುಗಾರಿಕೆ, ಅಕ್ಕಸಾಲಿಕೆ, ಶಿಲ್ಪಿಗಾರಿಕೆಯಿಂದ ಅವಶ್ಯಕತೆಯ ಅನುಗುಣವಾಗಿ ಉಪಕರಣಗಳ ತಯಾರಿಕೆಯಲ್ಲಿ ಪರಿಣತೆಯನ್ನು ಹೊಂದಿದ್ದರು? ಅವರು ಯಾವ ರೀತಿಯಿಂದ ಬೆಳೆದುಕೊಂಡು ಬಂದರು?

ಅವರ ಸಾಂಸ್ಕೃತಿಕ ಬದುಕು, ಆಚರಣೆ, ವಿಧಿವಿಧಾನಗಳು, ಇತರ ಸಮುದಾಯದೊಂದಿಗೆ ಹೊಂದಿದ್ದ ಸಂಬಂಧ ಹಾಗೂ 'ರಾಷ್ಟ್ರೀಯ ಉತ್ಪಾದನಾ ಘಟಕಗಳೆಂದು ಕರೆಸಿಕೊಳ್ಳುವ ವೃತ್ತಿಗಳಲ್ಲಿ ಈ ಪಂಚ ವೃತ್ತಿಗಳು ಸೇರಿಕೊಂಡು ಅವು ಅಸ್ತಿತ್ವದ ಜೊತೆಗೆ ಕಣ್ಮರೆಯಾಗುವ ದುರಂತದ ಉದ್ದೇಶವನ್ನು ಹೇಳಲಾಗಿದೆ.

ಪಾಂಚಾಳ ಸಂಸ್ಕೃತಿಯ (ಸಮುದಾಯವನ್ನು) ಅಧ್ಯಯನವನ್ನು ಕೆಲವು ದಶಕಗಳ ಹಿಂದೆಯೇ ನಡೆಸಿದ್ದರೆ ಆ ಸಮುದಾಯದ ಸಂಸ್ಕೃತಿಯ ಮೂಲಗ್ರಪಿಕೆಗಳು ಲಭ್ಯವಾಗುತ್ತಿದ್ದವು. ಆಗ ಈ ಸಮುದಾಯದ ಸಮಗ್ರ ಹಾಗೂ ಸಮರ್ಥ ಅಧ್ಯಯನಕ್ಕೆ ಹೆಚ್ಚು ಆಧಾರಗಳು (ಮೌಖಿಕ ಪರಂಪರೆಗಳ) ಲಭ್ಯವಾಗುತ್ತಿದ್ದವು. ಈ ಸಮುದಾಯ ಆಧುನಿಕರಣದ, ಜಾಗತೀಕರಣದ ಮಾರಣ ಹೋಮಗಳಿಂದಾಗಿ ಅದರ ಕೊನೆಯ ಉಸಿರನ್ನೀಗ ಆಡುವ ಸ್ಥಿತಿಗೆ ತಲುಪಿದೆಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಗಟ್ಟಿಯಾಗಿ ಬೇರೂರಿವೆ. ಪಾಂಚಾಳ ಸಮುದಾಯಕ್ಕೆ ಸಂಬಂಧಪಟ್ಟಂತೆ ಶೋಧಗಳು ನೆಡೆದಿವೆಯಾದರೂ ಸಮಗ್ರವಾಗಿ ಅಧ್ಯಯನ ಮಾಡಿದ ಗ್ರಂಥಗಳು ಕಡಿಮೆ. ಅಲ್ಲೊಂದು ಇಲ್ಲೊಂದು ಉಪನ್ಯಾಸ ಮತ್ತು ಗ್ರಂಥಮಾಲಿಕೆಯಲ್ಲಿ ಚುಟುಕಾಗಿ ಕಂಡು ಬರುತ್ತವೆ. ಸಾಧ್ಯವಾದಮಟ್ಟಿಗೆ ಜಾನಪದೀಯ ಹಿನ್ನೆಲೆಯಲ್ಲಿ ಸಂಶೋಧನೆಗೆ ಒಳಪಡಿಸಿ ಅವರ ಚರಿತ್ರೆ, ಸಾಮಾಜಿಕ ಸ್ಥಿತಿ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ತರಗಳು ಹೇಗೆ ವಿಕಾಸವಾಗಿ ಬಂದವು ಎಂದು ನೋಡುವ ಕ್ರಮ ಜಾನಪದ ಶಿಸ್ತಿನ ವ್ಯಾಪ್ತಿಯಲ್ಲಿದ್ದುಕೊಂಡೇ ಈ ಸಂಶೋಧನೆಯ ಉದ್ದೇಶವನ್ನು ಹೇಳಲಾಗಿದೆ.

ಕಬ್ಬಿಣ, ಕಟ್ಟಿಗೆ, ಲೋಹ, ಶಿಲೆ, ಬಂಗಾರ, ಬೆಳ್ಳಿ, ಕಚ್ಚಾ ಸಾಮಾಗ್ರಿಯಿಂದ ಆಶ್ಚರಿ ಮೂಡುವಂತ ಕಲಾಕೌಶಲ್ಯ ಈ ಪಾಂಚಾಳರಲ್ಲಿ ಅಡಗಿದೆ. ಮೂಲತಃ ತಮ್ಮ ಕುಲಕಸುಬುಗಳಾಗಿ ಈ ವೃತ್ತಿಕಾರರು ಉಪಕರಣಗಳು, ಆಭರಣಗಳ, ಕಲಾ ಸೌಂದರ್ಯವೆನಿಸುವ ಗುಡಿಗೋಪುರಗಳು, ದೇವತೆಗಳ ಮೂರ್ತಿಗಳ ವೃತ್ತಿಯಲ್ಲಿ ನಿರತರಾಗಿದ್ದರು. ಆದರೆ ಭಾರತದಲ್ಲಿ ಗುಡಿಕೈಗಾರಿಕೆಗಳ ಸಾಲಿನಲ್ಲಿ ಬರುವ ಇವರ ವೃತ್ತಿಗಳು ಆಧುನಿಕ ಕೈಗಾರಿಕೆಯ ಪ್ರವೇಶದಿಂದ ದಿಕ್ಕಾಪಾಲಾಗಿ ಬದುಕಿನ ಅನಿವಾರ್ಯತೆಯಿಂದಾಗಿ ತಮ್ಮ ಮೂಲ ಕಸುಬನ್ನು ಬಿಟ್ಟು ಅನ್ಯ ಜೀವನ ಮಾರ್ಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಬಹುತೇಕವಾಗಿ ಕಂಡುಬರುತ್ತಾರೆ. ಬಹುತೇಕವಾಗಿ ಹೆಚ್ಚಿನ ಅಧ್ಯಯನಗಳು ಆರ್ಥಿಕ ಮತ್ತು ಸಮಾಜಿಕ, ಅವುಗಳಿಗೆ ಸಂಬಂಧಿಸಿದ ಅಧ್ಯಯನಗಳಾಗಿದ್ದು ಚಿಕ್ಕ ಮತ್ತು ಬೃಹತ್ ಕೈಗಾರಿಕೆಗಳನ್ನು ಕುರಿತು ವಿವರಿಸುತ್ತವೆ. ಪಾಶ್ಚತ್ಯರು ಈ ದೇಶಕ್ಕೆ ಕೆಲವೊಂದು ಮಾರ್ಗದರ್ಶನದ ಮೂಲಕ ಸಂಶೋಧನೆಗೆ ಹೆಚ್ಚು ಅವಕಾಶ ಕೊಟ್ಟದ್ದು, ಆ ಮಾರ್ಗದ ಬುನಾದಿಯ ಮೇಲೆ ಕಟ್ಟಡ ಕಟ್ಟುವ ಕೆಲಸ ಮಾಡಬೇಕಾಗಿದೆ. ಅಂತಹ ಸಂಶೋಧನೆಗಳು ಇತ್ತೀಚಿಗೆ ನಡೆಯುತ್ತಿರುವುದು ಸಂತೋಷದ ವಿಷಯವೇ ಸರಿ. ಒಂದು ಸಮುದಾಯವನ್ನು ಎಲ್ಲಾ ಮಗ್ಗಲುಗಳ ಅಧ್ಯಯನಕ್ಕೆ ಅವಕಾಶ ಇದೆ. ಆದ್ದರಿಂದ ಪಾಂಚಾಳರ ಸಮುದಾಯದ ಒಳಸುಳಿಗಳನ್ನು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

ಪಾಂಚಾಳರು ರಾಜರ ಮನ್ನಣೆಗೆ ಪಾತ್ರರಾಗಿದ್ದರು. ಏಕೆಂದರೆ ಅವಶ್ಯಕತೆಗನುಗುಣವಾಗಿ ತಯಾರಿಸುವ ಉಪಕರಣಗಳು, ವಾಸಿಸುವ ಮನೆಗಳು, ಪೀಠೋಪಕರಣಗಳು, ಯುದ್ಧಕ್ಕೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಇವರು ರಾಜಾಶ್ರಯ ಪಡೆದವರೂ ಇದ್ದರು. ಅದಕ್ಕೆ ನಿದರ್ಶನಗಳನ್ನು ಈ ಸಂಶೋಧನೆಯಲ್ಲಿ ಅಳವಡಿಸಲಾಗಿದೆ. ಜ್ಯೋತಿಷ್ಯ ಇತರ ಕಲಾ ನೈಪುಣ್ಯತೆಯನ್ನ ಪಡೆದವರೂ ಆಗಿದ್ದರು. ಅದಕ್ಕೆ ಅಂದಿನ ಕಾಲದ ಪರಿಸ್ಥಿತಿ, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ-ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ತಮ್ಮನ್ನು ಸಮಾಜದ ಸೇವೆಗೆ ತೊಡಗಿಸಿಕೊಂಡಿರುವುದರ ಜೊತೆಗೆ ವೇದ, ಮಂತ್ರ, ಪುರಾಣ, ಪೂಜೆ, ಆಚಾರ-ವಿಚಾರ ಇತ್ಯಾದಿಗಳಲ್ಲಿ ಹೇಗೆ ತೊಡಗಿಸಿಕೊಳ್ಳುತ್ತಿದ್ದರು, ಅವರ ಆಚಾರ ವಿಚಾರಗಳು, ವೃತ್ತಿಗಳು, ಕಲಾನೈಪುಣ್ಯತೆಗಳು ಆಧುನಿಕರಣದ ಬಿರುಗಾಳಿಗೆ ಸಿಕ್ಕು ಹೇಗೆ ಜೀವಿಸುತ್ತ ಬಂದಿದ್ದಾರೆಂದು ಹೇಳುವುದು ಈ ಸಂಶೋಧನೆಯ ಉದ್ದೇಶವಾಗಿದೆ.

ವಿಶ್ವಕರ್ಮರೆಂದು ಕರೆಸಿಕೊಳ್ಳುವ ಪಾಂಚಾಳರು, ಎಲ್ಲಾ ಸಮುದಾಯದ ಜೊತೆ ಸಂಬಂಧವನ್ನು ಕಲ್ಪಿಸಿಕೊಂಡು ಬಂದಿದ್ದಾರೆ. ಇವರನ್ನು ಅವರು, ಅವರನ್ನು ಇವರು ಹೊಂದಾಣಿಕೆಯಿಂದ ಗೌರವದಿಂದ ಕಾಣುತ್ತಾ ಕೊಡುಕೊಳ್ಳುವಿಕೆಯ ಆಧಾರದಿಂದ ಬಂಧುತ್ವ ಬೆಳೆದುಕೊಂಡು ಬಂದು ಎಲ್ಲಾ ವರ್ಗ ಕುಲಕಸಬುಗಳ ಉಪಕರಣಗಳನ್ನು ತಯಾರಿಸುವ ರೂಪದಲ್ಲಿ ಕಾಣುತ್ತಾರೆ. ಪಾಂಚಾಳರ ಕೆಲಸ ಗೃಹಬಳಕೆಯ ಪ್ರತಿಯೊಂದು ತಯಾರಿಕೆಯಲ್ಲಿ ಇವರ ಪಾಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಕೌಶಲ್ಯವಂತರು ಮುಟ್ಟದೆಯೇ ಯಾವುದರಲ್ಲಿ ಏನಾಗುತ್ತದೆ ಎಂಬುದನ್ನು ಕ್ಷಣದಲ್ಲಿ ಹೇಳಿಬಿಡುವ ಬುದ್ಧಿವಂತಿಕೆ ಇವರಿಗಿದೆ. ಹಳೆಯ ತಲೆಮಾರಿನವರಂತೆ ಇಂದಿನ ಪೀಳಿಗೆ ಅವಶ್ಯಕತೆಗೆ ತಕ್ಕಂತೆ ಚಾಣಾಕ್ಷತೆಯನ್ನು ಹೊಂದಿಲ್ಲ, ಕಾಲಬದಲಾದಂತೆ ಬದುಕಿಗಾಗಿ ಬೇರೆ ಮಾರ್ಗ ಹಿಡಿದಿರುವುದು ಕಂಡು ಬಂದರೂ ಇತ್ತೀಚಿನ ದಿನಮಾನಗಳಲ್ಲಿ ಪ್ಯಾಷನ್ (ಮೋಹ) ಗಾಗಿ ಬಳಸುವ ಉಪಕರಣಗಳು ಮಹತ್ವ ಪಡೆದಿವೆ. ಅದೇನೇ ಇದ್ದರೂ ಅಂದಿನ ತಲೆಮಾರಿನ ಬುದ್ಧಿವಂತಿಕೆಯು ಪ್ರಸ್ತುತ ದಿನಗಳಲ್ಲಿ ಹೇಗೆ ತನ್ನ ಛಾಪು ಮೂಡಿಸಿದೆ ಎಂಬುದನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪಾಂಚಾಳರ ನಂಬಿಕೆಗಳು, ಸಂಪ್ರದಾಯ, ಜೀವನದ ಪದ್ಧತಿ, ಅವರ ಮೂಲ ಸಂಸ್ಕೃತಿಯ ಸ್ವರೂಪವನ್ನು ಹತ್ತಿರದಲ್ಲಿ ನಿಂತು, ಗ್ರಹಿಸಿ, ಗುರುತಿಸಲಾಗಿದೆ. ಪಾಂಚಾಳರ ವಿಶಾಲವಾದ ಹೃದಯವನ್ನು ತೆರೆದು ತೋರುವುದು. ಹಾಗೂ ಹಿಂದುಳಿದ ಸಮುದಾಯದಲ್ಲಿ ಕುರಿತು ಇಲ್ಲಿವರಿಗೂ ಯಾವುದೇ ರೀತಿಯ (ಕೆಲವು ಮಾತ್ರ) ಅಧ್ಯಯನಗಳು ಜಾನಪದೀಯ ಹಿನ್ನಲೆಯಲ್ಲಿ ನಡೆಯದಿರುವುದರಿಂದ ಸಮಗ್ರವಾಗಿ ಅಧ್ಯಯನ ಮಾಡಲು ಜೊತೆಗೆ ಅವರ ಸವಾಲುಗಳು, ಅಸ್ತಿತ್ವ ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಈ ಮಹಾ ಪ್ರಬಂಧದ ಉದ್ದೇಶವಾಗಿದೆ.

ವಿಧಾನ

ಸಂಶೋಧಕರೆನಿಸಿದವರು ಸಂಶೋಧನಾ ರಂಗಕ್ಕೆ ಪ್ರವೇಶ ಮಾಡಿದವನೆಂದ ಮೇಲೆ ಏನೇ ಅಡೆತಡೆಗಳು ಬಂದರೂ ನಿಭಾಯಿಸಿಕೊಂಡು ಹೋಗುವ ಧೈರ್ಯಮಾಡಬೇಕು. ಗೊತ್ತಿಲ್ಲದ, ಪರಿಚಯ ವಿಲ್ಲದ ಎಷ್ಟೋ ವಿಷಯಗಳು ಕಾಲಗರ್ಭದಲ್ಲಿ ನಶಿಸಿ ಹೋಗುವ ವಿಷಮ ಪರಿಸ್ಥಿತಿಯಲ್ಲಿ ಅವುಗಳನ್ನು ಹುಡುಕಿ ಶೋಧನೆಗೆ ಒಳಪಡಿಸಿದಾಗ ಅದರ ಆಳ, ವಿಸ್ತಾರ, ನಿರ್ಧಿಷ್ಟವಾದ ಉತ್ತರ ದೊರೆಯುವುದು ಸ್ವಲ್ಪ ಕಷ್ಟಕರ ಎಕೆಂದರೆ ಇಲ್ಲಿ ಆಯ್ಕೆಮಾಡಿಕೊಂಡ ವಿಷಯ ಜಾನಪದ ಸಾಹಿತ್ಯವಾದ್ದರಿಂದ ಕ್ಷೇತ್ರಾ ರಿತ ಅಧ್ಯಯನ ವಿಧಾನವಾಗಿ ಕಂಡುಬರುತ್ತದೆ. ಸಂಶೋಧನೆಗೆ ತನ್ನದೇ ಆದ ಅಧ್ಯಯನ ವಿಧಾನವನ್ನು ಹೊಂದಿರುತ್ತದೆ. ಸಂಶೋಧಕನು ಅನುಸರಿಸುವ ವಿಧಾನವನ್ನು ಇಲ್ಲಿ ಹೇಳಲಾಗಿದೆ.

ಜಾನಪದ ಅಧ್ಯಯನದಲ್ಲಿ ದೇಶಿಯ ಅಧ್ಯಯನ ವಿಧಾನವಾಗಿ ಈಗಾಗಲೇ ಪರೋಕ್ಷವಾದ ಕ್ರಮಗಳಿಂದ ಆರಂಭವಾಗಿದೆ. ತನ್ನ ಸ್ಥಳೀಯ ಅಸ್ತಿತ್ವವನ್ನು ಆಧುನಿಕ ಜಗತ್ತಿನ ಜೊತೆ ಪುನರ್ ಅನುಸಂಧಾನಿಸಿ ವರ್ತಮಾನವನ್ನು ಸುಭದ್ರಗೊಳಿಸುವುದು ದೇಶಿ ಸಂಶೋಧನೆಯು ಅವಶ್ಯವೆನಿಸಿದೆ. ದೇಶಿ ಸಂಶೋಧನೆಯು ತಿರಸ್ಕೃತ ಜ್ಞಾನ ಪರಂಪರೆಗಳ ಬೇರನ್ನು ಹಿಡಿದು ವರ್ತಮಾನದ ಸಾಮಾಜಿಕ ಮೌಲ್ಯಗಳನ್ನು ಕೊಂಡುಕೊಳ್ಳುವುದು ಇಂತಹ ಗುರಿಯಿಂದ ಅಧ್ಯಯನ ವಿಧಾನದ ಬದಲಾಗಿ ಸಂಶೋಧನೆ ಎಂಬುದು ಗತಕಾಲಕ ಆರಾಧನೆಯಾಗುವುದಿಲ್ಲ. ದೇಶೀ ಸಂಶೋಧನೆಯು ಸುಂದರ ಕುರೂಪವನ್ನು ಕಂಡೂ ಕಾಣದಂತೆ ತನ್ನ ಕಿರು ದಾರಿಯಲ್ಲಿ ಅಸಂಖ್ಯ ಕಥನಗಳನ್ನು ಮೌಖಿಕವಾಗಿಯೇ ನಿರೂಪಿಸಿಕೊಂಡು ಬಂದಿರುತ್ತವೆ. ಇಂತಹ ಜ್ಞಾನ ಕ್ರಮಗಳ ಮೂಲಕವೇ ತನ್ನ ಪರಿಸರದ ಆಚೀಚೆಯ ಎಲ್ಲಾ ಜೀವನ ಕ್ರಮಗಳ ಜೊತೆಗೂ ಮಾನವೀಯ ಮೌಲ್ಯಗಳ ಹುಡುಕಾಟವನ್ನು ಇಂತಹ ಅಧ್ಯಯನದ ವಿಧಾನದ ಕ್ರಮದಿಂದ ಅಧ್ಯಯನ ಮಾಡಬೇಕಿದೆ. ಸಂಶೋಧಕ ಸಮುದಾಯದ ಹೊರಮೈಯನ್ನು ನಂಬಿದರೆ ಅದರ ಒಳಧ್ವನಿಯೂ ಅಪಾರ ತಿಳುವಳಿಕೆಯೂ ಕಳೆದುಹೋಗಿ ಸಂಶೋಧನೆಯ ಗುರಿಯು

ಸಣ್ಣದಾಗಬಹುದು. ಹೀಗಾಗಿ ಸಂಶೋಧನಾ ಪ್ರಕ್ರಿಯೆಯಲ್ಲಿ ಭಾಗಿಯಾದ ಸಂಶೋಧಕ ಜಾನಪದ ವಿಷಯನ್ನು ಆಯ್ಕೆಮಾಡಿಕೊಂಡಿರುವಾಗ ಕ್ಷೇತ್ರಕಾರ್ಯ ಬಹು ಪ್ರಮುಖ ಪಾತ್ರ ವಹಿಸುತ್ತದೆ. ಇಲ್ಲಿ ಜನಪದರು ಮುಖ್ಯರಾಗುತ್ತಾರೆ ಹೊರತು ಅವರ ಗತಕಾಲದ ಸೃಷ್ಟಿಯು ಎರಡನೇಯದಾಗಿರುತ್ತದೆ ಎಂದು ತಿಳಿಯ ಬಹುದು.

ವರ್ತಮಾನದ ಜನಪದರು ಯಾವ ಬಗೆಯ ಹಂಬಲಗಳಲ್ಲಿದ್ದಾರೆ ಎಂಬುದು ಅಧ್ಯಯನಗಳ ಮೊದಲ ನೋಟವಾಗಬೇಕು. ವೃತ್ತಿ ಸಮುದಾಯಗಳ ಗತಕಾಲದ ಜಾನಪದದಲ್ಲಿ ಇಂದಿನ ವೃತ್ತಿರಹಿತ ಅತಂತ್ರಸ್ಥಿತಿಯಲ್ಲಿ ಅವರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗತಿಗಳನ್ನು ಜೊತೆಗಿಟ್ಟುಕೊಂಡು ಆಲೋಚಿಸಲಾಗಿದೆ. ತನ್ನ ಅಸ್ತಿತ್ವವೇ ಕಳೆದುಹೊಗುತ್ತಿರುವಾಗ ವೃತ್ತಿಗಳ ಜೊತೆಗೆ ಬಂದ ದೇಶೀಯ ಪರಂಪರಾಗತ ಜ್ಞಾನವನ್ನು ಉಳಿಸಿಕೊಳ್ಳಬೇಕೆಂಬ ನಿಲುವಿನಿಂದ ಅಧ್ಯಯನದ ವಿಧಾನದಲ್ಲಿ ಅಳವಡಿಸಲಾಗಿದೆ. ಈ ಸಂಶೋಧನೆಯಲ್ಲಿ ಪಾಂಚಾಳ ಸಮುದಾಯದ ವಸ್ತು ಸ್ಥಿತಿಯನ್ನು, ವೃತ್ತಿಆಚರಣೆಯನ್ನು ಹತ್ತಿರದಿಂದ ಅದರೊಳಗಿದ್ದುಕೊಂಡು ವಿಷಯ ಸಂಗ್ರಹಣೆಮಾಡಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಬಹು ಶಿಸ್ತೀಯ ನೆಲೆಯಿಂದ ದೇಶೀ ಸಮುದಾಯಗಳ ಗತಕಾಲದ ಪುನರ್ರಚಿಸುವ ಅಧ್ಯಯನ ಮಾಡಲು ಸಾಧ್ಯವಿದೆ. ಸಾಮಾನ್ಯವಾಗಿ ದೇಶೀಯ ನೆಲೆಯಲ್ಲಿ ಸಂಶೋಧನೆಯನ್ನು ಗುರುತಿಸಲು ಹೋಗುವುದಿಲ್ಲ. ಪಶ್ಚಿಮದವರ ನಿಯಮಗಳ ದಾರಿಯಲ್ಲಿ ತೊಡಗುವ ಪರಿಪಾಠ ಬಿಟ್ಟು ಅವೆರಡರ ದಾರಿಯಲ್ಲಿ ಈ ಅಧ್ಯಯನದ ವಿಧಾಸದಲ್ಲಿ ಬಳಸಲಾಗಿದೆ. ದೇಶೀಯವಾಗಿ ಸಿಗುವ ಸಂಶೋಧನೆಯ ನ್ಯಾಯ ಅತ್ಯಂತ ಕಡಿಮೆ ಎಂದು ಹೇಳಬಹುದು. ಸಂಶೋಧನೆಯ ವಿಧಾನ ಮಾರ್ಗವು ದೇಶೀಯ ಅಪಾರ ಅಭಿವ್ಯಕ್ತಿಯಲ್ಲಿ ತನಗೆ ಬೇಕಿರುವುದನ್ನು ಮಾತ್ರ ಆಯ್ಕೆಮಾಡಿಕೊಂಡು ಹೊಂದಿಕೆಯಾಗದ ಅಸಂಖ್ಯಸಂಗತಿಗಳನ್ನು ತಿರಸ್ಕರಿಸುವುದನ್ನು ಕಾಣಬಹುದು. ಹೀಗೆ ನಿರ್ಲಕ್ಷಕ್ಕೆ ಒಳಗಾಗಿ ಎಲ್ಲಾ ಮೌಖಿಕ ಪರಂಪರೆಯು ದೂರಸರಿದು ಅನನ್ಯತೆಯ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಇಂತಹ ಸಂಶೋಧನೆಯನ್ನು ಸಂಶೋಧಕರು ಗಮನಿಸುವುದಿಲ. ಈ ದೇಶಕ್ಕೆ ಪಶ್ಚಿಮದವರ ಪ್ರಭಾವದಿಂದ ದೊಡ್ಡ ಭಾರತದ ನಿರ್ಮಾದಲ್ಲಿ ದೇಶೀ ಸಂಸ್ಕೃತಿಯಲ್ಲಿ, ವೃತ್ತಿಗಳಲ್ಲಿ ಸಂಶೋಧನೆಗೆ ಒಳಪಡಿಸುವು ಎಚ್ಚರಿಕೆಯನ್ನು ಸಂಶೋಧಕರು ಮನಗಾಣಬೇಕಿದೆ. ಪಶ್ಚಿಮದವರನ್ನು ಸಂಪೂರ್ಣವಾಗಿ ಬಿಡುವುದು ದೇಶೀವನ್ನು ಮಾತ್ರದಿಂದಲೇ ಸಂಶೋಧನೆ ಮಾಡಲು ಸಾಧ್ಯವಿಲ್ಲ. ಅವೆರಡರ ಮಿಶ್ರಣ ಕೆಲವು ಸಂದರ್ಭದಲ್ಲಿ ಅವಶ್ಯವೆನಿಸುತ್ತದೆ. ಇಂತಹ ವಿಧಾನದಿಂದ ಈ ಪ್ರಬಂಧವನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಈ ಸಮುದಾಯದ ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಹಲವಾರು ರೀತಿಯ ತೊಂದರೆಯನ್ನು ಅನುಭವಿಸಲಾಯಿತು. ವಕ್ತೃಗಳು ವಿಷಯ ಸಂಗ್ರಹಣೆಗೆ ಸಹಕಾರ ಕೊಟ್ಟವರೂ ಉಂಟು, ಕೊಡದೇ ಜಾರಿಕೊಂಡವು ಉಂಟು. ಕೆಲವರು ಅತ್ಯಂತ ಗುಮಾನಿಯಿಂದ ನೋಡಿದ ಪ್ರಸಂಗವೂ ಉಂಟಾದವು. ಕೊನೆಗೂ ಅವರ ಮನವೊಲಿಸಿ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ತಾಳ್ಮೆಯಿಂದ ಸಂಗ್ರಹಿಸಿ ಈ ಪ್ರಬಂಧ ರಚಿಸಲಾಗಿದೆ. ಪಾಂಚಾಳ ಜಾನಪದ ಎಂಬ ಪ್ರಬಂಧವು ಸಂಪೂರ್ಣವಾಗಿ ಕ್ಷೇತ್ರಾಧ್ಯಾಯನದ ಆಧಾರದ ಮೇಲೇಯೇ ನಿಂತಿದೆ. ವಕ್ತೃಗಳಿಗೆ ಈ ಸಂಶೋಧನೆಯಲ್ಲಿ ಮೊದಲ ಪ್ರಾಶಸ್ತ್ಯವನ್ನು ಕೊಡಲಾಗಿದೆ. ಸಂಶೋಧಕರಿಗಿಂತ ವಕ್ತೃಗಳು ಬಹುಮುಖ್ಯ ಪಾತ್ರ ವಹಿಸುತ್ತಾರೆ. ಅವರು ಹೇಳಿದ ಮಾಹಿತಿ ಆಧಾರದ ಮೇಲೆ ಈ ಪ್ರಬಂಧವನ್ನು ರಚಿಸಲಾಗಿದೆ. ಈ ಸಮುದಾಯದವರು ಅತ್ಯಂತ ಪ್ರೀತಿಯಿಂದ ಮಾಹಿತಿ ನೀಡಿ ಪ್ರಬಂಧದಲ್ಲಿ ಪಾಲುಪಡೆದಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಮಹಿಳೆಯರು ಉತ್ಸಾಯದಿಂದ ಹಾಡು, ಒಡಪು, ಗಾದೆ, ಸಂಪ್ರದಾಯ ಹಾಗೂ ಸಮುದಾಯದ ಕಥೆಗಳನ್ನು ಹೇಳಿ ಸಂಶೋಧನೆಗೆ ಸಹಾಯಕರಾಗಿದ್ದಾರೆ. ಮೊದಮೊದಲು ಮಾಹಿತಿ ನೀಡಲು ಹಿಂಜರಿದರೂ ನಂತರದಲ್ಲಿ ಉತ್ಸಹಭರಿತರಾಗಿ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಮೌಖಿಕ ಪರಂಪರೆಗೆ ಆಧಾರಗಳು ಸಿಗುವುದು ಜನಪದರ ಹತ್ತಿರವೇ ಈ ಸಮುದಾಯದ ದಾಖಲೆಗಳಿದ್ದಾಗೂ ಸಹ ಮೌಖಿಕ ಇತಿಹಾಸದ ಮಗ್ಗುಲನ್ನುನೋಟಿ ದಾಖಲೆಯ ಇತಿಹಾಸಕ್ಕೂ ಮತ್ತು ಮೌಖಿಕತೆಗೂ ಸಂಬಂಧದ ಕೊಂಡಿಯಾಗುವ ಸಂಭವವೂ ಕಂಡುಬರುತ್ತದೆ. ಸಂಶೋಧನೆಯಲ್ಲಿ ಹೆಚ್ಚು ಮೌಖಿಕ ಆಧಾರದ ಮೇಲೆ ನಿಲ್ಲುವಂತೆ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯಕರ್ತನೂ ಕ್ಷೇತ್ರಕಾರ್ಯಕ್ಕೆ ಹಿಳಿದಾಗ ತಾನು ಮಾಡುವ ವಿಷಯದ ಸಂಗ್ರಹಣೆಗಾಗಿ ಸಮುದಾಯದ ಜಾಡನ್ನು ಗುರುತಿಸಲು ಮಾನಸಿಕವಾಗಿ ಕ್ಷೀಣನಾಗಿರುವಂತೆ ಎನಿಸಿದ್ದು ನಿಜವಾದರೂ ಸಹಿಸಿಕೊಂಡು ಸಂಶೋಧನೆಯಲ್ಲಿ ತೋಡಗಿಸಿಕೊಳ್ಳಲಾಯಿತು. ಒಟ್ಟಾರೆಯಾಗಿ ಈ ಮಹಾ ಪ್ರಬಂಧದ ರಚನೆಗೆ ವಕ್ತೃಗಳಲ್ಲದೇ ಶಾಸನಗಳು, ಗ್ರಂಥಗಳು, ವೃತ್ರ ಪತ್ರಿಕೆಗಳು, ಈ ಸಮುದಾಯದ ಪತ್ರಿಕೆಗಳನ್ನು ಸಂಗ್ರಹಣೆಮಾಡಿ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒಟ್ಟು ಗೂಡಿಸಿ ಈ ಸಂಶೋಧನೆಗೆ ಒಳಪಡಿಸಲಾಗಿದೆ. ಈರೀತಿಯಾಗಿ ಸಂಶೋಧನೆಯ ವಿಧಾನಗಳಾಗಿ ಅಧ್ಯಯನ ಮಾಡಲಾಗಿದೆ.

ಸ್ವರೂಪ

ಜನಾಂಗೀಯ ಅಧ್ಯಯನ ಎನ್ನುವುದು ಕೇವಲ ಮಾನವಶಾಸ್ತ್ರಜ್ಞರ ಆಸ್ತಿಯೆಂದು ಭಾವಿಸಿದ್ದ ಕಾಲದಲ್ಲಿ ಅದಕ್ಕೆ ವಿಭಿನ್ನವಾಗಿ ಜನಪದ ವಿದ್ವಾಂಸರು ಸಹ ಜಾನಪದ ಹಿನ್ನಲೆಯಲ್ಲಿ ಅಧ್ಯಯನ ಮಾಡಲು ಸಾಧ್ಯವೆಂದು ತೋರಿಸಿಕೊಟ್ಟಿದ್ದಾರೆ. ಅಂತಹ ಪ್ರಯತ್ನಗಳಲ್ಲಿ 'ಪಾಂಚಾಳ ಜಾನಪದ' ಎಂಬ ಸಂಶೋಧನ ಪ್ರಬಂಧವೆಂದು ಪರಿಭಾವಿಸಬಹುದು.

ಪಾಂಚಾಳರು ಕೇವಲ ಒಂದು ಜಿಲ್ಲೆಗೆ ಸೀಮಿತವಾಗದೇ 'ಊರಿಗೊಬ್ಬ ಪಾಂಚಾಳರಂತೆ' ಕಂಡುಬರುತ್ತಾರೆ. ಜನ ಸಮುದಾಯದ ನಡುವೆ ಪಂಚ ವೃತ್ತಿಗಳನ್ನು ಮಾಡುತ್ತಾ ತಮ್ಮ ಜೀವನವನ್ನು ಸಾಗಿಸಿದ ಜನಾಂಗ. ಇತರ ಸಮುದಾಯಕ್ಕಿಂತ ಭಿನ್ನವಾದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ವಿಶಿಷ್ಟ ಸಮುದಾಯಗಳಲ್ಲಿ ಒಬ್ಬರಾಗಿದ್ದಾರೆ. ಊರಿನ ದೇವತೆಯ ಪೂಜಾರಿಕೆಯನ್ನು ಈ ಪಾಂಚಾಳರೇ ಬಹುಕಾಲದಿಂದ ನೆಡೆಸಿಕೊಂಡು ಬಂದಿರುವುದನ್ನು ನೋಡಿದರೆ ಈ ದೇಶಿಯರು ಎಂಬುದಕ್ಕೆ ದಾರಿ ಮಾಡಿಕೊಡುತ್ತದೆ. ಬ್ರಾಹ್ಮಣರಿಗೂ ಹಾಗೂ ಪಾಂಚಾಳರಿಗೂ ಬಹುಕಾಲದಿಂದ ಒಳಒಳಗೆ ಬುದ್ದಿಶಕ್ತಿಯಿಂದ ಸಮರಗಳು ನಡೆಯುತ್ತಲೇ ಬಂದರೂ ಆರ್ಥಿಕವಾಗಿ ಹಿಂದುಳಿದ ಪಾಂಚಾಳರು ಕೈ ಕೆಳಗಾಯಿತು. ಎಂಬ ಮಾತು ಕೇಳಿಬರುತ್ತವೆ. ಊರಲ್ಲಿ ಏನೇ ಸಾಂಸ್ಕೃತಿಕ ಕಾರ್ಯ ನಡೆದಾಗ ಪಾಂಚಾಳರು ಪ್ರಮುಖ ಸ್ಥಾನ ವಹಿಸುವುದನ್ನು ಕಾಣಬಹುದು. ಆಚರಣೆಯಲ್ಲಿ, ಸಂಪ್ರದಾಯದಲ್ಲಿ, ನಂಬಿಕೆಗಳಲ್ಲಿ, ಕಲಾವಂತಿಕೆಯಲ್ಲಿ, ಬುದ್ಧಿಶಕ್ತಿಯಲ್ಲಿ, ವೃತ್ತಿಯಲ್ಲಿ ವಿಶಿಷ್ಟ ಪರಂಪರೆಯ ಸಮುದಾಯವೊಂದರ ಒಳಪದರನ್ನು ಹಲವು ಅಧ್ಯಾಯಗಳನ್ನು ರೂಪಿಸಿಕೊಂಡು ಅದರ ಸ್ವರೂಪವನ್ನು ಕಾಣಬಹುದು.

ಈ ಅಧ್ಯಯನದ ಸ್ವರೂಪದಲ್ಲಿ ಪಾಂಚಾಳರನ್ನು ಕುರಿತು ಎಲ್ಲಮಗ್ಗಲುಗಳನ್ನು ತಿರುವಿ ಹಾಕಿ (ಸಾಧ್ಯವಾದ ಮಟ್ಟಿಗೆ) ರೂಪರೇಷಗಳನ್ನು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಸಾಂಪ್ರದಾಯಕ ವೃತ್ತಿ, ವೃತ್ತಿ ಸಂಬಂಧಿ ಸಲಕರಣೆಗಳು, ವಿಧಿವಿಧಾನ, ನಿಷಿದ್ಧಗಳು ಅವುಗಳ ಬಗೆಗಿನ ನಂಬಿಕೆಗಳು, ಆಚರಣೆಗಳು, ಆಯ ಪದ್ಧತಿ, ಪಾಂಚಾಳರ ಸ್ಥಿತಿಗತಿ, ಜಾಗತೀಕರಣದ ಪ್ರಭಾವದಿಂದ ಹೇಗೆ ಬದಲಾವಣೆಯನ್ನು ಕಂಡುಕೊಳ್ಳುವುದನ್ನು ಈ ಅಧ್ಯಯನದ ಸ್ವರೂಪದಲ್ಲಿ ಕಾಣಬಹುದು. ಒಟ್ಟಾರೆಯಾಗಿ ಪಾಂಚಾಳರ ಇತರ ಸಮುದಾಯದೊಂದಿಗೆ ಹೊಂದಿಕೊಂಡು ತಮ್ಮ ದೇಶೀಯ ತಂತ್ರಜ್ಞಾನಗಳನ್ನು, ತಮ್ಮ ಸಂಪ್ರದಾಯ, ಸಂಸ್ಕೃತಿಯನ್ನು ನಿಸರ್ಗ, ದೈವತ್ವ, ವೃತ್ತಿಗಳು ಹಾಗೂ ಪಾಂಚಾಳರ ಜನಪದ ಸಾಹಿತ್ಯವನ್ನು ಈ ಸಂಶೋಧನೆಯಲ್ಲಿ ಅಳವಡಿಸಿದ ಸ್ವರೂಪವನ್ನು ಕಾಣಬಹುದು. ಒಂದೊಂದೇ ಅಧ್ಯಾಯಗಳನ್ನು ಹಾಕಿಕೊಂಡು ಪಾಂಚಾರ ಸಮಗ್ರವಾದ ಪರಂಪರೆಯನ್ನು ಮತ್ತು ಅವರು ನಿರ್ವಹಿಸಿಕೊಂಡು ಬಂದಿರುವ ವೃತ್ತಿ ಕೌಶಲ್ಯವನ್ನು, ಅವರು ಆಚರಿಸುವ ಎಲ್ಲಾ ಬಗೆಯ ಆಚರಣೆಗಳನ್ನು ಈ ಸಂಶೋದನ ಪ್ರಬಂಧದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಪ್ರಬಂಧವು ಹೊಂದಿರುವ ಅಧ್ಯಾಯಗಳನ್ನು ರೂಪಿಸಿ ಅದರ ಸ್ವರೂಪದಂತೆ ಅಧ್ಯಯನ ಮಾಡಲಾಗಿದೆ.

ಅಧ್ಯಾಯ–೨

ಪಾಂಚಾಳ ಸಮಾಜದ ಮೌಖಿಕ ಇತಿಹಾಸ

ಮೌಖಿಕ ಇತಿಹಾಸ ಎನ್ನುವುದನ್ನು ಇನ್ನೊಂದು ಅರ್ಥದಲ್ಲಿ ಐತಿಹ್ಯ, ಕತೆ ಎಂತಲೂ ಭಾವಿಸಬಹುದು. ಜನಪದ ಸಾಹಿತ್ಯದಲ್ಲಿ ಕಾಣಸಿಗುವ ಕತೆಗಳು, ಐತಿಹ್ಯಗಳು ಹಿಂದಿನಿಂದ ಸಾಗಿಬಂದ ಜನಾಂಗದ ಬದುಕಿನ ಪ್ರಧಾನ ಭಾಗವಾಗಲೂಬಹುದು. ನಾವು ಯಾವುದೋ ಒಂದು ಜನಾಂಗವನ್ನು ಅಥವಾ ಸಮುದಾಯದ ಮೂಲವನ್ನು ತಿಳಿಯಲು ಇತಿಹಾಸದ ಪರಂಪರೆಗೆ ಮೊರೆ ಹೋಗುತ್ತೇವೆ. ಇತಿಹಾಸದಲ್ಲಿ ನಡೆದಂತ ಘಟನೆಗಳು ಶಾಸನಗಳಲ್ಲಿ, ಗ್ರಂಥಗಳಲ್ಲಿ, ಪಳೆಯುಳಿಕೆಗಳ ಮೂಲಕ ತಮ್ಮ ಇರುವಿಕೆಯನ್ನು ದಾಖಲಿಸುತ್ತವೆ. ಅದು ನಿಖರವಾದ ದಾಖಲೆಯಾಗಿ ಅವರ ಅಸ್ಥಿತ್ವ ತಿಳಿಯಲು ಸಹಾಯಕವಾಗುತ್ತವೆ. ಆದರೆ ಆ ಜನರ ಸಂಸ್ಕೃತಿ, ಆಚಾರ, ಅಸ್ಥಿತ್ವ ಇನ್ನು ಹಲವಾರು ಮಾಹಿತಿಗಳು ಇತಿಹಾಸದಲ್ಲಿ ದೊರೆಯದೇ ಹೋದಾಗ ಧರ್ಮಸಂಕಟಕ್ಕೆ ಸಿಲುಕುತ್ತವೆ. ನಮ್ಮ ಇತಿಹಾಸದಲ್ಲಿ ಏನೆಲ್ಲಾ ಆಗಿರುವ ಸಾಧ್ಯತೆ ಇವೆ. ಅವೆಲ್ಲವುಗಳ ದಾಖಲೆಯನ್ನು ಅವರು ಇಟ್ಟಿರುವುದಿಲ್ಲ. ತಮಗೆ ಬೇಕಾದ, ಹೊಗಳುವ, ಹೊಗಳಿಸಿಕೊಳ್ಳುವ ಮಾಹಿತಿಗಳು ಮಾತ್ರ ಲಭ್ಯವಾಗುತ್ತದೆ. ಕೆಲವು ಮುಖ್ಯವಾದ ಮಾಹಿತಿಗಳು ಅಥವಾ ನಿಜಸಂಗತಿಗಳು ಕಣ್ಣಮುಂದೆ ಸುಳಿಯಲಾರದೆ ಹೋಗುತ್ತವೆ. ಈ ಪಾಂಚಾಳ ಮೌಖಿಕ ಪರಂಪರೆಯ ವಿವರವನ್ನು ಇಲ್ಲಿ ನೋಡಬಹುದು.

'ಸಮುದಾಯಗಳ ಸಾಂಸ್ಕೃತಿಕ ಆತ್ಮಕಥನವೇ ಮೌಖಿಕ ಇತಿಹಾಸ. ಜನಪದರು ತಮ್ಮ ಅಸ್ತಿತ್ವದ ಮೂಲ ನೆಲೆಗಳನ್ನು ಮತ್ತು ನಡೆದುಬಂದ ದಾರಿಯನ್ನು ಸಾಂಸ್ಕೃತಿಕ ನಿರೂಪಣೆಗಳ ಮೂಲಕ ಬಹುರೂಪಿಯಾಗಿ ಕಟ್ಟಿಕೊಳ್ಳುತ್ತಲೇ ಬಂದಿದ್ದಾರೆ. ಸುಪ್ತ ಪ್ರಜ್ಞೆಯಲ್ಲಿ ಮೌಖಿಕತೆಯು ರೂಪಗೊಂಡು ಸಾಮಾಜಿಕವಾದ ಆಯಾಮವನ್ನು ಪಡೆದುಕೊಂಡಿರುತ್ತದೆ. ಹೀಗಾಗಿಯೇ ಮೌಖಿಕ ಚರಿತ್ರೆಯು ಆಯಾ ಸಮುದಾಯದ ಅಸ್ಥಿತ್ವದ ಜೊತೆಗೆ ಅವರ ಚಹರೆಯನ್ನು ಹೇಳುತ್ತಿರುತ್ತದೆ. ತಳ ಸಮುದಾಯಗಳು ತಮ್ಮ ಇರುವಿಕೆಯನ್ನು ಸಮರ್ಥಿಸಿಕೊಳ್ಳುವುದು ಇಂತಹ ಚಹರೆಗಳಿಂದಲೇ. ಇದು ಸಾಂಸ್ಕೃತಿಕವಾದ ಪ್ರವೃತ್ತಿಯಿಂದ ಉಂಟಾಗುವ ಕಥನ. ಈ ಕಥನವೂ ನೆನಪುಗಳ ಮೂಲಕ ಸದಾ ರೂಪಾಂತರಗೊಳ್ಳುವ ಬಹುರೂಪಿ ಪ್ರಜ್ಞೆ' ಎಂದು ಡಾ. ಮೊಗಳ್ಳಿ ಗಣೇಶ್‌ರವರು (ಚರಿತ್ರ ಅಧ್ಯಯನ–(ಸಂ.)ಪ್ರೋ.ಲಕ್ಷಣ್ ತೆಲಗಾವಿ, ಪು–೬) ದೀರ್ಘವಾಗಿ ಮೌಖಿಕ ಇತಿಹಾಸದ ವಿವರಗಳನ್ನು ಕೊಡುತ್ತಾರೆ.

ಮೌಖಿಕ ಪರಂಪರೆಗೆ ಆಧಾರಗಳು ಬೇಕಿಲ್ಲ. ಜನಪದರ ಮನಸ್ಸು, ಅವರೇಳುವ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನವೊಂದಿದ್ದರೆ ಮೌಖಿಕ ಇತಿಹಾಸಕ್ಕೆ ಪೂರಕವಾದ ಜನಪದ ಸಾಹಿತ್ಯವು ತಂತಾನೇ ಆಧಾರವಾಗಿ ಹೊರಬರುತ್ತದೆ. ಶಾಸ್ತ್ರೀಯ ಇತಿಹಾಸಕ್ಕೆ ಪೂರಕವಾದ ಮಾಹಿತಿಯನ್ನು ಈ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ, ಕಾಣಿಸಿಕೊಳ್ಳಬೇಕೆಂಬ ನಿಯಮಗಳೇನಿಲ್ಲ. ಒಂದು ಸಮುದಾಯದ ಇತಿಹಾಸವನ್ನು ಆಧಾರ ಸಮೇತವಾಗಿ ಹುಡುಕುವುದು ಕಷ್ಟ ಆದರೆ ಮೌಖಿಕವಾಗಿ ಆ ಸಮುದಾಯದ ಪರಂಪರೆಯು ಜನಪದರ ನಾಲಿಗೆಯ ಮೇಲೆ ನಲಿದಾಡುವುದನ್ನು ನಿಷ್ಠ ಇತಿಹಾಸಕಾರರು ಪರಿಗಣಿಸುವುದಿಲ್ಲ. ಅವು ಇತಿಹಾಸಕ್ಕೆ ಮೂಲಧಾರಗಳಲ್ಲವಾಗಿರಬಹುದು ಬದಲಾಗಿ ಆಧಾರಕ್ಕೆ ಎಳೆಗಳಾದರೂ ಸಿಕ್ಕಬಹುದು. ನಿಜವಾಗಿ ಜನಪದರ ಬಾಯಲ್ಲಿ ಈ ಸಂಸ್ಕೃತಿ, ಪರಂಪರೆ, ಆಚರಣೆ, ಸಂಪ್ರದಾಯಗಳು ಜನಪದದ ಒಳಗೆ ಅಡಗಿರುವುದನ್ನು ಕಂಡುಕೊಂಡರೆ ಈ ಮೌಖಿಕ ಇತಿಹಾಸಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿಬಹುದು.

ಒಂದು ಸಮುದಾಯದ ಮೂಲ ಪರಂಪರೆಯನ್ನು ಕೆದಕಬೇಕಾದರೆ ಆ ಸಮುದಾಯದ ಜನರನ್ನು ಕಂಡು ಅವರಿಂದ ಪಡೆದ ಮಾಹಿತಿ ಆಧಾರದ ಮೇಲೆ ಆ ಸಮುದಾಯದ ಇತಿಹಾಸವನ್ನು ಮೌಖಿಕತೆಯ ಪರಂಪರೆಯಲ್ಲಿ ಕಟ್ಟಬಹುದು. ಇತಿಹಾಸ ಯಾವತ್ತು ಏಕರೂಪಿ ಯಾದುದ್ದಲ್ಲ. ಸಮುದಾಯಗಳು ರೂಪಿಸಿಕೊಂಡ ಚರಿತ್ರೆಯ ಪ್ರಜ್ಞೆಯು ಅತ್ಯಂತ ಸಂಕೀರ್ಣವಾದದು. ಮೇಲ್ನೋಟಕ್ಕೆ ಇತಿಹಾಸಕ್ಕೆ ವಿಮುಖವಾದಂತೆ ಸಮುದಾಯಗಳು ವರ್ತಿಸಿಕದರೂ ತಮ್ಮ ಆಳದಲ್ಲಿ ಚಾರಿತ್ರಿಕ ಎಚ್ಚರವನ್ನು ಗೌಪ್ಯವಾಗಿ ಕಾಯ್ದುಕೊಂಡು ಆ ಪ್ರಜ್ಞೆಯ ಬಹುರೂಪಿ ಅಭಿವ್ಯಕ್ತಿಗಳಲ್ಲಿ ಪರೋಕ್ಷವಾಗಿ ನಿರೂಪಿಸುತ್ತಾ ಬಂದಿರುತ್ತವೆ. ಇಂತಹ ಗುಣವು ವಿಶೇಷವಾಗಿ ಜಾನಪದ ಪರಂಪರೆಗಳಲ್ಲಿ ಗಾಢವಾದ ಅನುಸಂಧಾನ ಗೊಂಡಿರುತ್ತದೆ. ಆದ್ಧರಿಂದಲೇ ಈ ಮೌಖಿಕ ನಿರೂಪಣೆಗಳು ಚರಿತ್ರೆಯ ಆಚೆಗಿನ ಚರಿತ್ರೆಯನ್ನು ಎಂದರೆ ಇತಿಹಾಸದ ಇತಿಹಾಸವನ್ನು ಮರುಸೃಷ್ಟಿಸುತ್ತಿರುತ್ತದೆ. ಹೀಗಾಗಿಯೇ ಅಂತಹ ಜನ ಪರಂಪರೆ ತನ್ನ ಕಾಲದ ಹಾಗೂ ಬದುಕಿನ ಮೇಲೆ ನೇರವಾಗಿ ಆಯ್ದುಬರುವ ಚರಿತ್ರೆಯ ಪ್ರಸ್ತಾವನೆಗಳ ಆಚೆಗೆ ಹೋಗಿ ಮಾಂತ್ರಿಕವಾದ ನಿರೂಪಣೆಗಳಿಗೆ ತೊಡಗುವುದು ಎಂದು (ಚರಿತ್ರೆ ಅಧ್ಯಯನ-(ಸಂ)ಪ್ರೋ. ಲಕ್ಷಣ್ ತೆಲಗಾವಿ, ಪು-೫) ಡಾ. ಮೊಗಳ್ಳಿ ಗಣೇಶ್‌ರವರು ಮೌಖಿಕ ಪರಂಪರೆಯ ಬಗ್ಗೆ ಧೀರ್ಘವಾದ ಚರ್ಚೆಯನ್ನು ಮಾಡುತ್ತಾರೆ. ಈತರದ ವಿದ್ವಾಂಸರು ಕರ್ನಾಟಕದಲ್ಲಿ ಕೆಲವೇ ಕೆಲವು ಜನರು ಮೌಖಿಕ ಪರಂಪರೆಯ ಗುರುತುಗಳನ್ನು ಬಹು ವಿವರವಾಗಿ ಮಂಡಿಸುತ್ತಾರೆ. ಒಂದು ಸಮುದಾಯವು ತನ್ನ ಸುತ್ತ ಕಟ್ಟಿಕೊಂಡ ಮೌಖಿಕತೆಯನ್ನು ತಮ್ಮಲ್ಲೇ ಇಟ್ಟುಕೊಂಡಿರುತ್ತಾರೆ. ಮೂಲತಃ ಮೌಖಿಕ ಪರಂಪರೆಯು ಚರಿತ್ರೆಯ ವಿರುದ್ಧವಾಗಿ ಪ್ರತಿಕ್ರಿಯಿಸುತ್ತಾ ಹೇಳುವುದನ್ನು ಒಳಗಿಟ್ಟುಕೊಂಡು ಹೇಳುವುವುದನ್ನೆಲ್ಲಾ ಹೇಳುವುದೇ ಇಲ್ಲ. ಹಾಗೆಯೇ ಘಟನೆಗೆ ನಿಷ್ಠವಾಗಿಯೂ ಇರುವುದಿಲ್ಲ ಎಂಬ ವಿದ್ವಾಂಸರ ಮಾತು ಸರಿಯಾಗಿದೆ. ಅಂತಹ ಗುಣವು ಮೌಖಿಕತೆಯಲ್ಲಿರುತ್ತದೆ ಎಂದು ಭಾಪಿಸಬಹುದು.

'ಮೌಖಿಕ ಕಥನವು ಹೊರ ರೂಪದಲ್ಲಿ ತುಂಬಾ ಸರಳವಾಗಿದ್ದರೂ ಅವುಗಳ ಅಂತರಂಗವು ಮುಚ್ಚಿಕೊಂಡು ಕಾಲದ ಒಟ್ಟು ಸಂವೇದನೆಯಲ್ಲಿ ರೂಪಗಳ ಛಂದಸ್ಸಿನಲ್ಲಿ ನುಡಿಸಿದ್ದರಿಂದ ಅವುಗಳ ಜೊತೆ ಆಧುನಿಕೋತ್ತರ ಜಗತ್ತು ಮಾರ್ಮಿಕವಾದ ಸಂವಾದವನ್ನು ಮಾಡಲು ಸಾಧ್ಯ. ಈ ಹಿನ್ನೆಲೆಯಲ್ಲಿ ಮೌಖಿಕ ಪರಂಪರೆಯ ಸ್ಥಳೀಯ ಕಥನಗಳ ಜೊತೆ ವರ್ತಮಾನದ ಜಗತ್ತಿನ ಅಧುನಿಕೊತ್ತರ ಗದ್ಯದ ವೈಚಾರಿಕ ಪ್ರತಿಸೃಷ್ಟಿಯಿಂದ ಪ್ರವೇಶಿಸಿದರೆ ನಮ್ಮ ಆಲೋಚನೆಗಳಿಗೆ ಬೇರೊಂದು ಆಯಾಮ ಸಿಗುತ್ತದೆ.' ಎಂಬ (ಮೌಖಿಕ ಕಥನ-ಡಾ.ಮೊಗಳ್ಳಿ ಗಣೇಶ್, ಪು-೩೭) ಮಾತುಗಳು ಸಮುದಾಯದ ಸುತ್ತ ಕಟ್ಟಿಕೊಂಡು ಬಾಯಿಮಾತಿನ ಸುಳಿವುಗಳು ನಿಜಕ್ಕೂ ಸಮುದಾಯದ ಪರಂಪರಯನ್ನು ರೂಪಿಸುವತ್ತ ಸಹಾಯಕವಾಗುತ್ತದೆ. ಇವರೇ ಮುಂದುವರೆದು 'ಮೌಖಿಕತೆಯು ನುಡಿಯುವ ಸಂಭ್ರಮ, ಮಾತಿನ ಬೆಡಗು, ವ್ಯಕ್ತವಾಗುವ ತುಡಿತ, ಹಾಡುವ ಹಂಬಲ, ಹೇಳುವ ಅನಿವಾರ್ಯತೆ, ಮುಟ್ಟುವ ಬಯಕೆ, ತೆಗೆದುಕೊಳ್ಳುವ ಬಗೆ, ಮೌನವನ್ನು ಧ್ವನಿಸುವ ಕ್ರಿಯೆ, ಆನಂದ ಮತ್ತು ಆಕ್ರಂದನದ ಕೂಗು ಇಂತಹ ಜಿಡಿ ಜಿಡಿಯಾದ ಎಲ್ಲಾ ಅರ್ಥಗಳನ್ನು ಈ ಮೌಖಿಕ ಪರಂಪರೆ ಹೊಂದಿರುತ್ತದೆ.' ಎಂದು ತಿಳಿಸುತ್ತಾರೆ. ಈ ಮೌಖಿಕ

ಕಥೆ, ಹಾಡು, ಮಹಾಕಾವ್ಯಗಳಿಗೆ ಮುಕ್ತವಾಗಿ ಅಭಿವ್ಯಕ್ತಿಸುವ ಸ್ವತಂತ್ರವನ್ನು ಹೊಂದಿದ್ದು ತನ್ನದೇ ಆದ ಸ್ಥಾನವನ್ನು ಜನಪದ ಸಾಹಿತ್ಯ ಪಡೆದು ತನ್ನ ಸ್ಥಿರತೆಯನ್ನು ನಿಲ್ಲಿಸತೊಡಗಿದೆ. ಈರೀತಿಯಾಗಿ ಮೌಖಿಕ ಪರಂಪರೆಯ ವಿವರಗಳನ್ನು ನೋಡಬಹುದು.

ಮೌಖಿಕ ಕತೆ

ವಿಶ್ವಕರ್ಮರರನ್ನು 'ಪಾಂಚಾಳರು' ಎಂಬ ಪದದಿಂದ ಕರೆಯುವುದು ರೂಢಿಯಲ್ಲಿದೆ. ಸಮಾನ್ಯವಾಗಿ ಪಂಚಾಳರು ಎಂಬ ಪದ ಬಳಸುವುದು ಬಹಾಳ ಕಡಿಮೆ. ಇವರಲ್ಲಿ ಕಮ್ಮಾರ, ಬಡಗಿ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗ ಇವರೆಲ್ಲರೂ ಒಂದು ವರ್ಗಕ್ಕೆ ಸೇರಿದವರು. ಈ ಐದು ಜನರು ಬೇರೆ ಬೇರೆ ವೃತ್ತಿಗಳನ್ನು ಆಯ್ದುಕೊಂಡು ಸಾಮಾಂತರಾದವರು. ಇವರು ಮಾಡುವ ವೃತ್ತಿಗಳೆಂದರೆ ಈ ಬಿಡಿ ಬಿಡಿಯಾದ ಹೆಸರುಗಳು ಬಂದಿವೆ. ಮೂಲತಃ ಇವರು ಒಂದೇ ಸಮುದಾಯಕ್ಕೆ ಸೇರಿದವರು ಎಂದು ಹೇಳಬಹುದು ಮತ್ತು ಆಚಾರಿಗಳು ಎಂಬ ಹೆಸರು ಹೆಚ್ಚು ಬಳಕೆಯಲ್ಲಿದೆ. ಇವರೆಲ್ಲರನ್ನು ಸೇರಿಸಿ ಪಾಂಚಾಳರು ಎಂದು ಕರೆಯುತ್ತಾರೆ. ಮತ್ತು ವಿಶ್ವಕರ್ಮನ ಐದು ಮುಖಗಳಿದ್ದರಿಂದ ಅವರಿಗೆ ಪಾಂಚಾಳರೆಂದು ಕರೆಯುವರು ಇವರ ಪರಂಪರೆಗೆ ಒಂದು ಐತಿಹ್ಯವೂ ಇದೆ.

ಪಾಂಚಾಳ ಸಮುದಾಯದವರು ಹೇಗೆ ತಮ್ಮ ವೃತ್ತಿಗಳನ್ನು ಆಯ್ದುಕೊಂಡು ತಮ್ಮನ್ನು ತೊಡಗಿಸಿಕೊಂಡರು ಎಂಬುದನ್ನು ಗಮನಿಸುವುದಾದರೆ ಒಂದು ಜನಾಂಗದ ದೈವದ ಕೃಪೆಯಿಂದ ಅವರವರ ವೃತ್ತಿಗಳನ್ನು ಆಯ್ದುಕೊಂಡು ಮುಂದವರೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಜಗತ್ತಿನ ಸಕಲ ಹುಟ್ಟು ವಿಶ್ವಕರ್ಮನಿಂದಲೇ ಆಗಿತ್ತು. ವಿಶ್ವಕರ್ಮನಿಗೆ ಐದು ಮಕ್ಕಳಾದ ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯರು ಹುಟ್ಟಿದರು. ಇವರಿಂದ ಮತ್ತೈದೆ ಜನರಾದ ಮನು, ಮಯ, ತ್ವಷ್ಟ, ಶಿಲ್ಪಿ, ದೈವಜ್ಞರು ಜನಿಸಿದರು. ಒಂದು ದಿನ ವಿಶ್ವಕರ್ಮ ಎಲ್ಲಾ ಜನಾಂಗದವರು ಅಥವಾ ಜನರನ್ನು ಸಭೆಗೆ ಕರೆದ. ಮೊದಲು ಬಂದವರಿಗೆ ಒಳ್ಳೆಯ ಕೆಲಸ ದೊರಕುತ್ತವೆ ಎಂಬ ಮಾತನ್ನು ಹೇಳಿದ್ದ. ಹೀಗಿರುವಾಗ ಇತರ ಎಲ್ಲ ಜನರು ಬಂದು ವೃತ್ತಿಗಳನ್ನು ಮಾಡಲು ಸಾಮಾನುಗಳನ್ನು ತೆಗೆದುಕೊಂಡು ಹೋದರು. ಆದರೆ ಈ ವಿಶ್ವಕರ್ಮನಿಂದ ಸೃಷ್ಟಿಸಲ್ಪಟ್ಟವರು, ತಂದೆಯ ಕಡೆಗೆ ಗಮನ ಕೊಡದೇ ಸೋಗಲಾಡಿತನ ಮಾಡಿಹೋಗಲಿಲ್ಲ. ವಿಶ್ವಕರ್ಮ ಮತ್ತೆ ಹೇಳಿ ಕಳಿಸಿದ, ಆಗೂ ಬರಲಿಲ್ಲ. ನಂತರ ಅವನೇ ಬಂದು ಅವರನ್ನು ಕರೆದುಕೊಂಡು ಹೋದನು. ಅಲ್ಲಿ ಕೂಡಿಸಿ ಒಬ್ಬರಾಗಿ ಬಂದು ನಿಮಗೆ ದೊರೆಯುವ ಉಪಕರಣಗಳನ್ನು ತೆಗೆದುಕೊಂಡು ಹೋಗಿ ಎಂದು ಹೇಳಿದ ಅಷ್ಟೊತ್ತಿಗೆ ಈ ಐದು ವೃತ್ತಿಗಳು ಉಳಿದುಕೊಂಡಿದ್ದವು. ಈ ಪಂಚಮರಲ್ಲಿಯೇ ಗಟ್ಟಿಯಾದ ಕಮ್ಮಾರ ಬಂದಾಗ ಅವನು ಬರುವ ರಭಸಕ್ಕೆ ತಕ್ಕದಾದ ಕಬ್ಬಿಣ ಕಾಸಿ ಬಡೆಯುವ ವೃತ್ತಿಯನ್ನು ಆಶೀರ್ವಾದ ನೀಡಿದ, ಅವರನ್ನು ಕಮ್ಮಾರನೆಂದು ನಾಮಕರಣವಾಯಿತು. ಅವನ ನಂತರ 'ಮಯ' ಬಂದನು ಅವನಿಗೆ ಕಟ್ಟಿಗೆ (ಕಾಷ್ಠ) ಕೆಲಸವನ್ನು ನೀಡಿ ಅವನಿಗೆ ಉಳಿ, ಬಾಚಿ, ಕೊಡ್ತಿ ಇತ್ಯಾದಿ ಉಪಕರಣಗಳನ್ನು ನೀಡಿ ಅವನನ್ನು 'ಬಡಿಗಿ' ಎಂದು ಕರೆಯಲಾಯಿತು. ಆಮೇಲೆ 'ತ್ವಷ್ಟ' ಬಂದನು ಅವನಿಗೆ ಎರಕಹೊಯ್ಯುವ ಕೆಲಸ ಕೊಟ್ಟ ಅವನಿಗೆ ಪಂಕ, ಸುತ್ತಿಗೆ, ಪಾತ್ರೆ ನೀಡಿ 'ಕಂಚುಗಾರ' ನೆಂದು ಹೆಸರು ಪಡೆದನು. ಇವರ ನಂತರ 'ಶಿಲ್ಪಿ' ಬಂದನು ಅವನಿಗೆ ವಿಶ್ವಕರ್ಮನು ಉಳಿಗಳನ್ನು ಹಾಗೂ ಸುತ್ತಿಗೆಯನ್ನು ನೀಡಿ ಕಲ್ಲಿನಲ್ಲಿ ಶಿಲ್ಪವನ್ನು ಕೆತ್ತುತ್ತಾ ಇರು ಎಂದು ಹೇಳಿದ. ಅವರನ್ನು 'ಶಿಲ್ಪಿ' ಎಂದು ಹೆಸರು ಬಂದು ಕೊನೆಯದಾಗಿ ವಿಶ್ವಜ್ಞನು ಎದ್ದು ಬಂದನು ಅವನಿಗೆ ಸುವರ್ಣಕೆಲಸಕ್ಕೆ ಬೇಕಾಗುವ ಚಿಮುಟಿಗೆ, ಅಗ್ಗಷ್ಟಿಕೆ ಇತ್ಯಾದಿ ಉಪಕರಣಗಳನ್ನು ನೀಡಿ 'ಅಕ್ಕಸಾಲಿಗ' ಎಂದು ಕರೆಸಿಕೊಂಡನು. ಇವರು ಪ್ರತಿಯೊಬ್ಬರು ಬಂದು ಹೋಗುವಾಗ ಸೋಮಾರಿತನದಿಂದ ದರಿದ್ರ ಮುಖಹೊತ್ತುಕೊಂಡವರಂತೆ ಕಂಡಿದ್ದನ್ನು ವಿಶ್ವಕರ್ಮ ಈ ಪಾಂಚಾಳರ ಮೇಲೆ ಕೋಪಗೊಂಡ 'ಟಕ್' ಅಂದ್ರ ಅಕ್ಕಬಾನ' ನೀವು ನಿಮ್ಮ ಹೊಟ್ಟೆ ತುಂಬಿಸಿ ಕೊಳ್ಳಲು ನಿಮಗೆ ನೀಡಿದ ಪಂಚ ವೃತ್ತಿಗಳನ್ನು ಮುಂದುವರೆಸಿಕೊಂಡು ಹೋಗು ಎಂದು ಹೇಳುತ್ತಾ ಮುಂಜಾನಿಂದ ಸಂಜೆವರೆಗೂ ಜವರಳಿಸಿ

ದುಡಿದರೆ ಮಾತ್ರ ನಿಮಗೆ ಮತ್ತು ನಿಮ್ಮ ಹೆಂಡ್ತಿ ಮಕ್ಕಳಿಗೆ ಗಂಜಿ ಇಲ್ಲದಿದ್ದರೆ ಇಲ್ಲ ಎಂದು ಶಾಪ ರೂಪದವರವೋ ಅಥವಾ ವರದ ರೂಪದ ಶಾಪವೋ ಎಂಬುದನ್ನು ನೀಡಿ ನೀವು ಬಹಳ ಬುದ್ಧಿವಂತರು ಆದರೆ ನಿಮ್ಮ ಗ್ರಹಚಾರ, ಬಂದಿದ್ದನ್ನು ಅನುಭವಿಸು ಎಂದು ಹೇಳಿ ಹೋದನು ಎಂದು ನಮ್ಮವ್ವ ಹೇಳಿದ್ದಳು.

ಈ ಕತೆಯಲ್ಲಿ ಬರುವ ವಿಶ್ವಕರ್ಮನ ಮಕ್ಕಳಾದ ಈ ಕಮ್ಮಾರ, ಬಡಿಗಿ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗ ಇವರೆಲ್ಲರೂ ಒಂದೇ ಅಣ್ಣ ತಮ್ಮಂದಿರು, ಒಂದೇ ಜಾತಿಯವರು ಇವರು ಪಡೆದ ವೃತ್ತಿಗಳ ಮೂಲಕ ಅವರ ಹೆಸರುಗಳು ಹುಟ್ಟಿಕೊಂಡಿರಬೇಕು. ತಾವು ಕೆಲಸ ಮಾಡುವ ವೃತ್ತಿಗಳ ಮೂಲಕ ಅವರಿಗೆ ಆಯಾ ಕುಲನಾಮಗಳು ಪಡೆದಿರಬಹುದು ಮತ್ತು ಈ ಪಾಂಚಾಳರು ತಾವು ಕಷ್ಟಪಟ್ಟು ಕೆಲಸ ಮಾಡಿದರೆ ಮಾತ್ರ ಅನ್ನ ಇಲ್ಲದಿದ್ದರೆ ಇಲ್ಲ ಎಂಬುದು ಮಾತ್ರ ಸತ್ಯವಾದುದಾಗಿದೆ.

"ಒಂದಾನೊಂದು ಕಾಲದಲ್ಲಿ ಶಿವನು ಲೋಕ ಸಂಚಾರ ಕೈಗೊಂಡಾಗ ಪಂಚ ಋಷಿಗಳ ಹೆಂಡಂದಿರುಗಳು ಕೊಳದಲ್ಲಿ ಈಜಾಡುವುದನ್ನು ಕಾಣುತ್ತಾನೆ. ಆ ಪಂಚಋಷಿಗಳ ಹೆಂಡತಿಯರ ಬೆತ್ತಲೆ ದೇಹಗಳನ್ನು ನೋಡಿ ಮೋಹಿಸಿದ ಶಿವನು ಆ ಐದು ಜನ ಹೆಂಗಸರನ್ನು ಕೂಡುತ್ತಾನೆ. ಆ ಐದು ಜನರು ಶಿವನಿಗೆ ಬಸುರಾಗಿ ಐದು ಗಂಡು ಮಕ್ಕಳಿಗೆ ಜನ್ಮವನ್ನು ಕೊಡುತ್ತಾರೆ. ಆ ಕೃತ್ಯದಿಂದ ಹುಟ್ಟಿದ ಈ ಮಕ್ಕಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋದರೆ ತಮ್ಮ ಗಂಡಂದಿರು ಅನುಮಾನ ಪಡುತ್ತಾರೆಂದು ಭಯಪಟ್ಟು ಹೆಂಗಸರು ಆ ಮಕ್ಕಳನ್ನು ನೀನೆ ಕರೆದುಕೊಂಡು ಹೋಗೆಂದು ಶಿವನಿಗೆ ಹೇಳುತ್ತಾರೆ. ಶಿವನು ತನ್ನೊಂದಿಗೆ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ. ಈ ಮಕ್ಕಳನ್ನೆಲ್ಲ ನೋಡಿದ ಪಾರ್ವತಿಯು ಇವರು ಯಾರ ಮಕ್ಕಳೆಂದು ಶಿವನನ್ನು ಕೇಳುತ್ತಾಳೆ. ಈ ಎಲ್ಲಾ ಮಕ್ಕಳು ನಿನ್ನವೆ ಎಂದು ಶಿವನು ಉತ್ತರ ಕೊಡುತ್ತಾನೆ. ಅವನ ಮಾತನ್ನು ಸಹಿಸಿಕೊಂಡು ಆ ಎಲ್ಲಾ ಮಕ್ಕಳನ್ನು ಸಾಕಿ ಸಲುವಿ, ದೊಡ್ಡವರಾದ ಮೇಲೆ ಪಂಚ ವೃತ್ತಿಗಳಾದ ಕಮ್ಮಾರಿಕೆ, ಬಡಗಿತನ, ಕಂಚುಗಾರಿಕೆ, ಶಿಲ್ಪಗಾರಿಕೆ, ಸ್ವರ್ಣಗಾರಿಕೆಯ ಉಪಕರಣಗಳನ್ನು ನೀಡಿ ಈ ವೃತಿಯಲ್ಲಿ ಮಾಡುತ್ತಾ ನಿನ್ನ ತಾಯಿಯನ್ನು ನೆನೆಯಿರಿ ಎಂದು ಆಶೀರ್ವಾದ ಮಾಡುತ್ತಾಳೆ ಅಂದಿನಿಂದ ಅವರು ಈ ಕೆಲಸಗಳನ್ನು ಮಾಡಿಕೊಂಡು ಬಂದರು" ಎಂದು 'ವೆಂಕಟೇಶಪ್ಪ ಯಶವಂತನಗರ'ದವರು ಈ ಕತೆಯನ್ನು ಹೇಳುತ್ತಾರೆ. ಇವರು ಹೇಳುವ ಕತೆಯಲ್ಲಿ ಶಿವನಿಗೆ ಜನಿಸಿದ ಮಕ್ಕಳು, ಶಿವನು ಬೇರೆ ಅಲ್ಲ ವಿಶ್ವಕರ್ಮ ಬೇರೆಅಲ್ಲ ಇಬ್ಬರೂ ಒಂದೇ ಅವನ ಅನುಗ್ರಹದಿಂದ ನಾವು ಜನಿಸಿದೆವೆಂದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿಯುತ್ತದೆ. ಪಂಚವೃತ್ತಿಗಳನ್ನು ನಿರ್ವಹಿಸುವವರು ಸಾಮಾನ್ಯವಾಗಿ ಎಲ್ಲಾ ಕತೆ ಪುರಾಣಗಳಲ್ಲಿ ಅಣ್ಣತಮ್ಮಂದಿರಾಗಿ ಕಾಣುತ್ತಾರೆ. ಹಾಗಾಗಿ ಒಬ್ಬರನ್ನು ಬಿಟ್ಟು ಮತ್ತೊಬ್ಬರು ಭಿನ್ನವಾಗಿ ಸಿಗಲಾರರು.

ಕೆಲವು ಕತೆಗಳಲ್ಲಿ ಎರಡು ಮೂರು ವೃತ್ತಿಗಾರ ಸಂಬಂಧಪಟ್ಟ ವಿವರಗಳು ಪ್ರತ್ಯೇಕವಾಗಿ ಕಂಡು ಬರುತ್ತವೆ. ಆ ವಿವರಗಳು ಕೂಡ ಎಲ್ಲಾದಕ್ಕು ಒಂದಿಕೊಳ್ಳುತ್ತವೆ ಎಂಬ ಅಂಶಗಳೂ ಕಾಣಸಿಗುತ್ತವೆ.

"ಆದಿಯಲ್ಲಿ ಶಿವನೇ ಕಮ್ಮಾರನ ತಂದೆ, ಶಿವ ಎಂದರೆ ಮಾನಯ್ಯ. ಮಾನಯ್ಯ ತನ್ನ ಬಲತೊಡೆಯನ್ನು ಅಡಿಗಲ್ಲನ್ನಾಗಿಸಿಕೊಂಡಿದ್ದ, ಹಾಗೆಯೇ ಎಡಗೈಯನ್ನು ಇಕ್ಕಳವಾಗಿ ಬಳಸುತ್ತಿದ್ದ. ಅವನ ಬಲಗೈಯೇ ಸುತ್ತಿಗೆ ಯಾಗಿತ್ತೆಂದು ತನ್ನ ಎಡಗಾಲನ್ನೇ ಕಬ್ಬಿಣವಾಗಿಸಿಕೊಂಡು ಅದನ್ನು ಹೆಣೆದು ಆಯುಧಗಳನ್ನು ತಯಾರಿಸುತ್ತಿದ್ದನು. ಅವನ ಮೂಲಕ ಹುಟ್ಟಿಕೊಂಡು ವೃತ್ತಿ ಅವನಿಂದಲೇ ಅವನ ಮಗನೇ ಕಮ್ಮಾರನಾದ" ಎಂಬ ಪ್ರತೀತಿಯು ಕಂಡುಬರುತ್ತದೆ ಎಂದು 'ಸತ್ತೂರು ರುದ್ರಾಚಾರಿ'ಯವರು ಹೇಳುತ್ತಾರೆ.

ಇವರು ಹೇಳುವಾಗ ಕಂಡು ಬಂದ ಅಂಶವೆಂದರೆ ತಾನು ಕಮ್ಮಾರ. ಅವರೇ ಶ್ರೇಷ್ಠರು ಎಂಬ ಭಾವನೆಗಳು ಮಾತಿನ ಗೂಡಾರ್ಥದಲ್ಲಿ ಕಂಡು ಬಂದವು. ಇಂತಹ ಭಿನ್ನವಾದ ಅಂಶಗಳು ಈ ಪಾಂಚಾಳರಲ್ಲಿ ಕಂಡುಬರುತ್ತವೆ. ನಾವೆಲ್ಲ ಒಂದೇ ಎಂದು ಹೇಳಿಕೊಳ್ಳುತ್ತಿದ್ದರೂ ಅವರನ್ನೆಲ್ಲ ವಿಶ್ವಕರ್ಮರು, ಪಾಂಚಾಳರೆನಿಸಿಕೊಳ್ಳುತ್ತಿದ್ದರೂ ಒಳಗೊಳಗೆ ಇಂತಹ ವೈಷಮ್ಯಗಳು ಕಂಡುಬರುತ್ತವೆ. ಈ ಪಾಂಚಾಳರಲ್ಲಿ ಕಂಚುಗಾರರನ್ನು ಕೊನೆಯ ಸ್ಥಾನ ದೊರಕಿರುವುದಂತು ಅನುಮಾನಕ್ಕೀಡುಮಾಡಿಕೊಡುತ್ತದೆ.

ಪಾಂಚಾಳರ ಮೌಖಿಕ ಪರಂಪರೆಗಳನ್ನು ನಾವು ನೋಡುತ್ತಾ ಹೋದಾಗ ನಿಮಗೆ ಒಂದು ಅಂಶ ಹೊಳೆಯುತ್ತದೆ. ಈ ಕತೆ, ಪುರಾಣ, ಉಲ್ಲೇಖಗಳ ಆಧಾರ ಸಮೇತ ಕೂಲಂಕುಷವಾಗಿ ಅಭ್ಯಾಸಿಸಿದಾಗ 'ವಿಶ್ವಸೃಷ್ಟಿ' ಎಲ್ಲಿ ಚರ್ಚೆಗೆ ಒಳಗಾಗುತ್ತದೆಯೋ ಅಲ್ಲಿ ಈ ವಿಶ್ವಕರ್ಮರ ನೆಲೆಯ ಮಾಹಿತಿಗಳು ನಮಗೆ ದೊರಕುತ್ತವೆ. ವೇದ, ಉಪನಿಷತ್‌ಗಳಲ್ಲಿ ಈ ವಿಶ್ವಕರ್ಮನ ಹೆಸರು ಕೇಳಿಬರುತ್ತದೆ. ಅಂದರೆ ಅವನ ಸೃಷ್ಟಿಯಿಂದಲೇ ಜಗಸೃಷ್ಟಿಯಾಯಿತೆಂದು ತಿಳಿದು ಬರುತ್ತದೆ. ವೇದಗಳು ಕೂಡ ಅವನಿಂದಲೇ ಸೃಷ್ಟಿಯಾದವು ಎಂಬ ಅಂಶವನ್ನು ಗಮನಿಸುವುದಾದರೆ ಇಲ್ಲಿ ಅದಕ್ಕೆ ಸಂಬಂಧಿಸಿದ ಕತೆಯು ದೊರೆತಿದೆ. ವೇದಗಳು ನಮಗೆ ತಿಳಿದಿರುವಂತೆ ನಾಲ್ಕು ಅವನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ಐದು ಎಂದರೆ ನಮಗೆ ಇರುಸು ಮುರುಸವಾಗುವುದು ಸಹಜವೇ, ಅದನ್ನು ಒಂದು ದೃಷ್ಟಿಯಿಂದ ನಂಬಬೇಕಾದ ವಕ್ತೃವಿನ ವಿವರ ನಮಗೆ ತಿಳಿಯುತ್ತದೆ. ಹರಪನಹಳ್ಳಿ (ತಾ) ಯಲ್ಲಾಪುರ ಎಂ. ರುದ್ರಾಚಾರಿಯವರು ಒಂದು ಕತೆ ಹೀಗೆ ರೂಪಿತವಾಗಿದೆ.

"ಸೃಷ್ಟಿಗದಿಪತಿಯಾದ ವಿಶ್ವಕರ್ಮ ತ್ರಿಲೋಕಕ್ಕೆಲ್ಲ ಒಡೆಯ ಅವನೇ ಸಕಲ ಜೀವಿಗಳ ಸೃಷ್ಟಿಕರ್ತ. ವಿಶ್ವಕರ್ಮನು ಮನುಬ್ರಹ್ಮದೇವನಿಗೆ ಅಭಯ ಹಸ್ತವನ್ನು ಇಟ್ಟು, ಮುಂದೆ ಋಗ್ವೇದವನ್ನು ಕೊಟ್ಟ, ಮಯ ಬ್ರಹ್ಮನಿಗೆ ಈಶ್ವರನೆಂಬ ಹೆಸರಿಟ್ಟು ಸೂತ್ರವಾಹನ ಕೊಟ್ಟು ತ್ರಿಲೋಕಕ್ಕೆ ಅಧಿಪತಿಯಂತೆ ಜಗವು ಉದ್ಧಾರವೆಂಬ ಯಜುರ್ವೇದ ಕೊಟ್ಟನು. ತ್ವಷ್ಟ್ರ ಬ್ರಹ್ಮನಿಗೆ ಪುಷ್ಪಕವಾಹನ ಕೊಟ್ಟು, ಪೃಥ್ವಿಯೊಳಗೆ ದಿಗಂಬರನಂತೆ ಹೆಸರಿಟ್ಟು ತಾಯಿದೇವ ಉದ್ಧಾರನೆಂಬ ಅಥರ್ವಣ ವೇದವನ್ನು ಕೊಟ್ಟನು. ತ್ವಷ್ಟ ಬ್ರಹ್ಮನಿಗೆ ಅಗ್ನಿವಾಹನ ಕೊಟ್ಟ, ಪೃಥ್ವಿಯೊಳಗೆ ಗಾಳಿಬೀಸಲು ಬಿಟ್ಟು ಕಲ್ಲು ದೇವರು ಮಾಡುವ ಸಾಮವೇದವನ್ನು ಕೊಟ್ಟು, ಶಿಲ್ಪಿ ದೇವನಿಗೆ ವಾಯುದೇವನೆಂದು ಕರೆದನು. ದೈವಜ್ಞ ಬ್ರಹ್ಮನಿಗೆ ತುರಗವಾಹನ ಕೊಟ್ಟು, ಸಪ್ತ ಏಳು ಲೋಕಕ್ಕೆ ತಾಳಿ ಕಟ್ಟೆಂದು ಹೇಳಿ, ಲಕ್ಷ್ಮಿ ಉದ್ಧಾರಕನೆಂದು 'ಪ್ರಣಮವೇದ'ವನ್ನು ಹೆಸರುಕೊಟ್ಟ. ದೈವಜ್ಞ ಬ್ರಹ್ಮನಿಗೆ ಜಲಧರನೆಂದು ಹೆಸರಿಟ್ಟನು. ಆದಿ ಅಧಿಪತಿ ಗುರುವು ಬೇದಗಾರ ಮೌನಸಾಧಿಸಿ ಹೇಳಿದನು. ಸಕಲ ಜನರಿಗೆ ಪಂಚಬ್ರಹ್ಮನನ್ನು ಸೃಷ್ಟಿಸಿದನು ಎಂಬ ಉದಾಹರಣೆಯನ್ನು ನೀಡಿದ್ದಾರೆ.

ಹೀಗೆ ಪಂಚ ವೇದಗಳು ವಿಶ್ವಕರ್ಮನಿಂದ ಪಂಚ ವೃತ್ತಿಕಾರರನ್ನು ಕಸಬಿನವರಲ್ಲಿ ಇತಿಹಾಸದುದ್ದಕ್ಕೂ ಜಾಗೃತವಾಗಿದ್ದ ವಿಶ್ವಕರ್ಮ ಎಂಬ ಪರಿಕಲ್ಪನೆಯು ತುಂಬಾ ಪುರಾತನ ವಾದದ್ದು ಅದು ವೇದ ಮೂಲವಾದುದು ಹೌದು. ವೇದಗಳಲ್ಲಿ ಉಕ್ತವಾಗಿರುವ ವಿಶ್ವಕರ್ಮ ಎಂಬ ಪರಿಕಲ್ಪನೆಯನ್ನು ಕುರಿತು "ಎಲ್ಲಾ ದೇವತೆಗಳ ಗುಣಗಾನ' ಸರ್ವಶಕ್ತಿತ್ವ ವೆನ್ನವುದು ವಿಶ್ವಕರ್ಮನೆಂಬ ರೂಪದಲ್ಲಿ ಒಂದು ದೇವತಾ ರೂಪವನ್ನೇ ತಾಳಿತು. ವಿಶ್ವವನ್ನು ರಚಿಸಿದ ಮಹಾಶಿಲ್ಪಿ ಎಂದು, ಸರ್ವಜ್ಞ ನೆಂದೂ ಇತರೆಲ್ಲರೂ ಆತನ ಹತ್ತಿರಕ್ಕೆ ಬಂದು ಆಜ್ಞೆಗಳನ್ನು ಪಡೆಯುವರೆಂದು ತಿಳಿದುಬರುತ್ತದೆ. ಈ ಮಾತುಗಳು ವೇದ ಕಾಲದಲ್ಲಿ ವಿಶ್ವಕರ್ಮ ಎಂಬ ಪರಿಕಲ್ಪನೆಯ ಬಗ್ಗೆ ಇದ್ದ ಬಹು ಹೆಚ್ಚಿನ ಸ್ಥಾನವನ್ನು ತಿಳಿಸುತ್ತದೆ. ವಿ.ಎಸ್. ಅಗರವಾಲ್‌ರವರು ಮಾತನ್ನು ಉಲ್ಲೇಖದಂತೆ "ವೇದಗಳಲ್ಲಿ ವಿಶ್ವಕರ್ಮನನ್ನು ದೇವತೆ ಎಂಬ ಅರ್ಥದಲ್ಲಿ ಸಂಬೋಧಿಸಿಲಾಗಿದೆ. ಕುಲುಮೆಯಲ್ಲಿ ಲೋಹವನ್ನು ಕರಗಿಸಿ ನಾನಾ ವಿಧವಾದ ಪರಿಕರಗಳನ್ನು ತಯಾರಿಸುವ ಕಮ್ಮಾರನಿಗೆ ಹೋಲಿಸಿ ಆ ಒಂದು ಅರ್ಥದಲ್ಲಿ ವಿಶ್ವಕರ್ಮ ಎಂಬ ಪರಿಕಲ್ಪನೆಯನ್ನು ಬಳಸಲಾಗಿದೆ." (ಡಾ. ಕುಮಾರಸ್ವಾಮಿ–ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು–ಪುಟ–೧೩೧) ಎಂದು ಹೇಳುತ್ತಾರೆ. ಕಮ್ಮಾರನೊಬ್ಬನಿಂದಲೇ ಈ ಪರಿಕಲ್ಪನೆಯನ್ನು ಬಳಸಲಾಗಿದೆ ಎಂದರೆ ಅದು ಅಷ್ಟು ಸಮಂಜಸವಲ್ಲದ ವಾದವಾಗಬಹುದೇನೋ ಎಂಬ ಸಂಧಿಗ್ಧತೆ ಉಂಟಾಗುತ್ತದೆ. ಈ ಪಾಂಚಾಳರಲ್ಲಿ ಎಲ್ಲರೂ ಸಮಾನರು ಎಲ್ಲರನ್ನು ರೂಪಿಸಿಯೇ ಪಾಂಚಾಳರೆನಿಸಿಕೊಳ್ಳುವುದರ ಜೊತೆ ಎಲ್ಲರಿಗೂ ವಿಶ್ವಕರ್ಮರು ಎಂಬ ಪರಿಕಲ್ಪನೆ ಬೆಳೆದುಬಂದಿದೆ.

ಶ್ರೀ ಸಿ. ರಾಮಾಚಾರ್ ಅವರು ಋಗ್ವೇದದ ಕೆಲವು ಮಂತ್ರಗಳನ್ನು ವಿಶ್ವಕರ್ಮನು ರಚಿಸಿರುವುದಾಗಿ ಗುರುತಿಸುತ್ತಾರೆ. ತ್ವಷ್ಟ ಎಂಬುದು ವೇದಗಳಲ್ಲಿ ಬರುವ ಪರಿಕಲ್ಪನೆ. ಇದನ್ನು ಬಡಗಿ ಎಂಬ ಅರ್ಥದಲ್ಲಿ ಬಳಸಲಾಗಿದೆ. ಈ ಬಗ್ಗೆ ಸರ್ ದೇಸಾಯಿ ಹೀಗೆ ಹೇಳುತ್ತಾರೆ. "ವೇದ ಕಾಲದ ಆರ್ಯರಲ್ಲಿ ರಥ ಎಂಬ ವಾಹನ ವಿದ್ದಿತೆಂದು ಖಚಿತವಿದೆ

ರಥವನ್ನು ತಯಾರಿಸುವವನನ್ನು ತ್ವಷ್ಟ ಎಂದು ಕರೆಯುತಿದ್ದರು. ಅವನ ಕೆಲಸದ ಹೆಚ್ಚುಗಾರಿಕೆಯಿಂದ ದೇವತೆಗಳ ಸಾಲಿಗೆ ಸೇರಿಸಲಾಗಿದೆ. ತ್ವಷ್ಟನು ದೇವತೆಗಳಿಗೂ ಗುರುವಾಗಬಲ್ಲನೆಂದು ಅವರು (ವೇದಕಾಲೀನ ಜನ) ತಿಳಿದಿದ್ದರು. ವಿಶ್ವಕರ್ಮನನ್ನು ತ್ವಷ್ಟ ಎಂದು ಕರೆಯುತ್ತಿದ್ದರು" (ಭಾರತೀಯ ತತ್ವಶಾಸ್ತ್ರ ಮೂಲಾಂಶಗಳು : ಸರ್ ದೇಸಾಯಿ – ಪುಟ–೭)

ಈ ತ್ವಷ್ಟಾ ಎಂಬ ಪದವನ್ನು ಬಡಗಿಯರಿಗೆ ಮಾತ್ರ ಸಂಬೋಧಿಸುವುದು ತಿಳಿದು ಬರುತ್ತದೆ. ಇನ್ನೊಂದು ಅರ್ಥದಲ್ಲಿ ತ್ವಷ್ಟ ಎಂಬುದನ್ನು ವಿಶ್ವಕರ್ಮ ಎಂಬುದಾಗಿಯೂ ತಿಳಿಯುತ್ತದೆ.

ವಿದ್ವಾಂಸರ ಈ ಮಾತುಗಳು ವೇದಕಾಲದಲ್ಲಿ ಇದ್ದ ಪಾಂಚಾಳರು, ವಿಶ್ವಕರ್ಮರು, ತ್ವಷ್ಟ ಮೊದಲಾದ ಶ್ರಮಜೀವಿಗಳನ್ನು, ಅವರ ಪ್ರಾಮುಖ್ಯತೆಯನ್ನು ಅವರಿಗೆ ಆಗ ಇದ್ದ ಗೌರವದ ಸ್ಥಾನಮಾನವನ್ನು ತಿಳಿಸುತ್ತದೆ. ರಥ ಪರಿಕರಾಧಿ ವಸ್ತುಗಳನ್ನು ತಯಾರಿಸುವ ಶ್ರಮ ಜೀವಿಗಳಾದ ಇವರು ಮಂತ್ರ ರಚನೆ ಮಾಡುವ ಬುದ್ಧಿಜೀವಿಗಳು ಆಗಿದ್ದರು. ವಿಚಾರಗಳು ಕೂಡ ದುಡಿಮೆಯಿಂದಲೇ ಉದ್ಭವಿಸುತ್ತವೆ ಎಂದು ತಿಳಿದಿದ್ದ ವೇದಕಾಲದ ಸಮಾಜವು ಭೌದ್ಧಿಕ ಶ್ರಮ ಮತ್ತು ದೈಹಿಕ ಶ್ರಮಗಳ ನಡುವೆ ತಾರತಮ್ಯವನ್ನು ಮಾಡಿರಲಿಲ್ಲ. ಆಗಿನ ಕಾಲದಲ್ಲಿ ಸಹಜವಾಗಿಯೇ ವಿಶ್ವಕರ್ಮ ಮತ್ತು ತ್ವಷ್ಟರನ್ನು ದೇವತೆಗಳಿಗೆ ಸರಿಸಮಾನವಾಗಿ ಪರಿಗಣಿಸಲಾಗುತ್ತಿತ್ತು. ಈ ತ್ವಷ್ಟ ಎಂಬ ವೇದಕಾಲೀನ ಪರಿಕಲ್ಪನೆಯು ಅಲ್ಲಿದ್ದು ಅಲ್ಲಿಯೇ ಮಾಯವಾಗಲಿಲ್ಲ ಅದು ಪಾಂಚಾಳ ಕುಶಲಕರ್ಮಿಗಳಲ್ಲಿ ಇತಿಹಾಸದ ಉದ್ದಕ್ಕೂ ಜಾಗೃತವಾಗಿ ಉಳಿದು ಬಂದಿತು.

ಈ ವಿಚಾರಗಳಲ್ಲಿ ವೇದಗಳನ್ನು ವಿಶ್ವಕರ್ಮ ರಚಿಸಿದ ಮಾಹಿತಿಯನ್ನು ವಿದ್ವಾಂಸರು ಹೇಳಿರುವುದಕ್ಕೂ ನಮ್ಮ ಮೌಖಿಕ ಪರಂಪರೆಯ ಕತೆಯನ್ನು ತುಲನೆ ಮಾಡಿದರೆ ಎರಡಕ್ಕೂ ಹೋಲಿಕೆಯಾಗುತ್ತದೆ ಎಂದರೆ ಕತೆಗಳಿಗೂ ಮತ್ತು ದಾಖಲೆಗೂ ಎಲ್ಲೋ ಒಂದು ಕಡೆ ಒಳ ಸಂಬಂಧವು ಬೆಳೆದಿರುತ್ತದೆ ಎಂದು ತಿಳಿಯಬಹುದು.

ಇನ್ನೊಂದು ಕತೆಯನ್ನು ಇಲ್ಲಿ ಚರ್ಚಿಸಬಹುದಾದರೆ ಪಾಂಚಾಳರ ಪರಂಪರೆಯನ್ನು ತಿಳಿದುಕೊಳ್ಳಲು ಈ ಮೌಖಿಕ ಪರಂಪರೆಗಳು ಜಾನಪದ ದೃಷ್ಟಿಯಿಂದ ಅವಶ್ಯವಾಗಿ ಅಧ್ಯಯನ ಮಾಡುವಾಗ ಇತಿಹಾಸದ ಜೊತೆಗೆ ಮೌಖಿಕ ಕತೆಗಳು ಪ್ರಾಮುಖ್ಯತೆಯನ್ನು ಪಡೆಯುವಲ್ಲಿ ಯಶಸ್ವಿಯಾಗುವುದರಲ್ಲಿ ಅನುಮಾನವಿಲ್ಲ. ಸಾಮಾನ್ಯವಾಗಿ ದಾಖಲೆಗಳು ದೊರೆಯದಿದ್ದಾಗ ನಾವು ಮೊರೆಹೋಗುವುದು ಕತೆ, ಪುರಾಣ ಸಂಪ್ರದಾಯಗಳಿಗೆ ಅವು ಊರುಗೋಲಾಗುತ್ತವೆ. ಇಲ್ಲಿನ ಕಥೆಯು ವಿಶ್ವಕರ್ಮನಿಂದ ಪಾಂಚಾಳರು ಹೇಗೆ ಜನಿಸಿದರು ಎಂಬುದನ್ನು ತಿಳಿಸುತ್ತದೆ.

ಬ್ರಹ್ಮನ ಮಕ್ಕಳು ಐದು ಜನ ಅವರು ಬ್ರಹ್ಮನ ತಲೆಯಿಂದ ಹುಟ್ಟಿದವರು. ಮೊದಲಿಗೆ ಒಂದೇ ಮುಖವಿದ್ದ ಬ್ರಹ್ಮ ವಿಶ್ವಕಾರ್ಯಕ್ಕೆ ಐದುಜನ ಬೇಕೆಂದು ಆಲೋಚಿಸಿದಾಗ, ಬ್ರಹ್ಮನು ಪೂರ್ವದಿಕ್ಕಿನ ಕಡೆ ನೋಡಿದ ಒಂದು ತಲೆಯಾಯಿತು, ಪಶ್ಚಿಮ ದಿಕ್ಕಿಗೆ ನೋಡಿದ ಆ ದಿಕ್ಕಿಗೂ ಒಂದು ಮುಖ ಹುಟ್ಟಿತು, ದಕ್ಷಿಣೋತ್ತರವಾಗಿ ನೋಡಿದ, ಆ ದಿಕ್ಕಿಗೂ ಮುಖಗಳು ಜನಿಸಿದವು, ಆ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಹುಟ್ಟಿದವು. ಮೊದಲಿನ ಮುಖವು ಸೇರಿ ಐದು ಮುಖವಾದವು. ಮೊದಲಿನ ಮುಖ ಹೇಗೆ ಕಾಣುವುದಿಲ್ಲವೋ ಆ ಮುಖವೇ 'ಪ್ರಣಮವೇದ' ಎಂದು ಕರೆದರು. ಈ ಪಂಚ ವೇದಗಳ ಪಂಚಬ್ರಹ್ಮರಿಂದ ಮನು, ಮಯ, ತ್ವಷ್ಟ, ಶಿಲ್ಪಿ, ವಿಶ್ವಜ್ಞರು ಜನಿಸಿದರು. ಇವರಿಂದ ಈ ಕಮ್ಮಾರ, ಬಡಗಿ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗರು ಜನಿಸಿದರೆಂದು, ಆ ಬ್ರಹ್ಮನೇ ವಿಶ್ವಕರ್ಮ ಎಂದು ತಿಳಿದು ಬರುತ್ತದೆ. ಹಗರಿಬೊಮ್ಮನಹಳ್ಳಿ (ತಾ) ಬ್ಯಾಲುಹುಣಿಸಿ 'ಹೇಮಣ್ಣ ಬಡಿಗೇರ' ರವರು ಹೇಳಿದ್ದಾರೆ. ಈ ಎಲ್ಲಾ ಕತೆಗಳಲ್ಲಿ ಪಾಂಚಾಳರ ಪರಂಪರೆಯ ಕಡೆಗೆ ಗಮನಹರಿಸಿದಾಗ ಎಲ್ಲವೂ 'ವಿಶ್ವಕರ್ಮ' ಸೃಷ್ಟಿಯಿಂದಲೇ ಎಂಬುದು ಬಹುತೇಕವಾಗಿ ತಿಳಿದು ಬರುತ್ತದೆ. ಜಗತ್ತಿನ ಸೃಷ್ಟಿಕರ್ತನಾದ ಅವನಿಂದಲೇ ಪಾಂಚಾಳರು ಜನಿಸಿದರು.

ಮತ್ತು ದೈವದತ್ತವಾಗಿ ತಮ್ಮ ಕಸಬುಗಳನ್ನು ಅವಶ್ಯಕತೆಗೆ ತಕ್ಕಂತೆ ತಯಾರಿಸುವುದರ ಮೂಲಕ ಎಲ್ಲಾ ರಂಗಗಳಲ್ಲಿ ಇವರು ತಮ್ಮ ಕೌಶಲ್ಯವನ್ನು ಮುಂದುವರಿಸಿಕೊಂಡು ಬಂದರು ಎಂದು ತಿಳಿದುಬರುತ್ತದೆ.

"ಆದಿಯಿಂದಲೂ ಈ ವಿಶ್ವಕರ್ಮನ ವಂಶಸ್ಥರಾದ ಪಾಂಚಾಳರು ಮ್ಹಾಂದೆ(ಮಾಂತೆ) ಎಂಬ ಪಟ್ಟಣದಲ್ಲಿ ಸೂರ್ಯಕಾಂತ, ಚಂದ್ರಕಾಂತ, ಆಯಸ್ಕಾಂತಗಳೆಂಬ ಶಿಲೆಗಳಿಂದ ಅತ್ಯಾಶ್ಚರ್ಯಕರವಾಗಿ ತೋರುವಂತ ಕೋಟೆಯನ್ನು ನಿರ್ಮಿಸಿಕೊಂಡು, ಅದರಲ್ಲಿ ಅನೇಕ ಶಿಲ್ಪಕಲಾ ಚಾತುರ್ಯಗಳಿಂದೊಡಗೂಡಿದ ದೇವಾಲಯಗಳೂ, ಮನೆಗಳೂ, ಅಂಗಡಿಗಳೂ, ಪೇಟೆಗಳನ್ನು ನಿರ್ಮಿಸಿಕೊಂಡು ಪ್ರತಿನಿತ್ಯ ಬೇಕಾಗುವ ಸರ್ವಸಾಮಾಗ್ರಿಗಳೂ, ಅಲ್ಲಿಯೇ ದೊರಕುವಂತೆ ಏರ್ಪಡಿಸಿಕೊಂಡು, ಮಾನವ ಕುಲಕ್ಕೆ ಆಶ್ಚರ್ಯವಾಗುವಂತೆ ವಾಸಿಸುತ್ತಿದ್ದರು. ಮತ್ತು ಐವತ್ತಾರು ದೇಶದ ರಾಜರುಗಳಲ್ಲಿ ವಿಶಿಷ್ಟ ಸ್ಥಾನವಾದ "ವಿಶ್ವಕರ್ಮ ಆಚಾರ್ಯ' ಪೀಠವನ್ನು ಅಲಂಕರಿಸಿ, ಮನು ನೀತಿಯ ಪ್ರಕಾರ ಧರ್ಮವನ್ನು ಬೋಧಿಸುವುದು, ದಾನ, ಧರ್ಮ, ಪರೋಪಕಾರ, ಶಾಸ್ತ್ರ, ರಾಜ್ಯಭಾರಕ್ರಮ, ಭೂತ ಭವಿಷತ್ ವರ್ತಮಾನ ಕಾಲಗಳ ಆಗುಹೋಗುಗಳು ಮೊದಲಾದ ಸಂಗತಿಗಳನ್ನು ರಾಜರಿಗೆ ತಿಳಿಸುತ್ತಾ, ಆಯಾ ರಾಜ್ಯದ ರಾಜರುಗಳಿಂದ ಮಾನ, ಸನ್ಮಾನ, ದಾನ, ವಗ್ಯರೆ, ರಾಜಧಾನಿಯ ಸಮಸ್ತರಿಗೂ ಪಂಚಕರ್ಮಗಳಿಂದ ಬೇಕಾದ ವಸ್ತುಗಳನ್ನು ತಯಾರಿಸಿ ಪಟ್ಟಣಶೆಟ್ಟಿಯ ಮೂಲಕ ಒದಗಿಸುತ್ತಿದ್ದರು.

ಕಾಲಕ್ರಮೇಣ ವ್ಯಾಸನೆಂಬುವವನು (ಈತನು ರಾಮಾಯಣದ ಕವಿ ಅಲ್ಲ) 'ಧರಣಿ' ಎಂಬ ರಾಜನಲ್ಲಿ ಓಲಗಕ್ಕೆ ಬಂದು, ಪಾಂಚಾಳರು ಪಂಚ ಕಸಬುಗಳನ್ನು ಮಾಡುತ್ತಿದ್ದ ತೆರಿಗೆಯನ್ನು ಕೊಡುತ್ತಿಲ್ಲ, ಕಾರಣ ನೀವು ಅವರಿಂದ ತೆರಿಗೆ ವಸೂಲಿ ಮಾಡಲೇಬೇಕು ಎಂದು ಪಿತೂರಿ ಮಾಡಿದನು, ಆಗ ಧರಣಿ ರಾಜನು ಮಸ್ತಾಚಾರಿ, ಕೃಷ್ಣಾಚಾರಿ ಮೊದಲಾದವರನ್ನು ಪಟ್ಟಣದ ಶೆಟ್ಟಿಯನ್ನು ಬರಮಾಡಿಕೊಂಡು ತೆರಿಗೆಯನ್ನು ಕೇಳಲು ತಾವು ಯಾರಿಗೂ ತೆರಿಗೆಯನ್ನು ಕೊಡಬೇಕಾಗಿದ್ದಿಲ್ಲ. ನಾವು ನಮ್ಮ ಪಂಚಕರ್ಮದಿಂದ ಪ್ರಪಂಚಕ್ಕೆ ಉಪಕಾರ ಮಾಡುತ್ತಿದ್ದು, ನಾವು ತೆರಿಗೆಕೊಡಲು ಬಾಧ್ಯಸ್ಥರಲ್ಲ ಎನ್ನಲು, ವ್ಯಾಸನ ದುರ್ಭೋಧನೆಯಿಂದ ರಾಜನು ಕೋಪಗೊಂಡು ಅಲ್ಲಿಗೆ ಬಂದು ಆಚಾರಿಯರನ್ನೆಲ್ಲ ಸೆರೆಮನೆಯಲ್ಲಿಡಿಸಿದನು. ಹಾಗೂ ಆಚಾರ್ಯ ಪೀಠವನ್ನು ವ್ಯಾಸಗಿತ್ತನು. ಈ ವರ್ತಮಾನವನ್ನು ದೇಶಾಧಿಪತಿಯಾದ ಪೆಂತಣ್ಣ ರಾಜನು ಕೇಳಿ ಕ್ರೋಧವಿಷ್ಟನಾಗಿ ಸೈನ್ಯ ಸಹಿತವಾಗಿ ಬಂದು ಧರಣಿ ರಾಜನು ಅವಮಾನಗೊಂಡು ಸಿಟ್ಟಿನಿಂದ ಆಚಾರ್ಯರನ್ನು ಬಂಧನದಲ್ಲಿಟ್ಟ ಸ್ಥಳಕ್ಕೆ ಬಂದು ನೀವುಗಳೆಲ್ಲರೂ ಕಂದಾಯ ಕೊಡಲೊಪ್ಪದಿದ್ದರೆ ನಿಮ್ಮ ಯಜಮಾನನ ಶಿರಸ್ಸನ್ನು ಕತ್ತರಿಸುತ್ತೇನೆಂದು ಬೆದರಿಸಲು, ಆಚಾರ್ಯರೆಲ್ಲರೂ ನಾವು ಯಾವ ರಾಜನಿಗೂ ಕಂದಾಯ ಕೊಡುವುದಿಲ್ಲ. ಯಾವ ರಾಜರಿಗೂ ತಮ್ಮಿಂದ ತೆರಿಗೆ ವಸೂಲಿ ಮಾಡುವ ಹಕ್ಕಿಲ್ಲ. ಇದು ಮನು ನೀತಿಗೆ ವಿರೋಧವೇ ಸರಿ. ಮನು ನೀತಿಗೆ ವಿರೋಧವಾಗಿ ನಾವು ನಡೆಯುವವರಲ್ಲ. ನೀತಿಬಾಹಿರವಾಗಿ ನಮ್ಮ ಯಜಮಾನನ ಶಿರಚ್ಛೇದನ ಮಾಡಿದರೆ ನಿನ್ನ ಶಿರಸ್ಸೆ ನಾಶವಾಗುವುದು ತಿಳಿದಿರಲಿ ಎನ್ನಲು, ವಿವೇಕ ಶೂನ್ಯನಾದ ಧರಣಿರಾಜನು ಕ್ರೋಧೋನ್ಮತ್ತನಾಗಿ ಆಚಾರ್ಯರ ಮುಖಂಡನ ರುಂಡವನ್ನು ಕತ್ತರಿಸಲು ಆ ರುಂಡವು ಕಾಮಾಕ್ಷಿಯ ಪಾದದಲ್ಲಿ ಬಿದ್ದು ಹೊರಳಲು ಶ್ರೀ ಕಾಳಿಕಾಂಬೆಯೇ ಆದ ಕಾಮಾಕ್ಷಿಯು ರೌದ್ರ ರೂಪದಿಂದ ಶರೀರವನ್ನು ತುಂಡು ತುಂಡಾಗಿ ಕತ್ತರಿಸಿ, ನರದಿಂದ ಮಾಡಿದ ಹಗ್ಗದಲ್ಲಿ ಆ ತುಂಡುಗಳನ್ನು ಕಟ್ಟಿ ಸಾಕ್ಷಿರೂಪನಾಗಿದ್ದ ಪಟ್ಟಣಶೆಟ್ಟಿಯು ಕೊರಳಿಗೆ ಹಾಕಿ ಚರ್ಮವನ್ನು ಮೈಮೇಲೆ ಹೊದಿಸಿದಳು, ಮತ್ತು ವಿಶ್ವಕರ್ಮ ಆಚಾರ್ಯರ ಮುಖಂಡನ ತಲೆಯನ್ನು ಮುಂಡಕ್ಕೆ ಜೋಡಿಸಿ ಪ್ರಾಣವನ್ನು ಕೊಟ್ಟು ಆಶೀರ್ವಾದ ಮಾಡಿ ಈ ರೀತಿ ಅಪ್ಪಣೆಕೊಡಿಸಿದಳು. "ವಿಶ್ವಕರ್ಮ ವಂಶಸ್ಥರಾದ ನೀವು ಇನ್ನು ಮುಂದೆ ನನ್ನನ್ನು ಪೂಜಿಸಿ ನಂಬಿಕೆಯಿಂದ ಧ್ಯಾನ ಮಾಡಿದರೆ ನಾನು ಪ್ರತ್ಯಕ್ಷವಾಗಿ ಬಂದು ರಕ್ಷಣೆ ಮಾಡುವೆನು. ನಿಮಗೆ ಯಾರ ಭಯವೂಬೇಡ ಯಾವ ಸಮಯದಲ್ಲಿಯೇ ಆಗಲಿ ನಿಮಗೆ ಆಪತ್ತು ಬಂದಲ್ಲಿ ನನ್ನನ್ನು ಅನನ್ಯ ಭಕ್ತಿಯಿಂದ ಸ್ತುತಿಸಿದರೆ ಕೂಡಲೇ ಬಂದು ನಿಮ್ಮ ಕಷ್ಟಗಳನ್ನು ಪರಿಹರಿಸುವೆನು. ಆದರೆ ನೀತಿ ವಿರುದ್ಧವಾಗಿ ವರ್ತಿಸಿದರೆ ಮಾತ್ರ ಕರುಣೆ ತೋರದೆ ಶಿಕ್ಷಿಸುವೆನು. ಕಾರಣ ನೀವುಗಳೆಲ್ಲರೂ ನೀತಿವಂತರೂ ಸದಾಚಾರಿಗಳೂ ಆಗಿ ಬಾಳಿರಿ ಎಂದು ಆಶೀರ್ವಾದ ಮಾಡಿ ಮಾಯವಾದಳು.

ಈ ರೀತಿಯಾಗಿ ಪಾಂಚಾಳರ ಹುಟ್ಟು ಬೆಳವಣಿಗೆಗಳು ಕಂಡುಬರುತ್ತವೆಯಾದರೂ ವಿಶ್ವಕರ್ಮನಿಂದ ಜನಿಸಿದವರೆಂದು ಮಾತ್ರ ಎಲ್ಲರೂ ಹೇಳುತ್ತಾರೆ. ಪಾಂಚಾಳ ಜೀವನಕ್ರಮ ಮತ್ತು ತಾಂತ್ರಿಕತೆಯನ್ನು ತಿಳಿಸುವುದಾದರೂ ತಮ್ಮ ತಮ್ಮಲ್ಲಿ ಏನೋ ಒಂದು ತರಹದ ವೈರಿಗಳಂತೆ ಕಂಡುಬರುತ್ತಾರೆ. ಈಗಲೂ ಕೂಡ ಪಾಂಚಾಳರಲ್ಲಿ ಒಳಪಂಗಡಗಳಿಲ್ಲವೂ ಒಂದೇ ಆದರೂ 'ತಾವೆಚ್ಚು, ತಾವೆಚ್ಚು ನಮ್ಮ ಕಾಲಿಗೆ ಬೀಳ್ರಿ ನಾವು ಸ್ವಾಮಿಗಳ ಸಮಾನ' ಎಂದು ಕಮ್ಮಾರರು ಹೇಳುತ್ತಿರುತ್ತಾರೆ. ಪಾಂಚಾಳರೆಲ್ಲರೂ ಒಂದು ಎಂದ ಮೇಲೆ ಈ ಮೇಲಿರುವ ಎಲ್ಲಿಂದ ಬಂದ ಎನ್ನುವುದನ್ನು ಕೇಳಿದರೆ ಈ ಮಾನಯ್ಯನಿಂದ ಈ ಕಮ್ಮಾರ ಜನಿಸಿದ ಅವನೇ ಪಾಂಚಾಳರಿಗೆ ಶ್ರೇಷ್ಠ ಎಂದು ಹೇಳುತ್ತಾರೆ.

ಹಿಂದೆ ಹೇಳಿದ ಕತೆಯಂತೆಯೇ ಹೊಂದಿಕೊಳ್ಳುವ ಇನ್ನೊಂದು ಕತೆಯು ಸಿಗುತ್ತದೆ. ಆ ಕತೆಗಳ ಸಾರಂಶ ಒಂದೇ ಆದರೂ ಅದರಲ್ಲಿ ಬರುವ ಪಾತ್ರಗಳು ಭಿನ್ನವಾಗಿವೆ ಒಬ್ಬರು ಇನ್ನೊಬ್ಬರ ಬಾಯಿಂದ ಬರುವಾಗ ಬದಲಾವಣೆ ಹೊಂದುತ್ತಾ ಬಂದಿವೆ ಎಂದು ತಿಳಿದುಕೊಳ್ಳಲು ಸಹಾಯಕವಾಗಿದೆ.

ಒಂದನೊಂದು ಕಾಲದಲ್ಲಿ ಒಬ್ಬ ಯುವತಿಗೆ ನದಿಯಲ್ಲಿ ಸ್ನಾನ ಮಾಡುವ ಆಸೆಯಾಯಿತು ಒಬ್ಬಳೇ ನದಿಯ ದಂಡೆಯಲ್ಲಿ ಕುಳಿತಳು. ಎರಡು ಪಕ್ಷಿಗಳು ಪರಸ್ಪರ ಪ್ರೀತಿಯಿಂದ ರತಿಕ್ರೀಡೆಯಾಡುತ್ತಿದ್ದನ್ನು ನೋಡಿದ ಯುವತಿಯ ಮನಸ್ಸು ಚಂಚಲಗೊಂಡಿತು. ಆ ಚಂಚಲವು ಕಾಮದ ಬಯಕೆಯನ್ನು ಬಯಸುತ್ತಿದ್ದಳು. ತನ್ನ ಕಾಮದಾಹ ತೀರಿಸಿಕೊಳ್ಳಲು ದೇವರ ಮೊರೆ ಹೋದಳು. ದೇವರು ಮನುಷ್ಯನ ರೂಪತಾಳಿ ಆಕೆಯ ಬಯಕೆ ತೀರಿಸಿ ಹೋದ ಅದರಿಂದ ತೃಪ್ತಿ ಹೊಂದಿದ ಆಕೆಯ ಹೊಟ್ಟೆಯಲ್ಲಿ ಐದು ಮಕ್ಕಳು ಹುಟ್ಟದವು. ಮದುವೆಯಾಗದ ಆಕೆಯು ಆ ಮಕ್ಕಳನ್ನು ಆ ನದಿಯ ದಡದಲ್ಲಿ ಬಿಟ್ಟುಹೋದಳು. ಮೀನುಗಾರರು ಆ ಮಕ್ಕಳನ್ನು ನೋಡಿ ರಾಜನ ಹತ್ತಿರ ತೆಗೆದುಕೊಂಡು ಹೋದರು. ರಾಜನು ಜ್ಯೋತಿಷ್ಯವನ್ನು ಕೇಳಿದ, ಜೋಯಿಸರು ಇವು ದೇವರಿಂದ ಹುಟ್ಟದ ಮಕ್ಕಳು ಇವುಗಳಿಂದ ನಮ್ಮ ಸಾಮ್ರಜ್ಯ ಲೋಕಕ್ಕೆಲ್ಲ ಬೆಳಗುತ್ತದೆಂದು ಭವಿಷ್ಯನುಡಿದ ಅವರನ್ನು ಪಾಂಚಾಳರು ಎಂದು ಕರೆದ. ಬರುಬರುತ್ತಾ ಈ ಪಂಚ ಜನರು ಬುದ್ಧಿವಂತಿಕೆಯಿಂದ ಕೋಟೆಯೊಂದನ್ನು ಕಟ್ಟಿಕೊಂಡು ಅದರೊಳಗೆ ಕಬ್ಬಿಣ ತಯಾರಿಕೆ–ಲೋಕಶಾಸ್ತ್ರಕ್ಕೆ ಸಂಬಂಧಿಸಿದ, ಕಾಷ್ಠಶಿಲ್ಪಿಗಳಲ್ಲಿ ತೊಡಗಿಸಿಕೊಂಡಿದ್ದರು. ಕೋಟೆಯೊಳಗೆ ಪಾಂಚಾಳರಲ್ಲದವರಾರಿಗೂ ಪ್ರವೇಶವಿರಲಿಲ್ಲ. ಕೋಟೆಯ ಹೆಬ್ಬಾಗಿಲಿಗೆ ಸ್ವಯಂಚಾಲಿತ ಕದಗಳೂ ಇದ್ದವು. ಹೆಬ್ಬಾಗಿಲಿನಲ್ಲಿ ಯಾವಾಗಲೂ ಪಾಂಚಾಳರಿಬ್ಬರು ಕಾವಲು ಕಾಯುತ್ತಿದ್ದರು. ಆ ಕೋಟೆಯ ಹೆಬ್ಬಾಗಿಲುಗಳು ಸೂರ್ಯನ ಹುಟ್ಟಿನೊಂದಿಗೆ ತನ್ನಿಂದ ತಾನೆ ಮುಚ್ಚಿಕೊಳ್ಳುತ್ತಿದ್ದವು. ಮತ್ತು ರಾತ್ರಿ ತನ್ನಿಂದ ತಾನೆ ತೆರೆದುಕೊಳ್ಳುತ್ತಿದ್ದವು. ಕೋಟೆಯೊಳಗೆ ತಯಾರಾದ ಯುದ್ಧೋಪಕರಣ ಮತ್ತು ಇತರ ಉಪಕರಣಗಳನ್ನು ಪರದೇಶಕ್ಕೆ ಕಳಿಸುತ್ತಿದ್ದರು. ಕೋಟೆಯೊಳಗಿನ ಗುಟ್ಟನ್ನು ತಿಳಿಯಬೇಕೆಂದು ಒಬ್ಬ ವ್ಯಕ್ತಿಯು ಸತತ ಪ್ರಯತ್ನವನ್ನು ಮಾಡುತ್ತಿದ್ದ. ಆದರೆ ಸ್ವಯಂಚಾಲಿತ ಬಾಗಿಲು ಮತ್ತು ಬಿಗಿಯಾದ ಕಾವಲನ್ನು ಹೊಂದದ್ದ ಕೋಟೆ ತನ್ನೊಳಗಿನ ಗುಟ್ಟು ಹೊರಗೆ ಬಿಟ್ಟುಕೊಡುತ್ತಿರಲಿಲ್ಲ. ಇದರಿಂದ ಕುಪಿತನಾದ ವ್ಯಕ್ತಿಯು ಅದರ ಗುಟ್ಟನ್ನು ತಿಳಿಯಲು ತನ್ನ ಸೌಂದರ್ಯವತಿಯಾದ ಮಗಳನ್ನು ಬಿಟ್ಟನು. ಆಕೆ ಕಾವಲುಗಾರರನ್ನು ಮೋಹಿಸಿದಂತೆ ನಾಟಕವಾಡಿದಳು. ಅವರೊಂದಿಗೆ ಹಾಸಿಗೆಯಲ್ಲಿ ಮಲಗತೊಡಗಿದಳು. ಕಾವಲುಕಾಯುವವರ ದೌರ್ಬಲ್ಯಗಳನ್ನು ತಿಳಿದುಕೊಂಡು ಕೋಟೆಯನ್ನು ಬೇಧಿಸುವ ಗುಟ್ಟನ್ನು ಅರಿತುಕೊಂಡು ತಂದೆಗೆ ತಿಳಿಸಿದಳು. ಆಕೆ ತಿಳಿಸಿದಂತೆ ಆಕೆಯ ತಂದೆ ಒಂದು ದಿನ ಕೋಟೆಯ ಸುತ್ತ ದರ್ಬೆಯ ಹುಲ್ಲನ್ನು ಹಾಕಿ ಬೆಂಕಿ ಹಚ್ಚಿದನು. ಈ ವಿಷಯ ತಿಳಿದು ಉರಿಯುತ್ತಿರುವ ಕೋಟೆಯೊಳಗಿನ ಎಲ್ಲಾ ಪರಿಕರಗಳನ್ನು ತೆಗೆದುಕೊಂಡು ಸುರಂಗದ ಮೂಲಕ ಹೊರಬಂದಾಗ ದಿಕ್ಕಾಪಾಲಾದರು. ದಿಕ್ಕಪಾಲರಾಗಿ ಬೇರೆಬೇರೆ ಊರಿನಲ್ಲಿ ವಾಸವಾಗಿದ್ದಾರೆಂದು 'ಅರಸಿಕೆರೆಯ ಗೌರಮ್ಮ'ನವರು ಈ ಕತೆಯನ್ನು ಅಸಾಯಕತೆಯಿಂದ ಹೇಳಿದ್ದಾಳೆ.

ಈ ಕತೆಯಲ್ಲಿ ಬರುವ ಸಂದರ್ಭವನ್ನು ನೋಡಿದರೆ ಆ ಪಾಂಚಾಳರು ದಿಕ್ಕಪಾಲರಾಗಿ 'ಊರಿಗೊಬ್ಬ ಪಾಂಚಾಳ' ಎಂಬಂತೆ ತಮ್ಮ ಕುಲ ಕಸಬುಗಳನ್ನು ಮಾಡಿಕೊಂಡು ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದ್ದಾರೆಂಬುದು

ತಿಳಿಯುತ್ತದೆ. ಹಾಗೆಯೇ ಇನ್ನೊಬ್ಬರ ಸುಖಕ್ಕೆ ಈ ಪಾಂಚಾಳರು ಬಲಿಪಶುಗಳಾಗಿ ಇವತ್ತು ತಮ್ಮ ಆಚಾರ ವಿಚಾರಗಳ ಸಂಪ್ರದಾಯದಲ್ಲಿ ಬದುಕುವ ಸ್ಥಿತಿಗೆ ಬಂದಿದ್ದಾರೆಂದು ಊಹಿಸಬಹುದು. ಒಂದು ಕಾಲದಲ್ಲಿ ರಾಜರ ಮನ್ನಣೆ ಪಡೆದ ಈ ಪಾಂಚಾಳರು ಇಂದು ತಮ್ಮ ಪರಂಪರೆಯ ಮರೆಗೆ ಸರಿದು ಇತಿಹಾಸವಾಗುತ್ತ ಸಾಗಿರುವುದು ದುರಂತವೇ ಸರಿ.

ಇನ್ನು ಮುಖ್ಯವಾಗಿ ಪಾಂಚಾಳರ ಪರಂಪರೆಗೆ ಬಹುಮುಖ್ಯವಾಗಿ ಜನಪದ ಕಾವ್ಯಗಳಲ್ಲಿ ಇವರ ಬಗ್ಗೆ ತಿಳಿದುಕೊಳ್ಳಬಹುದಾದರೆ ಅದು ಮಂಟೇಸ್ವಾಮಿ ಕಾವ್ಯದಲ್ಲಿ ಮಾತ್ರ. ಈ ಕಾವ್ಯದಲ್ಲಿ ಸಿದ್ದಪ್ಪಾಜಿ ವಚನ ಎಂಬ ಐತಿಹ್ಯವು ಹೆಚ್ಚಿನ ಬೆಳಕು ಚಲ್ಲುವಲ್ಲಿ ಸಹಾಯಕವಾಗಿದೆ. ಮಂಟೇಸ್ವಾಮಿ ಕಾವ್ಯದಲ್ಲಿ ಕಬ್ಬಿಣ ತಯಾರಿಸುವವರ ಚಿತ್ರಣ ದೊರೆಯುತ್ತದೆ. ಇಡಿ ಕಾವ್ಯದ ಮುಖ್ಯಭಾಗವಾಗಿ ಸಿದ್ದಪ್ಪಾಜಿ ಕಾಣಿಸಿಕೊಳ್ಳುತ್ತಾನೆ. ಈತನ ಗುರು ಸಿದ್ದಪ್ಪಾಜಿಯನ್ನು ಕಬ್ಬಿಣದ ಭಿಕ್ಷೆಗೆ ಒತ್ತಾಯ ಪೂರ್ವಕವಾಗಿ ಕಳಿಸುತ್ತಾನೆ. ಹಲಗೂರಿಗೆ ಕಬ್ಬಿಣದ ಭಿಕ್ಷೆಗೆ ಸಿದ್ದಪ್ಪಾಜಿ ಹೋಗುವಾಗ ಮಾರುವೇಷದಲ್ಲಿ ಹೋಗುತ್ತಾನೆ. ಭಿಕ್ಷುಕನಾಗಿ ಹಲಗೂರನ್ನು ಪ್ರವೇಶಸಿ ಕಮ್ಮಾರರ ಮುಂದೆ ನಿಂತು ಕಬ್ಬಿಣದ ಭಿಕ್ಷೆ ಬೇಡುತ್ತಾನೆ. ಬಂಗಾರ ಬೇಕಾದರೂ ಕೊಟ್ಟೇವು ಕಬ್ಬಿಣದ ಭಿಕ್ಷೆ ಮಾತ್ರ ಕೊಡಲಾರೆವು. ಕಬ್ಬಿಣ ನಮಗೆ ಕಾಳಿ ಎಂದು ಕಮ್ಮಾರರು ತಿಳಿಸುತ್ತಾರೆ. ಹೀಗೆ ಅವರು ತಮ್ಮ ವೃತ್ತಿಯನ್ನು ಮತ್ತು ಕಚ್ಚಾವಸ್ತುವನ್ನು ಕಾಳಿಯ ರೂಪದಲ್ಲಿ ಕಾಣುತ್ತಾರೆ. ಹಾಗೆಯೇ ಮುಂದುವರೆದು ಹೇಳುವ ಈ ಕಾವ್ಯದಲ್ಲಿ ಸಿದ್ದಾಪ್ಪಾಜಿಯನ್ನು ಅವರ ಗುರುಗಳು ಹಲಗೂರು ಏಳು ಬೀದಿಯಲ್ಲಿ ವಾಸವಾಗಿರುವ ಚಿನ್ನಬೆಳ್ಳಿ ಮಾರುವರು ಒಂದೊಂದು ಬೀದಿಗೆ ಒಬ್ಬೊಬ್ಬ ಪಾಳೆಗಾರರು ಇದ್ದಾರೆ. ಅವರಲ್ಲಿಗೆ ಹೋಗಿ ಕಬ್ಬಿಣ ಭಿಕ್ಷೆ ಬೇಡು ಎಂದು ಹೇಳಿ ಕಳಿಸುವಾಗ

"ನಿನ್ನ ಜಾತಿಯವರು ಕಂದ
ನಿನ್ನ ಕುಲದವರಪ್ಪ
ಏಳೇಳು ಬೀದಿಗೆ
ಒಬ್ಬೊಬ್ಬ ಪಾಳೆಗಾರ
ಚಿನ್ನ ಅನ್ನಾದುಕಂದಾ
ಹಲಗೂರು ಬೀದಿಯೊಳಗಾ
ಗುಡ್ಡ ಹಾಕ್ಕುಂಡು ಬಿದ್ದಾದ
ಬಂಗಾರ ಕೇಳಿದರ ಕಂದಾ
ಬಂಡಿ ಕಟ್ಟಿ ಹೊಡ್ಸತಾರೆ
ಮುತ್ತರತ್ನ ಕೇಳಿದ್ರ
ಜೋಳ್ಗ ತುಂಬಾ ತುಂಬ್ಸತಾರ
ಜೋಬಗೂ ಕಾಸ ಕೊಡ್ತಿರಾ
ಕಬ್ಬಿಣಾ ಅನ್ನೊದು
ಹಲಗೂರಿನೊಳಗಾ
ಕಿಟ್ಟಕ್ಕಂಡು ಬಿದ್ದಾದ
ಕರಿಕಬ್ಬಿಣ ಕೇಳಿದ್ರಾ
ಕೈಯಾರ ಕೊಡಲ್ಲಾ
(ಧರೆಗೆದೊಡ್ಡವರು- ರಾ. ವೆಂಕಟೇಶ ಇಂದ್ವಾಡಿ-ಪುಟ ೨೨೫)

ಕೇಳಿದ್ದೆಲ್ಲಾ ಕೊಡುವ ಹಲಗೂರಿನ ಪಾಂಚಾಳರು ತಮ್ಮ ಕಾಯಕದ ವಸ್ತುವನ್ನು (ಕಬ್ಬಿಣ) ಭಿಕ್ಷೆ ಕೊಡುವುದಿಲ್ಲವೆಂಬುದು ತಮ್ಮ ಕಾಯಕ ಮತ್ತು ಇದರಿಂದ ಮಾಡುವ ವಸ್ತುವಿನ ಬಗ್ಗೆ ಎಷ್ಟು ದೈವದ ಭಾವನೆ

ಇರಬಹುದೆಂಬುದು ತಿಳಿದು ಬರುತ್ತದೆ. ಬಂಗಾರ ಬೆಳ್ಳಿ ಕೊಡುತ್ತಾರೆ ಕಬ್ಬಿಣ ಮಾತ್ರ ಕೊಡುವುದಿಲ್ಲ. ಎಂಬುದಾಗಿ ಧರೆಗೆ ದೊಡ್ಡವರು ನೊಂದು ಸಿದ್ದಾಪ್ಪಾಜಿಯನ್ನು ಭಿಕ್ಷೆಗೆ ಪ್ರೇರೆಪಿಸುವುದನ್ನು ಕಾಣಬಹುದು.

ಅದಕ್ಕೆ ಪ್ರತ್ಯುತ್ತರವಾಗಿ ಸಿದ್ದಾಪ್ಪಾಜಿ ಹೇಳುತ್ತಾನೆ

"ಅಪ್ಪಲ್ಲಾಡಿದ ಮಾತಾ
ಸಿದ್ದಾಪ್ಪಾಜಿ ಕೇಳ್ಕಂಡ
ಮೊದಲೇ ನನ್ನ ಜಾತಿ
ಅಂಕಾರದ ಜಾತಿ
ಆಚಾರಿಗಳ ಒಕ್ಕಲು
ಮರ್ಮಕಾರ ಜಾತಿ
ಬ್ರಹ್ಮ ಪಾಂಚಾಲದವರು
ನೀಡದ ಕಾಲ ಎಳೆಯವರಲ್ಲ
ಕರೆದು ಭಿಕ್ಷಾನೀಡವರಲ್ಲಾ"

(ಧರೆಗೆದೊಡ್ಡವರು –ರಾ. ವೆಂಕಟೇಶ್ ಇಂದ್ವಾಡಿ–ಪುಟ ೨೨೯) ಎಂದೂ ನೀಡದ ಕಾಲ ಎಳೆಯವರಲ್ಲಿ ಒಳ್ಳೆ ಭಿಕ್ಷೆ ಕೊಟ್ಟ ಮರ್ವಾದಿ ಕೊಡುವರಲ್ಲಾ, ಅಹಂಕಾರದ ಜಾತಿ, ಆಚಾರಗಳ ಒಕ್ಕಲು ಹೀಗೆ ಪಾಂಚಾಳರ ಸ್ವಭಾವಗಳನ್ನು, ಅವರ ಬಗುವು ಬಿಮ್ಮಾನಗಳ ಜೊತೆಗೆ ತಮ್ಮ ಕೆಲಸಕ್ಕೆ ಎಷ್ಟು ಪ್ರಾಮುಖ್ಯತೆ ನೀಡುತ್ತಾರೆಂಬುದು ತಿಳಿಯುತ್ತದೆ.

ಮುತ್ತಿನ ನೆಲಬಾಗಿಲು
ರತ್ನದ ತೊಲಗಂಬ
ಅವಳದ ಅರಗೋಡಾ
ಬೆಳ್ಳಿ ದಾರಂದಾ
ಗುರು
ಕಂಚಿನ ಕೋಮಾರಕಪ್ಪಾ
ಕಬ್ಬಿಣ ತೊಲಬೊದ್ಗ ಕಾಣೊ
ಬೆಳ್ಳಿಯ ಉರವರ
ಗಳಗಳ ಬೇಯ್ಸವರೆ
ಮೇಲಾ ದಬ್ಬಾಕಿರದೆಲ್ಲಾ
ತಾಮ್ರದ ಬಿಲ್ಲಿ ಕಂಚು
ತಾಮ್ರದ ಅಡಿಗಲ್ಲು
ಚಿನ್ನದ ಪಚ್ಚಾಕಲ್ಲು
ಎತ್ತುಕರ ಕಟ್ಟಾಕ ಗೂಟ
ಚಿನ್ನ ಬೆಳ್ಳಿ ಗೂಟವಪ್ಪಾ

(ಧರಗೆ ದೂಡ್ಡವರು –ರಾ. ವೆಂಕಟೇಶ್ ಇಂದ್ವಾಡಿ–ಪುಟ ೨೩೨) ಎಂದು ಸಿದ್ದಾಪ್ಪಾಜಿ ಪ್ರಚೋದಿಸುವಾಗ ಈ ಮೇಲಿನ ವರ್ಣನೆ ಬರುತ್ತದೆ. ಪಾಂಚಾಳರು ಎಷ್ಟೇ ಶ್ರೀಮಂತರಿದ್ದರೂ ಬಂಗಾರ, ಬೆಳ್ಳಿ ಏನೂ ಬೇಡ ಅವರಿಂದ ಕಬ್ಬಿಣ ಭಿಕ್ಷೆ ಒಂದೇ ಬೇಕು ಪಡೆದುಕೊಳ್ಳಲಿಕ್ಕೆ ಏನೆಲ್ಲಾ ಸಾಹಸ ಮಾಡುತ್ತಾರೆ.

ನನ್ನ ಜಾತಿಯವರ ಬಾಳಾಟವ
ಹೇಳುತಿನಿ ಕೇಳಿರಪ್ಪಾ
ಬಟ್ಟೋಜಿ ಮನಮೇಲಾ
ಬೆಳ್ಳಿ ಏಳು ಕಳಸ
ಮುತ್ತೋಜಿ ಮನ ಮೇಲಾ
ಮುತ್ತಿನ ಏಳು ಕಳಸ
ರತ್ನೋಜಿ ಮನಾ ಮೇಲಾ
ರತ್ನದೇಳು ಕಳಸ
ಅವಳೋಜಿ ಮನ ಮೇಲಾ
ಅವಳದೇಳು ಕಳಸ
ಸಿದ್ದಾಚಾರಿಯ ಮನಯ ಮೇಲೆ
ಇದ್ದೇ ಚಿನ್ನದ ಕಳಸ

ಈ ಪಾಂಚಾಳರು ಏಳು ಮಂದಿಯ ಮನೆಯ ಮೇಲೆ ಬೆಲೆ ಬಾಳುವ ವೈಭವದ ಜೀವನ ಇದ್ದರೂ ಅವರು ಭಿಕ್ಷೆ ನೀಡಲಾರರೇನೋ ಎಂಬ ಸಂದೇಹ ಸಿದ್ದಾಪ್ಪಾಜಿಯ ಮನದಲ್ಲಿ ಮೂಡಿತ್ತು. ಮಗ್ಗಮರಳ್ಳಿ, ಹೆಗ್ಗಡದೇವನ ಕೋಟೆ ಪಟ್ಟಣ, ಪಾಲಳ್ಳಿ ಸಂತಾ, ಸರಗೂರು ಅಂಕಾಪುರದ ಗ್ರಾಮ, ಹಂಪಾಪುರದ ಗ್ರಾಮ, ಎಡತೊರೆ ಗ್ರಾಮ, ಚೆಂದಾಗಾಲತೋಟ, ಚಂಚನ ಕಟ್ಟೆ ತಾಲೂಕು ಮೈಸೂರು ದಿಸರಕಟ್ಟೆ ಜನನ್ನೆಲ್ಲಾ ನಿನ್ನ ಒಕ್ಕಲು ಮಾಡಬಲ್ಲೆ ಅದರೆ ಈ ಪಾಂಚಾಳರನ್ನು ಮಾತ್ರ ಸಾಧ್ಯವಾಗಲ್ಲ ಎಂಬ ಮಾತನ್ನು ಹೇಳುತ್ತಾನೆ.

ಹಲಗೂರು ಅಂದರೆ ಎದಾಗರ್ಭ ನಡುತದ ಬುದ್ಧಿ ಯಾಕೋ ಸಿದ್ದಣ್ಣಾ ಅಂದು ಧರೆಗೆ ದೊಡ್ಡವರು ನನ್ನ ಜಾತಿಯವರು ಸಾಮಾನ್ಯದವರಲ್ಲ ಮಹಾ ಪ್ರಭು ಅವರು ನನ್ನ ಜಾತಿಯವರು, ಕುಲದವರು ಎಂದು ಹೆಳುತ್ತಾನೆ. ಧರೆಗೆ ದೊಡ್ಡವರು ಏನೇ ಪ್ರಯತ್ನ ಮಾಡಿ ಪಾಂಚಾಳರನ್ನು ತಮ್ಮ ಒಕ್ಕಲು ಮಾಡಿಕೊಳ್ಳಲು ಶತ ಪ್ರಯತ್ನ ಮಾಡಿದರೂ ಸಾಧ್ಯವಾಗುವುದಿಲ್ಲ. ಕೆಂಪಾಚಾರಿಯು ಸಿದ್ದಾಪ್ಪಾಜಿಯಾಗಿ ಪಾಂಚಾಳರನ್ನು ತಮ್ಮ ಒಕ್ಕಲು ಮಾಡಿಕೊಂಡು ಮತ್ತು ಪಾಂಚಾಳರಿಂದ ಕಬ್ಬಿಣ ಭಿಕ್ಷೆ ಪಡೆಯಬೇಕೆಂಬ ನಿಲುವು ಅವರದಾಗಿತ್ತಾದರೂ ತಮ್ಮ ಕಾಯಕದ ವಸ್ತುಗಳನ್ನು ದೈವದ ರೂಪದಲ್ಲಿ ಕಾಣುವ ಪಾಂಚಾಳರಿಗೆ ಪ್ರಮುಖವಾಗಿ ಕಾಣುತ್ತವೆ.

ಮಂಟೇಸ್ವಾಮಿಯ ಕಾವ್ಯಗಳಲ್ಲಿ ಈ ಪಾಂಚಾಳರು ಮತ್ತು ಪಾಂಚಾಳರ ವೃತ್ತಿ ಹಾಗೂ ಇರುವಿಕೆಯನ್ನು ನಾವು ಕಾಣಬಹುದು. ಒಂದು ಕಾಲದಲ್ಲಿ ಸುಶಿಕ್ಷಿತದಿಂದ ಬದುಕುತ್ತಿದ್ದ ಇವರು ಇಂದು ಅತಂತ್ರದ ಪರಿಸ್ಥಿತಿಯಲ್ಲಿ ಬದುಕಿದ ಕೆಲವೇ ವರ್ಷಗಳಾದ ಮೇಲೆ ಈ ದೇಶಿಯ ತಂತ್ರಜ್ಞಾನಗಳಲ್ಲಿ ಈ ಪಂಚ ವೃತ್ತಿಗಳು ಅವಸಾನ ಹೊಂದುವುದರಲ್ಲಿ ಸಂದೇಹ ಇಲ್ಲವೇನೊ ಎಂಬ ಆತಂಕ ಒಂದು ಘಳಿಗೆ ಮಿಂಚಿ ಹೋಗುತ್ತದೆ. ಆ ಕಾಲ ಕೂಡ ದೂರ ವಿರಲಾರದೋ ಎಂಬ ಸಂದೇಹ ಕಂಡರೂ, ಅಕ್ಕಸಾಲಿಗ, ಬಡಿಗಿ, ಕಮ್ಮಾರ, ಶಿಲ್ಪಿ ಕಾಯಕದವರಿಗಿಂತ ಕಂಚುಗಾರರು ಎಂಬ ವರ್ಗ ಮಾತ್ರ ಹೇಳ ಹೆಸರಿಲ್ಲದಂತೆ ಮಾಯವಾಗಿರುವುದು ಶೋಚನೀಯ ಕಂಚುಗಾರಿಕೆಯಿಂದ ಬದುಕಲು ಕಷ್ಟವಾದ ನಂತರ ಇದಕ್ಕೆ ಪರ್ಯಾಯವಾಗಿ ಉಳಿದ ನಾಲ್ಕು ವೃತ್ತಿಗಳಲ್ಲಿ ತಮ್ಮ ಬದುಕಲು ಪ್ರಯತ್ನಿಸುತ್ತಾರೆ.

ಹಲಗೂರು ಗ್ರಾಮದಲ್ಲಿ ಏಳುನೂರ ಐವತ್ತು ಪಾಂಚಾಳರ ಒಕ್ಕಲು ಅವರಿಗೆ ಕಳೋಜಿ, ದಿಂಬೋಜಿ, ಚೇತೋಜ, ವರದೋಜಿ, ನಿಂಗೋಜಿ, ಚೆನ್ನೋಜಿ ಮತ್ತು ನರಸೋಜಿ ಎಂಬ ಏಳು ಮಂದಿ ವಾಜದ ಕುಲದ ಧಣಿಗಳು ಇವರಿಗೆ ಏಳು ಕುಲುಮೆಗಳು ಅಲ್ಲಿ ಇವರು ತಲಕಾಡಿನ ಸುಉುಖಿ ಚಾಮರಾಜ ಒಡೆಯರಿಗೆ ಕತ್ತಿ, ಪಿರಂಗಿ, ಬಂದೂಕುಗಳನ್ನು ತಯಾರಿಸಿ ಕೊಡುತ್ತಿದ್ದರು. (ಮಂಟೇಸ್ವಾಮಿ ಕಾವ್ಯ –ಜಿ.ಶಂ.ಪಂ–ಪುಟ ೧೧೩)

ಒಂದು ತಿಳಿದು ಬರುತ್ತದೆ. ಈ ರೀತಿಯಾದಂತ ಪಾಂಚಾಳರ ಮೌಖಿಕ ಪರಂಪರೆಯಲ್ಲಿ ಹಲವಾರು ಐತಿಹ್ಯ ಮತ್ತು ಜನಪದ ಕತೆಗಳು ಕಂಡುಬರುತ್ತವೆ. ಅವು ಪಾಂಚಾಳರ ಹುಟ್ಟು ಬೆಳವಣಿಗೆ ಮತ್ತು ಕೌಶಲ್ಯಗಳು ಕಂಡು ಬಂದು ಅವರ ಇತಿಹಾಸಕ್ಕೆ ಕೈ ಗನ್ನಡಿಯಾಗಿವೆ. ಇವು ಒಂದಲ್ಲೊಂದು ಅಂಶಗಳು ಇತಿಹಾಸದೊಂದಿಗೆ ಹೋಲಿಸಿದಾಗ ಹೊಂದಿಕೆಯಾಗುವ ಸಂದರ್ಭಗಳು ಬರುತ್ತವೆ. ನಾವು ದಾಖಲೆಗಳಿಗಿಂತ ಜನಪದ ಸಾಹಿತ್ಯದ ದೃಷ್ಟಿಯಿಂದ ನೋಡಿದಾಗ ಐತಿಹ್ಯಗಳು ಇತಿಹಾಸದ ದಾಖಲೆಗಳಿಗೆ ಪುಷ್ಠಿ ನೀಡುತ್ತವೆ. ಇತಿಹಾಸದ ದಾಖಲೆಗಳು ಯಾವಾಗಲೂ ಇದ್ದೇ ಇರುತ್ತವೆ ಆದರೆ ಆಧುನಿಕ ಗಾಳಿಯಲ್ಲಿ ಜನಪದ ಕತೆಗಳು, ಐತಿಹ್ಯಗಳು ಈ ತಲೆಮಾರಿಗೆ ಮರೆಯಾಗುವ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ. ಆದಕಾರಣ ಪಾಂಚಾಳರ ಪರಂಪರೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕ್ಷೇತ್ರಕಾರ್ಯದ ಮೂಲಕ ಈ ವಿಷಯ ಸ್ಂಗ್ರಹಣೆ ಮಾಡಲಾಗಿದೆ.

ಆದರೆ ಒಂದು ವಿಷಯವೆಂದರೆ ಎಲ್ಲ ಪಾಂಚಾಳರನ್ನು ಬೇಟಿಯಾದಾಗ ಅವರೆಲ್ಲರೂ ವಿಶ್ವಕರ್ಮನಿಂದಲೇ ಹುಟ್ಟಿದವೆಂದು ಹೇಳಿಯೇತಿರುತ್ತಾರೆ. ಮಿಕ್ಕ ವಿಚಾರಗಳು ಜನಪದರಿಗೆ ಗೌಣವಾಗಿರುವುದನ್ನು ಕಾಣಬಹುದು. ಅದು ಅನಿವಾರ್ಯವೂ ಆಗಬಹುದೇನೋ ಏಕೆಂದರೆ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟವಾದಾಗ ಹೊಟ್ಟೆತುಂಬಿಸಲಾರದ ವಿಚಾರಗಳನ್ನು ವಿಷಯವನ್ನು ತಿಳಿದೇನು ಮಾಡುವುದು ಎಂಬ ಅಂಶವು ಕಂಡು ಬಂದಿತು. ಆದರೆ ಅವರು ಆಚಾರ, ವಿಚಾರ ಸಂಪ್ರದಾಯಗಳನ್ನು ಗೊತ್ತೋ ಅಥವಾ ಗೊತ್ತಿರದೋ ಆಚರಿಸುತ್ತಲೇ ಬಂದವರು ಎಂಬುದನ್ನು ಮಾತ್ರ ಮರೆಯುವ ಹಾಗಿಲ್ಲ.

ಒಳಪಂಗಡ

ವಿಶ್ವಕರ್ಮನು ಐದು ಮುಖವುಳ್ಳವನಾಗಿದ್ದು, ಐದು ಮುಖಗಳೂ ಒಂದೊಂದು ಸಮುದಾಯಗಳ ಪ್ರತೀಕವಾಗಿವೆ ಎನ್ನುವ ನಂಬಿಗೆ ಪಾಂಚಾಳರದು. ಮನು, ಮಯ, ತ್ವಷ್ಟ ಶಿಲ್ಪಿ, ದೈವಜ್ಞರ ಮುಖಗಳನ್ನು ಹೊತ್ತು ಹುಟ್ಟಿದ ವಿಶ್ವಕರ್ಮನು ಒಂದೊಂದು ಮುಖಕ್ಕು ಒಂದೊಂದು ಕೆಲಸವನ್ನು ವಹಿಸಿಕೊಡುತ್ತಾನೆ. ಮನು ಲೋಹ ಕೆಲಸ, ಮಯ ಬಡಿಗಿಕೆಲಸ, ತ್ವಷ್ಟ ಕಂಚಿನ ಕೆಲಸ, ಶಿಲ್ಪಿ ಕಲ್ಲಿನ ಕೆಲಸವನ್ನು, ದೈವಜ್ಞನು ಚಿನ್ನದ ಕೆಲಸ ನಿರ್ವಹಿಸುವಂತೆ ನಿರ್ದೇಶನ ಮಾಡುತ್ತಾನೆ. ಹೀಗೆ ಜನಿಸಿದ ಪಾಂಚಾಳರಲ್ಲಿ ಒಳಪಂಗಡಗಳು ಕಂಡುಬರುತ್ತವೆ ಅಂದರೆ ಆ ಪಂಗಡಗಳು ಮೂಲತಃ ಒಂದೇ ಸಮುದಾಯದವರು ಎಂಬುದನ್ನು ಮರೆಯುವ ಹಾಗಿಲ್ಲ. ನಾವು ಇಲ್ಲಿ ಚರ್ಚಿಸಬೇಕಾದವರು ಈ ಐದು ಮಂದಿಯ ವಿಷಯವಲ್ಲ ಇನ್ನು ಮುಖ್ಯವಾಗಿ ಪಾಂಚಾಳರಿಂದ ಯಾವುದೋ ಕಾರಣಕ್ಕೆ ದಿಕ್ಕಾರ ಹಾಕಿಸಿಕೊಂಡು, ತಿರಸ್ಕಾರದಿಂದ ಬದುಕುವ ಸಮುದಾಯವು ಇದೆ.

ಪಾಂಚಾಳರು ಮೂಲತಃ ಎಲ್ಲರೂ ಒಂದೇ ಆದರೆ ತಿರಸ್ಕೃತಗೊಂಡವರಾರು? ಯಾಕೆ? ಏನು? ಎಂಬ ಪ್ರಶ್ನೆಗಳು ಹುಟ್ಟುವುದು ಸಹಜ. ಈ ಪಾಂಚಾಳರಲ್ಲಿ ಚಿಕ್ಕಮನೆಯವರು, ಹಿರೆಮನೆಯವರು ಎಂದು ಒಳ ಬೇಧಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ಎರಡು ಮನೆಯವರು ಕೂಡ ಮುಂಚೆ ಪಂಚಾಳರೇ ಆದರೆ ಯಾವುದೋ ಕಾರಣಕ್ಕೆ ಕೆಲ ಜನರನ್ನು ಹೊರಹಾಕಿದರು. ಆ ಹೊರ ಹಾಕಿದ ಜನರೇ ಹಿರೇಮನೆಯವರು. ಹೀಗಾಗಲು ಕಾರಣವೇನು ಎಂದು ಕೇಳಿದರೆ ಅದಕ್ಕೆ ಸಂಬಂಧಿಸಿದ ಕತೆಗಳ ಕಂತೆಯೇ ಕೇಳಿಬರುತ್ತವೆ.

"ಒಂದಾನೊಂದು ಕಾಲದಲ್ಲಿ ಅಣ್ಣ ತಮ್ಮಂದಿರಿಬ್ಬರು ಇರುತ್ತಾರೆ. ಅವರು ಪ್ರತಿದಿನ ಕುಲುಮೆಯಲ್ಲಿ ಕಬ್ಬಿಣ ತಯಾರಿಸುತ್ತಿರುತ್ತಾರೆ. ಕಾಳಿಯ ಸ್ವರೂಪವಾದ ಕುಲುಮೆಗೆ ಪೂಜಿಸಿ ಪ್ರತಿಮಂಗಳವಾರ ಮತ್ತು ಶುಕ್ರವಾರಗಳಂದು ಒಂದು ಕುರಿಯನ್ನು ಬಲಿಕೊಡುತ್ತಾರೆ. ಕುರಿ ಬಲಿಕೊಟ್ಟ ನಂತರ ಆ ಪ್ರಾಣಿ ದೇಹವನ್ನು ಮಾಂಸ ತಿನ್ನುವ ಜನರಿಗೆ ಕೊಡುತ್ತಿರುತ್ತಾರೆ. ಓಗೆಯೇ ನಡೆಯುತ್ತಿರುವಾಗ ಒಮ್ಮೆ ತಮ್ಮನು ದೂರದ ಊರಿಗೆ ಹೋಗುತ್ತಾನೆ. ಆ ಸಂದರ್ಭದಲ್ಲಿ ಅಣ್ಣನು ಕುಲುಮೆಗೆ ಕುರಿ ಬಲಿಯನ್ನು ಕೊಡುತ್ತಾನೆ. ಕುರಿ ಬಲಿ ಕೊಟ್ಟ ನಂತರ ಆ ಮಾಂಸವನ್ನು ಬೇರೆಯವರಿಗೆ

ಕೊಡಲು ಮನಸ್ಸು ಒಪ್ಪುವುದಿಲ್ಲ. ಈ ಮಾಂಸವನ್ನು ತಾನೇ ಬೇಯಿಸಿಕೊಂಡು ತಿಂದರೆ ಹೇಗಿರುತ್ತದೆಂದು ನೋಡಲು ಯಾರಿಗೂ ಕಾಣದಂತೆ ಅಣ್ಣನು ಕುರಿಮಾಂಸವನ್ನು ಬೇಯಿಸಿಕೊಂಡು ತಿನ್ನುತ್ತಾನೆ. ಆ ರುಚಿಗೆ ಕಟ್ಟು ಬಿದ್ದು ಅಣ್ಣನು ಮಾಂಸವನ್ನು ತಿನ್ನುವುದನ್ನು ಮುಂದುವರೆಸುತ್ತಾನೆ. ಇದನ್ನು ತಿಳಿದುಕೊಂಡ ತಮ್ಮನು ಮಾಂಸ ತಿನ್ನುವುದು ಪಾಂಚಾಳರಿಗೆ ಒಳಿತಲ್ಲವೆಂದು ಹೇಳುತ್ತಾನೆ. ಆದರೆ ಅಣ್ಣನು ಮಾಂಸವನ್ನು ಬಿಡುವುದಿಲ್ಲ. ಇದರಿಂದಾಗಿ ಅಣ್ಣ ತಮ್ಮಂದಿರಿಬ್ಬರಿಗೂ ಜಗಳವಾಗುತ್ತದೆ. ಜಗಳದ ನಂತರ ಅಣ್ಣನು ಕಾಡಿಗೆ ನಡೆಯುತ್ತಾನೆ. ತಮ್ಮನು ನಾಡಿಗೆ ನಡೆಯುತ್ತಾನೆ. ಕಾಡಿಗೆ ಹೋದ ಅಣ್ಣನ ವಂಶದವರನ್ನು ದೊಡ್ಡ ಮನೆಯವರು, ಹಿರೇಮನೆಯವರೆಂದು ಕರೆದರೆ ನಾಡಿನಲ್ಲಿದ್ದ ತಮ್ಮನ ವಂಶಸ್ಥರನ್ನು ಚಿಕ್ಕಮನೆಯವರೆಂದು ಕರೆಯುತ್ತಾರೆ." ಎಂದು 'ಪಾರವ್ವ' ನವರು ಹೇಳುತ್ತಾರೆ.

ಈ ಕತೆಯಲ್ಲಿ ಬರುವ ಅಂಶಗಳನ್ನು ಗಮನಿಸಿದರೆ ಮೂಲತಃ ಪಾಂಚಾಳರಾದ ಇವರು ಮಧ್ಯ, ಮಾಂಸ, ತಿನ್ನುವ ಚಾಳಿಗೆ ಬಿದ್ದು ಕುಲಾಚಾರಕ್ಕೆ ಅಪಮಾನ ಮಾಡಿ ಕುಲದಿಂದ ಹೊರಕ್ಕೆ ಹಾಕಿಸಿ ಕೊಂಡಿದ್ದನ್ನು ನೋಡಿದರೆ ಇಂದಿಗೂ ಈ ಹಿರೆಮನೆಯವರೆನಿಸಿಕೊಳ್ಳುವ ಮುದ್ದೆ ಕಂಬಾರರು, ಹಿರೆ ಬಡಿಗಿಯವರು, ಅಥವಾ ಹಿರೆಮನೆಯವರು. ಮೂಲ ಪಾಂಚಾಳರವರ ಜೊತೆಗೆ ಯಾವುದೆ ಸಂಬಂಧವನ್ನು ಹೊಂದಿರುವ ಸಂಗತಿಗಳು ಕಡಿಮೆ ಅದಕ್ಕೆ ವ್ಯತಿರಿಕ್ತವಾಗಿ ತಿಳಿಯದೆ ಆದ ಸಂಬಂಧಗಳು ಈ ಸಮುದಾಯದಲ್ಲಿ ಕಂಡುಬಂದರೂ ಯಾವುದೇ ಶುಭ ಕಾರ್ಯಗಳಿಗೆ ನಿರ್ಬಂಧಿತರಾಗುತ್ತಾರೆ. ಹಿರೆಮನೆಯವರು ಎಂದು ಹೇಳದೇ ಚಿಕ್ಕಮನೆಯವರೆಂದು ಹೇಳಿ ಮೋಸ ಹೋದವರು ಕೂಡ ಸಿಗುತ್ತಾರೆ. ಇವರು ಒಂದು ರೀತಿಯ ಸುಮಾರು, ಕೆಟ್ಟಜಾತಿ, ಜಾತಿಯಿಂದ ಹೊರಹಾಕಿದವರು ಎಂದು ಕರೆಯುತ್ತಾರೆ. ಹಿರೆಬಡಗಿಯವರು ಮಾಟ ಮಂತ್ರಗಳಲ್ಲಿ ಪ್ರವೀಣರಾಗಿರುತ್ತಾರೆ. ಮಧ್ಯಮಾಂಸವನ್ನು ಸೇವಿಸುತ್ತಾ ಮೂಲ ವೃತ್ತಿಯಲ್ಲಿ ಬದುಕುತ್ತಿರುವುದು ವಿಪರ್ಯಾಸ. ನೀವು ಯಾವ ಸಮುದಾಯಕ್ಕೆ ಸೇರಿದವರೆಂದು ಕೇಳಿದರೆ ಪಾಂಚಾಳರು, ವಿಶ್ವಕರ್ಮರು, ಕಾಳಮ್ಮ ಮನೆದೇವರು ಎಂದು ಹೇಳುತ್ತಾರೆ. ಹೆಚ್ಚಾಗಿ ಚಿಕ್ಕಮನೆಯವರ ದೇವರು (ಮನೆ) ಮೈಲಾರಲಿಂಗವಾಗಿರುವುದಿಲ್ಲ. ಬಹಳ ಮಾಡಿ ಹಿರೇಮನೆಯವರ ಮನೆದೇವರು ಮೈಲಾರಲಿಂಗನೂ ಆಗಿರುತ್ತಾರೆ. ಹಾಸನದಿಂದ ಊರಿಂದ ಊರಿಗೆ ಸರ್ಕಸ್‌ಮಾಡುತ್ತ ಬಂದ ಒಂದು ಗುಂಪು ಹಿರೆಮನೆಯವರೆಂದು ಅವರು 'ಕಣ್‌ಕಟ್' ನಿಂದ ಸರ್ಕಸ್ ಮಾಡುವುದನ್ನು ಜೀವನ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುವ ದಾರಿ ಹಿಡಿದ್ದಾರೆ.

ಪಾಂಚಾಳರಿಂದ ತಿರಸ್ಕೃತಗೊಂಡವರನ್ನು 'ಅರೆ ಪಾಂಚಾಳರೆಂದು ಕರೆಯುತ್ತಾರೆ. ಅವರಿಗೆ ಸಂಬಂಧ ಪಟ್ಟ ಹಲವಾರು ಐತಿಹ್ಯಗಳು ಸಿಗುತ್ತವೆ. "ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ. ಶಿವನ ಆಜ್ಞೆಯಂತೆ ತನ್ನಕುಲವಲ್ಲದ ಬೇರೆ ಹೆಣ್ಣೊಬ್ಬಳೊಡನೆ ಮದುವೆಯಾಗುತ್ತಾನೆ. ಇವನು ರಸ್ತೆ ಪಕ್ಕದ ದೊಡ್ಡ ಮನೆಯಲ್ಲಿ ವಾಸಿಸುತ್ತಾನೆ. ತಮ್ಮನು ತನ್ನದೇ ಕುಲದ ಹೆಣ್ಣೊಂದನ್ನು ಮದುವೆಯಾಗಿ ಚಿಕ್ಕಮನೆಯಲ್ಲಿ ಉಳಿಯುತ್ತಾನೆ. ಹೀಗಾಗಿ ಅಣ್ಣನ ವಂಶಜರನ್ನು ದೊಡ್ಡ ಮನೆಯವರೆಂದು, ತಮ್ಮನ ವಂಶಜರನ್ನು ಚಿಕ್ಕ ಮನೆಯರೆಂದೂ ಗುರುತಿಸಲಾಗುತ್ತದೆ. ಅಣ್ಣನ ವಂಶಜರು ಮಾಂಸಹಾರಿಗಳು, ತಮ್ಮನ ವಂಶಜರು ಸಸ್ಯಹಾರಿಗಳು ಆಗುತ್ತಾರೆ ಎಂದು –ರಾದಮ್ಮ ಎನ್ನುವರು ಹೇಳುತ್ತಾರೆ. ಈ ಪಾಂಚಾಳರಲ್ಲಿ ಇಂತಹ ಆಚರಣೆಗಳು, ನಂಬಿಕೆಗಳು ಒಮ್ಮೆ ಮೂಡಿಬಿಟ್ಟರೇ ಕೊನೆಯವರೆಗೂ ಅದನ್ನು ಬಿಡುವುದಿಲ್ಲ. ಒಮ್ಮೆ ತಿರಸ್ಕಾರ ಮಾಡಿದರೆ ತಿರಸ್ಕಾರ ತಿರಸ್ಕಾರವೇ, ಯಾವುದೋ ಕಾಲಕ್ಕೆ, ಯಾವುದೋ ಕಾರಣಕ್ಕೆ ತಮ್ಮ ಬಂಧುಗಳನ್ನು ನಿರ್ದಾಕ್ಷಣ್ಯವಾಗಿ ಹೊರಹಾಕಿ ಅವರ ನಡುವಿನ ಸಂಬಂಧವನ್ನು ಕಡಿದುಕೊಳ್ಳುವುದೆಂದರೆ ಅದೆಷ್ಟು ಆಚಾರ ಪುರಷರಿರಬಹುದು. ಅದೆಷ್ಟು ಶೀಲವಂತರು ಎಂಬುದು ತಿಳಿಯುತ್ತದೆ. ಕೆಲವು ಕಥೆಗಳಲ್ಲಿ ಪಾಂಚಾಳರು ಎಷ್ಟು ಶೀಲವಂತರಿದ್ದರೆಂದರೆ ಬೇರೆಯವರು ನಲ್ಲಿ ಹೊಡೆದರೆ (hand Pump) ಅದರಲ್ಲಿ ಬರುವ ನೀರನ್ನು 'ಅಶುದ್ಧ'ವೆಂದು ತಿಳಿದ ಜನರಿದ್ದಾರೆ.

ಹಾವೇರಿ ಜಿಲ್ಲೆಯ ಚಿಕ್ಕಕುರುವತ್ತಿ ಎಂಬ ಹಳ್ಳಿಯ ಕುಟುಂಬ ಚಿಕ್ಕಮನೆಯವರು ಆ ಮನೆಯವರೊಬ್ಬ ಹಿರೆಮನೆಯವರ ಮಗಳನ್ನು ಪ್ರೀತಿಸಿ ಮದುವೆಯಾದ ಅದಕ್ಕೆ ಅವರ ತಂದೆ–ತಾಯಿಗಳು, ಬಂಧು–ಬಾಂಧವರು

ಅವರನ್ನು ಮನೆಗೆ ಸೇರಿಸಿಕೊಳ್ಳದೇ ಹೊರಹಾಕಿದರು ಅಂದರೆ ಇವನು ಕೀಳು ಜಾತಿಗೆ ಸೇರಿದವನೆಂಬ ನಂಬಿಕೆ ಹುಟ್ಟಿರುತ್ತದೆ. ವಿವಾಹವಾದ ವ್ಯಕ್ತಿಯ ಮನೆಗೆ ಅಕಸ್ಮಾತ್ ಹೋದರೆ ಗಂಡ–ಹೆಂಡತಿ ಬಂದವರು ಹೋಗುವವರೆಗೂ ಒಳಗಡೆಹೋಗುವಂತ್ತಿಲ್ಲ, ಅಡುಗೆ ಮಾಡುವಂತಿಲ್ಲ ಒಂದು ಪಾತ್ರೆಯನ್ನು ಮುಟ್ಟುವಂತ್ತಿಲ್ಲ ಬಂದವರು ತಾವೇ ಪಾತ್ರೆಗಳನ್ನು ತೊಳೆದುಕೊಂಡು ಅಡುಗೆ ಮಾಡಿಕೊಂಡು ಊಟಮಾಡುತ್ತಿದ್ದರಂತೆ. ಹಾಗೆ ಇಬ್ಬರು ಮೈಲಿಗೆಯ ವ್ಯಕ್ತಿಗಳಂತೆ ಕಾಣುತ್ತಾರೆ ಎಂದು ಗೋವಿಂದಪ್ಪ ತನ್ನ ತಪ್ಪಿನ ಅರಿವು ಈಗ ಆಗ್ಯಾತಿ. ಎಂದು ಪಶ್ಚಾತಾಪ ಪಟ್ಟರೂ ಸಂತೋಷದಿಂದ ಅಕ್ಕಸಾಲಿಕೆ ಮಾಡಿಕೊಂಡು ಇದ್ದೇನೆಂದು ಹೇಳುತ್ತಾನೆ. ಇದರೊಂದಿಗೆ ಸಾಂಸ್ಕೃತಿಕ ಸಂಬಂಧವನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ. ಇಂತಹ ಘಟನೆಗಳು ಹಲವಾರು ಸಲ ಅವರವರ ಜೀವನದಲ್ಲಿ ಸಂಭವಿಸಿರಬಹುದು. ಆದರೆ ಪಾಂಚಾಳರಿಂದ ತಿರಸ್ಕಾರಗೊಂಡ ಹಿರೇಮನೆಯವರ ಜೊತೆ ಯಾವುದೇ ಸಂಭಂಧಗಳನ್ನು ಇವರು ಇಟ್ಟುಕೊಂಡಿರುವುದಿಲ್ಲ ಮತ್ತು ಅವರು ಮಾಂಸ ಮಧ್ಯಗಳನ್ನು ಸೇವಿಸಿ ಇನ್ನೂ ದೂರವಾಗಿದ್ದಾರೆ. ಈಗಲೂ ಕೂಡ ಅವರ ಜೊತೆಗಿನ ಯಾವುದೇ ತರಹದ ಸಂಬಂಧ ಇಲ್ಲವಾದರೂ ಅವರೆಲ್ಲರೂ ಪಂಚ ವೃತ್ತಿಗಳನ್ನೆ ಮಾಡುತ್ತಾ ಬಂದಿದ್ದಾರೆ. ಇಂತಹ ಪದ್ಧತಿಗಳು ಈ ಪಾಂಚಾಳರಲ್ಲಿ ನಿಷೇಧ. ಈ ರೀತಿಯಾದಂತ ಕುಲಭೇದಗಳು ಅವರೊಳಗೆ ಹುಟ್ಟಿಕೊಂಡಿರುವುದನ್ನು ಕಾಣಬಹುದು.

ಈ ರೀತಿಯಾಗಿ ಜನಪದ ಕತೆ, ಐತಿಹ್ಯಗಳೂ ಪಾಂಚಾಳರ ಪರಂಪರೆಯನ್ನು ನಾವು ಕೂಲಂಕುಷವಾಗಿ ಅಧ್ಯಯನ ಮಾಡಬಹುದು. ಇವು ಪಾಂಚಾಳರ ಸಂಬಂಧ ಪಟ್ಟ ಹಾಗೆ ಎಲ್ಲಾ ಮಾಹಿತಿಯನ್ನು ನೀಡುತ್ತವೆ. ಆದರೆ ಈ ಎಲ್ಲಾ ಐದು ಜನರು ವಿಶ್ವಕರ್ಮನ ಮಕ್ಕಳು ಪಾಂಚಾಳರು ಎಂದೆನಿಸಿಕೊಂಡು ಇಂದು ಇತರ ಸಮುದಾಯಗಳಿಗೆ ಹೊಂದಿಕೊಂಡು ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಈ ಮೌಖಿಕ ಪರಂಪರೆಗಳ ಜೊತೆಗೆ ದಾಖಲೆಯಲ್ಲಿ ಬರುವ ಪಾಂಚಾಳರ ಮೂಲವನ್ನು ಶಾಸನಗಳಲ್ಲಿ ಗ್ರಂಥಗಳಲ್ಲಿ, ವೇದಗಳಲ್ಲಿ ನೋಡುವುದು ಉತ್ತಮವೆನಿಸಿ ಅವುಗಳನ್ನು ಮುಂದೆ ಚರ್ಚಿಸಲಾಗಿದೆ.

ವೇದ ಮೂಲದ ಪಾಂಚಾಳರು

ಪಾಂಚಾಳರ ಮೂಲವನ್ನು ನಾವು ಹುಡುಕುತ್ತಾ ಹೋದಂತೆ ಹಲವಾರು ದಾಖಲೆಗಳು ಸಿಗುತ್ತವೆ. ಆ ದಾಖಲೆಗಳು ಐತಿಹ್ಯವಾಗಿರಬಹುದು. ಕತೆಯಾಗಿರಬಹುದು, ಶಾಸನಗಳಾಗಿರಬಹುದು, ವೇದಗಳಾಗಿರಬಹುದು ಅಥವಾ ಇನ್ನಾವುದೇ ಕುರುಹುಗಳು ಇವರ ಮೂಲವನ್ನು ಹೇಳುವ ಅಂಶಗಳು ಕಂಡುಬರುತ್ತವೆ. ಹಾಗೆ ವೇದಗಳಲ್ಲಿ ಪಾಂಚಾಳರ ಉಲ್ಲೇಖವನ್ನು ಇಲ್ಲಿ ವಿವರಿಸಲಾಗಿದೆ.

ಕರ್ನಾಟಕದ ಶಾಸನಗಳಲ್ಲಿ ಕ್ರಿ.ಶ. ೨೫೦ ರಷ್ಟು ಹಿಂದೆಯೇ 'ವಿಶ್ವಕರ್ಮ' ಎಂಬ ಪದದ ಉಲ್ಲೇಖವಿದೆ (ಎ.ಕ.VII ಶಿಕಾರಿಪುರ–೨೬೪ ಕ್ರಿ.ಶ.೨೫೦) ಈ ಪದವನ್ನು ಶಾಸನಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಬಳಸಲಾಗಿದೆ. ಕೆಲವು ಕಡೆ ಕುಶಲ ಕೆಲಸಗಾರರು ಇದನ್ನು ವೃತ್ತಿನಾಮವಾಗಿ ಬಳಸಿದ್ದಾರೆ. ಅಂದರೆ ಓಜ/ಆಚಾರಿಗಳು, ವಿಶ್ವಕರ್ಮ ಎಂಬುದಾಗಿ ಹೆಸರನ್ನು ಇಟ್ಟುಕೊಳ್ಳುವ ಪರಿಪಾಠವಿತ್ತು (ಎ.ಕ ೧/ಮು೧ ೧೦೧ ಪರಿಕೃತ) ಸುಮಾರು ಕ್ರಿ.ಶ. ೫ನೇ ಶತಮಾನದಲ್ಲಿಯೇ ಇದು ರೂಢಿಯಲ್ಲಿತ್ತು. ಮತ್ತೆ ಕೆಲವು ಕಡೆ ವಿಶ್ವಕರ್ಮ ಬ್ರಹ್ಮ 'ದೇವ ಶಿಲ್ಪಿ' ಎಂಬ ಪೌರಾಣಿಕ ಕಲ್ಪನೆಯಲ್ಲಿಯೂ ಬಳಕೆಯಾಗಿದೆ. 'ವಿಶ್ವಕರ್ಮ ಕುಲೋದ್ಭವಂ' (ಎ.ಕ.V.–ಚನ್ನರಾಯ ಪಟ್ಟಣ–೧೮೭) ಎಂಬುದಾಗಿ ಅದನ್ನು ಒಂದು ಜಾತಿ ಎಂದು ಕೂಡ ಪರಿಗಣಿಸಲಾಗಿದೆ. ಮತ್ತೊಂದು ಕಡೆ 'ಕಮ್ಮಾರರು, ಬಡಿಗರು, ಅಕ್ಕಸಾಲಿಗರು, ಕಮ್ಮಟದವರು ಮೊದಲಾದವರನ್ನು ವಿಶ್ವಕರ್ಮ ಕುಲಸ್ಥರು' (ಎ.ಕ IX ಕನಕಪುರ ೧೧೦) ಎಂಬುದನ್ನು ಕರೆಯಲಾಗಿದೆ. ಈ ಪಂಚ ವೃತ್ತಿಕಾರರು ಬೇರೆ ಬೇರೆ ವೃತ್ತಿನಾಮಗಳು ಬೇರೆ ಬೇರೆ ಆಗಿದ್ದರೂ ಅವರೆಲ್ಲರನ್ನು 'ವಿಶ್ವಕರ್ಮ' ಅಥವಾ ಪಾಂಚಾಳರೆಂದು ಕರೆಸಿಕೊಂಡಿದ್ದಾರೆ.

ಹೀಗೆ ಪಂಚ ವೃತ್ತಿಕಾರರನ್ನು ಕಸುಬಜನವರಲ್ಲಿ ಇತಿಹಾಸದುದ್ದಕ್ಕೂ ಜಾಗೃತವಾಗಿದ್ದು, 'ವಿಶ್ವಕರ್ಮ' ಎಂಬ ಪರಿಕಲ್ಪನೆಯು ತುಂಬ ಪುರಾತನವಾದದ್ದು. ಅದು ವೇದ ಮೂಲವಾದದ್ದೂ ಹೌದು. ವೇದಗಳಲ್ಲಿ ಉಕ್ತವಾಗಿರುವ 'ವಿಶ್ವಕರ್ಮ' ಎಂಬ ಪರಿಕಲ್ಪನೆಯನ್ನು ಕುರಿತು ತತ್ವಜ್ಞಾನಿಗಳಾದ 'ಎಂ. ಹಿರಿಯಣ್ಣ' ಅವರು ಹೀಗೆ ಹೇಳುತ್ತಾರೆ. " ಎಲ್ಲಾ ದೇವತೆಗಳ ಗುಣವಾದ 'ಸರ್ವಶಕ್ತಿತ್ವ' ಎನ್ನುವುದು ವಿಶ್ವಕರ್ಮನೆಂಬ ರೂಪದಲ್ಲಿ ಒಂದು ದೇವತಾ ರೂಪವನ್ನೇ ತಾಳಿತು. ಅವನು ವಿಶ್ವವನ್ನು ರಚಿಸಿದ ಮಹಾಶಿಲ್ಪಿ ಎಂದು, ಸರ್ವಜ್ಞನೆಂದು ಇತರರೆಲ್ಲರೂ ಇವರ ಹತ್ತಿರಕ್ಕೆ ಬಂದು ಆಜ್ಞೆಗಳನ್ನು ಪಡೆಯುವರೆಂದೂ ಒಂದು ಸೂಕ್ತವೂ ಬರುತ್ತದೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯವರು–ಕೆ.ಎಸ್. ಕುಮಾರಸ್ವಾಮಿ–ಪುಟ ೧೩೧) ಈ ಮಾತುಗಳು ವೇದಕಾಲದಲ್ಲಿ ವಿಶ್ವಕರ್ಮ ಎಂಬ ಪರಿಕಲ್ಪನೆಯ ಬಗ್ಗೆ ಇದ್ದ ಬಹು ಹೆಚ್ಚಿನ ಸ್ಥಾನವನ್ನು ತಿಳಿಸುತ್ತದೆ. ವಿದ್ವಾಂಸರಾದ ವಿ.ಎಸ್. ಅಗರವಾಲ್‌ರವರು ಈ ಬಗೆಗಿನ ಮಾತುಗಳು ಉಲ್ಲೇಖಾರ್ಹವಾಗಿದೆ. ವೇದಗಳಲ್ಲಿ ವಿಶ್ವಕರ್ಮನನ್ನು ದೇವತೆ ಎಂಬ ಅರ್ಥದಲ್ಲಿ ಸಂಬೋಧಿಸಲಾಗಿದೆ. ಕುಲುಮೆಯಲ್ಲಿ ಲೋಹವನ್ನು ಕರಗಿಸಿ ನಾನಾ ವಿಧವಾದ ಪರಿಕರಗಳನ್ನು ತಯಾರಿಸುವ ಕಮ್ಮಾರನಿಗೆ ಹೋಲಿಸಿ ಆ ಒಂದು ಅರ್ಥದಲ್ಲಿ ವಿಶ್ವಕರ್ಮ ಎಂಬ ಪರಿಕಲ್ಪನೆಯನ್ನು ಬಳಸಲಾಗಿದೆ." ಎಂದು ಊಹಿಸುತ್ತಾರೆ.

ಶ್ರೀ ಸಿ. ರಾಮಾಚಾರ್ ರವರು ಋಗ್ವೇದದ ಕೆಲವು ಮಂತ್ರಗಳನ್ನು ವಿಶ್ವಕರ್ಮನು ರಚಿಸುವುದಾಗಿ ಹೇಳುತ್ತಾರೆ. ತ್ವಷ್ಟ ಎಂಬುದು ವೇದಗಳಲ್ಲಿ ಬರುವ ಮತ್ತೊಂದು ಪರಿಕಲ್ಪನೆ. ಇದನ್ನು 'ಬಡಗಿ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಈ ಬಗ್ಗೆ 'ಸರದೇಸಾಯಿ ಯವರು' ಹೀಗೆ ಹೇಳುತ್ತಾರೆ. "ವೇದಕಾಲದ ಆರ್ಯರಲ್ಲಿ 'ರಥ' ಎಂಬ ವಾಹನವಿದ್ದಿತೆಂದು ಖಚಿತವಿದೆ. ಅದನ್ನು ತಯಾರಿಸುವವರನ್ನು ತ್ವಷ್ಟ ಎಂದು ಕರೆಯುತ್ತಿದ್ದರು. ಅವನ ಕೆಲಸವನ್ನು ಹೆಚ್ಚು ಕಡಿಮೆ ದೇವತೆಗಳ ಸಾಲಿಗೆ ಸೇರಿಸಲಾಗಿದೆ. ತ್ವಷ್ಟನು ದೇವತೆಗಳಿಗೂ ಗುರುವಾಗಬಲ್ಲನೆಂದು ಅವರು ತಿಳಿದಿದ್ದರು. ವಿಶ್ವಕರ್ಮನನ್ನು ತ್ವಷ್ಟ ಎಂದು ಕರೆಯುತ್ತಿದ್ದರು" (ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು–ಸರ್‌ದೇಸಾಯಿ–ಪುಟ–೭) ಎಂದು ತಿಳಿಸುತ್ತಾರೆ. ಈ ಪದವನ್ನು ಬಡಗಿಯವರಿಗೆ ಮಾತ್ರ ಬಳಸುತ್ತಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ. ವಿದ್ವಾಂಸರ ಈ ಮಾತುಗಳು ವೇದಕಾಲದಲ್ಲಿ ಇದ್ದ ವಿಶ್ವಕರ್ಮ, ತ್ವಷ್ಟ, ಮೊದಲಾದ ಶ್ರಮಜೀವಿಗಳನ್ನು, ಅವರ ಪ್ರಾಮುಖ್ಯತೆಯನ್ನು ಅವರಿಗೆ ಆಗ ಇದ್ದ ಗೌರವದ ಸ್ಥಾನಮಾನವನ್ನು ತಿಳಿಸುತ್ತದೆ. ಈ ರಥ ಪರಿಕರಾಧಿ ವಸ್ತುಗಳನ್ನು ತಯಾರಿಸವ ಶ್ರಮಜೀವಿಗಳಾದ ಇವರು ಮಂತ್ರ ರಚನೆ ಮಾಡುವ ಬುದ್ಧಿಜೀವಿಗಳೂ ಆಗಿದ್ದರು. ವಿಚಾರಗಳೂ ಕೂಡ ದುಡಿಮೆಯಿಂದಲೇ ಉದ್ಭವಿಸುತ್ತವೆ ಎಂದು ತಿಳಿದಿದ್ದ ವೇದಕಾಲದ ಸಮಾಜವು ಬೌದ್ಧಿಕ ಶ್ರಮ ಮತ್ತು ದೈಹಿಕ ಶ್ರಮಗಳ ನಡುವೆ ತಾರತಮ್ಯವನ್ನು ಮಾಡಿರಲಿಲ್ಲ. ಆಗಿನ ಕಾಲದಲ್ಲಿ ಸಹಜವಾಗಿಯೇ ವಿಶ್ವಕರ್ಮ ಮತ್ತು ತ್ವಷ್ಟರನ್ನು ದೇವತೆಗಳಿಗೆ ಸರಿಸಮಾನವಾಗಿ ಪರಿಗಣಿಸಲಾಗಿತ್ತು. ಈ ತ್ವಷ್ಟ ಎಂಬ ವೇದಕಾಲೀನ ಪರಿಕಲ್ಪನೆಯು ಅಲ್ಲಿದ್ದ ಅಲ್ಲಿಯೇ ಮಾಯವಾಗಲಿಲ್ಲ. ಅದು ಪಾಂಚಾಳ ಕುಶಲಕರ್ಮಿಗಳಲ್ಲಿ ಇತಿಹಾಸದುದ್ದಕ್ಕೂ ಜಾಗೃತವಾಗಿ ಉಳಿದು ಬಂದಿತು. ಬಂದದೆಯೂ ಕೂಡ ಎಂಬುದು ಗಮನಾರ್ಹ. ಉದಾಹರಣೆಗೆ ಅನೇಕ ತಾಮ್ರಶಾಸನದ ಕರ್ತೃಗಳು ತಮ್ಮನ್ನು ತ್ವಷ್ಟ ಎಂದು ಕರೆದುಕೊಂಡಿದ್ದಾರೆ.

'ಓಜ' ಎಂಬ ಪದವು ವಿಶ್ವಕರ್ಮ ಅಥವಾ ಪಾಂಚಾಳರಿಗೆ ಕರೆಯುವ ಪದ್ಧತಿಯೂ ಇತ್ತು. ಬಹುಪಾಲು ಕುಶಲಕೆಲಸಗಾರರು, ಶಿಲ್ಪಿಗಳ ಹೆಸರುಗಳ ಮೇಲೆ ಓಜ ಎಂಬ ಉಪನಾಮವು ಹತ್ತಿರುವುದನ್ನು ಕಾಣುತ್ತೇವೆ ಹಾಗೂ ಸರ್ವವಿಧಿತ. ಈ ಓಜ ಎಂಬ ಪದವು 'ಉಪಧ್ಯಾಯ' ಎಂಬ ಸಂಸ್ಕೃತ ಪದದಿಂದ ವ್ಯುತ್ಪನ್ನವಾಗಿದೆ. (ಚಿದಾನಂದ ಮೂರ್ತಿ. ಎಂ.–ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ–೪೩೭) ಎಂದು ತಿಳಿಸುತ್ತಾರೆ. ಈ ಮಾತನ್ನು ಬಹುಜನ ವಿದ್ವಾಂಸರು ಒಪ್ಪಿತ ವಿಷಯವೇ ಆಗಿದೆ. ವೇದಗಳಲ್ಲಿ ಬರುವ ಋಭುಗಳನ್ನು ಶಿಲ್ಪಿ ರೇವಣ್ಣರು ಎಂದು ಸಾಬೀತುಪಡಿಸುವಲ್ಲಿ 'ಶ್ರೀ ಅರ್ಜುನಾಚಾರಿ ತೆಂಗಳೀಕರ' ಎನ್ನುವರು ತಮ್ಮ ಪುಸ್ತಕದಲ್ಲಿ ವಾಜರನ್ನು ಕೂಡ ಶಿಲ್ಪಿಗಳು ಎಂದು ಪರಿಗಣಿಸುತ್ತಾರೆ. 'ಇಂದ್ರಾದಿ ದೇವತೆಗಳು ಪ್ರಸನ್ನ ಚಿತ್ತರಾಗಿ ಅಶ್ವರಥ ಮುಂತಾಗಿ ನಿರ್ಮಾಣ ಕಾರ್ಯಗಳನ್ನು ಸ್ವೀಕರಿಸಿ ವರವಿತ್ತು ತೇಜಸ್ವಿಗಳನ್ನಾಗಿಸಿ ಕಿರಿಯ ವಾಜನನ್ನು ಸಮಸ್ತ

ದೇವತೆಗಳೊಂದಿಗೆ ಮಧ್ಯಮನನ್ನು ವರುಣನೊಂದಿಗೆ ಮತ್ತು ಜೇಷ್ಠ ಋಭಗಳನ್ನು ಇಂದ್ರನೊಂದಿಗೆ ಸಂಬಂಧಿಸಿಗೊಳಿಸಿ ದೈವತ್ವವನ್ನು ಮಾನ್ಯ ಮಾಡಿದರು. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿ–ಕೆ.ಸ್. ಕುಮಾರ್‌ಸ್ವಾಮಿ–ಪುಟ–೧೩೭) ಎಂದು ತಿಳಿದು ಬರುತ್ತದೆ. ಪಾಂಚಾಳರಿಗೆ ಓಜ ಋಭು, ಋಭುಗಳೆಂದು ಕರೆಯುವ ವಾಡಿಕೆ ಇತ್ತೆಂದು ಕಾಣುತ್ತದೆ.

ಈಗಲೂ ಕೂಡ ನಾಗಮಂಗಲ, ಬೆಂಗಳೂರು, ತುಮಕೂರು ಸುತ್ತಮುತ್ತಲಿನ ಕೆಲವು ಹಳ್ಳಿಗಳಲ್ಲಿ ಬಡಗಿಗಳನ್ನು, ಕಮ್ಮಾರರನ್ನು ವಾಜರು ಎಂಬುದಾಗಿಯೇ ಹಳ್ಳಿಯ ಜನರು ಸಂಬೋಧಿಸುವುದನ್ನು ಕೂಡ ಗಮನಿಸಬೇಕಾಗುತ್ತದೆ. ಅರಸಿಕೆರೆ ತಾಲೂಕು ಜಿಗಣಹಳ್ಳಿ ಹೋಬಳಿಯಲ್ಲಿ ಹಾಗೂ ಸಿರಾ ತಾಲೂಕಿನ ಹುಲಿಕುಂಟೆ ಹೋಬಳಿಯಲ್ಲಿ ಕೂಡ ಒಂದೊಂದು ವಾಜರಹಳ್ಳಿ ಎಂಬ ಎರಡು ಗ್ರಾಮಗಳಿವೆ. ಮತ್ತು ಈ ಗ್ರಾಮಗಳಲ್ಲಿರುವ ಒಂದೊಂದು ಶಾಸನದಲ್ಲಿಯೂ ಈ ವಾಜರಹಳ್ಳಿ ಎಂಬ ಉಲ್ಲೇಖಗಳು ಕಂಡು ಬರುತ್ತವೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿ ಕೆ.ಎಸ್. ಕುಮಾರ್‌ಸ್ವಾಮಿ ಪುಟ–೧೩೩) ಎಂದು ಹೇಳುತ್ತಾ ಕ್ರಿ.ಶ. ೧೭೬೫ ರ ಮೊದಲಿನ ಶಾಸನದಲ್ಲಿ ಆ ಹಳ್ಳಿಯಲ್ಲಿ ಪಾಂಚಾನನದವರು ವಾಜರು ಎಂದು ಉಲ್ಲೇಖವಾಗಿದೆ. ಹಾಗಾದರೆ ಇವು ಕುಶಲಕಾರ್ಮಿಕರ ವಾಜರುಗಳು ಹೆಚ್ಚಾಗಿ ವಾಸವಾಗಿದ್ದ ಹಳ್ಳಿಗಳಾಗಿರಬಹುದೆಂದು ಅಭಿಪ್ರಾಯಕ್ಕೆ ಬರಬಹುದು.

ಅಥರ್ವೇದದಲ್ಲಿ ರಥವನ್ನು ತಯಾರಿಸುವ ರಥಕಾರ ಮತ್ತು ಲೋಹದ ಕೆಲಸ ಮಾಡುತ್ತಿದ್ದ ಕಮ್ಮಾರ ಎಂಬ ಕಲಾವಿದರು 'ವಿಶ್' ಎಂಬ ಪ್ರತಿಷ್ಠಿತ ವರ್ಗಕ್ಕೆ ಸೇರಿದವರೂ, ಸಮಾಜದಲ್ಲಿ ಉತ್ತಮ ಸ್ಥಾನವನ್ನು ಹೊಂದಿದವರೂ, ರಾಜನಿಗೆ ಬೇಕಾದವರೂ ರಾಜಕರ್ತೃಗಳಿಗೆ (King Maker) ಸಮಾನಾದವರೂ ಆಗಿದ್ದರು. (ಶೂದ್ರಸ್ ಆಫ್ ಏನ್ಷಿಯಂಟ್ ಇಂಡಿಯಾ–ಪುಟ–೫೭) ರಾಮಶರಣ್ ಶರ್ಮರವರು ಗುರುತಿಸಿದ್ದಾರೆ. ವಿದ್ವಾಂಸರ ಈ ಮಾತುಗಳು ಬಹುಶಃ ಕಮ್ಮಾರನಿಗೆ ಸಮನಾದ ಲೋಹದ ಕೆಲಸದ ಕಮ್ಮಾರನಿಗೆ ಅರ್ಥರ್ವೇದ ಕಾಲದಲ್ಲಿ ಇದ್ದ ಅತ್ಯುತ್ತಮವಾದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಯಲ್ಲಿದ್ದರೆಂದು ಮನವರಿಗೆ ಮಾಡಿಕೊಡುತ್ತದೆ. ಹೀಗೆ ನಾವು ನಮ್ಮ ಕನ್ನಡ ಶಾಸನೋಕ್ತ ವಿಶ್ವಕರ್ಮ, ತ್ವಷ್ಟ, ಓಜ, ಕಮ್ಮಾರ, ಬಡಿಗಿ ಎಂಬ ಕುಶಲ ಕೆಲಸಗಾರರ ಮೂಲವನ್ನು ವೇದಗಳಲ್ಲಿ ಗುರುತಿಸಬಹುದು. ಮತ್ತು ವೇದಕಾಲೀನ ಸಮಾಜದಲ್ಲಿ ಇವರಿಗೆ ಇದ್ದ ಉತ್ತಮವಾದ ಸ್ಥಾನಮಾನವನ್ನು ತಿಳಿದುಕೊಳ್ಳಬಹುದು.

ಚಿನ್ನ ಬೆಳ್ಳಿಯ ಕೆಲಸ ಮಾಡುವ ಅಕ್ಕಸಾಲಿಗರನ್ನು 'ತಟ್ಟಾನ್' ಎಂಬುದಾಗಿ ತಮಿಳಿನಲ್ಲಿ ಕರೆಯಲಾಗಿದೆ. ಇದು ವೇದಗಳಲ್ಲಿ ಉಪಲಬ್ಧವಿರುವ ತ್ವಷ್ಟ ಎಂಬ ಪದದಿಂದ ಉತ್ಪನ್ನವಾಗಿದೆ ಪ್ರಾಚೀನ ಕರ್ನಾಟಕದ ಕೆಲವು ಕೆಲಸಗಾರರಲ್ಲಿಯೇ ಈ ಪರಿಭಾವನೆಯು ಬಳಕೆಯಾಗಿತ್ತು. ಕ್ರಿ.ಶ. ಸು. ೪ನೇ ಶತಮಾನದಿಂದಲೂ ಕನ್ನಡದ ಪಂಚಕಾರರಲ್ಲಿ ಈ ಪರಿಕಲ್ಪನೆ ಜಾಗೃತವಾಗಿತ್ತು. ಪ್ರಾಚೀನ ಕರ್ನಾಟಕದ ತಾಮ್ರ ಶಾಸನಗಳಲ್ಲಿ ಕೊರೆದ ಕೆಲಸಗಾರರಲ್ಲಿ ಕಂಡು ಬರುವ ತ್ವಷ್ಟ ಎಂಬ ಪರಿಭಾಷೆಯು ವೇದಕಾಲವಷ್ಟೆ ಅಲ್ಲದೆ ವೇದ ಪೂರ್ವದಿಂದಲೂ ಅಸ್ತಿತ್ವದಲ್ಲಿದೆ. ಋಗ್ವೇದ ಸಂಹಿತೆಯಲ್ಲಿ ಪ್ರಸ್ತಾಪ ಮಾಡಲಾಗಿರುವ ವಾಶೀ ಹಸ್ತನಾದ ತ್ವಷ್ಟರ ಉಲ್ಲೇಖವನ್ನು ತೆಗೆದುಕೊಂಡು 'ಬರೋ' ಎಂಬ ವಿದ್ವಾಂಸರು ಇಲ್ಲಿ ಬರುವ 'ವಾಶೀ' ಎಂಬ ಸಂಸ್ಕೃತ ಪದವು ಮೂಲತಃ 'ಕಂದಮಿಳ' ಭಾಷೆಗೆ ಸೇರಿದ್ದು ಎಂದು ಹೇಳಿರುವುದನ್ನು ಪರಿಗಣಿಸಿ ಶಂಬಾ ಜೋಷಿಯವರು ಈ ಕಂದಮಿಳ ಭಾಷೆಯ ಬಾಚಿ ಮರವನ್ನು ಕೆತ್ತಲು ಉಪಯೋಗಿಸುವ ಉಪಕರಣ ಎಂಬ ಅರ್ಥ ಬರುತ್ತದೆ. ಬಾಚಿ (ವಾಶೀ)ಯನ್ನು ಕೈಯಲ್ಲಿ ಹಿಡಿದಿರುವ ತ್ವಷ್ಟ (ತಟ್ಟಾರ್) ಎಂಬ ಪರಿಭಾಷೆಯನ್ನು ಇಂದೂ ಉಳಿಸಿಕೊಂಡು ಬಂದಿರುವ ಕಾಳಮ್ಮ ದೇವತೆಯನ್ನು ಪೂಜೆಮಾಡುವ ಪಾಂಚಾಳರು ಕಂದಮಿಳ ಮೂಲದವರು ಎಂದು ಅಭಿಪ್ರಾಯ ಪಡುತ್ತಾರೆ. (ಋಗ್ವೇದ ಸಾರ ನಾಗಪ್ರತಿಮಾ ವಿಚಾರ–ಪು–೨೮೬) ಮತ್ತೊಬ್ಬ ವಿದ್ವಾಂಸರಾದ 'ಡಿ.ಟಿ. ಕೋಸಂಬಿಯ'ವರು ಋಗ್ವೇದದಲ್ಲಿ ಉಕ್ತವಾಗಿರುವ ತ್ವಷ್ಟ ಮತ್ತು ಅವನ ಅನುಯಾಯಿಗಳು ಸಿಂಧೂ ಸಂಸ್ಕೃತಿಯ ಮೂಲದವರಿರಬೇಕೆಂದು ಸರಿಯಾಗಿ ಊಹೆ ಮಾಡಿದ್ದಾರೆಂದು ಕುಮಾರಸ್ವಾಮಿಯವರು ಅಭಿಪ್ರಾಯ ಪಡುತ್ತಾರೆ. ಸಿಂಧು ನಾಗರಿಕತೆಯಲ್ಲಿ ವ್ಯವಸಾಯವು

ಉತ್ಕೃಷ್ಟವಾಗಿ ಮತ್ತು ಜೀವನಾವಶ್ಯಕತೆಗಳು ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬುದು ನಿಜವಾದರೆ ಆ ಕಾಲಕ್ಕೆ ವ್ಯವಸಾಯ ಉಪಕರಣಗಳನ್ನು ತಯಾರಿಸಲು ಮನೆಗಳನ್ನು ತಯಾರಿಸಲು ಒಂದು ಜನಾಂಗ ಇದ್ದಿರಲೇಬೇಕೆಂದರೆ ಅವರು ಪಾಂಚಾಳರೇ ಯಾಕಾಗಿರಬಾರದು ಈ ರೀತಿಯಾದಂತ ಊಹೆಗೂ ಅವಕಾಶವಿದೆ. ಅಂತ ವರ್ಗ ಆಗ ಇದ್ದಿತೆಂದು ಭಾವಿಸಬಹುದು.

ಕರಕುಶಲ ಕಲೆಗಳ ಉಗಮವನ್ನು ಕುರಿತು ನಿರ್ಧಿಷ್ಟವಾಗಿ ಹೇಳುವುದು ಕಷ್ಟಸಾಧ್ಯವಾದ ಸಂಗತಿಯಾಗಿದೆ. ಈ ಕುರಿತಂತೆ ಸಂಪ್ರದಾಯಿಕ ದೃಷ್ಟಿ ಒಂದು ಬಗೆಯದು. ಅದು ಕರಕುಶಲ ಕಲೆಗಳ ಉಗಮ ದೈವ ಮೂಲವಾದುದು ಅಂದರೆ ಕಲೆಗಳು ತ್ರಿಮೂರ್ತಿಗಳಿಂದ ಋಷಿಗಳಿಗೆ, ಋಷಿಗಳಿಂದ ದೇವಮಾನವರಿಗೆ, ಶಿಲ್ಪಿಗಳಿಗೆ ಬೋಧಿತವಾಗಿ ಲೋಕದ ತುಂಬಾ ವಿಕಸನ ಹೊಂದಿದವು. ಈ ಹಿನ್ನಲೆಯಲ್ಲಿ ವೇದ, ಶಾಸ್ತ್ರ, ಪುರಾಣಗಳು ವಿಶ್ವಕರ್ಮನನ್ನು ಎಲ್ಲಾ ಸೃಜನಶೀಲತೆಯ ವ್ಯಕ್ತಿರೂಪವಾಗಿ ಕಂಡಿವೆ. ಆದುದರಿಂದಲೇ ವಿಶ್ವಕರ್ಮನನ್ನು ವಿಶ್ವರಚನಾಕಾರ, ದೇವಶಿಲ್ಪಿ, ಸರ್ವಕಲೆ ಕರಕುಶಲ, ಕಲಾಗುರು ಎಂದು ಮುಂತಾಗಿ ವರ್ಣಿಸಿ ದೇವತೆ ಎಂದು ಕರೆಯಲಾಗಿದೆ. ವಿಶ್ವಕರ್ಮ ಜನಿತ ಕುಶಲಕಲೆಗಳೆಲ್ಲವೂ ವಂಶಸೂತ್ರ ಹಿಡಿದು ವಿಕಾಸಗೊಂಡವು ಎಂಬುದು ತಿಳಿದುಬರುತ್ತದೆ. ವಿಶ್ವಕರ್ಮನಿಗೆ ತ್ವಷ್ಟ, ಮನು, ಮಯ, ಶಿಲ್ಪಿ ಮತ್ತು ದೈವಜ್ಞರೆಂಬ ಈ ಐದು ಜನ ಮಕ್ಕಳು ಕಬ್ಬಿಣ, ಕಾಷ್ಠ, ತಾಮ್ರ, ಶಿಲೆ, ಮತ್ತು ಚಿನ್ನ ಹೀಗೆ ಪಂಚ ಸಾಮಾಗ್ರಿಗಳಲ್ಲಿ ಕುಶಲಿಗಳಾಗಿದ್ದನ್ನು ಸ್ಕಂದ, ಬ್ರಹ್ಮಾಂಡ, ವಶಿಷ್ಠ, ಪುರಾಣಾದಿಗಳು ಹೇಳುತ್ತವೆ. ಈ ಪಂಚ ಕರ್ಮಗಳನ್ನು ನಿರ್ಮಿಸಿದವರನ್ನು ಪಾಂಚಾಳರು ಎಂದು ಕರೆದಿರುವುದು ಸೂಕ್ತವೇ ಆಗಿದೆ.

ಮಾನಸಾರ ಎಂಬ ಶಿಲ್ಪಶಾಸ್ತ್ರದಲ್ಲಿ ಬ್ರಹ್ಮನ ಚತುರ್ಮುಖಗಳಿಂದ ದೇವ ಶಿಲ್ಪಿಗಳಾದ ವಿಶ್ವಕರ್ಮ ಮನು,ಮಯ, ಶಿಲ್ಪಿ, ತ್ವಷ್ಟರು ಹುಟ್ಟಿದರು ಇವರೇ ವಾರ್ಧಕಿ, ಸ್ಥಪತಿ, ಸೂತ್ರಗ್ರಾಹಿ ಮತ್ತು ಕುಶಲಕಲೆಗಳ ಉಗಮ ಮತ್ತು ವಿಕಾಸದ ಪರಂಪರೆಯನ್ನು ವಿವರಿಸುತ್ತದೆ. ತಮ್ಮ ಜೀವನವು ಕೃಷಿಕರನ್ನು ಅವಲಂಬಿಸಿ ಜೀವಿಸದ್ದರೆ ಅಂತಹವರ್ಗ ಈ ಪಾಂಚಾಳರಾಗಿದ್ದಾರೆ. ತನ್ನ ಕರಕುಶಲ ಕಲೆಯನ್ನು ತುಂಬಾ ನೈಪುಣ್ಯತೆಯಿಂದ ದೇಶೀಯ ತಂತ್ರಜ್ಞಾನಗಳಿಂದ ಬೆಳೆಸುಕೊಂಡು ಬಂದವರು. ಭಾರತದಲ್ಲಿ ಕರಕುಶಲಕರ್ಮಿಗಳು ಎಲ್ಲಾ ಸಮುದಾಯಕ್ಕೆ ತಮ್ಮನ್ನು ಉಪಯೋಗಿಸಲ್ಪಟ್ಟಿದ್ದಾರೆ. ಸಮಾಜದಲ್ಲಿ ಇರುವ ಎಲ್ಲಾ ವರ್ಗಗಳಲ್ಲಿಯೂ ಸಂಬಂಧಿಕರಾಗಿ ಜೀವಿಸುವುದನ್ನ ನಾವು ಕಾಣಬಹುದು. ಪಾಂಚಾಳರು ವಾಸಿಸದ ಊರು ಅದು ಒಂದು ಊರೆ? ಇವರಿಲ್ಲದ ಊರು ಇರಲಿಲ್ಲ ಈಗಲೂ ಕೂಡ ಇಲ್ಲ ಎನ್ನಬಹುದು.

ಜಗತ್ತಿನ ಸೃಷ್ಟಿಕರ್ತರು (Makers of the World) ಎಂದು ವಿಶ್ವಕರ್ಮರನ್ನು ಹೆಸರಿಸಿ ಕರ್ನಾಟಕದಾದ್ಯಂತ ಸಂಚರಿಸಿ ಅಧ್ಯಯನವನ್ನು ಜಾನ್ ಬರೋವರ್ ಕೈಗೊಂಡಿರುವ ವಿಷಯ ಉತ್ತಮವಾದುದೆ. ನಮ್ಮ ಸಂಸ್ಕೃತಿಯನ್ನು ಅಂದರೆ ಕಲೆ, ಇತಿಹಾಸ ಹೀಗೆ ಹತ್ತು ಹಲವಾರು ಸಂಸ್ಕೃತಿಯನ್ನು ನಮ್ಮ ದೇಶಕ್ಕೆ ಬಂದು ಅಧ್ಯಯನ ಮಾಡಿ ನಮ್ಮನ್ನು ಜ್ಞಾನದ ದಿಗಂತಕ್ಕೆ ಕೊಂಡೊಯುವ ಕೆಲಸ ಮಾಡಿದರು ಎಂದರೆ ಪಾಶ್ಚಾತ್ಯರು. ಅವರ ಉದ್ದೇಶ ಬೇರೆ ಇದ್ದರೂ ನಮಗದು ಬೇಡವಾದ ವಿಚಾರ, ನಮ್ಮ ಸಂಸ್ಕೃತಿಯನ್ನು ಅವರಿಂದಲೇ ಗುರುತಿಸಿಕೊಳ್ಳುವ ದೌರ್ಭಾಗ್ಯ ಒದಗಿದ್ದು ಇರುಸುಮುರುಸಾದಂತೆ ಕಾಣುತ್ತದೆ.

ಗ್ರಾಮ ಜೀವನದ ಕ್ರಿಯಾಶೀಲ ಪಾಂಚಾಳರು ತಮ್ಮದೇ ಆದ ತತ್ವವಿವೇಚನೆ, ನಡೆನುಡಿ, ನಂಬಿಕೆಗಳನ್ನು ಬಿಂಬಿಸುವ ಶಿಷ್ಟ ಸಮುದಾಯದವರಾಗಿದ್ದಾರೆ. ವಿಶ್ವಕರ್ಮ ಪಾಂಚಾಳರು, ಎಂದು ಗೌರವಾನ್ವಿತವಾಗಿ ಕರೆಸಿಕೊಳ್ಳುವ ಆಚಾರಿಗಳು ಸಾಮಾನ್ಯವಾಗಿ ಏಕಪ್ರಕಾರದ ನಂಬಿಕೆಗಳು ಆಚರಣೆಗಳಿವೆ. ಅವರವರ ವೃತ್ತಿಗಳಲ್ಲಿ ವ್ಯತ್ಯಾಸಗಳಿದ್ದರೂ ಗೋತ್ರ ಮೂಲವಾದ ಪಂಥಪಂಗಡಗಳಿದ್ದರೂ ಪಾಂಚಾಳರು ಎಲ್ಲದರಲ್ಲಿ ಒಂದೇ ಆಗಿರುವ ಜನರು. ಈ ಜನಾಂಗದ ಬಗೆಗೆ ಸಂಸ್ಕೃತದ 'ಮೂಲಸ್ತಂಭ ಪುರಾಣ' 'ವಿಶ್ವಕರ್ಮ ಪುರಾಣ', ರಥಾದಿಕರಣ ಮುಂತಾದ ಗ್ರಂಥಗಳಿವೆ. ಇವೆಲ್ಲವು ಪಾಂಚಾಳರ ಮೂಲವನ್ನು ಮತ್ತು ಸಂಸ್ಕೃತಿಯನ್ನು ತಿಳಿಯಲು ಸಹಾಯಕಗಳಾಗಿ ಅವರ ಮಾಹಿತಿಗಳಿಗೆ ಮೂಲಾಧಾರವಾಗಿ ಕಾಣುತ್ತವೆ.

ಗ್ರಂಥಗಳ ಉಲ್ಲೇಖ

ಪಾಂಚಾಳರ ಮೂಲವನ್ನು ಮತ್ತು ನಿರ್ವಹಿಸುತ್ತಿದ್ದ ಕೆಲಸವನ್ನು ನಾವು ದಾಖಲೆಯ ಮೂಲಕ ಅಂದರೆ ಶಾಸನ, ತಾಮ್ರಪಟ್ಟಿ, ಕುರುಹು (ಪಳಿಯುಳಿಕೆ) ಪುರಾಣ, ಕಾವ್ಯಗಳಲ್ಲಿ ಆಧಾರಗಳು ದೊರೆಯುತ್ತವೆ. ಇಲ್ಲಿ ಗ್ರಂಥಗಳಲ್ಲಿ ಇವರ ಮೂಲವನ್ನು ತಿಳಿಯಬಹುದು. 'ಸನಾತನ ವಿಶ್ವಬ್ರಾಹ್ಮಣ ಧರ್ಮದ ಮೂಲ ಆದಿದೇವ ವಿಶ್ವಕರ್ಮ. ವಿಶ್ವದ ಸೃಜನ ರಕ್ಷಣೆ, ಆಗುಹೋಗುಗಳು ಯಾವನಿಂದ ಆಗುವುವೋ ಅವನು ವಿಶ್ವಕರ್ಮ'ನೆಂದು 'ಪಾಣಿನಿಯ ಅಷ್ಟಾಧ್ಯಾಯ'ದಲ್ಲಿ ವರ್ಣಿಸಿದ್ದಾನೆ. ಅಂದರೆ ಈ ಪಾಂಚಾಳರೆನಿಸಿಕೊಂಡ ವಿಶ್ವಕರ್ಮರು ಆ ಕಾಲದಲ್ಲಿ ಎಲ್ಲಾ ಜವಾಬ್ದಾರಿಗಳನ್ನು ಹೊತ್ತಿದ್ದರೆಂಬ ಅಂಶ ಬೆಳಕಿಗೆ ಬರುತ್ತದೆ.

'ಯಾವನು ವೇದಗಳಿಂದಲೇ ಅಳೆಯಲು ಸಾಧ್ಯನೋ, ವಾಕ್‌ಕ್ರಿಯೆಗಳಿಗೆ ಒಡೆಯನೋ, ಶಾಶ್ವತನೋ ಆ ವಿಶ್ವಕರ್ಮನಿಗೆ ನಮಸ್ಕರಿಸುತ್ತೇನೆ'. ಎಂದು 'ಮನುಸ್ಮೃತಿ'ಯಲ್ಲಿ ಮನು ಸ್ತುತಿಸಿದ್ದಾನೆ. ಈ ಮನುವಿನ ವಾಕ್ಯವನ್ನು ನೋಡಿವರೆ ವಿಶ್ವಕರ್ಮರು ಅತೀ ಪುರಾತನ ಕಾಲದಿಂದಲೇ ಅಸ್ಥಿತ್ವದಲ್ಲಿದ್ದರು ಮತ್ತು ದೈವತ್ವಕ್ಕೆ ಹೋಲಿಸಿಕೊಂಡವರು ಎಂದು ಭಾವಿಬಹುದು.ವಿಶ್ವಕರ್ಮ ಪರಮಾತ್ಮನ ಪಂಚಮುಖಗಳಿಂದ ಪಂಚಬ್ರಹ್ಮರು ಜನಿಸಿದ ಅವರುಗಳು ಮನು, ಮಯ, ತ್ವಷ್ಟ, ಶಿಲ್ಪಿ, ವಿಶ್ವಜ್ಞ ಎಂಬ ಪಂಚಬ್ರಹ್ಮರು ಜನಿಸಿದರೆಂದು ಉಪನಿಷತ್‌ಗಳಲ್ಲಿ ಉಲ್ಲೇಖವಾಗಿವೆ ಎಂದು ತಿಳಿದುಬರುತ್ತದೆ. (ಜಾನಪದ ಸಾಹಿತ್ಯ ದರ್ಶಿನಿ–ಡಾ. ವೃಷಬೇಂದ್ರಸ್ವಾಮಿ) ೧೭ನೇ ಶತಮಾನದ ಕರಸ್ಥಲದ 'ನಾಗಲಿಂಗ ಚರಿತೆ' ಎಂಬ ಕಾವ್ಯದಲ್ಲಿ ಈ ಕುಶಲಕೆಲಸಗಾರರು ಮನು, ಮಯ, ತ್ವಷ್ಟ, ಶಿಲ್ಪಿ, ದೈವಜ್ಞ ಎಂಬ ಐದು ಗೋತ್ರಗಳನ್ನು ಉಳ್ಳವರಾಗಿದ್ದರು ಎಂದು ಹೇಳಲಾಗಿದೆ. (ಗ್ರಾಮೀಣ ವೃತ್ತಿಗಳು–ಗ್ರಾಮೀಣ ಸಂಸ್ಕೃತಿ ಮಾಲೆ (ಸಂ) ದೇವೇಂದ್ರ ಕುಮಾರ ಹಕಾರ) ಈ ಪಾಂಚಾಳರು ಗೋತ್ರದ ವಿವರಗಳನ್ನು ನೀಡಿ ಅವರ ಇರುವಿಕೆಯನ್ನು ತಿಳಿಸುತ್ತದೆ. ಅಂದೇ ಅವರು ವ್ಯವಸ್ಥಿತವಾದ ಜೀವನದ ಸಂಸ್ಕೃತಿಯನ್ನು ಬೆಳಸಿಕೊಂಡಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ.

'ಶಿಲ್ಪಶಾಸ್ತ್ರ' ಗ್ರಂಥದಲ್ಲಿ ಈ ರೀತಿಯಾಗಿ ತಿಳಿಸುತ್ತದೆ. "ಸರ್ವಕಲಾಧಾರ ಭೂತ ಚಿತ್ರಕಲಾಭಿಜ್ಞೇನ– ವಿಶ್ವಕರ್ಮಚಾರ್ಯ" ಎಂದು ಹೇಳುತ್ತಾ ಮುಂದುವರೆದು

"ವರ ವೆಸನಿಟ್ಟಗೆ ಕಲಾಕಣ್ದರಣೆಯ ಲೊಪ್ಪದೊಳ್ ಚಿತ್ರದೊಳ್
ಪ್ರಾಸದೋತ್ಯರ ವಿಧ್ಯಾಕುಸಳನಿದಂ ಕಂಡರಸಿದಂ(ಮಾದೋಜ)"
ಮರ ವೆಸದೊಳ್ ಕಲ್ದೆಸದೊಳ್ ವರಪತ್ರಭೇದ.....ಮ್ಮೆಂಗಳೊಳುಂ
ದೂರೆ ವಿಶ್ವಕರ್ಮನುಳಿದ.......ಶ್ರೀ ಸೂತ್ರಧಾರಿ ಬಮ್ಮ...." (south Indian Incrisptions XIII, ಪುಟ–೧೬೫)
"ಹಸ್ತಕುಶಲತಯೊಳ್ ಹೇಮಕರ್ಮ, ಲೋಹಕರ್ಮ, ಶಿಲಾಕರ್ಮ, ರತ್ನಕರ್ಮ
ಕಾಷ್ಠಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾ ಲಕ್ಷಣ ಸಮಸ್ತ ಹಸ್ತ
ಹಸ್ತ ಕುಶಲತೆಯೊಳ್ (ಎ.ಕ. VI ಕೊಪ್ಪ ೬೮ ಕ್ರಿ.ಶ. ೧೧೧೬)

ಇಲ್ಲಿ ಉಲ್ಲೇಖವಾಗಿರುವ ಶಾಸನಗಳು ಕರಕುಶಲಗಾರರು ಆದ ಪಾಂಚಾಳರು ಅಥವಾ ವಿಶ್ವಕರ್ಮರು ಮರಗೆಲಸ, ಚಿತ್ರಕಲೆ, ಶಿಲ್ಪಕಲೆ, ಲೋಹಕೆಲಸ ಇತ್ಯಾದಿ ಸಮಾಸ್ತ ಕರ ಕುಶಲತೆಯಲ್ಲಿ ಪರಿಣತಿಯನ್ನು ಹೊಂದಿದ್ದರು ಎಂಬುದನ್ನು ಈ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ನೋಡಿದರೆ ಎಲ್ಲ ವಿಧವಾದ ಶಿಲ್ಪಕರ್ಮ ಸಂಬಂಧಿ ವಿಷಯಗಳಲ್ಲಿ ಕೌಶಲ್ಯವನ್ನು ಹೊಂದಿದ್ದರು ಎಂದು ತಿಳಿಯಬಹುದಾಗಿದೆ. ಪಾಂಚಾಳರ ಬಗ್ಗೆ ಒಬ್ಬೊಬ್ಬ ವಿದ್ವಾಂಸರು ಒಂದೊಂದು ಹೇಳಿಕೆಗಳನ್ನು ನೀಡುತ್ತಾರೆ. ಇವರನ್ನು ಕುರಿತು ಒಂದು ಜಾತಿ ಎಂಬ ಅರ್ಥದಲ್ಲಿ ಬಳಕೆಯಾಗಿರುತ್ತದೆ. ವಿಜಯನಗರದರಸರ ಕಾಲದಲ್ಲಿ ರೂಪಾಂಗಳ ಹಾಗೂ ಪಾಂಚಾಳರನ್ನು ಡಾ. ಎ.ವಿ ವೆಂಕಟರತ್ನಂ ಚರ್ಚಿಸಿದ್ದಾರೆ. ಅಕ್ಕಸಾಲಿಗರು, ಕಮ್ಮಟದ ಆಚಾರಿಗಳು ಕಮ್ಮಾರರು, ಮರಗೆಲಸದವರು ಮತ್ತು ಶಿಲ್ಪಿಗಳನ್ನು ಒಟ್ಟಾಗಿ ವೀರ ಪಾಂಚಾಳರು ಎಂದು ಕರೆಯುತ್ತಿದ್ದರು. ಪಂಚಣಂವರು ಪಂಚನಾನಂದರು, ಪನಚನುಲು, ಪಾಂಚಾಲರು ಎಂಬುದಾಗಿ

ಶಾಸನಗಳಲ್ಲಿ ಬರುವ ಪರಿಭಾಷೆಗಳು ಈ ಐದು ವಿಧವಾದ ಕೆಲಸಗಾರರು ಶ್ರೇಣಿಯನ್ನು ಕುರಿತದ್ದಾಗಿವೆ ಎಂದಿದ್ದಾರೆ. (ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ ಪುಟ- ೧೫೩)

ಕ್ರಿ.ಶ. ೧೩೬೨ ರ ಒಂದು ಶಾಸನವು ಸಮಸ್ತ ವೀರಪಾಂಚಾಲರು ಮನು ವಂಶದ ಮೊದಲಿಗರು ಮತ್ತು ಪ್ರಶಂಸಾರ್ಹವಾದಂತ ಗುಣವುಳ್ಳವರು ಎಂದು ಮುಂತಾಗಿ ತೆಂಕಣಾಂಬಿಯ ವೀರ ಪಾಂಚಾಳರ ವಿಷಯವಾಗಿ ತಿಳಿಸುತ್ತದೆ. ವಿಜಯನಗರದರಸರ ಆಳ್ವಿಕೆಯಗೊಳಪಟ್ಟ ಮತ್ತೊಂದು ಶಾಸನ ಹೇಳುವಂತೆ ಸದಾಶಿವರಾಯನ ಆಳ್ವಿಕೆಯ ಬೇಲೂರಿನಲ್ಲಿ ರೈತರು ಮತ್ತು ಪಾಂಚಾಳರ ನಡುವೆ ಒಂದು ವಿವಾದ ಉಂಟಾಯಿತು. ಕೆಲವು ನಿಯೋಗಗಳು ಮತ್ತು ಸೇನಭೋವ ಶೆಟ್ಟಿಗಳ ಸಮಕ್ಷಮ ಒಪ್ಪಂದವನ್ನು ಏರ್ಪಡಿಸಲಾಗುತ್ತದೆ. ಈ ತೀರ್ಮಾನದ ಪ್ರಕಾರ ಬೇಲೂರಿನ ದಕ್ಷಿಣ ಬೀದಿಯಲ್ಲಿ ಪಾಂಚಾಲರು ಮನೆಗಳನ್ನು ಕಟ್ಟಲು ತಮ್ಮ ಕೋಮಿನ ವಿಧಿಯನ್ನು ಆಚರಿಸಲು ವಿದ್ಯಾನಗರದ ರಥೋತ್ಸವದ ಕಾಲದಲ್ಲಿ ಪಾಂಚಾಳರಿಗೆ ಕೊಟ್ಟಿದ್ದ ಹಕ್ಕನ್ನು ಮತ್ತು ಸ್ಥಾನಮಾನಗಳನ್ನು ಬೇಲೂರಿನ ಚನ್ನಿಗರಾಯನ ದೇವಸ್ಥಾನದಲ್ಲಿಯೂ ಅನುಭವಿಸಬಹುದೆಂದು ತೀರ್ಮಾನಿಸಲಾಗಿತ್ತು. ಹೀಗೆ ಪಾಂಚಾಳರ ಅವಶ್ಯಕತೆಯನ್ನು ಮತ್ತು ಇರುವಿಕೆಯನ್ನು ನೋಡಿದರೆ ವೇದಕಾಲಕ್ಕಿಂತ ಹಿಂದೆಯೇ ತಮ್ಮ ಮೂಲವು 'ಉತ್ಪಾದನಾ ವ್ಯವಸ್ಥೆ'ಯ ಮೂಲಕ ಕಂಡುಕೊಳ್ಳಲು ಪ್ರಯತ್ನಿಸುತ್ತಲೇ ಬಂದಿರುವ ಈ ಪಾಂಚಾಳ ಸಮುದಾಯವು ಇತರ ವರ್ಗ ಸಮುದಾಯಗಳ ದೋರಣೆಯನ್ನು ಖಂಡಿಸುವುದು ಇಲ್ಲಿ ಕಾಣಬಹುದು. ಜೊತೆಗೆ ಸಾಮಾಜಿಕ ಸ್ಥಾನಮಾಕ್ಕೆ ಇತರರು ಸಹಕರಿಸುತ್ತಿದ್ದರು ಎಂಬ ಅಂಶವನ್ನು ಕಾಣಬಹುದು.

ಕ್ರಿ.ಶ. ಪೂರ್ವಯುಗದಿಂದ ವಿಶ್ವಕ್ಕೆ ಉತ್ಪಾದನಾ ವ್ಯವಸ್ಥೆಗೆ ತಮ್ಮದೇ ಆದ ಕೊಡುಗೆಯನ್ನು ಪಾಂಚಾಳರು ಕೊಡುತ್ತಲೇ ಬಂದಿರುವುದು ಖಚಿತ. ಆದಿಮಾನವ ಕೃಷಿಯ ಮೂಲಕ ಆಹಾರ ಉತ್ಪಾದನೆ ಪ್ರಾರಂಭಿಸಿದ ಮೇಲೆ ಉತ್ಪಾದನೆಗೆ ಬೇಕಾಗುವ ಅನೇಕ ಉಪಕರಗಳನ್ನು ಸೃಷ್ಟಿಸುವ ಮೂಲಕ ತಮ್ಮ ಅಸ್ಥಿತ್ವವನ್ನು ವಿಶ್ವಕರ್ಮರು ಬೆಳ್ಳಿ ಚುಕ್ಕಿಯಂತೆ ಎಲ್ಲರಿಗೂ ಕಂಡರು ಅಥವಾ ತಮ್ಮನ್ನು ಗುರುತಿಸಿಕೊಂಡರು. ಖನಿಜ ಸಂಪತ್ತುಗಳನ್ನು ಶೋಧನೆ ಮತ್ತು ಸಂಸ್ಕರಣೆ ಕಂಡುಕೊಂಡ ಮೇಲೆ ಉತ್ಪಾದನಾ ವ್ಯವಸ್ಥೆ ಮತ್ತು ಪಾಂಚಾಳರ ಘನತೆ ಗೌರವಗಳು ಅಭಿವೃದ್ಧಿಹೊಂದ ತೊಡಗಿದವು. ಬೆಂಕಿಯ ಉಪಯೋಗ ಕಂಡುಕೊಂಡ ಮೇಲೆ ಇವರ ದಿಕ್ಕು ಬದಲಾಯಿತು. ಹೀಗಾಗಿ ಇವರು ಬೆಂಕಿಯನ್ನು ಶಕ್ತಿದೇವತೆ ಎಂದು ಆರಾಧಿಸ ತೊಡಗಿದರು. ತಾಮ್ರ, ಹಿತ್ತಾಳೆ, ಬೆಳ್ಳಿ, ಬಂಗಾರ, ಕಂಚು, ಕಬ್ಬಿಣ, ಕಟ್ಟಿಗೆ ಮುಂತಾದ ಕಚ್ಚಾಸಾಮಗ್ರಿಗಳನ್ನು ಕಂಡುಹಿಡಿದ ಮೇಲೆ ಅನೇಕ ವೃತ್ತಿಗಳು ಹುಟ್ಟಿಕೊಂಡವು. ಈ ಎಲ್ಲಾ ವೃತ್ತಿಗಳನ್ನು 'ರಾಷ್ಟ್ರೀಯ ಉತ್ಪಾದನಾ ವ್ಯವಸ್ಥೆ' ಎಂದು ಹಲವು ವಿದ್ವಾಂಸರು ಕರೆದರು. ಪ್ರಕೃತಿಯನ್ನೇ ಶಕ್ತಿದೇವತೆ ಎಂದು ಆರಾಧಿಸುತ್ತಿದ್ದ ಜನತೆಗೆ ಆ ಶಕ್ತಿಯನ್ನೇ ಮೂರ್ತರೂಪದಲ್ಲಿ ಸೃಷ್ಟಿಸಿಕೊಂಡವರಲ್ಲಿ ಈ ಪಾಂಚಾಳರು ಒಬ್ಬರಾಗಿ ಕಂಡುಬರುತ್ತಾರೆ.

ಸಾಮಾನ್ಯವಾಗಿ ಪಾಂಚಾಳರು ಕನಿಷ್ಠ ಮೂರು ವೃತ್ತಿಗಳಲ್ಲಿ ಪರಿಣಿತರಾಗಿರುತ್ತಾರೆ. ಬಡಗಿಯು ಕಮ್ಮಾರಿಕೆ, ಶಿಲ್ಪಿ ಕೆಲಸವನ್ನಾದರೂ ಮಾಡುತ್ತಿರುತ್ತಾರೆ. ಶಿಲ್ಪಿಗಳು ಬಡಗಿ, ಕಮ್ಮಾರಿಕೆಯನ್ನು ಕಲಿತಿರುತ್ತಾರೆ. ಈ ಪಂಚ ವೃತ್ತಿಗಳು ಈ ಪಾಂಚಾಳರೆಲ್ಲರೂ ಒಂದೇ ಎಂಬುದನ್ನು ಎತ್ತಿ ಹೇಳುತ್ತಾ ಈ ವೃತ್ತಿಗಳನ್ನು ಕರಗತ ಮಾಡಿಕೊಂಡಿದ್ದರೂ, ಅರವತ್ನಾಲ್ಕು ಕಲೆಗಳಲ್ಲಿ ನಿಪುಣರು ಎಂದು ಕರೆಸಿಕೊಂಡಿದ್ದಾರೆ. ಪಾಂಚಾಳ ಸಮುದಾಯದ ಬ್ರಾಹ್ಮಣರು ಪೂಜೆ, ಪುನಸ್ಕಾರ ಆಚಾರ, ವಿಚಾರ, ಮಂತ್ರಗಿಂತ್ರ, ಪುರೋಹಿತಿಕೆ, ಜೊತೆ ಜೊತೆಗೆ ಗ್ರಾಮ ದೇವತೆಗಳ ಪೂಜಾರಿಕೆಯನ್ನು ಮತ್ತು ಪಂಚ ವೃತ್ತಿಗಳಲ್ಲಿ ತೊಡಗಿರುವುದನ್ನು ನಾವು ಇಂದಿಗೂ ಕಾಣಬಹುದು. ವೇದ ಬ್ರಾಹ್ಮಣರೆನಿಸಿಕೊಂಡವರು ಏನೇ ಬುದ್ಧಿ ಶಕ್ತಿ ಹೊಂದಿದ್ದರೂ ಕೇವಲ ಮಂತ್ರ ಪಠಣದಿಂದ ಪುರೋಹಿತಿಕೆಯಿಂದ ತಮ್ಮ ಉಪಜೀವನ ಸಾಗಿಸುತ್ತಿದ್ದರು. ಆದರೆ ಪಾಂಚಾಳರು ಮಂತ್ರ-ಯಂತ್ರಗಳ ಸಂಗಡ ಕರಕುಶಲತೆಯ ತಂತ್ರಜ್ಞಾನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇತರರಿಗೆ ತಮ್ಮ ಪಾಂಡಿತ್ಯವನ್ನು ತೋರಿಸಿಕೊಟ್ಟು ಬ್ರಹ್ಮಜ್ಞರಾಗಿದ್ದುಂಟು. "ವೇದಾಸುರರು...

ಜ್ಞಾನಶಕ್ತಿಯ ಅವಶ್ಯಕತೆ ಇತ್ತು. ಆದರಿಂದ ಹಿಂದಿನ ಕಾಲದಲ್ಲಿ ಸಮಾಜ ಸುಧಾರಣೆ ಕಾರ್ಯದಲ್ಲಿ ಮಹತ್ವವೂ ಪೋಸಲಿತ್ತು. ಆರ್ಯ ಭಾಷಿಕರು ವಿಜಿಗೀಷುಗಳಾಗಿ ಇಲ್ಲಿಗೆ ಬಂದವರು. ಸೈಂದವ ಸಂಸ್ಕೃತಿಯ ವೇದಪೂರ್ವ ಕಾಲದಲ್ಲಿದ್ದರು" ಎಂಬ ಮಾತು ನಿಜವಾಗಿದೆ. ಅಲ್ಲಿ ವಾಸ್ತುಶಿಲ್ಪ ಕುಶಲತೆಯನ್ನ ಸೃಷ್ಟಿಸಿದ ಈ ಪಾಂಚಾಳರು (ವಿಶ್ವಕರ್ಮರು) ಈ ದೇಶಿಯರು. ಇಂದ್ರನು(ವಿಶ್ವರೂಪ ನಿರ್ಮಾಣ ಶಕ್ತಿಯ ಪ್ರತೀಕವಾದ)ವಿಶ್ವರೂಪದ ದ್ವೇಷಿಯಾಗಿದ್ದರು ಎಂಬ ಕಥೆಯಿಂದ ಮಂತ್ರ-ಯಂತ್ರಗಳಲ್ಲಿ ಸಿದ್ಧಹಸ್ತರಾದ ಈ ವಿಶ್ವಕರ್ಮರು ಸಂಪ್ರದಾಯದವರು. ಪೂರ್ವಜರು ಆರ್ಯರಿಗಿಂತಲೂ ಮುಂಚಿನಿಂದಲೇ ಈ ದೇಶದಲ್ಲಿ ಇದ್ದರೆಂಬ ಊಹೆಗೆ ಅವಕಾಶ ದೊರೆಯುತ್ತದ ಎಂದು ಶಂಬಾ ಜೋಶಿಯವರು ಅಭಿಪ್ರಾಯ ಪಡುತ್ತಾರೆ. (ಶಂಬಾ ಜೋಷಿ ಸಂಪುಟಗಳು -೨-ಪುಟ ೬೧)

ವಿಶ್ವಕರ್ಮರು ವೇದಪೂರ್ವಕಾಲದಿಂದಲೇ ತಮ್ಮ ವೃತ್ತಿಗಳ ಮೂಲಕ ರಾಜನಿಂದ ಸೇವಕನವರೆಗ ಗುರುತಿಸಲ್ಪಟ್ಟವರು. ರಾಜ ಮಹಾರಾಜರ ಆಶೋತ್ತರಗಳನ್ನು ಹಿಡೇರಿಸಲು ಅವರ ಕಲ್ಪನೆಗಳನ್ನು ಸಾಕಾರಗೊಳಿಸಲು ವಿಶ್ವಕರ್ಮರು ಗುರುತರವಾದ ಕೆಲಸಗಳನ್ನು ಕೈಗೊಂಡಿದ್ದರು. ರಾಜರು ತಮ್ಮ ಆಳ್ವಿಕೆಯಲ್ಲಿ ಅಚ್ಚಳಿಯದಂತೆ ಉಳಿಯುವ ಕಾರ್ಯಗಳಾದ ದೇವಾಲಯ, ಮೂರ್ತಿಶಿಲ್ಪ, ಶಿಲಾಶಾಸನ, ತಾಮ್ರಶಾಸನ, ಕಾಷ್ಠಶಿಲ್ಪ, ವೀರಗಲ್ಲು, ಮಹಾಸತಿಕಲ್ಲು, ರಾಜರಸಿಂಹಾಸನ, ಕಿರೀಟ, ಆಭರಣ, ಅಲಂಕಾರಿಕ ವಸ್ತುಗಳು, ಅರಮನೆಗಳ ನಿರ್ಮಾಣ, ಕೋಟಕೊತ್ತಲಗಳ ನಿರ್ಮಾಣ ಮಾಡುವುದು ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ಇರುವಿಕೆಯನ್ನು ಗುರುತಿಸುವಂತಹ ರಾಜಮುದ್ರೆ, ನಾಣ್ಯ, ಆಯುಧ, ತೇರು, ಪಲ್ಲಕ್ಕಿ, ಛತ್ರಿ, ಚಾಮರ ಹೀಗೆ ಹಲವಾರು ಕಾರ್ಯಗಳನ್ನು ವಿಶ್ವಕರ್ಮರು ಪೂರೈಸಿ ಅನೇಕ ಶಾಸನಗಳಲ್ಲಿ ತಮ್ಮ ನಾಮಗಳನ್ನು ಉಳಿಸಿಕೊಂಡು ಬಂದಿರುವುದನ್ನು ನೋಡಿದರೆ ಅವರು ಮತ್ತು ವೃತ್ತಿಯ ಪ್ರಾಮುಖ್ಯತೆಯು ಅವರ ಇರುವಿಕೆಯನ್ನು, ಅವಶ್ಯಕತೆಯನ್ನು ಸೂಚಿಸುತ್ತದೆ. ಇಂತಹ ವಿಶಿಷ್ಟ ಸಮುದಾಯವನ್ನು ಇತ್ತೀಚಿಗೆ ಇವರನ್ನು ಅಲಕ್ಷದಿಂದ ಕಾಣುವುದು ಎಂದರೆ ನಮ್ಮ ಹಿಡಿ ಕರಕುಶಲತೆಯನ್ನು ಕಳೆದುಕೊಂಡತೆಯೇ ಸರಿ. ಬಹು ಇಂದಿನ ಕಾಲದಿಂದಲೂ ಸಮಾಜದ ಎಲ್ಲಾ ಜನಾಂಗದ ದೇಶೀಯ ತಂತ್ರಜ್ಞಾನಗಳನ್ನು ಮೂಲೆಗುಂಪನ್ನಾಗಿಸುವ ಪ್ರಯತ್ನ ಇಂದು ನಡೆಯುತ್ತದೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಈ ದೇಶೀಯ ತಂತ್ರಜ್ಞಾನಗಳು ಜೀವಂತವಾಗಿವೆ. ಏಕೆಂದರೆ ಇವುಗಳನ್ನು ಮಾಡುವವರು, ಮಾಡಿಸಿಕೊಳ್ಳುವವರು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ಅತಿಯಾದ ನಾಗರೀಕತೆ ಸಂಸ್ಕೃತಿಯನ್ನು ಹಾಳುಮಾಡುತ್ತದೆ ಎಂಬುದನ್ನು ನಿಸ್ಸಂಕೋಚವಾಗಿ ಹೇಳಬಹುದು.

ವಿಶ್ವಕರ್ಮ ಪುರಾಣದಲ್ಲಿ ವಿಶ್ವಕರ್ಮರ ಪರಂಪರೆಯು ದೊರೆಯುತ್ತದೆ. ಸಾಮಾನ್ಯವಾಗಿ ಎಲ್ಲಾ ಜನಾಂಗ ಜಾತಿಯವರು ದೈವತ್ವ ಕಲ್ಪನೆಯಿಂದ ವಿವಿಧ ರೀತಿಯಲ್ಲಿ ಜನಿಸಿದ್ದಾರೆ. ಅದರಂತೆ ಪಾಂಚಾಳರು ವಿಶ್ವಕರ್ಮನಿಂದ ಜನಿಸಿದ್ದಾರೆಂಬ ವಿಷಯ ಎಲ್ಲರೂ ಹೇಳಿಯೇ ತಿರುತ್ತಾರೆ. ಇಲ್ಲಿ ವಿಶ್ವಕರ್ಮರ ಪೌರಾಣಿಕತೆಯನ್ನು ವಿವರಿಸಲಾಗಿದೆ.

ಜಗತ್ತಿನ ಸೃಷ್ಟಿಕರ್ತ ವಿಶ್ವಕರ್ಮನ ಮಕ್ಕಳು ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯ ಅವರಿಂದ ಮನು. ಮಯ, ತ್ವಷ್ಟ. ಶಿಲ್ಪಿ, ದೈವಜ್ಞರು ಜನಿಸಿ ಕ್ರಮವಾಗಿ ಕಮ್ಮಾರ, ಬಡಿಗಿ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗರನ್ನು ನಿರ್ಮಿಸಿ ಅವರಿಗೆ ಪಂಚ ವಿದ್ಯೆಗಳಾದ ಆಯ ಶಿಲ್ಪಿ,ದಾರು ಶಿಲ್ಪಿ, ತಾಮ್ರಶಿಲ್ಪಿ, ಶಿಲಾಶಿಲ್ಪಿ, ಸುವರ್ಣಶಿಲ್ಪಿ ವಿದ್ಯೆಗಳನ್ನು ನೀಡಿದನು. ಶಿಲ್ಪ ಸೃಷ್ಟಿಸುವವರಾದ್ದರಿಂದ ಅವರನ್ನು ಪಂಚ ಬ್ರಹ್ಮರೆಂದು ವರ್ಣಿಸಲಾಗಿದೆ. ಅವರಿಗೆ ವಿಶ್ವಕರ್ಮನು ಪಂಚವೇದಗಳನ್ನು ಕರುಣಿಸಿದನೆಂದೂ ಹೇಳಲಾಗಿದೆ. ಈ ಪುರಾಣದಲ್ಲಿ ಈ ಪಾಂಚಾಳರಿಗೆ ಸಾನಗ, ಸನಾತನ, ಅಹಭೂತಿ, ಪತ್ನ, ಸುಪರ್ಣಸ್ಯ ಎಂಬ ಗೋತ್ರ ಋಷಿಗಳ ಹಾಗೂ ಅವರಿಗೆ ಆದಿಶಕ್ತಿ, ಪರಾಶಕ್ತಿ ಮುಂತಾದ ಪಂಚಕಿ ಶಕ್ತಿಗಳನ್ನು ಪಡೆದರು. ಆದರಿಂದ ಈ ಪಾಂಚಾಳರ ವೃತ್ತಿ ವಿದ್ಯೆಯನ್ನು ಪಡೆದು ಸಮಾಜದಲ್ಲಿ ಗಣ್ಯರಾಗಿರುವರು. ಅವರು ಮಾನವ ಸಂಸ್ಕೃತಿಯನ್ನು ಶಿಲ್ಪ ಚಿತ್ರಗಳ ಮೂಲಕ ನಿರ್ಮಿಸಿದರು, ಶಾಶ್ವತಗೊಳಿಸಿದರು." (ವಿಶ್ವಕರ್ಮ ಪುರಾಣ-ಶೇಷಾಚಾರಿ) ಎಂದು ಮುಂತಾದ ವಿಫಲವಾದ ಮಾಹಿತಿ ದೊರೆಯುತ್ತದೆ. ಇಲ್ಲಿ ಪ್ರಮುಖವಾಗಿ ಇನ್ನೊಂದು

ವಿಷಯ ಚರ್ಚಿಸಬೇಕಾದ ವಿವರಗಳೆಂದರೆ ಪಾಂಚಾಳರ ಗೋತ್ರಗಳ ಸಂಬಂಧಪಟ್ಟ ವಿಷಯ. ಪಾಂಚಾಳರಲ್ಲಿ ಗೋತ್ರವು ಬಹುಮುಖ್ಯ ಪಾತ್ರ ವಹಿಸುತ್ತವೆ. ಗೋತ್ರಗಳ ಉಲ್ಲೇಖಗಳನ್ನು ವೇದಕಾಲದಿಂದಲೂ ಕಾಣಬಹುದು. ವಿಶ್ವಕರ್ಮನಿಗೆ ಸನಾಗ, ಸನಾತನ, ಅಹಭೂನ, ಪತ್ನ, ಮತ್ತು ಸುಪರ್ಣಸ್ಯರೆಂಬ ಪಂಚ ಋಷಿಗಳು ಮಾನಸ ಪುತ್ರರೆಂದು ಯಜುರ್ವೇದವು ಹೇಳುತ್ತದೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು-ಕೆ.ಎಸ್. ಕುಮಾರಸ್ವಾಮಿ) ಇವರಿಂದಲೇ ಶಿಲ್ಪಗಳನ್ನು ಪಂಚ ಶಿಲ್ಪಗಳನ್ನು ಆಚರಿಸುವ ಪಾಂಚಾಳರು ಜನಿಸಿದರೆಂದು ತಿಳಿದು ಬರುತ್ತದೆ.

ಪುರಾಣ, ಶಿಲ್ಪ, ಆಗಮ, ಶಾಸ್ತ್ರಾದಿಗಳು ನಡೆಯುತ್ತವೆ. 'ಇಂದಿನ ಪಾಂಚಾಳ ಶಿಲ್ಪಿಗಳು ಈ ಸಾನಗಾದಿ ಪಂಚ ವಿಂಶತ್ಯುತ್ತರ ಶತ ಬ್ರಹ್ಮರ್ಷಿಗಳ ಗೋತ್ರೋತ್ಪನ್ನರೆಂಬುದು ಸುರ್ವವಿದಿತ ಸಂಗತಿ' ಎಂದು ಜ್ಞಾನನಂದರವರು (ವಿಶ್ವಕರ್ಮ ಸೂಕ್ತ-ಪು-೧೬೪) ತಿಳಿಸುತ್ತಾರೆ. ಆದರೆ ತೀರ ಇತ್ತೀಚಿನ ಕ್ರಿ.ಶ. ೧೮೬೪ ರ ಒಂದು ಶಾಸನದಲ್ಲಿ (ಎ.ಕ. VI ಪು-೨೮೦-ನಂ೩೦ ಕ್ರಿ.ಶ. ೧೮೬೪ ಪರಿಕೃತ) ಲಕ್ಕನಾಚಾರ್ಯನು ಸುಪರ್ಣಸ ಗೋತ್ರ, ಕಾತ್ಯಾಯನಿ ಗೋತ್ರ, ಪ್ರಣವಶಾಖೆ ಎಂದು ಹೇಳಿಕೊಂಡಿರುವುದುನ್ನು ಪ್ರಾಚೀನ ಶಾಸನವೂ ಸಾನಗಾದಿ ಗೋತ್ರಗಳನ್ನು ಈ ಕುಶಲ ಕೆಲಸಗಾರರಿಗೆ ಸಂಬಂಧಿಸಿದಂತೆ ಹೇಳಿರುವುದು ಕಂಡುಬರುತ್ತದೆ. ಅಂದರೆ ಆಚಾರಿ ಅಥವಾ ಓಜನಿಗೂ ಗೋತ್ರದ ಪರಿಕಲ್ಪನೆ ಇದ್ದಿತೆಂದು ಹೇಳಬಹುದು. "ಕ್ರಿ.ಶ. ೧೭ ನೇ ಶತಮಾನದ ಕರಸ್ಥಲದ ನಾಗಲಿಂಗ ಚರಿತೆ' ಎಂಬ ಕಾವ್ಯದಲ್ಲಿ ಈ ಕುಶಲಕರ್ಮಿಗಳು ಮನು,ಮಯ, ತ್ವಷ್ಟ, ಶಿಲ್ಪಿ ಮತ್ತು ದೈವಜ್ಞ ಎಂಬ ಐದು ಗೋತ್ರಗಳನ್ನು ಉಳ್ಳವರಾಗಿದ್ದರು. (ಶೇಷಗಿರಿ ಕೆ.ಆರ್. (ಸಂ.) ಕರಸ್ಥಲದ ನಾಗಲಿಂಗನ ಚರಿತೆ-೫೭೪) ಎಂದು ಹೇಳಲಾಗಿದೆ. ಪಾಂಚಾಳರಿಗೆ ಗೋತ್ರಗಳು ಪ್ರಮುಖವಾಗಿ ಆಚರಣೆಯಲ್ಲಿದ್ದವು ಎಂಬ ಸಂಗತಿ ತಿಳಿಯುತ್ತದೆ.

ಇಲ್ಲಿ ಒಂದು ಗೊಂದಲವಿದೆ ವೇದಗಳಲ್ಲಿ ಸನಗಾದಿ ಗೋತ್ರಗಳನ್ನು ಹೇಳಲಾಗಿದೆ ನಾಗಲಿಂಗ ಚರಿತೆಯಲ್ಲಿ ಮನು, ಮಯಾದಿ ಗೋತ್ರಗಳನ್ನು ಹೇಳಿದೆ. ಶಾಸನಗಳ ವಿಚಾರಕ್ಕೆ ಬಂದರೆ ಒಂದೆರಡು ಶಾಸನಗಳು ಯಾವ ಗೋತ್ರವನ್ನು ಹೆಸರಿಸುವ ಗೋಜಿಗೆ ಹೋಗದೆ ಕೇವಲ ಗೋತ್ರ ಪವಿತ್ರ ಎಂದು ಮಾತ್ರ ಹೇಳಿದರೆ ಒಂದು ಶಾಸನವು ಯಾವ ಐದು ಗೋತ್ರಗಳ ಗುಂಪುಗಳಿಂದ ಹೊರೆತಾದ 'ಕಶ್ಯಪ' ಗೋತ್ರವನ್ನು ಹೇಳುತ್ತದೆ. (ಎ.ಕ. XII ತುಮಕೂರು ೪೬ ಕ್ರಿ.ಶ. ೧೭೧೯) ಅರ್ವಾಚೀನ ಶಾಸನಗಳಲ್ಲಿ ಒಂದು ಶಾಸನ ವೇದಕಾಲೀನ ಗುಂಪಿನ ಸುಪರ್ಣ ಗೋತ್ರವನ್ನು ಮತ್ತೆರಡು ಶಾಸನ ನಾಗಲಿಂಗ ಚರಿತ್ರೆಯಲ್ಲಿ ಹೇಳಿದೆ, ವಿಶ್ವಜ್ಞ ಎಂಬ ಗೋತ್ರವನ್ನು ಹೆಸರಿಸಿದೆ. ಹೀಗಿದ್ದರೂ ಅವು ಪಾಂಚಾಳರ ಗೋತ್ರಗಳು ಹೀಗೆ ಪಾಂಚಾಳ ಗೋತ್ರಗಳು ಅವರು ಸಂಬಂಧ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅದಕ್ಕೆ ಸಂಬಂಧ ಪಟ್ಟ ಒಟ್ಟಾಗಿ ಕೋಷ್ಠಕವನ್ನು ಈ ಕೆಳಗೆ ಸೂಚಿಸಲಾಗಿದೆ.

			ವೃತ್ತಿಕಾರರು	ವೃತ್ತಿಗಳು	ಗೋತ್ರಗಳ
ವಿಶ್ವಕರ್ಮ	ಶಿವ	ಮನು	ಕಮ್ಮಾರ	ಕಮ್ಮಾರಿಕೆ	ಸಾನಗ
	ವಿಷ್ಣು	ಮಯ	ಬಡಗಿ	ಬಡಗಿತನ	ಸನಾತನ
	ಬ್ರಹ್ಮ	ತ್ವಷ್ಟ	ಕಂಚುಗಾರ	ಎರಕಹೊಯ್ಯವುದು	ಅಹಭೂನ
	ಇಂದ್ರ	ಶಿಲ್ಪಿ	ಶಿಲ್ಪಿ	ಶಿಲೆಕೆತ್ತುವುದು	ಪತ್ನ
	ಸೂರ್ಯ	ವಿಶ್ವಜ್ಞ	ಸ್ವರ್ಣಗಾರ	ಅಕ್ಕಸಾಲಿಕೆ	ಸುಪರ್ಣಸ್ಯ

ಕ್ರಿ.ಶ. ೧೬ನೇ ಶತಮಾನದ 'ಮೌನೇಶ್ವರ' ಎಂಬ ಪಾಂಚಾಳ ವಚನಕಾರ ಪಾಂಚಾಳರ ದೈವಜ್ಞ, ಸಂಪ್ರದಾಯ ಹೇಡು. ಒಂದು ವಚನದಲ್ಲಿ 'ವಿಶ್ವಕರ್ಮನ ಗೋತ್ರವ ಕೇಳುವ ಹಾರುವನ ಮೋರೆ ಕಂಡರೆ ಅಪಶಕುನ ಕಾಣೋ' (ಮೌನೇಶ್ವರ ವಚನ ಸಂಗ್ರಹ (ಸಂ) ಜೀವಣ ಮಸಳಿ-೬೫) ಎಂದು ಹೇಳಿರುವುದು ಕಂಡು ಬರುತ್ತದೆ. ಇವು ಮೂಲಾಧಾರಗಳಾದರೆ ಇನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ವ್ಯಕ್ತವಾಗುವ ವಿವರಗಳು ಮೇಲಿನವುಲ್ಲಕ್ಕಂತ ಅವರ ಮಾತಿನಲ್ಲಿ ಹೇಳಿಸಿದರೆ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಮತ್ತು ಸಂಬಂಧಗಳು ಹೇಗೆ ಬೆಳೆದುಕೊಂಡು ಬರುತ್ತವೆಂಬುದನ್ನು ಕಾಣಬಹುದು.

ಪಾಂಚಾಳರು ಗೋತ್ರಕ್ಕೆ ಬಹಳ ಮಹತ್ವ ಕೊಡುತ್ತಾರೆ. ಒಬ್ಬರ ಮನೆಯಿಂದ ಇನ್ನೊಬ್ಬರ ಮನೆಗೆ ಸಂಬಂಧ ಬೆಳೆಸುವಾಗ ಮೊದಲು ಗೋತ್ರವನ್ನು ಕೇಳಿಯೇ ಮುಂದಿನ ಕಾರ್ಯಕ್ಕೆ ಕೈ ಹಾಕುತ್ತಾರೆ. ಏಕೆಂದರೆ ಇಲ್ಲಿ ಒಂದು ನಂಬಿಕೆ ಇದೆ, ಅದು ಒಂದೇ ಗೋತ್ರ ಅಥವಾ ಬೆಡಗು ಗಾರರಾದರೆ ಸಂಬಂಧ ಬೆಳೆಸಲು ಬರುವುದಿಲ್ಲ. ಏಕೆಂದರೆ ಒಂದೇ ಬೆಡಗಿನವರು ಅಣ್ಣ ತಮ್ಮಂದಿರಿದ್ದ ಹಾಗೆ ಎಂದು, ಮನು-ಮನು, ಸನಾತನ-ಸನಾತನ ಹೀಗೆ ಈ ಪಂಚ ಗೋತ್ರಗಳು ಒಂದೇ ಜಾತಿಯವರಾದರೂ ಕೂಡ ಸಂಬಂಧ ಬೆಳೆಸುವಾಗ ಈ ಗೋತ್ರ ವಿಚಾರಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಈ ಗೋತ್ರಗಳಿಂದ ವಿವಾಹಗಳು ಜರಗುತ್ತವೆ, ಆದರೆ ಗೋತ್ರಗಳು ಅದಲುಬದಲಾಗಬೇಕು ಇಲ್ಲದಿದ್ದರೆ ಸಂಬಂಧ ಬೆಳೆಸುವಾಗಿಲ್ಲ. ಉದಾಹರಣೆಗೆ ಮನುಗೋತ್ರದವರು ಇನ್ನುಳಿದ ನಾಲ್ಕು ಗೋತ್ರಗಳಿದ್ದರೂ ಸಂಬಂಧ ಬೆಳಸಬಹುದು. ಆದರೆ ಈ ಗೋತ್ರ ಒಂದೇ ಆದ ಸಂದರ್ಭದಲ್ಲಿ, ಸಂಬಂಧ ಬೆಳೆಯುವ ಸಂದರ್ಭದಲ್ಲಿ ದಾರಿಯಲ್ಲಿದ್ದರೆ ಯಾರೋ ಒಂದಿಬ್ಬರು ಯಾರಿಗಾದರೂ ಸುಳ್ಳು ಹೇಳಿ ಮದುವೆ ಮಾಡಿದ ಪ್ರಸಂಗಗಳು ಕಂಡುಬರುತ್ತವೆ. 'ಗೋತ್ರಗಿತ್ರ ಏನ್ ಮಾಡ್ತಬಿಡವ್ರೋ ಜೀವ್ನ ಮಾಡವ್ರು ಅವ್ರು ಎಲ್ಲ ದೇವ್ರು ನೋಡ್ಕೋತಾನೆ ಸಾವ್ರ ಸುಳ್ಳು ಹೇಳಿ ಮದ್ವಿ ಮಾಡು ಅಂತ ದೊಡ್ಡವ್ರು ಹೇಳ್ಯಾರ' ಎಂದು, ಇಂತಹ ಸಂಪ್ರದಾಯ, ನಂಬಿಕೆಗಳನ್ನು ಧಿಕ್ಕರಿಸುವ ಜನರು ಇದ್ದಾರಾದರೂ ತಿಳಿದವರಿಗೆ ಈ ವಿಚಾರ ಗೊತ್ತಾದರೆ ಸಂಬಂಧ ಬೆಳೆಸುವುದಿಲ್ಲ, ಅಲ್ಲೊಂದಿಲ್ಲೊಂದು ಧಿಕ್ಕರಿಸುವ ಜನರೂ ಇದ್ದಾರೆ. ಈ ಮದುವೆ ವಿಚಾರದಲ್ಲಿ ದೊಡ್ಡ ಸಮಸ್ಯೆಯಾಗಿ ಕಾಡುವುದು ಎಂದರೆ ಇದೇ. ಸವ ಗೋತ್ರರಾದರೆ ಸಹೋದರರ ಸಂಬಂಧದಂತೆ ಕಾಣುತ್ತಾರೆ. ಆಕಾರಣಕ್ಕಾಗಿ ಈ ಪಾಂಚಾಳರಲ್ಲಿ ಈ ಗೋತ್ರಗಳು ಸಂಬಂಧ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಗ್ರಾಮ ಜೀವನದ ವಿವಿಧ ವೃತ್ತಿಗಳಲ್ಲಿ ನಿರತರಾದ ಈ ಜನಾಂಗಕ್ಕೆ ಇಂತಹ ವಿಶೇಷ ಪರಂಪರೆಯನ್ನು, ಗೌರವ ಸ್ಥಾನವನ್ನು ನೀಡುವ ಪ್ರಯತ್ನವನ್ನು ಇಲ್ಲಿ ಕಂಡುಕೊಳ್ಳಲಾಗಿದೆ. ಎಲ್ಲಾ ಸಮುದಯಗಳ ಸಾಂಸ್ಕೃತಿಕ ಇತಿಹಾಸದಲ್ಲಿ ಇಂತಹ ನಂಬಿಕೆ ಆಚರಣೆ ಮತ್ತು ಪರಂಪರೆಗಳು ಪ್ರಮುಖವಾಗುತ್ತವೆ. ಅದೇನೆ ಇದ್ದರೂ ಪಾಂಚಾಳರು ವಿಶೇಷ ಜ್ಞಾನಿಗಳು, ಕರಕುಶಲಿಗಳು ಹಾಗೂ ದೈವಾಚರಣೆ, ವೇದ ವಿದ್ಯೆಗಳಲ್ಲಿ ನಂಬಿಕೆ ಉಳ್ಳವರು ಅಷ್ಟೇ ಅಲ್ಲದೇ ಅರವತ್ನಾಲ್ಕು ಕಲೆಗಳಲ್ಲಿ ಪರಿಣಿತರು. ಶತಮಾನದ ಏಳು ಬೀಳುಗಳಲ್ಲಿ ಈ ಪಾಂಚಾಳರು ಜೀವನ ವೃತ್ತಿಗಳನ್ನು ಮುನ್ನಡೆಸಿ ಪರಂಪರೆಯ ಆಚರಣೆಗಳನ್ನು ಉಳಿಸಿಕೊಂಡು ಬಂದು 'ಆಯಗಾರರು' ಎಂದು ಪ್ರಸಿದ್ಧರಾದವರು. ಈ ಜನಾಂಗಕ್ಕಿರುವ ಪೌರಾಣಿಕತ್ವ ಸನಾತನೆಯ ವಿಮರ್ಶೆ ಪ್ರಕೃತ ಉದ್ದೇಶವಲ್ಲ. ಈ ಜನಾಂಗದ ತಾತ್ವಿಕ ನಿಲುವನ್ನು ಸೂಚಿಸುವುದು ಮಾತ್ರ ಮೇಲಿನ ವಿವೇಚನೆಯಾಗಲಿ ಗೋತ್ರ ಸೂತ್ರ ವಿದ್ಯೆಗಳನೇ ಆಗಲಿ ಅವರು ಎಂದಿಗೂ ಬದಲಾದ ಸಮಾಜದೊಡನೆ ಕೂಡಿ ಬಾಳಿದವರು. ಸಮಾಜದ ಅವಶ್ಯಕತೆಯನ್ನು ಪೂರೈಸಿದವರು. ಧಾರ್ಮಿಕ, ಸಾಮಾಜಿಕ ಬದಲಾವಣೆಗಳನ್ನು ಅಳವಡಿಸಿಕೊಂಡು ಬದುಕಿದವರು. ಗ್ರಾಮೀಣ ಜನರ ವೃತ್ತಿ ಜೀವನಗಳಿಗೆ ಅನಿವಾರ್ಯರೂ ಅತಿಸಮೀಪರೂ ಆದ ಪಾಂಚಾಳರು ಈ ಸಮನ್ವಯದ ಸೂತ್ರದಾರರು.

ಇನ್ನು ಮುಂದುವರೆದು ಹೇಳುವುದಾದರೆ ಪಾಂಚಾಳರ ಪಂಚ ಕಾರ್ಯಗಳು ಅಥವಾ ಪಾಂಚಾಳರ ಪರಂಪರೆಯ ಮೂಲಗಳು ಮತ್ತು ಅವರ ಜನನ, ಕೆಲಸ, ಗುಣಗಳು ಹೀಗೆ ಇನ್ನು ಹಲವಾರು ಮಾಹಿತಿಗಳು ಸಿಗುತ್ತವೆ. ಈ

ಕೆಳಗಿನ ವಿವರಗಳು ಅವರ ಜನನಕ್ಕೆ ಸಂಬಂಧಿಸಿದವುಗಳಾಗಿವೆ.

ಸದ್ಯೋಜಾತ ಮುಖ ಮಾಸೀತ್ ಮನು ವಿಶ್ವಕರ್ಮಣಃ ಬ್ರಹ್ಮ ಉದ್ಭವತಿ ।
ವಾಮದೇವ ಮುಖ ಮಾಸೀತ್ ಮಯ ವಿಶ್ವಕರ್ಮಣಃ ಬ್ರಹ್ಮ ಉದ್ಭವತಿ ।
ಅಘೋರ ಮುಖ ಮಾಸೀತ್ ತ್ವಷ್ಟ ವಿಶ್ವಕರ್ಮಣಃ ಬ್ರಹ್ಮ ಉದ್ಭವತಿ ।
ತತ್ಪುರುಷ ಮುಖ ಮಾಸೀತ್ ಶಿಲ್ಪ ವಿಶ್ವಕರ್ಮಣಃ ಬ್ರಹ್ಮ ಉದ್ಭವತಿ ।
ಈಶಾನ ಮುಖಮಾಸೀತ್ ವಿಶ್ವಜ್ಞ ವಿಶ್ವಕರ್ಮಣಃ ಬ್ರಹ್ಮ ಉದ್ಭವತಿ ।

(ವಿಶ್ವಕರ್ಮ ಪೂರ್ವಕತೆ -ಡಾ. ಮೋಹನ್‌ರಾವ್ -ಪುಟ-೨೨) ಈ ಪದ್ಯದಂತೆ ಪಾಂಚಾಳರ ಜನನವು ಸದ್ಯೋಜಾತ ಮುಖದಿಂದ ಮನು, ವಾಮದೇವನ ಮುಖದಿಂದ ಮಯ, ಅಘೋರ ಮುಖದಿಂದ ತ್ವಷ್ಟ, ತತ್ಪುರುಷ ಮುಖದಿಂದ ಶಿಲ್ಪಿ, ಈಶಾನ ಮುಖದಿಂದ ವಿಶ್ವಜ್ಞ ಹೀಗೆ ಐದು ಮಂದಿ ಬ್ರಹ್ಮರ್ಷಿಗಳು ಪಂಚ ಮುಖಿ ಪರಮೇಶ್ವರನಿಂದ ಉತ್ಪತ್ತಿಯಾದರು. ಹೀಗೆ ಮುಂದುವರೆದು ಮನುವಿನ ಕೆಲಸವೆಂದರೆ (ಕಮ್ಮಾರ) ಕಬ್ಬಿಣ ಧಾತು ಸೃಷ್ಟಿ ಅದರಿಂದ ಸಮಗ್ರ ವರ್ಣಾಶ್ರಮಗಳಲ್ಲಿ ಸೃಷ್ಟಿ ಪರಿಪಾಲನೆಗಾಗಿ ಗರ್ಭದಿಂದ ಬಂದ ಶಿಶುಗಳ ನಾಭಿನಾಳವನ್ನು ಕತ್ತರಿಸಿ ಶಿಶುವನ್ನು, ತಾಯಿಯನ್ನು ಬೇರೆ ಮಾಡಿ ಧರ್ಮಾರ್ಥಕಾಮ ಮೋಕ್ಷಗಳನ್ನು ಸಂಪಾದಿಸುವ ಬಗ್ಗೆ ಕಾರ್ಮುನೆ । ಕತ್ತಿ ಮುನೆ, ಕದಿರು ಮುನೆ ಸರಸ್ವತಿಮುನಿ, ತ್ರಾಸಮುನೆ ಇವುಗಳಿಂದ ಲೋಕರಕ್ಷಣೆ ಮಾಡುವುದು ಕಮ್ಮಾರನ ಕರ್ತ್ಯವ್ಯವಾಗಿದೆ. ಬಡಗಿಯೆಂದು ಹೇಳುವ ಮಯನು ಗಿಡ, ಮರ, ಬಳ್ಳಿ ತೃಣಗಳ ಸೃಷ್ಟಿ ಅದರಿಂದ ಸಕಲ ಜೀವಾತ್ಮರೂ ಸುರಕ್ಷಿತವಾಗಿರಲು ಮನೆ, ಮಠ, ನಿರ್ಮಾಣವಸ್ತು, ಒಡವೆಗಳನ್ನು ಸಂರಕ್ಷಿಸಿಡಲು ಭದ್ರವಾದ ಕಪಾಟು, ಪೆಟ್ಟಿಗೆ ಮೊದಲಾದವುಗಳಲ್ಲದೆ ಮಾನವರ ಕಲ್ಯಾಣಕ್ಕಾಗಿ ದಾರು ವಿಗ್ರಹಗಳ ನಿರ್ಮಾಣ ಮೊದಲಾದ ಕಾಯಕವನ್ನು ಇವರು ನಿರ್ವಹಿಸುತ್ತಾರೆ. ಕಂಚುಗಾರನೆಂದು ಕರೆಸಿಕೊಳ್ಳುವ ತ್ವಷ್ಟನು ತಾಮ್ರ ಸೃಷ್ಟಿ ಅದರಿಂದ ದೇವತಾ ಮೂರ್ತಿಗಳ ನಿರ್ಮಾಣ. ಯೋಗಶಾಲೆಗೆ ಬೇಕಾಗುವ ಉಪಕರಣಗಳ ನಿರ್ಮಾಣ ತಾಮ್ರವನ್ನು ಕರಗಿಸಿ ತಮಗೆ ಬೇಕಾದ ವೈವಿಧ್ಯಮಯ ಮೂರ್ತಿ ಇತ್ಯಾದಿಗಳ ಕಾಯಕ ಇವರದಾಗಿದೆ. ಶಿಲ್ಪಿ ಎಂಬುವನು ಶಿಲಾನಿರ್ಮಾಣ ಅದರಿಂದ ವಿಗ್ರಹಗಳು, ದೇವಾಲಯಗಳ ನಿರ್ಮಾಣ, ಗೋಪುರ ರಚನೆಗಳನ್ನು ಕಣ್ಣಿಗೆ ಅಂದವಾದ ಶಿಲ್ಪಚಿತ್ರ ಕಲೆಯಲ್ಲಿ ಪರಿಣತೆಯನ್ನು ಹೊಂದಿದವನಾಗಿರತ್ತಾನೆ. ಅದಕ್ಕೆ ಸಾಕ್ಷಿಯೇ ಶಿಲ್ಪಚಿತ್ರಗಳು. ಹಾಗೂ ಕೊನೆಯದಾಗಿ ಅಕ್ಕಸಾಲಿಗನೆಂದು ಹೇಳುವ ವಿಶ್ವಜ್ಞನು ಸುವರ್ಣ ಸೃಷ್ಟಿ. ದೇವದಾನವ, ಮಾನವರಿಗೆ ದೇವತಾ ವಿಗ್ರಹಗಳು, ಚಿತ್ರ, ವಿಚಿತ್ರವಾದ ಆಭರಣಗಳು, ಸೌಂದರ್ಯೋಪಾಸನೆಯಲ್ಲಿ ಪ್ರಮುಖವಾಗಿ ಕಂಡುಬರುವ ಸ್ತ್ರೀಯರ ಆಭರಣಗಳ ತಯಾರಿಕೆಯು ಇವನ ಕೆಲಸವಾಗಿದೆ.

ಹೀಗೆ ಅನೇಕ ತರಹದ ವಿವರಗಳು ಪಾಂಚಾಳರಿಗೆ ಸಂಬಂಧ ಪಟ್ಟಂತೆ ಪರಂಪರೆಯನ್ನು ನಾವು ಹೇಳುತ್ತಾ ಹೋಗಬಹುದು. ಅದಕ್ಕೆ ಅನೇಕ ಆಧಾರಗಳಾದ ಕತೆ, ಐತಿಹ್ಯ, ಪುರಾಣ ಇನ್ನು ಅನೇಕ ವಿಧವಾದ ಮಾಹಿತಿಗಳು ಪಾಂಚಾಳರ ಮೂಲಕ್ಕೆ ಸಾಕ್ಷಿಯಾಗಿ ಆಸರೆಯಾಗಿ ನಿಂತಿವೆಯಾದರೂ ಅವರು ತಮ್ಮ ಆಚಾರ, ನಂಬಿಕೆಗಳನ್ನು ಆಧುನಿಕ ಯುಗದಲ್ಲಿ ಇದ್ದು ಇಲ್ಲದಂತೆ ಬದುಕುತ್ತಿದ್ದಾರೆ. ಆದರೂ ಅವರ ಹಿರಿಯ ತಲೆಮಾರಿನವರು ಹಳ್ಳಿಗಳಲ್ಲಿ ಜೀವಂತ ವಾಗಿರುವತನಕ ತಮಗರಿವಿಲ್ಲದಂತೆ ಬದುಕುತ್ತಿದ್ದಾರೆ.

ವೇದಗಳು ಜಾತಿ ಅಲ್ಲ ಧರ್ಮ ಅಲ್ಲ ವಿಶ್ವಕರ್ಮರು ವೇದಗಳನ್ನು ಕೊಟ್ಟಿದ್ದಾರೆ. ವ್ಯಾಸ, ಕಾಳಿದಾಸ, ವಾಲ್ಮೀಕಿ ಮಹಾಕವಿಗಳು ಕೊಟ್ಟಂತೆಯೇ ವಿಶ್ವಕರ್ಮರು ಈ ದೇಶಕ್ಕೆ ವೇದಗಳನ್ನು ಕೊಟ್ಟಿದ್ದಾರೆ. ವೇದಕಾಲೀನ ಜ್ಞಾನಪರಂಪರೆಯನ್ನು ವಿಸ್ತರಿಸಿ ಕಾಲನಂತರದಲ್ಲಿ ಆರ್ಯ ಆಕ್ರಮಣಕ್ಕೆ ಒಳಪಟ್ಟ ತಮ್ಮ ಅಮೂಲ್ಯ ವೇದಜ್ಞಾನವನ್ನು ಕಳೆದುಕೊಂಡು ಚರಿತ್ರೆಯ ಮರೆಗೆ ಸರಿಯಬೇಕಾದ ಇಕ್ಕಟ್ಟಿಗೆ ಪಾಂಚಾಳ ಸಮಾಜದವರು ಒಳಪಟ್ಟಿರುವುದನ್ನು ನಾವು ಈ ಕಾಲದಲ್ಲಿ ಬಹಳ ಸಲೀಸಾಗಿ ಮರೆತುಬಿಡುತ್ತೇವೆ. 'ಮರೆತುಹೋದ ಮಹಾಸಾಮ್ರಾಜ್ಯ'ದ ಬಗ್ಗೆ ನಮಗೆ

ತುಂಬಾ ಮಮಕಾರವಿದೆ ವಿಜಯನಗರ ಸಾಮ್ರಾಜ್ಯವು ಗಳಿಸಿದ ವೈಭವದಂತೆಯೇ ಪಾಂಚಾಳ ಸಮುದಾಯಗಳು ಸಾಂಸ್ಕೃತಿಕ ಜ್ಞಾನಸಂಪತ್ತು ಕೂಡ ಆರ್ಯರ ಧಾರ್ಮಿಕ ದಾಳಿಯಿಂದ ಭಗ್ನವಾಗಿವೆ. ಆದರೆ ಇಂತಹ ಜ್ಞಾನ ಪರಂಪರೆಯ ಸಮುದಾಯಗಳೇ ಗಾಯಗೊಂಡು ದೇಶದುದ್ದಕ್ಕೂ ಇವತ್ತು ಜಗತ್ತಿನ ಹೊಸ ತಂತ್ರಜ್ಞಾನ ಮಾಯೆಯಲ್ಲಿ ಕಳೆದು ಹೋಗುತ್ತಿರುವುದು ಕೂಡ ಯಾರ ಗಮನಕ್ಕೂ ಕಾಳಜಿಗೆ ಒಳಪಡದಂತೆ ಕಾಣುತ್ತಿರುವುದು ಒಡಿಯಾಗಿ ಈ ದೇಶದ ಕರಕುಶಲ ದೇಶೀಯ ತಂತ್ರಜ್ಞಾನವನ್ನು ವಿಸ್ಮೃತಿಯ ಪಾತಳಕ್ಕೆ ತಳ್ಳುವಂತೆ ಮಾಡುತ್ತಿದೆ.

ಈ ಪಾಂಚಾಳರ ಪರಂಪರೆಯ ಬಗ್ಗೆ ಮತ್ತು ಕರಕುಶಲ ತಂತ್ರಜ್ಞಾನಕ್ಕೆ ಸಂಬಂಧ ಪಟ್ಟ ವಿವರಗಳನ್ನು ಹೇಳುವುದು ಸರಿಯಾದ ಮಾರ್ಗವಾಗಿದೆ ಹಾಗೂ ಮುಂದೆ ಮುಂಚಿನಂತೆ ಆಗಬಲ್ಲರೇ ಎಂಬ ಸಂದೇಹ ಕಾಪಿಡುವುದೂ ಸಾಧ್ಯವಿಲ್ಲವೆಂದೇ ಹೇಳಬಹುದು. ಅದಕ್ಕೆ ಕಾರಣಗಳು ಸಾಕಷ್ಟಿವೆ. ಹೀಗೆ ಒಟ್ಟಾಗಿ ಈ ಪಾಂಚಾಳರ ಬದುಕು ಮತ್ತು ಸ್ಥಿತಿ ಹೆಮ್ಮರವಾಗಿ ಬೆಳೆದು ನಿಂತಿರುವ ಮರದ ತಾಯಿ ಬೇರು ಒಣಗಿದಂತಾಗಿದೆ. ಹೀಗೆ ಒಟ್ಟಾರೆಯಾಗಿ ಪಾಂಚಾಳರ ಇತಿಹಾಸದ ಕಡೆಗೆ ಗಮನಹರಿಸಲಾಗಿದೆ. ಮೌಖಿಕತೆ, ಶಾಸನಗಳ, ಗ್ರಂಥಗಳ ಉಲ್ಲೇಖಗಳನ್ನು ಸವಿವರವಾಗಿ ಚರ್ಚಿಸಲಾಗಿದೆ.

***

ಎರಡನೇ ಪಾದ

ಅಧ್ಯಾಯ ೩

ಪಾಂಚಾಳ ಸಮಾಜದ ವೃತ್ತಿ ಜಾನಪದ

ಅಧ್ಯಾಯ ೪

ಪಾಂಚಾಳ ಸಮಾಜದ ಆಚರಣೆ ಮತ್ತು ನಂಬಿಕೆಗಳು

ಅಧ್ಯಾಯ-೩

ಪಾಂಚಾಳ ಸಮಾಜದ ವೃತ್ತಿ ಜಾನಪದ

ಜಾನಪದ ಕಣ್ಮರೆಯಾಗುತ್ತಿದೆ ಎಂಬ ಅಪಾಯದ ಅರಿವಿನಿಂದ ಜಾನಪದದತ್ತ ಆಸಕ್ತಿ ತೋರಲು ಆರಂಭಿಸಿದಾಗ ಜಾನಪದ ಮೌಖಿಕ ರೂಪಗಳಿಗೆ ಹೆಚ್ಚು ಹೊತ್ತು ಕೊಡಲಾಯಿತು. ಆದರೆ ಮೌಖಿಕ ಸಾಹಿತ್ಯ ರೂಪಗಳಂತೆಯೇ ಜಾನಪದ ವಸ್ತು, ಸಂಸ್ಕೃತಿ ಕೂಡ ಕಣ್ಮರೆಯಾಗುತ್ತಿದೆ. ಅದರ ಬಗ್ಗೆ ಎಲ್ಲಾ ಮಗ್ಗುಲುಗಳ ಅಧ್ಯಯನ ನಡೆಯಬೇಕಿದೆ. ತಲೆಮಾರಿನಿಂದ ತಲಮಾರಿಗೆ ಸಾಗಿಬಂದ ಹಾಗೂ ಮೌಖಿಕ ಜಾನಪದದಂತೆಯೇ ಪರಂಪರೆಯ ಪ್ರಭಾವ ಹಾಗೂ ವೈಯಕ್ತಿಕ ಬದಲಾವಣೆಗಳಿಗೆ ಹೀಡಾಗುವ ತಂತ್ರ, ಕುಶಲತೆಯ ವಿಧಾನ, ಸೂತ್ರಗಳು ಸೇರುತ್ತವೆ. ವಸತಿ, ಉಡುಗೆ, ತೊಡುಗೆ, ಅಹಾರ ತಯಾರಿಕೆ, ಕೃಷಿಕೆಲಸ, ಪಶುಸಾಕಣೆ, ಉಪಕರಣ ತಯಾರಿಕೆ, ಪೀಠೋಪಕರಣ ವಿನ್ಯಾಸ, ಪಾತ್ರೆ, ಪಡಗ ಇತ್ಯಾದಿಗಳ ಬಗ್ಗೆ ವಸ್ತು ಸಂಸ್ಕೃತಿಯ ಅಧ್ಯಯನಗಳು ನಡೆಯಬೇಕಿದೆ. ಗ್ರಾಮೀಣ ಪ್ರದೇಶದ ವೃತ್ತಿಗಳ ಅಧ್ಯಯನವು ಈ ಗುಂಪಿಗೆ ಸೇರುತ್ತವೆ.

'ಪಾಂಚಾಳ ಸಮಾಜದ ವೃತ್ತಿ ಜಾನಪದ' ಎಂದರೆ ಪಾಂಚಾಳರೈವರು ನಿರ್ವಹಿಸುವ ವೃತ್ತಿಗಳ ಪರಂಪರೆ, ಕಮ್ಮಾರ, ಬಡಗಿ, ಕಂಚುಗಾರ, ಅಕ್ಕಸಾಲಿಗ, ಶಿಲ್ಪಿ ಈ ಐದು ಜನರು ಕಮ್ಮಾರಿಕೆ, ಬಡಿಗಿತನ, ಕಂಚುಗಾರಿಕೆ, ಅಕ್ಕಸಾಲಿಕೆ, ಶಿಲ್ಪಗಾರಿಕೆಗಳನ್ನು ಹಿಂದಿನಿಂದ ನಡೆಸಿಕೊಂಡು ಬಂದಿರುವ ವೃತ್ತಿ ಪರಂಪರೆ ಎಂದು ತಿಳಿಯಬೇಕು. ಈ ವೃತ್ತಿಗಾರರ ಉತ್ಪತ್ತಿ (ಶಬ್ದ) ವೃತ್ತಿಯ ವಿಧಾನ, ಈ ವೃತ್ತಿಕಾರರು ತಯಾರಿಸುವ ಉಪಕರಣ ಮತ್ತು ಬಳಸುವ ಉಪಕರಣ, ತಂತ್ರಗಳು ಈ ಅಧ್ಯಾಯದಲ್ಲಿ ಅಡಕವಾಗಿದೆ. ಗ್ರಾಮೀಣ ಬದುಕಿನಲ್ಲಿ ಪರಂಪರಾಗತವಾಗಿ ಮುಂದುವರೆದು ಕೊಂಡುಬರುವಂಥ ವೃತ್ತಿಗಳನ್ನು ಗ್ರಾಮೀಣ ವೃತ್ತಿಗಳು, ಜಾನಪದ ಕಸುಬುಗಳು ಎನ್ನಬಹುದು. ಈ ವೃತ್ತಿಗಳಲ್ಲಿ ಮಾನವನ ಶ್ರಮವೇ ಮುಖ್ಯವಾಗಿದ್ದು ಕೆಲಸಕ್ಕೆ ಅನಿವಾರ್ಯವಾದಂಥ ಒಂದೆರಡು ಸರಳ ಯಂತ್ರಗಳನ್ನು (ಅವೂ ಕೂಡ ಮಾನವನಿಂದಲೇ ನಡೆಯುವಂತಹವುಗಳು) ರೂಪಿಸಿಕೊಂಡಿರುವುದರಿಂದ ಇವುಗಳನ್ನು ಕೈಕಸಬುಗಳು ಎಂತಲೂ ಕರೆಯುತ್ತಾರೆ. ಗ್ರಾಮೀಣ ವೃತ್ತಿಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಅವುಗಳ ಪಾರಂಪರಿಕ ಅಂಶ ಪ್ರತಿಯೊಂದು ವೃತ್ತಿಗೂ ಅದಕ್ಕೆ ವಿಶಿಷ್ಟವಾದ ಕಚ್ಚಾ ಸಾಮಾಗ್ರಿಗಳು, ಸಂಸ್ಕರಣ ವಿಧಾನಗಳು, ತಯಾರಿಕರ ಸೂತ್ರಗಳು, ವಿನ್ಯಾಸಗಳು, ಪರಿಷ್ಕರಣಾ ವಿಧಾನ ಹಾಗೂ ಕೆಲಸದ ಗುಣಮಟ್ಟವನ್ನು ಅಳೆಯುವ ಮಾನದಂಡಗಳು ಇರುತ್ತವೆ. ಕೆಲಸದ ತರಬೇತಿ ವಿಧಾನವೂ ಆಯಾ ವೃತ್ತಿಗೆ ವಿಶಿಷ್ಟವಾಗಿರುತ್ತದೆ. ಈ ವೃತ್ತಿಗಳಲ್ಲಿ ಕುಟುಂಬದ ಗಂಡಸರು ಹೆಂಗಸರು ಮಕ್ಕಳು ನಿಗದಿತ ರೀತಿಯಲ್ಲಿ ಭಾಗಿಯಾಗುತ್ತಾರೆ. ವೃತ್ತಿಗೆ ಎದುರಾಗುವ ತೊಡಕು ತೊಂದರೆಗಳು ಆಯಾ ವೃತ್ತಿಗೆ ವಿಶಿಷ್ಟ.

ಜೀವನಾವಶ್ಯಕ ಉಪಕರಣಗಳನ್ನು ತಯಾರಿಸುವ ವೃತ್ತಿಗಳನ್ನು ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿ ಸಮಾನವಾಗಿ ಕಾಣಬಹುದು. ಕುಂಬಾರಿಕೆ, ಚಮ್ಮಾರಿಕೆ, ಬಡಗಿತನ, ಕಮ್ಮಾರಿಕೆ ಇಂತಹವುಗಳು ಪ್ರತಿಯೊಂದು ಗ್ರಾಮದಲ್ಲೂ ಇದ್ದು ಸ್ಥಳೀಯರ ಅಗತ್ಯತೆಗಳನ್ನು ಪೂರೈಸುತ್ತಿರುತ್ತವೆ. ಆದರೆ ಕೆಲವೊಂದು ವೃತ್ತಿಗಳು ಆಯಾ ಪ್ರದೇಶದಲ್ಲಿ ಲಭ್ಯವಿರುವ ಕಚ್ಚಾ ಸಾಮಗ್ರಿಯನ್ನು ಅವಲಂಬಿಸಿ ವಿಶೇಷವಾಗಿ ಬೆಳೆದಿರುತ್ತವೆ. ಈ ಪಾಂಚಾಳ ವೃತ್ತಿಗಳನ್ನು ಕೂಡ ನಾವು ವೃತ್ತಿ ಜಾನಪದದಲ್ಲಿ ಅಧ್ಯಯನ ಮಾಡಲಾಗುತ್ತದೆ. ಇವುಕೂಡ ವೃತ್ತಿ ಜಾನಪದಗಳೇ ಎಲ್ಲಿ ಮೂಲ ಪರಂಪರೆಯಿಂದ ಒಂದು ವೃತ್ತಿಯಿಂದ ಜೀವನದ ಅವಶ್ಯಕತೆಗಳನ್ನು ಪೂರೈಕೆಯ ಬೇಡಿಕೆಗಳು ಇರುತ್ತವೆಯೋ ಅವು ವೃತ್ತಿ ಜಾನಪದದಲ್ಲಿ ಸೇರುತ್ತವೆ. ಅಂದರೆ ಒಂದನ್ನು ಅವಲಂಬಿಸಿ ಇನ್ನೊಂದಕ್ಕೆ ಅನುಕೂಲವಾಗುವುದು ಅನಿವಾರ್ಯ.

ಚಮ್ಮಾರಿಕೆ ಕೂಡ ಪ್ರಾಚೀನವಾದ ವೃತ್ತಿ. ಜನಪದ ಸಾಹಿತ್ಯದಲ್ಲಿ ಚಮ್ಮಾರರು ಹಾಗೂ ಚಮ್ಮಾರಿಕೆಯ ಬಗ್ಗೆ ಅನೇಕ ಆಚರಣೆ, ನಂಬಿಕೆಗಳು ಹಾಗೂ ವೃತ್ತಿ ಜಾನಪದ ವೈಶಿಷ್ಟ್ಯೆಇದ್ದೇ ಇರುತ್ತದೆ. ಅವನು ಉಪಕರಣಗಳನ್ನು ಮಾಡುವಾಗ ಅವುಗಳನ್ನು ದೇವರೆಂಬ ನಿಲುವಿನಿಂದ ಕಾಣುತ್ತಾನೆ. ಯಾವ ವೃತ್ತಿ ವೃತ್ತಿಕಾರನ ಹೊಟ್ಟೆಯನ್ನು ತುಂಬಿಸುತ್ತದೆಯೋ ಅದು ಅವನಿಗೆ ದೈವವೇ ಸರಿ. ಅದರಂತೆ ಈ ಪಾಂಚಾಳರ ವೃತ್ತಿಗಳೂ ಕೂಡ ಆಚರಣೆಯಲ್ಲಿ ಇತರರಿಗಿಂತ ಭಿನ್ನವಾಗಿ ಕಂಡರೂ ಎಲ್ಲಾ ವೃತ್ತಿಕಾರರಿಗೂ ತಮ್ಮದೇ ಅದ ಆಚರಣೆ, ನಂಬಿಕೆಗಳನ್ನು ವೃತ್ತಿಯಲ್ಲಿ ಬೆಳೆಸಿಕೊಂಡು ಬಂದಿರುತ್ತಾರೆ. ಮರವನ್ನು ಕಚ್ಚಾ ಸಾಮಗ್ರಿಯಾಗಿಟ್ಟುಕೊಂಡು ಮಾಡುವ ವೃತ್ತಿ ಬಡಗಿತನ. ಕಟ್ಟಿಗೆಯ ಉಪಯೋಗವನ್ನು ತಿಳಿದ ಮಾನವ ವ್ಯಾಪಕವಾಗಿ ಅದರ ಪ್ರಯೋಜನ ಪಡೆದಿದ್ದಾನೆ. ಕೃಷಿ ಸಲಕರಣೆಗಳು, ಗೃಹೋಪಕರಣಗಳು, ವಸತಿ ನಿರ್ಮಾಣಗಳು, ಮನೋರಂಜನಾ ಸಾಧನಗಳು ಹೀಗೆ ಕಟ್ಟಿಗೆಯ ಬಳಕೆ ಸರ್ವತೋಮುಖವಾಗಿದೆ. ಕಟ್ಟಿಗೆಯ ಬಳಕೆ ಎಷ್ಟು ಸರ್ವತೋಮುಖವಾಗಿದೆ ಎಂದರೆ ಶಿಲಾಯುಗ, ಲೋಹಯುಗಗಳಂತೆ ಕಾಷ್ಠಯುಗ ಎಂಬ ಒಂದು ಯುಗವನ್ನು ಕಾಣಬಹುದು. ಬಡಗಿತನ ಕಾಷ್ಠ ಜಾನಪದದ ಒಂದು ಅಂಗಮಾತ್ರ ಅದರಂತೆ ಪ್ರತಿಯೊಂದು ವೃತ್ತಿಯಲ್ಲಿ ಈ ತರದ ವಿಧಾನ, ಪ್ರಾಬಲ್ಯವನ್ನು ಕಾಣಬಹುದು. ಈ ಪಾಂಚಾಳರ ಪಂಚ ವೃತ್ತಿಗಳನ್ನು ನಾವು ಪಾಂಚಾಳ ವೃತ್ತಿ ಜಾನಪದದಲ್ಲಿ ಅವರ ಇತಿಹಾಸ, ಉತ್ಪತ್ತಿ, ತಯಾರಿಸುವ ಉಪಕರಣ. ಬಳಸುವ ಉಪಕರಣಗಳನ್ನು ಜಾನಪದ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಅದನ್ನೇ ಪಾಂಚಾಳ ಸಮಾಜದ ವೃತ್ತಿ ಜಾನಪದ ಎಂದು ಕರೆಯಲಾಗಿದೆ.

ಅ. ಕಮ್ಮಾರಿಕೆ

ಪಾಂಚಾಳರ ಪಂಚವೃತ್ತಿಗಳಲ್ಲಿ ಕಮ್ಮಾರಿಕೆ ಪ್ರಮುಖಪಾತ್ರವಹಿಸುತ್ತದೆ. ಕಮ್ಮಾರನು ಕೂಡ ವಿಶ್ವಕರ್ಮನ ಮಗನಾಗಿ ಮನು ಎಂಬ ಹೆಸರಿನಿಂದ ಕಬ್ಬಿಣ ಕೆಲಸವನ್ನು ನಿರ್ವಹಿಸುವ ವೃತ್ತಿಗಾರ, ಕರಕುಶಲ ಕರ್ಮಿಗಳ ಹೆಸರುಗಳು ಅವರು ಮಾಡುವ ಕೆಲಸಕ್ಕನುಗುಣವಾಗಿ ವೃತ್ತಿನಾಮಗಳು ರೂಢಿಗತವಾಗಿವೆ. ಕುಂಬಾರನು ಮಣ್ಣಿನಿಂದ ಮಡಿಕೆಯನ್ನು ತಯಾರಿಸುತ್ತಿದ್ದರಿಂದ ಕುಂಬಾರ ಎಂಬ ಹೆಸರು ಬಂದಂತೆ ಚರ್ಮ ಕಾಯಕವನ್ನು ನಿರಂತರವಾಗಿ ತೊಡಗಿಸಿದ್ದರಿಂದ ಚಮ್ಮಾರ ಎಂಬ ನಾಮಗಳು ಬೆಳಕಿಗೆ ಬಂದಂತೆ ಈ ಕಮ್ಮಾರನು ಕೂಡ ಕಬ್ಬಿಣದ ಕೆಲಸದಲ್ಲಿ ತೊಡಗಿಸಿಕೊಂಡಿದ್ದರಿಂದ ಕಮ್ಮಾರ ಕಂಬಾರನಾದ ಹೀಗೆ ಆಯಾ ವೃತ್ತಿಕಾರರು ತನ್ನ ಕರ್ಮಗಳಿಂದ ಆಯಾ ಕುಲನಾಮಗಳು ಬೆಳೆದುಕೊಂಡಿವೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಗ್ರಾಮೀಣ ಕುಲ ಕಸುಬುಗಳು ಪಾರಂಪರಿಕವಾದಂತವುಗಳು ಭಾರತದ ಗ್ರಾಮೀಣ ಸಮಾಜದ ರಚನೆಯಲ್ಲಿ ವೃತ್ತಿ ಮತ್ತು ಜಾತಿಗಳು ಪರಸ್ಪರ ಅವಲಂಬಿತವಾಗಿರುತ್ತವೆ. ಒಂದು ಜಾತಿಗೆ ನಿರ್ದಿಷ್ಟವಾದ ಕೆಲಸ ಅಥವಾ ಕಸುಬು ಇನ್ನೊಂದು ಕಸುಬಿಗೆ ಅವಲಂಬಿಯಾಗಿ ತನ್ನಷ್ಟಕ್ಕೆ ತಾನೆ ಒಂದು ಕಸುಬು ಸ್ವತಂತ್ರವಾಗಿ ಅಸ್ತಿತ್ವದಲ್ಲಿರದೆ ಪರಸ್ಪರ ಕೊಡು ಕೊಳ್ಳುವಿಕೆಯ ಮೂಲಕ ಒಟ್ಟು ಸಮಾಜ ರಚನೆಯ ಭಾಗವಾಗಿ ಸಮಾಜದ ವ್ಯವಸ್ಥಿತ ಜೀವನ ಕ್ರಮಕ್ಕೆ

ಉಪಕಾರಿಯಾಗಿ ಉಳಿದುಕೊಂಡು ಬೆಳೆದುಕೊಂಡು ಬಂದಿದೆ. ಇತರ ವೃತ್ತಿಕಾರರಿಗೆ ಮತ್ತು ಪಂಚವೃತ್ತಿಗಳಲ್ಲಿ ಪ್ರಮುಖವಾಗಿ ಬಡಗಿತನ ಮತ್ತು ಕಮ್ಮಾರರು ಒಂದಲ್ಲ ಒಂದು ಕೆಲಸಕ್ಕೆ ಬೇಕಾಗಿಯೇತಿರುತ್ತಾರೆ. ವ್ಯವಸಾಯ ಮತ್ತು ಗೃಹ ಬಳಕೆ ವಸ್ತುಗಳ ಜೊತೆಗೆ ಗೃಹ ನಿರ್ಮಾಣಕ್ಕೂ ಈ ಎರಡು ವೃತ್ತಿಕಾರರು ಅವಶ್ಯಕವಾಗಿ ಬೇಕು. ಇವರು ಇತರ ವೃತ್ತಿ ವರ್ಗಕ್ಕೆ ಪರಸ್ಪರ ಅವಲಂಬಿತರಾಗಿರುತ್ತಾರೆ.

ಕಮ್ಮಾರ ಎಂಬ ಶಬ್ದದ ಉತ್ಪತ್ತಿಯನ್ನು ನಾವು ಈ ರೀತಿಯಾಗಿ ನೋಡಬಹುದು. ಕಮ್ಮಾರ– ಕರ್ಮಹರ–ಕಂಬರ–ಕಮ್ಮರ–ಕಂಬಾರ ಎಂದು ಕನ್ನಡದ ಪ್ರಾಚೀನ ಶಾಸನಗಳಲ್ಲಿ, ಕಾವ್ಯ ವ್ಯಾಕರಣಗಳಲ್ಲಿ ಕಾಣಿಸಿಕೊಂಡಿವೆ. ಕಬ್ಬೊನ್, ಕರ್ಬೊನ್ ಎಂದರೆ ಕಬ್ಬಿಣ, ಕಮ್ಮಟ ಎಂದರೆ ಕುಲುಮೆ, ಕರ್ಮ+ಕಾರ–ಕಮ್ಮಾರ ಆಗಿದೆ ಎಂದು ಮೂಡಿಬರುತ್ತದೆ. ಈಗ ಬಳಕೆಯಲ್ಲಿ ಕಮ್ಮಾರ ಮತ್ತು ಕಂಬಾರ ಎರಡೂ ರೂಪಗಳು ಬಳಕೆಯಲ್ಲಿವೆ. ಇನ್ನು ವಿವರವಾಗಿ ಹೇಳಬೇಕೆಂದರೆ ಬಹುಶಃ ಇಲ್ಲಿ 'ಕ' ಅಕ್ಷರವು ಕಬ್ಬಿಣದ ಸಂಕೇತಿಸಿದರೆ 'ಮಾರ' ಎಂಬುದು ತಯಾರಿಸುವವನು ಎಂಬುದನ್ನು ಸೂಚಿಸುತ್ತಿರಬೇಕು. ಕಬ್ಬಿಣ (ಕಪ್ಪು) ಸಾಮಾನ್ಯರ ಲೋಹ ಎಂಬ ಭಾವನೆ ಪ್ರಾರಂಭದಲ್ಲಿಯೇ ಬೇರೂರವಂತೆ ಕಾಣಿಸುತ್ತದೆ.

ಆದ್ದರಿಂದ ಕಬ್ಬಿಣ ಕೆಲಸಗಾರರನ್ನು (Blocksmith) ಕಮ್ಮಾರ ಎಂದು ಸಂಭೋಧಿಸಲಾಗಿದೆ. ಕುಂಬ+ಕಾರ ಕುಂಬಾರ, ಬಳೆ+ಕಾರ= ಬಳೆಗಾರ, ಮಾಲೆ+ಕಾರ= ಮಾಲೆಗಾರ, ಕಂಚು+ಕಾರ=ಕಂಚುಗಾರ ಮುಂತಾದ ಪದಗಳಲ್ಲಿ ಆಯಾ ವೃತ್ತಿಯವರು ಮಾಡುವ ಕಾಯಕವನ್ನು ಖಚಿತವಾಗಿ ತಿಳಿದಿರುವುದು ಕಂಡುಬರುತ್ತದೆ. ಆದರೆ ಕಮ್ಮ+ಕಾರ=ಕಮ್ಮಾರ ಎಂಬ ಪದದಲ್ಲಿ ಕಬ್ಬಿಣ ಪದವು ಖಚಿತವಾಗಿ ಬಳಕೆಯಾಗದಿರುವುದನ್ನು ಗಮನಿಸಿದರೆ ಅದೊಂದು ಕೀಳು ಕೆಲಸವೆಂದು ಭಾವಿಸಿರುವಂತೆ ತೋರುತ್ತದೆ ಎಂದು ಈಶ್ವರಪ್ಪ ಎಂ.ಜಿ. ರಲ್ಲಿ ಅಭಿಪ್ರಾಯ ಪಡುತ್ತಾರೆ. ಆದರೆ ಈ ವೃತ್ತಿ ಕೆಲಸಗಾರರು ಕೀಳು ವೃತ್ತಿ ಎಂದು ತಿಳಿದುಕೊಂಡಿದ್ದರೆ ಆ ಕುಶಲಕರ್ಮಿಗಳು ಇವತ್ತಿನವರೆಗೂ ಮೇಲುಕೀಳು ಎಂಬ ಭಾವನೆಯನ್ನು ತೂರೆದು ತಮ್ಮ ಕಾಯಕಗಳನ್ನು ಮುಂದುವರಸಿಕೊಂಡು ಬಂದಿರುವುದಕ್ಕೆ ಸಾಧ್ಯವಿರಲಿಲ್ಲ ಎಂಬುದು ಮೇಲ್ನೋಟಕ್ಕೆ ತಿಳಿಯಬಹುದಾಗಿದೆ. ಆ ಕೆಲಸಗಾರರು ಆಯಾ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಾವು ಮಾಡುವ ಕಾಯಕದಲ್ಲಿ ದೈವತ್ವವನ್ನು ಪಡೆದವರು. ನಮ್ಮ ಗ್ರಾಮೀಣ ಜನರ ಬದುಕು ನಿಸ್ಸಂಕೋಚ ಕಾಯಕವಾಗಿತ್ತು ಇಲ್ಲದಿದ್ದರೆ ಅವುಗಳು ಎಂದೋ ಮೂಲೆ ಗುಂಪಾಗುತ್ತಿದ್ದವು. ಮುಂದುವರೆದು ಕಬ್ಬಿಣದ ಉಪಕರಣ ತಯಾರಿಸುವ ನಿರ್ದಿಷ್ಟ ಪ್ರದೇಶಕ್ಕೆ 'ಕಮ್ಮಗಾರ' ಎಂದು ಕರೆಯುತ್ತಿದ್ದರು. ಕಮ್ಮಗಾರದಲ್ಲಿ ಕೆಲಸ ನಿರ್ವಹಿಸುವವನೇ ಕಮ್ಮಾರನಿರಬೇಕು ಎಂದು, ಇವರು ಕಮ್ಮ ಎಂಬುದು ಕರ್ಮನ್ ಎಂಬ ಶಬ್ದದಿಂದ ಬಂದಿದೆ ಎಂದು ರಾಜಶೇಖರ್ ಬಡಿಗೇರ ಅಭಿಪ್ರಾಯ ಪಡುತ್ತಾರೆ.

ಕರ್ಮನ್ ಶಬ್ದಕ್ಕೆ ಡಾ. ಅಪ್ಪೆಯವರು ಸಂಸ್ಕೃತ, ಇಂಗ್ಲೀಷ್ ಶಬ್ದಕೋಶದಲ್ಲಿ Work , Action, Duty, Religious Rile ಇತ್ಯಾದಿ ಅರ್ಥಗಳನ್ನು ಕೊಟ್ಟಿದ್ದಾರೆ. ಕರ್ಮಜೀವ ಎಂಬುದಕ್ಕೆ An Action, ಕರ್ಮಕಾರ ಎಂಬ ಪದಕ್ಕೆ a Machanic as arlison, A blacksmith ಮೊದಲಾದ ಅರ್ಥಗಳಿವೆ ಎಂದಿದ್ದಾರೆ. (ರಾಜಶೇಖರ್ ಬಡಿಗೇರ ಸತ್ಯಾನ್ವೇಷಣೆ–೧೯೯೧–೧೯೮೧) ಹಾಗೆಯೇ ಕರ್ಮನ್ ಎಂಬ ಶಬ್ದ ಕೊನೆಯ 'ನ್' ವ್ಯಂಜನವನ್ನು ಕಳೆದುಕೊಂಡು, 'ಎ' ಕಾರಂತವಾಗಿ ಕಮ್ಮೆ ಎಂದು 'ಅ' ಕಾರಂತವಾಗಿ ಕರ್ಮ ಎಂದು ಸಮಸಂಸ್ಕೃತ ರೂಪದಲ್ಲಿ ಹಳೆ ಕನ್ನಡದಲ್ಲಿ ಪ್ರವೇಶಿಸಿ ಮುಂದೆ ಕ್ರಮವಾಗಿ ಕಮ್ಮ ಮತ್ತು ಕಮ್ಮೆ ಎಂಬ ತದ್ಭವ ರೂಪಗಳನ್ನು ಪಡೆದುಕೊಂಡುದಾಗಿ ತಿಳಿದುಬರುತ್ತದೆ. ತೆಲುಗು ಭಾಷೆಯಲ್ಲಿ ಕಮ್ಮಲಿ ಎಂದರೆ ಕಮ್ಮಾರ ಪದದ ಅರ್ಥವನ್ನು ಕೊಡುತ್ತದೆ. ಕನ್ನಡ ಪದ ಪರ್ಬೊನ್, ಕಪೋರ್ನ್ ಎಂಬ ಮೂಲ ರೂಪದಿಂದ ಬಂದಿದ್ದು ಕರಿದು+ಪೊನ್–ಕರ್ಪೊನ್–ಕರ್ಬೊನ್–ಕಬ್ಬೊನ್–ಕಬ್ಬುನ –ಕಬ್ಬಿಣ, ಕರಪೊನ್ ಕಬ್ಬಿಣ ವಾಗಿರಬೇಕು ಎಂದು (ಈಶ್ವರಪ್ಪ ಎಂ.ಜಿ. ೧೯೯[illegible]) ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿಯಾಗಿ ಕಮ್ಮಾರ ಮತ್ತು ಕಬ್ಬಿಣದ ಶಬ್ದದ ಉತ್ಪತ್ತಿಯನ್ನು ನೋಡಬಹುದು.

ಪಾಂಚಾಳರಲ್ಲಿ ಮುಖ್ಯವಾಗಿ ಕಮ್ಮಾರರು ಆಧುನಿಕ ಪೂರ್ವಕಾಲದ ಕರ್ನಾಟಕದಲ್ಲಿ ಆಚಾರಿಗಳು ಅಥವಾ ಓಜರು ಕಲ್ಲಿನ ಕೆಲಸ, ಕಂಚುಗಾರಿಕೆ, ಮರಗೆಲಸ, ಕಮ್ಮಾರಿಕೆ, ಸ್ವರ್ಣಗಾರಿಕೆಯ ವೃತ್ತಿಯಲ್ಲಿ ಈ ಐದು ವಿಧವಾದ ಕಸುಬುಗಳಲ್ಲಿ ತೊಡಗಿದ್ದರುಮತ್ತು ತೊಡಗಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯಬಹುದು.

ಶಾಸನಗಳಲ್ಲಿ ಇವರ ಉಲ್ಲೇಖಗಳು ಉಪಲಬ್ಧವಿದೆ. ಡಾ. ಜಿ.ಆರ್. ಕುಪ್ಪ ಸ್ವಾಮಿಯವರು (ಎಕನಾಮಿಕ್ ಕಂಡಿಷನ್ ಇನ್ ಕರ್ನಾಟಕ. ಪು-೧೭೬-೧೭೮) ಕ್ರಿ.ಶ.೯೭೩ ರಿಂದ ೧೩೨೬ ರ ಅವಧಿಯಲ್ಲಿ ಅನೇಕ ರೀತಿಯ ಕೈಗಾರಿಕೆಗಳನ್ನು ಗುರುತಿಸಿ ಅವುಗಳಲ್ಲಿ ಕಮ್ಮಾರಿಕೆ ಮತ್ತು ಬಡಗಿತವನ್ನು ಕೂಡ ಕೈಗಾರಿಕೆಗಳೆಂದು ಪರಿಗಣಿಸಿದ್ದಾರೆ. ಇವು ಆಯಾ ಜನರಿಗೆ ಉದ್ಯೋಗವನ್ನು ಕಲ್ಪಿಸುತ್ತಿದ್ದವೆಂದು ತಿಳಿದುಬರುತ್ತದೆ. ಕರ್ನಾಟಕದ ಕೈಗಾರಿಕೆಯ ಲಕ್ಷಣಗಳನ್ನು ಕುರಿತು ಡಾ. ಎಸ್. ಗುರುರಾಜಚಾರ್ (ಸಮ್ ಆಸ್ಪೆಕ್ಟ್ ಆಫ್ ಎಕಾನಾಮಿಕ್ಸ್ ಅಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ ಪುಟ-೬೮) ರವರು ಈ ರೀತಿ ಹೇಳುತ್ತಾರೆ. ಕರಕುಶಲತೆಯು ಹೆಚ್ಚಿನ ಖರ್ಚಿನ ಬಾಬತ್ತು ಇಲ್ಲದ ಸರಳ ಉತ್ಪಾದನಾ ವಿಧಾನಗಳು ಕರ್ನಾಟಕದ ಕೈಗಾರಿಕೆಯ ಸಾಮಾನ್ಯ ಲಕ್ಷಣ. ಈ ಕಲಾಕಾರರ ಮತ್ತು ಕರಕುಶಲಗಾರರ ವಿವಿಧರೀತಿಯ ಕೈಗಾರಿಕೆಗಳೆಲ್ಲವೂ ಮೂಲತಃ ಗೃಹ ಕೈಗಾರಿಕೆಯ ಮಾದರಿಯಲ್ಲೂ ಇದ್ದವು. ತಮ್ಮ ಅಸುಪಾಸಿನಲ್ಲಿಯೇ ಸಿಗುವ ಪ್ರಕೃತಿ ದತ್ತವಾದ ಕಚ್ಚಾ ವಸ್ತುಗಳನ್ನೆ ತಮ್ಮ ಕೈಗಾರಿಕೆಯ ಮೂಲ ಸಾಮಾಗ್ರಿಯಾಗಿ ಬಳಸುತ್ತಿದ್ದರು. ಹಾಗೂ ತಮ್ಮ ಉತ್ಪಾದನೆಗಳನ್ನು ವಾರಾಂತ್ಯದ ಸಂತೆಯಲ್ಲಿ ಅಥವಾ ಹತ್ತಿರದ ಮಾರುಕಟ್ಟೆಯಲ್ಲಿ ಇಟ್ಟು ಮಾರುತ್ತಿದ್ದರು. ಈ ಕಮ್ಮಾರಿಕೆಯು ವ್ಯವಸಾಯೋತ್ಪತ್ತಿಯ ಉಪಕರಣಗಳನ್ನು ತಯಾರಿಸುತ್ತಿದ್ದರಿಂದ ಈ ಕಮ್ಮಾರಿಕೆ ಇವತ್ತು ಹೆಚ್ಚು ಬಲಶಾಲಿಯಾದ ವೃತ್ತಿ ಎಂದು ಹೇಳಬಹುದು. ಕಬ್ಬಿಣದ ವೃತ್ತಿಯಲ್ಲಿ ಅಥವಾ ಕಮ್ಮಾರಿಕೆಯ ವೃತ್ತಿಯಲ್ಲಿ ತೊಡಗಿದ್ದ ಕಮ್ಮಾರರು ಪ್ರಾಚೀನ ಕಾಲದಲ್ಲಿ ಹಾಗೂ ರಾಜರ ಆಳ್ವಿಕೆಯ ಕಾಲದಲ್ಲಿ ಎರಡು ಮುಖ್ಯವಾದ ಅಗತ್ಯಗಳನ್ನು ತುಂಬಿಕೊಂಡಿದ್ದರು.

೧. ವ್ಯವಸಾಯೋಪಕರಣಗಳು ಮತ್ತು ಗೃಹೋಪಕರಣ ತಯಾರಿಕೆ

೨. ಯುದ್ಧೋಪಕರಣಗಳ ಉತ್ಪಾದನೆ

ಇವುಗಳಲ್ಲಿ ಮೊದಲನೆಯ ಸಾಲಿಗೆ ಸೇರಿದ ಕುಡುಗೋಲು, ಹಾರೆ, ಗುದ್ದಲಿ, ಸಲಿಕೆ, ಕುಳ ಮೊದಲಾದ ವ್ಯವಸಾಯೋಪಕರಣಗಳನ್ನು ಹಳ್ಳಿಯ ಮಟ್ಟದಲ್ಲಿ ಆಯಾ ಹಳ್ಳಿಗಳಲ್ಲಿದ್ದ ಕಮ್ಮಾರರು ಸಣ್ಣ ಪ್ರಮಾಣದಲ್ಲಿ ತಯಾರಿಸಿಕೊಡುತ್ತಿದ್ದರು. ಇದು ಗುಡಿಕೈಗಾರಿಕೆಯ ಮಾದರಿಯಲ್ಲಿ ನಡೆಯುತ್ತಿದ್ದಿರಬಹುದು. ಈ ಕಮ್ಮಾರರನ್ನು ಗ್ರಾಮಸ್ಥರು ಆಯಗಾರರಲ್ಲಿ ಒಬ್ಬನೆಂದು ಪರಿಗಣಿಸಿ ವಾರ್ಷಿಕ ಆಯವನ್ನು ಈ ವೃತ್ತಿಯ ಮೂಲಕ ಸಾಗಿಸುತ್ತ ಬಂದಿದ್ದಾರೆ. ಸ್ವಲ್ಪ ಇತಿಹಾಸದ ಕಡೆ ಗಮನ ಹರಿಸಿದಾಗ ಅವರ ದಾಖಲೆಯನ್ನು ತಿಳಿದುಕೊಳ್ಳಬಹುದು. ಕ್ರಿ.ಶ. ೧೩೪೫ ರಲ್ಲಿ ಎಲ್ಲೋಜ ತಿಮ್ಮೋಜ ಮತ್ತು ಮಲ್ಲೋಜ ಎಂಬ ಕಮ್ಮಾರರು ನೀರನ್ನು ಎತ್ತುವ ಏತಕ್ಕಾಗಿ ಕಬ್ಬಿಣದ ಬಾನಿಯನ್ನು ತಯಾರು ಮಾಡುತ್ತಾರೆ. ಬಾವಿಯಿಂದ ನೀರೆತ್ತುವ ಈ ದೋಣಿಯನ್ನು ಧರ್ಮಕ್ಕೆಂದು ಮಾಡಿಕೊಟ್ಟ ಇವರು ತಮ್ಮನ್ನು 'ಶ್ರೀಯುತ ಕಾಳಿಕಾ ಮಟೇಶ್ವರ ದೇವರ ವರ ಪ್ರಸಾದಿಗಳು' ಎಂದು ಹೇಳಿಕೊಂಡಿದ್ದಾರೆ. (ಕುಮಾರಸ್ವಾಮಿ-ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯವರು. ಪುಟ ೬೭) ಇದರಿಂದ ಏತದ ಪದ್ಧತಿ ಇತ್ತೆಂದು ಮತ್ತು ಅದನ್ನು ತಯಾರಿಸುವ ಒಂದು ವೃತ್ತಿ ವರ್ಗವಾದ ಕಮ್ಮಾರರು ಎಂಬುದನ್ನು ತಿಳಿಯ ಪಡಿಸುತ್ತವೆ.

ಯುದ್ಧೋಪಕರಣವು ಎರಡನೆಯದಾಗಿ ವರ್ಗೀಕರಿಸಿ ಕಮ್ಮಾರಿಕೆ ಸಾಂಸ್ಥಿಕವಾಗಿ ಸುಸಂಘಟಿತವಾಗಿ ಬೆಳೆದಿರಲಿಕ್ಕೆ ಸಾಧ್ಯವಾಗಿರಬಹುದು. ಆಗಿನ ಕಾಲದಲ್ಲಿ ರಾಜಮಹಾರಾಜರು ಸದಾ ಯುದ್ಧದಲ್ಲಿ ನಿರತರಾಗಿರುತ್ತಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಯುದ್ಧಗಳಲ್ಲಿ ಸಹಜವಾಗಿ ಅನೇಕ ವಿಧವಾದ ಆಯುಧಗಳು, ಕವಚಗಳು ಬಳಕೆಯಾಗುತ್ತಿದ್ದವು ಎಂಬುದಕ್ಕೆ ಅನೇಕ ವಿದ್ವಾಂಸರು ಉದಾಹರಣೆ ಕೊಟ್ಟಿದ್ದಾರೆ. ಈ ಆಯುದಗಳನ್ನು ಮತ್ತು ಕವಚಗಳನ್ನು ಅಧಿಕವಾಗಿ

ತಯಾರಿಸಬೇಕಿತ್ತು ಆದ್ದರಿಂದ ರಾಜ ಮಹಾರಾಜರ ಅಡಿಯಲ್ಲಿ ಕಮ್ಮಾರರು ಯುದ್ಧೋಪಕರಣಗಳನ್ನು ತಯಾರಿಸುತ್ತಿದ್ದರು. ಪ್ರೊಫೆಸರ್ ಎಂ. ಚಿದಾನಂದಮೂರ್ತಿಯವರು (ಕನ್ನಡ ಶಾಸನಗಳ ಸಾಂಸ್ಕೃತಿ ಅಧ್ಯಯನ ಪುಟ-೨೫೭) ಕರವಾಳ್, ತೋಲವಾಳ್ ಎಂಬ ಕತ್ತಿಗಳನ್ನು ಕಡಿತಲೆ ಎಂಬ ಖಡ್ಗಗಳನ್ನು ಸಬಳ, ಕೊಂಡ, ಶಲ್ಯ, ಭಲ್ಯ, ಶೂಲ, ಕರ್ಕಡೆ, ಸುರಿಗೆ, ಮುಸಲ, ಭಿಂಡಿವಾಳ, ಈಟಿ, ಪಂಚರಾಯುಧ, ತೊಮರ, ಮುಸುಂಡಿ, ಮುದ್ಗರ ಮೊದಲಾದ ಯುದ್ಧಾಯುಧಗಳ ದೀರ್ಘವಾದ ಪಟ್ಟಿಯನ್ನು ಕೊಡುತ್ತಾರೆ. ಗುರಾಣಿಯನ್ನು ಬಳಸುತ್ತಿದ್ದುದಾಗಿ ಹೇಳಿದ್ದಾರೆ. ಈ ಆಯುಧಗಳನ್ನು ಬಂಡಿಯಲ್ಲಿ ಏರಿಕೊಂಡು ಯುದ್ಧಕ್ಕೆ ಹೋಗುತ್ತಿದ್ದರು ಎಂದು ಕೂಡ ಹೇಳುತ್ತಾರೆ. ಅಂದರೆ ಈ ವಿವಿಧ ರೀತಿಯ ಆಯುಧಗಳು ಹೆಚ್ಚಾಗಿ ಏಕ ಕಾಲದಲ್ಲಿ ಬೇಕಾಗುತ್ತಿದ್ದವೆಂಬುದು ತಿಳಿಯುತ್ತದೆ. ಈ ಯುದ್ಧೋಪಕರಣಕ್ಕಾಗಿ ತಯಾರಿಕೆಯು ಬಹು ವ್ಯವಸ್ಥಿತವಾಗಿ ನಡೆಯುತ್ತಿದ್ದ ಆ ಕಸುಬಿನವರಾದ ಅಥವಾ ಈ ವೃತ್ತಿಯಲ್ಲಿ ಕರಗತವಾದ ಕಮ್ಮಾರರಿಂದಲೇ ತಯಾರಿಸಲಾಗುತ್ತಿದ್ದವು ಎಂಬ ನಿಲುವಿಗೆ ಬರಬಹುದು.

ವಿಲಿಯಂ ಕೊಯಲೋ (ದಿ. ಹೊಯ್ಸಳ ವಂಶ- ಪುಟ-೨೫೪) ರವರು ಹಳೆ ಬೀಡಿನ ಕೇದಾರೇಶ್ವರ ಗುಡಿಯ ಗೋಡೆಯ ಮೇಲಿನ ಶಿಲ್ಪದಲ್ಲಿ ಉಕ್ಕಿನ ಹುರುಪೆಗಳಿಂದ ಕೂಡಿದ ಕಬ್ಬಿಣದ ಕವಚವು ಯುದ್ಧದ ಕುದುರೆಯ ದೇಹವನ್ನು ಆವರಿಸಿರುವುದನ್ನು ಸವಾರನೂ ಕೂಡ ತನ್ನ ಕಾಲಿನವರೆಗೂ ಮುಚ್ಚಿರುವ ಲೋಹದ ಕವಚ ತೊಟ್ಟಿರುವುದನ್ನು ತಲೆಗೆ ಶಿರಸ್ತ್ರಾಣ ಹಾಕಿರುವುದನ್ನು ಗುರುತಿಸುತ್ತಾರೆ. ಈ ಅಭಿಪ್ರಾಯವನ್ನು ಈ ರೀತಿ ಹೇಳಬಹುದು. ಈ ಕವಚಗಳನ್ನು ಶಿರಸ್ತ್ರಾಣಗಳನ್ನು ತಯಾರು ಮಾಡುವುದರಲ್ಲಿ ಪರಿಣತಿ ಹೊಂದಿದ ಕಮ್ಮಾರರು ಇದ್ದಿರಲೇಬೇಕು ಎಂಬುದನ್ನು ಊಹಿಸಬಹುದು. ಈ ಆಯುಧಗಳನ್ನು ತಯಾರಿಸಲು ವ್ಯವಸ್ಥಿತವಾದ ಸ್ಥಳ ಅಥವಾ ಪ್ರದೇಶ, ಅದಕ್ಕೆ ಪೂರಕವಾದ ಉಪಕರಣಗಳು ಆವಾಗಲೇ ಇರುವ ಸೂಚನೆಗಳು ಮತ್ತು ಆವಾಗಲೇ ಅವುಗಳನ್ನು ತಯಾರಿಸುವ ವೃತ್ತಿಗಾರರ ಸುಳಿವು ಸಿಗುತ್ತದೆ.

ಕ್ರಿ.ಶ. ೧೧ನೇ ಶತಮಾನದ ಮೈಸೂರಿನ ಶಾಸನವು 'ಬಲ್ಲಸಿಯಾ' ಎಂಬುವನು ಕತ್ತಿಗಳನ್ನು ತಯಾರಿಸುತ್ತಿದ್ದುದಾಗಿಯೂ ಅವನು ಖಡ್ಗಾದಿ ಶಸ್ತ್ರಗಳನ್ನು ಬಲ್ಲವನಾಗಿದ್ದನೆಂದು ತಿಳಿದುಬರುತ್ತದೆ. (ಗುರರಾಜಾಚಾರ್ ಎಸ್-ಪೂರ್ವೋತ್ತರ, ಪುಟ-೮೮) ನಮ್ಮ ಪ್ರಾಚೀನ ಕರ್ನಾಟಕದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು ತಿಳಿಯಲು ಹೊರಟವರಿಗೆ ಕಮ್ಮಾರರನ್ನು ತಿಳಿಯುವುದು ಬಹಳಮುಖ್ಯವಾಗುತ್ತದೆ. ಇವರ ಉಲ್ಲೇಖವು ಶಾಸನಗಳಲ್ಲಿ ವಿರಳವಾಗಿದೆ. ಈ ಕೊರತೆಯನ್ನು ಕನ್ನಡದ ಕಾವ್ಯಗಳಲ್ಲಿ ನೋಡಬಹುದು. ಕನ್ನಡದ ಕೆಲವು ಪ್ರಾಚೀನ ಕಾವ್ಯಗಳಲ್ಲಿ ಕ್ವಚಿತ್ತಾಗಿ ಬರುವ ವ್ಯಕ್ತಿಗಳ ಆಧಾರದ ಮೇಲೆ ಕಮ್ಮಾರರು ಯುದ್ಧೋಪಕರಣಗಳನ್ನು ತಯಾರಿಸುತ್ತಿದ್ದರು ಎಂಬುದು ಉಕ್ತವಾಗುತ್ತವೆ.

'ಭೀಮನು ಆನೆಯೊಂದನ್ನು ಒತ್ತಲಾಗಿ ಅವರ ಬಾಯಿಂದ ಒಸುರುವ ಕೆಂಪಾದ ರಕ್ತವು ಕಮ್ಮಾರನ ತಿದಿಯ ಮೂತಿಯಲ್ಲಿ ಜ್ವಲಿಸುವ ಬೆಂಕಿಯಂತೆ ಕಾಣುತ್ತಿತ್ತು. ಅದನ್ನು ಒತ್ತುತ್ತಿರುವ ಭೀಮನಾದರೇ ಕಮ್ಮಾರನಂತಿದ್ದನು' ಎಂಬ ಕಾವ್ಯಾವಲೋಕನದ ಚಿತ್ರವನ್ನು ಪ್ರಸ್ತುತ ಪಡಿಸುವುದರ ಮೂಲಕ ಕಮ್ಮಾರನ ದುಡಿಮೆ ಕಾರ್ಯವಿಧಾನವನ್ನು ಕಣ್ಣುಮುಂದೆ ತರಲು ಪ್ರೊ. ಚಿದಾನಂದಮೂರ್ತಿ ಯವರು (ಪೂರ್ವೋಕ್ತ-ಪು-೪೫೯) ಪ್ರಯತ್ನಿಸಿದ್ದಾರೆ. ಇದರಿಂದ ಆ ಕಾಲದಲ್ಲಿ ಕಮ್ಮಾರನು ಬಳಸುವ ತಿದಿಯು (ಒಂದು ಬಗೆಯ ಉಪಕರಣ) ಇತ್ತೆಂದು ತಿಳಿದುಬರುತ್ತದೆ. ಕಮ್ಮಾರಿಯೊಜನು ಅಸ್ತ್ರಗಳನ್ನು ತಯಾರು ಮಾಡಲು ಬಲ್ಲವನಾಗಿದ್ದನು 'ಇನ್ನೊಬ್ಬನಿಗೆ ಕಲಿಸಲು ನನಗೆ ಗೊತ್ತೆಹೊರತು ಯುದ್ಧ ಮಾಡಲು ನನಗೆ ಏನು ಗೊತ್ತು? ಕಮ್ಮಾರ ಅಸ್ತ್ರವನ್ನು ತಯಾರು ಮಾಡಲು ಬಲ್ಲನೇ ಹೊರತು ಯುದ್ಧಮಾಡಲು ಅಲ್ಲ' (ವೀರಣ್ಣ ಸಿ. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಸಂ೧-ಪು-೧೮೬) ಎಂಬ ವಾಕ್ಯ ತಿಳಿದುಬರುತ್ತದೆ. ಇದರಿಂದ ಕಮ್ಮಾರನು ಯುದ್ಧೋಪಕರಣಗಳನ್ನು ತಯಾರಿಸುವುದರಲ್ಲಿ ನಿಪುಣರಾಗಿದ್ದರು ಎಂಬುದು ತಿಳಿಯುತ್ತದೆ.

ಕಮ್ಮಾರನು ಇಲ್ಲದೆ ಖಡ್ಗ ಮೊದಲಾದ ಶಸ್ತ್ರಗಳು ತಯಾರಾಗುತ್ತಿರಲಿಲ್ಲ ಎಂಬುದಕ್ಕೆ ಇಲ್ಲೊಂದು ನಿದರ್ಶನ. 'ಕಮ್ಮಾಜರಿಲ್ಲದೆ ಖಡ್ಗಾದಿ ಶಸ್ತ್ರಂಗಳಾಗವು' (ಶಾಮಶಾಸ್ತ್ರಿ. ಆ (ಸಂ) ಧರ್ಮಾಮೃತಂ. ಪು೭೭-೪೭) ಅವನು ಆಸ್ತ್ರಗಳನ್ನು ಸಾಣೆ ಯಂತ್ರಕ್ಕೆ ಕೊಟ್ಟು ಮಸೆದು ತೀಡಿ ಸಿದ್ಧಪಡಿಸುತ್ತಿದ್ದನು. 'ಕುಸುಮಶರಾಸ್ತ್ರಮಂ ಸೆಟಿಯು ಸಾಣೆಯೊಳ್ ಮಧುವೆಂಬ ಕಮ್ಮಜಂ ಮಸೆಯಲವೇಡಿ ತೀಡಿದನೋ' (ಮರಿಯಪ್ಪ ಭಟ್ಟ .ಎಂ (ಸಂ). ಪಾರ್ಶ್ವನಾಥ ಪುರಾಣ. ೯-೯೭) ಎಂಬ ವಾಕ್ಯವು ಯುದ್ಧದ ಸಮಯದಲ್ಲಿ ಆಯುಧಗಳನ್ನು ಮಸೆದು ಹರಿತವಾಗಿ ಮಾಡುವುದು ಇವರ ಕೆಲಸವೂ ಆಗಿತ್ತೆಂದು ತಿಳಿಯುತ್ತದೆ. ಕಿಡಿಗಳನ್ನು ಉಗುಳುವ ಕುಲುಮೆಯಲ್ಲಿ ಪಂಚಲೋಹದ ಗಟ್ಟಿಗಳನ್ನು ಕೆಂಪಗೆ ಕಾಯಿಸಿ ಉದ್ದವಾದ ಇಕ್ಕುಳದಿಂದ ಹಿಡಿದು ಕಮ್ಮಾರರು ಕರ್ಕಷವಾಗಿ ಕ್ರಮವಹಿಸಿ ಕೆಲಸಮಾಡುತ್ತಿದ್ದರು ಎಂಬುದಕ್ಕೆ ಈ ಪದ್ಯವನ್ನು ಉದಾಹರಣೆ ಕೊಡಬಹುದು.

"ಕಾಸಿ ಕೆಂಪಗಲಿಪ ಕಿಡಿಗಳನುಗುಳ್ವ ಪಂಚಲೋಹದ ಗುಡನೆಲೆಲೆ
ಕಕ್ಕಸದ ಕಮ್ಮಜರು ನಿಡಿದಿಕ್ಕುಗಳಗಳಿಂದವಚಿ ಪಿಡಿದು ತಂದು"

(ವೆಂಕಣ್ಣಯ್ಯ ಟಿ.ಎಸ್. ಸಿದ್ಧರಾಮ ಚರಿತೆ. ೭-೧೯) ಇದರಿಂದ ಕಬ್ಬಿಣ ವನ್ನು ಕಾಸಿ ಹಿಡಿಯುವುದಕ್ಕೆ ಇಕ್ಕುಳ ಎಂಬ ಉಪಕರಣವನ್ನು ಬಳಸುತ್ತಿದ್ದ ಕಮ್ಮಾರರು ಇದ್ದರು ಎಂಬುದಕ್ಕೆ ನಿದರ್ಶನವಾಗಿ ಕಂಡುಬರುತ್ತದೆ. ಕಾವ್ಯವಲೋಕನದ 'ಕಮ್ಮಜನಂಬು ಕಮ್ಮಜಂಗೆ' ಎಂಬ ಉಕ್ತಿಯ ಆಧಾರದ ಮೇಲೆ ಚಿದಾನಂದ ಮೂರ್ತಿಯವರು ಬಾಣಗಳನ್ನು ಕಮ್ಮಾರರು ತಯಾರಿಸುತ್ತಿದ್ದರೆಂದು ಗುರುತಿಸಿದ್ದಾರೆ. ರಾಜಶೇಖರ ವಿಳಾಸದ 'ಮದನನ ಬಾಣಾವಳಿಯುಂ ಕಾಸಲ್ ಚೈತ್ರೋಜ್ವಳ ಕಾರುಕನಿಟ್ಟ ಕಮ್ಮಟಂಬೊಲ್' (ಹಿರೇಮಠ ಆರ್.ಸಿ ಮತ್ತು ಸುಂಕಾಪುರ. ರಾಜಶೇಖರ ವಿಳಾಸ ೩-೩೬) ಎಂಬ ಉಕ್ತಿ ಆಧಾರದಿಂದ ಕಾರುಕರು (ಕಮ್ಮಾರರು) ಬಾಣಗಳನ್ನು ಉತ್ಪಾದಿಸುತ್ತಿದ್ದರು. ಬಾಣಗಳನ್ನು ತಯಾರು ಮಾಡಲು ಅವರಿಗೆ ತಮ್ಮದೇ ಆದ ಕಾರ್ಯಗಳಿರಬಹುದು ಎಂಬ ಅಂಶ ಬೆಳಕಿಗೆ ಬರುತ್ತದೆ. ಈ ಬಾಣ ಮೊದಲಾದ ಆಯುಧಗಳನ್ನು ತಯಾರಿಸುವ ಕಾರ್ಯಗಾರಗಳನ್ನು ಕಮ್ಮಟಗಳು ಎಂದು ಕರೆಯಲಾಗುತ್ತಿತ್ತು ಕಮ್ಮಜಸಾಲೆ ಎಂದು ಆಗ ಪ್ರಚಲಿತದಲ್ಲಿದ್ದಿರಬಹುದು. ಕ್ರಿ.ಶ. ೧೩೯೮ ರ ಅಭಿನವಾಭಿದಾನಂ ಎಂಬ (ಮರಿಯಪ್ಪ ಭಟ್. ಎಂ. (ಸಂ) ಅಭಿನವಾಭಿದಾನಂ ೫೮-೧೦) ಕೃತಿಯ ಬಾಣಗಳನ್ನು ತಯಾರಿಸಲೆಂದೇ ಇದ್ದ ಕಾರ್ಯಗಾರಗಳನ್ನು ಕಾರಗೃಹ ಅಥವಾ ಶರಸಾಲೆ ಎಂದು ಗುರುತಿಸುತ್ತದೆ. ಆ ಕಂಚುಗಾರರಿಗೆ ಟಂಕ ಸಾಲೆಗಳು ಹೇಗಿದ್ದವೊ ಹಾಗೆ ಕಮ್ಮಾರ ಸಾಲೆಗಳಿದ್ದವು ಎಂಬುದಕ್ಕೆ ಸಾಕ್ಷಿಭೂತಿಯಾಗಿವೆ.

ಕಂಚಿಪುರಾಣ ಎಂಬ ಕ್ರಿ.ಶ. ೧೭೬೦ ರ ಅಪ್ರಕಟಿತ ಕೃತಿ ಹಾಗೂ ಮಂಟೇಸ್ವಾಮಿ ಕಾವ್ಯ ಎಂಬ ಜನಪದ ಮಹಾಕಾವ್ಯದಲ್ಲಿ ಬರುವ ಸಿದ್ದಾಪ್ಪಾಜಿ ವಚನಗಳು ಹೆಚ್ಚು ಬೆಳಕನ್ನು ಚಲ್ಲುತ್ತವೆ. ಕಂಚಿಪುರಾಣದಲ್ಲಿ ಉಕ್ತವಾಗಿರುವ ಕಂಚುಗಾರನಾದ ಧರ್ಮಪಾಲ ಮತ್ತು ಮಕ್ಕಳ ಹಿರಿಮೆಯನ್ನು ಶ್ರೀ ಕಾಳಿಕಾದೇವಿಯ ಚೋಳ ನೃಪಾಲನಿಗೆ ಮನವರಿಕೆ ಮಾಡಿಕೊಡುವ ಸಂದರ್ಭದಲ್ಲಿ ಅವರು ಆಚಾರ ಪ್ರೌಢರೂ ಪಂಚಾತ್ಮರೂ ಪಂಚಬ್ರಹ್ಮರೂ ಆಗಿದ್ದು ಅವರು ಸೀಸಕ, ಕವಚ, ವಜ್ರಾದಿ ಕತ್ತಿ, ಬಲ್ಲೆಯ ಈಟಿ, ನಾರಾಚ, ಅಂಬು ಮೊದಲಾದ ಆಯುಧಗಳನ್ನು ತಯಾರುಮಾಡುವುದರಲ್ಲಿ ನಿಷ್ಣಾತರು ಎಂದು ಹೇಳುತ್ತಾರೆ. ಇದರಿಂದ ಪಾಂಚಾಳರು ಯುದ್ಧಕ್ಕೆ ಬೇಕಾಗುವ ಅನೇಕ ಬಗೆಯ ಆಯುಧಗಳನ್ನು ತಯಾರಿಸುತ್ತಿದ್ದರು ಎಂಬುದು ತಿಳಿಯುತ್ತದೆ.

ಸುಮಾರು ಕ್ರಿ.ಶ. ೧೭೨೩ ರ ಹಲಗೂರ ಪಾಂಚಾಳರು ಎಂಬ ಐತಿಹ್ಯವು ಹಲಗೂರಿನಲ್ಲಿ ಕಮ್ಮಾರಿಕೆಯನ್ನು ಮಾಡುತ್ತಿದ್ದ ಪಾಂಚಾಳರ ಕಥೆಯನ್ನು ಹೇಳುತ್ತದೆ. ಈ ಒಂದು ವೃತ್ತಿಯ ಬಗ್ಗೆ ಸಿದ್ದಾಪ್ಪಾಜಿಯ ವಚನ ಎಂಬ ಐತಿಹ್ಯವು ಹೆಚ್ಚಿನ ಮಾಹಿತಿಯನ್ನೊದಗಿಸುತ್ತದೆ. ಹಲಗೂರು ಗ್ರಾಮದಲ್ಲಿ ಏಳುನೂರ್ಯವತ್ತು ಪಾಂಚಾಳರ ಒಕ್ಕಲು. ಅವರಿಗೆ ಕಾಳೋಜಿ, ದಿಂಬೋಜಿ, ಬೇಟೋಜಿ, ವರದೋಜಿ, ನಿಂಗೋಜಿ, ಚೆನ್ನೋಜಿ ಮತ್ತು ನರಸೋಜಿ ಎಂಬ

ಏಳು ಮಂದಿ ವಾಜಿ ಕುಲದ ದಣಿಗಳು ಇವರಿಗೆ ಏಳು ಕುಲುಮೆಗಳು, ತಮ್ಮ ಕುಲುಮೆಗಳಲ್ಲಿ ಇವರು ತಲಕಾಡಿನ ಸುಬಿ ಚಾಮರಾಜ ಒಡೆಯರಿಗೆ ಕತ್ತಿ, ಫಿರಂಗಿ, ಬಂದೂಕುಗಳನ್ನು ತಯಾರುಮಾಡಿ ಕೊಡುತ್ತಾರೆ. ಮತ್ತು ಮೈಸೂರನ್ನಾಳುವ ಮಹಾಸ್ವಾಮಿಗಳಿಗೆ ಕತ್ತಿ, ಕಠಾರಿ, ಈಟಿ, ದೊಣ್ಣೆ, ಭರ್ಚಿ, ಭಲ್ಲೆ ಹಾಗೂ ಫಿರಂಗಿಗಳನ್ನು ಹೆರೆದು ಕಳಿಸುತ್ತಾರೆ. ಅದಕ್ಕಾಗಿ ಒಂದು ಎತ್ತಿನ ಗಾತ್ರದ ಕಾದ ಗಟ್ಟಿಯನ್ನು ಕಾಯಿಸುತ್ತಾರೆ. ಉಕ್ಕು, ತವರ, ತಗಟು, ಕಂಚು, ಸೀಸ, ಚಿನ್ನ, ಬೆಳ್ಳಿ ಮೊದಲಾದ ಏಳು ಲೋಹಗಳನ್ನು ಸೇರಿಸಿ ಮಿಶ್ರಲೋಹದ ಕೆಲಸವನ್ನು ಮಾಡಬಲ್ಲವರಾಗಿದ್ದರು.(ಜಿ.ಶಂ. ಪರಮಶಿವಯ್ಯ (ಸಂ) ಮಂಟೇಸ್ವಾಮಿ ಕಾವ್ಯ. ಪು-೧೧೩) ಸಣ್ಣ ಕೆಲಸ ಮಾಡಲು ಮರದ ಇಜ್ಜಿಲು ಉಪಯೋಗಿಸುತ್ತಿದ್ದರು ಬಿದುರಿನ ಇಜ್ಜಲು ಹತ್ತಿರದಲ್ಲಿ ಸಿಗುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು. ಬಸವನ ಬೆಟ್ಟದಿಂದ ಗಾಡಿಗಳ ಮೇಲೆ ಬಿದುರಿನ ಇಜ್ಜಲನ್ನು ತರಿಸುತ್ತಿದ್ದರು. ಸಣ್ಣ ಕೆಲಸವನ್ನು ಊರಿನ ಕುಲುಮೆಯಲ್ಲಿ ಮಾಡುತ್ತಿದ್ದಿರಬೇಕು. ಆದರೆ ದೊಡ್ಡ ಕೆಲಸಮಾಡಲು ಊರಿನಿಂದ ಹೊರಗ ಇದ್ದ ಕುಲುಮೆಯನ್ನು ಉಪಯೋಗಿಸುತ್ತಿದ್ದರು. ಸಾಮಾನ್ಯವಾಗಿ ಇಂದಿನ ದಿನಗಳಲ್ಲಿ ಕಮ್ಮಾರರು ಮನೆಮನೆಗೆ ಹೋಗಿ ದಬ್ಬಿಗಟ್ಟಲೆ ಎರಡು ಮೂರು ರೂಪಾಯಿಯಂತೆ ಅಳೆದುಕೊಂಡು ಬರುತ್ತಾರೆ. ಇಲ್ಲವಾದರೆ ರೈತರು ಅಥವಾ ಕೃಷಿಕರು ವ್ಯವಸಾಯ ಉಪಕರಣ ಮಾಡಿಸಿಕೊಳ್ಳಲು ಬರುವಾಗ ಅವರ ಮನೆಯಿಂದ ಇದ್ದಲಿಯನ್ನು ತರುವುದು ಇವತ್ತಿಗೂ ಕಾಣಬಹುದು. ಇದು ಕೊಡು ಕೊಳ್ಳುವಿಕೆಯ ಬದಲಾಗಿ ಇದ್ದಿಲಿಯನ್ನು ತಂದವರ ಹತ್ತಿರ ಕಡಿಮೆ ಕೂಲಿ ತೆಗೆದುಕೊಳ್ಳುತ್ತಾರೆ. ಒಂದೊಂದು ಸಾರಿ ಹಣವನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಮಾಡಿಸುವ ಉಪಕರಣದ ಪ್ರಮಾಣದ ಮೇಲೆ ಅವಲಂಬಿತವಾಗಿರುತ್ತದೆ. ಸಣ್ಣ ಪ್ರಮಾಣದ ಕೆಲಸಕ್ಕೆ ಆಡಿನ ಚರ್ಮದಿಂದ ಮಾಡಿದ ತಿದಿಯನ್ನು ಉಪಯೋಗಿಸುತ್ತಿದ್ದರು. ದೊಡ್ಡ ಗಾತ್ರದ ಕೆಲಸಕ್ಕೆ ಕೋಣಗಳ ಚರ್ಮದಿಂದ ಮಾಡಿದ ದೊಡ್ಡ ತಿದಿಗಳನ್ನು ಬಳಸುತ್ತಿದ್ದರು.

ಬಹುಶಃ ಅರಸನಿಂದ ದೊಡ್ಡಗಾತ್ರದ ಕೆಲಸ ಆದೇಶ ಬಂದಾಗ ಇವರು ಹಗಲು ರಾತ್ರಿ ಕೆಲಸ ಮಾಡಬೇಕಾಗಿ ಬರುತ್ತಿತ್ತು. ಸತತವಾಗಿ ತಿದಿಯನ್ನು ಒತ್ತಿ ಸಾಕಾದ ಪಾಂಚಾಳರ ಕೆಲಸಗಾರರು ಬೇಜಾರು ಕಳೆಯಲು ನಡುನಡುವೆ ಸರಸವಾಡಿ ಕೊಳ್ಳುತ್ತಿದ್ದರು. ಬಹುಶಃ ಒಂದೊಂದು ಗಾತ್ರದ ಕೆಲಸದ ಆದೇಶವನ್ನು ತೆಗೆದುಕೊಂಡಾಗ ಹತ್ತಾರು ದಿನಗಳು ಸತತವಾಗಿ ದುಡಿಯಬೇಕಾಗಿತ್ತು. ಕೊಂಬು, ಕಹಳೆ, ನಗಾರಿಗಳನ್ನು ಎರಕಹೊಯ್ದುಕೊಳ್ಳುತ್ತಿದ್ದರು. ಇವು ಬಹುಶಃ ತಾಮ್ರ, ಅಥವಾ ಇತ್ತಾಳೆಯಿಂದ ಮಾಡುತ್ತಿದ್ದ ವಸ್ತುಗಳು ಚಿನ್ನ ಮತ್ತು ಬೆಳ್ಳಿಯ ಸೂಕ್ಷ್ಮವಾದ ತೂಗುದೀವಿಗೆ ಸರಪಣಿ ತೊಟ್ಟಿಲುಗಳನ್ನು ಅಪರೂಪಕ್ಕೆ ಮಾಡುತ್ತಿದ್ದರು.

ಏಳು ಪಾಂಚಾಳರ ಧಣಿಗಳು ಪರಸ್ಪರ ಮಾತಾಡಿಕೊಂಡು ಪಗಡೆ ಆಡಿಕೊಂಡು ಅರಸನಿಂದ ಬರಬಹುದಾದ ಶಿಕ್ಷೆಯ ಬಗ್ಗೆ ಚರ್ಚೆ ವಿಚಾರ ವಿಮರ್ಶೆ ಮಾಡಿಕೊಂಡು ಶಿಸ್ತಾಗಿ ಕುಲುಮೆಗಳಿಗೆ ಹೋಗಿ ಮೇಲುಸ್ತುವಾರಿನೋಡಿ ಕೊಳ್ಳುವುದು. ಕೆಲಸಗಾರರಿಗೆ ಚಾವಡಿಯಲ್ಲಿ ಕುಳಿತು ಕೊಂಡು ಬಟವಾಡೆ ಮಾಡುವುದು ಈ ಮೊದಲಾದ ಒಬ್ಬ ದಕ್ಷ ವೃತ್ತಿಗಾರರು ಶಿಸ್ತುಬದ್ಧ ಜೀವನವನ್ನು ವ್ಯವಸ್ಥೆಯನ್ನು ಮಂಟೇಸ್ವಾಮಿ ಮಹಾಕಾವ್ಯವು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ.

ಇವೆಲ್ಲ ಆಧಾರಗಳು ರಾಜ ಮಹಾರಾಜರ ಆಡಳಿತಕ್ಕೊಳಪಟ್ಟ ಅವರ ಅನುಗ್ರಹದಿಂದಲೇ ಅವರಿಗೆ ಬೇಕಾಗುವ ಅಂದರೆ ಯುದ್ಧೋಪಕರಣಗಳನ್ನು ತಯಾರಿಸುವಲ್ಲಿ ಮಗ್ನರಾಗಿದ್ದರು ಎಂಬ ಅಂಶ ಹೆಚ್ಚಾಗಿ ಕಾಣುತ್ತದೆ. ಬಹುಶಃ ಈ ಕಾಲದಲ್ಲಿ ಇಂತಹ ಕೆಲಸಗಳಿಗೆ ಸೀಮಿತವಾಗಿದ್ದಾರೇನೋ ಎಂಬ ನಿಲುವಿಗೆ ಬರಬೇಕಾಗುತ್ತದೆ. ಇದರ ಮೂಲವಾಗಿ ಅವರು ಮೀಸಲಾಗಿದ್ದು ಯಾವ ಕೆಲಸಕ್ಕೆ ಮತ್ತು ಅತ್ಯಂತ ಪ್ರಮುಖ ವರ್ಗವಾದ ಕೃಷಿಕರನ್ನು ಇತಿಹಾಸ ಪುಟಗಳಲ್ಲಿ ನಿರ್ಲಕ್ಷಿಸುವುದು ದೊಡ್ಡ ದುರಂತವೇ ಸರಿ ಎಲ್ಲಿಯಾದರೂ ಒಂದು ಕಡೆ ರೈತವರ್ಗ ಮತ್ತು ಅವರು ಉಪಯೋಗಿಸುವ ಉಪಕರಣಗಳ ವಿವರಗಳು ಒಂದು ಶಾಸನಗಳಲ್ಲಿ ಕಂಡುಬಂದಿಲ್ಲ.

ಮುಖ್ಯವಾಗಿ ಕಮ್ಮಾರರಲ್ಲಿ ಎರಡು ಭಿನ್ನವರ್ಗಗಳನ್ನು ಕಾಣಬಹುದು. ಪಾಂಚಾಳರಲ್ಲಿ ಕಮ್ಮಾರರು ಮತ್ತು ಈ ಕಮ್ಮಾರರಿಂದ ತಿರಸ್ಕೃತಗೊಂಡ ಒಂದು ಸಮುದಾಯ ಬೇರೆ ಇದೆ. ಅದು ಮುದ್ದೆ ಕಂಬಾರರು, ಬಯಲುಗಂಬಾರರು ಎಂದು ಈ ಎರಡು ವರ್ಗಗಳು ಯಾವುದೋ ಒಂದು ವೈಮನಸ್ಸಿನಿಂದ ಟಿಸಿಲೊಡದು ಬೇರೆಯಾಗಿರುವುದು ಬಹುತೇಕ ಕಡೆಗಳಲ್ಲಿ ಕಾಣಬಹುದು. ಈ ಎರಡು ವರ್ಗಗಳು ಮಾಡುವುದು ಒಂದೇ ವೃತ್ತಿಯಾದರೂ ಈ ಇಬ್ಬರ ವೈವಾಹಿಕ ಸಂಬಂಧಗಳು ನಿಷೇಧಗೊಂಡಿವೆ. ಆದರೂ ಈ ಮುದ್ದೆಗಂಬಾರರು ಪಾಂಚಾಳರೆನಿಸಿಕೊಳ್ಳುತ್ತಾರೆ ಇದನ್ನು ಹೇಳುವುದು ಅನವಶ್ಯಕವೋ ಏನೋ ಈ ಕಂಬಾರರಲ್ಲಿ ಇಂತಹ ಭಿನ್ನಾಭಿಪ್ರಾಯಗಳ ವರ್ಗ ಇದೆ.

ಈ ಕಮ್ಮಾರರಿಗೆ ಬಹು ಮುಖ್ಯವಾಗಿ ಕುಲುಮೆ ಮಹತ್ವದ್ದು ಈ ಕುಲುಮೆಯೇ ಕಾಳಿ ಎಂಬ ನಿಲುವು ತಾಳಿರುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಈ ಕುಲುಮೆಯ ಆಕಾರಗಳು ಎಂದಿನಂತೆಯೇ ಇವೆ. ಒಂದು ಅಡ್ಡಗೋಡೆಗೆ ಒಲೆಯ ತಳಗಿಂದ ಹಲಗವಾಗಿ ಪ್ರಾರಂಭವಾಗಿ ಮೇಲಕ್ಕೆ ಹೋದಂತೆ ಚುಪಾಗಿರುತ್ತದೆ. (ಒಂದು ರೀತಿಯ ತ್ರಿಕೋನ) ಮೇಲ ಕಾಳಿಯ ಅಂದರೆ ಕಟ್ಟಿಗೆಯಿಂದ ಕೆತ್ತಿದ ಮೂರ್ತಿ ಅದು ಮುಖಮಾತ್ರ ಇರುತ್ತದೆ. ಅದನ್ನು ಆ ಗೋಡೆಯಲ್ಲಿ ಇಟ್ಟಿರುತ್ತಾರೆ. ಇಲ್ಲವಾದರೆ ಕಾಳಿಯ ಮುಖವು ಇರುವುದಿಲ್ಲ. ಆದರೂ ಈ ಕಮ್ಮಾರರು ಕುಲದೇವತೆಯೆಂದು ಭಾವಿಸುತ್ತಾರೆ. ಇದನ್ನು ಕಾಳಮ್ಮ ಎಂದು ಸಂಬೋಧಿಸುವುದು ವಾಡಿಕೆ. ಈ ಒಲೆಯ ಮುಂದೆ ಅಥವಾ ಈ ಗೋಡೆಗೆ ಪ್ರತಿದಿನ ಈ ಕಾಳಮ್ಮಗೆ ಕಸಹೊಡೆದು, ಸಗಣಿಯಿಂದ ಬಳಿದು, ಅರಿಸಿಣ, ಕುಂಕುಮ, ರಂಗೋಲಿ ಹಾಕುತ್ತಾರೆ. ಈ ದೇವಿಯನ್ನು ಅಲಂಕರಿಸುತ್ತಾರೆ. ನಮ್ಮನ್ನು ಚನ್ನಾಗಿನೋಡಿಕೊಳ್ಳುತ್ತಾಳೆಂಬ ನಂಬಿಕೆ ಮತ್ತು ಈಕೆಯ ಆರಾಧನೆಯಿಂದ ಮತ್ತು ಈಕೆಯ ವೃತ್ತಿಯಿಂದ ನಮ್ಮನ್ನು ಉದ್ಧಾರಿಸುತ್ತಾಳೆಂಬ ನಂಬಿಕೆ ಇವರಲ್ಲಿ ಮನೆ ಮಾಡಿದೆ.

ಕಮ್ಮಾರಿಕೆ ಮಾಡುವುದಕ್ಕೆ ಹೆಚ್ಚಿನ ಖರ್ಚುಬೇಕಿಲ್ಲ ಶಕ್ತಿ ಮತ್ತು ಯುಕ್ತಿ ಹೊಂದಿದ್ದರೆ ಸಾಕು. ಕಾಸುವಾಗ ಇದ್ದಲಿ ಅವಶ್ಯಕತೆ ಕೆಲವೊಂದು ಸಾರಿ ಇದ್ದಲಿಗೆ ಗಂಟು ಬಡ್ಡೆಯನ್ನು ದುಂಡುಗಾಕಿ ಬೆಂಕಿ ಹಚ್ಚುತ್ತಾರೆ. ಆ ಕಟ್ಟಿಗೆ ಸುಡುವಾಗ ಸ್ವಲ್ಪ ಗಟ್ಟಿಯಾಗಿರುವಾಗಲೇ ಅದರ ಮೇಲೆ ಮಣ್ಣು ಹಾಕುತ್ತಾರೆ. ಯಾಕೆಂದರೆ ಅದು ಪೂರ್ತಿ ಸುಟ್ಟು ಬೂದಿಯಾಗುತ್ತದೆ ಎಂಬ ಕಾರಣಕ್ಕೆ ಇದನ್ನು ಬಟ್ಟಿ ಇದ್ದಲಿ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಬಟ್ಟಿಇದ್ದಿಲನ್ನು ಬಂಡಿ ಅಚ್ಚು ದುಂಡಾಡುವಾಗ, ಗುದ್ದಲಿ ಮೆಟ್ಟಡುವಾಗ, ಬಂಡಿ ಹಳಿ ಬೆಸೆಯುವಾಗ ಮತ್ತು ದೊಡ್ಡ ದೊಡ್ಡ ಕೆಲಸಗಳಿಗೆ ಬಳಸುತ್ತಾರೆ. ಈ ಇದ್ದಲಿಯಿಂದ ಹೆಚ್ಚು ಹೊತ್ತು ಬೆಂಕಿ ಇರುತ್ತದೆ ಹಾಗೂ ಕಾವು ಹೆಚ್ಚುಕೊಡುತ್ತದೆ. ಇದರ ಜೊತೆಗೆ ಇನ್ನು ಹೆಚ್ಚು ಕಾವು ಬೇಕಾದರೆ ಬತ್ತದ ತೌಡನ್ನು ನೀರಿನಲ್ಲಿ ಕಲಸಿ ಒಲೆಯಲ್ಲಿ ಹಾಕುತ್ತ ಇದರಿಂದ ಕಾಯಿಸಿ ಇಟ್ಟ ಕಬ್ಬಿಣವು ಕೆಂಪಗೆ ಕಾದಾಗ ನಮಗೆ ಯಾವ ಆಕಾರ ಬೇಕೋ ಆ ಆಕಾರವನ್ನು ಮಾಡಲು ಕಮ್ಮಾರನಿಗೆ ಅಥವಾ ಬಡಿಯುವವರಿಗೆ ಅನುಕೂಲವಾಗುತ್ತದೆ. 'ಅದ ಇದ್ದಾಗ ಮಾಡು' ಎಂಬ ಗಾದೆಯಂತೆ.

ಆಧುನಿಕ ಕಾಲದಲ್ಲಿ ಬೆಸೆಯುವುದಕ್ಕೆ ಅಥವಾ ಒಂದಕ್ಕೊಂದು ಕೂಡಿಸುವುದಕ್ಕೆ ಯಂತ್ರಗಳು (ವೆಲ್ಡಿಂಗ್) ಬಂದಿವೆ. ಆದರೆ ಹಿಂದೆ ಏಕೆ ಈಗಲೂ ಹಳ್ಳಿಗಳಲ್ಲಿ ಕಬ್ಬಿಣವನ್ನು ಬೆಸದೆ ಕೂಡಿಸುತ್ತಾರೆ. (ಯಂತ್ರ ಸಹಾಯವಿಲ್ಲದೆ) ಉದಾ:- ಬಂಡಿ ಅಚ್ಚು ಮುರಿದಾಗ ಅದನ್ನು ಒಲೆಯಲ್ಲಿ ಇಟ್ಟು ಹೊಂದಿಕೊಳ್ಳುವಂತೆ ಜೋಡಿಸಿ ಹಳೆ ಹಳಿಯನ್ನು ಅದಕ್ಕೆ ಬೇಕಾಗುವಷ್ಟನ್ನು ತುಂಡು ಮಾಡಿಕೊಂಡು ಅಚ್ಚಿಗೆ ಹಳಿ ತುಂಡನ್ನು ಹೊಂದಿಸಿ ಒಲೆಯಲ್ಲಿ ಇಡುತ್ತಾರೆ. ಇಲ್ಲಿ ಬಟ್ಟಿ ಇದ್ದಲಿಯನ್ನು ಮತ್ತು ಬತ್ತದ ತೌಡು ಅತ್ಯವಶ್ಯಕವಾಗಿ ಬಳಸುತ್ತಾರೆ. ಕಾದು ಕಾದು ಅದು ನೀರಾಗುವ ತನಕ ಕಾಯಿಸುತ್ತಿನ್ನುವಾಗ ಒಲೆಯಿಂದ ಅಡಿಗಲ್ಲಿನ ಮೇಲೆ ಇಟ್ಟಾಗ ಕೆಂಬಣ್ಣದ ಬೆಳಕು ಸುತ್ತಲು ಚಲ್ಲಿರುತ್ತದೆ. ಆಗಲೇ ಮೂರು ಜನರು ಚಮಟಿಗೆಯನ್ನು ಹಿಡಿದು ಬಡಿಯಲು ಸಿದ್ಧರಾಗಿರುತ್ತಾರೆ. ಕಮ್ಮಾರ 'ಊಂ' ಬಡಿ ಎಂದು ಕೂಗಿದಾಗ ಮೂರು ಜನರ ಒಟ್ಟಿಗೆ ತಪ ತಪ (ಮೊದಲಿಗೆ) ಶಬ್ದ ಬರುತ್ತದೆ ಅದರಿಂದ ಸಿಡಿಯುವ ಕಿಡಿಗಳು ಬಣ್ಣಾವಳಿಯಲ್ಲಿ ಹೂವಾಗಿ ಹಚ್ಚಿರುವಂತೆ ಸುಂದರವಾಗಿ ಕಾಣುತ್ತದೆ. ಆ ಕಿಡಿಗಳಿಂದ ನಮ್ಮ ಚರ್ಮದ ಮೇಲೆ

ಬಿದ್ದು ಸುಡುತ್ತವೆ ಎಂಬ ಅರಿವು ಯಾರಿಗೂ ಇರುವುದಿಲ್ಲ. ಏಕೆಂದರೆ ರೈತರು ಅಷ್ಟುಗಟ್ಟಿ ಮುಟ್ಟಾಗಿರುತ್ತಾರೆ. ಉದಾ:- ಹಳ್ಳಿಗಳಲ್ಲಿ ಮಹಿಳೆಯರು ಅಡಿಗೆ ಮಾಡುವಾಗ ಆಕಸ್ಮತ್ತಾಗಿ ಒಲೆಯ ಹೊರಗೆ ಕೆಂಡಗಳು ಬಿದ್ದರೆ ಕೈಯಿಂದ ಎತ್ತಿ ಮತ್ತೆ ಒಲೆಯಲ್ಲಿ ಹಾಕುತ್ತಾರೆ. ಅದು ದಿನ ನಿತ್ಯದ ಕೆಲಸದಲ್ಲಿ ರೂಢಿಗತವಾಗಿರುತ್ತದೆ. ಹಾಗೆ ಏರಿಗೂ ಕೂಡ. ಬಡಿಯುತ್ತಾ ಬಡಿಯುತ್ತಾ ಅದರ ಶಬ್ದ ಟಣ್ ಟಣ್ ಎಂದು ಕೇಳಬರುತ್ತದೆ. ಆಗಲೇ ಅದು ತನ್ನ ರೂಪ ತಾಳಿರುತ್ತದೆ. ಅದನ್ನು ಅಚ್ಚು ಮಟ್ಟೇರುವುದು ಎಂಬ ಶಬ್ದದಿಂದಲೂ ಕರೆಯುತ್ತಾರೆ. ನಂತರ ಕಮ್ಮಾರ ಸಣ್ಣಸುತ್ತಿಗೆಯಿಂದ ಅದನ್ನು ತಿದ್ದುತ್ತಾ ಒಂದ್ಯೆದಾರು ಹೊಡೆತ ಹಚ್ಚಿಗೆ ಒಂದ್ಯೆದಾರು ಹೊಡೆತ ಅಡಿಗಲ್ಲಿಗೆ ಬಡಿಯುತ್ತಾರೆ ಅಡಿಗಲ್ಲಿಗೆ ಬಡಿಯುವಾಗ ಅಚ್ಚಿಗೆ ಎಲ್ಲಿ ಬಡಿಯಬೇಕು? ಎಲ್ಲಿ ಏನಾಗಿದೆ? ಏನಾಗಬೇಕು? ಎಂಬುದನ್ನು ಕ್ಷಣ ಮಾತ್ರದಲ್ಲಿ ಅಳೆದು ಮತ್ತೆ ಕೆಲಸದಲ್ಲಿ ತಲ್ಲೀನನಾಗಿರುತ್ತಾನೆ. ಅದು ಅವನ ನೈಪುಣ್ಯತೆಯ ಮೇಲೆ ಅವಲಂಬಿತವಾಗಿರುತ್ತದೆ. ನಂತರ ಮಾಡುವ ಕೆಲಸ ಹಾರುವುದರ ಒಳಗೆ ಪೂರ್ಣವಾದರೆ ಸರಿ. ಇಲ್ಲವಾದರೆ ಒಲೆಯಲ್ಲಿನ ಕಿಟ್ಟವನ್ನು ಹೊರಹಾಕಿ ಅಗಲ ಮಾಡಿ ಮತ್ತೆ ಅಚ್ಚನ್ನು ಒಲೆಯಲ್ಲಿ ಇಡುತ್ತಾರೆ. ಆದರೆ ಈ ಕಮ್ಮಾರ ದೈಹಿಕವಾಗಿ ಗಟ್ಟಿ ಮುಟ್ಟಾಗಿದ್ದರೂ ಸರಿ ತೆಳ್ಳಗಿದ್ದರೂ ಸರಿ ಆ ಕೆಲಸದಲ್ಲಿ ನೈಪುಣ್ಯತೆ ಇದ್ದರೆ ಅವನು ಹೇಗಿದ್ದರೂ ಸರಿ ನಡೆಯುತ್ತದೆ. ಆ ಮಾನಸಿಕ ಸಿದ್ಧತೆ ಅವನಲ್ಲಿ ಯಾವಾಗಲೂ ಇರುತ್ತದೆ. ಕಸಬಸ್ಥರಿಗೆ ಎಲ್ಲಿ ಏನು ಕೇಳಿದರೂ ಅವರು ಕ್ಷಣಾರ್ಧದಲ್ಲಿ ನಿರ್ವಹಿಸುವ ಚಾಣಕ್ಷತನ ಅವರಲ್ಲಿರುತ್ತದೆ. ಪ್ರತಿಯೊಬ್ಬ ಕುಲಕಸಬಿನವರು ತಮ್ಮದೇ ಆದ ಕೆಲಸದಲ್ಲಿ ನಿರತರಾಗಿರುವುದರಿಂದ ರೂಢಿಗತವಾಗಿ ಕರಗತವಾಗಿರುತ್ತದೆ. ಈಗಿನವರಂತೆ ಕೆಲಸ ಮಾಡುತ್ತಾ ವಯಸ್ಸಾದಂತೆ ದೈಹಿಕ ಶಕ್ತಿ ಕಳೆಗುಂದುತ್ತಾ ಹೋಗುತ್ತದೆ. ಆದರೆ ಹಿಂದಿನವರು ಕೆಲಸ ಮಾಡುತ್ತಾ ತಮ್ಮ ದೈಹಿಕ ಶಕ್ತಿಯನ್ನು ಬಲಾಢ್ಯ ಮಾಡಿಕೊಳ್ಳಲು ವ್ಯವಸ್ಥಿತವಾದ ಜೀವನ ನಡೆಸಿರುವುದನ್ನು ಕಾಣಬಹುದು. ವಯಸ್ಸಾದವರು ಮಕ್ಕಳು ದುಡಿಯಲು ಬಂದರೂ ಅವರು ಸುಮ್ಮನೆ ಕೂಡುತ್ತಿರಲಿಲ್ಲ ನಿರಂತವಾಗಿ ತಮ್ಮ ಕಸಬನ್ನು ಮುಂದುವರೆಸುತ್ತಾ ಹೋಗುತ್ತಾರೆ. ಈಗ ಮಧ್ಯ ವಯಸ್ಸನ್ನು ದಾಟಿದ ಕೂಡಲೆ ನೆಲಕ್ಕೆ ಬಿದ್ದಿರುತ್ತಾರೆ. ಅದು ಪ್ರಕೃತಿ ನಿಯಮನೋ ವಾತಾವರಣವೋ ಅಥವಾ ಆ ಪೌಷ್ಟಿಕಾಂಶದ ಕೊರತೆಯೋ ಎಂಬುದನ್ನು ಅನುಮಾನದಿಂದ ನೋಡಬೇಕಾಗುತ್ತದೆ. ಒಂದು ಮಾತ್ರ ಸತ್ಯ ಅವರು ಹೇಗಿದ್ದರೂ ತಮ್ಮ ಕಸಬನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ.

ಬೆಸೆಯುವುದು ಎಂದರೆ ಒಂದು ತುಂಡನ್ನು ಇನ್ನೊಂದು ತುಂಡಿಗೆ ಜೋಡಿಸುವುದು. ಈ ಬೆಸೆಯುವಿಕೆ ಕಮ್ಮಾರಿಕೆಯಲ್ಲಿ ಪ್ರಮುಖವಾಗಿರುತ್ತದೆ. ಸಣ್ಣ ಪುಟ್ಟ ಉಪಕರಣಗಳನ್ನು ಬೆಸೆಯಲು ಅರಗು ಎಂಬ ತೆಳುವಾದ ಪುಡಿಯನ್ನು ಉಪಯೋಗಿಸುತ್ತಾರೆ. ಉದಾ:- ಕುಡುಗೋಲನ್ನು ಒಂದೇ ಕಬ್ಬಿಣ ತುಂಡಿನಿಂದ ಮಾಡುವುದಿಲ್ಲ, ಬಾಗಿದಾಕಾರವಾದನ್ನು ಒಂದು ತುಂಡಿನಿಂದ ಹಿಡಿಯ ಕಡೆಯನ್ನು ಒಂದು ತುಂಡಿನಿಂದ ಈ ಎರಡು ತುಂಡುಗಳನ್ನು ಆಕಾರ ಬರುವಂತೆ ಮಾಡಿ ಕೊನೆಗೆ ಈ ಎರಡನ್ನು ಅರಗಿನಿಂದ ಬೆಸೆಯುತ್ತಾರೆ. ಈ ಎರಡು ಕಬ್ಬಿಣವನ್ನು ಜೋಡಿಸಿ, ಕೂಡಿಸಿರುತ್ತಾರೆ, ಬೆಸೆದಿದ್ದಾರೆಂಬುದೇ ಗೊತ್ತಾಗದಷ್ಟು ಹೊಂದಿಕೊಂಡಿರುತ್ತದೆ. ಗುದ್ದಲಿ ಮಟ್ಟೆರುವುದು, ಹಾರೆ ಮೆಟ್ಟೆರುವುದು, ಮುಂತಾದ ಮಧ್ಯಮ ಉಪಕರಣಗಳನ್ನು ಬೆಸೆಯುವಾಗ ತೌಡು, ಬೋಕಿ ತುಂಡುಗಳನ್ನು ಬಳಸಿ ಬೆಸಯುತ್ತಾರೆ. ಇವು ಯಾವುದೇ ಕಾರಣಕ್ಕು ಬಿಡಿ ಆಗುವುದಕ್ಕೆ ಸಾಧ್ಯವಿಲ್ಲದಷ್ಟು ಕುಶಲತೆಯನ್ನು ಪಡೆದಿರುತ್ತಾರೆ.

ಇನ್ನು ಮುಖ್ಯವಾಗಿ ಹೇಳಬೇಕೆಂದರೆ 'ನೀರು ಕುಡಿಸುವುದು'. ಕೆಲಸ ಹೇಗಾದರೂ ಮಾಡಲಿ ಉಪಕರಣಗಳಿಗೆ ನೀರು ಕುಡಿಸುವ ಪದ್ಧತಿ ಅವಶ್ಯಕವಾಗಿ ತಿಳಿದುಕೊಂಡಿರುತ್ತಾರೆ. ತಿಳಿದುಕೊಂಡಿರಬೇಕು ಹಾಗಾದರೆ ಮಾತ್ರ ಈ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೊಡ್ಲಿ, ಕುಡಗೋಲು, ಮತ್ತು ಹರಿತವಾದ ಉಪಕರಣಗಳು ಮತ್ತು ಇತರ ಕರಕುಶಲ ತಂತ್ರಜ್ಞಾನರ ಉಪಕರಣಗಳನ್ನು ತಯಾರಿಸುವಾಗ ಬಹು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಉದಾಹರಣೆಗೆ ಕುಡುಗೋಲು, ಕೊಡ್ಲಿ, ರಂಪಿಗಿ, ಮಚ್ಚು, ಉಳಿ, ಬಾಚಿ, ಮತ್ತು ಇತರ ಉಪಕರಣಗಳನ್ನು ತಯಾರಿಸುವ ಕೊನೆಯ ಹಂತದಲ್ಲಿ ನೀರುಣಿಸುವುದಕ್ಕಾಗಿಯೇ ಮತ್ತೊಂದು ಕಾಯಿಗೆ ಇಡುತ್ತಾರೆ. ಒಲೆಯಿಂದ ತೆಗೆದು ಪಕ್ಕದಲ್ಲಿ ನೀರಿನ ದೋಣಿ ಇರುತ್ತದೆ ಅದರಲ್ಲಿ ತಯಾರಿಸಿದ ಉಪಕರಣಗಳನ್ನು ಎದ್ದುತ್ತಾರೆ. ಅವರ

ಪೂರ್ತಿಯಾಗಿ ಕ್ಷಣದಲ್ಲಿ ಎದ್ದಿ ತೆಗೆದು ನಂತರ ಆ ಉಪಕರಣವನ್ನು ನೋಡುತ್ತಾರೆ. ಅದನ್ನು ನೋಡುವ ಬಗೆಯನ್ನು ಇತರರು 'ಇದರಲ್ಲಿ ಬ್ರಹ್ಮಾಂಡ ಅಡಗಿದೆ ಎಂಬಂತೆ ನೋಡುತ್ತಾರಲ್ಲ ಸ್ವಲ್ಪ ನೀರು ಇಟ್ಟುಕೊ ಎಷ್ಟು ಮಾಡುತಾನ ಅಂತ ಗುನುಗುತ್ತಿರುತ್ತಾರೆ.' ಆದರೆ ಅವರು ಆ ವಸ್ತುವಿಗೆ ಎಷ್ಟು ನೀರು ಕುಡಿಸಬೇಕು ಎಂಬುದು ಅದನ್ನು ನೋಡಿದರೆನೆ ಗೊತ್ತಾಗುತ್ತೆ. ಹಾಗಾಗಿ ಅವರು ಅದನ್ನು ಸ್ವಲ್ಪ ಹೊತ್ತು ಹಿಡಿದುಕೊಂಡು ನೋಡುತ್ತಾರೆ. ಉಪಕರಣಗಳಿಗೆ ನೀರನ್ನು ಹೆಚ್ಚು ಕುಡಿಸಿದರೆ ತುಂಡಾಗಿಯೂ ಕಡಿಮೆ ಕುಡಿಸಿದರೆ ಬಾಯಿ ಮಡಚಿಕೊಳ್ಳುತ್ತದೆ. ಆದಕಾರಣ ಈ ಪದ್ಧತಿ ಈ ವೃತ್ತಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಕೆಲವರು ಈ ನೀರುಣಿಸುವ ಪದ್ಧತಿಯಲ್ಲಿ ಅನೇಕ ರೀತಿಯಲ್ಲಿ ಉಪಯೋಗ ಮಾಡುತ್ತಾರೆ. ಅಂದರೆ ಅಯಾ ಪ್ರದೇಶದಲ್ಲಿ ಕೊಡುವ ಸಂಭಾವನೆಯ ಮೇಲೆ ನಿಂತಿರುತ್ತದೆ. ಹೇಗೆಂದರೆ ಕೆಲಸಕ್ಕೆ ಸರಿಯಾಗಿ ಸಂಭಾವನೆ ಕೊಡುವ ಪ್ರದೇಶ ಮತ್ತು ಆ ಕೆಲಸಕ್ಕೆ ಬೇಡಿಕೆ ಇರುವಲ್ಲಿ ಜೊತೆಗೆ ಕೆಲಸಗಾರರು ಕಡಿಮೆ ಇದ್ದ ಪ್ರದೇಶದಲ್ಲಿ ಈ ಉಪಕರಣಗಳನ್ನು ಅಂದರೆ ಕಡಿಯುವ ಮತ್ತು ಕೊಯ್ಯುವ ಉಪಕರಣಗಳಿಗೆ ಪ್ರತ್ಯೇಕವಾಗಿ ನೀರುಣಿಸುತ್ತಾರೆ. ಭಿನ್ನವಾಗಿ ಎಂದರೆ ದೋಣಿಯಲ್ಲಿ ಈ ಉಪಕರಣಗಳನ್ನು ಅದ್ದುವುದಿಲ್ಲ, ಸ್ವಚ್ಛವಾಗಿರುವ ನೀರನ್ನು ಪ್ರತ್ಯೇಕವಾದ ಬಟ್ಟಲಿನಲ್ಲಿ ನೀರಾಕಿ ಆ ನೀರಿನಲ್ಲಿ ಉಪ್ಪನ್ನು ಬೆರೆಸುತ್ತಾರೆ. ಈ ಉಪಕರಣಗಳಿಗೆ ಅರಬಿಯ ಚುಂಗಿನಿಂದ ಹಾಕುತ್ತಾ ಹೋಗುತ್ತಾರೆ ಏಕೆಂದರೆ ಈ ವಸ್ತುಗಳು ಹೆಚ್ಚು ನೀರುಕುಡಿಯದೇ ಇರುವುದರಿಂದ ಸಾಲದಾಗಿ ಮತ್ತೆ ಹಾಕಬಹುದು ಮತ್ತು ಬಹಳ ಹರಿತವಾಗುತ್ತವೆ ಎಂಬ ಕಾರಣಕ್ಕೆ ಈ ಪದ್ಧತಿಯನ್ನು ಅನುಸರಿಸುತ್ತಾರೆ. ಇತರ ಉಪಕರಣಗಳಿಗೆ ದೋಣಿಯಲ್ಲಿನ ನೀರನ್ನೇ ಕುಡಿಸುವುದು ಅನಿವಾರ್ಯ. ಅಂತಹ ಉದಾಹರಣೆ ಇಲ್ಲಿ ಒಂದು ನಿದರ್ಶನ.

ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಯಲ್ಲಾಪುರದ ಚನ್ನಪ್ಪಚಾರಿ ಈ ಕಮ್ಮಾರಿಕೆಯಲ್ಲಿ ಸುತ್ತ ಮುತ್ತಲಿನ ಜನಕ್ಕೆ ಸುಪ್ರಸಿದ್ಧ. ಕುಡಗೋಲು, ಕೊಡ್ಲಿ ಇತರ ಹರಿತವಾದ ಉಪಕರಣಗಳನ್ನು ತಯಾರಿಸಲು ಆರು ತಿಂಗಳ ಮುಂಚಿತವಾಗಿ ಹೇಳಿದರೆ ಮಾತ್ರ ಅವರಿಂದ ಪಡೆಯಬಹುದಾಗಿತ್ತು. ಒಂದು ಕುಡಗೋಲನ್ನು, ಮೇವು ಕತ್ತರಿಸುವ ಕತ್ತರಿ ಅಷ್ಟೆ ಏಕೆ ಕತ್ತಿ, ಚಾಕು, ಈಳಿಗೆ ಮಣಿಯನ್ನು ಮಾಡಿ ಕೊಟ್ಟರೆ ಎರಡು ಮೂರು ವರ್ಷಗಳ ಕಾಲ ಅವುಗಳನ್ನು ನಿರಂತರವಾಗಿ ಬಳಸಬಹುದಿತ್ತು. ಅಷ್ಟು ಹೆಸರು ಪಡೆದಿದ್ದ. ಕಮ್ಮಾರಿಕೆ ಕೆಲಸದಲ್ಲಿ ಮಾತ್ರವಲ್ಲ ಬಡಗಿ ಕೆಲಸದಲ್ಲಿಯೂ ತನ್ನನ್ನು ತೊಡಗಿಸಿದ್ದರು. ಇಂತಹ ವಿಭಿನ್ನವಾದ ವೃತ್ತಿಗಾರರು ಅಪರೂಪವಾದರೂ ಊರಿಗೊಬ್ಬ ಪಾಂಚಾಳ ಎಂಬಂತೆ ತಮ್ಮ ವೃತ್ತಿಯಲ್ಲಿ ನಿರತರಾಗಿರುವುದನ್ನು ಕಾಣಬಹುದು.

ತಯಾರಿಸುವ ಉಪಕರಣಗಳು

ಕಮ್ಮಾರರು ತಯಾರಿಸುವ ಉಪಕರಣಗಳನ್ನು ಪಟ್ಟಿ ಮಾಡಿದರೆ ಬೆಳೆಯುತ್ತಲೇ ಹೋಗುತ್ತದೆ. ಆದರೆ ಈ ಉಪಕರಣಗಳ ಶಬ್ದನಾಮಗಳು ಕರ್ನಾಟಕದಲ್ಲಿ ಬೇರೆಬೇರೆ ಪ್ರಾಂತದಲ್ಲಿ ಪ್ರಾದೇಶಿಕಗನುಗುಣವಾಗಿ ಸ್ವಲ್ಪ ಸ್ವಲ್ಪ ಭಿನ್ನವಾಗಿಯೂ ಆಕಾರದಲ್ಲಿ ವ್ಯತ್ಯಾಸಗಳು ಕಂಡು ಬರುವುದು ಸಾಮಾನ್ಯ. ಉದಾಹರಣೆಗೆ ಮೈಸೂರು ಕಡೆ ಕುಡ್ಗೋಲು, ದಾವಣಗೆರೆಯಲ್ಲಿ ಭಾಗದಲ್ಲಿ ಕುಡುಗಲ್ಲು, ಕುಡುಗೋಲು ಎಂಬ ಶಬ್ದಗಳು ಕೇಳಿಬರುತ್ತವೆ. ಹಾಗೆಯೇ ಆಕಾರದಲ್ಲಿ ಈ ಕುಡುಗೋಲನ್ನು ಕಮ್ಮಾರನು ಒಂದೇ ಕಬ್ಬಿಣದ ತುಂಡಿನಲ್ಲಿ ಸ್ವಲ್ಪ ಬಾಗಕಾರವಾಗಿ ಕಂಡು ಬಂದರೆ ಬೇರೆ ಕಡೆ ಬಾಗಿದಾಕಾರದ ಪಟ್ಟಯನ್ನು ಹರ, ಪ್ಲೇಟ್‌ನಿಂದ ಮಾತ್ತ ಹಿಡಿಯ ಕಡೆಯದನ್ನು ಸಾದಾ ಕಬ್ಬಿಣದಲ್ಲಿ ತಯಾರಿಸಿ 'ಬೆಳಗಾರ' ಎಂಬ ಮಡಿಯಾಕಿ ಬೆಸೆಯುತ್ತಾರೆ. ಇಲ್ಲಿ ಒಂದು ಮಾತನ್ನು ಹೇಳಬೇಕೆಂದರೆ ಕಬ್ಬಿಣದಲ್ಲಿ ಮೆದು ಕಬ್ಬಿಣ, ಪೆಡಸುಕಬ್ಬಿಣ ಎಂಬ ಎರಡು ವಿಧವಾದ ಕಬ್ಬಿಣ ಸಿಗುವುದರಿಂದ ಎಲ್ಲಿ ಯಾವ ಭಾಗಕ್ಕೆ ಯಾವ ಕಬ್ಬಿಣವನ್ನು ಉಪಯೋಗಿಸಬೇಕು ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ಪ್ರಾದೇಶಿಕವಾಗಿ ಭಿನ್ನ ಭಿನ್ನ ಶಬ್ದಗಳು ಕೇಳಿ ಬಂದರೂ ಸ್ವರೂಪ ಒಂದೇ ಉಚ್ಚಾರಣೆ ಸ್ವಲ್ಪ ವ್ಯತ್ಯಾಸವಾಗಿ ಕಂಡುಬಂದರೂ ಬಳಕೆಯ ವಸ್ತುಗಳು ಕೂಡ ಒಂದೇ ಆಗಿರುತ್ತದೆ. ಹೀಗಾಗಿ ಸಾಮಾನ್ಯವಾಗಿ ಬಳಸುವ ಶಬ್ದಗಳಲ್ಲಿ (ಹೆಸರುಗಳಲ್ಲೇ) ಇಲ್ಲಿ ಬಳಸಲಾಗಿದೆ.

ಗೃಹೋಪಕರಣಗಳು

ಅಗಳಿ – ಮನೆಯ ಬಾಗಿಲಿಗೆ ಹಾಕುವ ವಸ್ತು.

ಅಚ್ಚು – ಬಂಡಿಗಾಲಿಗೆ ಹೊಂದಿಕೊಳ್ಳುವ ಕಬ್ಬಿಣದ ಪಟ್ಟಿ.

ಅಣ್ಸಿ – ಬಡಗಿಗಳ ಉಳಿಗೆ ಮಾಡಿಕೊಡುವ ದುಂಡಾದ ಬಳೆ.

ಅಂಚು – ರೊಟ್ಟಿ ಸುಟ್ಟದನ್ನು ಬೆಯಿಸುವ ಉಪಕರಣ.

ಚುಚ್ಚುಗ – ರೊಟ್ಟಿಯನ್ನು ತಿರುವಿ ಹಾಕುವ ವಸ್ತು.

ಉದಗೊಳವಿ – ಒಲೆಯನ್ನು ಊದುವುದಕ್ಕೆ ಬಳಸುವ ಸಾಮಗ್ರಿ.

ಅಡ್ಡಣಗಿ – ಊಟ ಮಾಡುವಾಗ ಎತ್ತರಕ್ಕೆ ಇಟ್ಟುಕೊಳ್ಳುವ ಉಪಕರಣ.

ಈಳಿಗೆ,ಇಳಿಗೆ, ಈಳ್ಗಿ – ತರಕಾರಿಯನ್ನು ಎಚ್ಚುವುದಕ್ಕೆ ಸಹಾಯಕ ವಸ್ತು.

ಕತ್ತರಿ, ಕತ್ರಿ – ದನಗಳಿಗೆ ಮೇವು ಕತ್ತರಿಸುವ ಉಪಕರಣ.

ಚಿಲ್ಕ, ನಾಗವಾಸ – ಕದ ಭದ್ರವಾಗಿರುವುದಕ್ಕೆ ಬಳಸುವ ಉಪಕರಣ.

ಜೋಕಾಲಿ ನಾಗವಾಸ – ಜೋಕಾಲಿಗೆ ಬೇಕಾದ ವಸ್ತು.

ಗಜ್ರಿಮೊಳಿ – ಮನೆಯ ಬಾಗಿಲಿಗೆ ತಯಾರಿಸುವ ವಸ್ತು.

ಹಾರಿಕೋಲು – ಒಳ್ಳಲ್ಲಿ ಪುಡಿಮಾಡಲು ಉಪಯೋಗಿಸುವ ವಸ್ತು.

ಒಣಕಿಬಳಿ – ಒನಕೆಯ ಮೇಲೆ ಹಾಕುವ ದುಂಡನೆಯ ಬಳೆ.

ಸ್ಯಾವಿ ಗೆ ಕೊಂಡಿ – ಶಾವಿಗೆ ಕೋಲು ನಿಲ್ಲಲು ಬಳಸುವ ವಸ್ತು.

ವ್ಯವಸಾಯೋಪಕರಣಗಳು

ಅಚ್ಚು – ಬಂಡಿಯ ಅಚ್ಚು.

ಅಡ್ಗಿ ಮಳಿ – ಬಂಡಿಯಲ್ಲಿನ ಕಬ್ಬಿಣದ ವಸ್ತು.

ಕೀಲು (ಕಡೀಲು) – ಎರಡು ಚಕ್ರ ಹೊರ ಬರದಂತೆ ತಡೆಯುವ ಉಪಕರಣಗಳು.

ಕುಳ – ನೇಗಿಲಿನ ಒಂದು ವಸ್ತು.

ಕುಡುಗೋಲು – ಬೆಳೆ ಕೊಯ್ಯುವ ಉಪಕರಣ.

ಕೊಡ್ಲಿ, ಕೊಡಲಿ – ಕಡಿಯುವ ಉಪಕರಣ.

ಕಬ್ಬಿಣದ ತಾಳು – ಕುಂಟಿಯಲ್ಲಿ ಬಳಸುವ ವಸ್ತುಗಳು.

ಕುರ್ಚಿಗಿ – ಕಳೆ ತೆಗೆಯುವ ವಸ್ತು.

ಕುಡ	– ಅರಗಲು ಕುಂಟೆಯಲ್ಲಿರುವ ಕಬ್ಬಿಣದ ಸಾದನ.
ಎಡೆಕುಡು	– ಒಂದು ಗೇಣಿನ ಕಬ್ಬಿಣದ ವಸ್ತು.
ಬಳು ಗುಂಟಿಕುಡ	– ಇದೊಂದು ಅರಗಲು, ಸಮಮಾಡುವ ಒಂದು ವಸ್ತು.
ಜೋಟಿ ಕುಡ್ಗೋಲು	– ಉದ್ದನೆಯ ಗಳ (ಮರ)ದ ತೂತಿಗೆ ಸಿಕ್ಕಿಸಿರುವ ವಸ್ತು.
ಕೂರ್ಗಿಮಳಿ	– ಕೂರಿಗಿ ತಾಳಿಗೆ ಹೊಂದಿಕೊಳ್ಳುವ ಸಾಧನಗಳು.
ಗುದ್ದಲಿ, ಗುದ್ಲಿ, ಪಿಕಾಸಿ	– ಮಣ್ಣು, ಗೊಬ್ಬರ ಕಡಿಯಲು, ತೆಗೆಯಲು ಅನುಕೂಲವಾಗುವ ಉಪಕರಣ.
ಚಲಿಕೆ, ಸಲಿಕೆ	– ಮಣ್ಣು, ಗೊಬ್ಬರ ತುಂಬಲು ನೀರು ಹಾಯಸುವಾಗ ಬಳಸುವ ವಸ್ತು.
ಜಿಗಳಿ, ಜಿಗಣಿ	– ನೇಗಿಲು ಕುಳಬಿಗಿಯುವ ಕೊಂಡಿ.
ಹಳಿ	– ಬಂಡಿಗಾಲಿಗೆ ಹಾಕುವ ಸಾಧನ.
ಸರಪಳಿ, ಸರಪಣಿ	– ದನಗಳನ್ನು ಕಟ್ಟಲು ಉಪಯೋಗಿಸುವ ಸಾಧನ.
ಕುಂಟಿ ಬಳಿ	– ಕುಂಟಿಯ ತಾಳಿಗೆ ತೊಡಿಸುವ ಸಾಧನ.
ಬಾಯ್ಬಳೆ	– ಬಂಡಿ ಚಕ್ರದ ವಸ್ತು.
ಎದಿಕಟ್ಟು	– ಗುಂಬಕ್ಕೆ ಹಾಕುವ ಬಳಿ.
ಮಕ್ಬಳಿ	– ಗುಂಬಕ್ಕೆ ಮುಂದೆ ಹಾಕುವ ಬಳೆ.
ಮಚ್ಚು	– ರೈತರಿಗೆ ಹಾಗೂ ಬೇರೆ ಏನಾದರೂ ಕೊಚ್ಚಲು, ಕಡಿಯಲು ಬೇಕದ ವಸ್ತು.
ಮೊಳೆ	– ಬಂಡಿ, ಬಾಗಿಲು, ಇತರ ಸ್ಥಳಗಳಲ್ಲಿ ಬಳಕೆಗೆ ಬರುವ ವಿವಿಧ ರೂಪಾಕಾರದ ಮೊಳೆಗಳು.
ಮೊಕ್‌ಮಳಿ	– ಕುದುರೆ, ಮೋಕಿನ ನಡುವೆ ಇರುವ ಸಾಧನ.
ಹಾರೆ	– ಕಬ್ಬಿಣದ ಉದ್ದನೆಯ ಚೂಪಾದ ಸಲಾಕೆ.

ಆಯುಧಗಳು

ಚಾಕು.	ಚೂರಿ.
ಬಾಕು.	ಭರ್ಚಿ.
ಅಂಬು.	ಈಟಿ.
ಕವಚ.	ವಜ್ರಾಂಗಿ.
ಶಿರಸ್ತ್ರಾಣ.	

ಇತ್ಯಾದಿ ಉಪಕರಣಗಳನ್ನು ಈ ಕಮ್ಮಾರರು ತಯಾರಿಸುತ್ತಿದ್ದರು ಹಾಗೂ ತಾವೇ ಮಾಡುವ ಕಸುಬಿನ ಉಪಕರಣಗಳನ್ನು ಕೂಡ ತಾವೇ ತಯಾರಿಸಿ ಕೊಳ್ಳುವುದು ವಿಶೇಷ. ಈ ಉಪಕರಣಗಳನ್ನು ಕೆಲವರು ದುಡ್ಡು ಕೊಟ್ಟರೆ, ಬಹುಹಿಂದಿನಿಂದಲೂ ನಡೆದು ಬಂದ ಕೆಲವರು ವರ್ಷದಿಂದ ವರ್ಷಕ್ಕೆ ಆಯದ ರೂಪದಲ್ಲಿ ಕೊಡುಕೊಳ್ಳುವಿಕೆ

ನಡೆಯುತ್ತದೆ. ಇವರನ್ನು ಆಯಗಾರರು ಎಂದು ಕರೆಯುತ್ತಾರೆ.

ಹೀಗೆ ಪಂಚಾಳರಲ್ಲಿ ಒಬ್ಬರಾದ ಈ ಕಮ್ಮಾರರು ತಮ್ಮ ಕುಲ ಕಸುಬಿನ ಮೂಲಕ ತಮ್ಮ ಜೀವನವನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಆದರೆ ಈ ಕಮ್ಮಾರಿಕೆಯ ವೃತ್ತಿಯಿಂದ ಅವರ ದೇಹ ಸ್ಥಿತಿ ಹದಗೆಡುತ್ತಾ ಬರುತ್ತದೆ. ಕಬ್ಬಿಣದ ಜೊತೆ ಆಟವಾಡುವ ಪ್ರವೃತ್ತಿಯಿಂದ ಅವರ ದೈಹಿಕ ಸಾಮರ್ಥ ಇಳಿ ವಯಸ್ಸಿನಲ್ಲಿ ಗಂಭೀರ ಸ್ಥಿತಿಗೆ ತಲುಪುತ್ತದೆ. ದೇಹದಲ್ಲಿ ಎಲುಬುಗಳ ಹೊರತು ಬೇರೇನು ಕಾಣದು ಹಾಗೆ ಕಾದ ಕಬ್ಬಿಣ ಇವರ ದೇಹಕ್ಕೆ ಬರೆ ಹಾಕುತ್ತಲೇ ಇರುತ್ತದೆ. ಈ ಬರೆಯನ್ನು ಅವರು ಸಹಿಸಿಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ಕಾಣಬಹುದು. ಈ ವೃತ್ತಿಯವರು ಕಟ್ಟುಮಸ್ತಾದ ವ್ಯಕ್ತಿಗೆ ಅರ್ಹವಾಗಿದ್ದರೂ ಎಲ್ಲರೂ ಹಾಗೆ ಇರಲು ಸಾಧ್ಯವಿಲ್ಲ. ಮೈಮೇಲಿನ ಸುಟ್ಟಗಾಯ, ಹೊಲಿಗೆಗಳು, ದೇಹದ ನೋವುಗಳು ಮಾನಸಿಕವಾಗಿ ನೋಯುಸುತ್ತ ಇದ್ದರೂ ಈ ದೇಶದ ಕಸುಬುಗಳು ಸ್ಥಿತಿಯ ಸ್ವರೂಪವೇ ಹಾಗೆ. ಅನಿವಾರ್ಯವಾಗಿ ದೇಶೀಯ ತಂತ್ರಜ್ಞಾನಗಳು ಆಧುನಿಕ ಯುಗಕ್ಕೆ ಬಲಿಯಾಗಿ ಮೂಲೆ ಗುಂಪಾಗಿ ಸೇರುವ ಸ್ಥಿತಿಗೆ ಬಂದಿವೆ. ಮುಂದೆ ಬರುತ್ತದೆ ಆದರೂ ಈ ಕಸುಬುಗಳು ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿರುತ್ತವೆ ಎಂಬ ಮಾತನ್ನು ಹೇಳಬಹುದು.

ಬಳಸುವ ಉಪಕರಣಗಳು

ಈ ವೃತ್ತಿಕಾರರಲ್ಲಿ ಉಪಕರಣಗಳ ಹೆಸರುಗಳು ಮುಖ್ಯವಾದವು ಮತ್ತು ವಿಶಿಷ್ಟವಾದವು. ಈ ಪದಗಳಿಗೆ ಸಾಮಾನ್ಯವಾಗಿ ವೃತ್ತಿ ವಲಯವನ್ನು ಮೀರಿದ ಬಳಕೆಯ ಪರಿಸರವಿರುವುದಿಲ್ಲ. ಐದು ವೃತ್ತಿಗಳಿಗೂ ಸಾಮಾನ್ಯವಾದ ಹಲವಾರು ಉಪಕರಣಗಳಿದ್ದರೂ ಐದೂ ವಿಭಾಗಗಳಲ್ಲಿಯೂ ಪ್ರತ್ಯೇಕವಾದ ದಾಖಲಿಸಲಾಗಿದೆ. ಕಾರಣ ಪ್ರತಿಯೊಂದು ವೃತ್ತಿಗೂ ಅವುಗಳ ಕಾರ್ಯ ಸ್ವರೂಪ, ಬಳಕೆ ವಿಭಿನ್ನವಾಗಿರುತ್ತವೆ. ಉದಾ:– ಉಳಿ ಎಂಬ ಒಂದೇ ಉಪಕರಣ ಎರಡು ಮೂರು ವೃತ್ತಿಗಳಲ್ಲಿ ಬಳಕೆಯಾಗುತ್ತದೆ. ಆದರೆ ಕೆಲಸಕ್ಕೆ ತಕ್ಕಂತೆ ನಿಷ್ಪನ್ನ ಪದಗಳು ಸೃಷ್ಟಿಯಾಗಿವೆ. ಉಳಿ ಮರವನ್ನು ಬೇಕಾದ ಆಕಾರಕ್ಕೆ ಕತ್ತರಿಸಲೂ ಬಳಕೆಯಾಗುವ ಉಪಕರಣವಾದರೆ ಕೂಲುಳಿ. ರಂಧ್ರ ಮಾಡಲು ಮಾತ್ರ ಬಳಸುವ ಉಳಿ, ಗೀರುಳಿ ಗೆರೆ ಎಳೆಯಲು ಮಾತ್ರ ಬಳಕೆಯಾಗುವ ಉಳಿ, ಉಪಕರಣಗಳ ಹೆಸರುಗಳು ಪಾರಂಪರಿಕವಾದರೂ ಉಪಕರಣಗಳಲ್ಲಿ ವ್ಯತ್ಯಾಸವಾದಂತೆ ಅಳತೆ ಮಾಪನಗಳ ವಿಧಾನಗಳು ಬದಲಾದಂತೆ ಅನೇಕ ಹೊಸ ಪದಗಳು ಉತ್ಪತ್ತಿಯಾಗುತ್ತವೆ.

ಉಪಕರಣಗಳು

ಅಡಿಗಲ್ಲು (ಅಡ್ಗಲ್ಲು)	–	ಕಮ್ಮಾರರು ಲೋಹದ ವಸ್ತುಗಳನ್ನು ಇಟ್ಟು ಬಡಿಯಲು ಆಸರೆಯಾಗಿ ಬಳಸುವ ಗಟ್ಟಿಯಾದ ಕಬ್ಬಿಣ.
ಅಡಿಬಡ್ಡ	–	ಅಡಿಗಲ್ಲಿನ ಕೆಳಗಿರುವ ಮರದ ತುಂಡು.
ಅರ	–	ಕಬ್ಬಿಣದ ವಸ್ತುಗಳನ್ನು ಹರಿತಮಾಡಿಕೊಳ್ಳುವ ಉಪಕರಣ.
ಅಳತೆಪಟ್ಟಿ	–	ಅಳೆಯುವ ಉಪಕರಣ.
ಇಕ್ಕಳ	–	ಕಾದ ಕಬ್ಬಿಣ ಹಿಡಿದುಕೊಳ್ಳಲು ಬಳಸುವುದು.
ಕಪ್ಪಿಕ್ಕಿ	–	ವಸ್ತು ದುಂಡಗೆ ಮಾಡುವಾಗ ಬಳಕೆಯಾಗುವ ಉಪಕರಣ.
ಕೊಕ್ಕೆ ಇಕ್ಕಳ	–	ದೊಡ್ಡ ವಸ್ತುಗಳನ್ನು ಹಿಡಿದುಕೊಳ್ಳಲು ಬಳಸುವುದು.
ಜಗ್ಗೆ ಇಕ್ಕ (ನಾಯಿ)	–	ಬಂಡಿಹಳಿಗಳನ್ನು ಚಕ್ರಕ್ಕೆ ಎಳೆದು ಕೂರಿಸುವ ಇಕ್ಕಳ.

ಡೊಂಕಿಕ್ಕ (ಕೊಂಡಿ ಇಕ್ಕಳ)	– ವಸ್ತುಗಳನ್ನು ಹೊರಳಾಡಿಸಿ ಬಡಿಯಲು ಹಿಡಿದುಕೊಳ್ಳುವ ಇಕ್ಕಳ.
ವಂಕಿಕ್ಕ	– ಕೊಡ್ಲಿ, ಗುದ್ಲಿ ತಯಾರಿಸುವಾಗ ಹಿಡಿದುಕೊಳ್ಳಲು ಬಳಸುವ ಇಕ್ಕಳ.
ಕುತ್ತುಗೋಲು (ಬಗ್ಸ್‌ಗೋಲ್)	– ಕಮ್ಮಾರನು ಒಲೆಯ ಮುಂದೆ ಬೆಂಕಿಯನ್ನು ದುಂಡಗೆ ಮಾಡುವ ಕಬ್ಬಿಣದ ಸಲಾಕೆ.
ಕುಲುಮೆ	– ಕೊಲಿಮಿ, ಕೊಲ್ಮಿ,–ಕಮ್ಮಾರರು ಕಬ್ಬಿಣ ಕೆಲಸ ಮಾಡಲು ಬೆಂಕಿ ಮಾಡಿಕೊಳ್ಳಲು ಒಲೆ. (ಕಾಳಿ)
ಕೈವಾರ	– ಬಂಡಿ ವಸ್ತುಗಳನ್ನು ಅಳತೆಗಾಗಿ ಕಮ್ಮಾರರು ಬಳಸುವ ಉಪಕರಣ.
ಚಮಟಿಗೆ (ಗನ್ನು)	– ವಸ್ತುಗಳನ್ನು ಬಡಿಯಲು ಬೇಕಾದ ದೊಡ್ಡ ಸುತ್ತಿಗೆ
ತಿದಿ	– ಕಬ್ಬಿಣ ಕಾಯಲು ಹವಾ ಬರುವುದಕ್ಕೆ ಬಳುಸವ ಪ್ರಮುಖವಾದ ಚರ್ಮದ ಯಂತ್ರ.
ಚಾಣ, ಚಾನ	– ಕಬ್ಬಿಣ ಕತ್ತರಿಲು ಬೇಕಾದ ಸಾಮಗ್ರಿ.
ಗೊಲ್ಚಾಣ(ಪಾಗರ)	– ಕಬ್ಬಿಣದಲ್ಲಿ ರಂಧ್ರ ಮಾಡಲು ಬೇಕಾದ ಉಪಕರಣ.
ದೋಣಿ.	– ಕಾದ ಕಬ್ಬಿಣ ಆರಿಸಲು ನೀರು ತುಂಬಿಕೊಳ್ಳುವ ವಸ್ತು.
ಪಂಚು	– ಒಂದು ರೀತಿಯ ಮಳೆ, ಕಬ್ಬಿಣದಲ್ಲಿ ತೂತು ಮಾಡಲು ಬಳಸುವ ಉಪಕರಣ.
ಪಾನ	– ನಟ್‌ಗಳನ್ನು ತೆಗೆಯಲು ಬಿಗಿಯಲು ಬಳಸುವ ಪಕರಣ
ಬ್ಲೋರ್, ಪಂಕ	– ಕೈಯಿಂದ ತಿರುಗಿಸಿ ಕುಲುಮೆಗೆ ಗಾಳಿ ಒದಗಿಸುವ ಆಧುನಿಕ ಯಂತ್ರ.
ಮಟ್ಲಿಗಿ	– ಅಳತೆಗಾಗಿ ಬಳಸುವುದು.
ರಿಗ್ಗಿ	– ಕಬ್ಬಿಣ ಮಣಿಯಲು ಹಿಡಿಯಲು ಬೇಕಾದ ಉಪಕರಣ
ಕೈಸುತ್ತಿಗಿ	– ಸಣ್ಣ ಸುತ್ತಿಗೆ.
ತುಂಬಾರಿ	– ಕೊಡ್ಲಿ, ಗಾಡಿಚಕ್ರದ ಬಳಿ, ಗುದ್ಲಿ, ಸಲಿಕೆ ತುಂಬುಗಳನ್ನು ಮಾಡಲು ಬಳಸುವ ವಸ್ತು.

ಆ) ಬಡಗಿತನ

ಪಾಂಚಾಳರನ್ನು ಆಚಾರಿಗಳೆಂದು ವಿಶ್ವಕರ್ಮರಲ್ಲಿ ಒಬ್ಬರಾದ ಬಡಿಗೇರ (ಬಡಗಿ) ರೂ ಒಬ್ಬರೂ.

ಪಂಚ ವೃತ್ತಿಗಳಲ್ಲಿ ಬಡಗಿತನ ವೃತ್ತಿಯೂ ಒಂದಾಗಿದೆ. ತಳಮಟ್ಟದ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಕರ್ಮ (ಕೆಲಸ, ಕಾಯಕ) ವನ್ನು ವೃತ್ತಿಯ ಮೂಲಕ ಸಮಾಜದಲ್ಲಿ ತಮ್ಮನ್ನು ಬಹು ಹಿಂದಿನ ಕಾಲದಿಂದಲೂ ಪರಿಚಯಿಸಿ ಕೊಂಡಿದ್ದಾನೆ. ಈ ಬಡಗಿಯರು ವಿಶ್ವಕರ್ಮನು ಸೃಷ್ಟಿಸಿದ ವಿಷ್ಣುವಿನಿಂದ 'ಮಯ'ನಾಗಿ 'ಸನಾತನ' ಗೋತ್ರದವನೆನಿಸಿಕೊಂಡು ಬದುಕಿನಲ್ಲಿ ಕಾಯಕವನ್ನು ಕಾಣುತ್ತಾನೆ. ಇವರು ಪಾಂಚಾಳರ ಪಂಚ ವೃತ್ತಿಯಲ್ಲಿ ಬಡಗಿತನವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಪಂಚ ವಿದ್ಯೆಗಳಲ್ಲಿ ವಿಶ್ವಕರ್ಮನು ದಾರುಶಿಲ್ಪ (ಕಾಷ್ಠ) ವಿದ್ಯೆಯನ್ನು ನೀಡಿದನು ಎಂದು ಹೇಳಲಾಗುತ್ತದೆ.

ಭಾರತದ ಯಾವುದೇ ಕರಕುಶಲಕಾರರು ಹಿಂದಿನಿಂದ ವಂಶಪರಂಪರೆಯಾಗಿ ನಿರ್ವಹಿಸಿಕೊಂಡು ಕುಲ ಕಸಬುಗಳಿಂದ ತಮ್ಮ ವೃತ್ತಿ ನಾಮಗಳು ಹುಟ್ಟಿಕೊಂಡಿವೆ. ಇವು ಜಾತಿ, ಮತ, ಪಂಥಗಳಿಂದ ಬೆಳೆದುಕೊಂಡು ಬಂದಿಲ್ಲವೆಂದು ಹೇಳಬಹುದು. ಕುಂಬಾರ ಮಡಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದರಿಂದ ಕುಂಬಾರನಾದನೇ ಹೊರತು ಇನ್ಯಾವುದರಿಂದಲೂ ಅಲ್ಲ, ಹಾಗೆನೆ ಚಮ್ಮಾರ ಎಂಬ ಪದ ಚಪ್ಪಲಿ ಮಾಡುವ ಕಾಯಕದಿಂದ, ಕೊರವ ಬುಟ್ಟಿ ಹೆಣೆಯುವುದರಿಂದ, ಕಮ್ಮಾರ ಕಬ್ಬಿಣ ಕೆಲಸ ನಿರ್ವಹಿಸುವುದರಿಂದ ಅವರವರ ವೃತ್ತಿಗಳ ಬಲದಿಂದ ವೃತ್ತಿನಾಮಗಳು ಬಂದಿವೆ. ಆದರೆ ಪಾಂಚಾಳರಲ್ಲಿ ಜಾತಿನಾಮ ಬೇರೆ ವೃತ್ತಿನಾಮಗಳು ಬೇರೆ ಬೇರೆಯಾಗಿ ಕಾಣಬಹುದು. ಪಂಚ ವೃತ್ತಿಗಳವರು ಅಣ್ಣ ತಮ್ಮಂದಿರು ಅಥವಾ ಒಂದು ಕುಲ, ಒಂದು ಪಂಥಕ್ಕೆ ಸೇರಿ ಬೇರೆ ಬೇರೆ ವೃತ್ತಿಗಳಲ್ಲಿ ನಿರತರಾಗಿರುವುದನ್ನು ನಾವು ಕಾಣಬಹುದು. ಒಂದು ಅಂಶವನ್ನು ಗಮನಿಸುವುದಾದರೆ ಕಮ್ಮಾರಿಕೆ, ಬಡಿಗತನ, ಕಂಚುಗಾರಿಕೆ, ಅಕ್ಕಸಾಲಿಕೆ, ಶಿಲ್ಪಗಾರಿಕೆ ಈ ಎಲ್ಲಾ ವೃತ್ತಿಗಳನ್ನು ಒಂದೇ ಕೋಮಿನವರು ಇಟ್ಟುಕೊಂಡಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಕುಲಕ್ಕೂ ಮತ್ತು ವೃತ್ತಿಗೂ ನಂಟು ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು. ಇದು ಮಾತ್ರ ಬಹು ವಿಶಿಷ್ಟವಾದ ವರವೇನೋ ಈ ಪಾಂಚಾಳರಿಗೆ ವೃತಿಗೂ, ಕುಲಕ್ಕೂ, ವೃತ್ತಿಕಾರರಿಗೂ ಒಂದು ರೀತಿಯ ಅವಿನಾಭಾವ ಸಂಬಂಧ ಹಾಗೂ ದೈವ ಹಾಗೆ ನಿಶ್ಚಯಿಸಿದ್ದಾನೋ ಏನೋ ಈ ಪಂಚ ವೃತ್ತಿಗಳಿಂದ ಬೇರೆ ಬೇರೆಯಾದ ವೃತ್ತಿಗಳಿಂದ ವೃತ್ತಿ ನಾಮಗಳನ್ನು ಕಾಣಬಹುದು. ಹಾಗೆ ಕರಕುಶಲಕಾರರು ತಾವು ನಿರ್ವಹಿಸುವ ಕುಲ ಕಸಬುಗಳಿಂದ ತಮ್ಮ ವೃತ್ತಿ ನಾಮಗಳು ಹೆಸರು ಪಡೆದಿವೆ. ಹಾಗೆ ಎಲ್ಲಾ ವೃತ್ತಿ ನಾಮಗಳಂತೆ ಬಡಗಿ ಎಂಬ ಶಬ್ದ ಉತ್ಪತ್ತಿಯನ್ನು ನಾವು ತಿಳಿಯಬಹುದು.

ಬಡಗಿ–ಬಡಿಗಿ–ಬಡಿಗಾರ–ಬಡಿಗೇರ–ಬಡಿಗ್ಯಾರು–ಬಡಿಗ್ಯಾ ಎಂಬ ಅಚ್ಚಗನ್ನಡ ಶಬ್ದಗಳಾಗಿವೆ. ಸಂಸ್ಕೃತದ 'ವರ್ಧ' (ಕತ್ತರಿಸು,ಕಡಿ) ವರ್ಧಕಿ–ವಡ್ಡಕಿ– ಒಡ್ಡಕಿ(ಗಿ) ಬಡಗಿ ಎಂದು ಮುಂತಾಗಿ ಬೆಳದುಕೊಂಡು ಬಂದಿರಬಹುದೆಂಬುದನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಸ್ಥಾಪಿಸಲೆತ್ನಿಸಿದರೂ ಜನ ಬಳಕೆಯ ಹಾಗೂ ಚಾರಿತ್ರಿಕ ಪ್ರಯೋಗಗಳನ್ನು ಗಮನಿಸಿದರೆ ಬಡಗಿ–ಬಡಿಗಿ (ಬಡಿಗ್ಯಾ) ಅಚ್ಚಕನ್ನಡರ್ಥದ ಬದಲಾಗಿ 'ಬ' 'ವು' 'ಕಿ' ಯ ಬದಲಾಗಿ 'ಗಿ' ಯಾಗಿ ಬದಲಾಗಿರಲುಬಹುದು. ಇನ್ನೊಂದು ಅರ್ಥದಲ್ಲಿ ಹೇಳಬೇಕಾದರೆ ಬಡಗಿ ಎಂದರೆ ಕೊಲು, ಸುತ್ತಿಗೆ (ಕೊಡ್ತಿ) ಕಟ್ಟಿಗೆ, ಮರ ಎಂಬ ಅರ್ಥಗಳು ಸಿಗುತ್ತವೆ. ಬಡಗಿಯಿಂದ, ಬಡಗಿಯನ್ನು, ಬಡಿಯುವವನು ಬಡಗಿಯಾಗಿ ಶಬ್ದರೂಪ ತಾಳಿರಲೂಬಹುದು. ಬಡಗಿಯಿಂದ ಎಂದರೆ ಕೊಡತಿ (ಕೊಡ್ತಿ)ಯಿಂದ ಮರವನ್ನು ಕೆತ್ತಿ ಕಾಯಕ ಮಾಡುವವನನ್ನು ಬಡಗಿ, ಎಂದು ಕರೆಯುತ್ತಾರೆ. ಅದು ಸಂಸ್ಕೃತಕ್ಕೆ ಭಾಷಾಂತರವಾಗುವಾಗ ವರ್ಧಕಿ ಆಗಿರಬಹುದು ಅಥವಾ ಇವೆರಡು ಸ್ವತಂತ್ರವಾಗಿಯೂ ರೂಪಿತವಾಗಿರುವ ಸಾಧ್ಯತೆಗಳಿವೆ.

ಪಾಂಚಾಳರಲ್ಲಿ ಒಬ್ಬರಾದ ಬಡಗಿಯರು ಮತ್ತು ಅವರು ಮಾಡುವ ವೃತ್ತಿಯು ಇತಿಹಾಸದ ಅಥವಾ ದಾಖಲೆಗಳ (ಇಲ್ಲವಾದರೂ ಆಗಿರಬಹುದು)ನ್ನು ನೋಡಿದರೆ ಅವರ ಪರಂಪರೆಯನ್ನು ತಿಳಿದುಕೊಳ್ಳಬಹುದು. ಒಂದು ಜನಾಂಗ, ಒಂದು ವೃತ್ತಿ ಇನ್ಯಾವುದೇ ಉತ್ಪತ್ತಿಯನ್ನು ಜನಪದರು ದೈವಿ ಹಿನ್ನಲೆಯನ್ನೇ ಆಧಾರವಾಗಿಟ್ಟುಕೊಂಡು ಬಂದವರು. ಹೇಗೆ ಹುಟ್ಟಿದರು ಎಂದು ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ. ಇದನ್ನು ತೊಡೆದು ಹಾಕಲು

ಯಾರಿಂದಲೂ ಸಾಧ್ಯವಿಲ್ಲ.

ವಿಶ್ವಕರ್ಮನಿಂದ ಪಾಂಚಾಳರು ಜನಿಸಿದರು, ಅವನೇ ಪಂಚ ಜನರಿಗೆ ಪಂಚ ವೃತ್ತಿಗಳನ್ನು ಲೋಕ ಕಲ್ಯಾಣಕ್ಕಾಗಿ ನೀಡಿದನೆಂದು ತಿಳಿದು ಬರುತ್ತದೆ. ಈ ಪಾಂಚಾಳರು ನಂಬಿರುವುದು ಇದನ್ನೇ ಅದರಂತೆ ಬಡಗಿಯರು ಈ ಐದು ವೃತ್ತಿಯ ಪರಿಧಿಯೊಳಗೆ ಬರುವುದನ್ನು ನಾವು ಕಾಣಬಹುದು. ಆದರೆ ಅವರ ಇರುವಿಕೆಗೆ ಸಾಕ್ಷಿ ಎಂಬಂತೆ ಇತಿಹಾಸದ ಪುರಾವೆಗಳು ಅವರ ಮಾಹಿತಿಗೆ ಸಾಕ್ಷಿಯಾಗಿ ನಿಂತಿರುವುದನ್ನು ನೋಡಬಹುದು. ಆದರೆ ಪ್ರತ್ಯೇಕವಾಗಿ ಬಡಗಿಯರ ಬಗ್ಗೆ ಹೆಚ್ಚು ಐತಿಹ್ಯ ಕತೆಗಳು ಸಿಗುವುದಿಲ್ಲ ಸಿಕ್ಕರೆ ಐದು ಜನರ ವೃತ್ತಿಯ ಒಳಗಡೆಗೆ ಅಡಗಿಕೊಂಡಿರುತ್ತವೆ ಎಂಬುದರಲ್ಲಿ ಸಂದೇಹನೇ ಇಲ್ಲ.

ಹೊಯ್ಸಳ ಬಲ್ಲಾಳರಾಯನ ಕಾಲದ ಕ್ರಿ.ಶ. ೧೦೦೩ ರ ಕೊಲ್ಲಾಪುರದ ತಾಮ್ರ ಶಾಸನದಲ್ಲಿ 'ಓಟ್ಟಕಾರ ಬಡಗಿ ಪಿಲೇಜಗೆ ಮತ್ತರು ೪.........'ಎಂದು ಹೇಳುವಾಗ ಇವರಿಗೆ ಭೂಮಿಯ ಧಾನ ಪಡೆದ ವಿವರವನ್ನು ನೋಡಿದರೆ ಆಗಿನ ಕಾಲದಲ್ಲಿ ರಾಜನಿಂದ ಧಾನ ಪಡೆದಿದ್ದರು ಎಂಬುದು ಮತ್ತು ಅವರ ಇತಿಹಾಸದ ಕಾಲವೂ ತಿಳಿಯುತ್ತದೆ.

ಚಿಕ್ಕ ಹಂದಿಗೋಳ ಗ್ರಾಮದ ಶಿಲಾಶಾಸನದಲ್ಲಿ ಬಡಗಿ ಎಂಬ ಶಬ್ದವನ್ನು ನೋಡಬಹುದು ಧಾರವಾಡ ಜಿಲ್ಲೆಯ ಹೊಸೂರು ಗ್ರಾಮದ ಕ್ರಿ.ಶ. ೧೧೮೬ರ ಶಿಲಾ ಶಾಸನದಲ್ಲಿ "......... ಬಡಗಿ ಕಲೋಜ ಮೋರಕೇಶ್ವರ........" (ಎಪಿಗ್ರಾಫಿಯಾ ಕರ್ನಾಟಕ ಚಿಕ್ಕ ಹಂದಿಗೋಳ)ಎಂಬುದನ್ನು ನೋಡಿದರೆ ಅವರ ಪ್ರಾಚೀನತೆ ತಿಳಿಯಬಹುದು.

ಬಡಗಿ ಸಮುದಾಯವು ಅಂದಿನ ಕಾಲದಲ್ಲಿ ರಾಜ ಮನ್ನಣೆ ಪಡೆದುಕೊಂಡಿತ್ತು. ಕರಕುಶಲ ಕರ್ಮಿಗಳಲ್ಲಿ ಬಡಿಗಿಯ ಪಾತ್ರ ಬಹುಮುಖ್ಯ ವಾಗಿದ್ದಿರಬೇಕು. ದೇವಸ್ಥಾನಗಳು, ನಾನಾ ವಿಧವಾದ ವಿಗ್ರಹಗಳು, ಮರಗಿಡದ ಬಳ್ಳಿ, ತೃಣಗಳ ಸೃಷ್ಟಿಯಾದ್ದರಿಂದ ಸಕಲ ಜೀವಾತ್ಮರೂ, ಸುರಕ್ಷಿತವಾಗಿರಲು ಮನೆ, ಮಠ, ನಿರ್ಮಾಣ, ವಸ್ತು, ಒಡವೆಗಳನ್ನು ಸಂರಕ್ಷಿಸಿಡಲು ಭದ್ರವಾದ ಕಪಾಟು, ಪೆಟ್ಟಿಗೆ ಮೊದಲಾದವುಗಳಲ್ಲದೆ ಮಾನವರ ಕಲ್ಯಾಣಕ್ಕಾಗಿ ದಾರುವಿಗ್ರಹಗಳ ನಿರ್ಮಾಣ ಮೊದಲಾದ ಸಂರಕ್ಷಣಾ ಕೆಲಸಗಳು ಯಜುರ್ವೇದ ಪಾರಾಯಣ ಇವು ಮಯ ಬ್ರಹ್ಮನೆಂದು ವಿಷ್ಣುವಿನ ಮಗನಾದ ಮಯ (ಬಡಗಿಯ)ನ ಕರ್ತವ್ಯವಾಗಿತ್ತು. ಜೊತೆಗೆ ಗ್ರಾಮೀಣ ಪ್ರದೇಶಲ್ಲಿ ಕೃಷಿ ಉಪಕರಣಗಳನ್ನು ಮತ್ತು ಯುದ್ಧೋಪಕರಣಗಳನ್ನು ಮೊದಲಾದ ಉಪಕರಣಗಳನ್ನು ತಯಾರಿಸುವ ಮತ್ತು ತಮ್ಮ ಉಪಕರಣಗಳನ್ನು ತಯಾರಿಸಿಕೊಳ್ಳುವ ಕಾರ್ಯ ಪಾಂಚಳರಲ್ಲಿ ಬಡಿಯರು ಪ್ರಮುಖ ಪಾತ್ರವಾಗಿದೆ.

ಕ್ರಿ.ಶ. ೪೪೬ರ ಗಂಗರಸ ಅವನೀತನಿಂದ ಕ್ರಿ.ಶ. ೯೦೪ ರ ಅದೇ ಗಂಗ ಅರಸ ಇಮ್ಮಡಿ ಎರಿಯಂಗನವರಿಗೆ ಸತತವಾಗಿ ೪೫೮ ವರ್ಷಗಳ ಅವಧಿಯವರೆಗೆ ರಚನೆಯಾದ ೧೨ ತಾಮ್ರಶಾಸನಗಳು, ನಡುವೆ ಒಂದು ಶಿಲಾಶಾಸನದಲ್ಲಿ ವಿಶ್ವಕರ್ಮ ಮತ್ತು ವಿಶ್ವಕರ್ಮಚಾರ್ಯ ಎಂಬುದು ವ್ಯಕ್ತಿನಾಮವಲ್ಲ, ಅದು ಒಂದು ಅಧಿಕಾರಯುತ ಅಧಿಕಾರದ ಪದನಾಮ ವಾಗಿರಬೇಕೆಂಬುದು ಡಾ. ಕುಮಾರಸ್ವಾಮಿಯವರ ಅಭಿಮತವನ್ನು ನೋಡಿದರೆ ಈ ಅಧಿಕಾರವನ್ನು ಸಹಜವಾಗಿಯೇ ಅಕ್ಕಸಾಲಿಕೆ, ಬಡಗಿತನ, ಕಂಚುಗಾರಿಕೆಯನ್ನು ಮಾಡುವ ವಿಶ್ವಕರ್ಮ ಮತೀಯರಿಂದ ನೇಮಕ ಮಾಡಲಾಗುತ್ತಿತ್ತು ಅಥವಾ ವಿಶ್ವಕರ್ಮ ಮತೀಯರ ಒಂದು ಮನೆತನವು ಅನುವಂಶಿಕವಾಗಿ ಈ ಒಂದು ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬರುತ್ತಿತ್ತು ಎಂಬುದು ಗೊತ್ತಾಗುತ್ತದೆ. ಏಕೆಂದರೆ ವಿಜಯನಗರದ ಅರಸರ ಅಧಿಪತ್ರದಲ್ಲಿ ಹೀಗೆಯೇ ಬಡಗಿ ಎಂಬ ಅರ್ಥದ ತ್ವಷ್ಟ ಎಂಬ ಪದನಾಮದ ವೀರಣ್ಣಾಚಾರ್ಯ ಎಂಬುವನ ಮನೆತನದಲ್ಲಿ ಅನುವಂಶಿಕವಾಗಿ ಈ ಕಾರ್ಯ ನಿರ್ವಹಿಸುತ್ತಿತ್ತು ಎಂಬುದುನ್ನು ಗಮನಿಸಬಹುದು.

ಗತಕಾಲದ ಬಡಗಿಗಳನ್ನು ಅರೆಕುಶಲಿ ಬಡಗಿ ಮತ್ತು ಕುಶಲ ಬಡಿಗಿ ಎಂದು ಎಸ್. ಗುರುರಾಜಚಾರ್ ರವರು ಪೂರ್ವೋಕ್ತದಲ್ಲಿ ಎರಡು ಭಾಗ ಮಾಡುತ್ತಾರೆ. ದಿನನಿತ್ಯದ ಸಾಮಾನ್ಯ ಜನರು ಉಪಯೋಗಿಸುವ ಪೀಠೋಪಕರಣಗಳು, ನೇಗಿಲು, ಎತ್ತಿನಗಾಡಿ ಮೊದಲಾದ ವ್ಯವಸಾಯೋಪಯೋಗಿ ವಸ್ತುಗಳು, ಸಾಮಾನ್ಯ ಮನೆ ಮುಟ್ಟುಗಳನ್ನು

ಮಾಡುವವರನ್ನು ಮೊದಲನೇಯ ಗುಂಪಿಗೂ, ಅರಸುಗಳ ಹಾಗೂ ಅಧಿಕಾರ ವರ್ಗದವರ ಅಭಿರುಚಿಗನುಗುಣವಾಗಿ ಸೂಕ್ಷ್ಮವಾದ ಕೆತ್ತನೆ ಕೆಲಸದ ಪರಿಕರಗಳನ್ನು ವಿಶೇಷವಾದ ಮರದ ದೇವಸ್ಥಾನಗಳನ್ನು ಹಾಗೂ ರಥಗಳನ್ನು ಮಾಡುವವರನ್ನು ಎರಡನೇ ಗುಂಪಿಗೆ ಸೇರಿಸಬಹುದು. ವ್ಯವಸಾಯದ ಉಪಕರಣಗಳನ್ನು ತಯಾರಿಸುವ ಬಡಿಗಿಗಳಿಗೆ ಗ್ರಾಮಸ್ಥರು ಅಥವಾ ಕೃಷಿಕರು ವರ್ಷಕ್ಕೆ ಇಂತಿಷ್ಟು ಎಂದು ಗೊತ್ತುಪಡಿಸಿ ಕೊಡುತ್ತಿದ್ದರು.

ಈ ರೀತಿಯಾದಂತ ಬಿನ್ನತೆ ಕಾಣುವುದು ಸಹಜವಾಗಿದೆ. ಏಕೆಂದರೆ ಹಳ್ಳಿಗಳಲ್ಲಿ ಹೆಚ್ಚಾಗಿ ಆರ್ಥಿಕ ಕಷ್ಟದಲ್ಲಿ ಬದುಕುವುದರಿಂದ ಉತ್ತಮ ಬೆಲೆ ಬಾಳುವ ಕಟ್ಟಿಗೆ ಮತ್ತು ಹೆಚ್ಚು ಬೆಲೆಯನ್ನು ಕೊಟ್ಟು ಮಾಡಿಸುವ ಸಾಮರ್ಥ್ಯ ಇರುವುದಿಲ್ಲ. ಇದ್ದಿದ್ದರಲ್ಲಿ ತೃಪ್ತಿ ಪಡುವ, ಹಾಸಿಗೆ ಇದ್ದಷ್ಟು ಕಾಲು ಚಾಚುವ ಗುಣದ ಹಿನ್ನಲೆಯಲ್ಲಿ ಅವರವರ ಸ್ಥಾನಕ್ಕನುಗುಣವಾಗಿ ಕೆಲಸವನ್ನು ಮಾಡುವ ಸಂದರ್ಭ ಇರುವುದರಿಂದ ಈ ರೀತಿ ಭಿನ್ನತೆ ಕಾಣುವುದು ಸಹಜವಾಗಿದೆ. ಆದರೆ ಎಲ್ಲಾ ರೀತಿಯ ಕೆಲಸವನ್ನು ನಿರ್ವಹಿಸುವ ಕೌಶಲ್ಯ ಬಡಗಿಯರು ಹೊಂದಿರುತ್ತಾರೆ ಎಂಬುದರಲ್ಲಿ ಸಂದೇಹ ಇಲ್ಲ. ನಾವು ತೀರ ಒಳ ಹೊಕ್ಕು ನೋಡಿದಾಗ ಅದರ ಭಿನ್ನತೆ ಸ್ವಲ್ಪ ಕಾಣುತ್ತದೆ. ಹೇಗೆಂದರೆ ಹಳ್ಳಿಗಳಲ್ಲಿ ಕೆಲವರು ವಸ್ತುನಿಷ್ಠ (ಶಿಷ್ಟ) ಕೆಲಸವನ್ನು ಮಾತ್ರ ಮಾಡುತ್ತಾರೆ. ಕೃಷಿ ಕೆಲಸದಲ್ಲಿ ತಲ್ಲೀನನಾಗಿರುವವರು ಭವ್ಯವಾದ ಮನೆಯ ಕೆಲಸವನ್ನು ಮಾಡಲು ಅಸಾಯಕರಾಗಿ ಕಾಣುತ್ತಾರೆ. ಅವರಿಗೆ ವಾಸ್ತವತೆಯ ಪ್ರಜ್ಞೆಯ ಜೊತೆ ಸೌಂದರ್ಯದಲ್ಲಿ ಹಿಮ್ಮುಖರಾಗಿ ಕಾಣುವ ಜನರೂ ಇದ್ದಾರೆ. ಆದರೆ ಕೃಷಿ ಉಪಕರಣ ಮತ್ತು ಮಾಳಿಗ ಮನೆಯಲ್ಲಿ ತೀರು, ತೊಲೆ, ಕಂಬವನ್ನು ಹೊಂದಿಸುವ ಸಾಮಾರ್ಥ್ಯಕ್ಕೇನು ಕಡಿಮೆ ಇರುವುದಿಲ್ಲ. ಬದುಕಿಗಾಗಿ ಕೆಲಸ ಮಾಡುವ, ಕೆಲಸಕ್ಕಾಗಿ ಬದುಕುವ ಜೀವಿಗಳು ಇಂದೂ ಕೂಡ ಜೀವಿಸುತ್ತಿದ್ದಾರೆ. ಕಾಯಕದಲ್ಲಿ ಸುಖ ಕಾಣುವ ಜೊತೆ ಬದುಕಿನಲ್ಲಿ ಸುಖ ಕಾಣುವ ಜನರಿಗೇನು ಕೊರತೆ ಇಲ್ಲ. ಅವರ ವೃತ್ತಿಯ ಅವಶ್ಯಕತೆಯನ್ನು ದೂರ ಸರಿಸುವ ಪ್ರಯತ್ನ ಮಾಡಲಾಗುವುದಿಲ್ಲ.

ದಂಡಾಧಿಪತಿಯೊಬ್ಬನು ಕ್ರಿ.ಶ. ೧೧೫೯ ರಲ್ಲಿ ವಿರೂಪಾಕ್ಷಪುರ ಎಂಬ ನಗರವನ್ನು ಕಟ್ಟಿ ಅದನ್ನು ಬ್ರಾಹ್ಮಣರಿಗೆ ಮರದ ಮಂಚಗಳನ್ನು ಬಡಿಗಿಗಳಿಂದ ಮಾಡಿಸಿ ದಾನ ಕೊಡುತ್ತಾನೆ ಎಂಬುದನ್ನು ನೋಡಿದರೆ ಅವರ ಕೌಶಲ್ಯ ಮತ್ತು ಅವಶ್ಯಕತೆಯ ಲಾಭ ಪಡೆಯುವುದನ್ನು ಕಾಣಬಹುದು. ಕ್ರಿ.ಶ. ೧೨೨೫ ರ ಒಂದು ಶಾಸನವು ಬಡಗಿ ಚಂಪೋಜ ಎನ್ನುವವನಿಗೆ ಅವನ ಸೇವೆಯನ್ನು ಪರಿಗಣಿಸಿ ಭೂಮಿಯನ್ನು ದಾನ ಮಾಡಿದ ವಿವರದ ಪ್ರಸ್ತಾಪವಿದೆ (ಎಪಿಗ್ರಫಿಯಾ ಕರ್ನಾಟಕ-ಚಿಕ್ಕಬಳ್ಳಾಪುರ ೩೧) ಎಂಬುದನ್ನು ನೋಡಿದರೆ ಬಡಗಿಗಳಿಗೆ, ಆಚಾರಿಗಳು ರಾಜಾಶ್ರಯದಲ್ಲಿ ವಾಸಮಾಡುತ್ತ, ರಾಜ ಮನ್ನಣೆ ಪಡೆದು ಅವನಿಂದ ದಾನ ಪಡೆದಿದ್ದಾರೆ ಎಂದರೆ ಅವನ ಸೇವೆ ಎಂತದ್ದಿರಬಹುದು. ಬಹುಶಃ ಅರಮನೆಗೆ ರಾಜನಿಗೆ ಸಂಬಂಧಿಸಿದ ಮರದ ಕೆಲಸ ಮಾಡಿರುವ ಉಲ್ಲೇಖ ಸಿಗುತ್ತದೆ.

ಶಿರ ತಾಲೂಕಿನ ಶಾಸನವು 'ಸುಧಾರಣ ಸಂಶ್ರಾವಣಶು ಗುರುವಾರ ತಾಳಗುಂದದ ಬಡಗಿ ಚೆನ್ನದ ಶಿರಿಶ........ಡಿ ಬಾಗಿಲು' ಎಂಬುದಾಗಿ ಹೇಳುತ್ತದೆ. ಈ ಶಾಸನವು ದೊಡ್ಡ ಚಿಕ್ಕನಹಳ್ಳಿ ಎಂಬ ಗ್ರಾಮದ ಊರಿನ ಹೊರಬಾಗಿಲಿನ ಮೇಲೆ ಇರುವುದರಿಂದ ಆ ಒಂದು ದಿಡ್ಡಿಯ ಬಾಗಿಲನ್ನು ಚೆನ್ನದಗಿರಿ ಎಂಬ ಬಡಗಿ ಮಾಡಿದನೆಂದು ತಿಳಿಯಬರುತ್ತದೆ. ಮತ್ತೊಂದು ಶಾಸನದ ಪ್ರಕಾರ ನಾಗಮಂಗಲ ತಾಲೂಕಿನ ದೇವರಹಳ್ಳಿಯಲ್ಲಿರುವ ತಪಸ್ವಿ ರಾಮಗುಡಿಯ ಮಹಾದ್ವಾರದ ಮರದ ಬಾಗಿಲನ್ನು ಅದೇ ಗ್ರಾಮಕ್ಕೆ ಸೇರಿದ ಚಿಕ್ಕಚಾರಿಯು ಸೇವಾರ್ಥ ಎಂದು ಮಾಡಿಕೊಟ್ಟಿದ್ದಾರೆ. (ಎ.ಕ.೫೧೧ ನೆಲಮಂಗಳ-೧೪೬) ಪಾಂಚಾಳರು ಊರಿನ ಧರ್ಮಕಾರ್ಯಕ್ಕೆ ಊರಿನ ದೈವಕ್ಕೆ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಗುಣಗಳು ನಮಗೆ ತಿಳಿದು ಬರುತ್ತದೆ. ಅವರೂ ಕೂಡ ದಾನ ಧರ್ಮದಲ್ಲಿ ಭಾಗಿಯಾಗುತ್ತಿದ್ದರು ಎಂಬ ಅಂಶ ಗಮನಕ್ಕೆ ಬರುತ್ತದೆ.

ಬಡಗಿಗಳು ಕುಶಲತೆಗೆ ಹೆಸರಾದವರು ಅವರು ಸಾಂಸ್ಕೃತಿಕ ಉಪಕರಣಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರು.

ಕ್ರಿ.ಶ. ೧೮೫೯ ರ ಇತ್ತೀಚಿನ ಪಾಂಡವಪುರ, ಕನ್ನಂಬಾಡಿ ಗ್ರಾಮದಲ್ಲಿರುವ 'ಮಹಾಲಕ್ಷ್ಮಿ' ಗುಡಿಗೆ ಸೇರಿದ ರಥವನ್ನು 'ಧರ್ಮಾಲಿಂಗಾಚಾರ' ರಚನೆ ಮಾಡಿದ್ದಾನೆ. ಶಾಸನವು 'ಧರ್ಮಲಿಂಗಾಚಾರ ನಿರ್ಮಿತ' ಎಂದು ಮಾತ್ರ ಹೇಳದೆ ಬೋಗಿಗೌಡನ ಹೆಂಡತಿ ಮಹಾಲಕ್ಷ್ಮೀ ಶ್ರೀ ಮಹಾಕಾಳಿ ಅಮ್ಮನವರ ಸೇವಾರ್ಥ ಎಂಬುದಾಗಿ ತಿಳಿದುಬರುತ್ತದೆ. (೧೪೬ ಎ.ಕ. VII ಪುಟ,ಸಂ-೨೪೧) ಕುಶಲಿಗಳೂ, ವಾಸ್ತುವಿಜ್ಞಾನ ತಜ್ಞರು ಆದ ಬಡಗಿಯರು ಅರಸರ ಅರಮನೆಗಳನ್ನು, ಅಧಿಕಾರಿಗಳ ಸೌಧಗಳನ್ನು, ಮರದ ದೇವಸ್ಥಾನಗಳನ್ನು ಕಟ್ಟುತ್ತಿದ್ದರು. ನಮ್ಮ ಗತಕಾಲದ ಬಡಿಗಗಳ ಕೃತಿಗಳು ಮರದ ರಚನೆ ಯಾದ್ದರಿಂದ ಅವು ಇಂದು ನಾಶವಾಗಿವೆ. ಇಂತಹ ಪ್ರಾಚೀನ ಮರದ ರಚನೆ ಬಗ್ಗೆಯಾಗಲಿ ಬಡಗಿಗಳ ವ್ಯಕ್ತಿಯ ವಿಚಾರಗಳ ಬಗ್ಗೆಯಾಗಲಿ ಶಿಲಾಶಾಸನಗಳಲ್ಲಿ ಹೆಚ್ಚಿನ ಮಾಹಿತಿ ಕೊಡುವುದಿಲ್ಲ ಹಾಗೆ ಕೃತಿ ಮತ್ತು ಕರ್ತೃವಿನ ಉಲ್ಲೇಖ ಎರಡು ಇಂದು ಅನುಲಬ್ಧವಾಗಿರುವುದರಿಂದ ಪ್ರಾಚೀನ ಬಡಿಗಗಳ ಜೀವನವನ್ನು ಪುನರ್ ರಚನೆ ಮಾಡುವುದು ತುಂಬಾ ಕಷ್ಟ ಸಾಧ್ಯವಾಗಿದೆ. ಕ್ರಿ.ಶ. ೧೪೩೧ ರ ಮಾಲೂರು ತಾಲೂಕು ತೇಕಲು ಗ್ರಾಮದ ವರದರಾಜ ಸ್ವಾಮಿ ದೇವಸ್ಥಾನದಲ್ಲಿ ಅದೇ ಗ್ರಾಮದ ವಾಸಿಯಾಗಿದ್ದ ದೇವೋಜ ಎಂಬ ಬಡಗಿಯು ಗುಡಿಗೆ ಸಂಬಂಧಿಸಿದ ಮರಗೆಲಸವನ್ನು ಮಾಡಿಕೊಡುತ್ತಾನೆ. ಇವನ ತಂದೆ ದೇವೋಜಗೆ ಈ ಕೆಲಸಕ್ಕಾಗಿ ಈತನಿಗೆ ಗದ್ದೆಯನ್ನು ಹೊಲವನ್ನು ಕೊಡಲಾಗಿದೆ ಎಂದು (ಎ.ಕ. XVII ಮಾಲೂರು ೩) ತಿಳಿದುಬರುತ್ತದೆ.

ಕ್ರಿ.ಶ. ೧೪೮೦ ಅಥವಾ ೧೫೧೫ ರಲ್ಲಿ ಬಡಿಗಿ ಲಿಂಗೋಜ ನು ಜಗಲೂರು ತಾಲೂಕಿನ ನಿಬಗೂರಿನಲ್ಲಿ ಆಂಜನೇಯ ಗುಡಿಯನ್ನು ಕಟ್ಟಿದ್ದಾನೆ. ಇದಕ್ಕಾಗಿ ಗೌಡನು ಇವನಿಗೆ ಅರುವತ್ತು ಒಕ್ಕಲು ಮಾನ್ಯವನ್ನು ಕೊಟ್ಟಿದ್ದಾನೆ. ಇದು ಮರದ ದೇವಸ್ಥಾನ ಇರಬೇಕೆಂದು ಡಾ. ಕುಮಾರಸ್ವಾಮಿ ಯವರು (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರ ಪು-೨೮೧) ಅಭಿಪ್ರಾಯ ಪಡುತ್ತಾರೆ. ಮುಂದುವರೆದು ಗೌರಯ್ಯ ಎನ್ನುವವನು ದೇವಸ್ಥಾನವನ್ನು ಕಟ್ಟಿಸಿದ ಮತ್ತೊಬ್ಬ ಬಡಗಿ. ಇವನ ಕಾಲ ೧೫೧೧, ಅವನ ಊರು ಸೊಂಡೆಕೆರೆ, ಇವನ ತಂದೆ ಪರವೋಜ ಎಂದು ಚಿತ್ರದುರ್ಗ ತಾಲೂಕು ಜಂಪಾಳನಾಯ್ಕನ ಕೋಟೆಯ ಹತ್ತಿರ ಹನುಮಂತ ದೇವರ ಗುಡಿ ಇವನ ಕೃತಿ ಎಂಬುದನ್ನು ನೋಡಿದರೆ ದೇವಸ್ಥಾನವನ್ನು ನಿರ್ಮಾಣ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದನ್ನು ಸ್ಪಷ್ಟಪಡಿಸಬಹುದು. (ಎ.ಕ. ಚಿತ್ರದುರ್ಗ-೪೧) ಕ್ರಿ.ಶ. ೧೯೬೨ ರ 'ಶಿವಡಿಯೋಜ' ಎಂಬ ಬಡಗಿಯು ಅಪರೂಪದ ಉಲ್ಲೇಖ. ಏಕೆಂದರೆ ಇವರು ಮಾಳಿಗೆಯ ಮನೆಯನ್ನು ರಚನೆ ಮಾಡುತ್ತಿದ್ದ ಶಾಸನವು ಇದನ್ನು ಅರಮನೆ ಎಂದು ಹೇಳದಿದ್ದರೂ ಇದನ್ನು ಕಟ್ಟಿಸಿದವನು ಕಳನಿಯಾರಪ್ರಭು ಎಂದು ಕರೆದುಕೊಂಡಿರುವುದರಿಂದ ರಾಜಾಧಿಕಾರಿಯಾದ ಇವನು ಕಟ್ಟಿಸಿದ್ದು ದೊಡ್ಡ ಸೌಧವೋ, ಅರಮನೆಯೋ ಆಗಿದ್ದರಬೇಕು. ಈತನು ಅನೇಕ ಬಡಗಿಯರ ಮೇಲೆ ಮೇಲುಸ್ತುವಾರಿಯನ್ನು ಮಾಡಿದ ಪ್ರಧಾನ ಬಡಗಿಯಾಗಿದ್ದಿರಬೇಕೆಂದು ತಿಳಿದು ಬರುತ್ತದೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು -ಡಾ. ಕುಮಾರಸ್ವಾಮಿ ಪು-೭೫) ಈ ಒಂದು ಶಾಸನದಿಂದಲೇ ಮಾಳಿಗೆ ಮನೆ ನಿರ್ಮಿಸುತ್ತಿದ್ದರು ಎಂಬ ಅಭಿಪ್ರಾಯವು ಅಷ್ಟು ಸಮಂಜಸವಲ್ಲವೆಂದು ಅನ್ನಿಸುತ್ತದೆ. ಏಕೆಂದರೆ ಸಾಮಾನ್ಯವಾಗಿ ಕರ್ನಾಟಕದ ಯಾವುದೇ ಭಾಗವನ್ನು ನೋಡಿದರೂ ಗ್ರಾಮೀಣ ಪ್ರದೇಶದಲ್ಲಿ (ಮಲೆನಾಡನ್ನು ಹೊರು ಪಡಿಸಿ) ಮಾಳಿಗೆ ಮನೆಯನ್ನು ಕಾಣುತ್ತವೆ. ಬಹುಹಿಂದಿನಿಂದಲೂ ಈ ರೀತಿಯಾದಂತ ಮನೆಗಳನ್ನು ಕಟ್ಟಿ ತೊಲಿಕಂಬ, ತೀರು ಮಾಳಿಗೆ ಮನೆಯನ್ನು ನಿರ್ಮಿಸುವಲ್ಲಿ ನಿಪುಣರಾಗಿರುವುದನ್ನು ತಿಳಿಯಬೇಕೆಂದರೆ ಅದಕ್ಕೆ ಹಳ್ಳಿಗಳ ಮಾಳಿಗೆ ಮನೆಗಳೇ ಸಾಕ್ಷಿ. ಅವನ್ನು ಯಾರು ಕಟ್ಟಿಸಿದರು? ಯಾರು ಕಟ್ಟಿದರು? ಎಂಬ ಪ್ರಶ್ನೆ ಉದ್ಭವವಾಗುವುದಿಲ್ಲ ಏಕೆಂದರೆ ಆ ಊರಿನ ಒಬ್ಬ ಬಡಿಗಿ ಈ ಕೆಲಸ ಮಾಡಿರಲೇಬೇಕು. ಇಂತಹ ಮನೆ ನಿರ್ಮಾಣಕ್ಕೆ ಹೆಚ್ಚು ಬುದ್ಧಿಶಕ್ತಿಬೇಕು ನಾನು ಬಡಿಗಿಯಾದರೂ ಆ ವಿಷಯದಲ್ಲಿ ಸಂಶೋಧನೆ ಕೈಗೊಂಡರೂ ಮಾಳಿಗೆ ಮನೆಗೆ ಮಡಿಗಿ ಮಾಡಲು ಸಾಧ್ಯವಾಗುವುದಿಲ್ಲ. ಅನುಭವದಲ್ಲಿ ಅಮೃತವಿದೆ ಎಂಬ ಮಾತನ್ನು ಗಮನಿಸುವುದಾದರೆ ಆ ಕೆಲಸದಲ್ಲಿ ಆತ ಹೆಚ್ಚು ಹೆಚ್ಚು ಪರಿಣತಿಯನ್ನು ಪಡೆದಿರಲೇಬೇಕು. ಅದು ಅನುವಂಶೀಯವಾಗಿ ಅನುಭವದಿಂದ ಬಂದಿರಲೇಬೇಕು.

ಡಾ. ಎಸ್. ಗುರುರಾಜಾಚಾರ್ಯ ಪೂರ್ವೋಕ್ತದಲ್ಲಿ ಕರ್ನಾಟಕವು (ಬಾದಾಮಿ ಚಾಲುಕ್ಯರಸ್ಸು) ಹಿಂದಿನ ಕಾಲದಿಂದಲೂ ಸಮುದ್ರಯಾನದಲ್ಲಿ ತೊಡಗಿತ್ತೆಂದೂ, ಎರಡನೇ ಪುಲಿಕೇಶಿಯು ಒಂದು ನೂರು ಹಡಗುಗಳನ್ನು ಪುರಿಯ ಮೇಲೆ ತಾನು ಮಾಡಿದ ಯುದ್ಧದಲ್ಲಿ ಉಪಯೋಗಿಸಿದನೆಂದೂ, ಯಾದವ ಮಹಾರಾಜನೊಬ್ಬನು ಕೂಡ ತನ್ನದೇ ಆದ ನೌಕ ಪಡೆಯನ್ನು ಹೊಂದಿದ್ದನು ಎಂದು ಹೇಳುತ್ತಾ ಕರ್ನಾಟಕದಲ್ಲಿ ಹಡಗು ಕಟ್ಟುವ ಕೈಗಾರಿಕೆಯು ಕನ್ನಡಿಗರಿಗೆ ಚನ್ನಾಗಿಯೇ ತಿಳಿದಿತ್ತೆಂದು ಹೇಳುತ್ತಾರೆ. ಮುಂದುವರೆದು ಹಡಗು ಕಟ್ಟುವಲ್ಲಿ ಮರವನ್ನು ಉಪಯೋಗಿಸುತ್ತಿದ್ದುದಾಗಿ ಉಲ್ಲೇಖಿಸುತ್ತಾರೆ. ಅಂತೆಯೇ ನಾವು ಇಲ್ಲಿ ಕೂಡ ನಿಷ್ಣಾತರಾದ ಬಡಗಿಗಳು ದುಡಿದಿರಬೇಕೆಂದು ಊಹಿಸಬಹುದು. ಆದರೆ ಹಡಗು ಕಟ್ಟಿದ ಯಾವ ಬಡಗಿಯೂ ಶಾಸನದಲ್ಲಿ ಉಪಲಬ್ಧವಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ 'ಬೊಬ್ಬರ್ಯ' ಎಂಬ ಪಾಡ್ದಾನದಲ್ಲಿ ಹಡಗು ಕಟ್ಟಲಿಕ್ಕೆ ಕರೆಸಿದರು ಎಂಬ ವಿಷಯವಿದೆ. ಆದ್ದರಿಂದ ಕನ್ನಡದ ಬಡಗಿಗಳು ಹಡಗುಗಳನ್ನು ಕಟ್ಟುವಲ್ಲಿ ದುಡಿಯುತ್ತಿದ್ದರು ಎಂಬ ಅಂಶವು ತಿಳಿದು ಬರುತ್ತದೆ.

ಹೀಗೆ ಈ ವೃತ್ತಿಕಾರರ ಬಗ್ಗೆ ಇವುಗಳನ್ನು ವಿವರವಾಗಿ ನೋಡಿದರೆ ಅಂದಿನಿಂದ ಇಂದಿನವರೆಗೂ ಬಡಗಿಗಳ ಮಹತ್ವ ಅವರು ನಿರ್ವಹಿಸುತ್ತಿದ್ದ ಕಾರ್ಯವನ್ನು ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಪಾಂಚಾಳರ ಗುರು ವಿಶ್ವಕರ್ಮ. ವಿಶ್ವಕರ್ಮನು ಜಗತ್ತಿನ ಸೃಷ್ಟಿಕರ್ತ ಎಂದು ಈ ಸಮುದಾಯದಲ್ಲಿ ನಂಬಿಕೆ ಇದೆ. ಇವರೂ ಕೂಡ ರಾಜಮನ್ನಣೆ ಪಡೆದು ಭೂಮಿಯನ್ನು ದಾನವಾಗಿ ಪಡೆದು, ಜೀವನೋಪಾಯ ಮಾಡುತ್ತಿದ್ದರು ಎಂಬ ಅಂಶಗಳನ್ನು ತಿಳಿಯಬಹುದಾಗಿದೆ. ಕಾಷ್ಠಶಿಲ್ಪಿಗಳು ನಿರ್ವಹಿಸುತ್ತಿದ್ದ ಕಾಯಕವನ್ನು ನಾವು ದಾಖಲೆಗಳ ಮೂಲಕ, ಶಾಸನ, ವಸ್ತುಗಳ ಕುರುಹು ಜೊತೆಗೆ ಬಹುಮುಖ್ಯವಾಗಿ ಸಾಹಿತ್ಯದಲ್ಲಿ ಕೂಡ ಉಲ್ಲೇಖಿಸಿರುವ ದಾಖಲೆಯನ್ನು ಕಾಣಬಹುದಾಗಿದೆ. ವ್ಯವಸಾಯ, ಗೃಹೋಪಕರಣ, ಸಾಂಸ್ಕೃತಿಕ ಉಪಕರಣಗಳನ್ನು ಜೊತೆಗೆ ದೇಶೀಯ ತಂತ್ರಜ್ಞಾನದಂತಹ ಯುದ್ಧೋಪಕರಣಗಳನ್ನು ತಯಾರಿಸುತ್ತಾ ಅವಶ್ಯಕತೆಗೆ ಅನುಗುಣವಾಗಿ ಇತರ ಸಮುದಾಯಗಳು ಉಪಯೋಗಿಸಿಕೊಳ್ಳುತ್ತಿದ್ದರು ಎಂಬುದನ್ನು ಸಾಹಿತ್ಯ ಗ್ರಂಥಗಳ ಮೂಲಕವೂ ಕಂಡು ಬರುತ್ತವೆ.

ಕುಮಾರರಾಮನ ಚರಿತೆಯಲ್ಲಿ ಆಯುಧಗಳನ್ನು ಬಡಗಿಗಳು ತಯಾರಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ. 'ಬಲಿವ', 'ಪಟಲಬೆಣೆ', 'ಡೆಂಕಣಿಗೈ', 'ಪಂದಿದತೆ', 'ತಿರುಗಣೆ', 'ಭೀಮಗದೆ', ಮೊದಲಾದ ಮರದ ಆಯುಧಗಳನ್ನು ಬಡಗಿಗಳು ಕೆತ್ತುತ್ತಿದ್ದರು ಎಂದು ತಿಳಿಸುತ್ತದೆ. 'ಕೆತ್ತುವಾ ಬಡಿಗಿಗಳಿಂದಾ ದುರ್ಗಸೆಲೆ ಮರೆದುದು' ಎಂಬ ಉಕ್ತಿಯು ಬಹುಮಟ್ಟಿಗೆ ಯುದ್ಧದ ಆಯುಧಗಳನ್ನು ಶತೃಗಳಿಂದ ರಕ್ಷಿತವಾದ, ರಹಸ್ಯವಾದ ದುರ್ಗದ ಒಳಗೆ ಇದ್ದುಕೊಂಡು ನಿರ್ಮಾಣ ಮಾಡುತ್ತಿದ್ದರು ಎಂಬ ಅಂಶವನ್ನು ಇದರಲ್ಲಿ ಕಾಣಬಹುದು. ೧೭ನೆಯ ಶತಮಾನದ ಕರಸ್ಥಲದ ನಾಗಲಿಂಗ ಚರಿತೆ ಎಂಬ ಕಾವ್ಯದಲ್ಲಿ ಈ ಕುಶಲ ಕೆಲಸಗಾರರು ಮನು, ಮಯ, ತ್ವಷ್ಟ, ಶಿಲ್ಪಿ, ಮತ್ತು ವಿಶ್ವಜ್ಞ ಎಂಬ ಐದು ಗೋತ್ರಗಳನ್ನೇ ಉಳ್ಳವರಾಗಿದ್ದರು ಎಂದು ಹೇಳಲಾಗಿದೆ (ಗ್ರಾಮೀಣ ವೃತ್ತಿಗಳು ಗ್ರಾಮ ಸಂಸ್ಕೃತಿ ಮಾಲೆ-೧ (ಸಂ) ದೇವೇಂದ್ರ ಕುಮಾರ ಹಕಾರೆ) ಇದರಲ್ಲಿ ಬಡಗಿ ಸೇರಿರುವುದನ್ನು ಕಾಣಬಹುದು.

'ಮರವೆಸನಿಟ್ಟಗಿ ಕಲಾಕರಣೆಯ ಲೊಪ್ಪದೊಳ್ ಪ್ರಾಸಾದ್ಯೋತ್ತರ ವಿದ್ಯಾಸಳನಿದಂ ಕಂಡರಸಿದಂ ಮರವೆಸದೊಳ್ ಕಲ್ಲೆಸದೊಳ್ ವರ ಪತ್ರ ಚೇದಮ್ಮರಗಳೊಳಂ ದೊರೆ ವಿಶ್ವಕರ್ಮನುಳಿದು ಶ್ರೀ ಸೂತ್ರಧಾರಿ ಬಮ್ಮ" (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್) ಈ ರೀತಿಯಾಗಿ ಮರದ ಕೆಲಸದಲ್ಲಿ ಪರಿಣಿತ ಹೊಂದಿದ ಪಾಂಚಾಳರು ಅವರು ಅಧಿದೈವ ವಿಶ್ವಕರ್ಮನು ಅವರನ್ನು ಸೂತ್ರಧಾರಿ ಎಂತಲೂ ಕರೆಯುವುದಕ್ಕೆ ಇದೇ ಸಾಕ್ಷಿಯಾಗಿದೆ. ಮಹಾಭಾರತದಲ್ಲಿ ನೇಗಿಲನ್ನು ಬಲಭೀಮನ ಆಯುಧವನ್ನಾಗಿಸಿಕೊಂಡಿರುವುದು ಉಲ್ಲೇಖಿತವಾಗಿದೆ. ಇದರಿಂದ ಆ ಕಾಲದಲ್ಲಿ ನೇಗಿಲಿನ ಬಳಕೆ ಇತ್ತು ಎಂಬುದು ಜೊತೆಗೆ ಅದನ್ನು ತಯಾರಿಸುವ ಒಬ್ಬ ವ್ಯಕ್ತಿ ಇದ್ದಿರಬೇಕು ಅವರೇ ಬಡಿಗಗಳಾಗಿರಲೂಬಹುದು. ಅದನ್ನು ಸೃಷ್ಟಿಸುವ ಪರಿಕಲ್ಪನೆ ಮತ್ತು ಬಳಸುವ ವಿಧಾನವೂ ಬಹಳಷ್ಟು ವರ್ಷಗಳ ಕಾಲಗಳ ಹಿಂದೆ ತಿಳಿದಿತ್ತು ಎಂಬುದು ಗೊತ್ತಾಗುತ್ತದೆ.

ಕೃಷಿಗೆ ನೇಗಿಲನ್ನು ಬಳಸುವುದಕ್ಕಿಂತ ಮೊದಲು ಮೊನಚುಕಲ್ಲು, ಕಟ್ಟಿಗೆಗಳಿಂದ ಮಣ್ಣನ್ನು ಅಗೆದು ಬಿತ್ತಲಾಗುತ್ತಿತ್ತು. ಇದರಿಂದ ನೆಲದ ಮೇಲಿನ ಪದರುಮಾತ್ರ ತಿರುವಿ ಹಾಕಲ್ಪಡುತ್ತಿತ್ತು. ಕಾಲ ಬದಲಾದಂತೆ ಮಾನವನ ಅನಾಗರೀಕತೆಯಿಂದ ನಾಗರೀಕತೆಗೆ ಕಾಲಿಟ್ಟನು. ಮುಂದೆ ಮರದಿಂದ ತಯಾರಾದ ನೇಗಿಲನ್ನು ಕೃಷಿಯಲ್ಲಿ ಅಳವಡಿಸಲಾಯಿತು. ಕಬ್ಬಿಣದ ನೇಗಿಲು ಮೊಟ್ಟಮೊದಲಿಗೆ ಕ್ರಿ.ಶ. ಪೂ ೪೦೦ ರಲ್ಲಿ ಬೆಳಕಿಗೆ ಬಂದಿತೆಂದು (ಕೃಷಿ ಬೆಳವಣಿಗೆ-ಡಿ. ವೆಂಕಟರಾವ್ ಪುಟ-೩೮) ತಿಳಿದು ಬರುತ್ತದೆ. ಅಂದರೆ ಅದಕ್ಕಿಂತ ಪೂರ್ವದಲ್ಲಿ ಮರದ ನೇಗಿಲುಗಳು ಅಥವಾ ನೇಗಿಲಿನ ಪರಿಕಲ್ಪನೆ ತಿಳಿದಿತ್ತು ಎಂಬುದು ಸತ್ಯವಾಗಿರುತ್ತದೆ. ಕ್ರಮೇಣ ಕೃಷಿ ಇತಿಹಾಸದಲ್ಲೇ ದೊಡ್ಡ ಕ್ರಾಂತಿಯನ್ನೇ ಎಬ್ಬಿಸಿತು. ಬೇಸಾಯ ಮಾಡಬೇಕೆಂಬ ಮಾನವನ ಆಸೆಯೊಂದಿಗೆ ಕೃಷಿ ಉಪಕರಣಗಳು ಹೆಚ್ಚು ಹೆಚ್ಚಾಗಿ ಮಾನವನ ನಿಯಂತ್ರಣಕ್ಕೊಳಗಾದವು. ಕೃಷಿ ಉಪಕರಣಗಳ ಜನನದೊಂದಿಗೆ ಅದನ್ನು ತಯಾರಿಸುವ ಒಂದು ಸಮುದಾಯ ಇದ್ದಿರಲೇಬೇಕು, ಆ ತಯಾರಿಸುವವರೇ ಬಡಗಿಗಳಾಗಿರಲಿಕ್ಕೆ ಸಾಧ್ಯವಿದೆ.

ರಾಮಾಯಣದಲ್ಲಿ ವಾಲ್ಮೀಕಿ ಕವಿಯು ರಥದ ಕುರುಹನ್ನು ಕೊಟ್ಟಿದ್ದಾರೆ. ರಾಜ ಮಹಾರಾಜರು ಪ್ರಯಾಣ ಮಾಡಲು ಮತ್ತು ಯುದ್ಧದ ಸಂದರ್ಭದಲ್ಲಿ ಕಂಡು ಬರುವ ರಥಗಳನ್ನು ನಾವು ಕಾಣಬಹುದು. ಮಹಾಭಾರತದಲ್ಲಿಯೂ ಕೂಡ ಪಾಂಡವರು ಮತ್ತು ಕೌರವರು ರಥಗಳನ್ನು ಬಳಸುತ್ತಿದ್ದರು. ಅರ್ಜುನನ ಸಾರಥಿ ಕೃಷ್ಣ ರಥದ ಸಾರಥಿಯಾಗಿ ೧೮ ದಿನಗಳ ಕಾಲ ಯುದ್ಧರಂಗದಲ್ಲಿ ಕೌರವರ ದಮನಕ್ಕೆ ಗೀತೆಯನ್ನು ಉಪದೇಶ ಮಾಡುವುದು ಈ ರಥದಲ್ಲಿಯೇ. ಇವುಗಳಿಂದ ತಿಳಿಯುವುದೆನಂದರೆ ರಥಗಳು ಚಲಾವಣೆಯಲ್ಲಿದ್ದವು ಜೊತೆಗೆ ಅವುಗಳನ್ನು ತಯಾರಿಸುವ ಕರಕುಶಲಗಾರರು (ಬಡಿಗಿ, ಶಿಲ್ಪಿ) ಗಳು ಇದ್ದಿರಲೆಬೇಕು. ಎನ್ನುವ ನಿಲುವಿಗೆ ಬರಬಹುದು. ವೇದಕಾಲದ ಆರ್ಯರಲ್ಲಿ 'ರಥ' ಎಂಬ ವಾಹನವಿತ್ತೆಂದು ಖಚಿತವಿದೆ. ಅದನ್ನು ತಯಾರಿಸುವರು ತಷ್ಟ ಎಂದು ಕರೆಯುತ್ತಾರೆ. ಅದು ಕುದುರೆಯಿಂದ ಎಳೆಯಲ್ಪಡುವ ಎತ್ತಿನಗಾಡಿ ರೂಪದಲ್ಲಿರಬಹುದು ಎಂಬ ಅಂಶವನ್ನು ಊಹಿಸಲಿಕ್ಕೆ ಸಾದ್ಯವಿದೆ.

"ಇನ್ದ್ರೋ ಹರಿಯುಜೆ ಅಶ್ವಿನಾರಥ ಬೃಹಸ್ಪತಿರ್ವಿ ಸ್ವರೂಪಾಮು ಪಾಜತ
ಋಭುರ್ವಿಬ್ವಾವಾಜೋ ದೇವಾಂ ಅಗಚ್ಛಸ್ವಪಸೋಯಜ್ಞಯಂಭಾಗ ಮೈತನ"

(ಋಗ್ವೇದ ೧.೧೬೧ :೬)

ಇಲ್ಲಿ 'ಅಶ್ವಿನಾರಥ' ಎಂಬ ಉಲ್ಲೇಖವನ್ನು ನೋಡಿದರೆ ಆಗಲೇ ಈ ಕಲ್ಪನೆಯನ್ನು ತಿಳಿದರಬೇಕೆಂಬುದು ಗೊತ್ತಾಗುತ್ತದೆ. ಈ ಮಂತ್ರವು ಇಂದ್ರನಿಗೆ ಹರಿ ಎಂಬ ಅಶ್ವಗಳನ್ನೇ ಅಶ್ವಿನಿ ದೇವತೆಗಳಿಗೆ ರಥವನ್ನು ಬೃಹಸ್ಪತಿಗೆ ವಿಶ್ವರೂಪವೆಂಬ ಕಾಮದೇವನನ್ನು ಇವರು ಸೃಷ್ಟಿಸಿ ನೀಡಿದ್ದನ್ನು ಅವರು ಮೆಚ್ಚಿ ಸ್ವೀಕರಿಸಿದರು. ಅಮೃತತ್ವವನ್ನು ಹೊಂದಿದ ಋಭು, ವಿಭಾ, ವಾಜ, ಸೋದರತ್ರಿಯರು ದೇವಗಣದ ಸಮೀಪ ಹೋಗಿ ಯಜ್ಞದ ಭಾಗಗಳನ್ನು ಗ್ರಹಸಿದ್ದರು ಎಂದು ತಿಳಿಯುತ್ತದೆ.

ಹಿಂದೂ ಪೂಜಾ ಪದ್ಧತಿಯಲ್ಲಿ ಪ್ರದಕ್ಷಣೆಗೆ ಮಹತ್ವವಿದೆ. ಭಕ್ತರು ದೆವರಿಗೆ ಪ್ರದಕ್ಷಿಣೆ ಮಾಡಿದರೆ, ರಥದಲ್ಲಿ ಕುಳಿತ ದೇವರು ಊರನ್ನೇ ಪ್ರದಕ್ಷಣೆ ಮಾಡುತ್ತದೆ. ಅಲಂಕಾರವಾಗಿ ತೇರು ಬೀದಿಗಳಿದಾಗ ದೇವಾಲಯವೇ ನಡೆದಂತಾಗುತ್ತದೆ. ಇದರಿಂದಾಗಿ ರಥವನ್ನು ಚಲಿಸುವ ದೆವಾಲಯ ಎಂದು ಕರೆಯುತ್ತಾರೆ. ಯಾವುದೇ ದೇವಾಲಯದ ರಥ ಕ್ರಿ.ಶ. ೧೭, ೧೮ ನೇ ಶತಮಾನದ ಹಿಂದೆ ಹೋಗುವುದಿಲ್ಲವೆಂದು 'ಜಾರ್ಜ್ ಮಿಷನ್' ರವರು ತಿಳಿಸುತ್ತಾರೆ. ಕರ್ನಾಟಕದಲ್ಲಿ ತೇರುಗಳ ನಿರ್ಮಾಣವನ್ನು ವಿಜಯನಗರೋತ್ತರ ಕಾಲದಿಂದ ಗುರುತಿಸಲಾಗುತ್ತದೆ. ಆದರೆ ಹಂಪೆಯ ವಿಠಲ ದೇವಾಲಯದಲ್ಲಿರುವ ಕಲ್ಲಿನ ರಥವನ್ನು ಗಮನಿಸಿದಾಗ ರಥಗಳ ನಿರ್ಮಾಣವನ್ನು ವಿಜಯನಗರ ಪೂರ್ವಕಾಲದಿಂದಲೂ ಗುರುತಿಸಬಹುದು. ರಥ ದುರಸ್ತಿಯಾದರೆ ಹಿಂದಿನ ರಥದ ಶೈಲಿಯನ್ನೇ ಸಂರಕ್ಷಿಸಿಕೊಂಡು ಬರಲಾಗಿದೆ. ತೇರುಗಳನ್ನು ತೇರುಗಡ್ಡಿ, ಗಡ್ಡಿತೇರು ಎಂದು ರಚನೆಯ ಶೈಲಿಯ ಮೇಲೆ ರಥ ನಿರ್ಮಾಣವು

ಮರದ ಕಟ್ಟೆಯಂತೆ ಅಥವಾ ದಪ್ಪವಾಗಿ ಮತ್ತು ದುಂಡಾಗಿದ್ದುದನ್ನು ಗಡ್ಡಿಮರದ ತೇರು ಎಂದು ಕರೆಯುತ್ತಾರೆ. ಬಹುಶಃ ರಥಗಳ ಆಕೃತಿ ಸ್ಥಳೀಯರಿಗೆ ಮರದ ಗಡ್ಡೆಯಂತೆ ಕಂಡುಬಂದಿರುವುದರಿಂದ ಗಡ್ಡಿತೇರು ಎಂದು ಕರೆದಿರುವ ಸಾಧ್ಯತೆಯೂ ಇದೆ.

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಸೋಗಿಯಲ್ಲಿ ೧೮೧೬ ರಲ್ಲಿ ಗೋನಾಳ್ ಮಾನಪ್ಪ ಎಂಬುವರು ವೀರಭದ್ರೇಶ್ವರ ತೇರನ್ನು ತಯಾರಿಸಿದ್ದಾರೆ. ಇದನ್ನು ಗ್ರಾಮದ ದೈವಸ್ಥರು ಕೂಡಿ ಮಾಡಿಸಿದಂತಹ ತೇಗದ ಕಟ್ಟಿಗೆಯಿಂದ ಮಾಡಿಸಲಾಗಿದೆ. ಇಂದಿಗೂ ಮುಕ್ಕಾಗದೇ ಚಿತ್ರಕಲೆಗೆ ಸಾಟಿಯೇ ಇಲ್ಲ ಎಂಬಂತಿದೆ. ಇದಕ್ಕೆ ಬ್ರೇಕ್, ಸ್ಟೇರಿಂಗ್ ರೀತಿಯಲ್ಲಿ ಆವಾಗಲೇ ಮಾಡಿದ ಬುದ್ಧಿವಂತಿಕೆ ಈ ಬಡಗಿಯರಿಗೆ ಸಲ್ಲುತ್ತದೆ. ಅಷ್ಟು ಕೆಲಸದಲ್ಲಿ ನೈಪುಣ್ಯತೆಯನ್ನು, ಕೌಶಲ್ಯವನ್ನು ಹೊಂದಿದ್ದರು ಎಂಬುದು ತಿಳಿಯುತ್ತದೆ. ಇನ್ನು ಮುಂದುವರೆದು ದೇವಾಲಯಗಳಲ್ಲಿ ಕಂಡುಬರುವ ಇತರ ಮುಖ್ಯ ಮರದ ರಚನೆಗಳೆಂದರೆ ಪಲ್ಲಕ್ಕಿ, ಮಂಟಪಗಳು, ಛತ್ರಿ, ಚಾಮರಗಳು, ನಂದಿಕೋಲುಗಳ ಬಳಕೆಯನ್ನು ಹಂಪೆಯ ವಿರೂಪಾಕ್ಷ ದೇವಾಲಯದ ಮುಖ ಮಂಟಪದ ಚಾವಣಿಯಲ್ಲಿ ರಚಿಸಿರುವ ಭಿತ್ತಿ ಚಿತ್ರಗಳಲ್ಲಿ ಕಾಣಬಹುದು. ಈ ಚಿತ್ರದಲ್ಲಿ ಮೆರವಣಿಗೆ ಯೊಂದಿಗೆ ಸಂದರ್ಭದಲ್ಲಿ ಯತಿಯೊಬ್ಬರು ಪಲ್ಲಕ್ಕಿಯಲ್ಲಿ ಕುಳಿತಿದ್ದು ಅದನ್ನು ನಾಲ್ವರು ಹೊತ್ತು ಸಾಗಿಸುವ ಚಿತ್ರಗಳು ಕಂಡುಬರುತ್ತವೆ. ಹೀಗೆ ಸಾಂಸ್ಕೃತಿಕ ಉಪಕರಣಗಳ ತಯಾರಿಕೆಯಲ್ಲಿ ಇವರು ಪ್ರವೀಣರಾಗಿದ್ದರು ಎಂಬುದನ್ನು ಗಮನಿಸಬಹುದು. ಇವುಗಳೆಲ್ಲವೂ ದಾಖಲೆಯಲ್ಲಿ, ಶಿಲ್ಪಕಲೆಯಲ್ಲಿ ಕಂಡುಬರುವ ದೃಶ್ಯಗಳು ನಮಗೆ ಇತಿಹಾಸದ ಕುರುಹಗಳನ್ನು ನೀಡಬಹುದೇ ಹೊರತು ಜನ ಸಾಮಾನ್ಯರು ಬಳಸುವ ಉಪಕರಣಗಳ ಉಲ್ಲೇಖಗಳು ಕಂಡುಬರುವುದಿಲ್ಲ. ವ್ಯವಸ್ಥೆ ಹಾಗಿರುವಾಗ ನಿರ್ಲಕ್ಷಿತ ಉಪಕರಣಗಳನ್ನು ಜನರು ಬಳಕೆಯಲ್ಲಿ ಮಾಡುವ ವೃತ್ತಿಯಲ್ಲಿ ಕಾಣಬಹುದೇ ಹೊರೆತು ದಾಖಲೆಗಳಲ್ಲಿ ಅಲ್ಲ.

ಕಟ್ಟಿಗೆ ಕೆಲಸದಲ್ಲಿ ಕಟ್ಟಿಗೆಯ ವಸ್ತುಗಳನ್ನು ತಯಾರಿಸುವುದು ಒಂದು ಕ್ರಿಯೆ ಎಂದು ತಿಳಿದರೆ ಆ ಕ್ರಿಯೆಯು ಪೂರ್ಣತೆಗಾಗಿ ಅನೇಕ ಉಪಕ್ರಿಯೆಗಳನ್ನು ಮಾಡಬೇಕಾಗುತ್ತದೆ. ಕಟ್ಟಿಗೆಯ ಕೆಲಸದಲ್ಲಿಯ ಉಪಕ್ರಿಯೆಗಳು ತನ್ನವೇ ಆದ ಮೂಲಭೂತ ವೈಶಿಷ್ಟ್ಯಗಳಿಂದ ಕೂಡಿಕೊಂಡಿವೆಯದ್ದರಿಂದ ಈ ಉಪಕ್ರಿಯೆಗಳಿಗೆ ಮೂಲಭೂತ ಉಪಕ್ರಿಯೆಗಳೆನ್ನುವರು. ಒಂದು ಉಪಕರಣವನ್ನು ತಯಾರಿಸುವ ಮುಖ್ಯ ಕ್ರಿಯೆಯನ್ನು ಕೈಗೊಂಡರೆ ಅದನ್ನು ಪೂರೈಸಲಿಕ್ಕೆ ಅನೇಕ ಉಪಕ್ರಿಯಗಳನ್ನು ಕೈಗೊಳ್ಳಬೇಕಾಗುತ್ತದೆ. ಅಂದರೆ ಉಜ್ಜುಗೊರಡು ಹೊಡೆಯುವುದು, ಕಡೆಯುವುದು, ಕೆತ್ತುವುದು, ತೂತು ಹಾಕುವುದು ಇತ್ಯಾದಿಯಾಗಿ ಇನ್ನು ಅನೇಕ ಕ್ರಿಯೆಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ಕ್ರಿಯೆಗಳನ್ನು ಕೆಲಸ ಮಾಡುವವರು ನಿರ್ಲಕ್ಷಿಸಿದರೆ ಅದರ ಕೆಟ್ಟ ಪರಿಣಾಮವು ಮುಖ್ಯ ಕ್ರಿಯೆಯ ಮೇಲೆ ತಪ್ಪದೇ ಆಗುತ್ತದೆ. ಆದ್ದರಿಂದ ಕ್ರಿಯೆ ಮತ್ತು ಉಪಕ್ರಿಯೆಗಳನ್ನು ಸರಿಯಾಗಿ ಹಸ್ತಗತ ಮಾಡಿಕೊಂಡಿರುತ್ತಾರೆ. ಕಾರಣ ಈ ಉಪಕ್ರಿಯೆಗಳನ್ನು ಮಾಡುವಾಗು ಲಕ್ಷ್ಯ (ಗಮನ)ದಲ್ಲಿ ತಂದುಕೊಂಡು ಮಾಡಿದರೆ ಅವರ ಕೌಶಲ್ಯವೂ ಬೆಳೆಯುವುದಲ್ಲದೆ ಮಾಡತಕ್ಕ ವಸ್ತುವೂ ಸುಂದರವಾಗುತ್ತದೆ.

ಮರದ ಕೆಲಸದಲ್ಲಿ ತಲ್ಲೀನನಾದ ಬಡಿಗಿಯರು ಮಾಡುವ ಕೆಲಸ ಪ್ರಾಮುಖ್ಯತೆ ಪಡೆಯುವುದಿಲ್ಲ ಬದಲಾಗಿ ಅವರು ಬಳಸುವ ಉಪಕರಣಗಳನ್ನು ನೋಡಿದ ತಕ್ಷಣ ಅವರ ಕೆಲಸಗಾರಿಕೆಯನ್ನು ಅರಿಯಬಹುದು. ಉಪಕರಣಗಳ ಸರಿಯಾದ ರೀತಿಯಲ್ಲಿ ಮಸೆಯುವ ಕ್ರಿಯೆಯಲ್ಲಿ ಉಳಿ, ಅಲಗು, ಗರಗಸದ ಹಲ್ಲುಗಳನ್ನು ಮಸೆಯುವುದು ಕಾಣಬಹುದು. ಉಳಿ, ಅಲಗನ್ನು ಮಸೆಯುವಾಗ ಅದರ ಯಾವ ಬದಿಯನ್ನು ಇಳಿಜಾರಿಗೆ (೩೦ ಕೋನಕ್ಕೆ) ಹಿಡಿಯಬೇಕು ಮತ್ತು ಯಾವ ಬದಿಯನ್ನು ಸಪಾಟಾಗಿ ಇಟ್ಟು ತಿಕ್ಕಬೇಕೆಂಬುದನ್ನು ತಿಳಿದು ಆಮೇಲೆ ಬೆಂಚ್ಗಲ್ಲು (ಬಿಳಿಯಾದ ವಜ್ರದ ತರದ್ದು) ತೆಗೆದುಕೊಂಡು ಪುಡಿಮಾಡಿ ಮಣೆಯ ಮೇಲಿಟ್ಟು ಮಸೆಯಬೇಕು ಅಥವಾ ಸಾಣೆಕಲ್ಲುಗಳಿಂದಲೂ ಮಸೆಯಬಹುದು. ಗರಗಸವನ್ನು ಮೂರು ಏಣಿನ ಅರದಿಂದಲೇ ತಿಕ್ಕಬೇಕು. ನಂತರ ಗರಗಸದ ಹಲ್ಲುಗಳಿಗೆ ಚಪರಸು ಹಾಕುವಾಗಿ ಅದರ ಹಲ್ಲುಗಳನ್ನು ಎರಡೂ ಬದಿಗೆ ಎಷ್ಟೆಷ್ಟು ಬಗ್ಗಿಸಬೇಕು ಮತ್ತು

ಗರಗಸವು ಚಪರಾಸು ಹಾಕಿದ ನಂತರವೂ ಡೊಂಕಾಗಿ ಉಳಿಯದೆ ಸರಳವಾಗಿಯೇ ಉಳಿಯುವಂತೆ ಮಾಡುತ್ತಾರೆ. ಇದು ಎಲ್ಲರಿಗೂ ಬರುವಂತದ್ದಲ್ಲ ಅದಕ್ಕೂ ಬುದ್ಧಿವಂತಿಕೆ ಬೇಕು. ಅದು ಸಾಮಾನ್ಯವಾಗಿ ಬಳಸುವ ಬಡಿಗಿಗಳಿಗೆ ತಿಳಿದಿರುತ್ತದೆ.

ಕಟ್ಟಿಗೆಯು ಕೆಲಸದ ವರ್ಗದಲ್ಲಿ ಉಪಯೋಗಿಸುವ ಕಟ್ಟಿಗೆಯು ಉತ್ತಮವಾದುದ್ದಾಗಿರಬೇಕು ಮತ್ತು ಬಾಳಿಕೆ ಬಾಳಿಕೆ ಬರುವಂತೆ ಮಾಡಿದ ವಸ್ತುಗಳು ಸುಂದರವಾಗಿ, ಗಟ್ಟಿಮುಟ್ಟಾಗಿ ಮತ್ತು ಮಾರಾಟಕ್ಕೆ ಯೋಗ್ಯವಾದವುಗಳಾಗಬೇಕಾದರೆ ಅದಕ್ಕೆ ತಕ್ಕಂತೆ ಕಟ್ಟಿಗೆ ಉತ್ತಮವಾಗಿರಬೇಕು. ಉಪಕರಣಗಳನ್ನು ತಯಾರಿಸುವಾಗ ಕಟ್ಟಿಗೆ ಹಸಿ ಇರಬಾರದು. ಡೊಂಕು ಬಾರದಂತೆ ನೋಡಿಕೊಳ್ಳಬೇಕು. ಕೆಲವು ಜಾತಿಯ ಮರಕ್ಕೆ ಹುಳ ಹತ್ತುತ್ತದೆ. ಅಥವಾ ಹತ್ತುತ್ತವೆ ಅಂತಹವುಗಳನ್ನು ಉಪಯೋಗಿಸುವಂತಿಲ್ಲ. ಕಟ್ಟಿಗೆಯ ಸೀಳೂಬಿಟ್ಟಿರಬಾರದು, ಬಿರುಸಾಗಿರದೆ ಮೆದುವಾಗಿರಬೇಕು ಉಪಕರಣಗಳ ಬಳಕೆಯ ತಕ್ಕಂತೆ ಮರವನ್ನು ಬಳಸುವ ಜಾಣತನ ಈ ವೃತ್ತಿ ಮಾಡುವವರಿಗೆ ಚೆನ್ನಾಗಿ ತಿಳಿದಿರುತ್ತದೆ. ಮರದ ಗುಣಗಳ ಮೇಲೆ ವೃತ್ತಿಯ ನೈಪುಣ್ಯತೆ ಇರುತ್ತದೆ.

ಹಾಗೆ ಬಡಗಿಯು ವ್ಯವಸಾಯ ಉಪಕರಣಗಳು, ಗೃಹೋಪಕರಣಗಳು ಮತ್ತು ದೈವತ್ವ ಉಪಕರಣ (ಮೂರ್ತಿಗಳು) ಗಳನ್ನು ಈ ವೃತ್ತಿಕಾರರು ಬಹಳ ಸಲೀಸಾಗಿ ನಿರ್ವಹಿಸುತ್ತ ಬಂದಿದ್ದಾರೆ. ಸಾಮಾನ್ಯವಾಗಿ ಈ ಜನಾಂಗದವರು (ಪಾಂಚಾಳರು) ಗ್ರಾಮ ದೈವಗಳ ಪೂಜಾರಿಗಳಾಗಿಯೂ, ಮೂರ್ತಿ ಪ್ರತಿಷ್ಠಾಪನೆಯೂ, ಮೂರ್ತಿ ನಿರ್ಮಾಣಕಾರ್ಯವನ್ನು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದು. ಅವರಿಗೆ ಒಂದು ಪರಂಪರೆಯೇ ಇದೆ ಎಂಬುದು ಇವೆಲ್ಲವುಗಳಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಬಡಗಿಗಳು ತಯಾರಿಸುವ ಮತ್ತು ತಯಾರಿಸಲು ಬಳಸುವ ಉಪಕರಣಗಳನ್ನು ಸವಿವರವಾಗಿ ಪಟ್ಟಿಮಾಡಲಾಗಿದೆ. ಕೃಷಿ ಉಪಕರಣ, ಗೃಹೋಪಕರಣ, ಸಾಂಸ್ಕೃತಿಕ ಉಪಕರಣಗಳು ಮನೋರಂಜನಾ ಉಪಕರಣಗಳನ್ನು ವಿಭಾಗ ಮಾಡಿ ವಿವರಿಸಲಾಗಿದೆ.

ತಯಾರಿಸುವ ಉಪಕರಣಗಳು

ಅ) ಕೃಷಿ ಉಪಕರಣಗಳು

ನೇಗಿಲು.	ಕೂರಿಗೆ.
ಕಿರುಗುಂಟೆ.	ಬದ್ನಿಗುಂಟಿ.
ಬಳುಗುಂಟಿ.	ಎಡೆಕುಂಟಿ.
ಮೇಳಿ.	ಎಡೆಕುಂಟಿ ನೊಗ.
ಬಂಡಿನೊಗ.	ನೆರೆಕೋಲು (ಬ್ಯಾಕೋಲು).
ಕುಡುಗೋಲು.	ಗುದ್ಲಿ.
ಬಂಡಿ.	ಏಣಿ.
ತೊಟ್ಟುಮಣಿ.	ಕೊಡ್ಲಿಕಾವು.
ಕುರ್ಚಿಗಿ.	ಸೆಡ್ಡಿ.
ಕೂರಿಗೆಬಟ್ಲು.	ಗುದ್ಲಿ.
ಬಾರಿಕೋಲು.	ಕಣಗ.

ಕೊಳಕಣ್ಣಿ.	ಕಟ್ಟಿಗಿತಾಳು.
ಗ್ವಾರಿ.	ಗೊಟ್ಟ.

ಇನ್ನು ಹತ್ತು ಹಲವಾರು ರೀತಿಯ ವ್ಯವಸಾಯ ಉಪಕರಣಗಳನ್ನು ಕೃಷಿಕರಿಗೆ ಬಡಿಗಿಯವರು ತಯಾರಿಸಿಕೊಡುತ್ತಾರೆ. ಇವುಗಳಿಲ್ಲದೆ ವ್ಯವಸಾಯ ಹೇಗೆ ಸಾಧ್ಯವಿಲ್ಲವೋ ಹಾಗೆ ಬಡಿಗಿಯವರು ಇಲ್ಲದೆ ವ್ಯವಸಾಯ ಉಪಕರಣಗಳಲ್ಲಿ ಒಂದನ್ನು ಬಿಟ್ಟು ಒಂದಿಲ್ಲ ಅವುಗಳನ್ನು ಇಂದು ಬೇರೆ ಬೇರೆ ಜಾತಿಯವರು ಮಾಡುತ್ತಾರೆ. ಆಮಾತು ಬೇರೆ.

ಆ) ಗೃಹೋಪಕರಣಗಳು

ಬಾಗಿಲು.	ಕಂಬ.
ಕನ್ನಡಿ ಪೆಟ್ಟಿಗೆ.	ನೂಲುವರಾಟಿ.
ಕುಂದ್ರಮಣಿ.	ಕೊಣಿಗಿ.
ಲಟ್ಟುಣ್ಗಿ.	ಹೋಳಿಗೆಮಣಿ.
ಬೀರು.	ಬಾವಿಯ ಗಡೆವು.
ಒಣಕೆ.	ಮಡ್ಡಿ.
ರಂಗೋಲಿ ಬಟ್ಲು.	ವರ್ಸು.
ಅಡ್ಡಣಗಿ.	ಈಳಿಗಿಮಣಿ.
ಅಟ್ಟ	ಮಜ್ಜಿಕಡ್ಗೋಲು.
ತೊಲಿ.	ಭವಂತಿಗಿ.
ಮೇಜು.	ಶ್ಯಾವಗಿ ಮಣಿ.
ತೊಟ್ಟಿಲು.	ತೊಲಿಕಂಬ.
ಜಂತಿ.	ಕದ.
ಅಲ್ಮರ್.	ಮಂಚ.
ಟೇಬಲ್.	ಕುರ್ಚಿ.
ಪೆಟ್ಗೆ.	ತೀರು ಬೋದು.
ಮುದ್ದಿಕೋಲು.	ರಾಟಿ.
ಕೈಮಗ್ಗ.	ಕಿಟಕಿ.
ಆರಾಮ ಕುರ್ಚಿ.	ಕೊಣಗಿ.
ಕಪಾಟು.	ತಗ್ಗುಂಡು.

ಇನ್ನು ಅನೇಕ ರೀತಿಯ ಗೃಹಬಳಕೆಯ ವಸ್ತುಗಳನ್ನು ಬಡಗಿ ತಯಾರಿಸಿಕೊಡುತ್ತಾರೆ. ಹಿಂದಿನ ಮತ್ತು ಇಂದಿನ ಕಾಲದಲ್ಲಿ ಇವರು ಅತ್ಯವಶ್ಯಕವಾಗಿ ಕಂಡುಬರುತ್ತಾರೆ. ಗೃಹಬಳಕೆಯ ವಸ್ತುಗಳನ್ನು ಪಟ್ಟಿಮಾಡುತ್ತ ಹೋದರೆ ಇನ್ನು ಹಲವಾರು ಹೆಸರುಗಳುಳ್ಳ ವಸ್ತುಗಳೂ ಸಿಗುತ್ತವೆ. ಇಂತ ಸಾಮಾನುಗಳು ಇತ್ತೀಚೆಗೆ ಕಣ್ಮರೆಯಾಗುತ್ತ ಅವಸಾನ ಅಂಚಿನಲ್ಲಿದ್ದರೂ ಜಾನಪದವನ್ನು ಉಳಿಸಿಕೊಂಡು ಬಂದಿರುವುದು ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದು. ಹಾಗೆ ಏನೇ ಆಧುನಿಕರಣಕ್ಕೆ ಸಮಸ್ಯೆ ಹೇಳಿ ತಮ್ಮ ಮೂಲ ಆಶಯಕ್ಕೆ ಹಿಂದಿರುಗಲು ನಾವು ನಮ್ಮ ದೇಶೀಯ ಉಪಕರಣಗಳನ್ನು ಎತ್ತಿ ಹಿಡಿದರೆ ಮಾತ್ರ ನಮ್ಮ ಸಂಸ್ಕೃತಿ ಉಳಿಕೊಂಡು ಹೋಗಲು ಸಾಧ್ಯ.

ಇ) ಸಾಂಸ್ಕೃತಿಕ ಉಪಕರಣಗಳು

ಮನುಷ್ಯನು ಉಪಯೋಗಿಸುವ ವಸ್ತುಗಳು ಕೇವಲ ಬಳಕೆಗೆ ಮಾತ್ರವಲ್ಲ. ಅನೇಕ ಸಂದರ್ಭಗಳಲ್ಲಿಯೂ ಕೂಡ ತನ್ನ ಮೇರೆಯನ್ನು ಗುರುತಿಸಲು ಸಾಧ್ಯವಾಗಿಲ್ಲ. ವ್ಯವಸಾಯದ ಉಪಕರಣದ ಜೊತೆಗೆ ಗೃಹ ಬಳಕೆಯ ವಸ್ತುಗಳವರೆಗೂ ಪ್ರತಿಯೊಂದು ವರ್ಗದ ಕೆಲಸ ಮಾಡಿರುವ ಕರಕುಶಲ ಕರ್ಮಿಗಳಿಗೆ ಅವಶ್ಯಕವಾಗಿ ಗೊತ್ತಿವೆ. ಅದರಂತೆ ಸಾಂಸ್ಕೃತಿಕ ಉಪಕರಣಗಳನ್ನು ನಾವು ನೋಡಬಹುದು. ಆದರೆ ದೈವಿ ಭಾವನೆಯಿಂದ ಗುರುತಿಸಲ್ಪಟ್ಟುವ ವಸ್ತುಗಳು. ಈ ಸಾಂಸ್ಕೃತಿಕ ಉಪಕರಣಗಳು ನಿನ್ನೆ ಮೊನ್ನೆಯದಲ್ಲ ನಮ್ಮ ಸಂಸ್ಕೃತಿಯ ಪ್ರತಿಬಿಂಬ.

ರಥ ಅಥವಾ ತೇರು.	ಆಯುಧಗಳು.
ದೇವಾಲಯದ ಬಾಗಿಲು.	ದೇವಾಲಯದ ಕದ.
ಪಲ್ಲಕ್ಕಿ.	ಮಂದಾಸನ.
ಸೂಲಗಂಭ.	ದ್ವಾರಬಾಗಿಲು.
ದೀಪಸ್ತಂಭ.	ದೇವಿ ವಿಗ್ರಹಗಳು.
ಛತ್ರಿ ಚಾಮರಗಳು.	ನಂದಿಕೋಲು.
ದೀವಟಿಗೆ.	ಮಂಟಪ.

ಹೀಗೆ ಇನ್ನು ಅನೇಕ ಸಾಂಸ್ಕೃತಿಕ ಉಪಕರಣಗಳನ್ನು ತಯಾರಿಸುವಲ್ಲಿ ಈ ಬಡಿಗಿಯವರು ಸಿದ್ಧಹಸ್ತರು. ಇವುಗಳನ್ನು ಸಾಂಸ್ಕೃತಿಕ ಸಂದರ್ಭಗಳಲ್ಲಿ ಪಲ್ಲಕ್ಕಿ, ರಥ, ವಿಗ್ರಹಗಳು, ದೇವಸ್ಥಾನಗಳಲ್ಲಿ ಉತ್ಸವದ ಕಾರ್ಯಕ್ರಮ ನಡೆಯುವುದು ಸಾಮಾನ್ಯ. ವರ್ಷವಿಡಿ ದುಡಿದು ದಣಿದಿರುವಾಗ ಅವರಿಗೆ ವಿಶ್ರಾಂತಿ ಬೇಕು ಅಂತಹ ಸಮಯದಲ್ಲಿ ಇಂತ ಸಾಂಸ್ಕೃತಿಕ ಸಮಾರಂಭಗಳು ನಡೆಯುತ್ತವೆ. ಸಾಂಸ್ಕೃತಿಕ ಉಪಕರಣಗಳ ತಯಾರಿಕೆಯಲ್ಲಿ ಬಳಸುವ ವಿಧಾನ ಮಹತ್ವದ್ದು ತಯಾರಿಸುವಂತಹ ವಸ್ತುವಿನ ಅಳತೆ, ಆಯಾ, ವಾಸ್ತು, ಎಂಬ ಶಬ್ದ ಕರೆಯಲ್ಪಡುವ ವ್ಯವಸ್ಥಿತವಾದ ರೀತಿಯಲ್ಲಿ ತಯಾರಿಸುವಾಗ ವಾಸ್ತುಶಾಸ್ತ್ರಕ್ಕೆ ಮೊರೆ ಹೋಗುತ್ತಾರೆ. ಆಯಾಕ್ಕೆ ತನ್ನದೆ ಆದ ಶಕ್ತಿ ಇದೆಯೆಂದು ಜನಪದರು ನಂಬುತ್ತಾರೆ. ಆಯಾದ ಅಳತೆ, ವಾಸ್ತು, ಇವುಗಳೆಲ್ಲವನ್ನು ಲೆಕ್ಕಹಾಕಿ ಈ ಬಡಿಗಿಯವರು ತಯಾರಿಸುತ್ತಾರೆ.

ಈ) ಮನೋರಂಜನ ಉಪಕರಣಗಳು

ಮನುಷ್ಯನಿಗೆ ಜೀವನ ಎಷ್ಟು ಮುಖ್ಯವೋ ಆ ಜೀವನದಲ್ಲಿ ಮನೋರಂಜನೆಗಳು ಕೂಡ ಅಷ್ಟೇ ಮುಖ್ಯ. ಜನಪದರು ದುಡಿಮೆಯ ವೇಳೆಯ ನಂತರ ವಿರಾಮವೇಳೆಯಲ್ಲಿ ಮನೋರಂಜನೆಗೋಸ್ಕರ ಇತರೆ ಆಟಗಳನ್ನು ಆಡುವುದು ಸಹಜವಾಗಿ ಕಂಡುಬರುತ್ತದೆ. ಆಟದ ಮೂಲಕವೋ ಅಥವಾ ಹಾಡಿಕುಣಿಯುವುದರ ಮೂಲಕವೋ

ಗುಂಪು ಕಟ್ಟಿಕೊಂಡು ಆಡುವ ಪದ್ಧತಿ ಹಿಂದಿನ ಕಾಲದಿಂದಲೂ ಇದೆ. ಕೆಲವೊಂದು ಸಮಯದಲ್ಲಿ ಮನೋರಂಜನೆಗೆ ಆಡುವುದನ್ನು ನಾವು ನೋಡಬಹುದು. ಪಾಂಡವರು ಮನರಂಜನೆಗೋಸ್ಕರ ಚದುರಂಗ ಆಡುತ್ತಾ ಕೊನೆಗೆ ಬಲದಿಂದ ಜೂಜಾಡಿ ದ್ರೌಪದಿಯ ಸೀರೆ ಸೆರಗನ್ನು ಎಳೆಯುವುದನ್ನು ಮಹಾ ಭಾರತದಲ್ಲಿ ಕಾಣಬಹುದು. ಈ ಪಾಂಚಾಳರಲ್ಲಿ ಒಬ್ಬರಾದ ಬಡಿಗಿಯರು ಈ ಕೆಳಗಿನ ಉಪಕರಣಗಳನ್ನು ತಯಾರಿಸುತ್ತಾರೆ.

ಗೊಂಬೆಗಳು.	ಗಾಲೆಗಳು.
ಗಿಲಕಿ.	ಚಿನ್ನಿಕೋಲು.
ಬಗರಿ.	ಬಂಡಿಗಳು.
ಕೋಲಾಟದ ಕೋಲು.	ದಾಳ.

ಉ) ಸಂಗೀತ ಉಪಕರಣಗಳು

ಹಾರ್ಮೋನಿಯಂ.	ತಬಲ.
ಡೊಳ್ಳು.	ಮದ್ದಲೆ.
ತಂಬೂರಿ.	ಮೃದಂಗ.
ಶಹನಾಯಿ.	ಕೊಳಲು.
ಸಮಾಳ.	

ಹೀಗೆ ಹತ್ತು ಹಲವಾರು ಸಂಗೀತದ ಉಪಕರಣಗಳ ಜೊತೆಗೆ ಭಜನೆಗೆ ಬಳಸುವ ಕೆಲವೊಂದು ಉಪಕರಣಗಳನ್ನು ತಯಾರಿಸುವುದನ್ನು ಕಾಣಬಹುದು.

ಊ) ಪ್ರದರ್ಶನಾ ಉಪಕರಣಗಳು

ಸಾಂಸ್ಕೃತಿಕವಾಗಿ ನೋಡಿದರೆ ಈ ನಾಡು ಭವ್ಯ ಪರಂಪರೆಯನ್ನು ಹೊಂದಿದೆ ಅಂತಹ ಪರಂಪರೆಯಲ್ಲಿ ಪ್ರದರ್ಶನಾ ಕಲೆಗಳು ಕಂಡುಬರುತ್ತವೆ. ಆ ಪ್ರದರ್ಶನ ಕಲೆಗಳು ಪ್ರದರ್ಶನವಾಗಬೇಕಾದರೆ ಅವುಗಳಿಗೆ ತನ್ನದೇ ಆದ ಉಪಕರಣ ಅಥವಾ ಆಭರಣಗಳು ಅತ್ಯವಶ್ಯಕ ಇವುಗಳನ್ನು ಬಡಗಿಯರು ಅಥವಾ ಪಾಂಚಾಳರು ತಯಾರಿಸುತ್ತಾರೆ.

ಸಿಂಹಾಸನಗಳು.	ಕಿರೀಟಗಳು.
ಭುಜಕೀರ್ತಿ.	ಎದೆಹಾರ.
ಗದೆ.	ಬಿಲ್ಲುಬಾಣ.
ಚಕ್ರ	ತಂಬೂರಿ.

ಇತ್ಯಾದಿ ಉಪಕರಣಗಳಿದ್ದರೆ ಈ ಕಲೆ ಅಥವಾ ಬಯಲಾಟ ಯಕ್ಷಗಾನಗಳಂತಹವುಗಳಿಗೆ ಮೆರಗು ತರುತ್ತವೆ. ಮದುವೆಗಳಲ್ಲಿ ಬಾಸಿಂಗವನ್ನು ತಯಾರಿಸುವುದು, ದೇವರ ಧ್ಯಾನ ಮಾಡಲು ಭಜನೆ ಸಾಮಗ್ರಿಗಳು ಇತ್ಯಾದಿ ಉಪಕರಣಗಳನ್ನು ತಯಾರಿಸುವುದು ಈ ಪಾಂಚಾಳರಲ್ಲಿ ಬಡಿಗಿಯವರು ಹೌದು. ಈ ಎಲ್ಲಾ ಉಪಕರಣಗಳನ್ನು ಪರಂಪರೆಯ ದೃಷ್ಟಿಯಿಂದ ನೋಡಿದರೆ ಅವುಗಳನ್ನು ನಿರ್ಧಿಷ್ಟವಾದ ಹುಟ್ಟುವಿನ ಸುಳಿವು ಸಿಗುವುದು ಕಷ್ಟವಾದರೂ ಸಾಧ್ಯವಾದ ಮಟ್ಟಿಗೆ ಜನಪದರು ಇವುಗಳನ್ನು ಅಂದಿನಿಂದ ಇಂದಿನ ವರೆಗೂ ಉಳಿಸಿಕೊಂಡು ಬಂದವಯಾದರೂ

ಅಷ್ಟು ಹಿಗ್ಗಾಲದ ಅಂಚಿನಲ್ಲಿವೆ. ಈ ಎಲ್ಲವುಗಳನ್ನು ವಿಶ್ವಕರ್ಮರಲ್ಲಿ ಬಡಿಗಿಯವರು ತಯಾರಿಸುತ್ತಾರೆ ಎಂಬುದನ್ನು ಸಂದೇಹವೇ ಇಲ್ಲ. ಅಂತಹ ಪ್ರತಿಭೆ ಅವರಲ್ಲಿದೆ. ಮರದ ಕೆಲಸದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿರುವುದನ್ನು ನೋಡಿದರೆ ಅವರು ತಯಾರಿಸುವ ಉಪಕರಣಗಳನ್ನು ನೋಡಿದರೆ ಗೊತ್ತಾಗುತ್ತದೆ. ಈ ದೇಶದ ಶಾಸ್ತ್ರದಾ ಘಟಕಗಳಿಂದು ಕರೆಸಿಕೊಳ್ಳುವ ಕರಕುಶಲ ತಂತ್ರಜ್ಞಾನಗಳು ಅತ್ಯಂತ ಕುಶಲಿ ಕೆಲಸದಿಂದ ಕೂಡಿವೆ. ಹಾಗೆಯೇ ಮರದಲ್ಲಿ ಕೂಡ ಬಡಿಗಿಯವರು ಕೆತ್ತನೆ ಕೆಲಸವನ್ನು ಸೂಕ್ಷ್ಮವಾಗಿ ತೋರಿಸುವ ಚಿತ್ರಗಳನ್ನು ಕೆತ್ತುವ ಕಲೆಯಲ್ಲಿ ಕರಗತ ಮಾಡಿಕೊಂಡಿದ್ದಾರೆ.

ಈ ಪಾಂಚಾಳರು ಇತರ ಸಮುದಾಯದೊಂದಿಗೆ ಹೊಂದಿಕೊಂಡು ಅವಶ್ಯಕತೆಗನು ಗುಣವಾಗಿ ಉಪಕರಣಗಳನ್ನು ತಯಾರಿಸುತ್ತಾ 'ಟಿಕ್ ಅಂದ್ರೆ ಅಕ್ಕಿಬಾನ' ಗಾದೆಯ ಅಡಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ದೇಶೀಯ ತಂತ್ರಜ್ಞಾನಗಳು ಹೊಸ ಹೊಸ ರೀತಿ, ಶೈಲಿ, ಮೋಹದ ವಸ್ತುಗಳನ್ನು ಬಳಸುತ್ತಾ ಬರುತ್ತಿದ್ದಾರೆ. ಆ ಹೊಸ ಆಲೋಚನ ಕ್ರಮ ಮೋಹದ ನಯವಾದ ಕೆಲಸವನ್ನು ಇವರು ಪರಿಸ್ಥಿತಿಗೆ ಹೊಂದಿಕೊಂಡು ಕೆಲಸ ಮಾಡುತ್ತಾ ಹೋಗುತ್ತಿದ್ದಾರೆ. ಇತ್ತಿಚಿನ ದಿನಗಳಲ್ಲಿ ಮೋಹದ ಉಪಕರಣಗಳ ಬದಲಾಗಿ ಮೊದಲಿದ್ದ ವಾಸ್ತು, ವಸ್ತು, ಬಳಸುವ ಉಪಕರಣಗಳನ್ನು ಸಂಸ್ಕೃತಿಕರಣ ಗೊಳಿಸಿ ಮತ್ತೆ ಹಳೆಯ ಶೈಲಿಯನ್ನು ಅಳವಡಿಸುವ ಮನೋಭಾವಗಳು ಬರುವ ದಿನಗಳು ಬಹುದೂರವಿಲ್ಲ. ಈ ಕೆಲಸದಲ್ಲಿ ನಿರತರಾದವರು ಬರೀ ಕೃಷಿ ಉಪಕರಣಮಾಡುತ್ತಾ ಜೀವನ ನಡೆಸುವ ಕಾಲವೊಂದಿತ್ತು. ಆದರೆ ಇಂದು ಗ್ರಾಮೀಣ ಪ್ರದೇಶಗಳಲ್ಲಿ ಅವರ ಎಮಕಿ ಬಡುಕಲಾಗಿ ಉಳಿಯುವುದನ್ನು ನಾವು ನಿರಾಕರಿಸುವಂತಿಲ್ಲ. ಹಳ್ಳಿಗಳನ್ನು ಬಿಟ್ಟು ನಗರದ ಪ್ರದೇಶಗಳಿಗೆ ವಲಸೆ ಹೋಗುವ ದೃಶ್ಯ ಸರ್ವೆಸಾಮಾನ್ಯವಾಗಿದೆ. ಈ ದೇಶದ ದೇಶೀಯ ತಂತಜ್ಞಾನಗಳ ಪರಿಸ್ಥಿತಿ ಚಿಂತಾಜನಕವಾಗಿವೆ. ಕಸುಬಿನಿಂದ ಜೀವನ ಸಾಗಿಸುವುದು ಕಷ್ಟವಾಗಿದೆ ಎಂದು ವೃತ್ತಿಯಲ್ಲಿ ನಿರತರಾದವರು ತುಂಬ ನೋವಿನಿಂದ ಹೇಳಿಕೊಳ್ಳುತ್ತಾರೆ. ಅರಕ್ಕೇರದೇ ಮೂರಕ್ಕಿಳಿಯದೆ ಅತಂತ್ರ ಸ್ಥಿತಿ ಬಂದೊದಗಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇ) ಕಂಚುಗಾರಿಕೆ

ಪಾಂಚಾಳರಲ್ಲಿ ಕಂಚುಗಾರರು ವಿಶ್ವಕರ್ಮನ ತೃತೀಯ ಅಘೋರ ಮುಖದಿಂದ ಬ್ರಹ್ಮರ್ಷಿ ತ್ವಷ್ಟನು ಜನಿಸಿದನು. ವಿಶ್ವಕರ್ಮನೆ ಅವರವರಿಗೆ ವೃತ್ತಿಗಳನ್ನು ನೀಡಿದ್ದರಿಂದ ತ್ವಷ್ಟನಿಗೆ ಎರಕ ಹೊಯ್ಯುವ ಪಡಿಹಚ್ಚು ಮಾಡುವ ಕಂಚುಗಾರಿಕೆಯ ವೃತ್ತಿಯನ್ನು ದಯಪಾಲಿಸಿದನು. ತಾಮ್ರ, ಕಂಚು ಮತ್ತು ಹಿತ್ತಾಳೆಯ ಕಾಯಕವನ್ನು ಮುಂದುವರೆಸಿಕೊಂಡು ಬಂದಿದ್ದಾನೆ.

ಕಂಚುಗಾರರನ್ನು ಇತರ ವೃತ್ತಿ ವಾಚಕಗಳಿಂದ ಹೆಸರು ಪಡೆದಂತೆ ತ್ವಷ್ಟರನ್ನು ವೃತ್ತಿಯಿಂದ ಈ ಪದ ಬಳಕೆಗೆ ಬಂದಿದೆ. ಇವರನ್ನು ತಾಂಬಟಗಾರ–ಚೆಂಬುಕುಟಿಗ– ಕಾಸಾರ– ಕಲಾಯಿಗಾರ– ಔತರಿ–ಕಂಚುವಡಿಗ–ಕಂಸಾರಕ–ತಂಬಟಗ–ಅಚ್ಚುಗಾರ ಎಂಬ ವಿಭಿನ್ನ ಹೆಸರುಗಳಿಂದಲೂ ಗುರುತಿಸುವುದು ವಾಡಿಕೆಯಾಗಿದೆ. (ಪಾಂಚಾಳ ವೃತ್ತಿ ಪದಕೋಶ ಡಾ. ಡಿ. ಪಾಂಡುರಂಗ ಬಾಬು ಪ್ರಸ್ತಾವನೆಯಲ್ಲಿ) ಕಂಚನ್ನು ಕರಗಿಸಿ ಒಂದು ಸಿದ್ಧವಸ್ತುವನ್ನು ಅಥವಾ ಮೂರ್ತಿಯನ್ನು ತಯಾರಿಕ ವೃತ್ತಿಕಾರರನ್ನು ಕಂಚುಗಾರರು ಎಂದು ಕರೆಯುವುದುಂಟು. ಕಂಚುಗಾರ ಮತ್ತು ಶಿಲ್ಪಿ ಎನ್ನುವ ವೃತ್ತಿ ಅಥವಾ ಜಾತಿವಾಚಕ ಪದಗಳ ನಿಷ್ಪತ್ತಿಯನ್ನು ವೃತ್ತಿಗೆ ಬಳಸುವ ಮೂಲ ಸಾಮಾಗ್ರಿಯಿಂದ ಸುಲಭವಾಗಿ ಗುರುತಿಸಬಹುದು. ಕಂಚು ಎನ್ನುವ ಲೋಹವನ್ನು ಬಳಸಿ ಕೆಲಸ ಮಾಡುವವರನ್ನು ಕಂಚುಗಾರರೆಂತಲೂ ಶಿಲೆಯನ್ನು ಬಳಸಿ ಕೆಲಸ ಮಾಡುವವರನ್ನು ಶಿಲ್ಪಿಗಳೆಂತಲೂ ಗುರುತಿಸಿಕೊಳ್ಳಬಹುದು. ಇನ್ನುಳಿದ ಮೂರು ವೃತ್ತಿಗಳ ಹೆಸರಿನ ಬಗ್ಗೆ ಅದೇ ಅಭಿಪ್ರಾಯಗಳು ಕೇಳಿಬರುತ್ತವೆ. ಕಂಚುಗಾರರ ಸಂಬಂಧ ಪಟ್ಟ ದಾಖಲೆಗಳು ಕಡಿಮೆ ಪ್ರಮಾಣದಲ್ಲಿ ಕಂಡುಬಂದಿವೆ. ಇತರ ನಾಲ್ಕು ವೃತ್ತಿಗಳ ಸಂಬಂಧಪಟ್ಟ ಪುರಾವೆಗಳಿಗಿಂತ ಈ ವೃತ್ತಿಯವರ ನೆರಳು ಕಡಿಮೆ ಇದೆ. ಕೆಲವೊಂದು ಶಾಸನಗಳಲ್ಲಿ ಬಿಟ್ಟರೆ ಇವರ ಉಲ್ಲೇಖ ಕಡಿಮೆ.

ತಾಮ್ರ, ಹಿತ್ತಾಳೆ ಮತ್ತು ಕಂಚು ಎಂಬ ಮೂರು ಲೋಹಗಳಲ್ಲಿ ಕೆಲಸ ಮಾಡುವವರನ್ನು ಕನ್ನಡದಲ್ಲಿ ಕಂಚುಗಾರರು ಎಂದು ಕರೆಯಲಾಗಿದೆ. ಕಾಸಿಂಗ ಎಂಬ ಪದವನ್ನು ಕೆಲವು ಕಡೆ ಈ ಅರ್ಥದಲ್ಲೇ ಬಳಸಿರುವಂತೆ ಕಾಣುತ್ತದೆ. ಈ ಕಂಚುಗಾರರು ಕೂಡ ವಿಶ್ವಕರ್ಮ ಮತ್ತಕ್ಕೆ ಸೇರಿದವರೇ ಆಗಿದ್ದಾರೆ. ಕಂಚುಗಾರರು ತಳಿಗೆ (ಕಂಚಿನ) ಕನ್ನಡಿ, ಬಿಬ್ಬ, ಬಟ್ಟುಗಳನ್ನು ಮಾಡುತ್ತಿದ್ದುದಾಗಿ ಡಾ. ಚಿದಾನಂದಮೂರ್ತಿ (ಪ್ರಾಚೀನಕರ್ನಾಟಕದಲ್ಲಿ ಶಿಲ್ಪಕಾರರು--ಕುಮಾರಸ್ವಾಮಿ ಪು–೭೧) ಯವರು ಹೇಳಿದ್ದಾರೆ. ಕೈದೀಪಗಳು ಮುಕ್ಕಾಲುಮಣೆ, ಘಂಟೆಗಳು, ನಿರ್ಧಾನಿಗಳು, ತಾಳ ಮೊದಲಾದವುಗಳು ಕೂಡ ಕಂಚುಗಾರರೇ ತಯಾರಿಸುತ್ತಿದ್ದರೆಂದು ಡಾ. ಟಿ.ಆರ್. ಕುಪ್ಪುಸ್ವಾಮಿಯವರು ತಮ್ಮ 'ಪೂರ್ವೋಕ್ತ'ದಲ್ಲಿ ಮತ್ತೊಂದಿಷ್ಟು ಪರಿಕರಗಳನ್ನು ಈ ಪಟ್ಟಿಗೆ ಸೇರಿಸುತ್ತಾರೆ. ಈ ಕಂಚುಗಾರರ ಲೋಹಪಾತ್ರವನ್ನು ಉತ್ಪಾದಿಸುತ್ತಿದ್ದರೆಂದು ಹೇಳಿದ್ದಾರೆ. ಕುಪ್ಪಸ್ವಾಮಿಯವರು ಮುಂದುವರೆದು ಕಂಚುಗಾರರು ಕೇವಲ ದಿನ ನಿತ್ಯದ ಪಾತ್ರೆಪಡಗಗಳನ್ನಷ್ಟೆ ಅಲ್ಲದೇ ತೀರ್ಥಂಕರ, ವಿಷ್ಣು, ಗಣೇಶ ಮೊದಲಾದ ದೇವತೆಗಳ ಮೂರ್ತಿಗಳನ್ನು ಕೂಡ ಎರಕಹೊಯ್ದು ತಯಾರಿಸುತ್ತಿದ್ದರೆಂದು ಹೇಳಿದ್ದಾರೆ. ಇವರುಗಳ ಹೇಳಿಕೆಗಳು ಸರಿ ಇವೆ. ಯಾಕೆಂದರೆ ಅವರ ವೃತ್ತಿಯೇ ಕಂಚು, ತಾಮ್ರವನ್ನು ಒಲೆಯಲ್ಲಿ ಕಾಸಿ ಪಡಿಯಚ್ಚಿನಲ್ಲಿ ಹಾಕುತ್ತಾರೆ. ಮೊದಲೇ ಪಡಿಹಚ್ಚಿನಲ್ಲಿ ಸುರಿಯುತ್ತಾರೆ. ತಾವು ಯಾವ ಸಾಮಗ್ರಿಯನ್ನು ತಯಾರಿಸಬೇಕೋ ಆ ವಸ್ತುಗಳನ್ನು ತಯಾರಿಸುತ್ತಾರೆ.

ಕ್ರಿ.ಶ. ೧೧ ನೇ ಶತಮಾನದಲ್ಲಿ ಸೇರಿದ ನಟರಾಜ,ಶಿವ, ಪಾರ್ವತಿ ಮೊದಲಾದ ಲೋಹದ ಎರಕಹೊಯ್ದ ವಿಗ್ರಹಗಳು ಚನ್ನಪಟ್ಟಣದ ಹತ್ತಿರದ ಕೂಡಲೂರು ಗ್ರಾಮದಲ್ಲಿ ಸಿಕ್ಕಿರುವುದನ್ನು ಗಮನಿಸಿ ಗುರುರಾಜಾಚಾರ್ಯರವರು ಇದರ ಆಧಾರದ ಮೇಲೆ ಆಗಿನ ಕಾಲಕ್ಕಾಗಲೇ ಈ ಕಂಚುಗಾರರು ಮಿಶ್ರ ಲೋಹವನ್ನು ತಯಾರಿಸುವ ಲೋಹ ವಿಜ್ಞಾನದಲ್ಲಿ ತಜ್ಞರಾಗಿದ್ದಾರೆಂದು, ಮಿಶ್ರಲೋಹವನ್ನು ಎರಕಹೊಯ್ದ ವಿಗ್ರಹಗಳನ್ನು ತಯಾರಿಸುವುದರಲ್ಲಿ ಪರಿಣಿತರಾಗಿದ್ದರೆಂದು ತಿಳಿಸುತ್ತಾರೆ. (ಗುರುರಾಜಾಚಾರ್ ಪೂರ್ವೋಕ್ತ ಪುಟ–೮೬) ಎರಕಹೊಯ್ಯುವ ಕಾಯಕ ಆಗಿನ ಕಾಲದಲ್ಲಿ ಬೆಳೆದಿದ್ದಿತ್ತು ಎಂಬುದು ವೇದ್ಯವಾಗುತ್ತದೆ. ಕ್ರಿ.ಶ. ೧೧೧೬ ರ ಮೈಸೂರಿನ ಒಂದು ಶಾಸನವು ಬಂಗಾರ, ಕಬ್ಬಿಣ, ತಾಮ್ರ, ಮೊದಲಾದ ಲೋಹಕರ್ಮಗಳಲ್ಲಿಯೂ ವಜ್ರ, ಮುತ್ತು, ರತ್ನ ಮೊದಲಾದ ರತ್ನಕರ್ಮಗಳಲ್ಲಿಯೂ ಪರಿಣಿತರಾಗಿದುದೇ ಅಲ್ಲದೇ ತೀರ್ಥಂಕರ, ವಿಷ್ಣು ಮೊದಲಾದ ದೇವತೆಗಳ ಮೂರ್ತಿಗಳನ್ನು ಕೂಡ ಎರಕಹೊಯ್ದು ತಯಾರಿಸುತ್ತಿದ್ದರೆಂದು ತಿಳಿದುಬರುತ್ತದೆ. ಇವರನ್ನು ರತ್ನಕರ್ಮಗಳಲ್ಲಿ ಪರಿಣಿತರಾದ ಇತರ ಕೆಲಸಗಾರರನ್ನು ಹೀಗೆ ಅವರನ್ನೆಲ್ಲ ಒಟ್ಟಾಗಿ ವಿಶ್ವಕರ್ಮರೆಂದು (ಎ.ಆರ್.ಸಿ.ಇ. ೧೯೪೯–೫೦ ಬಿ.ನಂ.೧೪೭) ಪರಿಗಣಿಸುವ ಪ್ರಸ್ತಾಪವು ಈ ಶಾಸನದಲ್ಲಿ ಉಲ್ಲೇಖಗೊಂಡಿದೆ.

ಮುಖ್ಯವಾಗಿ ಕಂಚುಗಾರರ ಉಲ್ಲೇಖನವು ಉಳಿದ ನಾಲ್ಕು ಜನರಿಗಿಂತ ಅಥವಾ ವೃತ್ತಿಗಳಿಗೆ ಹೋಲಿಸಿದರೆ ಈ ಕಂಚಿನ ವೃತ್ತಿಗೆ ಸಂಬಂಧಿಸಿದ ವಿಚಾರವು ದೊರೆಯುವುದು ಬಹಳ ಕಡಿಮೆ. ಒಂದು ವಿಚಾರವನ್ನು ನಾನು ನಿಷ್ಠುರವಾಗಿ ಹೇಳಬೇಕೆಂದರೆ ಯಾವುದು ಹೆಚ್ಚು ಪ್ರಚಲಿತವಾಗಿರುತ್ತದೆಯೋ ಅಂತಹ ವಿಚಾರಗಳು ಚರ್ಚೆಗೆ ಒಳಪಡುತ್ತವೆ. ಮತ್ತು ಅಧ್ಯಯನಕ್ಕೊಳಪಡಿಸುತ್ತಾರೆ. ಇದು ವಿದ್ವಾಂಸರ ಕೊರತೆಯೋ ಅಥವಾ ಅವರ ಕಸುಬಿನ ಹಿಂದುಳಿಯುವಿಕೆಯೋ ನನಗೂ ಅರ್ಥವಾಗುತ್ತಿಲ್ಲ. ಆದರೂ ಈ ಎರಕ ಹೊಯ್ಯುವ ವೃತ್ತಿಯಂತೂ ಹಿಂದೆಯೇ ಇತ್ತು ಎಂಬುದು ಕೆಲವು ಉಲ್ಲೇಖಗಳಿಂದ ತಿಳಿದು ಬರುತ್ತದೆ. ಮತ್ತು ಈ ವೃತ್ತಿಯನ್ನು ಸ್ವತಃ ಮಾಡಿದವರ ಕುಟುಂಬಗಳೂ ಸಿಗುತ್ತವೆ. ಆದರೆ ಕಂಚುಗಾರರೆಲ್ಲರೂ ಇವತ್ತು ಆ ವೃತ್ತಿಯನ್ನು ೯೦% ರಷ್ಟು ಜನರು ಕೈಬಿಟ್ಟಿದ್ದಾರೆ. ಆದರೂ ಕಂಚುಗಾರ ರಾಮಚಾರಿ, ಕಂಚುಗಾರ ಮೌನಾಚಾರಿ ಎಂಬಿತ್ಯಾದಿ ವೃತ್ತಿನಾಮಗಳ ಜೊತೆಗೆ ವ್ಯಕ್ತಿನಾಮಗಳನ್ನು ಇಂದಿಗೂ ಕಾಣುತ್ತೇವೆ. ಅಂದರೆ ಈ ವೃತ್ತಿಯು ಅಗಲೇ ಸಂಮೃದ್ಧಿಯಿಂದ ಬೆಳದು ತದನಂತರದಲ್ಲಿ ಪತನವಾಗಿದೆ ಎಂಬುದು ವೇದ್ಯವಾಗುತ್ತದೆ. ಆದರೆ ಯಾವುದೇ ವಿದ್ವಾಂಸರು ಕಂಚಿನ ಕೈಗಾರಿಕೆಯಲ್ಲಿ ತೊಡಗಿದ್ದ ಕುಶಲಕಾರ್ಮಿಕರನ್ನು ಪ್ರತ್ಯೇಕ ಗುರುತಿಸುವುದಿಲ್ಲ. ಒಂದೆರಡು ಶಾಸನಗಳಲ್ಲಿ ಇಂತಹ ಉಲ್ಲೇಖಗಳನ್ನು ಕಾಣಬಹುದು. "[illegible]"

ಎಸ್ಮಿದ ಕ್ರಿ.ಶ. ೧೦೬೪ ರ ಕಾಂಸಿಗನನ್ನು ಗುರುತಿಸುತ್ತಾರೆ. ಇವರು ಕಂಚಿನ ಕೆಲಸವನ್ನು ಮಾಡಿದ್ದಕ್ಕಾಗಿ ಭೂಮಿಯನ್ನು ದಾನವಾಗಿ ಪಡೆಯುತ್ತಾನೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಿಚಾರಿಯರು-ಕುಮಾರಸ್ವಾಮಿ ಪುಟ-೭೨) ಎಂಬ ಮಾತನ್ನು ನೋಡಿದರೆ ಆಗಲೂ ರಾಜರ ಮನ್ನಣೆ ಪಡೆದ ವೃತ್ತಿಯಾಗಿತ್ತು ಎಂಬುದರಲ್ಲಿ ಸಂದೇಹವೇ ಇಲ್ಲ.

ಕಾಳೋಜ ಮತ್ತು ಅವಕೋಜ ಎಂಬ ಇಬ್ಬರು ಕಂಚಿನ ವೃತ್ತಿಗಾರರ ಉಲ್ಲೇಖವಾಗಿದೆ. (ಎ.ಕ. V ಬೇಲೂರು ೬೧) ಕ್ರಿ.ಶ. ೧೫೬೫ ರಲ್ಲಿ ಬೇಲೂರಿನ ಚನ್ನಕೇಶವ ದೇವಾಲಯದಲ್ಲಿರುವ ಕುಂಚಿನ ದೀಪಸ್ತಂಭವನ್ನು ತಯಾರು ಮಾಡಿದ್ದಾರೆ. ಇವರು ಕಂಚುಗಾರ ಮಾರಾಳ ಸಿಂದೋಜನ ಮಕ್ಕಳು, ಇವರು ತಮ್ಮನ್ನು ಪಟ್ಟಣದ ಕಂಚುಗಾರರೆಂದು ಹೇಳಿಕೊಂಡಿದ್ದಾರೆ. ಅದೇ ಬೇಲೂರು ಪಟ್ಟಣವನ್ನು ಕುರಿತೇ ಇವರು ಪಟ್ಟಣ ಎಂದು ಹೇಳಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ಅಂದರೆ ಇವರ ಅಂದಿನ ರಾಜಧಾನಿಯಾದ ಬೇಲೂರಿನಲ್ಲಿ ಇದ್ದರು, ಕಂಚಿನ ಕಂಬದ ತೂಕವನ್ನು ನಮೂದಿಸುರುವುದು ವಿಶೇಷ. 'ಕಂಭದೀವಿಗೆ ಕಂಚಿಗೆ ೫೦ ಫಲ ೪' ಎಂಬುದಾಗಿ ಹೇಳಲಾಗಿದೆ. ಈ ತರದ ವಸ್ತುಗಳನ್ನು ಈ ಕಂಚುಗಾರರು ತಯಾರಿಸುತ್ತಾ ತಮ್ಮ ಇರುವಿಕೆಯನ್ನು ತೋರಿಸಿದ್ದಾರೆ.

ಕಂಚು ಮೊದಲಾದ ಲೋಹದ ವಿಗ್ರಹಗಳು ಸ್ವಲ್ಪ ಪ್ರಮಾಣದಲ್ಲಿ ಅಲ್ಲಲ್ಲಿಯೇ ಉಲ್ಲೇಖಗಳಿದ್ದರೂ ಅವುಗಳನ್ನು ಮಾಡಿದ ವೃತ್ತಿಕಾರರ ಉಲ್ಲೇಖಗಳು ಸಧ್ಯಕ್ಕೆ ಉಪಲಬ್ಧವಿಲ್ಲವೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಹಾಗೆಂದರೆ ಅದು ತಪ್ಪಾದೀತು ಏಕೆಂದರೆ ಈ ಪಾಂಚಾಳ ವೃತ್ತಿಗಾರರು ಬಹು ವರ್ಷಗಳಿಂದಲೂ ತಮ್ಮ ಕರ್ಮಗಳ ಮೂಲಕ ಇತರ ಸಮುದಾಯಗಳ ಜೊತೆಗೆ ಜೀವಿಸುತ್ತಿದ್ದರು ಎಂಬುದಕ್ಕೆ ಸಾವಿರಾರು ವರ್ಷಗಳ ಇತಿಹಾಸ ಇರುವಾಗ ಪಾಂಚಾಳರಲ್ಲಿ ಒಬ್ಬರಾದ ಕಂಚುಗಾರರು ಇರಲೇ ಬೇಕಲ್ಲವೇ ಪಾಂಚಾಳರಲ್ಲಿ ಒಬ್ಬರನ್ನು ಬಿಟ್ಟು ಒಬ್ಬರಿಲ್ಲ. ಕಂಚಿನ ಕೆಲಸ ಇದ್ದಾಗ ಆ ಕೆಲಸ. ಮೂರ್ತಿಯ ಕೆಲಸ ವಿಲ್ಲದಿದ್ದಾಗ ಉಳಿದ ನಾಲ್ಕು ವೃತ್ತಿಗಳಲ್ಲಿ ಯಾವುದಾದರೊಂದು ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಇಂದು ಪಾಂಚಾಳರ ವೃತ್ತಿಯಲ್ಲಿ ಕಂಚುಗಾರಿಕೆಯು ಹೇಳ ಹೆಸರಿಲ್ಲದಂತಾಗಿದೆ. ಆಧುನಿಕ ಯುಗದಲ್ಲಿ, ವೈಜ್ಞಾನಿಕ ಯುಗದಲ್ಲಿ ಇಂತಹ ವೃತ್ತಿಗಳಿಗೆ ಬುಡಸಮೇತವಾಗಿ ಕೀಳುವ ಸಂದರ್ಭ ಒದಗಿಬಂದಿದೆ. ಅವರ ಬದುಕು ಉಳಿದ ನಾಲ್ಕು ವೃತ್ತಿಗಳಿಗಿಂತ ಚಿಂತಾಜನಕವಾಗಿದೆ.

ಪಾಂಚಾಳರಲ್ಲಿ ಈ ಕಂಚುಗಾರರ ಸಂಬಂಧಪಟ್ಟ ಮೂಲಾಧಾರಗಳನ್ನು ಅಧ್ಯಯನ ಮಾಡುವಾಗ ಇವರ ಉಲ್ಲೇಖಗಳು ಸ್ವಲ್ಪ ಕಡಿಮೆಯಾಗುತ್ತದೆಯಲ್ಲಾ ಎಂಬುದು ನೋವಿನ ಸಂಗತಿ. ಉಳಿದವುಗಳಿಗಿಂತ ಈ ಅಧ್ಯಯನ ತೂಕಕ್ಕೆ ಹಾಕಿದಾಗ ಇವರ ಸಂಬಂಧ ಪಟ್ಟ ವಿಚಾರಗಳು ಕಡಿಮೆ ಪ್ರಮಾಣದಲ್ಲಿ ದೊರಕಿವೆ. ಅಂದರೆ ಈ ವೃತ್ತಿ ಈಗ ಎಷ್ಟರ ಮಟ್ಟಿಗೆ ಪ್ರಭಾವಕ್ಕೆ ಬಿದ್ದಿರಬಹುದು ಎಂಬುದು ಸಂಶಯಾಸ್ಪದ ವೆನಿಸುತ್ತದೆ. ಒಂದುಕಾಲಕ್ಕೆ ಎರಕಹೊಯ್ಯುವ ವೃತ್ತಿ ಪ್ರಚಲಿತದಲ್ಲಿತ್ತು ಎಂಬುದು ಸಂಶಯನೇ ಇಲ್ಲ. ಇದು ಕುಂಟುತ್ತಾ ಬಂದಿರಬಹುದು. ಇಂದು ಈ ಕುಂಟುಗಾಲುಗಳನ್ನು ಇತರ ಸಮುದಾಯದವರು ಕತ್ತರಿಸಿಕೊಂಡು ತಮಗೆ ಆಶ್ರಯ ಮಾಡಿಕೊಂಡಿದ್ದಾರೆ. ಆದರೂ ಉತ್ತಮಮಟ್ಟ ಕುಶಲಗಾರರಾಗಿ, ಉತ್ತಮ ದರ್ಜೆಯ ಸದಭಿರುಚಿಯ ಕಲಾಕೃತಿಗಳನ್ನು ರಚಿಸುತ್ತಿದ್ದರು ಎಂಬುದರಲ್ಲಿ ಎರಡು ಮಾತಿಲ್ಲ. ಕಾಲಬದಲಾದಂತೆ ಅಭಿರುಚಿಗೆ ತಕ್ಕಂತೆ ಇಂದು ಜೀವಿಸುವ ಬದುಕು ಹಿಂದಿನ ಎಲ್ಲಾ ಘಟನೆಗಳನ್ನು, ವಸ್ತು ಸ್ಥಿತಿಯನ್ನು ಮರೆಯುತ್ತಿದ್ದೇವೆ. ಇದು ದುರಂತ.

'ಕಂಚಿಪುರಾಣ' ಎಂಬ ಕಾವ್ಯ ಮತ್ತು 'ಹಲಗೂರು ಪಾಂಚಾಳರು' ಎಂಬ ಜನಪದ ಕಾವ್ಯಗಳಲ್ಲಿ ಸೂಚಿತವಾದಂತೆ ಪಾಂಚಾಳರಲ್ಲಿ ಒಬ್ಬರಾದ ಕಂಚುಗಾರರ ವೃತ್ತಿಗೆ ಸಂಬಂಧಪಟ್ಟ ವಿವರಗಳು ಸಿಗುತ್ತವೆ. ಕ್ರಿ.ಶ. ೧೭ನೇ ಶತಮಾನದ ನಿರಂಜನ ಕವಿ ವಿರಚಿತ 'ಕಂಚಿಪುರಾಣ' ಎಂಬ ಅಪ್ರಕಟತ ಕಾವ್ಯವು ಕಂಚುಗಾರರ ಒಂದು ಕುಟುಂಬವು ನಾಬಾರಿ, ಕಾಪಿ ತಯಾರಿಸಿದ ಸರಕುಗಳನ್ನು ಮಾರಲು ಪ್ರಯಾಣ ಹೊರಟ ವಿವರವನ್ನು ಕೊಡುತ್ತದೆ. (ಪ್ರಾಚೀನ

ಕರ್ನಾಟಕದಲ್ಲಿ ಶಿಲ್ಪಚಾರಿಯರು–ಡಾ. ಕುಮಾರಸ್ವಾಮಿ–ಪು.೯೧) ಈ ವಿವರಗಳನ್ನು ನೋಡಿದರೆ ಅದು ತುಂಬು ಕುಟುಂಬದಿಂದ ಕೂಡಿ ಎಲ್ಲರೂ ಸಾಮೂಹಿಕವಾಗಿ ಒಟ್ಟಾಗಿ ವೃತ್ತಿಯಲ್ಲಿ ನಿರತರಾಗಿದ್ದರು ಎಂಬುದನ್ನು ನಮಗೆ ತಿಳಿದುಬರುತ್ತದೆ.

ಮುಂದುವರೆದು ಈ ಕೃತಿಯಲ್ಲಿ ಶ್ರೀ ಗಿರಿಯ ಕಡೆಯಿಂದ ಭಾಂಡಗಳ ವ್ಯವಹಾರವನ್ನು ಮಾಡುವ ಕಂಚುಗಾರರು ಐವತ್ತಾರು ದೇಶಗಳಲ್ಲಿ ತಮ್ಮ ಸರಕುಗಳನ್ನು ವ್ಯಾಪಾರ ಮಾಡುತ್ತಾ ಚಂದ್ರಗುತ್ತಿ ನಗರವನ್ನು ಪ್ರವೇಶಿಸಿದರು ಎಂದು ಹೇಳಲಾಗಿದೆ. ಅಂದರೆ ಇವರದೊಂದು ಅಲೆಮಾರಿಜೀವನದಂತೆ ಕಂಡುಬರುತ್ತದೆ. ಅದರ ಕಂಚುಗಾರಿಕಾ ವಸ್ತುಗಳನ್ನು ಮಾರಲು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಮಾರಿ ಪುನಃ ತಮ್ಮ ವಾಸಸ್ಥಳಕ್ಕೆ ಹಿಂತಿರುಗುತ್ತಿದ್ದರು. ಇದರಿಂದ ತಂದೆ ಮಕ್ಕಳು ಮತ್ತು ರಕ್ತ ಸಂಬಂಧಿಗಳಿಂದ ಕೂಡಿದ ಕಂಚುಗಾರ ಮನೆತನಗಳು ಇದ್ದವು ಎಂಬ ನಿದರ್ಶನಕ್ಕೆ ಪುಷ್ಟಿ ನೀಡುತ್ತವೆ. ಅವರು ತಮ್ಮದೇ ಅದ ಆಯುಧಗಳನ್ನು ಹೊಂದಿರುತ್ತಿದ್ದರು. ಬಂಡಿ, ಎತ್ತು, ಕತ್ತೆ, ಕುದುರೆಗಳನ್ನು ಇಟ್ಟುಕೊಂಡಿದ್ದರು. ಈಗ ಮುಸ್ಲಿಂ ಮತ್ತು ಇತರ ಜನಾಂಗದವರು ಈ ವೃತ್ತಿಯನ್ನು ಮಾಡುತ್ತಿರುವುದರಿಂದ ಈ ಕಂಚಿನ ಕೆಲಸವನ್ನು ದೂರ ಸರಿಸಿದ್ದಾರೆ ಅನ್ನುವುದಕ್ಕಿಂತ ಕಿತ್ತುಕೊಂಡಿದ್ದಾರೆ ಅನ್ನುವುದೇ ಲೇಸು. ಸಮಾಜದಲ್ಲಿ ಎಲ್ಲಾ ವರ್ಗಗಳು ಎಲ್ಲ ವೃತ್ತಿಗಳನ್ನು ಮಾಡುವ ಪದ್ಧತಿ ಇದ್ದಿಲ್ಲ. ಪರ್ಶಿಯನ್ನರ ಆಗಮದಿಂದ ಈ ದೇಶದ ತಂತ್ರಜ್ಞಾನಗಳನ್ನು ಆ ವೃತ್ತಿ, ಈ ವೃತ್ತಿ ಎನ್ನದೇ ಎಲ್ಲಾ ವೃತ್ತಿಗಳಲ್ಲಿ ಕೈಹಾಕಿ ಈ ನಾಡಿನ ಜನರ ಹೊಟ್ಟೆಯ ಮೇಲೆ ಕಲ್ಲು ಹಾಕಿದರು. ಆದರೂ ಯಾರು ಯಾವ ಕೆಲಸ ಮಾಡಬೇಕೋ ಅವರೇ ಮಾಡಬೇಕೆಂಬ ಮಾತು ಈಗಲೂ ಕೇಳಿಬರುತ್ತದೆ. ಕುಂಬಾರ ಮಡಿಕೆ ಮಾಡುವ ಕೆಲಸಬಿಟ್ಟು, ಕಮ್ಮಾರಿಕೆ ಮಾಡಲು ಹೋದರೆ 'ಗಣಪತಿ ಮಾಡಲಿಕ್ಕೆ ಹೋಗಿ ಅವರಪ್ಪನ ಮಾಡಿದ್ನಂತೆ' ಎಂಬ ಹಾಸ್ಯಕ್ಕೆ ಗುರಿಯಾಗುತ್ತದೆ. ಇಂತಹ ಸನ್ನಿವೇಶಗಳಿದ್ದರೂ ಈ ಕಂಚುಗಾರಿಕೆಯ ವೃತ್ತಿಯನ್ನು ಇಂದು ಮುಸ್ಲಿಂರೇ ಮಾಡುತ್ತಾರೆ. ಅವರು ಅಲೆಮಾರಿ ಜೀವನದಂತೆ ಪ್ರಮಾಣವಾಡಿ ಮೂರುದಿನಕ್ಕೊಂದು ಊರೂರು ತಿರುಗುತ್ತ ಹಂಡೆ, ಕೊಡಪಾನ, ತಪಾಲಿ, ಗುಂಡಾಲು ಇತ್ಯಾದಿ ಪಾತ್ರೆಗಳನ್ನು ರಿಪೇರಿ ಮಾಡುತ್ತ ಎರಕ ಹೊಯ್ಯುವ ಕೆಲಸವನ್ನು ಮಾಡುತ್ತಾರೆ. ಆದರೂ ಕಂಚುಗಾರರು ಈ ವೃತ್ತಿಯನ್ನು ಸಂಪೂರ್ಣವಾಗಿ ದಿಕ್ಕರಿಸಿಲ್ಲ. ಇದರ ಜೊತೆ ಇತರ ಕಮ್ಮಾರಿಕೆ, ಅಕ್ಕಸಾಲಿಕೆ, ಬಡಿಗಿತನ, ಸ್ವರ್ಣಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವಲ್ಲಿ ಎರಡು ಮಾತಿಲ್ಲ.

ಸರಕನ್ನು ಮಾರುತ್ತ ಊರಿಂದ ಊರಿಗೆ ಹೋಗುವಾಗ ಎದುರಿಗೆ ಬರಬಹುದಾದ ಕಳ್ಳಕಾರರನ್ನು ಎದುರಿಸುತ್ತಿದ್ದರು. ಪ್ರಯಾಣ ಮಾಡುವಾಗ ಅಲ್ಲಲ್ಲಿಯೇ ಬರುವ ದೊಡ್ಡ ನಗರಗಳಲ್ಲಿ ತಂಗಿ ವ್ಯಾಪಾರಗಳನ್ನು ಮಾಡುತ್ತಿದ್ದರು. 'ಕಂಚಿ ಪುರಾಣ'ದಲ್ಲಿ ಬರುವ 'ಕಟಕ ವಿಶ್ವಬ್ರಹ್ಮವಂಶಾನ್ವಯರು' ಎಂಬ ಮಾತು ಇವರ ಸೈನ್ಯ (ಕಟಕ) 'ವಿಶ್ವಬ್ರಹ್ಮವಂಶಾನ್ವಯ' ಎಂಬ ಹೇಳಬಹುದಾದಷ್ಟು ಗಾತ್ರದಲ್ಲಿ ಆಯುಧ ಸನ್ನದ್ಧರಾದ ಅಂಗರಕ್ಷಕರನ್ನು ಹೊಂದಿದ್ದರು. ಕೆಲವು ಸಾರಿ ತಾವೇ ಹೋರಾಟಮಾಡಲು ಮುಂದಾಗುತ್ತಿದ್ದರು.ಇಲ್ಲಿ ಹನುಮ ಧ್ವಜವನ್ನು ಹೊಂದಿರುತ್ತಿದ್ದರು ಎಂಬುದನ್ನು ನೋಡಿದರೆ ಇವರು ತಮ್ಮದೇ ಆದ ಧ್ವಜ ಹಾಗೂ ಲಾಂಛನಗಳನ್ನು ಹೊಂದಿರುತ್ತಿದ್ದರು ಎಂದು ತಿಳಿದು ಬರುತ್ತದೆ. ವಿಘ್ನಗಳ ಕಾಲದಲ್ಲಿ ಈ ದೇವತೆಯರು ನಮ್ಮನ್ನು ಕಾಪಾಡುತ್ತಾನೆಂಬ ಭಕ್ತಿಯಿಂದಲೂ ಇರಬಹುದು.

'ಮಿತಾಕ್ಷರ' ಮತ್ತು 'ಯಜ್ಞವಲ್ಕ್ಯ' ಸ್ಮೃತಿಗಳು ವೃತ್ತಿ ನಿರಂತರ ಪಂಗಡಗಳಿದ್ದವು, ಈ ಪಂಗಡಗಳು ಇಪ್ಪತ್ತು ಪಡೆಗಳಿಂದ ಕೂಡಿರುತ್ತಿದ್ದವು ಎಂದು ಹೇಳುವುದರ ಜೊತೆಗೆ ತಾವು ಬಿಡಾರ ಬಿಟ್ಟು ಕಡೆ ಎತ್ತುಗಳ ಕೊರಳು ಹರಿದು ಅವುಗಳನ್ನು ಮೇಯಲು ಕಾಡಿಗೆ ಅಟ್ಟುತ್ತಿದ್ದರು. ವ್ಯಾಪಾರ ಮುಗಿದ ಮೇಲೆ ಅವುಗಳನ್ನು ಹುಡುಕಿ ತಂದು ಗಾಡಿಗೆ ಹೂಡಿಕೊಂಡು ಮುಂದೆ ಪ್ರಯಾಣ ಬೆಳಸುತ್ತಿದ್ದರು. ಬಿಡಾರ ಬಿಟ್ಟು ಕಡೆ ಪಾತ್ರೆಗಳನ್ನು, ವಿಗ್ರಹಗಳನ್ನು, ಕನ್ನಡಿಗಳನ್ನು ಒಂದಾದ ಮೇಲೊಂದರಂತೆ ಸಾಲು ಸಾಲಾಗಿ ಇಟ್ಟು ಪ್ರದರ್ಶಿಸುತ್ತಿದ್ದರು. ಬಂದ ಜನರಿಗೆ ನೇರವ

ಜನರಿಗೆ ಅವುಗಳನ್ನು ಮಾರುತ್ತಿದ್ದರು ಎಂಬುದನ್ನು ನೋಡಿದರೆ ಇವರು ಒಂದು ರೀತಿಯ ಅಲೆಮಾರಿ ಜೀವನ ನಡೆಸುತ್ತಿದ್ದರು ಮತ್ತು ತಯರಿಸಿದ ಸಾಮಾಗ್ರಿಗಳನ್ನು ಮಾರಿಯೇ ತಮ್ಮ ಸ್ಥಾನಕ್ಕೆ ತಿರುಗುತ್ತಿದ್ದರು ಮತ್ತು ಅದರಿಂದ ತಮ್ಮ ಉಪಜೀವನವನ್ನು ಮಾಡುತ್ತಿದ್ದರು ಎಂಬುದು ತಿಳಿದು ಬರುತ್ತದೆ.

ಹೀಗೆ ವ್ಯಾಪಾರ ಮಾಡುವರಿಗೆ ವಸ್ತುಗಳನ್ನು ತೆಗೆದುಕೊಂಡ ಶ್ರೀಮಂತ ವರ್ಗದವರು ಕೆಲವೊಮ್ಮೆ ಅದರ ಬೆಲೆಯನ್ನು ಸರಿಯಾಗಿ ಕೊಡದೆ ಸತಾಯಿಸಿರುವ ಸಾಧ್ಯತೆಗಳು ಬರುತ್ತವೆ. ಆಗ ಸಣ್ಣ ಪುಟ್ಟ ಜಗಳವು ಆಗುತ್ತಿದ್ದವು. 'ಮುಂಡರಗಿಯ ಮಾನಪ್ಪ'ನು 'ನಮ್ಮಪ್ಪರು ಮಾರಕ ಹೋದಾಗ ಸಣ್ಣ ಪುಟ್ಟ ಜಗಳಕಾ ಹತ್ತಿದ್ದು ನಾಗಿ ನಮ್ಮಪ್ಪ ಯಾಕಾರ ಮಾಡ್ತೀ ಅಂತ ಅನಿಸತ್ರಿ ಬರೋ ಲಾಭವು ಅಟ ಬುಟ್ರಿ ಬಿಗ್ ಕಂಚಿನ ಕೆಲ ಬಿಟ್ಟ ತಿಂದಾಕ ಇಷ್ಟೆಲ್ಲ ಕಷ್ಟಪಡ್ಬೇಕು' ಎಂದು ತಮ್ಮ ಪರಿಸ್ಥಿತಿಯನ್ನು ಸಂಶೋಧನೆಯ ಸಂದರ್ಭದಲ್ಲಿ ನೋವಿನಿಂದ ಹೇಳುತ್ತಾನೆ. ಈಗ ಬಡಿಗಿ ಕೆಲಸಕ್ಕೆ ಕೈಹಾಕಿ ಜೀವಿಸುವ ವಿಷಯವನ್ನು ವಿಷಾದದಿಂದ ಹೇಳುತ್ತಾರೆ. ಇಂತಹ ಆಧುನಿಕ ಯುಗದಲ್ಲಿ ಎರಕ ಹೊಯ್ದು ಜೀವಿಸುತ್ತೇನೆಂದು ಹೇಳುವ ಧೈರ್ಯ ಇವರಿಗಿಲ್ಲ. ಇವರ ಜೀವನ ಕಂಚು, ತಾಮ್ರ, ಇತ್ತಾಳಿಯು ಬೆಂಕಿಯಲ್ಲಿ ಕರಗಿದ ಹಾಗೆ ಕರಗುತ್ತ ಹೋಗುತ್ತಿದೆ. ಅಷ್ಟೆಲ್ಲ ಕಷ್ಟಪಟ್ಟು ವೃತ್ತಿಯನ್ನು ಮುಂದುವರಿಸಲುಬಾರದು ಇತ್ತ ಬಿಡಲುಬಾರದು ಎಂಬ ಗೊಂದಲದ ನಡುವೆಯೂ ಈ ವೃತ್ತಿಯು ಸೊರಗುತ್ತಿವುದು ಎದ್ದು ಕಾಣುತ್ತದೆ.

ಎರಕ ಹೊಯ್ಯುವ ವಿಧಾನ

ಪ್ರತಿಯೊಂದು ಕುಲಕಸಬುಗಳಿಗೆ ತನ್ನದೇ ಆದ ತಂತ್ರ, ವಿಧಾನ ಪದ್ಧತಿಗಳಿರುತ್ತವೆ. ಆ ಪದ್ಧತಿಯ ಪ್ರಕಾರವಾಗಿ ಕೆಲಸಮಾಡುತ್ತ ಹೋದರೆ ಸಲಿಸಾಗಿ ಕೆಲಸಗಳು ನಡೆಯುತ್ತದೆ. ಇಲ್ಲದಿದ್ದರೆ ಗಣಪ್ಪನ ಮಾಡು ಅಂದ್ರ ಅವರಪ್ಪನ ಮಾಡಿದ್ನಂತೆ ಆಗುತ್ತದೆ. ಉದಾ:- ಚಮ್ಮಾರ ಒಂದು ಜೊತೆ ಚಪ್ಪಲಿಯನ್ನು ಮಾಡಬೇಕೆಂದರೆ ಮೊದಲು ಪಾದದ ಕೆಳಗಿರುವ ಆಕಾರವನ್ನು ತಯಾರಿಸಿಕೊಳ್ಳುತ್ತಾನೆ. ಅದನ್ನು ಬಿಟ್ಟು ಉಂಗುಷ್ಟ ತಯಾರಿಸಿದರೆ, ಕುಂಬಾರ ಗಡಿಗಿ ತಯಾರಿಸುವಾಗ ಮೊದಲು ತಿಗರಿಯನ್ನು ತಿರುಗಿಸಿದರೆ ಅದಕ್ಕೆ ಬೇಕಾಗುವ ಜಿಗಿಮಣ್ಣು ತಂದು ಅಳತೆಗೆ ತಕ್ಕಂತೆ ಕೆಸರನ್ನು ಮಾಡಿದರೆ ಮುಂದೆ ಗಡಿಗೆ ಮಾಡಬಹುದು. ಹಾಗೆ ಕೆಲಸ ಮಾಡುವ ಪದ್ಧತಿಯನುಸಾರವಾಗಿ ವೃತ್ತಿಯನ್ನು ಮಾಡುವ ವಿಧಾನಗಳು ಪ್ರಮುಖವಾಗಿ ಕಂಡುಬರುತ್ತವೆ. ಬಡಗಿ ಮೊದಲು ಗಾಲಿ ಮಾಡುವಾಗ ಕುಂಭವನ್ನು ತಯಾರಿಸಿಕೊಂಡು ನಂತರ ಮುಂದಿನ ಕೆಲಸಕ್ಕೆ ಕೈ ಹಾಕುತ್ತಾರೆ ಮೊದಲು ಹಲ್ಲು, ಬಂಡೀಪುಗಳನ್ನು ತಯಾರಿಸಿಕೊಳ್ಳುವುದಿಲ್ಲ. ಇಂತಹ ನಿಯಮಗಳು ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ಕಂಡು ಬರುತ್ತವೆ. ಅಂತಹ ವಿಧಾನ ಈ ಕಂಚುಗಾರಿಕೆಯಲ್ಲಿಯು ಕಂಡು ಬರುತ್ತವೆ. ಕಂಚುಗಾರರು ವಿಗ್ರಹ, ಮೂರ್ತಿ, ಗಂಟೆ, ಕಹಳೆ, ಅನೇಕ ಉಪಕರಣಗಳನ್ನು ತಯಾರಿಸುತ್ತಿದ್ದರು. ಅದಕ್ಕೆ ತನ್ನದೇ ಆದ ಉಪಕರಣ, ಮೂಲ ವಸ್ತುಗಳು ಬೇಕಾಗುತ್ತವೆ. ಅವುಗಳನ್ನು ಪೂರ್ವಭಾವಿಯಾಗಿ ತಯಾರಿಸಿಕೊಂಡ ನಂತರ ಎರಕ ಹೊಯ್ಯುವ ಕೆಲಸಕ್ಕೆ ಕೈ ಹಾಕಬೇಕು.

ಕಂಚಗಾರು ತಾನು ಮಾಡುವ ವಸ್ತು, ಆಕಾರವನ್ನು ಮೊದಲೇ ಮರದಲ್ಲಿ ಅಥವಾ ಇತರ ವಸ್ತುಗಳಲ್ಲಿ ತಯಾರಿಸಿಕೊಂಡಿರುತ್ತಾರೆ ಅದನ್ನು 'ಅಚ್ಚುಪಡಿ' ಎಂದು ಕರೆಯುತ್ತಾರೆ. ಅಚ್ಚುಪಡಿಯನ್ನು ಜೇಡಿ ಮಣ್ಣಿನಲ್ಲಿ ಇಟ್ಟು ನಂತರ ಆ ಅಚ್ಚು ಪಡಿಯನ್ನು ಅದರಲ್ಲಿ ಎರಕಹೊಯ್ಯುವುದಕ್ಕೆ ಒಂದಿಷ್ಟು ತೂತು ಮಾಡಿರುತ್ತಾರೆ. ಒಂದು ಕಡೆ ಕುಲುಮೆಯ ಮುಂದೆ ಕಂಚುಗಾರ ಹಿಂದೆ ಕಂಚುಗಾರರ ಮಗನೋ ಹೆಂಡತಿಯೊ ಪಂಕವನ್ನು ಅಥವಾ ತಿದಿಯನ್ನು ಎಳೆಯುತ್ತಿರುತ್ತಾರೆ. ಒಲೆಯಲ್ಲಿ ಒಂದು ಕಬ್ಬಿಣದ ಪಾತ್ರೆಯಲ್ಲಿ ಕಂಚು ಇತ್ತಾಳ, ತಾಮ್ರವನ್ನೋ ಕಾಯಿಸುತ್ತಿರುತ್ತಾರೆ. ಆ ಘನ ಪದಾರ್ಥ ನೀರಾಗುವವರೆಗೂ ಕಾಯುತ್ತಲೇ ಇರುತ್ತದೆ. ಕಂಚುಗಾರ ಆಗಾಗ ತನ್ನ ಉಪಕರಣಗಳ ಸಹಾಯದಿಂದ ಹದಕ್ಕೆ ಬಂದಿದೆಯೋ ಇಲ್ಲವೋ ಎಂಬುದನ್ನು ನೋಡುತ್ತಿರುತ್ತಾನೆ. ಕುಲುಮೆಯು

ಮುಂದೆ ಕಂಚುಗಾರರು ಕೆಲಸಮಾಡುವಾಗ ಬಡಿಯಲು, ಚಚ್ಚಲು ಉಪಯೋಗವಾಗುವಂತೆ ಅಡಿಗಲ್ಲು ಇರುತ್ತದೆ. ಒಂದು ಕಡೆ ಅಚ್ಚುಪಡಿ ಇನ್ನೊಂದು ಕಡೆ ಡೋಣಿ ಮುಂದೆ ತನಗೆ ಬೇಕಾಗುವ ವಿಧವಿಧ ಉಪಕರಣಗಳು ಇವುಗಳೆಲ್ಲವನ್ನು ಸುಯಾಗಿಟ್ಟುಕೊಂಡು ಒಲೆಯಲ್ಲಿ ಕಾದಿರುವ ಕಂಚು ನೀರಿನಾಕಾರವಾಗಿ ಪರಿವರ್ತನೆ ಗೊಂಡಿರುತ್ತದೆ. ಚಕ್ಕಳಿಯಿಂದ ಹಿಡಿದುಕೊಂಡು ಅಚ್ಚುಪಡಿಯಲ್ಲಿ ರಂಧ್ರದಲ್ಲಿ ಸುರಿಯುತ್ತಾರೆ. ಅದು ತುಂಬಿದ ತಕ್ಷಣ ಕೆಳಗಿಟ್ಟು ಸ್ವಲ್ಪ ಸಮಯದವರೆಗೆ ಆರಲು ಬಿಟ್ಟಾಗ ಅದು ಅಚ್ಚುಪಡಿಯಲ್ಲಿ ದ್ರವಾಕೃತಿಯಿಂದ ಘನಾಕೃತಿಗೆ ಬಂದಿರುತ್ತದೆ. ನಂತರ ಅಚ್ಚುಪಡಿಯನ್ನು ತೆಗೆದಾಗ ನಾವು ಯಾವ ಆಕಾರದಲ್ಲಿ ಅಚ್ಚುಪಡಿಯನ್ನು ಹಾಕಿರುತ್ತೇವೋ ಆ ಆಕಾರ ತಯಾರಾಗುತ್ತದೆ ಅಂದರೆ ಮುಂದೆ ಆ ವಿಗ್ರಹ ಅಥವಾ ಸಾಮಗ್ರಿಯನ್ನು ಅರದಿಂದ ನಯವಾಗಿ ಉಜ್ಜುತ್ತಾರೆ. ನಯವಾದ ನಂತರ ಕಿಣ್ಣಾಲಿಕೆ ಅಂದರೆ ಲೋಹಕ್ಕೆ ಹೊಳಪು ಬರುವಂತೆ ಉಜ್ಜಲು ಬಳಸುವ ವಸ್ತುವಿನಿಂದ ತಿಕ್ಕುತ್ತಾರೆ. ಆಗ ಒಂದು ಆಕಾರವಾಗಿ ಅಥವಾ ಸಾಮಾಗ್ರಿಯಾಗಿ ಪೂರ್ಣಪ್ರಮಾಣದಲ್ಲಿ ತಯಾರದಂತೆ ಆಗುತ್ತದೆ.

ಇಂತಹ ವಿಧಾನಗಳ ಮೂಲಕ ಕಂಚುಗಾರರು ತಯಾರಿಸುವ ಸಾಮಾಗ್ರಿಗಳನ್ನು ಎರಕ ಹೊಯ್ಯುವ ಮೂಲಕ ಪದ್ಧತಿಗಳನ್ನು ಅನುಸರಿಸುತ್ತಾರೆ. ಅವರು ಯಾವ ಉಪಕರಣಗಳ ಕಲ್ಪನೆಯಿಂದ ಬಂದಿರುವ ಸಾಮಗ್ರಿಗಳನ್ನು ಅಚ್ಚಿನಲ್ಲಿ ತಯಾರಿಸಿಕೊಳ್ಳುತ್ತಾರೆ ಅವರಿಗೆ ಅದೇ ಪ್ರಾಮುಖ್ಯತೆ ಪಡೆದಿರುತ್ತದೆ. ಆದರೆ ಇಂತಹ ವಿಧಾನ ಅಥವಾ ವೃತ್ತಿಗಳು ಆಧುನಿಕ ಕಾಲಕ್ಕೆ ಸಿಲುಕಿ ಜರ್ಜರಿತಗೊಂಡು ನಾಶವಾಗಿವೆ. ಆದರೂ ಜನಾಂಗದವರು ಅಥವಾ ಈ ವೃತ್ತಿಯವರು ಬೆಳಗಾವಿಯ ರಾಯದುರ್ಗದಲ್ಲಿ ಮತ್ತು ಧಾರವಾಡದ ಭಾಗಗಳಲ್ಲಿ ಹೆಚ್ಚು ಕಂಡು ಬರುತ್ತಾರೆ. ಆದರೆ ಅವರು ಕಾಲಕ್ಕೆ ತಕ್ಕಂತೆ ಇತರ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ಸತ್ಯ.

ತಯಾರಿಸುವ ಉಪಕರಣಗಳು

ಕಂಚುಗಾರರು ತಯಾರಿಸುವ ಉಪಕರಣಗಳು ಪ್ರದೇಶದಿಂದ ಪ್ರದೇಶಕ್ಕೆ ಸ್ವಲ್ಪ ಬದಲಾವಣೆಯಾಗುವುದುಂಟು ಉದಾ:- ಧಾರವಾಡ ಮತ್ತು ಬೆಳಗಾವಿಯ ಕಡೆಗೆ 'ಗನ್' ಎಂಬ ಪದವನ್ನು ಉಪಯೋಗಿಸುತ್ತಾ, ದಾವಣಗೆರೆ, ಬಳ್ಳಾರಿ, ದುರ್ಗದಲ್ಲಿ ಸುತ್ತಿಗೆ ಎಂಬ ಪದವನ್ನು ಉಪಯೋಗಿಸುತ್ತಾರೆ. ಒಂದು ಕಡೆ ಕುಲುಮೆ ಅಂದರೆ ಮತ್ತೊಂದು ಕಡೆ ಕುಮ್ಮ ಎಂಬ ಪದಗಳು ಬಳಕೆಗೆ ಬಂದಿರುತ್ತವೆ. ಅದೇನೇ ಇದ್ದರೂ ಸಾಮಾನ್ಯವಾಗಿ ಎಲ್ಲರೂ ಒಂದೇ ರೀತಿಯಲ್ಲಿ ಬಳಸುವ ಪದ, ಶಬ್ದಗಳನ್ನು ಬಳಸಲಾಗಿದೆ. ಆದರೆ ಒಂದು ಮಾತಂತು ನಿಜ ವೃತ್ತಿ ಪದಗಳಿಗೆ ಸಾಮಾನ್ಯವಾಗಿ ವೃತ್ತಿ ವಲಯವನ್ನು ಮೀರಿದ ಬಳಕೆಯ ಪರಿಸರ ವಿರುವುದಿಲ್ಲ. ಈ ಪಂಚ ವೃತ್ತಿಕಾರರಲ್ಲಿ ಹಲವಾರು ಉಪಕರಣಗಳ ಒಂದೇ ಅರ್ಥ ಕೊಡುತ್ತಿದ್ದರೂ ಸ್ವರೂಪ ಮಾತ್ರ ಭಿನ್ನವಾಗಿರುವ ಉದಾಹರಣೆಗಳು ಇವೆ. ಬಡಗಿಯರಲ್ಲಿ ಉಳಿ ಕಮ್ಮಾರರಲ್ಲಿ ಉಳಿಗೂ ವ್ಯತ್ಯಾಸ ಇದೆ. ಈ ಉಪಕರಣ ಎಲ್ಲಾ ವೃತ್ತಿವಲಯಗಳಲ್ಲಿ ಕಂಡುಬರುತ್ತವೆ. (ಪಾಂಚಾಳ) ವೃತ್ತಿಗನುಸಾರವಾಗಿ ಉಪಯೋಗಿಸುವ ಶಬ್ದಗಳು ಬಳಕೆಗೆ ಬರುತ್ತವೆ.

ಅಕ್ಷಿ.	ಅಭಿಷೇಕದ ಪಾತ್ರೆ.
ಅಶ್ವಾರೋಹಣ.	ಉದ್ಧಾರಣೆ.
ಅರಗು.	ಕಹಳೆ.
ಕಿರೀಟ.	ಕೊಡಪಾನ.
ಕೊಳಗ.	ಗಂಟೆ.
ಗಿಂಡಿ.	ಗುಂಡಾಲು.
ಆರತಿ.	ಧೂಪಾರುತಿ.

ಪಂಚಾರತಿ.	ರಥ.
ಆರತಿ.	ಚರಿಗೆ.
ತಂಬಿಗೆ.	ಚಾಮರ.
ಜಂಘ.	ಜಾಗಟೆ.
ಜಾನು.	ಡೋಣಿ.
ತಟ್ಟೆ.	ತಪಾಲಿ.
ತೀರ್ಥಬಟ್ಟಲು.	ದೀಪಾಲೆಕಂಬ.
ದೀವಟಗೆ.	ದೇವತಾ ಮೂರ್ತಿ.
ಹಂಡೆ.	ವಾಹನ. ಸಿಂಹ.
ನೇತ್ರ.	ಪಡ್ವಾಲೆ.
ಪದ್ಮ.	ಪಲ್ಲಕ್ಕಿ.
ಪಾದ.	ಪ್ರಭಾವಳಿ.
ಭಜನೆ ತಾಳ.	ಬಾಂಕಿ.
ಸ್ತನ.	ಶಂಖು.

ಇನ್ನು ಅನೇಕ ಬಳಕೆಯ ವಸ್ತುಗಳು ಮತ್ತು ಪೂಜಾ ಸಾಮಾಗ್ರಿಗಳನ್ನು ಈ ಕಂಚುಗಾರರು ತಯಾರಿಸುತ್ತಾರೆ.

ಉಪಯೋಗಿಸುವ ಉಪಕರಣಗಳು

ವೃತ್ತಿ ಉಪಕರಣಗಳು ಸಾಮಾನ್ಯವಾಗಿ ಕೆಲಸದ ಪ್ರಮಾಣಗನುಗುಣವಾಗಿ ಇರುತ್ತವೆ. ಕಮ್ಮಾರರ ಅಡಿಗಲ್ಲು. ಅಕ್ಕಸಾಲಿಗರ ಅಡಿಗಲ್ಲು ಮತ್ತು ಈ ಕಂಚುಗಾರರ ಅಡಿಗಲ್ಲುಗಳಲ್ಲಿ ವ್ಯತ್ಯಾಸಗಳಿದ್ದರೂ ಹೆಸರು ಮಾತ್ರ ಒಂದೇ. ಬಹುತೇಕ ಅಕ್ಕಸಾಲಿಗರ ಮತ್ತು ಕಂಚುಗಾರರ ಉಪಕರಣಗಳು ಕಂಡು ಬರುವುದು ಸಹಜ ಆದರೂ ಇವರು ಬಳಸುವ ಉಪಕರಣಗಳನ್ನು ಪಟ್ಟಿಮಾಡಲಾಗಿದೆ.

ಅಡಿಗಲ್ಲು	–	ಉಪಕರಣ ತಯಾರಿಸಲು ಬಳಸುವ ದೊಡ್ಡ ಕಬ್ಬಿಣದ ಅಚ್ಚು.
ಇಂಚುಪಟ್ಟಿ	–	ಅಳತೆ ಮಾಪನ.
ಅಚ್ಚುಪಡಿ	–	ಸಿದ್ಧವಾದ ಮೂರ್ತಿ.
ಇಕ್ಕಳ	–	ಹಿಡಿಯಲು ಬಳಸುವ ವಸ್ತು.
ರಸಪಿಕ್ಕ	–	ಒಂದು ಬಗೆಯ ಇಕ್ಕ.
ಜಿನ್ನಪಟ್ಟ	–	ವಸ್ತು ವಿಗ್ರಹಗಳನ್ನು ನಯಗೊಳಿಸಲು ಬೇಕಾದ ವಸ್ತು.
ಕಣ್ಣಾಲಕೆ	–	ಲೋಹಕ್ಕೆ ಹೊಳಪು ಬರುವಂತೆ ಉಜ್ಜಲು ಬಳಸುವ ವಸ್ತು.

ಕತ್ರಿ	–	ತಗಡು ಕತ್ತರಿಸುವ ಉಪಕರಣ.
ಕರ್ವಾಯಿ	–	ತಗಡಿನಿಂದಿ ವಿಗ್ರಹ, ಪಾತ್ರೆ ಯಾವುದೇ ವಸ್ತು ತಯಾರಿಸುವಾಗ ಪೊಳ್ಳಾದ ವಸ್ತುಗಳ ಒಳಗಡೆಯಿಂದ ಉಬ್ಬೆತ್ತಲು ಸರಿಸಮಮಾಡಲು ನೆಲದಲ್ಲಿ ನೆಟ್ಟಿರುವ ಹಾರೆಯಂತಹವಸ್ತು.
ಕೈವಾರ	–	ಅಳತೆಗೆ ಬಳಸುವ ವಸ್ತು.
ಕೊಟ್ಟು	–	ಮರದ ಸುತ್ತಿಗೆ.
ಕೊರವೆ	–	ಲೋಹ ಕರಗಿಸುವ ಪಾತ್ರೆ (ಮೂಸೆ).
ತಂತಿ	–	ತಾಮ್ರ ಮುಂತಾದ ಲೋಹಗಳ ತಂತಿ ಎರಕ ಒಡೆಯದಿರಲಿ ಎಂದು ಇದರಿಂದ ಕಟ್ಟುತ್ತಾರೆ.
ಟಾಕಿ	–	ಲೋಹ ಕಲ್ಲು ಇವನ್ನು ಕೆತ್ತಿ ಆಕಾರಕ್ಕೆ ತರುವ ಒಂದು ಬಗೆಯ ಉಕ್ಕಿನ ಬಾಯಿಯ ಉಳಿ.
ತಂಡಾಸ	–	ವಸ್ತುಗಳನ್ನು ಹಿಡಿಯುವ ಚಿಮುಟದಂತಹ ದೊಡ್ಡ ಉಪಕರಣ.
ತಿದಿ.	–	ಕುಲುಮೆಯಲ್ಲಿ ಬೆಂಕಿಗೆ ಗಾಳಿ ಒದಗಿಸುವ ಉಪಕರಣ.
ತಿದ್ದುಗುಂಡು	–	ಕೊಡದ ಇತರೆ ಪಾತ್ರೆಗಳ ತಗ್ಗೆತ್ತಲು ಬೇಕಾದ ಉಪಕರಣ.
ತಿಲ ಕಜ್ಜಿಣ	–	ಲೋಹರಸ ಬಿಡಲು ಸೇರಿಸಲು ಬೇಕಾದವಸ್ತು.
ಹಟ್ಟಾಣಿ	–	ವಸ್ತುವಿನ ಏಣು ಮುರಿಯಲು ಬೇಕಾದವಸ್ತು.
ನಕಾಶೆಮಣೆ	–	ನಕಾಸೆಮಣೆ ತಯಾರಿಸಬೇಕದ ವಸ್ತುವಿನ ಪೂರ್ವ ನಕ್ಷೆ ಹಾಕಿಕೊಳ್ಳಲು ತಗಡನ್ನು ಇಟ್ಟುಕೊಳ್ಳುವ ಮಣೆ.
ಪಟ್ರೋಲ್	–	ವಸ್ತುವಿಗ್ರಹ ನಯಗೊಳಿಸಲು ಬೇಕಾದವಸ್ತು.
ಬ್ರಷ್	–	ಬಣ್ಣ ಬಳಿಯುವ ಉಪಕರಣ.
ಪತ್ರಸಮಣೆ	–	ತೊಡೆಗೆ, ವಿಗ್ರಹಕ್ಕೆ ಆಧಾರವಾಗಿಟ್ಟುಕೊಂಡು ಕೆಲಸ ಮಾಡುವಮಣೆ.
ಸುತ್ತಿಗೆ	–	ಬಡಿಯುವ ವಸ್ತು.
ಸಾಣೆಕಲ್ಲು	–	ಮಸೆಯುವುದಕ್ಕೆ ಬಳಸುವ ವಸ್ತು.

ಇತ್ಯಾದಿ ಉಪಕರಣಗಳನ್ನು ಬಳಸಿಕೊಂಡು ಎರಕ ಹೊಯ್ಯುವ ಕಾರ್ಯದಲ್ಲಿ ನಿಪುಣರಾಗಿದ್ದಾರೆ. ಕೆಲಸದ ಸಂದರ್ಭದಲ್ಲಿ ತಾವು ತಯಾರಿಸುವ ವಸ್ತುವಿಗೆ ತಕ್ಕಂತೆ ಕೆಲವೊಮ್ಮೆ ಹೊಸ ಉಪಕರಣಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಈ ಎಲ್ಲಾ ಉಪಕರಣಗಳನ್ನು ಒಟ್ಟಾಗಿ ಪಾಂಚಾಳರು ತಾವು ತಯಾರಿಸುವ ಉಪಕರಣಗಳನ್ನು ಮಾಡಲು ಬಳಸುವ ಉಪಕರಣಗಳನ್ನು ತಾವೆ ತಯಾರಿಸಿಕೊಳ್ಳುವ ಪದ್ಧತಿ, ಚಾಕಚಕ್ಯತೆ, ತಮ್ಮಲ್ಲಿ ಬಳಸಿಕೊಂಡಿದ್ದಾರೆ.

ಉದಾಹರಣೆಗೆ ಕುಂಬಾರನು ಗಡಿಗೆ ತಯಾರು ಮಾಡಬೇಕೆಂದರೆ ಅದಕ್ಕೆ ಪೂರಕವಾಗಿ ತಿಗರಿ ಬೇಕು. ಆದರೆ ಈ ತಿಗರಿಯನ್ನು ಅವರೇ ತಯಾರಿಸಿಕೊಳ್ಳುವುದಿಲ್ಲ ಬದಲಾಗಿ ಈ ಬಡಗಿಯರಿಂದಲೇ ನಿರ್ಮಾಣವಾಗುತ್ತದೆ. ಕಮ್ಮಾರ ರಂಪಿಗೆಯನ್ನು ಕಮ್ಮಾರ ಮಾಡುತ್ತಾನೆ ಆದರೆ ಬಡಗಿ, ಕಮ್ಮಾರ ಇತರ ಮೂವರು ಕೂಡ ತಮ್ಮ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳುವ ಜನಾಂಗ ವೆಂದರೆ ಈ ಪಾಂಚಾಳರು. ಅದು ಕೆಲಸ ಮಾಡುವಾಗ ಕೆಲಸಕ್ಕೆ ತಕ್ಕಂತೆ ಉಪಕರಣದ ಪ್ರಮಾಣವನ್ನು ತಿಳಿದು ಹೊಸಹೊಸ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಾರೆ. ಇದೊಂದು ವಿಶೇಷ.

ಈ ವೃತ್ತಿಯನ್ನು ನಿರ್ವಹಿಸುತ್ತಿದ್ದ ಕಂಚುಗಾರರು ಸಂಪೂರ್ಣವಾಗಿ ಹೊಸ ಯುಗಕ್ಕೆ ಎದುರಿಸಲಾಗದೆ ಈ ಕಾಯಕವನ್ನು ಬಿಟ್ಟು ಬಿಟ್ಟಿದ್ದಾರೆ. ಆದರಿಂದ ಬದುಕುವ ಕಾಲ ಹೋಗಿದೆ ಬದಲಾಗಿ ಕಾಲಕ್ಕೆ, ಪರಿಸ್ಥಿತಿಗೆ ಹೊಂದಿಕೊಳ್ಳಲು ಹರಸಾಹಸ ಮಾಡುವ ಬದಲು ತಮ್ಮ ಕುಲದವರು ಮಾಡುವ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು, ಕಂಚುಗಾರರೆಂದು ಮನೆತನ ನಾಮವನ್ನು ಇಟ್ಟುಕೊಂಡು ಬಡಗಿ, ಕಮ್ಮಾರಿಕೆ, ಶಿಲ್ಪಿ ವೃತ್ತಿಯಲ್ಲಿ ನಿರತರಾಗಿರುವುದನ್ನು ಸಾಮಾನ್ಯವಾಗಿ ಕಾಣಬಹುದು. ನಾವು ಕಂಚುಗಾರರು ಎಂದು ಎದೆ ತಟ್ಟಿ ಹೇಳಿಕೊಳ್ಳದೆ ನಾಚಿಕೆಯಿಂದ ತಲೆತಗ್ಗಿಸುವಂತಾಗಿದೆ. ಈ ಕರಕುಶಲ ಕರ್ಮಿಗಳ ಪರಿಸ್ಥಿತಿಯೇ ಹಾಗೆ, ಹೊಸ ಜಗತ್ತಿನಲ್ಲಿ ಬದುಕಲು ದೇಶಿ ವೃತ್ತಿಗಳು ಹೆಣಗಾಡುತ್ತಿವೆ ಎಂಬ ಮಾತು ಸತ್ಯವಾಗಿ ಕಾಣುತ್ತದೆ.

ಈ) ಅಕ್ಕಸಾಲಿಗ

ಅಕ್ಕಸಾಲಿಗರು, ಸ್ವರ್ಣಗಾರರು, ಅಕ್ಷಾಲರು ಎಂದು ಕರೆಸಿಕೊಳ್ಳುವ ಇವರು ವಿಶ್ವಕರ್ಮನ ಮಕ್ಕಳಲ್ಲಿ ಅಥವಾ ಪಾಂಚಾಳರಲ್ಲಿ ಒಬ್ಬರು. ಸಾಮಾನ್ಯವಾಗಿ ವೃತ್ತಿಯಿಂದ ಜಾತಿಯು ಬೆಳೆದಿರುವುದು ಗೊತ್ತಿರುವ ವಿಚಾರವೇ. ಈ ಪಾಂಚಾಳರಲ್ಲಿ ಅಕ್ಕಸಾಲಿಗರು ತಮ್ಮ ಅಸ್ತಿತ್ವವನ್ನು ಬಡಗಿ, ಕಮ್ಮಾರ, ಕಂಚುಗಾರ ಶಿಲ್ಪಿಗಳಿಗಿಂತಲೂ ಹೆಚ್ಚಾಗಿ ಉಳಿಸಿಕೊಂಡು ಜೊತೆಗೆ ಸುಖ ಜೀವನ ನಡೆಸುತ್ತಿದ್ದಾರೆ.

ಪಾಂಚಾಳರ ಇತರ ನಾಲ್ಕು ವೃತ್ತಿಕಾರರಿಗೂ ಮತ್ತು ಇವರಿಗೂ ಸ್ವಲ್ಪ ಅಂತಸ್ತಿನ ವಿಷಯದಲ್ಲಿ ಏರುಪೇರು ಕಂಡುಬರುತ್ತದೆ. ಏಕೆಂದರೆ ಒಂದು ಅಪವಾದ ಎಂದು ಹೇಳುವ ಈ ಕಾರಣಗಳನ್ನು ನೋಡಬಹುದು. ಕಮ್ಮಾರ, ಬಡಗಿಗಳ ವ್ಯವಹಾರಗಳೆನಿದ್ದರೂ ರೈತರಲ್ಲಿ ಹಾಗೂ ಜನ ಸಾಮಾನ್ಯರಲ್ಲಿ. ಸಮಾಜದ ಕೆಳಸ್ತರದವರ ಹತ್ತಿರ ಇವರ ಸಂಪರ್ಕ ಇರುತ್ತದೆ. ಮತ್ತು ಇವರು ಯಾವಗಲೂ ನಡಬಗ್ಗಿಸಿಯೇ ನೆಲವನ್ನು ನೋಡುತ್ತಾ ಅಲ್ಲೆ ಉಳಿದುಕೊಳ್ಳುತ್ತಾರೆ. ಆದರೆ ಅಕ್ಕಸಾಲಿಗರು ಶ್ರೀಮಂತ ವರ್ಗದವರ ಹತ್ತಿರ ಸಂಪರ್ಕವನ್ನು ಇಟ್ಟುಕೊಂಡಿರುತ್ತಾರೆ. ಏಕೆಂದರೆ ಬಂಗಾರವನ್ನು ಅಲಂಕಾರಕ್ಕಾಗಿ ಬಳಸುವ ಧನಿಕರ ತುತ್ತು ಅನ್ನಕ್ಕೆ ಬಿಸಿಲಲ್ಲಿ ಬೆವರು ವಾಸನೆ ಸುರಿಯುತ್ತ ದುಡಿಯುವ ಜನರಲ್ಲಿ ದುಡಿಯುವವರಿಗೆ ಅಲಂಕಾರಕ್ಕೆಲ್ಲಿ ಸಮಯ. ಅಷ್ಟಕ್ಕೂ ಅಕ್ಕಸಾಲಿಗಳ ಆದಾಯ ಹೆಚ್ಚುತ್ತಾ ಹೋಗುತ್ತದೆ. ಇವರು ಬರುಬರುತ್ತಾ ಮೇಲೇರುತ್ತಾರೆ ವಿನಹ ಎಂದೂ ಕೆಳಗೆ ನೋಡುವುದಿಲ್ಲ. ನೋಡುವುದೇನಿದ್ದರೂ ಮೇಲೆಯೇ. ಹಾಗಾಗಿ ಪಾಂಚಾಳರಲ್ಲಿ ಸುಸ್ಥಿತಿಯಲ್ಲಿರುವವರು ಎಂದರೆ ಈ ಅಕ್ಕಸಾಲಿ ವೃತ್ತಿಯವರೇ. ಸ್ವರ್ಣಗಾರಿಕೆಯು ಅತ್ಯಂತ ಸೂಕ್ಷ್ಮವಾದ ಹಾಗೂ ನಿಖರವಾದ ಲೆಕ್ಕಚಾರದಿಂದ ಕೂಡಿದ ಕಸಬು, ಕಂಠಹಾರ, ಪಟ್ಟಿ, ತೋಳುಬಂದಿ, ಕಂಕಣ, ಕಟಿಸೂತ್ರ, ನೂಪುರ, ಕುಂಡಲ, ತಾಳಿ, ಮೂಗುತಿ, ಬೆಂಡೋಲೆ, ಕಾಲುಂಗುರ ಮುಂತಾದ ಆಭರಣಗಳ ಉಲ್ಲೇಖವು ಶಾಸನಗಳಲ್ಲಿ ಕಂಡು ಬರುತ್ತದೆ. ರಾಜ ಮಹಾರಾಜರು ಉಪಯೋಗಿಸುತ್ತಿದ್ದ ಆಭರಣ ಮತ್ತು ರಾಣಿಯರು ಬಳಸುತ್ತಿದ್ದ ಅಲಂಕಾರಿಕ ವಸ್ತುಗಳು ಹಾಗೂ ಆ ರಾಜ್ಯದ ಆರ್ಥಿಕ ಪರಿಸ್ಥಿತಿಯ ಮಾಪಕವಾದ ನಾಣ್ಯಗಳು ಪ್ರಮುಖ ಪಾತ್ರವಹಿಸುವ ವೃತ್ತಿ ಈ ಸ್ವರ್ಣಗಾರಿಕೆಯ ಜವಾಬ್ದಾರಿಯಾಗಿತ್ತು.

'ಅಕ್ಕಸಾಲಿ' ಎಂಬ ಪದವು ವೃತ್ತಿವಾಚಕವಾಗಿ ಕಂಡುಬರುತ್ತದೆ. ಈ ದೇಶದಲ್ಲಿ ಜಾತಿಗಳು ನಿರ್ಮಾಣವಾಗಿದ್ದರೂ ವೃತ್ತಿಯಿಂದ ಹುಟ್ಟಿನಿಂದ ಮನುಷ್ಯರೆಲ್ಲರೂ ಒಂದೇ ಆಗಿರುತ್ತಾರೆ. 'ಅಕ್ಕಸಾಲಿ' ಇದಕ್ಕೆ ಅರ್ಕಸಾಲೆಯು ಮೂಲಪದ, ಅರ್ಕ ಎಂದರೆ ಅರಗು. ಅರಗು ಕರಗಿಸುವ , ಛಟ್ಟ ಇಳಿಸಿ ಆಭರಣಗಳಿಗೆ ತುಂಬುವ ಶಾಲೆಯೇ ಅರ್ಕಶಾಲೆ, ಕೇಟಿಲ್ಯನು ಬಂಗಾರ ಒಡವೆ ಮಾಡುವ ಶಾಲೆಗೆ 'ಅಕ್ಷಶಾಲೆ' ಎಂದಿದ್ದಾನೆ. (ಪಾಂಚಾಳ ವೃತ್ತಿ ಪರಿಕರಗಳು–ಡಾ. ಪಾಂಡುರಂಗ ಬಾಬು ಪ್ರಸ್ತಾವನೆಯಲ್ಲಿ) ಅರ್ಕಸಾಲೆಗೆ 'ಇಗ' ಪ್ರತ್ಯಯ ಸೇರಿ ಅಕ್ಕಸಾಲಿಗ ಎನ್ನುವ ಜಾತಿವಾಚಕವಾಗಿಯೂ 'ಇಕೆ' ಪ್ರತ್ಯಯದಿಂದಾಗಿ ವೃತ್ತಿಯಾಗಿ ಬಳಕೆಗೆ ಬಂದಿರಬಹುದೆಂದು ಊಹಿಸಲಾಗಿದೆ. ಇವರ ಇತಿಹಾಸಕ್ಕೆ ಸಂಬಂಧಿಸಿದ ವಿವರಗಳು ಮೌಖಿಕವಾಗಿ, ಶಾಸನಗಳಲ್ಲಿ, ಗ್ರಂಥಗಳಲ್ಲಿ ಉಲ್ಲೇಖಿತವಾಗಿರುವುದನ್ನು ಕಾಣಬಹುದು. ಜನಪದ ಲೋಕದಲ್ಲಿ ನಾಡಿನ ಇತಿಹಾಸ, ಸಮುದಾಯದ ಇತಿಹಾಸಗಳು ಇರುವುದನ್ನು ಜನರ ನಾಲಿಗೆಯ ತುದಿಯ ಮೇಲೆ ನಲಿದಾಡುವ ಕಥೆ, ಹಾಡು, ಪುರಾಣಗಳೂ ನಾಡಿನ ಭವ್ಯ ಪರಂಪರೆಯು ಅಡಗಿರುತ್ತದೆ ಎಂಬ ಅರಿವು ನಮಗಿಲ್ಲವಾಗಿದೆ. ಜನಪದ ವಿದ್ವಾಂಸರು ಈ ಮಾತನ್ನು ಆಗಾಗ ಹೇಳುತ್ತಲೇ ಬಂದಿದ್ದಾರೆ. ಹಾಗೆ ಮೌಖಿಕದಲ್ಲಿ ಈ ಅಕ್ಕಸಾಲಿಯ ಬಗ್ಗೆ ಗುಂಡಗತ್ತಿ ಚಂದ್ರಮ್ಮನವರು ಹೇಳಿದ ಕಥೆಯನ್ನು ನೋಡಬಹುದು.

ದೇವಶಿಲ್ಪಿ ವಿಶ್ವಕರ್ಮ ತನ್ನ ಮಗಳಾದ ಸಂಜ್ಞಾಳನ್ನು ಸೂರ್ಯನಿಗೆ ಮದುವೆ ಮಾಡಿಕೊಟ್ಟನು. ಸೂರ್ಯನ ಕಿರಣಗಳನ್ನು ಆಕೆಗೆ ಸಹಿಸಲಾಗಲಿಲ್ಲ. ಆತನ ಸನಿಹಕ್ಕೆ ಹೋಗಲು ಆಕೆಗೆ ಸಾಧ್ಯವಾಗಲಿಲ್ಲ. ತನ್ನ ಪ್ರತಿರೂಪದ ಛಾಯೆಯನ್ನು ಆತನ ಬಳಿಬಿಟ್ಟು ಆಕೆ ತನ್ನ ತಂದೆಯ ಬಳಿ ಓಡಿ ಬಂದು ತನ್ನ ಕಷ್ಟವನ್ನು ತೋಡಿಕೊಂಡಳು. ಮಗಳ ಕಷ್ಟವನ್ನರಿತ ವಿಶ್ವಕರ್ಮನು ಸೂರ್ಯನಿಗೆ ಸಾಣೆ ಹಿಡಿದು ಆತನ ತೀಕ್ಷ್ಣವಾದ ಕಿರಣಗಳನ್ನು ಮೊಂಡುಗೊಳಿಸಿ ತನ್ನ ಮಗಳನ್ನು ಆತನ ಬಳಿಗೆ ಕಳುಹಿಸಿಕೊಟ್ಟನು. ಸೂರ್ಯನನ್ನು ಸಾಣೆಗೆ ಹಿಡಿದು ವಿಶ್ವಕರ್ಮನಿಗೆ ಅರ್ಕಸಾಣಿಗ, ಅರ್ಕಸಾಲಿಗ, ಅಕ್ಕಸಾಲಿಗ ಎಂದು ಹೆಸರು ಬಂದಿತು. ಆತನ ಮಕ್ಕಳನ್ನು ಕೂಡ ಅಕ್ಕಸಾಲಿ ಎಂದು ಕರೆಯುತ್ತಾರೆ ಎಂದು ಕಥೆಯನ್ನು ಹೇಳುತ್ತಾರೆ. ಕಥೆ ಹೀಗಿದ್ದರೂ ಸಂಶೋಧಕರು ಈ ವಿವರದ ಬಗ್ಗೆ ಬೇರೆಯೇ ಅರ್ಥವನ್ನು ವ್ಯಕ್ತಪಡಿಸುತ್ತಾರೆ. ಆದರೂ ಇವೆರಡೂ ಇವರ ಇತಿಹಾಸಕ್ಕೆ ಅವಶ್ಯಕ. ಆದರೂ ಈ ಅಕ್ಕಸಾಲಿಗಳ ದಾಖಲೆಗಳನ್ನು ಗ್ರಂಥದ ಉಲ್ಲೇಖಗಳೂ ಕೂಡ ಇವರಿಗೆ ಸಂಬಂಧಿಸಿದಂತೆ ವಿವರಗಳು ಸಿಗುತ್ತವೆ.

ಶಾಸನಗಳ ಉಲ್ಲೇಖ

ಅಕ್ಕಸಾಲಿಗರು ನಿರ್ವಹಿಸಿ ಕೊಂಡು ಬಂದಿರುವುದನ್ನು ಇವತ್ತಿಗೂ ಏಕೆ ಮುಂದೆಯೂ ಕಾಣಬಹುದು. ಪಾಂಚಾಳರಲ್ಲಿ ಒಬ್ಬರಾದ ಅಕ್ಕಸಾಲಿಗರು ಈ ವೃತ್ತಿಯೇ ಜೀವಾಳ. ಹಿಂದಿನ ಕಾಲದಿಂದಲೂ ಇಂದಿನವರೆಗೂ ಅವರೇ ಕಸಬನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಆದರೆ ಬಹುತೇಕ ವೃತ್ತಿಗಳನ್ನು ಇಂದು ಇತರ ಜನಾಂಗದವರು ಅಂದರೆ ಮಾರವಾಡಿಗಳು ತಮ್ಮ ಬಂಡವಾಳದಿಂದ ಈ ವೃತ್ತಿಯನ್ನು ವಶಪಡಿಸಿಕೊಂಡಿದ್ದಾರೆ. ಆದರೂ ಈ ವೃತ್ತಿಗೆ ಬಹುಬೇಡಿಕೆಯಿಂದ ಹೊಸ ಹೊಸತರದ ಆಭರಣಗಳನ್ನು ಸೃಷ್ಟಿಸುವುದರಿಂದ ಬೇರೆಯವರ ಪಾಲಾಗುವಂತಾಗಿದೆ. ಈ ಪಾಂಚಾಳರು ಬಹುತೇಕ ಆರ್ಥಿಕವಾಗಿ ಹಿಂದುಳಿದುದರಿಂದ ಈ ವೃತ್ತಿ ಕೈಜಾರುತ್ತಲಿದೆ.

ಕ್ರಿ.ಶ. ೭೫೦ ರಲ್ಲಿ ಪೊನಾಚಾರಿ ಎಂಬುವನು ಕೋಟೋತಗೌಡರ ಮಗ ವೆಳಚ್ಚಗೌಡನಿಗೆ ಒಂದು ಪಟ್ಟವನ್ನು ಮಾಡಿಕೊಟ್ಟಿದ್ದಾನೆ. ಇದನ್ನು ಸಂಪಾದಕರು ಕ್ರೌನ್‌ಬಾಂಡ್ ಎಂದು ಹೇಳಿದ್ದಾರೆ. ಇದು ಅರಸರು ಧರಿಸುವ ಕಿರೀಟದ ಪಟ್ಟಿಕೆ. ೧೭೫೯–೬೦ ರ ಒಂದು ಶಾಸನದಲ್ಲಿ ಅಕ್ಕಸಾಲೆ ಕಾಳೋಜಿ ಎಂಬುವನು ಹೊಯ್ಸಳ ನರಸಿಂಹ ಮಹಾರಾಜನಿಗೆ ಅದೇನೋ ಬಂಗಾರದ ಕೆಲಸ ಪಿಸತಾಯಾನ ಮಾಡುವುದಕ್ಕೆ ಅವನಿಗೆ (ಒಂದು) ಗದ್ದೆಹೊಲವನ್ನು ಕೊಡುಗೆಯಾಗಿ ಬಿಟ್ಟುಕೊಡಲಾಗಿದೆ ಎಂದು ಉಲ್ಲೇಖವಾಗಿದೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಿಗಾರರು ಡಾ.ಕುಮಾರಸ್ವಾಮಿ ಪುಟ–೭೭) ಇವರಿಂದ ಈ ವೃತ್ತಿಯವರಿಗೆ ರಾಜರಿಂದ ಹೆಚ್ಚಿನ ಮನ್ನಣೆ ದಾನ ದತ್ತ ನೀಡಿದುದಾಗಿಯೂ ತಿಳಿ ದು ಬರುತ್ತದೆ.

೧೪೧೫ ರ ಹಿಂದೂಪುರ ತಾಲೂಕಿನ ಗೋನಿವರಿಪಳ್ಳಿಯ ಶಾಸನವು ಹೀಗೆ ಹೇಳುತ್ತದೆ. ವಿಜಯನಗರದ ಅರಸು ಹರಿಹರನ ಮಗ ದೇವರಾಯ ಮಹಾರಾಯನಿಗೆ ಅರಮನೆಯ ಹಜಾರ ಸಿಂಹಾಸನವನ್ನು ಪಂಚಾಳಕೀಯವರು ಅಂದರೆ ಅಕ್ಕಸಾಲಿಗಳು ಚಿನ್ನದಲ್ಲಿ ಮಾಡಿಕೊಡುತ್ತಾರೆ. ಇದನ್ನು ನೋಡಿ ಸುಪ್ರೀತನಾದ ಮಹಾರಾಜನು ಈ ಪಾಂಚಾಳರಿಗೆ ಕುದುರೆ ಎತ್ತು, ಎಮ್ಮೆ, ತೊತ್ತು ಬಂಡಿ ಮತ್ತು ಆಭರಣಗಳ ಮೇಲಿನ ತೆರಿಗೆಯನ್ನು ಮನ್ನಾ ಮಾಡಿ ಗೌರವಿಸುತ್ತಾನೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು–ಡಾ. ಕುಮಾರಸ್ವಾಮಿ ಪುಟ–೭೭) ಆಭರಣಗಳ ಮೇಲಿನ ತೆರಿಗೆಯನ್ನು ಮತ್ತು ಅಕ್ಕಸಾಲಿಗಳು ರಾಜಮನ್ನಣೆ ಪಡೆದಿದ್ದರು ಎಂಬ ಅಂಶವು ಅವರ ಇತಿಹಾಸದ ಮೇಲೆ ಬೆಳಕು ಹಾದುಬರುತ್ತದೆ.

ಕೇತೋಜ ಕಾಲವನ್ನೇ ಹೇಳಿಲ್ಲದ ಶಾಸನವು ಆತನನ್ನು ಹೆಸರಿಸುತ್ತದೆ. ಈತ ಇಲ್ಲಿ ಕೇವಲ ಈ ಶಾಸನವನ್ನು ಕೊರೆದ ಕಂಡರಣೆಕಾರ. ಇವನ ತಂದೆ ಬಸವೋಜ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಕೇವಲ ಕಂಡರಣೆಕಾರನಾದ ಇವನು ಚತುರನಾದ ಅಕ್ಕಸಾಲಿ ಪದಕದ, ಮುಕುಟದ, ಕೇಯೂರದ ಕೆಲಸದವನು ಕೂಡ ಆಗಿದ್ದನು. ತ್ರಾಸು, ಕಟ್ಟಳೆ, ಒರೆಗಲ್ಲು, ಮಚ್ಚರಗಡ್ಡಿ, ಚಿನ್ನದ ಹಲಗೆ, ಮೇಣ ಮೊದಲಾದವನ್ನು ಉಪಯೋಗಿಸಿ ಅಕ್ಕಸಾಲಿಗರು ಆಭರಣಗಳನ್ನು ತಯಾರಿಸುತ್ತಿದ್ದರೆಂದು ಕ್ರಿ.ಶ. ಸುಮಾರು ೧೨೩೩ ರ ಶಿಶಿಮಾಯಣನ ಅಂಜನಾ ಚರಿತ್ರೆಯ ವರ್ಣಿಸುತ್ತದೆ. ಇದರಿಂದ ಅಕ್ಕಸಾಲಿಗರು ಆಭರಣಗಳನ್ನು ತಯಾರಿಸುವಾಗ ಅದಕ್ಕೆ ಪೂರಕವಾದ ವಸ್ತುಗಳನ್ನು ವ್ಯವಸ್ಥಿತವಾಗಿ ಸೂಕ್ಷ್ಮರೀತಿಯಲ್ಲಿ ಮಾಡುತ್ತಿದ್ದರು. ಜೊತೆಗೆ ಈ ಕುಲದಲ್ಲಿ ಒಂದೇ ವೃತ್ತಿಯನ್ನು ಮಾಡುತ್ತಿರಲಿಲ್ಲ ಶಾಸನ ಕೊರೆಯುವುದನ್ನೂ ನಿರ್ವಹಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ.

ನಾಣ್ಯಗಳು ಆ ರಾಜ್ಯದ, ಆ ರಾಷ್ಟ್ರದ ಚಲಾವಣೆಯಲ್ಲಿರುವ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತವೆ. ಈ ನಾಣ್ಯಗಳು ರಾಜರ ಅಡಿಯಲ್ಲೇ ನಿರ್ಮಿಸುತ್ತಿದ್ದರು. ತಾಮ್ರ, ಇತ್ತಾಳೆ, ಬಂಗಾರ, ಬೆಳ್ಳಿ ಇತ್ಯಾದಿಗಳ ನಾಣ್ಯಗಳು ಚಲಾವಣೆಯಲ್ಲಿದ್ದವು ತಾಮ್ರ, ಇತ್ತಾಳೆ ನಾಣ್ಯಗಳು ಆರ್ಥಿಕ ಹಿನ್ನಡೆಯನ್ನು ಹೇಳಿದರೆ ಬೆಳ್ಳಿ ಬಂಗಾರವು ಆ ರಾಷ್ಟ್ರದ ಆರ್ಥಿಕವಾಗಿ ಮುನ್ನಡೆ ಅಥವಾ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ. ಈ ನಾಣ್ಯಗಳನ್ನು ತಯಾರಿಸಲು ಈ ಅಕ್ಕಸಾಲಿಗಳು ನೆರವಾಗುತ್ತಿದ್ದರು. ಅವರ ಕಮ್ಮಟಗಳಲ್ಲೇ ನಾಣ್ಯಗಳು ತಯಾರಾಗುತ್ತಿದ್ದವು ಎಂಬುದನ್ನು ಈ ಕೆಳಗಿನ ಉದಾಹರಣೆಗಳನ್ನು ನೋಡಬಹುದು.

ನಾಣ್ಯಗಳನ್ನು ಟಂಕಿಸುತ್ತಿದ್ದ ಕಾರ್ಯಗಾರಗಳನ್ನು ಕಮ್ಮಟಗಳೆಂದೂ ಅಚ್ಚಿನ ಟಂಕ ಸಾಲೆಗಳೆಂದೂ ಕರೆಯುತ್ತಿದ್ದರು. ನಾಣ್ಯಗಳನ್ನು ಕೇಂದ್ರ ಸರ್ಕಾರವು ಮುದ್ರಿಸುತ್ತಿರಲಿಲ್ಲ. ಸರ್ಕಾರದಿಂದ ಪರವಾನಗಿಯನ್ನು ಪಡೆದು ಖಾಸಗಿ ಸಂಸ್ಥೆಗಳು ಈ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಸರ್ಕಾರವು ಇವುಗಳ ಮೇಲೆ ಹತೋಟಿಯನ್ನು ಮಾತ್ರ ಇಟ್ಟುಕೊಂಡಿರುತ್ತಿತ್ತು. ಸರ್ಕಾರದ ಅಧಿಕಾರಿಯು ಟಂಕಿಸಲ್ಪಟ್ಟ ನಾಣ್ಯಗಳನ್ನು ಪರೀಕ್ಷಿಸಿ ರುಜುವಾತು ಪಡಿಸುತ್ತಿದ್ದರು (ಕುಪ್ಪಳಿ ಜಿ.ಆರ್. ಪೂರ್ವೋಕ್ತ ಪು–೧೦೯) ಅನಂತರ ಅವುಗಳನ್ನು ಚಲಾವಣೆಗೆ ಬಿಡುತ್ತಿದ್ದರು. ಚಿನ್ನದ ಬೆಳ್ಳಿಯ, ತಾಮ್ರದ ನಾಣ್ಯಗಳನ್ನು ಕಮ್ಮಟದಲ್ಲಿ ಟಂಕಿಸುತ್ತಿದ್ದರು. ಅತಿಹೆಚ್ಚು ಬೆಲೆ ಬಾಳುವ ಚಿನ್ನದ ನಾಣ್ಯಗಳನ್ನು ನಿಖರವಾಗಿಯೂ ನಿರ್ಧಿಷ್ಟವಾಗಿಯೂ ಟಂಕಿಸಬೇಕಾಗುತ್ತಿದ್ದರಿಂದಲೂ ಗುರುತರ ಜವಾಬ್ದಾರಿಯ ಕೆಲಸವಾದ್ದರಿಂದಲೂ ಚಿನ್ನ, ಬೆಳ್ಳಿಯ ತೂಕದಲ್ಲಿ ನಿಷ್ಣಾತರೂ, ಜಾಣರೂ, ವ್ಯವಹಾರಜ್ಞರೂ, ಜವಾಬ್ದಾರಿಯುತರೂ, ನಂಬಿಕೆಗೆ ಅರ್ಹರೂ ಆದ ಪ್ರಮಾಣಿಕವಾದ ವ್ಯಕ್ತಿಗಳನ್ನು ಈಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದರು. ಅವರೇ ಅಕ್ಕಸಾಲಿಗರಾಗಿರುತ್ತಿದ್ದರು. ನೇರವಾಗಿ ಅಕ್ಕಸಾಲಿಗಳು ಅಥವಾ ಓಜಗಳೇ ಕಮ್ಮಟದ ಒಡೆಯರಾಗಿರುತ್ತಾರೆ.

ಡಾ. ಎಂ. ಚಿದಾನಂದ ಮೂರ್ತಿಯವರು (ಪೂರ್ವೋಕ್ತ ಪು–೩೮೯)ರಲ್ಲಿ ಹೇಳುವಂತೆ ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗಳನ್ನು ರಾಜನು ಕಮ್ಮಟದಲ್ಲಿ ನೇಮಿಸಿಕೊಳ್ಳುತ್ತಿದ್ದನು. ಅಕ್ಕಸಾಲಿಗಳು ಅಥವಾ ಕಮ್ಮಟದ ಒಡೆಯರು ತಾವೇ ಪ್ರತ್ಯೇಕವಾದ ಶ್ರೇಣಿಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದರು. ಒಂದು ಕಮ್ಮಟಕ್ಕೆ ಒಬ್ಬ ಒಡೆಯನಿರುತ್ತಿದ್ದ

ಅವರ ಜೊತೆಯಲ್ಲಿ ಮತ್ತೂ ಕೆಲವು ಟಂಕಗಳು ಅಥವಾ ಅಚ್ಚುಗಳು ಸಾಂಕೇತಿಕವಾಗಿ ದೊರೆಯುತ್ತಿದ್ದವು ಎಂದು ಹೇಳುತ್ತಾರೆ. ಆದರೆ ಇಲ್ಲಿ ಒಂದು ಮಾತು ಹೇಳಬೇಕೆಂದರೆ ಇವೆಲ್ಲವು ರಾಜನ ಅಡಿಯಲ್ಲೇ ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಬಿಂಬಿಸಲಿಕ್ಕೆ ನಿದರ್ಶನ ಕೊಡುತ್ತವೆಯೇ ಹೊರತು ಜನ ಸಾಮಾನ್ಯರ ದಾಖಲೆಗಳು ಉಲ್ಲೇಖವಾಗದಿರುವುದು ದುರಾದುಷ್ಟಕರ.

ಡಾ. ಬಿ. ಸಹ್ನಿ ಎಂಬುವರು ಪಂಜಾಬಿನ ರೊಹ್ತಕ್ ಎಂಬ ಪ್ರದೇಶದಲ್ಲಿ ನಡೆಸಿದ ಉತ್ಖನನದಲ್ಲಿ ತಾಮ್ರದ ನಾಣ್ಯಗಳನ್ನು ತಯಾರಿಸಲು ಉಪಯೋಗಿಸುತ್ತಿದ್ದ ಒಂದು ಸಾವಿರ ಅಚ್ಚುಗಳನ್ನು ಗುರುತಿಸಿದ್ದಾರೆ. ಈ ಅಚ್ಚುಗಳ ಅಧ್ಯಯನದಿಂದ ಕುಶಲ ಕೆಲಸಗಾರರು ಹೇಗೆ ನಾಣ್ಯಗಳನ್ನು ತಯರಿಸುತ್ತಿದ್ದರು ಎಂಬುವುದನ್ನು ತಿಳಿಯಲು ಸಾಧ್ಯವಾಗುತ್ತದೆ. ಎಂಟು ಅಚ್ಚುಗಳನ್ನು ಒಂದು ದುಂಡಾದ ಫಲಕದ ಕೇಂದ್ರದಲ್ಲಿರುವ ಮೇಲು ಮುಖ ಮತ್ತು ಕೆಳಮುಖದಲ್ಲಿ ಕೀಲಿಸುತ್ತಾರೆ. ಈ ಪಲಕದ ಕೇಂದ್ರದಲ್ಲಿರುವ ರಂಧ್ರವು ಎಂಟೂ ಅಚ್ಚುಗಳಿಗೆ ತೆರೆದು ಕೊಂಡಿರುತ್ತವೆ. ಮೇಲು ಮುಖದ ಫಲಕ ಮತ್ತು ಕೆಳಮುಖ ಫಲಕಗಳು ಬೇರೆ ಬೇರೆಯಾಗಿರುತ್ತವೆ, ಈ ಎರಡು ಫಲಕಗಳನ್ನು ಅವುಗಳ ವೃತ್ತ ಸಂಧಿಗಳು ಸರಿಯಾಗಿ ಹೊಂದಿಕೊಳ್ಳುವಂತೆ ಜೋಡಿಸುತ್ತಾರೆ. ಅನಂತರ ನಡುವಿನ ರಂಧ್ರದ ಮೂಲಕ ಕಾಯಿಸಿದ ದ್ರವ ಲೋಹವನ್ನು ಸುರಿಯುತ್ತಾರೆ, ಈ ದ್ರವವು ಎಂಟು ರಂಧ್ರಗಳ ಮೂಲಕ ಹರಿದು ಎಂಟು ಅಚ್ಚುಗಳಲ್ಲಿ ತುಂಬಿಕೊಳ್ಳುತ್ತವೆ ಆರಿದ ಮೇಲೆ ಮೇಲಿನ ಮತ್ತು ಕೆಳಗಿನ ವೃತ್ತಫಲಕಗಳನ್ನು ಬೇರ್ಪಡಿಸಿದಾಗ ಎಂಟು ಮುದ್ರೆಯೊತ್ತಿದ ನಾಣ್ಯಗಳು ಸಿದ್ಧವಾಗಿರುತ್ತವೆ ಅರದಿಂದ ಅವುಗಳ ಅಂಚನ್ನ ನೇರ್ಪಡಿಸುತ್ತಾರೆ ರೊಹ್ತಕ್ ಕಮ್ಮಟದಲ್ಲಿ ಈ ರೀತಿಯಲ್ಲಿ ನಾಣ್ಯಗಳನ್ನು ತಯಾರಿಸಲಾಗುತ್ತಿತ್ತೆಂದು ವಿದ್ವಾಂಸರು ಗುರುತಿಸುತ್ತಾರೆ. (ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪ ಚಾರಿಯರು ಡಾ. ಕುಮಾರಸ್ವಾಮಿ ಪುಟ ೭೮.೭೯) ಆಗ ಅಕ್ಕಸಾಲಿಗಳು ಈ ನಾಣ್ಯಗಳನ್ನು ತಯಾರಿಸುವ ಪದ್ಧತಿಯು ವಿವರವಾಗಿ ತಿಳಿದು ಬರುತ್ತದೆ. ಅತ್ಯಂತ ಸೂಕ್ಷ್ಮ ಕೆಲಸದಲ್ಲಿ ಮಗ್ನರಾಗಿ ತಮ್ಮ ಜೀವನದ ಜೊತೆ ರಾಜ ಮನ್ನಣೆಯನ್ನು ಪಡೆದಿದ್ದರು ಎಂಬುದು ತಿಳಿದು ಬರುತ್ತದೆ

ಚಿನ್ನ ಮತ್ತು ಬೆಳ್ಳಿಯಲ್ಲಿ ಕೆಲಸ ಮಾಡುವ ಸ್ಥಳವನ್ನು ಕೌಟಲ್ಯ ನ ಅರ್ಥಶಾಸ್ತ್ರ ವು ಅಕ್ಷಶಾಲೆ ಎಂದು ಕರೆಯುತ್ತದೆ, ಈ ಕಾರ್ಯದ ಮೇಲುಸ್ತುವಾರಿಯನ್ನು ನೋಡಿಕೊಳ್ಳವವನನ್ನು ಸುವಣಾದ್ಯಕ್ಷ ಎಂದು ಕರೆದಿದೆ(ಕೃಷ್ಣಭಟ್ಟ .ಕೆ.(ಸಂ) ಕೌಟಲ್ಯನ ಅರ್ಥಶಾಸ್ತ್ರ ಪು. ೧೫೩) ಕೌಟಲ್ಯನು ಈ ಅಕ್ಷ ಶಾಲೆಯ ರಚನೆಯನ್ನು ಅದರ ಕಾರ್ಯ ವಿಧಾನವನ್ನು ವರ್ಣಿಸಿರುವ ರೀತಿಯನ್ನು ನೋಡಿದರೆ ಅದು ಸರ್ಕಾರದ ಅಥವಾ ರಾಜರಿಂದ ನೇಮಿಸಿದವರಿಂದ ನೆಡೆಯು ತ್ತಿದ್ದ ನಾಣ್ಯಗಳನ್ನು ಟಂಕಿಸುವ ಕಮ್ಮಟಗಳು ವರ್ಣನೆಯಂತೆ ಕಾಣುತ್ತದೆ. ಆದ್ದರಿಂದ ಕೌಟಲ್ಯ ನು ತಿಳಿಸುವ ಟಂಕಸಾಲೆಯ ಕಮ್ಮಟದ ಅಥವಾ ಅಕ್ಷಶಾಲೆಯ ರಚನೆ ಹಾಗೂ ಕಾರ್ಯವಿಧಾನಗಳೂ ಈ ಸಂದರ್ಭದಲ್ಲಿ ತಿಳಿಸುತ್ತದೆ. ಕೌಟಿಲ್ಯನ ಪ್ರಕಾರ ಈ ಶಾಲೆಯ ಕಮ್ಮಟಕ್ಕೆ ಒಳಗೆ ನಾಲ್ಕು ಕೋಣೆಗಳಿದ್ದರೂ ಅದಕ್ಕೆ ಹೊರಬಾಗಿಲು ಮಾತ್ರ ಒಂದೇ ಇರಬೇಕು. ಸುವರ್ಣದ ಕೆಲಸದಲ್ಲಿ ನಿಪುಣನೂ, ವಿಶ್ವಾಸಕ್ಕೆ ಅರ್ಹನೂ, ಕುಲೀನನೂ ಆದ ಸುವರ್ಣಕಾರನನ್ನು ನೇಮಿಸಬೇಕು, ಚಿನ್ನ ಬೆಳ್ಳಿಯನ್ನು ಗೊತ್ತಾದ ತೂಕಕ್ಕೆ ಅನುಗುಣವಾಗಿ ಕೊಡಬೇಕು ಮತ್ತು ತೆಗೆದುಕೊಳ್ಳಬೇಕು. ಅರ್ಹನಲ್ಲದವನು ಅಕ್ಷಶಾಲೆಗೆ ಹೋಗಬಾರದು, ಬಾಗಿಲಲ್ಲಿ ತಡೆದರೂ ಒಳಗೆ ಹೋಗುವವನಿಗೆ ಗುಪ್ತಭಾಗದಿಂದ ಹಿಡಿದು ಎಲ್ಲವನ್ನು ಪರೀಕ್ಷಿಸಬೇಕು. ಕೆಲಸ ಮಾಡುವವರನ್ನು ಮಾತ್ರ ಒಳಗೆ ಬಿಡಬೇಕು. ಕೆಲಸಗಾರರು ಎಲ್ಲಾ ಉಪಕರಣಗಳನ್ನು ಅಕ್ಷಶಾಲೆಯಲ್ಲೇ ಇಡಬೇಕಲ್ಲದೇ ಹೊರಗೆ ತರಬಾರದು. [illegible] ಕೌಟಿಲ್ಯನು ಕೊಡುವ ಕಮ್ಮಟದ ವಿವರಣೆಯು ಬಹುಶಃ ನಾಲ್ಕು ಮುದ್ರಣ ಮಾಡುವುದಿರಬೇಕು ಈ [illegible] ಒಳಗಾದ [illegible] ಬಿಟ್ಟುಕೊಡುತ್ತಿರಲಿಲ್ಲ. [illegible] ಅಜ್ಞೆಯ ಮೇರೆಗೆ ನಡೆಯುತ್ತಿದ್ದಿರಬಹುದು.

[illegible] ಬರೀ ರಾಜ ಮಹಾರಾಜರ ಅಧಿಕಾರಿಗಳ ಜೊತೆಗೆ [illegible] ನಾಣ್ಯಗಳ ಬಗ್ಗೆ ವಿವರಗಳು ಸಿಗುತ್ತವೆಯೋ ಹೊರತು ಜನಪದವಾದ ಆಭರಣಗಳು ಮತ್ತು ಜನ [illegible]

ಬಳಸುತ್ತಿದ ಆಭರಣಗಳಾದ ಓಲೆ, ಮೂಗುತಿ, ಕಾಲುಂಗುರ, ನತ್ತಿನ ಬಗ್ಗೆ ಯಾವುದೇ ಮಾಹಿತಿ ದೊರೆಯದೇ ಇರುವುದು ಅಪವಾದಕ್ಕೆಡೆ ಮಾಡಿಕೊಡುತ್ತದೆ. ಈ ಇತಿಹಾಸವೇ ಹಾಗೆ ಯಾವುದು ಮೇಲ್ಮಟ್ಟದಲ್ಲಿ ಆಳಿಕೆ ನಡೆಸುವ ರಾಜ್ಯಾಧಿಪತಿಗಳ ಬಗ್ಗೆ ವಿವರಿಸುತ್ತವೆಯೋ ಹೊರೆತು ಕೆಳಮಟ್ಟದ ವಿವರಣೆ ಸಿಗುವುದು ತುಂಬಾ ಕಷ್ಟ. ಉದಾಹರಣೆ. ಶಹಜಾನ್ ತನ್ನ ಪ್ರಿಯತಮೆಯ ನೆನಪಿಗಾಗಿ ತಾಜ್‌ಮಹಲ್ ಕಟ್ಟಿಸಿದ. ಅದು ಅದ್ಭುತವಾಗಿ ಗೋಚರಿಸುವಂತೆ ಮಾಡಿದ ನಿಜ ಆದರೆ ಅದನ್ನು ನಿರ್ಮಿಸಿದ ಕೆಲಸಗಾರರ ಜೀವರು, ಸಾವು, ಶಕ್ತಿ ಇವ್ಯಾವು ಬಗ್ಗೆ ಮಾಹಿತಿಯೇ ಇಲ್ಲ, ಇದು ದುರಂತದ ಕೆಲಸ ಎಂದು ನನ್ನ ಭಾವನೆ. ಅಂತವರ ಇತಿಹಾಸ ನಮಗೆ ಬೇಕು.

ಜನಪದರು ಒಂದೊಂದು ವೃತ್ತಿ ಒಂದೊಂದು ಜಾತಿಗೂ ಗಾದೆ ಮಾತನ್ನು ಹೇಳುತ್ತಾರೆ. ಬಹುಶಃ ಈ ಗಾದೆ ಮಾತು ನಿಜಪರಲೂಬಹುದು. ಕೆಲವೊಮ್ಮೆ ಸುಳ್ಳಿರಬಹುದು. ಆದರೆ ಗಾದೆಗಳು ವೇದಗಳ ಸಮಾನ ಎಂಬ ಮಾತನ್ನು ನೋಡಿದರೆ ಗಾದೆಗಳನ್ನು ಜನಪದರು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಉಪಯೋಗಿಸುತ್ತಿರಬಹುದು. ನಾವು ಏನನ್ನಾದರೂ ಹೇಳಬೇಕೆಂದರೆ ಅದು ನೋಡಿರಬೇಕು, ಅಥವಾ ಕೇಳಿರಬೇಕು, ಆಗಮಾತ್ರ ಅದಕ್ಕೆ ಬೆಲೆ ಇರುತ್ತದೆ. ಅಂತಹ ಗಾದೆಗಳು ವೃತ್ತಿ ಮತ್ತು ವೃತ್ತಿಗಾರಿಗೆ ಸಂಬಂಧ ಪಟ್ಟ ಗಾದೆಗಳನ್ನು ನೋಡಬಹುದು. ಆದರೆ ಇಲ್ಲಿ ಈ ಅಕ್ಕಸಾಲಿಗನಿಗೆ ಅನ್ವಯಿಸುವುದನ್ನು ನೋಡಬಹುದು. ಅಕ್ಕಸಾಲಿ ಅಕ್ಕನ ಬಂಗಾರವನ್ನು ಬಿಡನು. ಈ ಗಾದೆ ಅವನ ಜಿಪುಣತನವನ್ನು ತೋರಿಸುತ್ತದೆ. ಎಷ್ಟೇ ಹತ್ತಿರದವರಾದರೂ ಎಲ್ಲರಿಗೂ ಮಾಡಿದಂತೆ ಅಕ್ಕನಿಗೂ ಬಿಡನು ಅಷ್ಟು ಜಿಪುಣನಾದರೂ ಈ ಗಾದೆ ಇನ್ನೊಂದು ಅರ್ಥವನ್ನು ಕೊಡುವ ಸಂಭವವು ಉಂಟು. ಅಕ್ಕಸಾಲಿಗ ಕೆಲಸ ಮಾಡುವಾಗ ಅತಿಸೂಕ್ಷ್ಮತೆಯಿಂದ ಸೌಂದರ್ಯದ ಉಪಕರಣಗಳನ್ನು ತಯಾರಿಸುವಾಗ ತಿಕ್ಕಿ ತಿಕ್ಕಿ ನಯವಾಗಿ ಮತ್ತು ಆಕಾರಕ್ಕೆ ತಕ್ಕಂತೆ ಉಜ್ಜಲೇಬೇಕು. ಅದು ಅಕ್ಕನದು, ಬೇರೆಯವರುದು ಎಂಬ ಪ್ರಶ್ನೆಯೇ ಬರುವುದಿಲ್ಲ. ಎಲ್ಲಾವನ್ನು ತಿಕ್ಕುತ್ತಲೇ ಅದರಲ್ಲಿ ತಲ್ಲೀನನಾಗಿರಬೇಕಾಗುತ್ತೆ. ಅಕ್ಕನ ಬಂಗಾರವನ್ನು ತಿಕ್ಕುತ್ತಾನೆ ಅಥವಾ ಉಜ್ಜುತ್ತಾನೆಂದ ಮೇಲೆ ನಮ್ಮ ಬಂಗಾರವನ್ನು ಹಾಗೆ ಬಿಡುವನೇ ಎಂಬ ಮಾತಿನಿಂದ ಅಂತಹ ಗಾದೆಗಳು ಬೆಳೆದು ಬಂದಿವೆ. ಅಕ್ಕಸಾಲಿಗರು ನಂಬಿಗಸ್ತರಾಗಿದ್ದರು ಆದರೂ ಹಾಸ್ಯಕ್ಕಾಗಿ ಒಂದು ಕಥೆ ಹೀಗೆ ತಿಳಿದು ಬರುತ್ತದೆ.

ಅಕ್ಕಸಾಲಿಯ ಮಗ ಅಂಗಡಿಯಲ್ಲಿರುತ್ತಾನೆ. ಅಕ್ಕ ಕೊಟ್ಟ ಚಿನ್ನದಲ್ಲಿ ಆತ ಒಡವೆ ಮಾಡುತ್ತಿರುತ್ತಾನೆ. ಅಕ್ಕ ಎಂಬ ಕಾರಣಕ್ಕಾಗಿ ಆತ ಚಿನ್ನವನ್ನು ಅಪಹರಿಸದಿರಬಹದು ಎಂಬ ಅನುಮಾನ ತಂದೆಗೆ ಉಂಟಾಗುತ್ತದೆ. ಕದಿ ಎಂಬುದನ್ನು ಹೇಳುವುದಕ್ಕಾಗಿ ಇದ್ದಕ್ಕಿದ್ದಂತೆ ರಾಮ ರಾಮ ಎಂದು ಕೂಗುತ್ತಾನೆ. ಮಗ ಇನ್ನು ಚಾಣಾಕ್ಷ ರಾಮನ ಹೆಂಡತಿ ಸೀತೆಯನ್ನು ಆಗಲೇ ರಾವಣ ಅಪಹರಿಸಿದ್ದಾನೆಂದು ಹೇಳಿ ತಂದೆಯ ಸಂಶಯವನ್ನು ಬಗೆ ಹರಿಸುತ್ತಾನೆ. ತಂದೆ ಹೇಳುವ ಮೊದಲು ಮಗ ಬಂಗಾರವನ್ನು ಕದ್ದಿರುವುದನ್ನು ಪರೋಕ್ಷವಾಗಿ ಹೇಳುತ್ತಾರೆ. ಇದು ಬಹುಶಃ ಹಾಸ್ಯಕ್ಕಾಗಿ ಹೆಣೆದಿರುವ ಕಥೆಯಾಗಿದೆ.

ಅಕ್ಕಸಾಲಿಗರು ಆಭರಣ ಮಾಡುವ ಅನುಭವವನ್ನು ದಕ್ಷತೆಯನ್ನು ಗಳಿಸಿಕೊಂಡಿರುವವನು. ಶಾಸ್ತ್ರಜ್ಞನು, ಬಹುಶ್ರುತನೂ ಯಜ್ಞ ಮತ್ತು ಮಂತ್ರ ಕ್ರಿಯೆಗಳಲ್ಲಿ ಪಾರಂಗತನೂ, ತಂತ್ರಶಾಸ್ತ್ರದಲ್ಲಿ ನಿಪುಣನೂ, ಅಧ್ಯಯನ ಅಭ್ಯಾಸನಾದಿ ಷಟ್ಕರ್ಮನಿರತನೂ, ಸ್ನಾನ, ಸಂಧ್ಯಾ, ಜಪ–ತಪ, ಹೋಮಾದಿನಿರತನೂ, ಆಚಾರವಂತನಾದವನೂ, ದೇವ ಋಷಿ, ಪಿತೃ ತರ್ಪಣಗಳನ್ನು ಸಕ್ರಮವಾಗಿ ಪಾಲಿಸುವವನೂ. (ವಿಧಿತ್) ಸಂಕಲ್ಪ ಮಾಡಿ ವಿಶ್ವಕರ್ಮ ಸೂಕ್ತಾದಿಗಳನ್ನು ನಿಯಮಿತವಾಗಿ ಪಠಿಸುವವನೂ ವಿಶ್ವಬ್ರಾಹ್ಮಣ ಧರ್ಮದ ಪೂರ್ವಚಾರಗಳನ್ನೆಲ್ಲಾ ವಿಸ್ಮರಿಸದೇ ಪಾಲಿಸುತ್ತ ಶ್ರೇಷ್ಠನಾಗಿರುವ ವಿಶ್ವಕರ್ಮ ವಂಶಸಂಭೂತನಾಗಿರುವವನೇ ಮಾಂಗಲ್ಯ, ಮೂಗುತಿ, ಬಳೆ, ಬತ್ತಿಗೆಸರ, ಕಾಲುಂಗರ, ಮಾಡಬೇಕೆಂಬ ನಿಯಮ ಇತ್ತು. ಆದರೆ ಈಗ ಅದು ಶಿಥಿಲಗೊಂಡಿದ್ದು ವಿಶ್ವಕರ್ಮರಲ್ಲದೇ ಇತರ ಜನಾಂಗದವರಾದ ಮುಸ್ಲಿಂ, ಮಾರವಾಡಿಗಳು, ರಡ್ಡಿಗಳು ಇತರ ಜನಾಂಗದವರು ಈ ವೃತ್ತಿಯನ್ನು ಕಲಿತು

ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಎಂದು ಬಂಡ್ರಿ ಮಲ್ಲಾಚಾರ ತಮ್ಮ ಬೇಸರವನ್ನು ತೋಡಿಕೊಳ್ಳುತ್ತಾರೆ. 'ಇದೆಲ್ಲ ಬಿಡ್ರಿ ನಮ್ಮಂಥೋಗ ಅಕ್ಕಸಾಲಿಗರ ಬಹಳಾ ಅದರಾ ಜನ ಸಣ್ಣಪುಟ್ಟ ಕೆಲಸಕ್ಕೆ ಬರ್‍ತಾರ ಬಹಳಾ ರೊಕ್ಕದಾಗ ಪತ್ರದ ಪಟ್ಟಣಕ್ಕ ಹೋಕ್ಕರಾ' ಎಂದು ಹೇಳುತ್ತಾರೆ. ಈಗಲೂ ಸಹ ಮಾಂಗಲ್ಯ ಒಂದನ್ನು ಮಾತ್ರ ವೈದಿಕ ಸಂಪ್ರದಾಯಕ್ಕನುಗುಣವಾಗಿ ತಯಾರಿಸಲಾಗುತ್ತದೆ. ಮೇಲೆ ತಿಳಿಸಿರುವ ಪಂಚ ಆಭರಣಗಳು ಮಂಗಳಕರ ವಸ್ತುಗಳಾಗಿದ್ದು ಸುಮಂಗಲಿಯಾದವಳು ಕಡ್ಡಾಯವಾಗಿ ಕೊಡಲೇಬೇಕಾದ ಆಭರಣಗಳೆಂಬ ನಂಬಿಕೆ ಇದ್ದಿತಾದರೂ ಇತ್ತೀಚೆಗೆ ಈ ನಂಬಿಕೆ ಅರ್ಥ ಕಳೆದು ಕೊಂಡಿವೆ. ಹೀಗಾಗಿ ಮದುವೆಯ ದಿನವಂದೂ ಅಥವಾ ಅದರ ಹಿಂದಿನ ದಿನವೋ ಮೊದಲೇ ಅಣಿಗೊಳಿಸಿಟ್ಟಿರುವ ಅಂಗಡಿಗಳಿಂದ ಕೊಂಡು ತರುವ ಸಂದರ್ಭವೂ ಉಂಟು.

ಚಿನ್ನ ಬೆಳ್ಳಿಯ ಕೆಲಸಗಾರರಾದ ಅಕ್ಕಸಾಲಿಗರು ಬಹುತೇಕ ಪರಂಪರೆಯನ್ನೇ ಅನುಸರಿಸುತ್ತಾನೆ. ಅವರ ಉದ್ಯೋಗ ಪರಂಪರಾಗತವಾಗಿರುತ್ತದೆ. ಅವರು ದೇವರ ಪೂಜೆ, ಧರ್ಮ-ಕಾರ್ಯಗಳಿಗೆ ಬೇಕಾದ ಸಲಕರಣೆ ಆಭರಣಗಳನ್ನು ಶಾಸ್ತ್ರಬದ್ಧವಾಗಿ ಮಾಡುತ್ತಾರೆ. ಆದರೆ ಸ್ತ್ರೀ ಪುರುಷರು ಧರಿಸುವ ಆಭರಣಗಳನ್ನು ಆಯಾಕಾಲದ ಅಭಿರುಚಿ ಬೇಡಿಕೆಗಳನ್ನು ಅನುಸರಿಸಿ ತಯಾರಿಸುತ್ತಾರೆ. ಚಿನ್ನ ಬೆಳ್ಳಿಯ ಉದ್ಯೋಗವನ್ನು ವಿಶಿಷ್ಟ ಜಾತಿಯವರು ಮಾಡುತ್ತಿದ್ದು ಅವರನ್ನು ವಿಶ್ವಕರ್ಮರು, ಪಾಂಚಾಳರು, ಪತ್ತಾರರು, ಸೋನಾರರು, ಅಕ್ಕಸಾಲಿಗರು, ಚಿನಿವಾರರು, ಅರ್ಕಸಾಲಿಗಳು, ಸುವರ್ಣಕಾರರು ಎಂದು ಕರೆಯುತ್ತಾರೆ.

ಆಧುನಿಕ ನಾಗರೀಕತೆಯಲ್ಲಿ ಜನರು ಸೂಕ್ಷ್ಮವಾದ ಮತ್ತು ವೈವಿಧ್ಯ ಮಯವಾದ ಆಭರಣಗಳನ್ನು ಹೆಚ್ಚಾಗಿ ಇಚ್ಛಿಸುತ್ತಾರಾಗಿ ಅಕ್ಕಸಾಲಿಗರು ಪರಂಪರಾಗತವಾಗಿ ಬಂದ ಆಭರಣ ತಯಾರಿಕೆಯ ಜ್ಞಾನ ಸಾಕಾಗದಿದ್ದರೆ ವಿಶೇಷ ತರಬೇತಿಯನ್ನು ಪಡೆಯುತ್ತಿದ್ದಾರೆ. ಇದುವರೆಗೆ ತಂದೆ ಮಕ್ಕಳು ಹೆಚ್ಚೆಂದರೆ ಹತ್ತಿರದ ಸಂಬಂಧಿಗಳು ಮಾತ್ರ ಈ ಕೆಲಸ ಮಾಡುತ್ತಿದ್ದರು ಹೊರಗಿನ ನೌಕರರನ್ನು ನಿಯಮಿಸಿಕೊಳ್ಳುವ ರೂಢಿ ಇತ್ತೀಚಿಗೆ ಬರುತ್ತದೆ. ಒಂದು ಚಿಕ್ಕ ಕೋಣೆಯಲ್ಲಿ ಅಕ್ಕಸಾಲಿಗನ ಕೆಲಸ ನಡೆಯುತ್ತದೆ. ಅದು ಬಹುತೇಕ ಮನೆಯ ಹೊರಭಾಗವಾಗಿರುತ್ತದೆ. ಅವನ ಸುತ್ತಮುತ್ತ ಆಭರಣಗಳನ್ನು ತಯಾರಿಸುಲು ಬೇಕಾದ ಸಲಕರಣೆಗಳನ್ನು ಇಟ್ಟುಕೊಂಡು. ಐರಣಿ, ಸುತ್ತಿಗೆ, ಚಿಮುಟಿಗೆ, ಊದುಗೊಳವಿ, ಅಗ್ನಿಗಕುಂಡ, ಮೂಸೆ, ಕುದ್ಗಾಲಿ, ಕೆತ್ತನೆಯ ಚಾಣಗಳು, ತರತರದ ಅಚ್ಚುಗಳು, ಹಾಗೂ ನಾನಾ ಬಗೆಯ ಅರಗಳು, ಸ್ರಾವಣ, ತ್ರಾಸು, ಅಡಿಗಲ್ಲು, ತೂಕ, ಅಳತೆಗಳು, ಗುಂಜಗಳು, ಇಕ್ಕಳ ಚಿಮಣಿ, ಚಿಳಗಾರ ಮುಂತಾದ ಆತಾರಗಳ (ಆಯುಧಗಳ)ಲ್ಲದೆ ಬಂಗಾರವನ್ನು ಶುದ್ಧಗೊಳಿಸಲು ನೈಟ್ರಿಕ್ ಆಸಿಡ್, ಗಂಧಕಾಮ್ಲಗಳು, ಅಡಿಗೆಉಪ್ಪು, ಪಟಿಕ, ಆಭರಣ ವಿವಿಧ ಮಾದರಿಯ ಚಿತ್ರಗಳುಳ್ಳ ಪುಸ್ತಕಗಳು ಅವನ ಬಳಿ ಇರುತ್ತವೆ. ಬಂಗಾರ ಬೆಳ್ಳಿ ಜೊತೆಗೆ ವಜ್ರ, ರತ್ನಮಣಿ ಮುತ್ತು ಮುಂತಾದ ಅಮೂಲ್ಯ ಆಭರಣಗಳನ್ನು ಸಿದ್ಧಪಡಿಸುವುದರಲ್ಲೂ, ಸೂಕ್ಷ್ಮ ಕೆಲಸ ಮಾಡುವುದರಲ್ಲೂ ಇವರು ನಿಪುಣರು. ಹಿಂದೆ ಇವರಲ್ಲಿ ಆಭರಣಗಳನ್ನು ಮಾಡಿಸಲು ಚಿನ್ನ ಅಥವಾ ಹಣವನ್ನು ಮುಂಗಡವಾಗಿ ನೀಡಿದರೆ ಅಥವಾ ಆಭರಣಗಳನ್ನು ಪಡೆದ ನಂತರ ಯಾವುದೇ ರೀತಿಯ ರಸೀದಿ ಮುಂತಾದ ದಾಖಲಾತಿಗಳನ್ನು ಇವರಿಂದ ಪಡೆಯುತ್ತಿದ್ದಿಲ್ಲ. ಬರೀ ಮಾತಿನ ಮೇಲೆಯೇ ವ್ಯವಹಾರ ನಡೆಯುತ್ತಿತ್ತು. ಇದರಿಂದ ಇವರು ನಂಬಿಕೆಗೆ ಅರ್ಹರಾದವರೆಂಬುದು ಸ್ಪಷ್ಟವಾಗುತ್ತದೆ.

ಪ್ರಾಚೀನ ಕಾಲದಿಂದಲೂ ಜನರು ಲೋಹಗಳನ್ನು ಬಳಸುತ್ತಿದ್ದರು. ಇವುಗಳ ಬಗೆಗೆ ಅವರು ಅನುಭವದಿಂದ ಪಡೆದುಕೊಂಡು ಅವರದೇ ಆದ ಜ್ಞಾನಸಂಪತ್ತನ್ನು ಹೊಂದಿದ್ದರು ಲೋಹಗಳು ಒಂದು ವಿಶಿಷ್ಟ ರೀತಿಯಲ್ಲಿ ಅವರ ನಂಬಿಕೆ, ಆಚರಣೆ, ಪದ್ಧತಿ, ಸಂಪ್ರದಾಯ, ಸಾಹಿತ್ಯ ಮುಂತಾದವುಗಳಲ್ಲಿ ಪಾತ್ರವಹಿಸುತ್ತಿದ್ದವು. ದೇವರಿಗೆ ಹರಕೆ ಹೊತ್ತು ಕಾರ್ಯ ಫಲಿಸಿದಲ್ಲಿ ಹಾರ, ಉಂಗುರ, ಕಡಗ, ತೊಟ್ಟಿಲು, ಮುಂತಾದ ಆಭರಣಗಳನ್ನು ಮಾಡಿಸಿ ಮುಡಿಪಿಟ್ಟು ದೇವರಿಗ ಅರ್ಪಿಸುವ ಸಂಪ್ರದಾಯವಿದೆ. ಹೀಗೆ ಆಭರಣಗಳ ರಚನೆಯಲ್ಲಿ ಬಳಕೆಯಾಗುವ ಲೋಹಗಳಿಗೆ ಧಾರ್ಮಿಕ ಶ್ರದ್ಧೆ ನಂಬಿಕೆಗಳ ಹಿನ್ನಲೆಯುದೆ. ಚಿನ್ನ ಬೆಳ್ಳಿ ಮೊದಲಾದ ಲೋಹವು ಪ್ರಕೃತಿಯಲ್ಲಿ ಸಹಜವಾಗಿ

ಸಿಗುತ್ತಿದ್ದುದರಿಂದ ಅದಿರಿನಿಂದ ಲೋಹಗಳನ್ನು ಬೇರ್ಪಡಿಸುವ ವಿಧಾನವನ್ನು ಜನರು ಕಂಡುಕೊಂಡರು. ಘನರೂಪದ ಅದಿರನ್ನು ದ್ರವರೂಪಕ್ಕೆ ಪರಿವರ್ತಿಸಿ ಪುನಃ ಅದನ್ನು ಘನರೂಪಕ್ಕೆ ತರುವ ಲೋಹ ಗೆಲಸದವರನ್ನು ಜನರು ಭೀತಿಯಿಂದ ಕಾಣುತ್ತಿದ್ದರು. ಬಂಗಾರವು ಲಕ್ಷ್ಮಿ ಇದ್ದಂತೆ ಸೊಂಟದಿಂದ ಕೆಳಗೆ ಹಾಕಿಕೊಂಡರೆ ಆಕೆಗೆ ಅವಮಾನ ಮಾಡಿದಂತೆ ಎಂಬ ನಂಬಿಕೆಯಿಂದಾಗಿ ಬಂಗಾರದ ಆಭರಣಗಳು ಕಾಲಿಗಿಲ್ಲ. ಕಾಲಿಗೆ ತಗುಲಿದರೆ ಕಣ್ಣಿಗೆ ಮುಟ್ಟಿಕೊಂಡು ನಮಸ್ಕಾರ ಮಾಡುತ್ತಾರೆ. ದೇಹದ ಮೇಲೆ ಚಿನ್ನದ ಆಭರಣಗಳನ್ನು ಧರಿಸಿದರೂ ಕಾಲಿನ ಆಭರಣಗಳು ಮಾತ್ರ ಬಂಗಾರವಾಗಿಲ್ಲದಕ್ಕೆ ಈ ನಂಬಿಕೆಯೇ ಕಾರಣವಾಗಿದೆ. ಹಾಗೆಯೇ ವಜ್ರವನ್ನು ಸಾಕ್ಷಾತ್ ಲಕ್ಷ್ಮಿ ಎಂದು ಪರಿಗಣಿಸಿ ಭಕ್ತಿಯಿಂದ ಕಾಣುತ್ತಾರೆ. ಹೊಸ ಒಡವೆಗಳನ್ನು ಪೂಜೆ ಮಾಡಿಯೇ ಧರಿಸುತ್ತಾರೆ.

ಚಿನ್ನ ಬೆಳ್ಳಿಯ ಕೈಗಾರಿಕೆಗಳು ಕೇವಲ ಕೈಕಸುಬಲ್ಲ. ಅದು ಉಪಯುಕ್ತ ಕಲೆ. ಕಲೆ ಮತ್ತು ಕೈ ಕಸುಬುಗಳ ಸೇರಿಕೆಯಲ್ಲಿ ಈ ದಂಧೆ ಲಾಭದಾಯಕವೂ ಆಗಿದೆ. 'ಮಾಡಲಿಂಗ' ಎಂಬುದು ಇತ್ತೀಚಿಗೆ ವಿಪರೀತವಾಗಿದೆ. ಆ ಮಾಡಲಿಂಗ್ ಮಾಡುವವರಿಗೆ ವಿವಿಧ ಬಗೆಯ ಅನೇಕ ವಿನ್ಯಾಸಗಳನ್ನೊಳಗೊಂಡಂತೆ ಪ್ರಯೋಗರೂಪ ರೀತಿಯಲ್ಲಿ ಹೊಸ ಹೊಸ ವಿನ್ಯಾಸಗಳು ತಯಾರಿಸುತ್ತಾರೆ. ಆರ್ಥಿಕವಾಗಿ ಈ ಕಸುಬು ಮಧ್ಯಮ ವರ್ಗಕ್ಕೆ [illegible]. ಅಕ್ಕಸಾಲಿಗರ ಮಧ್ಯದಲ್ಲಿ ದಲ್ಲಾಳಿ ಮಾಡುವ ಸರಾಫರು ಮಾತ್ರ ಶ್ರೀಮಂತ ವರ್ಗಕ್ಕೆ ಸೇರುತ್ತಾರೆ. ಈ ದಂಧೆಗೆ ಪ್ರಾಮಾಣಿಕತೆ ಕುಶಲತೆ ಅಷ್ಟೇ ಮಹತ್ವದ್ದಾಗಿರುತ್ತದೆ. ೧೯೬೨ ರಲ್ಲಿ ಭಾರತದ 'ಸುವರ್ಣನಿಯಂತ್ರ ಕಾನೂನು' ಬಳಕೆಗೆ ಬಂದು ಅದರ ಪ್ರಕಾರ ಬಂಗಾರವನ್ನು ಸಂಗ್ರಹಿಸಿಕೊಳ್ಳಬಾರದೆಂದಾಯಿತು. ೧೪ ಕ್ಯಾರೆಟ್‌ಗಳಿಗಿಂತ ಹೆಚ್ಚು ಶುದ್ಧ ಬಂಗಾರವನ್ನು ಉಪಯೋಗಿಸಿ ಆಭರಣಗಗಳನ್ನು ಮಾರಬಾರದೆಂದು ನಿರ್ಬಂಧಿಸಲಾಯಿತು. ಇದರಿಂದ ಅಕ್ಕಸಾಲಿಗರಿಗೆ ತಮ್ಮಲ್ಲಿರುವ ಸಲಕರಣೆಗಳಿಂದ ಆಭರಣ ತಯಾರಿಸಲು ಸಾಧ್ಯವಾಗದಷ್ಟು ಧಾತು ಗಟ್ಟಿಯಾಯಿತು. ಹೆಚ್ಚು ಬಂಡವಾಳವನ್ನು ತೊಡಗಿಸಿ ಆಭರಣ ತಯಾರಿಸಲು ಬೇಕಾಗುವ ಯಂತ್ರಗಳನ್ನು ಕೊಳ್ಳಬೇಕಾದ ಪ್ರಸಂಗ ಒದಗಿತು. ೧೯೬೭ ರಲ್ಲಿ ಈ ಕಾಯ್ದೆಯಲ್ಲಿ ಕೆಲವಟ್ಟಿನ ಮಾರ್ಪಾಟಾಯಿತಾದರೂ ಮೊದಲಿನಷ್ಟು ಈ ಉದ್ಯೋಗ ಲಾಭದಾಯಕವೂ ಸುಲಭವೂ ಆಗಿ ಉಳಿಯಲಿಲ್ಲ.

ಪರಿಶುದ್ಧವಾದ ಚಿನ್ನ ಬಹಳ ಮೃದುವಾದುದರಿಂದ ಆಭರಣಗಳಿಗೆ ಮತ್ತು ನಾಣ್ಯಗಳಿಗೆ ಅಷ್ಟು ಉಪಯುಕ್ತವಲ್ಲ ಇದರಿಂದಾಗಿ ತಾಮ್ರ ಮತ್ತು ಬೆಳ್ಳಿಯನ್ನು ಸೇರಿಸುವುದು ರೂಢಿಯಾಗಿವೆ. ಬಂಗಾರದ ಪರಿಶುದ್ಧತೆಯನ್ನು ಇಂತಿಷ್ಟು ಕ್ಯಾರೆಟುಗಳು ಎಂದು ಸೂಚಿಸುವುದು ವಾಡಿಕೆ. ೨೪ ಕ್ಯಾರೆಟ್‌ನದು ಶುದ್ಧವಾದ ಬಂಗಾರ. ೧೪ ಕ್ಯಾರೆಟ್ ಎಂದರೆ ೧೪ ತೂಕಭಾಗ ಚಿನ್ನ ಮತ್ತು ೧೦ ತೂಕ ಭಾಗ ಇತರೆ ಲೋಹದಿಂದ ಕೂಡಿದೆ ಎಂದರ್ಥ. ಇದರ ಪ್ರಕಾರ ೧೮ ಕ್ಯಾರೆಟ್ ಬಂಗಾರದ ಶುದ್ಧತೆ ೭೫% ಚಿನ್ನದ ನಾಣ್ಯಗಳೂ ೯೦% ಚಿನ್ನ ೧೦% ತಾಮ್ರವೂ ಇರುವ ತಯಾರಿಸಲು ಬಳಸುವ ಲೋಹದಲ್ಲಿ ೮೪% ಚಿನ್ನ ಮತ್ತು ೧೬% ತಾಮ್ರ ಇರುತ್ತದೆ.

ಚಿನ್ನ ಬೆಳ್ಳಿ ವಜ್ರಗಳ ಬೆಲೆಯನ್ನು ತೂಕದ ಮೇಲೆ ಕಟ್ಟುತ್ತಾರೆ. ಹಿಂದೆ ತೊಲೆ, ಆಣೆ, ಗುಂಜಿ [illegible]. ಈಗ ಗ್ರಾಂ, ಮಿಲಿಗ್ರಾಂಗಳು ಬಳಕೆಗೆ ಬಂದಿವೆಯಾದರೂ ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ಈಗಲೂ ಉಳಿದುಕೊಂಡು ಬಂದಿರುವುದನ್ನು ನೋಡಬಹುದು.

೧ ತೊಲ	–	೧೧.೬೫ ಮಿಲಿಗ್ರಾಂ.
೧ ತೊಲ	–	೧೬ ಆಣೆತೂಕ.
೧ ಆಣೆ	–	೪ ಗುಂಜಿ.
೧ ಗುಂಜಿ	–	೧೦೦ ಮಿಲಿ.

೧ ಅಡ್ಡ – ೨ ಗುಂಜಿ.

೯ ಅಣಿ – ೧ ವರ.

೩೨ ಅಣಿ – ೧ ತೊಲ.

ಮುಂತಾದ ರೀತಿಯಲ್ಲಿ ಮಾಪನ ಮಾಡುತ್ತಾರೆ. ಆದರೆ ಇತ್ತೀಚಿಗೆ ಬಂಗಾರವನ್ನು ತೂಗಲು ಕಂಪ್ಯೂಟರ್, ತ್ರಾಸುಗಳೇ ಬಂದಿವೆ. ಇನ್ನು ಒಡವೆಗಳನ್ನು ತಯಾರಿಸುವಾಗ ಕೆಲವೊಂದು ನಂಬಿಕೆ ಇರುತ್ತದೆ. ನವರತ್ನಗಳನ್ನು ಆಭರಣಗಳಿಗೆ ಕೂರಿಸುವಾಗ ಆಯಾ ರತ್ನಕ್ಕೆ ವಿಧಿಸಿರುವ ದಿಕ್ಕುಗಳಿಗೆ ಅನುಗುಣವಾಗಿ ಕೂಡಿಸಬೇಕೆಂಬ ನಂಬಿಕೆ ಇದೆ.

ಉದಾ :

ಪಚ್ಚೆ ಈಶಾನ್ಯ	ವಜ್ರ ಪೂರ್ವ	ಮುತ್ತು ಆಗ್ನೇಯ
ಪುಷ್ಯರಾಗ ಉತ್ತರ	ಮಾಣಿಕ್ಯ ಮಧ್ಯ	ಹವಳ ದಕ್ಷಿಣ
ವೈಡೂರ್ಯ ವಾಯುವ್ಯ	ನೀಲ ಪಶ್ಚಿಮ	ಗೋಮೇಧಿಕ ನೈರುತ್ಯ

ಈ ರೀತಿ ವಾಸ್ತು ಪ್ರಕಾರವಾಗಿ ಆಭರಣಗಳನ್ನು ತಯಾರಿಸುತ್ತಾರೆ. ಕೆಲವೊಂದು ವೇಳೆ ಆಭರಣ ಮಾಡಿಸಿಕೊಳ್ಳುವ ವ್ಯಕ್ತಿಯ ರಾಶಿಯ ಮೇಲೆ ಆಭರಣಗಳನ್ನು ತಯಾರಿಸುತ್ತಾರೆ. ಆದರೆ ಅಕ್ಕಸಾಲಿಗರಿಗೆ ವಾಸ್ತುವಿನ ಪರಿಜ್ಞಾನ ಇದ್ದೇ ಇರುತ್ತದೆ.

ಆಭರಣಗಳನ್ನು ತಯಾರಿಸುವ ವಿಧಾನ

ಪ್ರತಿಯೊಂದು ಆಭರಣಗಳನ್ನು ತಯಾರಿಸಲು ಅದರದೇ ಆದ ವಿಧಿವಿಧಾನಗಳು ಹಂತಗಳು ಕಂಡುಬರುತ್ತವೆ. ಅಂತಹ ವಿಧಾನಗಳಲ್ಲಿ ಒಂದನ್ನು ಉದಾಹರಣೆಯನ್ನು ವಿವರಿಸಲಾಗಿದೆ. ಮೊದಲು ಅಚ್ಚಿನ ಮಣಿಗೆ ಜೇಡಿಮಣ್ಣು ಅಥವಾ ಕಿಳಮಣ್ಣನ್ನು ಭರ್ತಿಮಾಡಿ ಅದರೊಳಗೆ ಮಾದರಿ ಉಂಗುರಗಳನ್ನಿಟ್ಟು ಮಾರ್ಕ್‌ನ್ನು ಮಾಡಿಕೊಳ್ಳುತ್ತಾರೆ. ತಾವು ಬಳಸುವ ಬಂಗಾರ ಎಷ್ಟು ತೂಕದ್ದು ಎಷ್ಟು ಉಂಗರಗಳನ್ನು ತಯಾರಿಸಬೇಕೆಂಬುದರ ಆಧಾರದ ಮೇಲೆ ಚಿಕ್ಕ ಅಥವಾ ದೊಡ್ಡದಾದ ಅಚ್ಚಿನ ಮಣಿಯನ್ನು ಅಣಿಗೊಳಿಸುತ್ತಾರೆ. ಅನಂತರ ಮೂಸೆಯಲ್ಲಿ ಬಂಗಾರ ಬೆಳ್ಳಿ ಹಾಗೂ ತಾಮ್ರವನ್ನು ತಾವು ಎಷ್ಟು ತೂಕದ ಉಂಗುರ ಮಾಡಬೇಕಿದೆಯೋ ಅದಕ್ಕೆ ತಕ್ಕಂತೆ ಈ ಲೋಹಗಳ ಮಿಶ್ರಣವನ್ನು ಕೂಡಿಸಿ ಅಗ್ಗಿಷ್ಟಿಕೆಯಲ್ಲಿಟ್ಟು ತಿದಿಯ ಸಹಾಯದಿಂದ ಬೆಂಕಿಯನ್ನು ಉರಿಸುತ್ತಾರೆ. ಅದರೊಳಗೆ ಒಂದೆರಡು ಚಿಟಿಕೆಯಷ್ಟು ಅಡಿಗೆ ಸೋಡವನ್ನು ಹಾಗೆಯೇ ಸ್ವಲ್ಪ ನವಸಾಗರವನ್ನು ಹಾಕುತ್ತಾರೆ. (ಒಂದು ಬಗೆಯ ಉಪ್ಪು) ನಾವು ದೋಸೆ, ಇಡ್ಲಿ ಮಾಡುವಾಗ ಆ ಹಿಟ್ಟಿಗೆ ಸೋಡಾ ಬೆರೆಸಿದರೆ ಹಿಟ್ಟು ಉಕ್ಕಿ ತಿಂಡಿಗಳು ಹೇಗೆ ಮೃದುವಾಗುತ್ತವೆಯೋ ಹಾಗೆಯೇ ಇಲ್ಲಿ ಬಳಸಿದ ಚಿನ್ನ ಬೆಳ್ಳಿ ತಾಮ್ರಗಳು ಒಂದಕ್ಕೊಂದು ಚೆನ್ನಾಗಿ ಮಿಶ್ರವಾಗುತ್ತವೆ. ಅಲ್ಲದೆ ನವಸಾಗರ ಸೇರಿಸುವುದರಿಂದ ಏನಾದರೂ ಕಸವಿದ್ದಲ್ಲಿ ಹೋಗಿ ಬಂಗಾರ ಹೊಳೆಯಲು ಅನುಕೂಲವಾಗುತ್ತದೆ. ಜೊತೆಗೆ ಬಂಗಾರದ ದ್ರವವನ್ನು ಅಚ್ಚಿನ ಮಣಿಗೆ ಬಸಿಯುವಾಗ ಮೂಸೆಯಲ್ಲಿ ಸ್ವಲ್ಪವೂ ಉಳಿಯದಂತೆ ಸಹಕರಿಸುತ್ತದೆ. ಹೀಗೆ ಚೆನ್ನಾಗಿ ಬಂಗಾರದ ದ್ರಾವಣ ಕುದಿಯುವ ನಂತರ ಕೊಕ್ಕಿಕ್ಕಳ ಸಹಾಯದಿಂದ ಅಚ್ಚಿನ ಮಣಿಗೆ ಸುರಿಯುತ್ತಾರೆ.

ಕೆಲವು ನಿಮಿಷಗಳಲ್ಲಿ ಇದು ಗಟ್ಟಿಯಾಗಿರುತ್ತದೆ. ಅಚ್ಚಿನ ಮಣೆಯ ಕಪಾಟಗಳನ್ನು ತೆರೆದು ಒಳಗಡೆ ಸಿದ್ಧ ಮಾಡಿದ ಬಂಗಾರದ ಗಟ್ಟಿಯನ್ನು ಸ್ರಾವಣದ ಸಹಾಯದಿಂದ ನೀರಿಗೆ ಅದಿಯುತ್ತಾರೆ. ಹೀಗೆ ಆರಿಸಿದ ನಂತರ ಇದಕ್ಕೆ ಬೇಕಾದ ಸೈಜು ಆಕಾರ ಇತ್ಯಾದಿಯಾಗಿ ಗೆರೆ ಹಾಕುತ್ತಾರೆ. ನಂತರ ಹಿಡಿಗೆ ಅದನ್ನು ಸಿಕ್ಕಿಸಿಕೊಂಡು ಡ್ರಿಲ್ಲಿಂಗ್ ಮಿಷಿನ್ಗೆ ಬಿಟ್ ಹಾಕಿಕೊಂಡು ಅದರಲ್ಲಿ ಹರಳು ಕೂರಿಸಲು ರಂಧ್ರವನ್ನು ಕೊರೆಯುತ್ತಾರೆ. ತಮಗೆ ಬೇಕಾದ ಆಕಾರಕ್ಕೆ ಕತ್ತರಿಸಿ ಕೊಳ್ಳುತ್ತಾರೆ. ಅನಂತರ ಅದನ್ನು ವರ್ತುಲಾಕಾರದಲ್ಲಿ ಮಾಡಿಕೊಂಡು ಸುತ್ತಿಗೆಯಿಂದ ಬಡಿಯುತ್ತಾರೆ. ಹರಳು ಕೂರಿಸಬೇಕಾದ ಜಾಗದಲ್ಲಿ ಮೊದಲು ಸೀಳುಳಿಯಿಂದ ಚಿನ್ನದ ಪಿಸರನ್ನು ಎತ್ತುತ್ತಾರೆ. ಅಲ್ಲಿಗೆ ಸ್ರಾವಣದ ಸಹಾಯದಿಂದ ಹರಳನ್ನು ಕೂರಿಸಿದ ನಂತರ ಮಸೆ ಹಾಕುತ್ತಾರೆ. 'ಮಸೆ ಹಾಕುವುದು' ಎಂದರೆ ಉಂಗುರಕ್ಕೆ ಹರಳನ್ನು ಕೂರಿಸಿದ ನಂತರ ಹರಳಿನ ಸುತ್ತಲೂ ಇರುವ ಚಿನ್ನದ ಪಿಸರನ್ನು ಪೋಗರೆಯ ಸಹಾಯದಿಂದ ಮಡಿಸುತ್ತಾರೆ. ಅದರ ಮೇಲೆ ಮಸೆಸುತ್ತಿಗೆ(ಚಿಕ್ಕ ಸುತ್ತಿಗೆ)ಯಿಂದ ಮೆಲ್ಲಗೆ ಬಡಿದು ಹರಳು ಬೀಳದಂತೆ ನಯವಾಗಿ ಕೂರಿಸುತ್ತಾರೆ. ಇದನ್ನೇ ಮಸೆಹಾಕುವುದು ಎನ್ನುತ್ತಾರೆ.

ಉಂಗುರವನ್ನು ಹಿಡಿದುಕೊಳ್ಳಲು ಅನುಕೂಲವಾಗುವಂತೆ ಹಿಡಿಗೆ ಹಾಕಿಕೊಂಡು ಕರಸಾನಿ ಯಿಂದ ಮರುವ ಪೋಗರೆ ವನ್ನು ಚನ್ನಾಗಿ ಉಜ್ಜಿ ಹಂತ ಮಾಡಿಕೊಂಡು ಸುತ್ತಲಿನ ಪಿಸರನ್ನು ಹರಳಿನ ಮೇಲೆ ಕೂರಿಸುತ್ತಾರೆ. ಮೆದುವಾಗಿ ಮಸೆ ಸುತ್ತಿಗೆಯಿಂದ ಬಡಿಯುತ್ತಾರೆ. ಅನಂತರ ಸ್ವಯಂವರಕ್ಕೆ ಉಂಗುರವನ್ನು ಸಿಕ್ಕಿಸಿಕೊಂಡು ತಮಗೆ ಬೇಕಾದ ಸೈಜಗೆ ತಕ್ಕಂತೆ ವರ್ತುಲಾಕಾರವನ್ನು ಮಾಡಿಕೊಂಡು ಬೆಳ್ಗಾರರ ಸಹಾಯದಿಂದ ಬೆಸುಗೆ ಹಾಕುತ್ತಾರೆ. ತಮಗೆ ಬೇಕಾದ ಆಕಾರಕ್ಕನು ಸಾರವಾಗಿ ಅರಗಳಿಂದ ಉಜ್ಜುತ್ತಾರೆ. ಚಿನ್ನವನ್ನು ಕತ್ತರಿಸುವಾಗ, ಆಭರಣಗಳನ್ನು ಉಜ್ಜುವಾಗ ಮಸೆ ಹಾಕುವಾಗ ಕೆಳಗಡೆ ಒಂದು ಅಗಲವಾದ ಹಸುವಿನ ಚರ್ಮವನ್ನು ಬಳಸುತ್ತಾರೆ. ಅದರಲ್ಲಿ ಉದುರುವ ಬಂಗಾರದ ಪುಡಿಯನ್ನು ಬ್ರಷ್ ಸಹಾಯದಿಂದ ಸಂಗ್ರಹಿಸಿ ಕರಗಿಸಿ ಮತ್ತೆ ಆಭರಣಗಳನ್ನು ಮಾಡಲು ಅನುಕೂಲವಾಗುತ್ತದೆ. ಬೆಸುಗೆ ಕೆಲಸವೆಲ್ಲ ಮುಗಿದ ನಂತರ ಸ್ವಯಂವರಕ್ಕೆ ಸೇರಿಸಿಕೊಂಡು ಉಂಗುರದಲ್ಲಿನ ಉಬ್ಬು ತಗ್ಗುಗಳ ಸಮನಾಗುವಂತೆ ಮೊದಲು ಕೊಂಜಿನ ಸುತ್ತಿಗೆ ಯಿಂದ ಸುತ್ತಲು ಬಡಿಯುತ್ತಾರೆ. ಇದರಿಂದ ಉಂಗುರದ ಮೇಲೆ ಅಷ್ಟಾಗಿ ಕಚ್ಚು ಬೀಳದೆ ನಯಸ್ಸಾಗುವ ಸಂಭವ ಇರುತ್ತದೆ.

ಹೀಗೆ ಒಂದು ವಸ್ತು ಅಥವಾ ಆಭರಣಗಳನ್ನು ತಯಾರಿಸುವಾಗ ಅದರದೇ ಆದ ವಿಧಿ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಇಂತಿಂತ ಗಾತ್ರಗಳ ಆಭರಣಗಳನ್ನು ಮಾಡಬಹುದೆಂದು ನಿರ್ಣಯಿಸಬಲ್ಲ ಅಕ್ಕಸಾಲಿಗ ಒಮ್ಮೆ ಒಂದು ಆಕಾರವನ್ನು ನೋಡಿದರೆ ಸಾಕು ಆತ ಅದನ್ನು ಮಾಡಿಯೇತಿರುತ್ತೇನೆಂಬ ಛಲ ಇರುವವರಾಗಿರುತ್ತಾರೆ. ಅವನ ಕೈಚಳಕದ ಮಾನದಂಡವೇನೆಂಬುದನ್ನು, ಎಷ್ಟೆಂಬುದನ್ನು ಇವತ್ತಿನ ಸೂಕ್ಷ್ಮಾತಿ ಸೂಕ್ಷ್ಮ ಆಭರಣಗಳ ಮಾದರಿಯನ್ನು ನೋಡಿದರೆ ಹೇಳಬಹುದು ಆಭರಣಗಳ ಕುಸುರಿ ಕೆತ್ತನೆಯ ಕೆಲಸ ಮುಂತಾದವುಗಳಿಂದ ಅವರ ಕಲೆ ಅಭಿವ್ಯಕ್ತಿಗೊಳ್ಳುತ್ತವೆ. ಈ ವಿಧಿ ವಿಧಾನಗಳ ಬಗ್ಗೆ ಸ್ವವಿವರವಾಗಿ ಹಡಗಲಿಯ ಹಂಸನಂದಾಚಾರ್ಯರು ತಿಳಿಸಿದ್ದಾರೆ. ಅವರೇ ನೊಂದು "ಈ ಎಲ್ಲಾಜ್ಯಾತೆರು ಈ ಬಂಗಾರ ಕೆಲ್ಸನಾ ಮಾಡ್ತಾರ ನಮ್ಮ ಕೈಲಿ ಬಂಡವಾಳ ಇಲ್ಲ ಸಣ್ಣ ಪುಟ್ಟ ಕೆಲ ಮಾಡಿ ಜೀವನ ನಡ್ಸೋದು ಭಾಳಾ ಕಷ್ಟ ಐತ್ರಪ್ಪ" ಎಂದು ತನ್ನ ಕಾಯಕವನ್ನು ಕೈಬಿಡುವ ಪರಿಸ್ಥಿತಿ ಬಂದರೂ ಬರಬಹುದೆಂಬ ನೋವನ್ನು ತೋಡಿಕೊಳ್ಳುತ್ತಾರೆ. ಇಂತಹ ಸಮಯದಲ್ಲಿ ಈ ಜಾತಿ ವೃತ್ತಿಗಳಲ್ಲಿ ಬಡಗಿ, ಇಲ್ಲವೆ ಶಿಲ್ಪಿ ಅಥವಾ ಕಮ್ಮಾರಿಕೆಯನ್ನು ಮಾಡುತ್ತಿರುತ್ತಾರೆ. ಆದರೆ ಇಂತವರು ವಿರಳವಾದರೂ ಬೇರೆ ಉದ್ಯೋಗ ನೋಡಿಕೊಳ್ಳುವ ಪರಿಸ್ಥಿತಿ ಬಂದೊದಗಬಹುದು.

ಅಕ್ಕಸಾಲಿಗಳಲ್ಲಿ ಪುರುಷರು ಸ್ತ್ರೀಯರು ಮತ್ತು ಮಕ್ಕಳು ಇದೇ ಕೆಲಸ ಮಾಡಬೇಕೆಂಬ ನಿಯಮಗಳಿಲ್ಲ ಆದರೂ ಬಹಳ ಸೂಕ್ಷ್ಮವಾದ ಮತ್ತು ಕಠಿಣವಾದ ಕುಸುರಿ ಕೆಲಸಗಳನ್ನೆಲ್ಲ ಪುರುಷರೇ ಮಾಡುತ್ತಾರೆ. ಬಹುತೇಕ ಆಭರಣದ ಆದಿಯಿಂದ ಅಂತ್ಯದವರೆಗಿನ ಸಂಪೂರ್ಣ ಕೆಲಸವನ್ನು ಪುರುಷರೇ ಮಾಡುತ್ತಿರಾದರೂ ಸಣ್ಣಪುಟ್ಟ

ಕೆಲಸಗಳಾದ ಹರಳನ್ನು ಕೂರಿಸುವುದು, ಮಸೆ ಹಾಕುವುದು, ಮುತ್ತುಗಳನ್ನು ಕೂರಿಸುವುದು, ತಿದಿ ಒತ್ತುವುದು ಮುಂತಾದ ಸಣ್ಣ ಪುಟ್ಟ ಕೆಲಸಗಳಲ್ಲಿ ಮಹಿಳೆಯೂ ಸಹಕರಿಸುತ್ತಾಳೆ. ಆಕೆಯ ಸಂಪೂರ್ಣ ಕೆಲಸ ಮನೆ ಕೆಲಸವಾಗಿರುತ್ತದೆ. ಚಿಕ್ಕ ಮಕ್ಕಳು ಸುಮಾರು ಎಂಟು ವರ್ಷಗಳಿಂದಲೇ ಈ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಮಕ್ಕಳು ಈ ಕಾಯಕದಲ್ಲಿ ಭಾಗಿಯಾಗುವುದರಿಂದ ದಿನಂಪ್ರತಿ ಕೊಠಡಿಯನ್ನು ಶುದ್ಧ ಮಾಡುವುದು, ಅಗ್ಗಿಷ್ಟಿಕೆಗೆ ಇದ್ದಿಲು ತುಂಬಿ ಬೆಂಕಿ ಹಚ್ಚಿ ಅಣಿ ಮಾಡುವುದು ತಿದಿ ಒತ್ತುವುದು (ಈಗ ಇದರ ಬದಲಾಗಿ ಬ್ಲೋವರ್ (ಪಂಕ) ಬಳಕೆಯಲ್ಲಿವೆ) ಬಂಗಾರ ಕರಗಿಸುವುದು, ಊದುವುದು ಪಾಲಿಶ್ ಮಾಡುವುದು ಹಿರಿಯರು ಕೇಳಿದ ಸಾಮಾನುಗಳನ್ನು ಒದಗಿಸುವುದು ಹೀಗೆ ವಂಶ ಪರಂಪರೆಯಾಗಿ ಈ ವೃತ್ತಿ ಬೆಳೆದುಕೊಂಡು ಬರುತ್ತದೆ.ಬರುಬರುತ್ತಾ ಅವರೇ ತಂದೆಗಿಂತ ಚೆನ್ನಾಗಿ ಆ ಕಾಲಕ್ಕನುಗುಣವಾಗಿ ಅಭಿರುಚಿಗನುಗುಣವಾಗಿ ತಯಾರಿಸುತ್ತಾರೆ.

ಈ ಅಕ್ಕಸಾಲಿಗಳ ಸಂಬಂಧ ಪಟ್ಟಂತೆ ಯೋಚನೆ ಮಾಡುತ್ತಲೇ ಇದ್ದಾಗ ನಮ್ಮ ದೊಡ್ಡಪ್ಪನ ಮನೆಯಲ್ಲಿ ಕುಳಿತಿದ್ದೆ, ಅಲ್ಲಿ ಒಂದು ವಿಷಯ ಬಗ್ಗೆ ಅಂದರೆ ಮಗಳ ಬಗ್ಗೆ ಮಾತಾಡುತ್ತಿದ್ದರು ಮಗಳಿಗೆ ಗಂಡ ಹೊಂದಿಕೆಯಾಗದೇ ಇದ್ದಂತ ಸಂದರ್ಭದಲ್ಲಿ ದೊಡ್ಡವ್ವ ನಾಲ್ಕು ಜನರ ಎದುರಿಗೆ ಮಾತಾಡುತ್ತಾ ಮಾತಾಡುತ್ತ 'ಹೆಣ್ಣು ಕೆಟ್ರೆ ತೌರು ಮನೆಗೆ ಹೊನ್ನು ಕೆಟ್ರೆ ಅಕ್ಕಸಾಲರ ಮನೆಗೆ' ಎಂದು ಈ ಗಾದೆಯನ್ನು ಹೇಳುತ್ತಿದ್ದಂತೆ ನನ್ನ ಕಿವಿಗಳು ನಿಗುರಿದವು ಹಾಗೆಂದ್ರನು? ಎಂದು ತಕ್ಷಣ ಕೇಳಿದೆ ಆಕೆ ಗಂಡ ಹೆಂಡತಿ ಜಗಳವಾದರೆ ಗಂಡ ಮನೆಬಿಟ್ಟು ಹೊರ ಹಾಕಿದ್ರೆ ಹೆಂಡತಿ ವಿಧಿ ಇಲ್ಲದೇ ತವರು ಮನೆಗೆ ಬರುತ್ತಾಳೆ. ಇಲ್ಲಿ 'ಹೆಣ್ಣು ಕೆಟ್ರೆ ಅಂದರೆ ಆಕೆಯ ಶೀಲದ ವಿಷಯದಲ್ಲಲ್ಲ ಎಂದು ತಿಳಿಯಬೇಕು ವಿಷಯ ತಿಳಿದು ತಂದೆ ತಾಯಿ ಊರಿನ ನಾಲ್ಕು ಜನ ಬುದ್ಧಿವಾದ ಹೇಳಿ ಮತ್ತೆ ಹೊಂದಾಣಿಕೆ ಮಾಡುವ ಹಾಗೆ ಬಂಗಾರ ಕೆಟ್ರೆ ಅಕ್ಕಸಾಲೇರ ಮನೆಗೆ' ಅಂದ್ರೆ ಬೆಂಡೋಲೆ, ಮೂಗುತಿ, ಸರ, ಸೈನು, ಬಳೆ ಇತ್ಯಾದಿ ಆಭರಣಗಳು ಮುರಿದರೆ ಅಕ್ಕಸಾಲಿಗನ ಕೈಯಲ್ಲಿ ಕೊಟ್ಟು ಮಾಡಿಸಿಕೊಳ್ಳುತ್ತಾರೆ. ಇದಕ್ಕೆ ಹೆಣ್ಣು ಕೆಟ್ರೆ ತೌರುಮನೆಗೆ ಹೊನ್ನು ಕೆಟ್ರೆ ಅಕ್ಕಸಾಲರು ಮನೆಗೆ ಎಂಬ ಗಾದೆ ಮಾತುಗಳು ಸಮಾಜದ ಡೊಂಕು ತಿದ್ದುವ ಉಪಮೆಯಗಳಾಗಿ ಬಳಕೆಯಾಗುತ್ತವೆ. ಎಂದರೆ ಈ ಅಕ್ಕಸಾಲಿಗನ ಅವಶ್ಯಕತೆ ಎಷ್ಟಿದೆ ಎಂಬುದರ ಜೊತೆಗೆ ಚಿರಪರಿಚಿತ ನಾಗಿದ್ದಾನೆಂಬುದು ಸಹ ತಿಳಿಯುತ್ತದೆ.

ಹಿಂದಿನ ಕಾಲದಲ್ಲಿ ಚಿನ್ನದ ಆಭರಣಗಳ ಕೆಲಸ ಗೃಹ ಕೈಗಾರಿಕೆಯಾಗಿತ್ತು ಪ್ರತಿಯೊಂದು ಹಳ್ಳಿಯಲ್ಲಿಯೂ ಈ ಉದ್ಯೋಗವನ್ನು ಕೈಗೊಂಡ ಒಂದೆರಡು ಕುಟುಂಬಗಳಿರುತ್ತಿದ್ದವು. ನಗರ ಬೆಳವಣಿಗೆಯಾದಂತೆ ಕಾಲಂತರದಲ್ಲಿ ಈ ವೃತ್ತಿಯಲ್ಲಿ ಮಧ್ಯವರ್ತಿಗಳು ಬೆಳೆದರು ಬಂಗಾರ ಅತ್ಯಂತ ಬೆಲೆಬಾಳುವ ಲೋಹವಾದ್ದರಿಂದ ಈ ವ್ಯಾಪಾರ ಕೈಗೊಳ್ಳುವವರು ಸಮಾಜದಲ್ಲಿ ಶ್ರೀಮಂತರಾಗಿರುತ್ತಾರೆ. ಶ್ರೀಮಂತ ವ್ಯಾಪಾರಿಗಳು ಗ್ರಾಹಕರ ಮತ್ತು ಕೆಲಸಗಾರರ ಮಧ್ಯೆ ಇದ್ದುಕೊಂಡು ಈ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರ ಹಿನ್ನಲೆಯಲ್ಲಿ ಈ ವಿಶ್ವಕರ್ಮ ಜನಾಂಗದ ಅಕ್ಕಸಾಲಿಗರ ಸ್ಥಿತಿ ಅಲುಗಾಡಿತು. ಅವರ ಮಕ್ಕಳು ಪಟ್ಟಣಕ್ಕೆ ವಲಸೆಹೋಗಲು ಪ್ರಾರಂಭಿಸಿದರು. ಈಗ ಆಭರಣಗಳ ತಯಾರಿ ಕೈಗಾರಿಕೆ ಕಾರ್ಖಾನೆ ಪದ್ಧತಿಯಲ್ಲಿ ನಡೆಯುತ್ತಿದ್ದರಿಂದ ಬಡಿಗ್ಯೆಯ ಅಕ್ಕಸಾಲಿಗ ಮೂಲೆ ಗುಂಪಾಗತೊಡಗಿದರು.

"೧೯೬೨ ರಲ್ಲಿ ಕೇಂದ್ರ ಸರ್ಕಾರ ಸುವರ್ಣನಿಯಂತ್ರಣ ಆಜ್ಞೆ" ಜಾರಿಗೆ ಬಂತು ಇಂದರಿಂದಾಗಿ ಒಮ್ಮೆಗೆ ಚಿನ್ನವನ್ನು ಕೊಳ್ಳುವ ಮಾರುವ ವ್ಯವಹಾರವೇ ನಿಂತು ಹೋಯಿತು. ಅಕ್ಕಸಾಲಿಗಾರು ಬಹಳ ಕಷ್ಟ ಪಡಬೇಕಾಯಿತು. ಜೀವನ ನಿರ್ವಹಣೆಯು ಕಷ್ಟವಾಗಿ ಅನೇಕರು ಆತ್ಮಹತ್ಯೆ ಮಾಡಿಕೊಂಡರು. ೧೯೬೭ ರಲ್ಲಿ ಈ ಆಜ್ಞೆ ವಾಪಾಸಾಯಿತು. ("ಗ್ರಾಮೀಣ ವೃತ್ತಿಗಳು ಗ್ರಾ.ಸಂ. ಮಾಲೆ-೧ ಪುಟ ೧೭೬, ಸಂಪಾದಕರು ಡಾ. ದೇವೇಂದ್ರಕುಮಾರ ಹಕಾರಿ ಮತ್ತು ಡಾ. ಕೆ.ಆರ್. ಸಂಧ್ಯಾರೆಡ್ಡಿ)ಬಂಗಾರವನ್ನು ಕೊಳ್ಳುವ ಸ್ಥಿತಿಯಲ್ಲಿರಲಿಲ್ಲ, ಆದರೆ ಕಾಯಕದಲ್ಲಿ ನಿಷ್ಠೆ

ಹೊಂದಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಹೀಗೆ ಇವರ ಬದುಕು ಕಲ್ಲುಮುಳ್ಳಿನ ಹಾದಿಯಾಗಿ ಸಾಗುತ್ತದೆ.

ಸಾಮಾನ್ಯವಾಗಿ ಹುಟ್ಟಿದ ಮೂರು ತಿಂಗಳ ಮಗುವಿಗೆ 'ಮುರುಶಾಸ್ತ್ರ' ಎಂದು ಮಾಡುತ್ತಾರೆ. ಎಲ್ಲಾ ಸಮುದಾಯದವರಲ್ಲಿಯೂ ಈ ಪದ್ಧತಿ ಇದೆ. ಆದರೆ ಮುಸ್ಲಿಂರಲ್ಲಿ ಹೆಣ್ಣು ಮಕ್ಕಳಿಗೆ ಮಾತ್ರ ಹಾಕಿಸುತ್ತಾರೆ. ಈ ಪದ್ಧತಿಯನ್ನು ಇವತ್ತಿಗೂ ಹಳ್ಳಿಗಳಲ್ಲಿ ಮುರು ಅಥವಾ ಮೂಗುತಿಯನ್ನು ಚುಚ್ಚುವ ವಿಧಾನ ಕಂಡು ಬರುತ್ತದೆ. ಇದು ಹಿಂದೂ ಸಂಪ್ರದಾಯ ಮೂಗುತಿಯನ್ನು ಸ್ತ್ರೀಯರಿಗೆ ಮಾತ್ರ ಸೀಮಿತವಾಗಿದೆ. ಮಗು ಹುಟ್ಟಿ ಮೂರು ತಿಂಗಳ ಒಳಗೆ ಹಾಕುವ ಪದ್ಧತಿ ಇದೆ. ಮುರವನ್ನು ಸಾಮಾನ್ಯವಾಗಿ ಶೌರು ಮನೆಯುವರೇ ತರುತ್ತಾರೆ. ಇದನ್ನು ತಯಾರಿಸುವವರು ಈ ಪಾಂಚಾಳರೇ ಆಗಿರುತ್ತಾರೆ. ಮುರ ಚುಚ್ಚುವುದು ಒಂದು ಕಲೆಯೇ, ಇದು ಎಲ್ಲರಿಗೂ ಬರುವುದಿಲ್ಲ. ಅಕ್ಕಸಾಲಿಯ ಹತ್ತಿರ ಮುರವನ್ನು ಮಾಡಿಸಿ ಒಂದಿನ ಗುರ್ತುಮಾಡುತ್ತಾರೆ. ಸಾಮಾನ್ಯವಾಗಿ ಗುರುವಾರ ಅಥವಾ ಭಾನುವಾರದ ದಿನಗಳು ಆ ಸಂಪ್ರದಾಯಕ್ಕೆ ಶುಭದಿನವಂತೆ, ಅವತ್ತೆ ಈ ಕಾರ್ಯವನ್ನು ಮಾಡುತ್ತಾರೆ. ಬರುವಾಗ ಎಲಿ, ಅಡಿಕೆ, ದಕ್ಷಿಣೆ ಅಂದರ ಅವರ ಪರಿಸ್ಥಿತಿಯನ್ನು ಆಧಾರಿಸಿರುತ್ತದೆ. ಇಂತಿಷ್ಟು ಎಂಬ ಬೆಲೆ ಇಲ್ಲ ಒಂದು ನಾಕಣೆ, ಹನ್ನೊಂದು ರೂಪಾಯಿ ಹೀಗೆ ಜೊತೆಗೆ ಒಣ ಕೊಬ್ರಿ ಬಟ್ಲ, ಕುಂಕುಮ, ಬೆಲ್ಲ, ಮಂಡಕ್ಕಿಯನ್ನು ತರುತ್ತಾರೆ. ಮುರವನ್ನು ಪೂಜಿಸಿ ಆ ಮುರುವಿನ ತುದಿಗೆ ಕುಂಕುಮವನ್ನು ನೀರಿನಿಂದ ಕಲಸಿ ಹಚ್ಚಿರುತ್ತಾರೆ. ಈ ಪಾಂಚಾಳರ ಮನೆಯಲ್ಲಿನ ಸ್ತ್ರೀಯರಾಗಬಹುದು ಅಥವಾ ಪುರುಷರಾಗಲಿ ಬೇದಭಾವವಿಲ್ಲ. ಮೆತ್ತನೆಯ ಕಿವಿಯನ್ನು ಹಿಡಿದು ಒಂದೇ ಸಲಕ್ಕೆ ಚುಚ್ಚುತ್ತಾರೆ. ಮಗು ಕಿಟಾರನೆ ಕೂಗಿ ತನ್ನ ಅಳುವಿನ ಧ್ವನಿಯನ್ನು ಪ್ರತಿಧ್ವನಿಸುತ್ತದೆ. ಆದರೆ ಆ ಅಳುವಿನ ಹಿಂದೆ ಸುತ್ತಲಿನ ಜನರು ಸಂತೋಷದಿಂದ ಮುಗಿತು ಮುಗಿತು ಅಂತ ಸಮಾಧಾನ ಪಡಿಸುತ್ತಾ ನಗುತ್ತಿರುತ್ತಾರೆ. ಅದರಂತೆ ಎರಡು ಕಿವಿಯನ್ನು ಚುಚ್ಚಿದ ನಂತರ ಕೊಬ್ಬರಿ ಬಟ್ಟಲನ್ನು ಇಳಿದಗದು ಲಟುಕ್ಕನೇ ಮುರಿದು ಮಂಡಕ್ಕಿಯಲ್ಲಿ ಬೆರಸಿ ಎಲ್ಲರಿಗೂ ಕೊಡುತ್ತಾರೆ. ಇಂತಹ ಕೆಲಸಗಳಲ್ಲಿ ಯಲ್ಲಾಪುರದ ರತ್ನಮ್ಮ ಹೆಸರುವಾಸಿ. ಚುಚ್ಚುವಾಗ ಯಾವುದೋ ಒಂದು ಜೋಗಳವನ್ನು ಹಾಡುತ್ತಿರುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸ್ತ್ರೀಯರೇ ಮುರ ಹಾಕುತ್ತಾರೆ ಅವರು ಅಕ್ಕಸಾಲಿಗಳಾಗಿರಬಹುದು ಅಥವಾ ಇನ್ನುಳಿದ ನಾಲ್ಕು ಜನರಾಗಿರಬಹುದು. ಇನ್ನು ಮೂಗುತಿ ಯಂತು ಸ್ತ್ರೀಯ ಅಲಂಕಾರಿಕ ವಸ್ತು ಇದನ್ನು ಹೆಚ್ಚು ಕಡಿಮೆ ಮದುವೆಗೆ ಇರುವ ಮುನ್ನ ಈ ಮೂಗುತಿಯನ್ನು ಹಾಕಿಕೊಳ್ಳುತ್ತಾರೆ. ಮುರುವಿನ ಪದ್ಧತಿಯಲ್ಲಿಯೇ ಇದನ್ನು ಅನುಸರಿಸುತ್ತಾರೆ.

"ಮೂಗಿಗೆ ಮೂಗುತಿ ಚಂದ
ಕಿವಿಗೆ ಓಲೆ ಚಂದ
ಕೈಗೆ ಬಳೆ ಚಂದ
ಕೊರಳಿಗೆ ಮಾಂಗಲ್ಯ ಚಂದ
ಹೆಂಡತಿಗೆ ಗಂಡನೇ ಚಂದ"

ಎಂದು ಮದುವೆ ಮುಂಜಿವೆಯಗಳಲ್ಲಿ ಸ್ತ್ರೀಯರ ಒಡಪುಗಳನ್ನು ಕೇಳಬಹುದು. ಆದರೆ ಇಂದು ಕಿವಿಗೆ ಓಲೆ ಭಾರ, ಮೂಗಿಗೆ ಮೂಗುತಿ ಭಾರವಾಗಿರುವುದು ಕಂಡುಬರುತ್ತದೆ.

ನಂಬಿಕೆಗಳು

- ಅಕ್ಕಸಾಲಿಯ ಕೈಯಲ್ಲಿ ಮಕ್ಕಳ ಕಿವಿ, ಮೂಗನ್ನು ಚುಚ್ಚಿದರೆ ಗಾಯ ಆಗುವುದಿಲ್ಲ.
- ಅಮಾವಾಸ್ಯೆ ಪೌರ್ಣಮಿಯಂದು ಆಭರಣಗಳನ್ನು ಮಾಡಬಾರದು.
- ಅಚಾರಿ ತನ್ನ ಕೆಲಸ ಆರಂಭಿಸುವ ಮೊದಲು ಅಗ್ಗಷ್ಟಿಕೆಯನ್ನು ಪೂಜಿಸಬೇಕು.
- ಬಂಗಾರ ಲಕ್ಷ್ಮಿ ಇದ್ದಂತೆ ಆದ್ದರಿಂದ ಸೊಂಟದಿಂದ ಕೆಳಗೆ ಆಭರಣದ ರೂಪದಲ್ಲಿ ಹಾಕಿಕೊಂಡರೆ ಅವುಗಳಿಗೆ ಅವಮಾನ ಮಾಡಿದಂತೆ.
- ಹೊಸ ಆಭರಣಗಳನ್ನು ಪೂಜಿಸಿ ನಂತರ ಧರಿಸಬೇಕು.
- ಭೂಮಿಯಿಂದ ಚಿನ್ನವನ್ನು ತಗೆದರೆ ತಕ್ಷಣ ಅದರ ಆತ್ಮ ಹೋಗುತ್ತದೆ.
- ಮದುವೆಯಲ್ಲಿ ಮಾಡಿರುವ ಚಿನ್ನದ ಒಡವೆಯಿಂದ ಒಂಬತ್ತು ಸಲ ಕಣ್ಣು ಕುಟಕೆಯ ಮೇಲೆ ಸವರಿದರೆ ಅದು ನಿವಾರಣೆಯಾಗುತ್ತದೆ.
- ಬಂಗಾರ ದಾನ ಮಾಡುವವರ ಜೀವನ ಸಂತೋಷದಾಯಕ ಹಾಗೂ ವೈಭವಯುತ ವಾಗಿರುತ್ತದೆ.
- ದಕ್ಷಿಣ ದಿಕ್ಕಿಗೆ ಹರಿಯುವ ನದಿಗಳಲ್ಲಿ ಚಿನ್ನ ಮುತ್ತುಗಳು ದೊರಕುತ್ತವೆ.
- ಸೂರ್ಯನಿಂದ ಚಿನ್ನ ದೊರೆಯುತ್ತದೆ.
- ಸತು ಹಾಗೂ ದಂತವನ್ನು ಚಿನ್ನದ ಗಣಿಯೊಳಗೆ ಒಯ್ಯಬಾರದು.
- ಚಿನ್ನವನ್ನು ಗಣಿಯಿಂದ ತೆಗೆದವರ ಮೇಲೆ ಅದರ ಆತ್ಮ ಸೇಡು ತೀರಿಸಿಕೊಳ್ಳುತ್ತದೆ.
- ಗೃಹಿಣಿ ಮೂಗುತಿ ಧರಿಸಬೇಕು.
- ಹವಳದ ಆಭರಣಗಳನ್ನು ಧರಿಸಿದರೆ ಮರುಳು, ಹುಚ್ಚು ವಾಸಿಯಾಗುತ್ತೆ.
- ಕಂದು ಬಣ್ಣದ ಹವಳವನ್ನು ಬಳಸಬಾರದು ದುಷ್ಟಶಕ್ತಿಗೆ ಈ ಬಣ್ಣ ಕಂಡರೆ ಇಷ್ಟ.
- ಹವಳವನ್ನು ಮನೆಯಲ್ಲಿ ತೂಗು ಹಾಕಿದರೆ ಶುಭ, ಕೆಟ್ಟ ಶಕ್ತಿಗಳು ಪ್ರವೇಶಿಸುವುದಿಲ್ಲ.
- ಮಂಚದ ಬಳಿ ಹವಳ ತೂಗುಹಾಕಿದರೆ ಭಯವಾಗುತ್ತದೆ.
- ಮೈ ಮೇಲೆ ಧರಿಸಿದರೆ ಆಪತ್ತುಗಳಿಂದ ರಕ್ಷಿಸಲ್ಪಡುತ್ತಾರೆ.
- ಕುಲುಮೆ ಹುಟ್ಟಿದ ಮೇಲೆ ಕುಲ ಹುಟ್ಟಿತು.
- ವಿಶ್ವಕರ್ಮ ವಂಶ ಸಂಭೂತನಾಗಿರುವವನೇ ಮಾಂಗಲ್ಯ, ಮೂಗುತಿ ಬಳೆ, ಕಾಲುಂಗರ, ಕುತ್ತಿಗೆ ಸರವನ್ನು ಮಾಡಬೇಕು.

ಹೀಗೆ ಅಕ್ಕಸಾಲಿಗಳು ಮತ್ತು ಅದನ್ನು ದರಿಸುವ ಜನರು ಈ ತರಗ ನಂಬಿಕೆಗಳನ್ನು ಇಟ್ಟುಕೊಂಡು ಬಂದಿರುವುದನ್ನು ಕಾಣಬಹುದು.

ವೃತ್ತಿ ಉಪಕರಣಗಳು

ಅಗ್ಗಷ್ಟಿಕೆ.	ಅಡಿಗಲ್ಲು.
ಅಡೆಮರ.	ಅರ.
ಮೂಲಿಅರ.	ಪಟ್ಟಿಅರ.
ಚಾಕುಅರ್ಣ (ಅರ)	ಗುಂಡಿಅರ.
ಡೊಪ್ಪಿಅರ್ಣ.	ಅವತಗಿ(ಮೂಸೆ,ಕೋವೆ)
ಆನೆ.	ಪೀನ ಮಸೂರ.
ಇಂಚುಪಟ್ಟಿ.	ಇಕ್ಕಳ. (ಮನೆಗವು)
ಕತ್ತರಿ.	ಚಿಮಟಗಿ. (ಸಮಸಿ)
ಊದುಕೊಳವಿ.	ಹಿಡಿ. (ಥಂಡಾಸ.)
ಎರಕದ ಕಲ್ಲು (ರೇಜ)	ಜಲಪಾತ್ರೆ.
ಸುತ್ತಿಗೆ.	ಗಜ್ಜಕುಳಿ (ಮುಗ್ಧರ)
ಗೂಟ. (ಗೂಂಟಿಗೆ)	ತ್ರಿಜ್ಯಮಾಪಕ.
ಬೈರಿಗೆ.	ತ್ರಾಸು.
ಬಾಗಿದ ನಳಿಗೆ.	ಪಾಲಿಶ್ ಪೌಡರ್.
ಕುಂಚಗಳು.	ತೂಕದ ಪ್ರಮಾಣಗಳು.

ರಾಸಾಯನಿಕ ವಸ್ತುಗಳು

ಬೆಳಗಾರ.	ಪಟಿಕಾರ.
ಪೆಟ್ಲುಪ್ಪು.	ರಸಕರ್ಪೂರ.
ಅರಗು.	ಸಯನಾಡ್.
ರಾಜದ್ರವ.	ಗಂಧಕಾಮ್ಲ.
ನೈಟ್ರಿಕಾಮ್ಲ.	ನವಸಾಗರ.

ತಯಾರಿಸುವ ಉಪಕರಣಗಳು

ಅಕ್ಕಸಾಲಿಗರು ತಮ್ಮ ಕುಶಲ ಕೆಲಸಕ್ಕೆ ಉಪಯೋಗಿಸುವ ಉಪಕರಣಗಳನ್ನು ಬಳಸಿ ಆಭರಣಗಳನ್ನು ತಯಾರಿಸುತ್ತಾರೆ. ಇಲ್ಲಿ ಅಲಂಕಾರಿಕ ಆಭರಣಗಳ ಪಟ್ಟಿ ನೀಡಿ ಈ ಆಭರಣಗಳು ಜನ ಸಮುದಾಯದ ಸಾಮಾಜಿಕ

ರಚನೆ, ವೃತ್ತಿ, ಸಾಂಸ್ಕೃತಿಕ ಸ್ಥಾನಮಾನಗಳ ಹಿನ್ನಲೆಯಲ್ಲಿದ್ದು ಜನರಜೀವನ, ವಿಧಾನ, ಉತ್ಪಾದನೆ, ವಿತರಣೆ, ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳ ತಾಂತ್ರಿಕ ಅವಿಷ್ಕಾರಗಳಿಂದಾಗಿ ತೀವ್ರತರದ ಪಲ್ಲಟ, ಬದಲಾವಣೆ ಮತ್ತು ಹೊಸ ರಚನೆಗಳು ಉಂಟಾಗುತ್ತಿರುವ ಈ ಸಂದರ್ಭಲ್ಲಿ ಭಾಷೆಯೂ ಇದರಿಂದ ಹೊರತಾಗಿಲ್ಲ. ಅದರಂತೆ ಈ ಆಭರಣಗಳ ಕಾಲಕ್ಕನುಗುಣವಾಗಿ ಬದಲಾವಣೆಗಳಾಗುತ್ತಿರುತ್ತವೆ. ಈ ಆಭರಣಗಳ ಪದಗಳು ಕಾಲಾಂತರದಲ್ಲಿ ಪಲ್ಲಟಗೊಳ್ಳುತ್ತಿರುವುದು ಗೊತ್ತಿರುವ ವಿಚಾರವೇ ಆದರೂ ಅಕ್ಕಸಾಲಿಗರು ತಯಾರಿಸುವ ಉಪಕರಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಕೊಂಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಮೂಗುತಿ	–	ಮೂಗಿಗೆ ಧರಿಸುವ ಆಭರಣ.
ಬೆಂಡೋಲೆ	–	ಕಿವಿಯ ಆಭರಣ.
ತಾಳಿ	–	ತಾಳಿಸರದ ಬಿಲ್ಲೆ.
ಕಾಲುಂಗರ	–	ಕಾಲಿನ ಆಭರಣ.
ಅಕ್ಷ	–	ಬೆಳ್ಳಿಯ ತಲೆಕೂದಲುಪಿನ್ನು.
ಅಗಸಿಕಡ್ಡಿ	–	ಕಿವಿಯ ಆಭರಣ.
ಆರ್ತಿ	–	ಪೂಜಾ ಸಾಮಾಗ್ರಿ.
ಉಂಗುರ	–	ಬೆರಳಿನ ಆಭರಣ.
ಉಂಗರ ಸರಪಳಿ	–	ಮುಂಗೈನ ಆಭರಣ.
ಪಟ್ಟಿ ಉಂಗ್ರ	–	ವಿವಿಧ ರೀತಿಯ ಬೆರಳಿನ ಆಭರಣ.
ಉಡುದಾರ	–	ಗಂಡಸರ ಸೊಂಟದ ಆಭರಣ.
ಒಡ್ಯಾಣ	–	ಸೋಂಟದ ಆಭರಣ.
ಕಂಕಣ	–	ಕೈಯಲ್ಲಿ ಧರಿಸುವ ಒಂದು ಆಭರಣ.
ಕಂಟಕೆ	–	ಕಂಠದ ಆಭರಣ.
ಕಂಠಾಭರಣ	–	ಕೊರಳಲ್ಲಿ ಧರಿಸುವ ಆಭರಣ.
ಕಡಗ	–	ಕೈ ಅಥವಾ ಕಾಲನ್ನು ಧರಿಸುವ ಆಭರಣ.
ಹಾಲ್ಗಡಗ	–	ಮಕ್ಕಳ ಕಾಲಿಗೆ ಹಾಕುವ ಆಭರಣ.
ಕಡೆ	–	ಮುಂಗೈ ಆಭರಣ.
ಕಂಕಣ ಬತ್ತಿ	–	ಕಣ್ಣುಗಳಿಗೆ ಹಾಕುವ ಆಭರಣ.
ಕೊರಿಮೀಸೆ	–	ಚಿನ್ನ ಅಥವಾ ಬೆಳ್ಳಿಯ ಆಭರಣ.

ಕರಡಿಗೆ – ಧಾರ್ಮಿಕ ಕಾರಣಗಳಿಗೆ ಧರಿಸುವ ಆಭರಣ.

ಕಳವರ್ – ಪುರುಷರ ಕಿವಿಯ ಆಭರಣ.

ಕಳಸ – ದೇವಸ್ಥಾನ ರಥಗಳಿಗೆ ಮಾಡಿಕೊಡುವ ವಸ್ತು.

ಸಂಚಿಕ್ಕಳ್ಳ – ಕಳಸದ ಒಂದುವಿಧ.

ಕಾಂಚನ ಮಾಲೆ – ಚಿನ್ನದ ಸರ.

ಕಾಲೊಂಧ್ಗಿ – ಮಹಿಳೆಯ ಕಾಲಿನ ಆಭರಣ.

ಕಿರೀಟ – ದೇವರು ಅಥವಾ ರಾಜರು ಧರಿಸುತ್ತಿದ್ದ ಕಿರೀಟ.

ಕೊಂಡ್ಲು – ಪುರುಷರು, ಮಕ್ಕಳು ಕಿವಿಯ ಒಂದು ಆಭರಣ.

ಕೊಯ್ಯಿ ಪತ್ರ – ಮುಸಲ್ಮಾನರ ಮಹಿಳೆಯರು ಧರಿಸುವ ತಾಳಿರೀತಿಯ ಆಭರಣ.

ಕೋವಿಮಣಿ – ತಾಳಿಯಲ್ಲಿ ಪೋಣಿಸುವ ಆಭರಣ.

ಕ್ಯಾಧ್ಗಿ – ಹೂವಿನಾಕರದ ಒಂದು ಆಭರಣ.

ಬಂಗಾರದ ಕ್ಯಾಧ್ಗಿ – ತಲೆಗೂದಲಲ್ಲಿ ಧರಿಸುವ ಆಭರಣ.

ಗಗ್ರ – ದನಗಳ ಕಾಲಿಗೆ ಮಾಡಿಕೊಡುವ ಆಭರಣ.

ಗುಂಡು – ಕೊರಳಲ್ಲಿ ಧರಿಸುವ ಸರ, ತಾಳಿಸರದ ಮಧ್ಯ ಪೋಣಿಸುವ ಚಿನ್ನದಮಣಿ.

ಗೆಜ್ಜೆ – ಬೆಳ್ಳಿ ಅಥವಾ ಚಿನ್ನದಲ್ಲಿ ಮಾಡಿದ ವಿವಿಧ ಆಭರಣಗಳು.

ಕಾಲ್ಗೆಜ್ಜೆ – ಕಾಲಲ್ಲಿ ಧರಿಸುವ ಆಭರಣ.

ಛತ್ರಿ – ದೇವರಿಗೆ ಧರ್ಮಕಾರ್ಯಕ್ಕೆ ಮಾಡಿಕೊಡುವ ಲೋಹದ ಕೊಡೆ.

ಜಲಪಹಾರ – ಕೊರಳಿನ ಹಾರ.

ಡಾಬು – ಸೊಂಟದಲ್ಲಿ ಧರಿಸುವ ಆಭರಣ.

ತಾಯತ – ಕೊರಳು ಮತ್ತು ರಟ್ಟೆಯಲ್ಲಿ ಧರಿಸುವ ವಸ್ತು.

ತಾಲೂಕ್‌ಕಡ್ಡಿ – ಕಿವಿಯ ಆಭರಣ.

ಕೈ ತೊಡೇವು – ಕೈಗಳ ಆಭರಣ.

ನಕ್ಲೇಸ್ – ಕೊರಳಲ್ಲಿನ ಆಭರಣ.

ನತ್ತು – ಮೂಗಿನ ಆಭರಣ.

ನಾಗರ – ತಲೆಯಲ್ಲಿ ಧರಿಸುವ ಆಭರಣ.

ಲೋಲಾಕು.	ಓಲೆ.
ಕಾಸಿನ್‌ಸರ.	ಸಿಂಹಾಸನ.
ಮೂಗುಬಟ್ಟು.	ಮಾಟೀಲು.
ಪಾಟ್ಲಿ.	ಪಿರುಕಿ.
ಪೀಠ.	ಬಳೆ.
ಮುತ್ತಿನ ಬುಗುಡಿ.	ಕತ್ತಿ.
ಮುರುವು.	ಲಿಂಗದಕಾಯಿ.
ವಂಕಿ.	ಅವಲಕ್ಕಿಸರ.
ಗೋಧಿಸರ.	ಪಾದರಕ್ಷೆ.
ಕಾಲ್‌ಪಿಲ್ಲಿ.	ಪೇಟ.
ಪೇಟ.	ಬುಗುಡಿ ಕಡ್ಡಿ.

ಈ ರೀತಿಯಾಗಿ ಈ ಅಕ್ಕಸಾಲಿಗಳು ವಿವಿಧ ಬಗೆಯ ಹೊಸಹೊಸ ರೀತಿಯ ಮತ್ತು ಕಾಲಕ್ಕನುಗುಣವಾಗಿ ಜನರ ಅಭಿರುಚಿಗೆ ತಕ್ಕಂತೆ ಆಭರಣಗಳನ್ನು ತಯಾರಿಸುತ್ತಾ ಬಂದಿದ್ದಾರೆ. ಈ ಆಭರಣಗಳು ಇತ್ತೀಚಿನ ದಿನಗಳಲ್ಲಿ ಮೋಹದ ಆಭರಣಗಳಾಗಿ ಪರಿವರ್ತನೆಗೊಂಡಿವೆ.

ಈ) ಶಿಲ್ಪಗಾರಿಕೆ

ಭಾರತ ಸಾಂಸ್ಕೃತಿಕವಾಗಿ ಹಿಡಿ ಜಗತ್ತಿಗೆ ಕೊಡುಗೆ ಕೊಟ್ಟಿದೆ ಎಂದರೆ ಅದು ಶಿಲ್ಪಕಲೆ. ಇವತ್ತು ಅಥವ ಹಿಂದೆ ಈ ದೇಶದ ಸೌಂದರ್ಯವನ್ನು ಆಶ್ವಾದನೆ ಮಡುವುದಕ್ಕೋಸ್ಕರವೆ ವಿದೇಶಿ ಪ್ರವಾಸಿರು ಬರುತ್ತಿರುವುದು ಈ ದೇಶದ ಕಲಾಕೃತಿಗಳು ತನ್ನ ಆಕರ್ಷಕ ಸೌಂದರ್ಯೋಪಾಸನಕ್ಕೆ ಮೈಮರೆತು ವೀಕ್ಷಣೆಗಳೊಳಪಟ್ಟಿರುವುದನ್ನು ಗಮನಿಸಿದರೆ ಅದ್ಭುತ ಕಲೆಗೆ ಬೆಲೆ ಎಷ್ಟಿರಬಹುದು. ಕಲೆಯಲ್ಲಿ ಸಂಗೀತ, ಸಾಹಿತ್ಯ, ವಾದ್ಯ, ಚಿತ್ರಕಲೆ, ಕರಕುಶಲತೆ ಇನ್ನು ಅನೇಕಗಳಷ್ಟು ಬೆಳೆಯುತ್ತ ಹೋಗುವುದು ಸಹಜವೇ. ಅದರೆ ಶಿಲ್ಪಕಲೆ ಎನ್ನುವ ಕಲೆ ಸಾಂಸ್ಕೃತಿಕ ಸಂಪದ್ಭರಿತವಾದವುಗಳು. ಕಲಾರಾಧನೆ ಇದು ಎಲ್ಲರಲ್ಲೂ ಇರುವ ಒಂದು ಗ್ರಹಿಕೆ. ಕಲೆಯನ್ನು ಕಲಾರಾಧಕರು ಮನಸ್ಸು ತುಂಬುವಷ್ಟು ನೋಡಿದಷ್ಟು ಸಂತೋಷ ಪಡುತ್ತದೆ. ಎಂದರೆ ಆ ಕಲೆಯ ಹಿಂದೆ ಶಿಲ್ಪಿಯ ಕಲ್ಪನೆ. ಖ್ಯಾತಿ. ಸ್ವಯಂಖ್ಯಾತಿ. ಶಕ್ತಿಪ್ರದರ್ಶನ, ಜಿವರು, ಕಾಲ ಇವುಗಳೆಲ್ಲದರ ಹಿಂದೆ ಶಿಲ್ಪಿಯ ಮನಸ್ಸು ಎಂತದ್ದಿರಬಹುದು. ಇವುಗಳಲ್ಲಿ ಪ್ರಮುಖವಾಗಿ ಮೊದಲ ಸಾಲಿನಲ್ಲಿ ನಿಲ್ಲುವುದು ಅಥವಾ ಕೀರ್ತಿ ಹೆಸರು ಸಲ್ಲುವುದು ಶಿಲ್ಪಿಗೆ.

ಶಿಲ್ಪಿ ಎನ್ನುವ ಪದವನ್ನು ವಿಶ್ಲೇಷಿಸುತ್ತಾ ಹೋದರೆ ಅದರ ಮೂಲ ಶಬ್ದದ ಗ್ರಹಿಕೆ ಅರ್ಥವಾಗಬಹುದು. ಶಿಲ್ಪಿ ಎನ್ನುವ ಪದವನ್ನು ನೋಡಿದರೆ ಮೇಲಿನ ಗ್ರಹಿಕೆಯೇ ಗೊತ್ತಾಗುತ್ತೆ. ಶಿಲೆಯಲ್ಲಿ ಕೆಲಸ ಮಾಡುವವನು ಶಿಲ್ಪಿ ಅಂದರೆ ಶಿಲೆ ಎಂದರೆ ಕಲ್ಲು ಕಲ್ಲಿನಲ್ಲಿ ಕೆಲಸ ಮಾಡುವವರೆಲ್ಲಾ ಶಿಲ್ಪಿಗಳೇ? ಎಂದರೆ ಅದು ಅಲ್ಲ ಏಕೆಂದರೆ ಬೀಸುವಕಲ್ಲು, ಒಳಕಲ್ಲು, ತಿರುಗುಂಡು, ದುಂಡಿ, ಕೊಣಗಿ ಇತ್ಯಾದಿಗಳ ಕೆಲಸ ಮಾಡುವ ಒಂದು ವರ್ಗಇದೆ ಅದೇ ಕಲ್ಲುಕುಟಿಗ ಇವರೂ ಶಿಲೆಯಲ್ಲಿ ಕಾಯಕ ಮಾಡುತ್ತಾರೆ. ಪಾಂಚಾಳರೂ ಶಿಲೆಯಲ್ಲಿ ಕೆಲಸ ಮಾಡುತ್ತಾರೆ. ಇವರಿಬ್ಬರಿಗೂ ಶಿಲ್ಪಿಗಳು ಎಂದು ಏಕೆ ಕರೆಯಬಾರದು. ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಪೂಜೆಗೋಸ್ಕರ ಅಥವಾ ಆರಾಧನೆಗೋಸ್ಕರವಾಗಿ ಕಲೆ ಬೇರೆ ಬಳಕೆಗಳಿಗೆ ಬಳಸುವ ವಸ್ತುಗಳು ಬೇರೆ. ಅವಕ್ಕೆ ತನ್ನದೇ ಆಚಾರ.

ನಂಬಿಕೆ, ಆಯಾ ಕಲ್ಪನೆಗಳಿವೆ ಇವುಗಳನ್ನು ಸ್ಥಪತಿಗಳು ಮಾಡುವ ಕಾಯಕವಾದ್ದರಿಂದ ಈ ಕಲೆಗೆ ವಿಶೇಷ ಬೆಲೆ ಇದೆ ಆನಂದವೂ ಇದೆ.

ಶಿಲ್ಪಿ ಎಂಬ ಪದವು ಶಿಲ್ಪಿ(ಗ)(ತ)–ಚಿಟ್ಟಿಗ(ಶ್ಟ) ಆದರೆ ಚಿಪ್ಪಿಗವು–ಶಿಲ್ಪಿಗ ಎಂಬ ಪದಗಳು ಬಂದವು ಆದರೆ ನಿರ್ದಿಷ್ಟವಾದ ಅರ್ಥವನ್ನು ಗ್ರಹಿಸಲಿಕ್ಕೆ ಸಾಧ್ಯವಾಗಿಲ್ಲ. ಶಿಲ್ಪ ಎನ್ನುವುದು ನಿತ್ಯವೂ ತೀರಾ ಸಾಧಾರಣವಾಗಿ ಬಳಸುವ ಪದ ಶಿಲ್ಪವು ತಪಸ್ಸಿನಿಂದ ಮಾತ್ರವೆ ಸಾಧ್ಯವಾಗುವಂತಹದು. ಈ ತಪಸ್ಸಿಗೆ ಮೊದಲು ಸಂಕಲ್ಪ, ಸಂಕಲ್ಪದಿಂದ ಪ್ರೇರಿತವಾದ ಆಲೋಚನೆ, ಧ್ಯಾನ, ಭಾವನೆ ಇತ್ಯಾದಿಗಳನ್ನೆಲ್ಲಾ ಒಳಗೊಂಡ ತಪಸ್ಸಿನ ಫಲವೇ ಶಿಲ್ಪ. ಶಿಲ್ಪ ಶಬ್ದವು 'ಶೀಲ ಸಮಾಧೌ' ಎಂಬ ಧಾತುವಿನಿಂದ ವ್ಯುತ್ಪತ್ತಿಯಾಗಿದೆ. ಸಮಾಧಿ ಎಂಬ ಅರ್ಥವುಳ್ಳ 'ಶಿಲ್' ಧಾತುವು ತಪಸ್ಸನ್ನೇ ಸೂಚಿಸುತ್ತದೆ. ಏಕೆಂದರೆ ತಪಸ್ಸಿನ ಪ್ರಭಾವದಿಂದ ನಿರ್ವಹಿಸಲ್ಪಡುತ್ತಿರುವುದು ಶಿಲ್ಪ ಎಂಬುದು ಒಂದು ಅರ್ಥ, ಶಿಲ್ಪಿಯಾದವನು ತನ್ನ ತಪಸ್ಸಿನಿಂದ (ಸಂಕಲ್ಪ, ಆಲೋಚನೆ, ನಿರ್ಮಾಣ ಇತ್ಯಾದಿಗಳಿಂದ) ಶಿಲ್ಪ ನಿರ್ಮಾಣವನ್ನು ಮಾಡಿ ಕೃತಕೃತ್ಯನಾಗುತ್ತಾರೆ. (ಶಿಲ್ಪದರ್ಶಿ ಸಂಪುಟ–೧, ಜಿ. ಜ್ಞಾನಾನಂದ ಪುಟ–೩) ಆದ್ದರಿಂದ ಮೊದಲ ಅರ್ಥವು ಶಿಲ್ಪಕಲಾ ದರ್ಶಕನ ಪರವಾಗಿ ಅನ್ವಯಿಸಬೇಕಾಗುತ್ತದೆ. ಏಕಾಗ್ರತೆ ಚಿತ್ತದಿಂದ ಶಿಲ್ಪಿಯು ನಡೆಸುವ ಶಿಲ್ಪಕರ್ಮದ ಫಲವಾಗಿ ರೂಪಗೊಳ್ಳುವ ಶಿಲ್ಪವು ಅದನ್ನು ನೋಡುವವನಲ್ಲಿಯ ಸೌಂದರ್ಯೋಪಾಸನೆಯು ಪ್ರವೃತ್ತಿಯನ್ನು ಉದ್ದೀಪನಗೊಳಿಸಿ ಅವನಿಗೆ ಸಮಾಧಿ ಸ್ಥಿತಿಯನ್ನು ತಂದುಕೊಟ್ಟು ಆನಂದವನ್ನು ಕರುಣಿಸುತ್ತದೆ. ಆದ್ದರಿಂದ ಶಿಲ್ಪವು ಅತ್ಯಂತ ಮಹತ್ತರವೂ ಪೂಜ್ಯವೂ ಆದುದು.

ಈ ಶಿಲ್ಪಶಾಸ್ತ್ರವು ಸ್ಥಾಪತ್ಯವೇದವೆನಿಸಿಕೊಳ್ಳುತ್ತದೆ. ಸ್ಥಾಪಿತವೆಂದರೆ ಶಿಲ್ಪವೇ. ಈ ಶಿಲ್ಪವೇದವನ್ನು ಅಥರ್ವವೇದಕ್ಕೆ ಉಪವೇದವಾಗಿ ಹೇಳಿರುವುದರಿಂದ ಅವೆರಡಕ್ಕು ಸಂಬಂಧವಿದೆ ಎಂಬುದು ತಿಳಿದು ಬರುತ್ತದೆ. ಶಿಲ್ಪವು ವೈದಿಕ ಧರ್ಮದಲ್ಲಿ ಇತರ ಕಲೆಗಳಂತಯೇ ಧಾರ್ಮಿಕ ಕರ್ತೃಗಳ ಫಲವಾಗಿಯೇ ಪ್ರಾರಂಭವಾದುದು. ಯಜ್ಞವೇದ ಮತ್ತು ಯಜ್ಞಶಾಲೆಗಳ ನಿರ್ಮಾಣಕ್ಕಾಗಿ ಇದು ಮೊದಲಿಗೆ ರೂಪಗೊಂಡಿತು. ವೇದಗಳ ಆಕಾರಗಳು ನಾನಾ ರೀತಿಯಲ್ಲಿ ಇದ್ದುದರಿಂದ ಕಲಾತ್ಮಕವಾಗಿ ಅವನ್ನು ರೂಪಿಸಲು ಅವಕಾಶವಿತ್ತು ಶಿಲ್ಪ ಸೂತ್ರಗಳೇ ಪ್ರಥಮಶಾಸ್ತ್ರವೆಂದು ವಿದ್ವಾಂಸರು ಪರಿಗಣಿಸುತ್ತಾರೆ. (ಶಿಲ್ಪದರ್ಶ ಸಂಪುಟ–೧, ಜಿ. ಜ್ಞಾನನಂದ ಪು–೬) ಭಾರತೀಯ ಸಂಪ್ರದಾಯದ ಪ್ರಕಾರ ಶಿಲ್ಪವು ವಿಶಾಲವಾದ ಅರ್ಥದಿಂದ ಕೂಡಿದೆ. ಮೊದಲನೆಯದಾಗಿ ಶಿಲ್ಪಿವೆಂದರೆ ಕಟ್ಟಡಗಳನ್ನು ಕಟ್ಟುವಿಕೆ. ಕಟ್ಟಡಗಳು ದೇವಾಲಯುಗಳಾಗಿಬಹುದು. ವಾಸಿಸುವ ಮನೆಗಳಾಗಿರಬಹುದು. ಅಥವಾ ಕೋಟೆ ಕೊತ್ತಗಳಾಗಿರಬಹುದು, ಎರಡನೆಯದಾಗಿ ಪಟ್ಟಣಗಳ ನಿರ್ಮಾಣ, ತೋಟಗಳ ನಿರ್ಮಾಣ, ರಸ್ತೆಗಳನ್ನು ರಚಿಸುವುದು ಮತ್ತು ಬಾವಿ. ಕೆರೆ, ಕಾಲುವೆಗಳನ್ನು ತೆಗೆಸುವುದು ಮೂರನೆಯದಾಗಿ ಮಂಚ, ಸಿಂಹಾಸನ ಮೊದಲಾದ ಮಂಗಳಾಸಗಳನ್ನು ಮಾಡುವುದು ತೋಳು, ತಲೆ, ಕೈಕಾಲುಗಳಿಗೆ ಬೇಕಾದ ಆಭರಣಗಳ ತಯಾರಿಕೆ, ಮೂರ್ತಿಶಿಲ್ಪವೂ ಶಿಲ್ಪದಲ್ಲಿಯೇ ಅಡಕವಾಗಿದೆ. ಶಿಲ್ಪಶಾಸ್ತ್ರದ ಪ್ರಚಾರವು ಕಡಿಮೆಯಾಗಲು ಒಂದು ಮುಖ್ಯಕಾರಣವೆಂದರೆ ಕೇವಲ ಗ್ರಂಥದ ಅಧ್ಯಯನದಿಂದ ಮಾತ್ರ ಸಾಧ್ಯವಿಲ್ಲ. ಅದು ಅನುಭವಕ್ಕೆ ಬರುವ ವಿಷಯವಲ್ಲ ಎಂಬುದು. ಪರಂಪರೆಯಿಂದ ಶಿಲ್ಪಿ ಕೌಶಲ್ಯವನ್ನು ಗುರುವಿನ ಬಳಿ ಪ್ರಯೋಗ ಪೂರ್ವಕವಾಗಿ ಅಭ್ಯಾಸ ಮಾಡಿದರೆ ಮಾತ್ರವೇ ಶಿಲ್ಪವು ಕೈವಶವಾಗಬಲ್ಲದು. ಜೀವಶಾಸ್ತ್ರ, ರಸಾಯನಶಾಸ್ತ್ರ ಭೌಶಾಸ್ತ್ರಗಳು ಹೇಗೆ ಪ್ರಯೋಗ ಶಾಲೆಗಳಲ್ಲಿ ಪ್ರಯೋಗಗಳ ಮೂಲಕವೇ ಕಲಿಯಲಾಗುತ್ತದೆಯೋ ಅದೇ ರೀತಿಯಾಗಿ ಶಿಲ್ಪಶಾಸ್ತ್ರವನ್ನು ಮಾಡುವುದರ ಮುಖಾಂತರವೇ ಕಲಿಯೇಕು ಇಂದು ಇಂತಹ ಶಿಲ್ಪವಿದ್ಯಾ ಶಾಲೆಗಳು ಭಾರತದಲ್ಲಿ ನಾಶವಾಗಿಲ್ಲ ಎಂದು ಹೇಳಲು ಕೆಲವು ಮಾತ್ರ ಉಳಿದಿವೆ.

ಆದರೆ ಇಂತಹ ನಂಬಿಕೆ ವಿದ್ಯಾಶಾಲೆಯಲ್ಲಿಯೇ ಈ ವಿದ್ಯೆ ಒಲಿಯುತ್ತದೆ ಎಂಬ ವಾದವನ್ನು ತಳ್ಳಿ ಹಾಕಬಹುದು. ಏಕೆಂದರೆ ಈ ಪಾಂಚಾಳರು ತಮ್ಮ ವೃತ್ತಿ ಪರಂಪರೆಯಿಂದ ಪರಂಪರೆಗೆ ಈ ಕೌಶಲ್ಯ ಬೆಳೆದುಕೊಂಡು ಬಂದಿರುತ್ತಾರೆ.

ಮಗು ತಾನು ಬೆಳೆಯುವ ಪರಿಸರದಲ್ಲಿ ದಿನಾಲು ನೋಡುತ್ತಾ ಬರುಬರುತ್ತಾ ಉಳಿ ಮಸೆಯುವುದು, ನಂತರ ಒರಟು ಕಲ್ಲನ್ನು ಒಡೆಯುವುದು ಹೀಗೆ ದಿನಂಪ್ರತಿಯೂ ಈ ಮಗುವಿನ ಮನಸ್ಸಿನಲ್ಲಿ ಕಲಿಕೆಯೆನ್ನುವುದು ವಂಶಪರಂಪರೆಯಾಗಿ ಬೆಳೆದು ಕೊಂಡು ಬರುತ್ತದೆ. ಅವನು ಯಾವುದೇ ವಿದ್ಯಾಶಾಲೆಗೆ ಹೋಗುವ ಅವಶ್ಯಕತೆ ಇಲ್ಲ. ಮನೆಯೇ ಶಾಲೆ, ಹಿರಿಯರೆ ಗುರುವಿನ ಸ್ಥಾನವನ್ನು ತುಂಬಿರುತ್ತಾರೆ. ಇಲ್ಲಿ ಮುಖ್ಯವಾದ ವಿಚಾರವನ್ನು ಗಮನಿಸ ಬಹುದಾದರೆ ಶಿಲ್ಪ ಎನ್ನುವುದು ಅನುಭವದಿಂದ ಬರುವಂತದ್ದು. ಪರಂಪರೆಯಿಂದ ಕುಟುಂಬದಲ್ಲಿ ಕಾಯಕಮಾಡುತ್ತಾ ಕರಗತವಾಗಿ ಶ್ರೇಷ್ಠ ಶಿಲ್ಪಿಗಳಾಗುತ್ತಾರೆ. ಶಿಲ್ಪಿಗಳು ಯಾವುದೇ ಶಾಸ್ತ್ರಗ್ರಂಥಗಳನ್ನು ಓದದೆ ನಿರರ್ಗಳವಾಗಿ ಕೆಲಸದಲ್ಲಿ ತೊಡಗುತ್ತಾರೆ. ವಂಶ ಪಂರಂಪರೆಯಿಂದ ಇಂತಹ ಗುಣಗಳು ಹುಟ್ಟುತ್ತಲೇ ಬಂದಿರುತ್ತಾರೆ. ಶಿಲ್ಪ ವಿದ್ಯೆಯನ್ನು ಕರಗ್ಗತ ಮಾಡಿಕೊಳ್ಳುವಲ್ಲಿ ಹೆಚ್ಚು ಶ್ರಮ ಪಡಲಾರರು. ಇದಕ್ಕೆ ಅಕ್ಷರಸ್ಥ ಅನಕ್ಷರಸ್ಥ ಎಂಬ ಭೇದ ಭಾವವಿಲ್ಲ ಅಥವಾ ಮನುಷ್ಯ ಹೀಗೆ ಗುಣಗಳನ್ನು ಹೊಂದಿರಬೇಕೆಂಬ ನಿಯಮಗಳೂ ಇಲ್ಲ. ಅವನಲ್ಲಿ ಶಿಲ್ಪದ ಬಗ್ಗೆ ಆಸಕ್ತಿಹೊಂದಿದ್ದರೆ ಸಾಕು ಅವನು ಶಿಲ್ಪಿಯಾದಂತೆ ಹೀಗೆ ಶಿಲ್ಪಿಗಳು ಶಿಲೆಯಲ್ಲಿ ತಮ್ಮ ಕಾಯಕವನ್ನು ಮಾಡುತ್ತಾ ನೋಡುಗರ ಕಣ್ಸೆಳೆದು ಮನಸ್ಸಿಗೆ ಆನಂದ ನೀಡುವುದನ್ನು ಒಪ್ಪಿಕೊಳ್ಳ ಬಹುದು. ಅದಕ್ಕೆ ಪೂರಕವಾಗಿ ಶ್ರಮ, ಶ್ರದ್ಧೆ ಬೇಕೇಬೇಕು.

ಶ್ರೀ ಗುಂಡನ್ ಅನಿತಾಚಾರಿಯು ಕ್ರಿ.ಶ.೭೩೩–೭೪೬ ರ ಕಾಲದಲ್ಲಿ ಪ್ರಸಿದ್ಧನಾಗಿದ್ದನು. ಇವನ ಶಾಸನವು ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯ ಹತ್ತಿರವಿರುವ ಅರ್ಧಮಂಟಪದ ಎಡಕಂಬದ ಮೇಲಿದೆ. ಚಾಲುಕ್ಯರ ಇಮ್ಮಡಿ ವಿಕ್ರಮಾದಿತ್ಯನ ಮಹಾರಾಣಿ ಲೋಕಮಹಾದೇವಿಯು ತನ್ನ ಪತಿಯು ಕಂಚಿಯನ್ನು ಮೂರು ಬಾರಿ ಜಯಸಿದ್ದರ ಸ್ಮರಣೆಗಾಗಿ ಕಟ್ಟಿಸಿದ ಲೋಕೇಶ್ವರ ಗುಡಿಯನ್ನು ಶ್ರೀ ಗುಂಡನ್ ಅನಿತಾಚಾರಿ ಎಂಬ ಶಿಲ್ಪಿಯು ನಿರ್ಮಾಣ ಮಾಡಿದ ವಿವರವಿದೆ. ಈ ನಿರ್ಮಾಣ ಮಾಡಿದ್ದಕ್ಕಾಗಿ ಶಿಲ್ಪಿಗೆ ರಾಣಿಯು 'ಪೆರ್ಜುಜಿಪು' ಎಂಬ ಪಟ್ಟವನ್ನು ಕಟ್ಟಿ ತ್ರಿಭುವನಾಚಾರಿ ಎಂಬ ಬಿರುದು ಕೊಟ್ಟು ಗೌರವಿಸಿದ್ದಾಳೆ. (ಕರ್ನಾಟಕದಲ್ಲಿ ಶಿಲ್ಪಚಾರಿಯರು –ಡಾ. ಕುಮಾರಸ್ವಾಮಿ ಪುಟ–೯) ಎಂದ ಮೇಲೆ ಅವನ ಕೌಶಲ್ಯ ಮತ್ತು ಶಿಲ್ಪಕಲೆಯ ಬಗ್ಗೆ ವರ್ಣಿಸಲು ಆ ಶಿಲ್ಪಕಲೆಯೇ ಸಾಕ್ಷಿ. ಇದೇ ಕಂಬದ ಮೇಲೆ ಸರ್ವಸಿದ್ಧಿ ಆಚಾರಿ ಎಂಬ ಅದೇ ಕಾಲದಲ್ಲಿ ಅದೇ ರಾಜ ರಾಣಿಯರ ಆಸ್ಥಾನದಲ್ಲಿದ್ದನೆಂದೂ ಲೋಕೇಶ್ವರ ಗುಡಿಯನ್ನು ಸೂತ್ರಧಾರಿ ಸರ್ವಸಿದ್ಧಿ ಆಚಾರಿಯು ಮಾಡಿದ್ದಾನೆ. ಇತನಿಗೂ ಪೆರ್ಜಿಜಿಪು ಎಂಬ ಬಿರುದು ಮತ್ತು ಮೂರ್ತಿಶಿಲ್ಪಿ, ವಾಸ್ತುಶಿಲ್ಪಿಗಳಲ್ಲಿ ಪಿತಾಮಹನೆಂದೂ, ಪರಿಶುದ್ಧ ಸೂಕ್ಷ್ಮಭಾಷಿ, ಎಂದು ವಾಸ್ತು, ಪ್ರಸಾವ, ಯೋಗಸಾನ, ಶಯನ ಮೊದಲಾದವುಗಳನ್ನು ನಿರ್ಮಾಣಮಾಡುವುದರಲ್ಲಿ ಮಣಿಮಕುಟ, ಚೂಡಾಮಣಿ ಎಂದು ಶಾಸನದಲ್ಲಿ ತಿಳಿದು ಬರುತ್ತದೆ. ಮುಂದುವರೆದು ತೆಂಕಣ ದೆಸೆಯ ಸೂತ್ರಧಾರಿ ಎಂದು ಕರೆಯಲಾಗಿದೆ. (ಕರ್ನಾಟಕದಲ್ಲಿ ಶಿಲ್ಪಚಾರಿಯರು–ಡಾ. ಕುಮಾರಸ್ವಾಮಿ ಪುಟ–೧೧) ರಾಜ ರಾಣಿಯರಿಂದ ಗೌರವಿಸಿಕೊಂಡು ಬಿರುದು ಬಾವಲಿಗಳನ್ನು ನೋಡಿದರ ಅವನೇಷ್ಟು ತನ್ನನ್ನು ಶಿಲ್ಪಕಲೆಗೆ ತೊಡಗಿಸಿಕೊಂಡಿದ್ದ ಎಂಬುದು ತಿಳಿದು ಬರುತ್ತದೆ.

ವಿಶ್ವಕರ್ಮಾಚಾರ್ಯ ಎಂಬುದನ್ನು ತಾಮ್ರ ಶಾಸನಗಳ ಉತ್ತೀರ್ಣಗಳಿಂದ ಕ್ರಿ.ಶ. ೪೬೬ರ ಗಂಗ ಅರಸ ಅವನೀತನಿಂದ ಕ್ರಿ.ಶ. ೯೦೪ ಅದೇ ಗಂಗ ಅರಸು ಇಮ್ಮಡಿ ಎರೆಯಂಗನವರೆಗೆ ಸತತವಾಗಿ ೪೩೩ ವರ್ಷಗಳ ಅವಧಿಯವರೆಗೆ ರಚನೆಯಾದ ಒಟ್ಟು ಹನ್ನೆರಡು ತಾಮ್ರ ಶಾಸನಗಳು ನಡುವೆ ಒಂದು ಶಿಲಾ ಶಾಸನವೂ ವಿಶ್ವಕರ್ಮನ ಅಥವಾ ವಿಶ್ವಕರ್ಮಾಚಾರ್ಯನ ಹೆಸರಿನಲ್ಲಿ ರಚನೆಯಾಗಿದೆ. ಈ ಶಾಸನಗಳಲ್ಲಿ ನಾಲ್ಕು ಈತನನ್ನು 'ಸರ್ವಕಲಾಧಾರಭೂತ' ಎಂದೂ ಚಿತ್ರಕಲಾಭಿಜ್ಞ ಎಂದು ವರ್ಣಿಸುತ್ತವೆ. (ಕರ್ನಾಟಕದಲ್ಲಿ ಶಿಲ್ಪಚಾರಿಯರು– ಡಾ. ಕುಮಾರಸ್ವಾಮಿ ಪುಟ–೧೫) ಈ ಮೇಲಿನ ವಿಷಯವನ್ನು ಗ್ರಹಿಸಿದಾಗ ವಿಶ್ವಕರ್ಮಚಾರಿಯು ಇಷ್ಟು ದೀರ್ಘಕಾಲದ ವರೆಗೆ ಶಾಸನಗಳನ್ನು ರಚಿಸಿ ಮಾಡಲು ಸಾಧ್ಯವಿಲ್ಲ ಕಾರಣ ಅದು ವಿಶ್ವಕರ್ಮಚಾರ್ಯ ಎಂಬುದು ಒಂದು ಮನೆತನದ ಹೆಸರು ಅಥವಾ ಒಂದು ಸಮುದಾಯದ ಹೆಸರಾಗಲು ಸಾಧ್ಯವಿದೆ. ಎಂದರೆ ಈ ...

ಶಾಸನಗಳನ್ನು ಕೊರೆಯುವುದರಲ್ಲಿಯೂ ಮತ್ತು ಶಿಲ್ಪಕಲೆಯಲ್ಲಿ ಹೆಸರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ.

ಬಿಳ್ಳಾವಯ ದಾಸೋಜನು ಬೇಲೂರಿನ ಚನ್ನಕೇಶವ ದೇವಾಲಯದಲ್ಲಿನ ನಾಲ್ಕು ಶಿಲಾಬಾಲಕಿಯರ ಚಿತ್ರಗಳನ್ನು ಅರಳಿ ಕೆತ್ತಿದ್ದಾನೆ. ಈ ದೇವಾಲಯವು ಭಾರತೀಯ [illegible] ಶಿಲ್ಪ [illegible] ಅನೇಕ ದೇಶೀಯ ಕಲಾ ಇತಿಹಾಸಜ್ಞರಿಂದಲೂ ಮುಕ್ತಕಂಠದ ಪ್ರಶಂಸೆಗೆ ಒಳಗಾಗಿದೆ. (ಕರ್ನಾಟಕದಲ್ಲಿ ಶಿಲ್ಪಕಲೆ [illegible] ಡಾ. ಕುಮಾರಸ್ವಾಮಿ ಪು–೨೫) ಈ ದೇವಾಲಯದ ಶಿಲಾ ಬಾಲಕಿಯರ ಬೆಡಗು ಈ ದೇವಸ್ಥಾನದ ಸೌಂದರ್ಯವನ್ನು ಹೆಚ್ಚಿಸಿದೆ. ಈ ನಾಲ್ಕು ಶಿಲಾಬಾಲಕಿಯರ ಪಾದಪೀಠದ ಮೇಲಿರುವ ಶಾಸನಗಳು ಸಾರಿ ಹೇಳುತ್ತವೆ. ಇವನು ೫, ೭, ೯, ಮತ್ತು ೪೨ ನೇ ನಂಬರಿನ ಮದನಿಕಾ ಪುತ್ಥಳಿಗಳನ್ನುಬಿಡಿಸಿದ್ದಾನೆ. (ಎ.ಕ. V, ಬೇಲೂರು ೩೪, ೩೬, ೩೭) ಈ ದೇವಾಲಯದ ಸುತ್ತಲು ಇರುವ ೪೨ ಶಿಲೆಗಳನ್ನು ನೋಡಿದರೆ ನೋಡುತ್ತಲೇ ಇರಬೇಕೆನ್ನಿಸುತ್ತದೆ. ಒಂದೊಂದು ಶಿಲೆಗಳು ವಿಭಿನ್ನ ರೂಪದಲ್ಲಿ ಚಿತ್ರಿತವಾಗಿರುವುದನ್ನು ನೋಡಿದರೆ ಆ ಚಿತ್ರಗಳ ಭಾವನೆಗಳನ್ನು ಅತಿಸುಲಭವಾಗಿ ಗುರುತಿಸಬಹುದಾದ ವಿಶಿಷ್ಟ ಸೌಂದರ್ಯ ಮತ್ತು ಕಲೆನೂ ಕೂಡ ಇದೆ. ಇವುಗಳ ಬಗ್ಗೆ ಹೇಳುವುದು ಕೇಳುವುದು ಓದುವುದಕ್ಕಿಂತ ಕಲಾ ಸೌಂದರ್ಯವನ್ನು ನೋಡಿಯೇ ಅನುಭವಿಸಬೇಕು. 'ಕೋಶ ಓದು ಇಲ್ಲ ದೇಶನೋಡು' ಎಂಬ ಗಾದೆ ಇಂತಹ ಸೌಂದರ್ಯವನ್ನು ಅನುಭವಿಸಬೇಕೆಂಬುದು ಇದರ ಅರ್ಥವಾಗಿದೆ.

ಮಲ್ಲಿತಮ್ಮನನ್ನು ೧೩ ನೇ ಶತಮಾನದ ಕರ್ನಾಟಕ ಶಿಲ್ಪಕಲಾ ಸಾಮ್ರಾಜ್ಯವನ್ನಾಳಿದ ಮಹಾಶಿಲ್ಪಿ ಎಂದು ಕರೆದುಕೊಂಡಿದ್ದಾರೆ. ಡಾ. ಕೆಲಸನ್ ಕೋಲಿಯರ್ ಅವರು ಮತ್ತು ಮುಂದುವರೆದು ಭಾರತದಲ್ಲಿಯೇ ಇವನದು ಬೃಹದ್ಗಾತ್ರದ ಗ್ರಮ ಎಂದಿದ್ದಾರೆ. ಇವನಷ್ಟು ಬೃಹದ್ಗಾತ್ರದಲ್ಲಿ ಕೆಲಸ ಮಾಡಿದ ಕಲಾವಿದ ಭಾರತದಲ್ಲೆಲ್ಲಿಯೂ ಇಲ್ಲ. ಡಾ. ಷೇಕ್ ಅಲಿ ಅವರು ಇವನು ತುಂಬ ಸಮರ್ಥನೂ ಅಸೀಮನೂ ಆದ ಶಿಲ್ಪಿ ಎಂದು ಶ್ಲಾಘಿಸಿದ್ದಾರೆ. (ದಿ ಹೊಯ್ಸಳ ಡೈನಾಸ್ಟಿ– ಷೇಕ್‌ಅಲಿ (ಸಂ), ಪುಟ–೮೫) ಕರ್ನಾಟಕದ ಶಿಲ್ಪಿಗಳಿಗೆ ಜಗತ್ತಿನಲ್ಲಿ ಅಚ್ಚಳಿಯದ ಸ್ಥಾನವಿತ್ತು. ಇವನು ದೈತ್ಯಶಕ್ತಿಯ ರೂವಾರಿ ಅಗಾಧಶಕ್ತಿ ಸಾಮರ್ಥ್ಯ, ಕೌಶಲ್ಯ, ಶ್ರಮ ಇವನು ಬಿಡಿಸುವ ಮೂರ್ತಿಗಳು ಒಂದೊಂದು ಚಿತ್ರದಂತೆ ಕಂಡು ಬರುತ್ತಿದ್ದಿರಬಹುದು. ಇವನು ಅನೇಕ ದೇವಾಸ್ಥಾನಗಳಲ್ಲಿ ದುಡಿದು ಅನೇಕ ಮೂರ್ತಿಗಳನ್ನು ರಚಿಸಿದ ಪಟ್ಟಿಗೆಗಳಿಗೆ ರೂಪ ಕೊಟ್ಟ ಶಿಲ್ಪಿ ಮತ್ತೊಬ್ಬನಿಲ್ಲ ಎಂಬ ನಿರ್ಣಯಕ್ಕೂ ಬರಬಹುದು. ಮಲ್ಲಿತಮ್ಮನು ಒಟ್ಟು ಏಳು ದೇವಾಲಯಗಳಲ್ಲಿ ದುಡಿದ್ದಿದ್ದಾನೆಂದು ಸುಮಾರು ಒಂದು ನೂರಾ ಒಂದು ವಿಗ್ರಹಗಳು ಪಟ್ಟಿಕೆಗಳು, ದಿಂಡುಗಳು ಮೊದಲಾದ ಬಿಡಿ ಕೆಲಸಗಳನ್ನು ಮಾಡಿದನೆಂದು ತಿಳಿದು ಬರುತ್ತದೆ. ೧೧೧೬ ರಲ್ಲಿ ತರೀಕೆರೆ ತಾ ಅಮೃತಪುರದ ಅಮೃತೇಶ್ವರ ಭುವನೇಶ್ವರಿಗಳು ಮತ್ತು ಪಟ್ಟಿಗಳು. ಅರಿಸಿಕೆರೆಯ ಹಾರ್ನಳ್ಳಿ ಗ್ರಾಮದಲ್ಲಿ ಕ್ರಿ.ಶ. ೧೨೩೪ ರಲ್ಲಿ ಕೇಶವದೇವಾಲಯಕ್ಕೆ ಬಂದು ಅಲ್ಲಿ ಲಕ್ಷ್ಮಮ್ಮ, ಪ್ರದ್ಯುಮ್ನ ಅನಿರುದ್ಧಲಕ್ಷ್ಮಿ, ಅಧೋಕ್ಷಜಲಕ್ಷ್ಮಿ ಮೊದಲಾದ ಮೂರ್ತಿಗಳನ್ನು ಬಿಡಿಸಿದ್ದಾನೆ ಎಂಬುದು ಕಂಡುಬರುತ್ತದೆ.

ಕ್ರಿ.ಶ. ೧೨೪೯ ರಲ್ಲಿ ಚನ್ನರಾಯ ಪಟ್ಟಣದ ತಾ ನುಗ್ಗೇನಹಳ್ಳಿಯಲ್ಲಿ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಗುಡಿಯ ದಕ್ಷಿಣ ಗೋಡೆ ಮೇಲೆ ದುರ್ಗಲಕ್ಷ್ಮೀ ವಾಸುದೇವಾದಿಗಳನ್ನು ರಚಿಸಿದ್ದಾನೆ. ಇನ್ನು ಅನೇಕ ದೇವಾಲಯ, ಮೂರ್ತಿಗಳನ್ನು ರಚಿಸಿದ ಮಲ್ಲಿತಮ್ಮ ಒಂದೂರಿಂದ ಇನ್ನೊಂದೂರಿಗೆ ವಲಸೆ ಹೋಗುತ್ತಾ ತನ್ನ ಕಲೆಯನ್ನು ಜೀವಂತವಾಗಿಸಿದ್ದಾನೆ. ನಾವು ಭಾರತದಲ್ಲಿ ಕಲೆಗೆ ಬೆಲೆ ಕೊಟ್ಟಷ್ಟು ಸಾಂಸ್ಕೃತಿಕವಾಗಿ ತುಂಬಾ ಶ್ರೀಮಂತಿಕೆಯನ್ನು ಪಡೆದಾಗಿದೆ. ಇಂತ ಅನೇಕ ದೇವಾಲಯಗಳನ್ನು ಅಥವಾ ಕನಾಟಕದ ತುಂಬೆಲ್ಲಾ ಈ ಶಿಲ್ಪಕಲೆಯ ಸೊಬಗನ್ನು ಹೊತ್ತು ನಿಂತಿರುವ ಈ ಧರೆಯೇ ಪುಣ್ಯಾತ್ಮೆ. ಇವುಗಳನ್ನೆಲ್ಲವನ್ನು ಅಂದರೆ ದೇವಾಲಯಗಳನ್ನು ಮಹಿಮಾನ್ವಿಗಳು ಬೆಳೆದುಕೊಂಡು ಬಂದಿರುವುದನ್ನು ನೋಡಿದರೆ ಶಿಲ್ಪಿಗಳ ಕೌಶಲ್ಯ, ಜೀವರು, ಅದ್ಭುತಶಕ್ತಿ, ಶ್ರಮ. [illegible] [illegible] ಮೈ ಜುಮ್ಮೆನ್ನುತ್ತವೆ. ಅಂತಹ ಎಷ್ಟು ವರ್ಷಗಳಲ್ಲಿ ಎಷ್ಟು ಶಿಲ್ಪಿಗಳ ಟಂಕಿನ ಜೊತೆ ಸೇರಿಕೊಂಡಿರುವುದು [illegible] ಸಾಧ್ಯವಾಗುತ್ತಿಲ್ಲ. ಅವರುಗಳೆಲ್ಲ ನಿರ್ಮಾಣ ಮಾಡಿದ ದೇವಾಲಯಗಳು ರಾಜಧಾನಿಯರು ಹೊಗಳಿಕೆ

ತಗಣಕೆಯಲ್ಲಿ ವಿದ್ವಾಂಸರು ನಿರತರಾಗಿದ್ದರು ಎಂಬುದು ತಿಳಿದುಬರುತ್ತದೆ. ಯಾವುದನ್ನು ಅಧ್ಯಯನದ ದಾರಿಗೆ ಹೋಗಬೇಕೆಂಬ ದಿಕ್ಕೆ ತಪ್ಪುತ್ತದೆ. ಏಕೆಂದರೆ ಬಹುತೇಕವಾಗಿ ಅಲ್ಲೊಂದು ಇಲ್ಲೊಂದು ಶಿಲ್ಪಗಳ ಹೆಸರುಗಳು [illegible] ಒಂದು ವೇಳೆ ಅವು ಇದ್ದರೂ [illegible] ನೀಡುತ್ತಿಲ್ಲ. ಶಿಲ್ಪದ ಅಗಾಧ ಶಕ್ತಿಯನ್ನು ಗುರುತಿಸಬೇಕೆಂದರೆ ದೇವಾಲಯಗಳ ಪ್ರತಿಯೊಂದು ಕಂಬ ಮತ್ತು ಮುಗಿಲೆತ್ತರಕ್ಕೆ ನಿಂತಿರುವ ಶಿಲ್ಪವನ್ನು ಹೇಗೆ ಎತ್ತಿ ತಮ್ಮ ಚಾಣಕ್ಷತನವನ್ನು ತೋರಿಸಿದ್ದಾರೆ ಅವರ ಕಡೆ ಗಮನ ಹರಿಯಬೇಕಿದೆ. ಅಂತಹ ಕೆಲಸ ವಿದ್ವಾಂಸರು ಮಾಡಬೇಕಿದೆ ಮಾಡುತ್ತಿದ್ದಾರೆ.

ಈಗಿನ ಕಾಲದಲ್ಲಿ ಅಂತಹ ಒಂದು ದೇವಾಲಯವನ್ನು ಕೆತ್ತಲು, ಕಟ್ಟಲು ಸಾಧ್ಯವಿಲ್ಲ. ಯಾವುದೇ ಯಂತ್ರೋಪಕರಣ ಇಲ್ಲದ ಸಂದರ್ಭದಲ್ಲಿ ಟನ್ ಗಟ್ಟಲೆ ಕಲ್ಲನ್ನು ಮೇಲಕ್ಕೆತ್ತಿ ಒಂದಿಂಚು ಹೆಚ್ಚು ಕಡಿಮೆಯಾಗದಂತೆ ಇಡುತ್ತಿದ್ದರು ಎಂದರೆ ಅವರ ತಲೆಯೊಳಗಿನ ಬುದ್ಧಿ ಎಂತದ್ದಿರಬಹುದೆಂಬುದನ್ನು ದೇವಾಲಯಗಳನ್ನು ಶಿಲ್ಪಗಳನ್ನು ನೋಡಿದರೆ ಸಾಲದು. ಇಲ್ಲಿ ಚಿತ್ರಿತವಾಗಿರುವ ರಚನೆಯನ್ನು ನಾವು ಬರೆಯಲಿಕ್ಕೆ ಏಕೆ ಅದರಂತೆ ಇರುವ ಒಂದು ಫೋಟೋ ಕೂಡ ತೆಗೆಯ ಸಾಧ್ಯವಾಗುತ್ತಿಲ್ಲ ಆದರೆ ಅವರ ಉಳಿಯೊಳಗೆ ಅಂತ ಶಕ್ತಿ ಅಡಗಿತ್ತು ಎಂಬುದನ್ನು ನಾವೇ ಕಲ್ಪನೆಮಾಡಿಕೊಳ್ಳಬೇಕು. ಇಲ್ಲಿ ಮುಖ್ಯವಾಗಿ ಚರ್ಚಿಸಬೇಕಾದ ವಿಷಯವೆಂದರೆ ಜಕಣಾಚಾರಿ ಬಗ್ಗೆ. ಈತನ ಬಗ್ಗೆ ಎಲ್ಲಿಯೂ ಒಂದು ಶಾಸನದಲ್ಲಿ ಉಲ್ಲೇಖ ಬಂದಿಲ್ಲ. ಜಕಣಾಚಾರಿ ಇದ್ದನೋ ಇಲ್ಲವೋ ಎಂಬುದಕ್ಕೆ ಒಂದು ಆಧಾರವು ಸಿಗುತ್ತಿಲ್ಲ. ಆದರೆ ಆಧಾರಗಳಿಗಿಂತಲೂ ಕರ್ನಾಟಕದ ಜನಪದರ ಬಾಯಲ್ಲಿ ಅಮರಶಿಲ್ಪಿ ಜಕಣಾಚಾರಿ ತುಂಬಿಕೊಂಡಿದ್ದಾನೆ.

ಕರ್ನಾಟಕವನ್ನು ಜಗತ್ತು ಅದರ ಯಾವ ಒಂದು ಶಿಲ್ಪಕಲಾ ಪರಿಪಕ್ವತೆಗಾಗಿಯೇ ಗುರುತಿಸುತ್ತದೆಯೋ ಅದನ್ನು ನಿರ್ಮಿಸಲು ಯಾರ ಕೈಗಳು ಶ್ರಮಿಸಿದವು, ಯಾರ ಕೈಗಳು ಕುಸುರಿಯನ್ನು ಹಿಡಿದವು, ಯಾರ ಜಾಣ್ಮೆ ದುಡಿಯಿತು ಎಂಬ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರ ದೊರಕಿಲ್ಲ. ಕನ್ನಡ ನಾಡಿನಲ್ಲಿ ಇತಿಹಾಸಶಾಸ್ತ್ರವು ದಾಸೋಜ ಮಲ್ಲಿತಮ್ಮರಂತಹ ಕೆಲವು ಶಿಲ್ಪಿಗಳನ್ನು ಕೇವಲ ಹೆಸರಿಸಿ ವಿರಮಿಸುತ್ತದೆ. ಇತಿಹಾಸಕಾರರು ಈ ಬಗ್ಗೆ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಳ್ಳಲಿಲ್ಲ. ಕನ್ನಡದ ಜನಪದರಾದರೋ ಈ ಬಹುಪಾಲು ದೇವಸ್ಥಾನಗಳನ್ನು ಶಿಲ್ಪಿಗಳಾದ ಜಕ್ಕಣಾಚಾರ್ಯ, ಡಂಕಣಚಾರ್ಯ ಎಂಬ ತಂದೆ ಮಕ್ಕಳು ಕಟ್ಟಿದುದಾಗಿ ಹೇಳುತ್ತಾರೆ ಹಾಗೂ ಇವರ ಬಗ್ಗೆ ಕೇವಲ ಕಥೆ ಕೇಳುವುದೇ ಆಗಿದೆ. ಕನ್ನಡದ ಜನಮನದಲ್ಲಿ ಮನೆ ಮಾಡಿರುವ ಈ ಪ್ರಸಿದ್ಧ ಶಿಲ್ಪಿ ಜಕಣಾಚಾರ್ಯನ ಉಲ್ಲೇಖಗಳು ದೊರಕಿಲ್ಲ ಆದರೂ ಜನಪದ ಬಾಯಲ್ಲಿ ನಲಿದಾಡುತ್ತಿದ್ದಾನೆ ಎಂದರೆ ಅವನು ಇರಲೇಬೇಕು. ಜನಪದ ಪರಂಪರೆಗೂ ಮತ್ತು ಇತಿಹಾಸಕ್ಕು ನಂಟು ಬೆಳೆದುಕೊಂಡು ಬಂದಿದೆಯಾದರೂ ಪರಂಪರೆ ಕೇವಲ ದಾರ ಮಾತ್ರವಾಗಿದೆ. ಕರ್ನಾಟಕದಲ್ಲಿ ಅನೇಕ ಪ್ರಾಚೀನ ಕೆರೆ ತಟಾಕಗಳಿದ್ದು ಅವುಗಳನ್ನು ನಿರ್ಮಾಣ ಮಾಡಲು ಬರಿ ಹಣ ಸಾಲದು, ನಿವೇಶನದ ಆಯ್ಕೆ, ಕಟ್ಟೆಯ ನಿರ್ಮಾಣ, ಈ ಕೆರೆಗೆ ಹರಿದು ಬರಬಹುದಾದ ನೀರಿನ ಪ್ರಮಾಣ, ಅದಕ್ಕೆ ಸರಿಯಾದ ಕೋಡಿ, ತುಂಬು ಇತ್ಯಾದಿಗಳನ್ನು ನಿರ್ಮಿಸಬೇಕಾದವರು ತಾಂತ್ರಿಕ ಪರಿಜ್ಞಾನ ಉಳ್ಳ ಪರಿಣಿತ ಶಿಲ್ಪಿಗಳು, ಆದರೆ ಶಿಲ್ಪಿಗಳ ಹೆಸರು ಬಹಳ ವಿರಳವಾಗಿ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಇಲ್ಲಿ ಪ್ರಮುಖವಾದ ವಿಷಯವೆಂದರೆ ಅವುಗಳನ್ನೆಲ್ಲ ನಿರ್ಮಿಸುವ ಆಧಾರ ಶಿಲ್ಪಿಯೇ ಅಂದಮೇಲೆ ಅವನ್ನು ಯಾರು ನಿರ್ಮಾಣ ಮಾಡಿದರು ಎಂಬ ಉಲ್ಲೇಖಗಳು ದೊರೆತಿಲ್ಲವೆಂದರೆ ಕಟ್ಟಿಸುವವರು ಈ ನಿರ್ಭಂಧ ಹಾಕಿರಬಹುದೋ ಅಥವಾ ಅವರೇ ಈ ನಿರ್ಬಂಧವನ್ನು ಹಾಕಿಕೊಂಡರೋ ಎಂಬ ಗುಮಾನಿಗಳಿದ್ದರೂ ತಮ್ಮ ಹೆಸರು ಹಾಕಿಕೊಳ್ಳುವುದರ ಬದಲಾಗಿ ಕಟ್ಟಿಸಿದವರ ಹೆಸರು ಪ್ರಮುಖವಾಗಿರಬೇಕೆಂಬ ನಿಲುವಿಗೆ ಬದ್ಧರಾದಂತೆ ಕಾಣುತ್ತವೆ. ಇಲ್ಲಿ ಇಂತಹ ಸಂದಿಗ್ಧ ಪರಿಸ್ಥಿತಿಯನ್ನೇ ಎದುರಿಸುತ್ತೇವೆ. ಎಲ್ಲಾ ಇತಿಹಾಸಿಕರ ದೇವಾಲಯ, ಮಸೀದಿ, ಚರ್ಚ್‌ಗಳನ್ನು ಅಥವಾ ಮಠಮಾನ್ಯಗಳನ್ನಾಗಲಿ ಅವುಗಳನ್ನು ನಿರ್ಮಾಣ ಮಾಡಲು ಸಹಕರಿಸಿದವರ

ಹೆಸರುಗಳು ಆ ದೇವಾಲಯಗಳಿಗಿಂತ ಹೆಸರು ವಾಸಿಯಾಗಿರುತ್ತವೆ. ಆದರೆ ಆ ದೇವಾಲಯ, ಮೂರ್ತಿ, ಮಠಮಾನ್ಯಗಳನ್ನು ನಿರ್ಮಿಸಿದವನ ರಕ್ತ, ಬೆವರು, ಶಕ್ತಿ, ಕೌಶಲ್ಯ, ಬುದ್ಧಿವಂತಿಕೆಯನ್ನು ಯಾರು ಮೆಚ್ಚುವ ಮಾರ್ಗದ ಕಡೆ ಗಮನ ಹರಿಸುವುದಿಲ್ಲ. ನಮಗೆ ಇದ್ದುದ್ದಕ್ಕಿಂತ ಇಲ್ಲದ್ದರ ಕಡೆಗೆ ಒಲವು ಹರಿಯಬೇಕು ಆಗ ಮಾತ್ರ ಉಳಿದವರ ಚರಿತ್ರೆಯು ತಿಳಿಯುತ್ತದೆ.

ಆದರೆ ಶಾಸನಗಳಲ್ಲಿ ನಿರ್ಮಾಣಕಾರರ ಹೆಸರುಗಳಿಲ್ಲದಿದ್ದರೂ ಬಹುತೇಕ ಪ್ರವಾಸಿಗರ ಅಥವಾ ಜನರ ದೃಷ್ಟಿಕೋನ ಯಾರು ಕಟ್ಟಿಸಿದ್ದಾರೆ ಎಂಬುದಕ್ಕಿಂತ 'ಎಂಗ್ ಕಟ್ಟಿಸಿರಬಹುದು?' ಯಾರ್ ಕಟ್ಟಿರಬಹುದು? ಆಗಿನ ಕಾಲದ ಜನ ಎಷ್ಟು ಬುದ್ಧಿ ಇರಬಹುದೆಂಬ ಹಲವಾರು ಪ್ರಶ್ನೆಗಳನ್ನು ತಮ್ಮಲ್ಲಿಯೇ ಉತ್ತರ ಹುಡುಕಲು ಪ್ರಯತ್ನಿಸುತ್ತಾರೆ. ಅವನ್ನು ನೋಡಿದ ತಕ್ಷಣ ಕಟ್ಟಿದವನ ಕಡೆಗೆ ದೃಷ್ಟಿ ಹರಿಯುತ್ತದೆ. ಜನರ ನಿರ್ಣಯವನ್ನು ನಾವು ಅವರ ಬಾಯಿಂದಲೇ ಕೇಳುತ್ತಿರುವುದು ಸಮಾಧಾನ ಪಟ್ಟುಕೊಳ್ಳಬೇಕು ಶಾಸನಗಳು ಉಲ್ಲೇಖಗಳು ಸಿಗದೇ ಇದ್ದಾಗ ಮೌಖಿಕ ಪರಂಪರೆಯ ಕಡೆ ಬಂದಾಗ ಅಂಥಹ ಆಧಾರಗಳು ಖಂಡಿತ ದೊರೆಯುತ್ತವೆ.

ಈ ದೇವಾಲಯಗಳನ್ನು ಮತ್ತು ಮಠಮಾನ್ಯಗಳನ್ನು ನಿರ್ಮಿಸುವ ಒಂದು ಬಗೆಯನ್ನು ಜನಪದರು ಬಹಳ ಸ್ವಾರಸ್ಯಕರವಾದ ಕತೆಯೊಂದನ್ನು ಕೇಳಿಬರುತ್ತದೆ. ಬಹಳ ಸುಂದರವಾಗಿ ದೊಡ್ಡ ಶಿಲೆಗಳಿಂದ ಆವೃತ್ತವಾದಂತಹ ದೇವಾಲಯಗಳನ್ನು ನೋಡಿದರೆ ಅದರ ಕಲಾ ಕೌಶಲ್ಯ ನಿಪುಣತೆ ಶ್ರಮವನ್ನು ನೋಡಿದರೆ ಆ ದೇವಾಲಯದ ಸೊಬಗನ್ನು ವರ್ಣಿಸುವುದು ಮೇಲು ನೋಟಕ್ಕೆ ಎಂದೆನಿಸುತ್ತದೆ. ಕಲೆಯನ್ನು ಆಸ್ವಾದಿಸಿ ತಮ್ಮ ಕಣ್ಣುಗಳನ್ನು ತಂಪಾಗಿಸಿ ಪಡಿಸುವ ಈ ಶಿಲೆಯ ಕಲೆಗಳು ಮತ್ತು ಆಕರ್ಷಣೆಯ ವಿಶ್ಲೇಷಿಸುವ ಮೊದಲು ಈ ಕಥೆಯನ್ನು ತಿಳಿಸುವುದು ಅವಶ್ಯವೆನಿಸುತ್ತದೆ.

ಸೋಗಿ ಎಂಬ ಊರಲ್ಲಿ ಕಲ್ಲೇಶ್ವರ ದೇವಸ್ಥಾನವಿದೆ. ಅದು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ್ದು ಅಂತ ಕೆಲವು ಜನ ಹೇಳಿದರೆ ಜನಪದರು ಬೇರೆಯದೇ ಅರ್ಥಕಲ್ಪಿಸುತ್ತಾರೆ. ಇತಿಹಾಸಕಾರರು ಪದೇ ಪದೇ ಸೋಗಿಗೆ ಬಂದು ಶಾಸನಗಳನ್ನು ನೋಡುವುದು ದೇವಾಯದ ಲಕ್ಷಣಗಳನ್ನು ಚಿತ್ರಿಸುವುದು ವಿಡಿಯೋಗ್ರಾಫ್‌ನ್ನು ಮಾಡುವುದು ಪೋಟೋ ತೆಗೆದುಕೊಳ್ಳುವುದು ಇವತ್ತಿನ ತನಕ ನಡೆದೇ ಇದೆ. ಇದು ಇಂತವರದು ಎಂದು ಗುರುತಿಸಲು ವರ್ಷಗಟ್ಟಲೇ ತೆಗೆದುಕೊಳ್ಳುತ್ತಾರೆ. ಆದರೆ ಈ ಜನಪದ ಬಾಯಲ್ಲಿ ಒಂದೇ ಒಂದು ರಾತ್ರಿ ಕಟ್ಟಿದ್ದಾರೆಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ.

ಒಂದು ದಿನ ರಾಜನ ಆಜ್ಞೆಯ ಮೇರೆಗೆ ಜಕಣಾಚಾರಿ ಈ ಊರಿಗೆ ಬಂದು ದೇವಾಲಯ ಕಟ್ಟಲಿಕ್ಕ ಸ್ಥಳವನ್ನು ಗುರ್ತಿಸಿ ಆಯ, ವಾಸ್ತು, ನೋಡಿ ಈ ಪ್ರದೇಶದಲ್ಲಿ ದೇವಸ್ತಾನ ಕಟ್ಟಲಿಕ್ಕೆ ಯೋಗ್ಯವಾದುದ್ದಾಗಿದೆ ಎಂದು ರಾಜನಿಗೆ ತಿಳಿಸಿದ. ರಾಜ ಜಕಣಾಚಾರಿಗೆ ತಡಮಾಡದೆ ಆ ಕೆಲಸ ಪೂರೈಸು ಎಂದನಂತೆ, ಜಕಣಾಚಾರಿ ಮತ್ತು ಅವರ ಸಂಗಡಿಗರ ಸೇರಿಕೊಂಡು ಒಂದು ಒಳ್ಳೆಯ ಶುಭರಾತ್ರಿ ಕೆಲಸ ಪ್ರಾರಂಭಿಸಿದವರಂತೆ ಒಂದೇ ರಾತ್ರಿ ಈ ಕಲ್ಲೇಶ್ವರ ದೇವಸ್ಥಾನವನ್ನು ನಿರ್ಮಿಸಿ ಹೊರಟು ಹೋಗಿದ್ದನಂತೆ ಬೆಳಗಾದ ಮೇಲೆ ಜನರು ಬಾಯಿ ಮೇಲೆ ಬೊಟ್ಟು ಇಟ್ಟುಕೊಂಡಿದ್ದರಂತೆ. ಇಷ್ಟು ದೊಡ್ಡ ದೇವಾಲಯದ ಪಕ್ಕದಲ್ಲಿ ತಿರುಗ ರಾತ್ರಿ ಇನ್ನೊಂದು ದೇವಸ್ತಾನವನ್ನು ಕಟ್ಟುವಾಗ ಬೆಳಕು ಹರಿಯುವ ಹೊತ್ತಾದ್ದರಿಂದ ಅದಕ್ಕೆ ಗೋಪುರವನ್ನು ಕಟ್ಟದೇ ಹಾಗೇ ಹಾಕಿದಂತೆ ಅದೇ ಮುಂದೆ ದಬ್‌ಗುಡಿ ಎಂದು ಕರೆಸಿಕೊಳ್ಳುತ್ತದೆ ಇವತ್ತಿಗೂ ಕೂಡ.

ಈ ರೀತಿಯಾದ ಕಥೆಯನ್ನು ಸಾಮಾನ್ಯವಾಗಿ ಈ ಊರಲ್ಲಿ ಹೇಳುತ್ತಾ ಇರುತ್ತಾರೆ. ಆದರೆ ಇದು ಸಾಧ್ಯವೇ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. 'ಅದ್ಯಂಗ ಸಾಧ್ಯ ಬಿಡಜ್ಜ ಎಂದರೆ ಮಳ್ಳು ಹುಡ್ರು ಆಗಿನ ಕಾಲದ ವಿಷ್ಯ ನಿಮಗೇನು ಗೊತ್ತಲೇ ನಾವು ಸೇರ್‌ಸೇರ್ ಹಾಲು ಕುಡಿತ್ತಿದ್ವಿ ಈಗ ೧ರೂ ಹಾಲು ಮನಿಗೊಯ್ಯತ್ತಿವಿ' ಎಂದು ತಮ್ಮ ಕಾಲದ

ಆಗಾದ ಶಕ್ತಿಯನ್ನು ಹೆಮ್ಮೆಯಿಂದ ಎ.ಎಂ. ಚಂದ್ರಯ್ಯನವರು ಹೇಳಿಕೊಳ್ಳುತ್ತಾರೆ. ಅದು ಸರಿ ತಪ್ಪು ಎಂದು ಹೇಳುವುದು ಅಷ್ಟು ಸಮಂಜಸವಾದ ಉತ್ತರವು ನಮ್ಮಲ್ಲಿಲ್ಲ. ಇಂತ ಉದಾಹರಣೆಗಳು ಪ್ರತಿಯೊಂದು ಊರುಗಳಲ್ಲಿಯೂ ಕೇಳಬಹುದು. ಆದಕ್ಕೆ ಇತಿಹಾಸಕಾರರು ಮೌಖಿಕ ಪರಂಪರೆಯನ್ನು ಒಂದು ದಾಖಲೆಯಾಗಿಟ್ಟುಕೊಂಡು ನೋಡುವುದು ಉತ್ತಮ ವೆನಿಸುತ್ತದೆ. ಪರಂಪರೆಯಲ್ಲಿ ಇತಿಹಾಸ ಅಡಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಅವುಗಳಲ್ಲಿ ಮೂಕ ಸಾಕ್ಷಿಯಾಗಿ ನಿಂತು ಇತಿಹಾಸದ ಮಹಾಪುರುಷರ ಹೆಸರುಗಳನ್ನು ತಮ್ಮ ಹೊಟ್ಟೆಯಲ್ಲಿಟ್ಟುಕೊಂಡು ಜನರನ್ನು ಯೋಚನೆಗೆ ಹಚ್ಚಿವೆ.

ಇನ್ನು ಅಮರಶಿಲ್ಪಿ ಜಕಣಾಚಾರಿಯ ಚರಿತ್ರೆಗೆ ಬಂದರೆ ಅಲ್ಲಿ ಅವನ ಉಲ್ಲೇಖಗಳು ಎಲ್ಲೂ ದೊರೆತಿಲ್ಲ. ಅಮರ ಶಿಲ್ಪಿ ಜಕಣಾಚಾರಿ ಕಲೆಯು ಪ್ರಪಂಚಕ್ಕೆ ಅಮೋಘ, ಇವರ ಕೀರ್ತಿ ಶ್ಲಾಘನೀಯವಾದದ್ದು ವಿಶ್ವಕರ್ಮನ ದೈವ ಕೃಪೆಯಿಂದ ಜನಿಸಿದ ಪುತ್ರನೆಂದು ಹಂಸನಂದಾಚಾರಿಯರು ಹಡಗಲಿಯವರು ಕರೆಯುತ್ತಾರೆ. ಇವರ ಶಿಲ್ಪಕಲೆಗೆ ಯಾವುದೇ ಸರಿ ಸಾಟಿ ಇಲ್ಲ 'ಆಡು ಮುಟ್ಟದ ಸೊಪ್ಪಿಲ್ಲ ಜಕಣಾಚಾರಿಯ ಕೆತ್ತನೆಯ ಶಿಲೆ ಇಲ್ಲಾ' ಎಂದು ಜನಪದ ಧ್ವನಿ ಕೇಳಿಬರುತ್ತದೆ ಅಂತೆಯೇ ಇವರ ಕೊಡುಗೆ ವಿಶ್ವಕ್ಕೆ ಬಹು ಅಭೂತ ಪೂರ್ವ ವಾದಂತ ಕೊಡುಗೆ ಅಂತಹ ಮೇಧಾವಿ ಶಿಲ್ಪಿ ಕಲಾ ಪಂಡಿತ ನಮ್ಮ ಸಮಾಜದಲ್ಲಿ ಬದುಕಿದ್ದ ಎಂಬುವುದು ಸಂತೋಷದ ವಿಷಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇವರ ಕೆತ್ತನೆಯ ದೇವಾಲಯಗಳಾದ ಬೇಲೂರು ಹಳೆಬೀಡು ಕೈದಾಳ ಮುಂತಾದ ಇನ್ನು ಹಲವಾರು ನೂರಾರು ದೇವಾನು ದೇವತಗಳನ್ನು ನಿರ್ಮಿಸಿದ ಹೆಗ್ಗಳಿಕೆ ಹೊಂದಿದ್ದ ಜಕ್ಕಣ ಕರ್ನಾಟಕದಲ್ಲಿ ಪ್ರತಿಯೊಂದು ದೇವಾಸ್ಥಾನದಲ್ಲಿ ಕೈಯಾಡಿಸಿದ್ದಾನೆ. ಇವರ ಶಿಲ್ಪ ಕಲೆಯ ಇಂದಿಗೂ ಅಜರಾಮರವಾಗಿವೆ ಎಂದು ಹಿರಿಯರು ಆಗಾಗ ಜಕ್ಕಣನನ್ನು ಹೊಗುಳುತ್ತಿರುತ್ತಾರೆ. ಕಮ್ಮಾರ್ ವಿರೂಪಾಕ್ಷಪ್ಪ ಸೋಗಿ ಇವರು ಹೇಳುತ್ತಾರೆ. "ಕಲ್ಲನ್ನು ಮೇಣದ ಹಾಗೆ ಕೆತ್ತುತ್ತಿದ್ದರಂತೆ" ಅಂತಹ ಕೈಚಳಕ ಹೊಂದಿದ್ದನಂತೆ ಎಂದು ಆಶ್ಚರ್ಯದಿಂದ ಹೇಳುತ್ತಾನೆ.

ಇಲ್ಲಿ ಮುಖ್ಯವಾಗಿ ಚರ್ಚಿಸಬೇಕಾದ ಸಂಗತಿ ಎಂದರೆ ಕರ್ನಾಟಕದ ಪ್ರತಿಯೊಂದು ದೇವಾಲಯದಲ್ಲಿ ಜಕ್ಕಣ್ಣನವರು ಕೈಚಳಕ ಇದೆ ಎನ್ನುವ ಮಾತು ನಿಜ ಎನ್ನುವುದಾದರೆ ಆತ ಬದುಕಿ ಬಾಳಿದ ವರ್ಷಗಳೆಷ್ಟು? ಈ ಪ್ರಶ್ನೆ ಎದುರಾದಾಗ ಜಕ್ಕಣ್ಣ ಎಂಬ ಹೆಸರು ವೃತ್ತಿಯ ನಾಮವಾಗಿಯೂ ಇಲ್ಲವೆ ಗುಂಪು ನಾಮವಾಗಿಯೂ ಅಥವಾ ಆತನ ಶೈಲಿಯಲ್ಲಿ ಕಟ್ಟುತ್ತಿದ್ದಕ್ಕೆ ಆ ಹೆಸರು ಮುಂದು ವರೆದುಕೊಂಡು ಬಂದಿರಬಹುದೆಂಬ ಸಂದೆಹ ಬರುವುದು ಸಹಜ. ಅಮರ ಅಮರಶಿಲ್ಪಿ ಜಕಣಾಚಾರಿಯು ಪಾಂಚಾಳರ ಜನಾಂಗಕ್ಕೆ ಸೇರಿದ್ದಾನೆ. ಅಂದರೆ ವಂಶಪರಂಪರೆಯಿಂದ ಕುಲಕಸುಬುಗಳು ಬೆಳೆದುಕೊಂಡು ಬಂದಿವೆ. ಬರುತ್ತಲಿಯೂ ಇದೆ. ಹಾಗೆ ಶಿಲ್ಪಿಯಿಂದ ಶಿಲ್ಪಿಯಾದ ಜಕ್ಕಣ್ಣನೂ ಕೂಡ ಅತ್ಯಂತ ಪ್ರಭಾವ ಶಾಲಿಯಾದ ಶಿಲ್ಪಿಯಾಗಿದ್ದ ಎಂಬುದರಲ್ಲಿ ಸಂಶಯನೇ ಇಲ್ಲ. ಇವೆಲ್ಲವು ಪಾಂಚಾಳರಲ್ಲಿ ಶಿಲ್ಪಿಯ ಮಾಹಿತಿಗಳಾದರೆ ಇನ್ನು ಇವತ್ತಿನ ಸ್ಥಿತಿಯನ್ನು ನೋಡಿದರೆ ಇದ್ದ ಕಲೆಯನ್ನು ಉಳಿಸಿಕೊಳ್ಳಲು ಹೋಗಾಡುತ್ತಿರುವಾಗ ಬೇರೆ ಶಿಲ್ಪಕಲೆಯನ್ನು ಮಾಡಿಸಲು ಅನುಮಾನವಾಗಿದೆ. ಶಿಲ್ಪಿಯೂ ಕೂಡ ಇಂದು ಅತಂತ್ರದ ಸುಳಿವಿಗೆ ಸಿಲುಕುತ್ತಾನೋ ಎಂಬ ನೋವಿನ ನಡುವೆಯೂ ಮರದಲ್ಲಿ ಆ ಕಲೆಯನ್ನು ತೊಡಗಿಸಿಕೊಂಡು ಜೀವ ಸವೆಸುತ್ತಿದ್ದಾರೆ. ಕಲೆಗೆ ಬೆಲೆ ಇಲ್ಲ ಎಂದು ಹೇಳುವ ಮಾತು ಸತ್ಯವಾದರೂ ಆ ಕಲೆಯ ಹಿಂದಿನ ಸೌಂದರ್ಯಕ್ಕೆ ಯಾವತ್ತು ಬೆಲೆ ಇದ್ದೇ ಇರುತ್ತದೆ. ಅಂತಹ ಕೌಶಲ್ಯವನ್ನು ಇಂದು ಶಿಲ್ಪಿಗಳು ಕರಗತ ಮಾಡಿಕೊಂಡು ಬಂದಿದ್ದಾರೆ. ಮರದ ಶಿಲೆಯಲ್ಲಿ, ಕಬ್ಬಿಣ, ಬೆಳ್ಳಿ ಬಂಗಾರದ ಮೂರ್ತಿಯಲ್ಲಿ ತೊಡಗಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಬಳಸುವ ಉಪಕರಣಗಳು

ಪಾಂಚಾಳರು ತಮ್ಮ ವೃತ್ತಿಯಲ್ಲಿ ಬಳಸುವ ಸಾಮಾಗ್ರಿಗಳು ಸಾಮಾನ್ಯವಾಗಿ ಕೆಲವೊಂದವುಗಳು ಒಂದೇ ಆಗಿರುತ್ತವೆ. ಸುತ್ತಿಗೆ, ಅಗ್ಗಷ್ಟಿಕೆ, ಅಳತೆ ಪಟ್ಟಿ ಹೀಗೆ ಬಳಸುವ ವಸ್ತು, ವೃತ್ತಿಗನುಗುಣವಾಗಿ ಪ್ರಮಾಣದಲ್ಲಿ ಹೆಚ್ಚು

ಕಡಿಮೆಯಾಗುವ ಸಾಧ್ಯತೆಯೂ ಇದೆ. ಅದರಂತೆ ಶಿಲ್ಪಿಗಳು ಬಳಸುವ ಉಪಕರಣಗಳನ್ನು ಈ ಕೆಳಗಿನಂತಿವೆ.

ಉಜ್ಜಅರ.	ಗುಂಡರ.
ಚೌಕರ.	ಡೊಪ್ಪಿಹರ.
ದಬ್ಬೆ ಅರ.	ಪಟ್ಟಅರ.
ಬೆಂಡ್‌ಅರ.	ಮಟ್ಟರ.
ಮುಳ್ಳರ.	ಮೂರೇಣಿನಅರ.

ಇವು ಶಿಲ್ಪದ ಒರಟಾದ ಭಾಗಗಳನ್ನು ಉಜ್ಜಿ ನಯಗೊಳಿಸಲು ಬೇಕಾದ ಸಾಮಾಗ್ರಿಗಳು

ಅಪ್ಪಪ್ಪೆಲರ್	–	ಸೂಕ್ಷ್ಮ ಕೆಲಸಗಳಿಗೆ ಬಳಕೆಯಾಗುವ ಸುತ್ತಿಗೆ.
ಇಂಚ್‌ಪಟ್ಟಿ	–	ಅಳತೆ ಮಾಪನ.

ಉಳಿ.	ಉಗುರುಳಿ.
ಒರಟುಳಿ.	ಕೆರೆಉಳಿ.
ಗೆರಉಳಿ.	ಚೌಕನುಳಿ.
ನೈಸ್‌ಉಳಿ	ಮೂರೇಣಿನ ಉಳಿ.
ಮೊನೆಉಳಿ.	

ಇವು ಕಲ್ಲಿನ ಕೆಲಸದಲ್ಲಿ ಕೆತ್ತಲು, ರೂಪ ಕೊಡಲು ಬಳಸುವ ಉಪಕರಣ ರೂಪ,ಆಕಾರ, ಕೆಲಸವನ್ನಾಧರಿಸಿದ ನಾನಾ ಬಗೆಯ ಪ್ರಮುಖವಾಗಿ ಉಪಯೋಗಿಸುವ ಉಳಿಗಳಿವೆ

ಉಪ್ಪಿನ ಕಾಗದ.	–	ಉಸುಕಿನ ಕಾಗದ, ಶಿಲಾಮೂರ್ತಿಯ ಒರಟು. ಭಾಗವನ್ನು ನಯಗೊಳಿಸಲು ಬೇಕಾದ ಸಾಮಗ್ರಿ.
[illegible]	–	ಗಜಕೋಲು.
[illegible]	–	ಸಾಣೆಕಲ್ಲು ಉಪಕರಣಗಳನ್ನು ಹರಿತಗೊಳಿಸುವ ಉಪಕರಣ.
ಮಸಗಲ್ಲು.	–	ಉಪಕರಣಗಳನ್ನು ಹರಿತಮಾಡುವ ವಸ್ತು.
ಗ್ರ್ಯಾಂಡಿಂಗ್ ಕಲ್ಲು.	–	ನುಣುಪುಗೊಳಿಸಲು ಬೇಕಾದ ಉಪಕರಣ.
ಕುಂಚ.	–	ಪಾಲಿಸ್ ಮಾಡುವ ಸಾಧನ.
ಕೈವಾರ.	–	ಶಿಲೆಗೆ ವೃತ್ತಾಕಾರಕ್ಕೆ ಬಳಸುವ ಉಪಕರಣ.
ಕ್ಯಾಲಿಫರ್	–	ಮೂರ್ತಿಯ ಮೂಗು ಮತ್ತು ಕಣ್ಣುಗಳ ಬಳಿ ಹೊರ ಭಾಗಗಳನ್ನು ಅಳೆಯುವ ಸಾಧನ.

ಗನ್ನು, ಸುತ್ತಿಗೆ,	–	ಬಡಿಯುವ ಸಾಧನ
ಗರಗಸ	–	ಕಲ್ಲನ್ನು ಕೊಯ್ಯಲು ಬಳಸುವ ಉಪಕರಣ.
ಚೇರ್ಣ	–	ಕಲ್ಲಿನಲ್ಲಿ ವಿನ್ಯಾಸ ಅಲಂಕಾರಿಕ ಕೆತ್ತನೆಗೆ ಬೇಕಾದ ಉಪಕರಣ.
ಬದ್ದಾಚೇರ್ಣ	–	ಬದ್ದ ನಿರ್ಮಾಣಕ್ಕೆ ಬೇಕಾದ ಚೇರ್ಣ.
ಟ್ರೈಸ್ಕ್ವೇರ್	–	ನೀರಿನ ಗುಂಡು, ಕಲ್ಲಿನ ಸಮತಟ್ಟನ್ನು ಅಳೆಯುವ ಸಣ್ಣ ಮಟ್ಟಲಿಗೆ.
ಡ್ರಿಲ್, ಬೈರಿಗೆ	–	ಶಿಲೆಗೆ ರಂದ್ರಮಾಡುವ ಉಪಕರಣ.
ತಾಳೆಗರಿ	–	ಪೂರ್ವದಲ್ಲಿ ತಾಳೆಗರಿಯನ್ನು ೧೨೦ ಭಾಗಮಾಡಿ ಅಳತೆಗಾಗಿ ಉಪಯೋಗಿಸುತ್ತಿದ್ದರು.
ತೂಕದ ಗುಂಡು	–	ನೇರಕ್ಕೆ ಇದೆ ಎಂಬುದನ್ನು ತಿಳಿಯುವ ಸಾಮಾಗ್ರಿ.
ದಾತ್ರಿ	–	ಹಲ್ಲಿನ ಆಕಾರದ ಉಳಿ, ರಂಧ್ರಮಾಡಲು ಬಳಸುವ ಸಾಮಗ್ರಿ
ದಾರ	–	ಅಳತೆಗಾಗಿ ಬಳಸುವ ವಸ್ತು.
ಪಟ್ಕೆ	–	ಗರಗಸದ ಆಕಾರದಲ್ಲಿದ್ದು ಕಲ್ಲಿನ ಮೇಲೆ ಗೆರೆ ಹಾಕಲು ಬಳಸುವ ಉಪಕರಣ.
ಪಲ್ಮಟೆ	–	ಕಲ್ಲನ್ನು ಸಮ ಮಾಡಲು ಬಳಸುವ ಉಪಕರಣ.
ಸೇಪಿಂಗ್ ಮೆಷಿನ್	–	ಕಂಬ, ತೊಲೆ, ಬಾಗಿಲುಗಳನ್ನು ಕೊರೆಯಲು ಬಳಸುವ ಯಂತ್ರ.

ಇನ್ನು ಅನೇಕ ಉಪಕರಣಗಳನ್ನು ಶಿಲ್ಪಿಗಳು ಬಳಸುತ್ತಾರೆ. ಆದರೆ ಕೆಲಸಕ್ಕೆ ಅನುಗುಣವಾಗಿ ಸಂದರ್ಭಕ್ಕನುಗುಣವಾಗಿ, ಅಳತೆಗನುಗುಣವಾಗಿ ಉಪಕರಣಗಳನ್ನು ತಾವೇ ಆಗಲೇ ತಯಾರಿಸಿಕೊಳ್ಳುತ್ತಾರೆ. ಈ ರೀತಿಯಾದ ಉಪಕರಣಗಳಿಂದಸೌಂದರ್ಯ ಸೊಬಗನ್ನು ಚಿತ್ರಿಸಲು ಬಳಸುವ ಸಾಮಗ್ರಿಗಳಾಗಿವೆ.

ತಯಾರಿಸುವ ಉಪಕರಣಗಳು

ಅಡಿಪಟ್ಟು	–	ಪೀಠ ದೇವತಾ ಮೂರ್ತಿಯ ತಳಭಾಗ.
ಉದರಭಾಗ	–	ದೇವತಾ ಮೂರ್ತಿಯ ಹೊಟ್ಟೆಯ ಮೇಲೆ ಶಿಲ್ಪಿ ತಯಾರಿಸುವ ಆಭಣರಗಳು.
ಎಳೆ	–	ದೇವಸ್ಥಾನದಲ್ಲಿ ತೊಲೆಯ ಮೇಲೆ ಬರುವ ಕಲ್ಲಿನ ವಸ್ತು.
ಕಂಠಾಭರಣ	–	ಶಿಲ್ಪಿ ತಯಾರಿಸುವ ದೇವತಾ ಮೂರ್ತಿಯಲ್ಲಿನ ಕಂಠದ ಆಭರಣ.
ಕರ್ಣಕುಂಡಲ	–	ಎದೆ ಕವಚ.
ಕರ್ಣಪತ್ರ	–	ದೇವತಾ ಮೂರ್ತಿಯ ಕಿವಿಯ ಆಭರಣ.

ಕರಂಡ ಕಿರೀಟ	–	ದೆವತಾ ಮೂರ್ತಿಗಳಲ್ಲಿ ಅಲಂಕಾರಕ್ಕಾಗಿ ಮಾಡಿದ ಆಭರಣ.
ಕರಂಡ ಮುಕುಟ	–	ದೇವತಾ ಮೂರ್ತಿಯಲ್ಲಿ ಅಲಂಕಾರದ ವಸ್ತು.
ಕೀರ್ತಿಮುಖ	–	ದೇವತಾ ಮೂರ್ತಿಯ ಪ್ರಭಾವಳಿಯಲ್ಲಿ ಮೂರ್ತಿಗೆ ದೃಷ್ಟಿ ತಾಗದಿರಲಿ ಎಂದು ನಿರ್ಮಿಸುವ ಚಿತ್ರ.
ಕುಯಲು	–	ಮೂರ್ತಿಯನ್ನು ನೆಲದಲ್ಲಿ ಕೂರಿಸಲು ಮಾಡಿರುವ ಪೀಠದ ಕೆಳಭಾಗ.

ತೊಲಿ.	ತೋಳುಬಂದಿ.
ದೇವತಾ ಮೂರ್ತಿ.	ಪ್ರತಿಮ.
ಪ್ರಭಾವಳಿ.	ಬೋದು.
ಗಡ್ಡಿ ಬೋದು.	ಭುಜಕೀರ್ತಿ.
ಮೇಲ್ಮುದ್ದಿ.	ಮಿಥುನ ಶಿಲ್ಪಗಳು.
ಮಣ್ಣಿನ ಗಣೇಶ.	ಗೋಪುರ.
ಕಳಸ.	
ದೇವತಾ ಮೂರ್ತಿಗಳು.	ಮರದ ರಥಗಳು,
ಪಾಲ್ಕಿಗಳು.	

ಇತ್ಯಾದಿಗಳನ್ನು ಈ ಶಿಲ್ಪಿಗಳು ತಮ್ಮ ಕೈಚಳಕದಿಂದ ನೋಡುಗರ ನಯನಗಳನ್ನು ಮತ್ತಷ್ಟು ಅರಳಿ ಸಂತೋಷಗೊಳಿಸುತ್ತವೆ ಎಂದರೆ ಅವರು ತಯಾರಿಸುವ ಕಸಬಿನ ಹಿಂದೆ ಎಷ್ಟು ಶ್ರಮ ಇರಬಹುದು ಎಂಬುದು ತಿಳಿದು ಬರುತ್ತದೆ. ಒಟ್ಟಾರೆಯಾಗಿ ಪೂಜೆಗೊಳ್ಳುವ ಪ್ರತಿಯೊಂದು ಶಿಲಾ ಮೂರ್ತಿಗಳನ್ನು ತಯಾರಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ಇಂದು ಇವರ ಜೀವನ ಈ ಶಿಲ್ಪಕಲೆಯಿಂದ ಬದುಕುವ ದಾರಿ ಕಲ್ಲುಮುಳ್ಳುಗಳಿಂದ ಕೂಡಿದೆ. ಅವರ ಬದುಕನ್ನು ನೋಡಿದರೆ ಅವರು ಶಿಲ್ಪಾಕಲೆಯಿಂದ ಕವಲೊಡೆದು ಜೊತೆಗೆ ಇತರ ಕೆಲಸದಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಹೆಚ್ಚು ಕಂಡು ಬರುತ್ತದೆ.

***

ಅಧ್ಯಾಯ – ೪

ಪಾಂಚಾಳ ಸಮಾಜದ ಆಚರಣೆ ಮತ್ತು ನಂಬಿಕೆಗಳು

ಮನುಷ್ಯನಿಗೆ ಸಹಜ ಸ್ವಭಾವಿಕವೂ ಹಿಂದಿನವರಿಂದ ಬಳುವಳಿಯಾಗಿ ಬಂದುದು ನಂಬಿಕೆ, ಆಚರಣೆ, ವಿಧಿ ವಿಧಾನಗಳಿಗೆ ಪ್ರಾಕ್ತನ ಅಥವಾ ಜನಪದ ಮನುಸ್ಸು ಬದ್ಧವಾಗಿರುತ್ತದೆ ಎಂದು ಚಿದಾನಂದ ಮೂರ್ತಿಯವರು ಹೇಳಿದ್ದಾರೆ. ಈ ರೀತಿಯಲ್ಲಿ ಬದ್ಧವಾದ ಮನಸ್ಸುಗಳು ತಮ್ಮದೇ ಆದ ನಂಬಿಕೆ, ಆಚರಣೆ, ವಿಧಿವಿಧಾನಗಳನ್ನು ಅನುಸರಿಸುತ್ತಾ ಬಂದಿರುವುದನ್ನು ಕಾಣಬಹುದು. ಈ ಆಚರಣೆ ನಂಬಿಕೆ, ಸಂಪ್ರದಾಯಗಳು ಈ ದೇಶದ ಜನರ ಬೆನ್ನೆಲುಬು ಅವು ಒಂದನ್ನು ಬಿಟ್ಟು ಮತ್ತೊಂದಿಲ್ಲ.

ಭಾರತದಂತಹ ಹಿಂದೂ ಸಂಸ್ಕೃತಿಯ ನೆಲೆಯಲ್ಲಿ ನಿಂತುಕೊಂಡಿರುವ ಜನರು ಸಂಪ್ರದಾಯಗಳಿಗೆ ತಲೆಬಾಗುತ್ತಲೇ ಬಂದಿದ್ದಾರೆ. ಅಂತಹ ಹಿಂದೂ ಸಂಸ್ಕೃತಿಯಲ್ಲಿ ಬರುವ ಪಾಂಚಾಳರು ಇತರ ಸಮುದಾಯಗಳಿಗಿಂತ ಭಿನ್ನವಾದ ಆಚರಣೆ, ವೃತ್ತಿ, ಸಂಪ್ರದಾಯ, ವಿಧಿವಿಧಾನಗಳನ್ನು ಕಾಣಬಹುದು. ಈ ಪಾಂಚಾಳದವರು ಸಾಮಾನ್ಯವಾಗಿ ಏಕ ಪ್ರಕಾರದ ನಂಬಿಕೆಗಳು ಆಚರಣೆಯನ್ನು ನಡೆಸಿಕೊಂಡು ಬಂದಂತವರು. ಇವರ ಮೂಲ ಒಂದೇ ಆದರೂ ವೃತ್ತಿನಾಮಗಳವಾಗಿ ಕುಲ ನಾಮಗಳು ಬದಲಾಗಿರುವುದನ್ನು ಬಿಟ್ಟರೆ ಮಿಕ್ಕವುಗಳು ಎಲ್ಲಾ ಒಂದೇ ಆಗಿರುತ್ತವೆ. ಅವರವರ ವೃತ್ತಿಗಳಲ್ಲಿ ವ್ಯತ್ಯಾಸಗಳಿದ್ದರೂ ಗೋತ್ರ ಮೂಲವಾದ ಪಂಥ ಪಂಗಡಗಳಿದ್ದರೂ ಎಲ್ಲದರಲ್ಲಿ ಒಂದೇ ಎಂಬುದನ್ನು ಗ್ರಹಿಸಬೇಕು.

ಈ ಪಾಂಚಾಳರ ಆಚರಣೆ, ನಂಬಿಕೆಗಳನ್ನು ಒಟ್ಟಿಗೆ ಸೇರಿಸಿದರೆ ಅಷ್ಟೊಂದು ವಿವರವಾಗಿ ಅರ್ಥವತ್ತಾಗಿ ಕಾಣಲು ಸಾಧ್ಯವಿಲ್ಲದ ಕಾರಣ ಅಧ್ಯಯನ ಅನುಕೂಲಕ್ಕೆ ನಾಲ್ಕು ವಿಭಾಗಗಳನ್ನು ಮಾಡಿಕೊಂಡು ವಿವರಿಸಲಾಗಿದೆ. ಇದರಿಂದ ಅವರ ಸಂಸ್ಕೃತಿ, ಆಚಾರ ವಿಚಾರಗಳನ್ನು ತಿಳಿಯಲು ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ವರ್ಗೀಕರಣ ಮಾಡಲಾಗಿದೆ.

ಅ) ಮನುಷ್ಯ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಆ) ನಿಸರ್ಗ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಇ) ವೃತ್ತಿ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಈ) ದೈವ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಮನುಷ್ಯ ಹುಟ್ಟಿನಿಂದ ಹಿಡಿದು ಸಾವಿನಾಚೆಯ ನಡುವಿನ ಆಚರಣೆಗಳನ್ನು ವಿವರಿಸಲಾಗಿದೆ. ಜನನ, ಉಪನಯನ, ವಿವಾಹ, ಶವಸಂಸ್ಕಾರ ಮತ್ತು ಶ್ರದ್ಧಾಚರಣೆಗಳು ಈ ಭಾಗದಲ್ಲಿ ಬಂದಿರುವುದನ್ನು ವಿವರಿಸಲಾಗಿದೆ. ಪಾಂಚಾಳರು ಅದರಂತೆ ನಿಸರ್ಗಕ್ಕೆ ಸಂಬಂಧಿಸಿದ ವೃತ್ತಿಯಲ್ಲಿ ಆಚರಿಸುವ ಮತ್ತು ದೈವತ್ವದಲ್ಲಿನ ನಂಬಿಕೆಗಳನ್ನು ಇಲ್ಲಿ ಜಟಿಜಟಿಯಾಗಿ ವಿವರಿಸಲಾಗಿದೆ. ಗ್ರಾಮಜೀವನದ ಕ್ರಿಯಾಶೀಲ ಜನಾಂಗವಾದ ಪಾಂಚಾಳರು ವಿಶಿಷ್ಟವಾದ ಸಂಪ್ರದಾಯವುಳ್ಳವರಾಗಿದ್ದಾರೆ. ಅವುಗಳನ್ನೆಲ್ಲ ಒಂದೊಂದಾಗಿ ವಿವರಿಸಲಾಗಿದೆ.

ಅ)ಮನುಷ್ಯ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಮನುಷ್ಯ ಹುಟ್ಟಿನಿಂದ ಆರಂಭವಾಗಿ ಬದುಕಿನ ವಿವಿಧ ಹಂತಗಳನೊಳಗೊಂಡಂತೆ ಅಂತ್ಯಕ್ರಿಯೆಯವರೆಗೆ ನಾನಾ ವಿಧಿವಿಧಾನಗಳು, ಆಚರಣೆಗಳು, ನಂಬಿಕೆಗಳು ಸಂಪ್ರದಾಯಗಳು ಜೊತೆಗೆ ನಿಷೇಧಗಳನ್ನು ಎಲ್ಲಾ ಸಮುದಾಯಗಳಲ್ಲಿ ಕಾಣಬಹುದು. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಕಾಲದಿಂದ ಕಾಲಕ್ಕೆ ಸಮುದಾಯದಿಂದ ಸಮುದಾಯಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಆಚರಣೆ ಸಂಪ್ರದಾಯದ ವಿಧಿವಿಧಾನಗಳು ಭಿನ್ನವಾಗಿರುತ್ತವೆ. ಅಂದರೆ ಪರಿಸರಕ್ಕೆ ತಕ್ಕಂತೆ ಆರ್ಥಿಕ, ಸಾಂಸ್ಕೃತಿಕ, ತಿಳುವಳಿಯ ಮೂಲಕ ಸ್ಥಳೀಯ [illegible] ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಕರಾವಳಿಯ ಪ್ರದೇಶದಲ್ಲಿನ ಜನರು ಮೀನನ ಪರಿಸರದಲ್ಲಿ ವಾಸ ಮಾಡುತ್ತಾ ಇದ್ದಾಗ ಆ ಪರಿಸರಕ್ಕೆ ಅನಿವಾರ್ಯವಾಗಿ ಹೊಂದಿಕೊಂಡು ಹೋಗುವ ಹೂವಾಡಗಿತ್ತಿ ಮತ್ತು ಮೀನುಗಾರಿಣಿಯ ಕಥೆ ನೆನಪಿಸುತ್ತದೆ. ಅವರ ವಾಸನೆಗೆ ಹೊಂದಿಕೊಳ್ಳದ ಅವರ ಪರಿಸ್ಥಿತಿ ಹೂವಿನ ವಾಸನೆ ಮೀನುಗಾರರಿಗೆ ಆಗುವುದಿಲ್ಲ. ಅದು ಕೆಟ್ಟವಾಸನೆಯಾದರೆ ಮೀನಿನ ವಾಸನೆ ಹೂವಾಡಗಿತ್ತಿಗೆ ಆಗುವುದಿಲ್ಲ. ಪರಸ್ಪರ ಹೊಂದಿಕೊಂಡರೆ ಎಂಬ ಪ್ರಶ್ನೆ ಸಹಜವಾಗಿ ಬಂದರೆ ಅದು ಸಮಸ್ಯೆಯಾಗುವುದಿಲ್ಲ. ಹಾಗೆ ಪಾಂಚಾಳರು ಆ ವಾತಾವರಣಕ್ಕೆ ಹೊಂದಿಕೊಂಡು ಮೀನನ್ನು ತಿನ್ನಲು ಬಹುದು. ಬಯಲು ಸೀಮೆಯಲ್ಲಿ ಅಂತಹ ವಾತಾವರಣ ಇಲ್ಲದಿರುವುದರಿಂದ ಈ ಪ್ರದೇಶದಲ್ಲಿ ಪಾಂಚಾಳರಿಗೇಕೆ? ಇತರ ಸಮುದಾಯದವರಿಗೂ ಈ ಮೀನು ಸಿಗುವುದು ಕಷ್ಟದ ಕೆಲಸವೇ ಅವರೂ ಈ ಪಾಂಚಾಳರು ಶುದ್ಧ ಸಸ್ಯಾಹಾರಿಗಳಾಗಿ ಕಂಡು ಬರುತ್ತಾರೆ. ಸಂಗದಂತೆ ಸಹವಾಸ ಎಂಬಂತೆ ಹೋದ ಕಡೆ ಬಂದ ಕಡೆ ತಿನ್ನುವ ಕುಡಿಯುವ ಚಟಗಳನ್ನು ಮಾಡುವವರು ಇದ್ದರೂ ಅಲ್ಲೊಬ್ಬ ಇಲ್ಲೊಬ್ಬರಂತೆ ಸಿಗುತ್ತಾರೆ. ಹೊರತು ಅವರ್‍ಯಾರು ಲೆಕ್ಕಕ್ಕಿಲ್ಲ. ಒಂದು ನೂರು ಜನರಲ್ಲಿ ಒಬ್ಬನು ಕೆಟ್ಟವನಾದರೆ ಉಳಿದವರು ಕೆಟ್ಟವರ ಗುಂಪಿಗೆ ಸೇರಲಾರರು ಹಾಗಾಗಿ ಅವರನ್ನು ಸಸ್ಯಹಾರಿಗಳೆಂದು ಪರಿಗಣಿಸಲಾಗುತ್ತದೆ. ಇತರ ಸಮುದಾಯಗಳಿಗಿಂತ ವಿಶಿಷ್ಟವಾದ ಆಚರಣೆ, ನಂಬಿಕೆ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದವರ ಸಾಲಿಗೆ ಈ ಪಾಂಚಾಳರು ಸೇರುತ್ತಾರೆ. ಅಂದರೆ ಇವರು ಆಚರಿಸುವ ಹಬ್ಬ ಹರಿದಿನಗಳು, ಮದುವೆ ಮುಂಜಿಗಳು, ಅಂತ್ಯಕ್ರಿಯೆಗಳಲ್ಲಿ ನೆಡೆಸುವ ಕಾರ್ಯಗಳು ಅತ್ಯಂತ ವಿಶೇಷವಾಗಿ ಕಂಡು ಬರುತ್ತವೆ.

ಪಾಂಚಾಳರು ಹುಟ್ಟಿನಿಂದ ಸಾವಿನಾಚೆಯವರೆಗೂ ತಮ್ಮ ಸಂಪ್ರದಾಯಗಳು ವಿಶಿಷ್ಟವಾದದ್ದರಿಂದ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಆಚರಣೆಗಳನ್ನು ಕಾಣಬಹುದು. ಎಲ್ಲಾ ಆಚರಣೆಗಳನ್ನು ಒಟ್ಟಾಗಿ ವಿವರಿಸಲು ಸಾಧ್ಯವಿಲ್ಲದ ಕಾರಣ ವಿಭಾಗಗಳನ್ನಾಗಿ ವಿಂಗಡಿಸಿದೆ. ಒಂದು ಮಾತನ್ನು ಇಲ್ಲಿ ಪ್ರಸ್ತಾಪಸಲೇ ಬೇಕು. ಪಾಂಚಾಳರೆಲ್ಲರೂ ಎಲ್ಲೆ ಇದ್ದರೂ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು ಏಕ ಪ್ರಕಾರವಾಗಿರುತ್ತವೆ. ಮತ್ತು ಪಂಚ ವೃತ್ತಿಗಳವರ ವಿಧಾನಗಳು ಕೂಡ ಏಕಪ್ರಕಾರವಾಗಿರುತ್ತವೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಆಗಾಗಿ ವಿಂಗಡನೆ ಮಾಡಿ ಒಂದೊಂದನ್ನು ವಿವರಿಸಲಾಗಿದೆ.

೧) ಜನನ

೨) ಉಪನಯನ

೩) ವಿವಾಹ

೪) ಅಂತ್ಯಕ್ರಿಯೆ

೫) ಇತರ

೧) ಜನನ

ಮೂಲವಾಗಿ ಪಾಂಚಾಳರು ವೈಧಿಕಾಚರಣೆಗಳನ್ನು ಅನುಸರಿಸುತ್ತಾ ಬಂದವರು. ಹೆಣ್ಣುತನ ಪ್ರಕೃತಿ ತಾಯ್ತನ ಸಂಸ್ಕೃತಿ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಮಗುವನ್ನು ಪಡೆಯುವುದು ಸ್ತ್ರೀ ತನದ ಬಯಕೆಯಾಗಿದೆ. ಸ್ತ್ರೀಯರು ಮದುವೆ ನಂತರ ಗರ್ಭಧರಿಸಿದಾಗ ಮೂರು ತಿಂಗಳಿಗೆ ಬವಿಕೆ(ಬಯಕೆ) ಬುತ್ತಿಯನ್ನು ತವರು ಮನೆಯಿಂದ ಬಯಸುತ್ತಾಳೆ. ಅದರಂತೆ ತವರಿನವರು ಹಸಿರು ಸೀರೆ, ಕಪ್ಪುಸದ ಬಟ್ಟೆ, ಹಸಿರು ಬಳೆ, ಹೂವನ್ನು ಜೊತೆಗೆ ವಿಶೇಷವಾದ ಅಡಗೆಯನ್ನು ಮಾಡಿಕೊಂಡು ಆಕೆಯ ಬಯಕೆಯನ್ನು ತೀರಿಸುತ್ತಾರೆ. ಆಗ ಆಕೆಯನ್ನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಗ್ರಹಣ ಹಿಡಿದರೆ ಆಕೆಯನ್ನು ಬಾಗಿಲು ದಾಟಿಸುವುದಿಲ್ಲ. ಮತ್ತು ಆಯಾಸವಾಗದಂತೆ ಅವಳಿಗೆ ಅವಶ್ಯಕತೆ ತಕ್ಕಂತೆ ಕೊಡುತ್ತಾ ಬಹಳ ಜೋಕೆಯಿಂದ ನೋಡಿಕೊಳ್ಳುತ್ತಾರೆ.

ಆ ಮೂರು ತಿಂಗಳಲ್ಲಿ ಗರ್ಭಿಣಿಯು ಬಯಸಿದ್ದೆಲ್ಲಾ ಸಾಧ್ಯವಾದ ಮಟ್ಟಿಗೆ ಪೂರೈಸುತ್ತಾರೆ. ಹೀಗೆ ದಿನಕಳೆದಂತೆ ತುಂಬು ಗರ್ಭಿಣಿಯಾಗುವ ಸಂದರ್ಭದಲ್ಲಿ ಅಂದರೆ ಏಳುತುಂಬಿ ಎಂಟಕ್ಕೆ ಬೀಳುವ ಸಮಯದಲ್ಲಿ ಸೀಮಂತಕಾರ್ಯ (ಸೀರಿಮಾಡುವ ಕಾರ್ಯ)ವನ್ನು ತವರು ಮನೆಯವರು ಮಾಡುತ್ತಾರೆ. ತವರು ಮನೆಯವರು ಆ ದಿನ ಬಂಧು ಬಳಗದವರಿಗೆ ತಮ್ಮ ಖರ್ಚಿನಿಂದಲೇ ಉಪ್ಪು ಮೊದಲುಗೊಂಡು ಪ್ರತಿಯೊಂದು ಪದಾರ್ಥಗಳನ್ನು ತಾವೇ ತಂದು ಆಕೆಯ ಗಂಡನ ಮನೆಯಲ್ಲಿ ಮಾಡಿ ಬಂದ ಬಳಗಕ್ಕೆ ಊಟ ಮಾಡಿ ಬಡಿಸುತ್ತಾರೆ. ಈ ಸೀಮಂತ ಕಾರ್ಯವು ಗರ್ಭಧರಿಸಿದಾಕೆಗೆ ಅತ್ಯಂತ ಸಂತೋಷ ಕೊಡುವ ದಿನವಾಗಿರುತ್ತದೆ. ಹಸಿರು ಸೀರೆ, ರವಿಕೆ, ಅರಿಸಿನ, ಕುಂಕುಮ, ಹಸಿರು ಬಳೆಯನ್ನು ತಂದು ಆಕೆ ಮತ್ತು ಆಕೆಯ ಗಂಡನನ್ನು ಕೂಡಿಸಿ ಮುತ್ತೈದೆಯರೆಲ್ಲ ಉಡಿ ತುಂಬಿ ಆರತಿ ಬೆಳಗುತ್ತಾರೆ. ಹಳ್ಳಿಗಳಲ್ಲಾದರೆ ಸೋಬಾನ ಪದವನ್ನು ಹಾಡುತ್ತಾರೆ. ಇಂತಹ ಆಧುನಿಕ ಯುಗದಲ್ಲಿ ಸಂಪ್ರದಾಯಗಳ ಬೇರುಗಳು ಉಳಿದುಕೊಂಡಿರುವುದು ಹಳ್ಳಿಗಳಲ್ಲಿ, ಇವುಗಳನ್ನು ಉಳಿಸಿ ಬೆಳಸಿಕೊಂಡು ಹೋಗುವವರು ಕಲಿಯಲಾರದವರೇ ಹೊರತು ಬೇರೆ ಯಾರು ಆ ಕಡೆಗೆ ಗಮನ ಹರಿಸುವುದಿಲ್ಲ. ಆರತಿ ಬೆಳಗಿ ಕೆಳಗಿಡುವಾಗ 'ಹೆಸರೇಳು' ಎಂದು ಮಣೆಯನ್ನು ಹಿಡಿದುಕೊಳ್ಳುತ್ತಾರೆ. ಆಕೆ ನಾಚಿ ನೀರಾಗಿ ಕೊನೆಗೆ ಧೈರ್ಯಮಾಡಿ ಒಡಪು ಕಟ್ಟಿ ಗಂಡನ ಹೆಸರನ್ನು ಆಯಾ ವೃತ್ತಿಗೆ ಸೇರಿದವರು ಆಯಾ ವೃತ್ತಿಗೆ ಸಂಬಂಧಿಸಿದಂತೆ ಒಡಪಿನಲ್ಲಿ ಹೆಸರೇಳುತ್ತಾರೆ. ಅವು ಅತ್ಯಂತ ಸೊಗಸು ವ್ಯಂಗ್ಯ. ಹಾಸ್ಯ, ಗಂಭೀರತೆಯನ್ನು ಹೊಂದಿರುವುದು ವಿಶೇಷವಾಗಿರುತ್ತವೆ. ಸಾಮಾನ್ಯವಾಗಿ ಈ ಒಡಪು ಗಾದೆಗಳ ಸ್ವಭಾವವೇ ಹಾಗೆ ಸಂದರ್ಭಕ್ಕೆ ತಕ್ಕಂತೆ ಅವುಗಳು ತಕ್ಷಣ ನೆನಪಿಗೆ ಬಂದು ಬಾಯಿಂದ ಹೇಳಿಸಿ ಬಿಡುತ್ತವೆ.

ಆರತಿ ಬೆಳಗಿದ ಮೇಲೆ ಕಾಳಮ್ಮನ ಗುಡಿಗೆ ಕರೆದುಕೊಂಡು ಹೋಗಿ ಬರುತ್ತಾರೆ. ಗಂಡು ಹೆಣ್ಣು ಯಾವುದು ಬೇಕೋ ಅದನ್ನು ಬೇಡಿಕೊಳ್ಳುತ್ತಾಳೆ. ಎಲ್ಲಾ ಕಾರ್ಯಕ್ರಮ ಮುಗಿದ ಮೇಲೆ ಆಕೆಯ ಅತ್ತೆಯ ಮಾವಂದಿರನ್ನು ನಾವು ಮಗಳನ್ನು ಚೊಚ್ಚಲ ಹೆರಿಗೆಗೆ ಕರೆದುಕೊಂಡು ಹೋಗುತ್ತೇವೆಂದು ತವರಿನವರು ಕೇಳುತ್ತಾರೆ. ಅವರು ಆಕೆಯ ಗಂಡನನ್ನು ಕೇಳಿರಿ ಎಂದು ಹೇಳುತ್ತಾರೆ. ಮತ್ತೆ ಅಳಿಯನತ್ತಿರ ಬಂದು ಒಪ್ಪಿಗೆಯನ್ನು ತೆಗೆದುಕೊಂಡು ತವರಿಗೆ ಕರೆದುಕೊಂಡು ಹೋಗುತ್ತಾರೆ.

[illegible] ಆಕೆಯು ಮಗುವಿನ ಜನ್ಮ [illegible] ಗಂಗಾಳ (ತಟ್ಟೆ) ವನ್ನು [illegible]

ಚಿಟ್ಟಲಿಯನ್ನು ಬಾರಿಸುತ್ತಾರೆ. ಆ ಮಗು ಜನಿಸಿದ ವಾರಗಳಿಗೆ ತಿಥಿ, ನಕ್ಷತ್ರ, ಜನ್ಮನಾಮಗಳನ್ನು ಪಂಚಾಂಗದಲ್ಲಿ ನೋಡುತ್ತಾರೆ. ಎಲ್ಲಾ ಚೆನ್ನಾಗಿದ್ದರೆ ಅದೃಷ್ಟವಂತರಾಗುತ್ತಾರೆ. ಏನಾದರೂ ದೋಷದ ಸಂಕೇತ ಕಂಡು ಬಂದರೆ ತಂದೆ ಹನ್ನೊಂದನೆಯ ದಿನದವರೆಗೆ ಮಗುವಿನ ಮುಖ ನೋಡುವಂತಿಲ್ಲ. ಒಂದು ವೇಳೆ ನೋಡಬೇಕೆಂದರೆ ಕನ್ನಡಿಯಲ್ಲಿ ನೋಡಬಹುದು. ದೋಷಗಳಿದ್ದರೆ ಆಚಾರ್ಯಸ್ವಾಮಿಗಳ ಮೂಲಕ ದೋಷ ಮುಕ್ತವನ್ನಾಗಿಸುತ್ತಾರೆ. ಅದಕ್ಕಾಗಿ ಆಕಳು, ಜೋಳ ಇತ್ಯಾದಿ ದಾನಮಾಡುತ್ತಾರೆ. ಹುಟ್ಟಿ ಐದು ದಿನದಲ್ಲಿ ಮನೆ ಬಳೆದು ಪೂಜೆ ನೈವೇದ್ಯ ಮಾಡಿ ಶುದ್ಧ ಮಾಡುತ್ತಾರೆ. ಬಾಣಂತಿಗೆ ಈ ಸಂದರ್ಭದಲ್ಲಿ ಚಾಕರಿ ಮಾಡಿದವರಿಗೆ ಸೀರೆ ಉಡಿಸುವ ಪದ್ಧತಿಯಿದೆ.

ವೈದಿಕ ಸಂಸ್ಕೃತಿಯ ಪ್ರಕಾರ ಇವರ ಜೀವತಾಚರಣೆಗಳು ನಡೆಯುತ್ತವೆ. ಮಗು ಹುಟ್ಟಿದ ಹನ್ನೊಂದನೆಯ ದಿನ ಮೈಲಿಗೆ ಕಳೆಯುವ ಆಚರಣೆ (ಶುದ್ಧ) ನಡೆಯುತ್ತದೆ. 'ಆಚಾರ ಸ್ವಾಮಿಗಳು' ಬಂದು ಪಂಚಗದ್ಯ ಮಾಡಿಕೊಂಡು ಪಂಚಗದ್ಯ ಘೋಷಿಸಿ ಶುದ್ಧವಾದ ಬಳಿಕ ಮಗುವಿನ ನಕ್ಷತ್ರದ ಪ್ರಕಾರ ನಾಮಕರಣ ಮಾಡುತ್ತಾರೆ. ನಂತರ ಹಿರಿಯರೆಲ್ಲ ಸೇರಿ ಚಿನ್ನ, ಬೆಳ್ಳಿಯಿಂದ ಜೇನುತುಪ್ಪದಲ್ಲಿ ಅರೆದು ನಾಲಗೆಗೆ ನೆಕ್ಕಿಸಿದ ಬಳಿಕ ಉಡುಗೊರೆ ನೀಡುತ್ತಾರೆ. ಮಗುವಿನ ಹೆಸರನ್ನು ಅಕ್ಕಿಯಲ್ಲಿ ಬರೆದು [illegible] ಕಿವಿಯಲ್ಲಿ [illegible] ಆಕೆಯ ಹೆಸ್ರಿಗೆ ಎಂಟತ್ತು ಸ್ತ್ರೀಯರು ದಬದಬನೆ ಬಡಿಯುತ್ತಾರೆ. ಆಗ ಮಗುವಿನ ಕಿವಿಯಲ್ಲಿ ಮೂರು ಸಲ ಈರಣ ಕಾಳಮ್ಮ ಈರಣ್ಣ ಕಾಳಮ್ಮ ಎಂದು ಹೇಳಿ ನಂತರ ಜನ್ಮ ನಾಮವನ್ನು ಹೇಳುತ್ತಾರೆ. ಅದೇ ದಿವಸ ಶುಭ ಮುಹೂರ್ತದಲ್ಲಿ ಮುಸ್ಸಂಜೆ ಹೊರತು ಗೋಧೂಳಿ ಲಗ್ನದಲ್ಲಿ ಮಗುವಿನ ಶೃಂಗರಿಸಿದ ತೊಟ್ಟಿಲ ಅಡಿಯಲ್ಲಿ ಹಳೆಯ ಸೀರೆಯನ್ನು ಹಾಕಿ ಅಡಿಯಿಂದ ಮೇಲಿನವರೆಗೆ ಮೂರು ಸುತ್ತು ತೂಗಿ ತೊಟ್ಟಿಲಲ್ಲಿ ಹಾಕಿ ಜೋಗುಳ ಹಾಕಿ ನೆರೆದವರಿಗೆಲ್ಲ ಸಿಹಿ ಊಟ ಹಾಕುತ್ತಾರೆ.

ಬಾಣಂತಿ ನಲವತ್ತು ದಿವಸಗಳವರೆಗೆ ಮಲಗಿರುವುದು ಪದ್ಧತಿ. ಆದರೆ ಅನಿವಾರ್ಯ ಪ್ರಸಂಗಗಳಲ್ಲಿ ಬೇಗನೇ ಬಾಣಂತಿ ಸ್ನಾನ ಮಾಡುವುದು ಇದೆ. ಬಾಣಂತಿಗೆ ಆ ದಿನ ನಲವತ್ತು ಬಿಂದಿಗೆ ನೀರು ಹಾಕಿ ಸ್ನಾನ ಮಾಡಿಸುತ್ತಿದ್ದರು. ಆದರೆ ಈ ಪದ್ಧತಿ ಈಗ ಕಡಿಮೆಯಾಗಿದೆ. ಅವಶ್ಯ ವಿದ್ದಷ್ಟು ನೀರನ್ನು ಹಾಕಿ ಮೈತೊಳೆಯುತ್ತಾರೆ. ಹೆತ್ತ ದಿವಸದಿಂದ ಆಕೆ ಕುಡಿಯುವ ಔಷಧಿ, ಕೊಬ್ಬರಿಕಾರ, ಧಾತು ಪುಷ್ಠಿ ಅಂದಿಗೆ ಮುಗಿಯುತ್ತದೆ. ಈ ಬಾಣಂತಿಯು ವರ್ಸಿನ ಮೇಲೆ ಮಲಗಬೇಕೆಂಬ ನಿಯಮನೂ ಇದೆ. ನಂತರ ಮೂರು ತಿಂಗಳೋ ಅಥವಾ ಐದು ತಿಂಗಳಿಗೋ ಆಕೆ ಮೊದಲ ಬಾರಿಗೆ ಮಗುವಿನ ಜೊತೆ ಗಂಡನ ಮನೆಗೆ ಹೊಸ ಸೀರೆ ರವಿಕೆಯುಟ್ಟು ಆಭರಣ ತೊಟ್ಟು ಮಗುವಿನೊಂದಿಗೆ ತೊಟ್ಟಿಲು ಬಟ್ಟಲು ತಗೆದುಕೊಂಡು ಹೋಗುತ್ತಾರೆ. ತಮ್ಮ ಅಥವಾ ಅಣ್ಣಂದಿರು ತೊಟ್ಟಲನ್ನು ಹೋರುತ್ತಾರೆ. ಗಂಡನ ಮನೆಗೆ ಬಂದಾಗ ತಲಬಾಗಿಲಿನಲ್ಲಿ ನಿಲ್ಲಿಸಿಕೊಂಡು ಆರತಿ ಮಾಡಿ ತೊಟ್ಟಿಲು ಹೊತ್ತುಕೊಂಡು ಬಂದವರಿಗೆ ಹೊಸ ಬಟ್ಟೆ, ಬಂಗಾರ ಅವರ ಯೋಗ್ಯತೆಯನುಸಾರವಾಗಿ ಉಡುಗೊರೆ ಕೊಡುವ ಪದ್ಧತಿ ಸಾಮಾನ್ಯವಾಗಿ ನಡೆದುಕೊಂಡು ಬಂದ ಪದ್ಧತಿಯಾಗಿದೆ. ನಂತರ ಅನ್ನ ಪ್ರಾಶನ ಮಾಡಿಸುತ್ತಾರೆ. ಅನ್ನಪ್ರಾಶನ ಎಂದರೆ ಮಗುವಿಗೆ ಪ್ರಥಮ ಬಾರಿಗೆ ಅನ್ನ ಕೊಡುವುದು ಇದು ಕೂಡ ಒಂದು ಸಂಸ್ಕಾರ. ಆ ದಿನ ವಿಶೇಷ ಅಡುಗೆ ಮಾಡಿ ಹಿರಿಯರೆಲ್ಲ ಆ ಮಗುವಿಗೆ ಒಂದೊಂದು ಅನ್ನದ ಅಗಳು ತಿನ್ನಿಸಿ ಹರಸುತ್ತಾ ಉಡುಗೊರೆಯನ್ನು ನೀಡುತ್ತಾರೆ.

ಮಗುವಿಗೆ ಕಿವಿ ಚುಚ್ಚುವ ಆಚರಣೆಯೂ ಈ ಪಾಂಚಾಳರಲ್ಲಿ ನಡೆಯುತ್ತಾರೆ ಕಿವಿ ಚುಚ್ಚುವ ಬಗ್ಗೆ ಮಗುವಿನ ಕೆಲವರು ನಾಲ್ಕು ತಿಂಗಳೊಳಗೆ ಕೆಲವರು ನಾಲ್ಕು ವರ್ಷ ಪ್ರಾಯ ತುಂಬುವ ಮೊದಲು ಶುಭ ಮುಹೂರ್ತ ನೋಡಿ ಕಿವಿ ಚುಚ್ಚುತ್ತಾರೆ. ಕಿವಿ ಚುಚ್ಚುವಾಗ ಕೊಬ್ಬರಿ ಬಟ್ಟಲು, ಕುಂಕುಮ, ಎಲೆಅಡಿಕೆ ಅವಶ್ಯಕವಾಗಿ ಬಳಸುತ್ತಾರೆ. ನಂತರ ಎರಡು ವರ್ಷದ ಒಳಗಡೆ ಅಥವಾ ನಾಲ್ಕು ವರ್ಷದ ನಂತರ ಜವಳ ಕಾರ್ಯಕ್ರಮ ಇರುತ್ತದೆ. ಗಂಡು ಮಗುವಾದರೆ ಮಾತ್ರ ಈ ಕಾರ್ಯ ನಡೆಸುತ್ತಾರೆ. ಈ ಜವಳ (ಚವಲ) ಕಾರ್ಯಕ್ಕೆ ಬಂಧು ಬಾಂಧವರನ್ನು ಕರೆದು ಅವರು ಅಂದುಕೊಂಡ ಅಥವಾ ಬೇಡಿಕೊಂಡ ದೇವಾಲಯಕ್ಕೆ ಹೋಗಿ ದೇವರ ಸಾನಿಧ್ಯದಲ್ಲಿ ನೆರವೇರಿಸುತ್ತಾರೆ.

ಆ ಸಂದರ್ಭದಲ್ಲಿ ಆ ಮಗುವಿನ ಕೂದಲನ್ನು ಮಗುವಿನ ಮಾವಂದಿರು ಶಾಸ್ತ್ರಕ್ಕೆ ಕತ್ತರಿಸಿದರೆ ಹುಟ್ಟಿದಾಗಿನ ಕೂದಲನ್ನು ಕತ್ತರಿಸುವ ರೂಢಿಯು ನಡೆಯುತ್ತದೆ. ಆಮೇಲೆ ನೀರೆರದು ಹೊಸ ಬಟ್ಟೆಗಳನ್ನು ಹಾಕಿ ಮಗುವಿನ ತಂದೆ ತಾಯಿ ಜೊತೆ ಕೂಡಿಸಿ ಆರತಿಬೆಳಗುತ್ತಾ ಉಡುಗೊರೆಯನ್ನು ನೀಡುತ್ತಾರೆ. ಜವಳ ಮಾಡಿದವರಿಗೆ ತಮ್ಮ ಯೋಗ್ಯತೆಯನುಸಾರವಾಗಿ ಏನಾದರೂ ಬಟ್ಟೆಬರೆ, ಬಂಗಾರ, ವಾಚು ಇನ್ನಿತರ ವಸ್ತುಗಳನ್ನು ನೀಡುವ ಸಂಪ್ರದಾಯವಿದೆ. ಈ ರೀತಿಯಾದ ಕಾರ್ಯಗಳನ್ನು ಮಾಡುವುದರ ಮೂಲಕ ತಮ್ಮ ನಂಬಿಕೆಗಳನ್ನು ಉಳಿಸಿಕೊಂಡು ಬಂದವರು ನಂತರ ಆ ಮಗು ತಮ್ಮ ಕುಲದ ಮಧ್ಯ ಬೆಳೆಯುತ್ತ ೮ ವರ್ಷ ನಂತರ ಉಪನಯನ ಕಾರ್ಯಕ್ರಮ ಮಾಡುತ್ತಾರೆ.

೨) ಉಪನಯನ

ಭಾರತೀಯ ಸಂಸ್ಕೃತಿಯಲ್ಲಿ ಆಚರಣೆಗಳು ಬದುಕಿನಲ್ಲಿ ಹಾಸು ಹೊಕ್ಕಾಗಿವೆ. ಮೃಗ ಚರ್ಮ ಅಂಟಿಕೊಂಡು ಹಾಗೆ. ಹಾಗಂತ ಅದು ರೋಗಂತನೂ ಅಲ್ಲ ಕೆಲವೊಂದು ಸಾರಿ ಅಲ್ಲಗಳೆಯುವಂತಿಲ್ಲ. ಅಂತಹ ಸಂದಿಗ್ಧ ಪರಿಸ್ಥಿತಿಯನ್ನು ನಾವು ಬದುಕಿನುದ್ದಕ್ಕೂ ಕಾಣಬಹುದು. ಸಂಸ್ಕೃತಿ ಎನ್ನುವುದು ಮನುಷ್ಯ ಜೀವನ ವಿಕಾಸವಾದಂತೆ ವಿಕಸಿಸುತ್ತಲೇ ಬಂದಿವೆ. ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಟ್ಟ ನಾವು ವೈಜ್ಞಾನಿಕವಾಗಿ ಬರಿ ಯಂತ್ರೋಪಕರಣಗಳ ಸಹವಾಸ ಮಾಡಿದ್ದರೂ ನಾವು ನಮ್ಮ ಸಂಸ್ಕೃತಿಯನ್ನು ಬಿಡಲು ತಯಾರಿಲ್ಲ. 'ದಾರಿ ಬಿಟ್ರು ಧರ್ಮ ಬಿಡಬಾರದೋ ಅಥವಾ ಧರ್ಮಬಿಟ್ರು ದಾರಿ ಬಿಡಬಾರದೋ' ಎಂಬ ಗಾದೆಗಳ ಮಾತಿನ ಸಂದರ್ಭಕ್ಕನುಗುಣವಾಗಿ ಬಳಸಿದರೂ ಅವರವರ ಮನೆತನದಲ್ಲಿ ಹಿಂದಿನಿಂದಲೂ ಆಚರಿಸಿಕೊಂಡು ಬಂದ ಆಚರಣೆಗಳನ್ನು, ಪದ್ಧತಿಗಳನ್ನು, ನೀತಿ ನಿಯಮಗಳನ್ನು ಕಡ್ಡಾಯವಾಗಿ ಮಾಡುತ್ತಾರೆ. ಅಂತಹ ಆಚರಣೆಯಲ್ಲಿ ನಾಲ್ಕು ವರ್ಷದ ನಂತರ ಎಂಟು ವರ್ಷದ ಒಳಗೆ ಗಂಡು ಮಗುವಿಗೆ ಆಚಾರ್ಯಸ್ವಾಮಿಗಳ ಮೂಲಕ ಸಂಸ್ಕಾರ ಕೊಡುವ ಪದ್ಧತಿಯನ್ನು ಉಪನಯನ, ಮುಂಜಿವೆ ಎಂತಲೂ ಕರೆಯುತ್ತಾರೆ.

ಸಾಮಾನ್ಯವಾಗಿ ಎಲ್ಲಾ ಜಾತಿ, ಧರ್ಮಗಳಲ್ಲಿ ಹುಟ್ಟಿದ ಮಗುವಿಗೆ ಸಂಸ್ಕಾರವನ್ನು ಕೊಡುವ ಪದ್ಧತಿ ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು. ಅದು ಮುಸ್ಲಿಂರ ಮುಂಜಿ, ಜಂಗಮರ ಅಯ್ಯಚಾರ, ಪಂಚಮಸಾಲಿಗಳ ಲಿಂಗಧಾರಣೆಗಳಂತೆ ಪಾಂಚಾಳರು ಉಪನಯನದಲ್ಲಿ ಜನಿವಾರ ಧರಿಸಿಕೊಳ್ಳುವ ಪದ್ಧತಿಯೂ ಇದೆ. ಆ ದಿನಗಳನ್ನು ಒಂದು ಹಬ್ಬದಂತೆ ಅಥವಾ ಮದುವೆಯಂತೆ ಆಚರಿಸುತ್ತಾರೆ. ಪಾಂಚಾಳರಲ್ಲಿ ಉಪನಯನ ಜೀವನದ ಅವಿಭಾಜ್ಯ ಅಂಗವಾದ ಆಚರಣೆಯಾಗಿದೆ. ಅದು ವಿಶೇಷವಾದ ಗಂಡು ಮಕ್ಕಳಿಗಾಗಿಯೇ ಇರುವಂತದ್ದು. ಮಗು ಹುಟ್ಟಿದ ಮೇಲೆ ಅದಕ್ಕೆ ಒಂದು ಸಂಸ್ಕಾರ ಕೊಡುವ ಉದ್ದೇಶದಿಂದ ಗುರುವಿನ ಮೂಲಕ ನಡೆಯುವಂತೆ ಪದ್ಧತಿ ಬಹು ವಿಶಿಷ್ಟವಾದುದ್ದು. ಇದು ಒಂದು ರೀತಿಯ ಮದುವೆಯೇ ಸರಿ, ಉಪಯನವಾದ ಮೇಲೆಯೇ ಮದುವೆಗೆ ಅರ್ಹರಾಗುತ್ತಾರೆ ಎಂಬ ಕಲ್ಪನೆ ಇದೆ. ಈ ಸಮಾಜದಲ್ಲಿ ಅಣ್ಣ ತಮ್ಮಂದಿರರು ಮಾತಾಡಿಕೊಂಡು ತಮ್ಮತಮ್ಮ ಮಕ್ಕಳನ್ನು ಒಟ್ಟಾಗಿ ಸೇರಿಕೊಂಡು ದೇವಸ್ಥಾನದಲ್ಲಿಯೋ, ಸಂಬಂಧಿಕರ ಮದುವೆ ಕಾರ್ಯಕ್ರಮದಲ್ಲಿ ಅಥವಾ ಆರ್ಥಿಕವಾಗಿ ಅಸಮರ್ಥರಾದವರು ಸಾಮೂಹಿಕ ಉಪನಯನ ಕಾರ್ಯಗಳಲ್ಲಿ ಈ ಜವಾಬ್ದಾರಿಯನ್ನು ಕಳೆದು ಕೊಳ್ಳುತ್ತಾರೆ.

ಉಪನಯನ ಎಂದರೆ 'ನಯನ' ಕಣ್ಣು ಎಂದಾದರೆ ಉಪನಯನ ಎನ್ನುವುದು ಮೂರನೇಕಣ್ಣು ಎಂಬರ್ಥಕೊಡುತ್ತದೆ ಅದು ಜ್ಞಾನಕಣ್ಣು ತೆರೆಯುವುದು (ಪಾಂಚಾಳ ವಿಶ್ವಕರ್ಮ ಡಾ.ಕೆ.ಶಿ ಶಿವಣ್ಣ ಪುಟ 30) ಎಂಬ ಅರ್ಥವನ್ನು ಕೊಡುತ್ತದೆ. ಮಗುವಿಗೆ ಬಾಲ್ಯದಲ್ಲಿ ಸಂಸ್ಕಾರವನ್ನು ಕೊಟ್ಟಾಗ ಅದು ತನ್ನ ಮೃದು ಎಳೆಯ ಮನಸ್ಸು ಹೇಳಿದ್ದನ್ನೇ ಕೇಳುವ ಮಾಡುವ 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೆ' ಎಂಬಗಾದೆಯಂತೆ ಇಂತಹ ಸಮಯದಲ್ಲಿ ಈ ಉಪನಯನವನ್ನು ಮಾಡುತ್ತಾರೆ ಇದರಿಂದ ಮುಂದೆ ಆ ಸಮುದಾಯದ ಆಚರಣೆಗಳನ್ನು ಮೈಗೂಡಿಸಿಕೊಂಡು ಆಚರಣೆಗಳನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು ಒಂದು ವಯಸ್ಸಿಗೆ ಬಂದಮೇಲೆ ಅವನು

ಯಾರ ಮಾತನ್ನು ಕೇಳುವುದಿಲ್ಲ. ಎಲ್ಲವುದನ್ನು ಧಿಕ್ಕರಿಸಲೂಬಹುದು, ಒಪ್ಪಿಕೊಳ್ಳಲುಬಹುದು ಅದಕ್ಕೆ ಈ ಮೇಲಿನ ಗಾದೆ ಮಾತು ಅನ್ವಯವಾಗುತ್ತದೆ. ಆ ಕಾರಣದಿಂದ ಯಾವ ಸಂದರ್ಭದಲ್ಲಿ ಏನೇನು ಮಾಡಬೇಕು ಅದನ್ನೆಮಾಡಬೇಕು, ಅದನ್ನು ಮಾಡುವ ಪದ್ಧತಿ, ನಿಯಮ, ಸಂಸ್ಕಾರಗಳನ್ನು ಕೊಡಿಸುವುದು ಮನೆಯ ಹಿರಿಯರ ಪಾಲಿನದ್ದಾಗಿರುತ್ತದೆ. ಆದರೆ ಒಂದು ಮಾತ್ರ ಸತ್ಯ ಈ ಪಾಂಚಾಳರು ಈ ಉಪನಯನ ಪದ್ಧತಿಯನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಒಂದು ವೇಳೆ ವಯಸ್ಸು ಮೀರಿದರೆ ಮದುವೆ ಸಂದರ್ಭದಲ್ಲಿ ಕಾರ್ಯ ಮಾಡುತ್ತಾರೆ. ಅಂದಾಗ ಮಾತ್ರ ಗೃಹಾಶ್ರಮಕ್ಕೆ ಕಾಲಿಡಲು ಅರ್ಹನಾಗಿರುತ್ತಾನೆ. ಇಲ್ಲವಾದರೆ ಪಾಂಚಾಳನಲ್ಲ ಎಂಬ ಮಾತುಗಳು ಕೇಳಬರುತ್ತವೆ.

ಉಪನಯನ ಕಾರ್ಯಕ್ರಮವು ಪುರೋಹಿತರ ಸಮ್ಮುಖದಲ್ಲಿ ಜರಗುತ್ತವೆ. ಈ ಪಾಂಚಾಳರು ಪುರೋಹಿತರನ್ನು ಆಚಾರ ಸ್ವಾಮಿಗಳು ಎಂಬ ಬಹುವಚನದಲ್ಲಿ ಕರೆಯುತ್ತಾರೆ. ಈ ಆಚಾರಸ್ವಾಮಿಗಳು ಮಂತ್ರಗಳನ್ನೇ ಪಠಿಸುತ್ತ ಮಗುವಿಗೆ ಸ್ನಾನ ಮಾಡಿಸಿ, ಹಸಿ ಮೈಯಲ್ಲಿಯೇ ಅವನಿಗೆ ಹಡಪದವರಿಂದ ಕೊಬ್ಬರಿ ಬಟ್ಟಲದಿಂದ ನೆತ್ತಿಯ ಮೇಲೆ ಗುರುತು ಹಾಕಿದ ಭಾಗವನ್ನು ಬಿಟ್ಟು ತಲೆ ಕೂದಲನ್ನು ಬೋಳಿಸುತ್ತಾರೆ. ನೆತ್ತಿಯ ಹಿಂಬದಿಯಲ್ಲಿ ಜುಟ್ಟನ್ನು ಬಿಡುತ್ತಾರೆ. ನಂತರ ಮತ್ತೆ ಮೈತೊಳೆ ಮರ್ಮಾಂಗಕ್ಕೆ ಕೈಪಾ ಹಾಕಿ ಇದೊಂದನ್ನು ಬಿಟ್ಟು ಬೇರೆ ಏನೂ ಇರದಂತೆ ಬೆತ್ತಲೆ ಮಾಡಿ ದೇವರ ಸಮ್ಮುಖದಲ್ಲಿ ಕೂಡಿಸುತ್ತಾರೆ. ಯಜ್ಞಕುಂಡದ ಎದುರಿಗೆ ಆಚಾರಸ್ವಾಮಿಯು ಮಂತ್ರ ಹೇಳುತ್ತಲೇ ಕೈಯಿಂದ ಸನ್ನೆ ಮಾಡಿ ಕುಂಕುಮ ಸಮರ್ಪಿಯಾಮಿ, ಫಲಪುಷ್ಪ ಪತ್ರಿ ಸಮರ್ಪಿಯಾಮಿ...ಹೀಗೆ ಅಲ್ಲಿ ಅರ್ಪಿಸುವ ವಿವರವನ್ನು ಹೇಳುತ್ತಿರುತ್ತಾರೆ. ಅದರಂತೆ ಆ ಮಗುವು ಕೂಡ ಮಾಡುತ್ತಾ ಹೋಗುತ್ತದೆ. ಆ ಸಂದರ್ಭದಲ್ಲಿ ಹಸಿರುಗಂಬ ಇಟ್ಟಿರುತ್ತಾರೆ. ಪೂಜೆಯ ಸಂದರ್ಭದಲ್ಲಿ ದೇವಸ್ಥಾನಕ್ಕೆ ಹೋಗಿ ಅಲ್ಲಿಯೇ ಇದ್ದಾಗ ಮೇಳದ ಗುಂಟ ಮುತ್ತೈದಿಯರು ಆರತಿ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಆ ಮಗುವಿನ ಕೈಯಲ್ಲಿ ಜೋಳಿಗೆಯನ್ನು ಹಾಕಿಕೊಂಡಿರುವಾಗ ಬೀಗರು ಅಥವಾ ಮಾವಂದಿರು ದಕ್ಷಿಣೆ ಹಾಕಿ ಪಾದ ಪೂಜೆ ಮಾಡಿ, ಅವರನ್ನು ಮೆರವಣಿಗೆಯ ಮೂಲಕ ಕರೆ ತಂದು ಮತ್ತೆ ಪುನಃ ಆಚಾರ ಸ್ವಾಮಿಯ ಸಮ್ಮುಖದಲ್ಲಿ ಕೂಡಿಸಿ ಮೂರು ಎಳೆಯ ಜನಿವಾರವನ್ನು ಹಾಕುತ್ತಾರೆ. ಆಗ ಆ ಮಗುವಿನ ಕಿವಿಯಲ್ಲಿ ಗಾಯಿತ್ರಿ ಮಂತ್ರವನ್ನು ಹೇಳುತ್ತಾರೆ. ಜೊತೆಗೆ ಆ ಮಗುವಿನ ಬಾಯಿಂದ ನಾನು 'ಇಂದಿನಿಂದ ವಿಶ್ವಕರ್ಮದ ಸಮುದಾಯದ ಎಲ್ಲಾ ಆಚರಣೆಗಳನ್ನು ಮಾಡುತ್ತೇನೆ ದಿನಾಲು ಮೈ ತೊಳೆದು ದೇವರ ಪೂಜೆ ಮಾಡಿ ಮುಂದಿನ ಕೆಲಸವನ್ನು ಕೈಗೊಳ್ಳುತ್ತೇನೆ. ಯಾವುದೇ ರೀತಿಯ ತಪ್ಪು ನಡೆಯದಂತ ನೋಡಿಕೊಳ್ಳುತ್ತೇನೆ. ತಂದೆ ತಾಯಿಗಳಿಗೆ ನಮಿಸುತ್ತೇನೆ. ಇತ್ಯಾದಿಗಳ ಆಚಾರ ವಿಚಾರಗಳನ್ನು ಹೇಳಿಸುತ್ತಾರೆ. ಇಂದಿನಿಂದ ಮುಂದೆ ನೀನು ವಿವಾಹವಾಗಲಿಕ್ಕೆ ವಿಶ್ವಕರ್ಮನು ಅನುಗ್ರಹಿಸಿದ್ದಾನೆಂದು' ಆಚಾರಸ್ವಾಮಿಗಳು ಹೇಳುತ್ತಾ ಆ ಮಗುವಿನ ನಾಲಿಗೆಯನ್ನು ಸುಟ್ಟು ಶುದ್ಧ ಮಾಡುತ್ತಾರೆ. ಅಂದಿನಿಂದ ಅವರು ಪಾಂಚಾಳ ಜಾತಿಗೆ ಸೇರಿದವನಾಗುತ್ತಾನೆ. ಅಲ್ಲಿ ಯಾವರೆಗೂ ಅರೆ ಪಾಂಚಾಳರು ಎಂದು ಕರೆಯುತ್ತಾರೆ.

ಈ ಉಪನಯನವನ್ನು ಎಂಟು ವರ್ಷದೊಳಗೆ ಮಾಡಬೇಕು ಈ ಅವಧಿಯಲ್ಲಿ ಹೇಳಿದಂತೆ ಕೇಳುತ್ತಾರೆ ಎಂಬುದೊಂದಾದರೆ ವಯಸ್ಸು ಮೀರಿದ ಮೇಲೆ ಬೆತ್ತಲೆಯಾಗಿ ಕೈಪಾ ಧರಿಸಲು ಹಿಂದುಮುಂದು ಮಾಡುತ್ತಾರೆ ಅಥವಾ ನಾಚಿಕೆಯಾಗಲೂಬಹುದು. ಈ ಆಚರಣೆಯಲ್ಲಿ ಪದ್ಧತಿಗಳು ಬಿಡುವ ಸಂದರ್ಭಗಳು ಬರುತ್ತವೆ. ಇಂದಿನ ಆಧುನಿಕ ಯುಗದಲ್ಲಿಯೂ ಈ ಪದ್ಧತಿಯ ಬೆಳದು ಬಂದಿದೆಯಾದರೂ ವಯಸ್ಸು ಮೀರಿದ ಮೇಲೆ ಮಾಡಿದ ಪ್ರಸಂಗಗಳು ಕಂಡು ಬರುತ್ತವೆ. ಆಗ ತಲೆ ಬೋಳಿಸಿ ಜುಟ್ಟು ಬಿಡದೇ ಕೈಪಾ ಹಾಕದೇ ಇದ್ದರೂ [illegible] ಮಾಮೂಲಾಗುತ್ತಿವೆ. ಈ ಪದ್ಧತಿಯನ್ನು ಬಿಟ್ಟರೆ ಏನಾಗುತ್ತದೆ? ಎಂಬ ಪ್ರಶ್ನೆ ಉದ್ಭವಿಸಿದರೂ ಆಚರಣೆ, ಸಂಪ್ರದಾಯಗಳು ಮನುಷ್ಯನಿಗೆ ಅವಶ್ಯವಾಗಿ ನಂಬಿಕೊಂಡು ಬದುಕಿರುವ ಈ ಭಾರತದಲ್ಲಿ ಯಾವುದನ್ನು ನಿರ್ಲಕ್ಷಿಸುವುದಿಲ್ಲ.

ಈ ಉಪನಯನದಲ್ಲಿ ಮಗುವಿಗೆ ಜನಿವಾರ ಹಾಕಿದ ಮೇಲೆ ಅವನ ತಂದೆ ತಾಯಿಯನ್ನು ಕೂಡಿಸಿ ಬಟ್ಟೆ, ದುಡ್ಡು, ಇತ್ಯಾದಿ ವಸ್ತುಗಳನ್ನು ತಮ್ಮ ಕೈಲಾದ ಮಟ್ಟಿಗೆ ಮುಯ್ಯಿ ಮಾಡುತ್ತಾರೆ. ಇದೆಲ್ಲ ಆದಮೇಲೆ ಅವನು

ಪಾಂಚಾಳ ಸಂಪ್ರದಾಯಗಳನ್ನು ಗಂಟು ಹಾಕಿಕೊಂಡು ನಡೆಯುತ್ತಾರೆ. ನಂತರ ಒಂಬತ್ತನೆಯ ದಿನ ಕಡೆ ನೀರು ಮಾಡಿ, ಇಳಿದಗೆದು ಆರತಿ ಬೆಳಗುತ್ತಾರೆ. ಅಲ್ಲಿವರೆಗೆ ಜುಟ್ಟು ಹಾಗೆಯೇ ಇರಬಹುದು. ಇಲ್ಲವೇ ಕತ್ತರಿಸಿಕೊಳ್ಳಬಹುದು. ಈ ಜುಟ್ಟನ್ನು ತಳೆಯ ಮನುಷ್ಯರು ಹಾಗೆ ಜುಟ್ಟು [illegible] ಸಾಕಷ್ಟಿವೆ. ಧರಿಸಿದ ಜನಿವಾರವನ್ನು ಬ್ರಾಹ್ಮಣರು, ಚಿಂಪಿಗರು ಮತ್ತು ಈ ಪಾಂಚಾಳರು ಧರಿಸುವುದನ್ನು ಕಾಣಬಹುದು. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಈ ಪಾಂಚಾಳರಲ್ಲಿ ವೈಶಿಷ್ಟ್ಯವೆಂದರೆ ಬ್ರಹ್ಮಚಾರಿಗೆ 'ಮೂರು ಎಳೆ' ಹಾಕುತ್ತಾರೆ. ಇದು ಶಾಸ್ತ್ರ ನಿಯಮ ಈ ಜನಿವಾರವನ್ನು ಯಜ್ಞೋಪವೀತ, ಯಜ್ಞಸೂತ್ರವೆಂದು ಕೂಡ ಕರೆಯುತ್ತಾರೆ. ಬ್ರಹ್ಮಭಾವವು ಇದಕ್ಕೆ ಇರುತ್ತದೆ. ಮಣಿಗಳ ಸರಕ್ಕೆ ಸೂತ್ರವೂ ಹೇಗೆ ಆಧಾರವೋ ಈ ಬ್ರಹ್ಮಾಂಡಗಳಿಗೂ ಈ ಸೂತ್ರವೇ ಆಧಾರ ಆ ಪರಬ್ರಹ್ಮನೇ ಈ ಸೂತ್ರವೆಂದು ಧಾರಣೆ ಮಾಡುತ್ತಾರೆ. ಕರ್ಮಗಳನ್ನು ಮಾಡಲು ಅಧಿಕಾರವನ್ನು ಹೊಂದಿರುವ ಬ್ರಾಹ್ಮಣನು ಆ ಕರ್ಮಗಳನ್ನು ಮಾಡುವ ಸಲುವಾಗಿ ಯಜ್ಞೋಪವೀತವನ್ನು ಧರಿಸುತ್ತಾರೆ. ಅದು ಎದೆಗಿಂತ ಮೇಲ್ಭಾಗವನ್ನು ಮಾತ್ರ ಆವರಿಸಲಾಗದು. ನಾಭಿಗಿಂತ ಕೆಳಕ್ಕೆ ಇಳಿಬಿಡಬಾರದು. ಇದು ಯಾವಾಗಲೂ ನಾಭಿಗೆ ಸಮನಾಗಿರಬೇಕು [illegible] ಕೆಳಗಿದ್ದರೆ [illegible] ಕೆಳಕ್ಕೆ [illegible] ಹೊಸದನ್ನು ಧರಿಸಬೇಕು ಎಂಬ ಭಾವನೆಗಳಿವೆ.

ಎಡ ಹೆಗಲಿನಿಂದ ಬಲ ಸೊಂಟದವರೆಗೆ ಧರಿಸಲ್ಪಟ್ಟ ಜನಿವಾರವನ್ನು ಹಾಕಿಕೊಳ್ಳುವಾಗ ಎಡಗೈಯಿಂದ ಎಡಕಿವಿಯನ್ನು ಹಿಡಿದುಕೊಂಡು ಧರಿಸಬೇಕು. ಮತ್ತು ತೆಗೆಯುವುವಾಗ ಪಾದಗಳವರೆಗೆ ತಂದು ಹೊರ ಹಾಕಬೇಕು. ಹೊಸ ಜನಿವಾರವನ್ನು ಧರಿಸುವಾಗ ನೀರಿನಲ್ಲಿ ತೊಳೆದು ಗಂಧವನ್ನು ಲೇಪಿಸಿ, ಊದಿನ ಕಡ್ಡಿಯನ್ನು ಬೆಳಗಿ ದೇವರ ಮೇಲಿಟ್ಟ ನಂತರ ಧರಿಸಬೇಕು. ದೇವರಿಗೆ ಕೈ ಮುಗಿಯುವಾಗ ಬಲ ಹೆಬ್ಬೆರಳ ಸಂಧಿಯಲ್ಲಿ ಜನಿವಾರವನ್ನು ಹಾಕಿಕೊಂಡು ನಮಸ್ಕರಿಸುವ ಪರಿಪಾಠವನ್ನು ಈ ಪಾಂಚಾಳರು ಅನುಸರಿಸುತ್ತಾ ಬಂದಿದ್ದಾರೆ. ಇದನ್ನು ಎಡಕ್ಕೆ ಹಾಕಬಾರದೆಂದೇನೂ ಇಲ್ಲ ಆಯಾ ಕಾರ್ಯಾನುಸಾರ ಅದನ್ನು ಬದಲಾಯಿಸಬೇಕಾಗುತ್ತದೆ. 'ಉಪವೀತಸವ್ಯ' ಅಂದರೆ ದೇವಕಾರ್ಯಗಳಲ್ಲಿ ಬಲಗಡೆ ಹಾಕಬೇಕು. 'ನೀವಿತಮಾಲಾಕಾರ' ಅಂದರೆ ಋಷಿ ಕಾರ್ಯದಲ್ಲಿ ಕೊರಳಲ್ಲಿ ಹಾಕಬೇಕು. ಅಪಸಾವ್ಯ ಅಂದರೆ ಪಿತೃಕಾರ್ಯದಲ್ಲಿ ಎಡಗಡೆ ಹಾಕಬೇಕು ಆದರೂ ಕೂಡ ಯಾವಾಗಲೂ ಉಪವೀತಯಾಗಿರಬೇಕು. 'ಬಲಹಸ್ತ ಯುದ್ದರ್ಯದಾರಯೋಜ' ಬಲಭಾಗಕ್ಕೆ ಹಾಕುವುದು ಮಂಗಲವನ್ನು ಎಡಭಾಗಕ್ಕೆ ಹಾಕುವುದು ಅಮಂಗಲವನ್ನು ಸೂಚಿಸುತ್ತದೆ ಎಂದು ನಂಬಿದವರು. ಈ ಜನಿವಾರವು ಪ್ರಣವ, ಹಂಸ, ನಂದಗಳ ಮುಪ್ಪುರಿಯೇ ಈ ಯಜ್ಞೋಪವೀತ ವೆಂದು ಪರಬ್ರಹ್ಮೋಪನಿಷತ್ತು ಎಂದು ಅಂತಹ ಬ್ರಹ್ಮ ಸಾಧನೆಯೇ ಈ ಜೀವನದ ಗುರಿಯೊಂದನ್ನು ಈ ಸೂತ್ರವು ನೆನಪು ಮಾಡಿಕೊಡುತ್ತದೆ ಎಂದು ಜಿಗಳಿಯ ರುದ್ರಾಚಾರಿಯವರು ಇದರ ಮಹತ್ವವನ್ನು ಹೇಳುತ್ತಾರೆ.

ಜನಿವಾರವು ಮೂರು ಎಳೆಗಳಿಂದ ಏಕೆ ಕೂಡಿದೆ ಎಂಬ ಪ್ರಶ್ನೆಗೂ ಉತ್ತರ ಸಿಗುತ್ತದೆ. ಇದು ಸತ್, ರಜಸ್, ತಮಸ್, ಗುಣಗಳನ್ನು ಸೂಚಿಸುತ್ತದೆ. ಈ ಮೂರು ಗುಣಗಳ ಸಂಗಮವೇ ಶುದ್ಧವಾದ ಜನಿವಾರ. ಅಲ್ಲದೆ ದೇವಋಣ (ವಿಶ್ವಕರ್ಮನನ್ನು ಪೂಜಿಸುವುದು) ಮತ್ತು ಋಷಿಋಣ (ವೇದೋಕ್ತವಾದ ಮಂತ್ರ ಪಠಣ) ಪಿತೃ ಋಣ (ಕಾಲಕಾಲಕ್ಕೆ ಪಿತೃಗಳಿಗೆ ಶ್ರದ್ಧ ಕರ್ಮಗಳಿಗೆ ಅರ್ಪಿಸುವ ತರ್ಪಣ) ಈ ಮೂರು ಋಣಗಳ ಜ್ಞಾನವನ್ನು ತರತಕ್ಕದ್ದ ಯಜ್ಞೋಪವೀತ. ಪಾಂಚಾಳರ ಕುಲದಲ್ಲಿ ಹುಟ್ಟಿದವರು ಯಾವನು ಶಾಸ್ತ್ರೀಯವಾಗಿ ಜನಿವಾರವನ್ನು ಧರಿಸುವುದಿಲ್ಲವೋ ಅವನು ಸೂರ್ಯ ಚಂದ್ರರಿರುವರೆಗೂ ಅನೇಕ ನರಕ ಭಾದೆಗಳನ್ನು ಅನುಭವಿಸುತ್ತಾನೆ. ಅವನು ಮನುಷ್ಯನಲ್ಲ ಚಂಡಾಲ ಎಂಬುದಾಗಿ 'ಮೂಲಸ್ತಂಭ ಪುರಾಣ'ವು ಹೇಳುತ್ತದೆ. ಈ ವಿಷಯವನ್ನು [illegible] ಪುರೋಹಿತ ಕೆ. ಕಾಳಚಾರಿಯವರು ಈ [illegible] ಕೊಡುತ್ತಾರೆ. [illegible] ನಮ್ಮ ಈಗಿನ [illegible] ಪರಿಸ್ಥಿತಿಗೆಲ್ಲ ಇಂತಹ ಪಾಪಗಳೇ ಕಾರಣವೆಂದು ಕಾಣುತ್ತದೆ. ಸರಿಯಾದ ಆಚಾರ ವಿಚಾರ ನಡೆಸುತ್ತಿದ್ದ ಪಾಂಚಾಳರು ಕುಲಗೆಡುತ್ತಿದ್ದಾರೆಂದು ನೊಂದ ಮನಸ್ಸಿನಿಂದ ಹೇಳುತ್ತಾರೆ.

ಹೀಗೆ ಈ ಉಪನಯನ ಮತ್ತು ಆಗ ಧರಿಸುವ ಜನಿವಾರದ ಬಗ್ಗೆ ಅವರಿಗೆ ಅಪಾರವಾದ ಗೌರವ ಇದೆ. ಹೆಚ್ಚು ಕಡಿಮೆ ಸಂಪ್ರದಾಯಗಳಿಂದ ಕೂಡಿ ಬದುಕುವುದು ಇವರ ವಾಡಿಕೆ. ತಿನ್ನಲಿಕ್ಕೆ ಕಷ್ಟ ಇದೆ ಎಂದರೂ ಪದ್ಧತಿಯನ್ನು ಬಿಟ್ಟವರಲ್ಲ ಹಾಗಾಗಿ ಇವರು ಪದ್ಧತಿ, ಸಂಪ್ರದಾಯ, ನಂಬಿಕೆ, ಆಚರಣೆ, ನಿಷೇಧಗಳ ಮಧ್ಯೆಯೇ ಬದುಕ ಭಾಗಗಳನ್ನೆಲ್ಲ ಚಾಚುತಪ್ಪದೆ ಆಚರಿಸಿಕೊಂಡು ಬಂದವರಾಗಿದ್ದಾರೆ. ಒಟ್ಟಾರೆಯಾಗಿ ಈ ಉಪನಯನವು ಪಾಂಚಾಳರಿಗೆ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ ಎನ್ನುವಲ್ಲಿ ಸಂಶಯವಿಲ್ಲ, ಇದನ್ನು ದಿಕ್ಕರಿಸುವ ಮನೋಭಾವ ಇದುವರೆಗೂ ಮೂಡಿ ಬಂದಂತೆ ಕಾಣುವುದಿಲ್ಲ.

೩) ವಿವಾಹ

ಹಿಂದು ಧರ್ಮದ ಪ್ರಕಾರ ಮದುವೆ ಎಂಬುದು ಸ್ವರ್ಗದಲ್ಲಿಯೇ ನಿರ್ಧಾರವಾಗಿರುತ್ತದೆ ಎಂಬ ನಂಬಿಕೆ ನಮ್ಮಲ್ಲಿವೆ. ದೇವರು ತನ್ನ ಲೋಕದಲ್ಲಿಯೇ ಒಂದು ಗಂಡಿಗೆ ಒಂದು ಹೆಣ್ಣು ಎಂದು ಹಣೆ ಬರಹ ಬರೆದಿರುತ್ತಾನೆಂಬ ಕಲ್ಪನೆಯೂ ನಮ್ಮ ಸಂಸ್ಕೃತಿಯಲ್ಲಿದೆ. "ಮದುವೆ ಎಂಬುದು ಒಂದು ಹಂತದಲ್ಲಿ ಒಂದು ಗಂಡು ಒಂದು ಹೆಣ್ಣಿಗೆ ನಿಗದಿತವಾದ ದಿನದಂದು ನಿಗದಿತವಾದ ಸ್ಥಳದಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ಧಾರೆ ಎರೆದು ಕೊಡುವುದು ಎಂದು ಹೇಳಬಹುದು. ಮದುವೆ ಯಾಗದೇ ಇರುವವರೆಗೆ ಮೋಕ್ಷ ಇಲ್ಲ. ಮದುವೆಯಾಗಿ ಮಕ್ಕಳ ಪಡೆಯದಿದ್ದರೆ ಮುಕ್ತಿ ಸಿಗುವುದಿಲ್ಲವೆಂಬ ಕಲ್ಪನೆಯೂ ಸಾಮಾನ್ಯವಾಗಿ ಕಾಣುತ್ತೇವೆ. ವಿವಾಹವು ಒಂದು ಪ್ರಮುಖವಾದ ಸಾರ್ವತ್ರಿಕ ಸ್ವರೂಪದ ಸಾಮಾಜಿಕ ಸಂಸ್ಥೆ. ಮಾನವನ ಲೈಂಗಿಕ ಜೀವನ ಹಾಗೂ ಲೈಂಗಿಕ ಸಂಬಂಧಗಳನ್ನು ನಿಯಂತ್ರಿಸುವುದಕ್ಕಾಗಿ ಸಮಾಜ ಸ್ಥಾಪಿತವಾದ ಅಂಗ. ವಿವಾಹವು ಸಂತಾನಾಪೇಕ್ಷೆಯುಳ್ಳ ಗಂಡು ಹೆಣ್ಣುಗಳ ನಡುವೆ ಏರ್ಪಟ್ಟ ನಂಟು. ವಿವಾಹವು ಲೈಂಗಿಕ ಜೀವನ ನಡೆಸಲು ಮಾನವನಿಗೆ ನೀಡಲಾಗಿರುವ ಪರವಾನಿಗೆ ಹಾಗೆಯೇ ಮಾನವನ ಲೈಂಗಿಕ ಸ್ವಚ್ಛಂದತೆಯನ್ನು ನಿವಾರಣೆ ಮಾಡಿ ಆತನ ಆಕೆಯ ಲೈಂಗಿಕ ಬಯಕೆಯ ಪೂರೈಕೆಗೆ ಕ್ರಮಬದ್ಧವಾದ ವ್ಯವಸ್ಥೆಯೊಂದನ್ನು ನಿರ್ಮಿಸುವುದಕ್ಕೋಸ್ಕರ ಈ ವಿವಾಹ ಹುಟ್ಟಿಕೊಂಡಿತು ಎಂದು ಸಮಾಜಶಾಸ್ತ್ರಜ್ಞರುಗಳು ಹೇಳುತ್ತಾರೆ. ಆದರೆ ಇದು ಶಾಸ್ತ್ರದ ಪ್ರಕಾರವಾಗಿದೆ. ನಂಬಿಕೆ, ಆಚರಣೆಗಳಿಂದಲೇ ಈ ನಿಯಮಗಳು ಹುಟ್ಟಿಕೊಂಡಿವೆ. ಮದುವೆ ಎಂಬುದು ಒಂದು ಧಾರ್ಮಿಕ ವಿಧಿ ವಿಧಾನಕ್ಕೆ ಹೋಲಿಸುತ್ತಾರೆ.

ಈ ವಿವಾಹದಿಂದ ಗೃಹಸ್ಥಾಶ್ರಮಕ್ಕೆ ಕಾಲಿಡುವ ಸಂದರ್ಭವಾಗಿದೆ. ವರ್ಣಾಶ್ರಮಗಳಲ್ಲಿ ಈ ಆಶ್ರಮ ಮನುಷ್ಯನ ಬದುಕಿನ ದಿಕ್ಕನ್ನು ಬದಲಾಯಿಸುತ್ತದೆ. ವಿವಾಹವು ಇಂದು ನಿನ್ನೆಯದಲ್ಲ ಅದಕ್ಕೆ ದೀರ್ಘವಾದ ಇತಿಹಾಸವನ್ನೇ ಹೊಂದಿದೆ. ಮಾನವನ ಸಂಸ್ಕೃತಿ ಎಷ್ಟು ಪ್ರಾಚೀನವೋ ವಿವಾಹವೂ ಅಷ್ಟೆ ಪ್ರಾಚೀನ ವಾದುದು ಎಂಬ ನಂಬಿಕೆಯು ಈ ಹಿಂದೂ ಸಮಾಜದಲ್ಲಿ ಬೆಳೆದುಕೊಂಡು ಬಂದಿದೆ. ಆದರೆ ಹಲವಾರು ವಿವಿಧ ರೀತಿಯಲ್ಲಿ ವ್ಯಾಖ್ಯಾನ ಕೊಟ್ಟರೂ ಏಕಪ್ರಕಾರದ ಹೇಳಿಕೆಗಳು ಕಂಡುಬರುವುದಿಲ್ಲ. ಆದರೆ ನಂಬಿಕೆ, ಸಂಪ್ರದಾಯವಾದಿಗಳೆಲ್ಲರು ಮದುವೆ ಎಂಬುದನ್ನು ಒಂದು ಅನಿವಾರ್ಯ, ಮೋಕ್ಷಕ್ಕೆ ದಾರಿ ಎಂಬ ಪರಿಕಲ್ಪನೆ ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು. ಈ ಎಲ್ಲಾ ಕಾರಣಕ್ಕೂ ಮದುವೆಯು ಪ್ರತಿಯೊಬ್ಬನ ಬಂಧನವಾಗಿ ಮಹತ್ವವನ್ನು ಪಡೆದಿದೆ. ಪಾಂಚಾಳರು ಹಿಂದೂ ಸಂಸ್ಕೃತಿಯಂತೆಯೇ ವಿವಾಹಗಳು ನಡೆಯುತ್ತವೆ. ಆದರೆ ಇತರರಿಗಿಂತ ಭಿನ್ನವಾದ ಆಚರಣೆಗಳು, ಸಂಪ್ರದಾಯಗಳನ್ನು ಮದುವೆಯಲ್ಲಿ ಕಾಣಬಹುದು. ಮದುವೆ ಒಂದೇ ಅಲ್ಲ ಇನ್ನಿತರ ಎಲ್ಲಾ ಆಚರಣೆಗಳಲ್ಲಿಯೂ ಕೂಡ. ಇಲ್ಲಿ ಮದುವೆಗೆ ಮುಂಚೆ ಸ್ತ್ರೀಯ ಬಗ್ಗೆ ಸ್ವಲ್ಪ ವಿವರವನ್ನು ತಿಳಿದುಕೊಳ್ಳ ಬಹುದು.

ಋತುಮತಿ

ಹೆಣ್ಣು ಋತುಮತಿ ಯಾಗುವುದು ಪ್ರಾಕೃತಿಕ ಸಹಜ ನಿಯಮ. ಹೆಣ್ಣು ಋತುಮತಿಯಾದರೆ ಆಕೆಯು ಸಂಸಾರಸ್ಥಳಾಗಿ ತಾಯ್ತನದ ಸುಖವನ್ನು ಅನುಭವಿಸಲು ಅರ್ಹತೆ ಹೊಂದಿದವಳೆಂದು ಭಾವಿಸುವುದು ಸರ್ವೇಸಾಮಾನ್ಯ.

ನೆರೆತಾಳೆ, ದೊಡ್ಡಾಕಾಗ್ಯಳೆ, ಮೈನೆರೆತಾಳ ಎಂಬ ಪದಗಳುಂಟು. ವಯಸ್ಸಿಗೆ ಬಂದವಳೆಂದೂ ಭಾವಿಸುವುದು ಸಲಿಯೇ ಮೈನೆರತ ಹೆಣ್ಣನ್ನು ಪಾಂಚಾಳರು (ಸಾಮಾನ್ಯವಾಗಿ ಎಲ್ಲಾ ಜಾತಿಯವರು) ಐದು ದಿನಗಳ ಕಾಲ ಮನೆಯಿಂದ ಹೊರಗೆ ಕೂಡಿಸುತ್ತಾರೆ. ಈ ಸಂದರ್ಭದಲ್ಲಿ ಆಕೆ ಮೈಲಿಗೆಯಲ್ಲಿರುತ್ತಾಳೆಂಬ ಭಾವನೆ ಇವರಲ್ಲಿದೆ. ಆಕೆಯನ್ನು ಯಾರೂ ಮುಟ್ಟುವಂತಿಲ್ಲ ಆಕೆ ಬಳಸುವ ಸಾಮಾನುಗಳು ಪ್ರತ್ಯೇಕವಾಗಿರುತ್ತವೆ.

ಐದನೇ ದಿನ ಮುತ್ತೈದೆಯರೆಲ್ಲ ಸೇರಿ ಅಂದು ವಿಶೇಷವಾಗಿ ಸೋದರತ್ತೆಯೇ ಮೈನೆರೆತವಳನ್ನು ಅರಿಷಿಣ ಹಚ್ಚಿ ಮೈ ತೊಳೆದು ಒಳಗೆ ಕರೆತರುತ್ತಾರೆ. ಆದಿನ ಅತ್ತೆಯು ಪ್ರಮುಖ ಪಾತ್ರ ವಹಿಸುತ್ತಾಳೆ. ಅದಕ್ಕೆ ಆಕೆಗೆ ಹೊಸ ಮುಟ್ಟಿರದ ಸೀರೆಯನ್ನು ಉಡಿಸುವ ಪದ್ಧತಿಯು ನಡೆದುಕೊಂಡು ಬಂದಿದೆ. ಐದನೇ ದಿನದಲ್ಲಿ ಆಕೆಗೆ (ಮೈನೆರೆತವಳಿಗೆ) ಹಸಿರು ಬಳೆಗಳನ್ನು ಹಾಕಿಸುತ್ತಾರೆ. ಬಳೆಗಾರನಿಗೆ ಉಲ್ಪಿಯನ್ನು ಕೊಡುವ ಪದ್ಧತಿಯೂ ಇದೆ. ಬಳಿಕ ನೀರೆರದ ಜಾಗದಲ್ಲಿ ತೆಗ್ಗು ತೋಡಿರುತ್ತಾರೆ. ಐದನೇ ದಿನದಲ್ಲಿ ಮಾವಂದಿರ ಕೂಡ ಅ ತಗ್ಗನ್ನು ಮುಚ್ಚಿಸುತ್ತಾರೆ. ಬಳಿಕ ಆಕೆಗೆ ಹೊಸ ಬಟ್ಟೆ ತೊಡಿಸಿ ತೆಂಗು ಇಲ್ಲವೆ ಹಳ್ಳಿ (ಅಶ್ವತ್) ಮರಕ್ಕೆ ನೀರು ಹೊಯ್ಯಿಸುತ್ತಾನೆ. ನಂತರದ ದಿನಗಳಲ್ಲಿ ಆ ಮರವು ಸಾಯೆ ಬಂದರೆ ಆಕೆಯ ಮನಸ್ಸು, ನಕ್ಷತ್ರ ಸರಿ ಇಲ್ಲ ಎಂಬ ಭಾವನೆ ಬೆಳೆಯುತ್ತದೆ. ಕೊಟ್ಟ ಮನೆ, ಹುಟ್ಟಿದ ಮನೆಗೆ ಪವಿತ್ರ, ಉದ್ಧಾರವಾಗುವುದಿಲ್ಲ ಎಂದು ಕೂಡ ಭಾವಿಸುವುದು ಪಾಂಚಾಳರಲ್ಲಿ ಮನೆ ಮಾಡಿರುತ್ತದೆ. ಮತ್ತು ಅಶ್ವತ್ ಮರಕ್ಕೆ ನೀರೆರಸಿದರೆ ಆಕೆಯಲ್ಲಿನ ಲೋಪದೋಷಗಳನ್ನು ಪರಿಹಾರ ಮಾಡುವ ಮರವೆಂದು ಭಾವಿಸುವ ನಂಬಿಕೆಯೂ ಇವರಲ್ಲಿದೆ.

ಅವಳಿಗೆ ಮನೆಯಲ್ಲಿ ಕರೆದು ಪಾತ್ರೆಗಳ ಪರಿಚಯ (ಶಾಸ್ತ್ರಕ್ಕೆ) ಮಾಡಿಸಿ ಆಕೆಯಿಂದ ಒಲೆಗೆ ಬೆಂಕಿ ಹಚ್ಚಿಸುತ್ತಾರೆ. ಅಂದಿನಿಂದ ಆಕೆ ಅಡುಗೆ ಮಾಡುವ ಅಧಿಕಾರ ಹೊಂದಿದ್ದಾಳೆಂಬುದಕ್ಕೆ ಸಂಕೇತವಾಗಿರುತ್ತದೆ. ಆಗ ಆಕೆ ಸಂಪೂರ್ಣವಾದವಳೆಂದು ಅರ್ಥ. ಹನ್ನೊಂದು ದಿನಗಳಲ್ಲಿ ಎಲ್ಲ ಬಂದು ಬಾಂಧವರನ್ನು ಕೂಡಿಸಿಕೊಂಡ ಆ ನೆರೆತ ಹೆಣ್ಣನ್ನು ಅಲಂಕಾರ ಮಡಿ ಅಕೆಯನ್ನು ಕೂಡಿಸಲು ಒಂದು ಮಂಟಪವನ್ನು ಅಲಂಕರಿಸಿರುತ್ತಾರೆ. ಬೆಳಗಿನಿಂದಲೇ ಆಕೆಯನ್ನು ಸ್ನಾನ ಮಾಡಿಸಿ ಹೊಸ ಬಟ್ಟೆ ಉಡಿಸಿ ಮದುಮಗಳಂತೆ ಮಾಡಿ ಉಡಿ ತುಂಬಿ ಎಲ್ಲರೂ ಸೇರಿ ಗಂಗೆಗೆ ಹೋಗುತ್ತಾರೆ. ಅಲ್ಲಿ ಆಕೆಯಿಂದಲೇ ಪೂಜೆ ಮಾಡಿಸಿ ಮುತ್ತೈದೆಯರೆಲ್ಲ ಉಡಿ ತುಂಬಿಕೊಂಡು ಗಂಗೆಯನ್ನು (ಬಿಂದಿಗೆ) ಆಕೆಯ ಮೇಲೆ ಹೊರಿಸಿಕೊಂಡು ಬರುತ್ತಾರೆ. ಆಕೆಗೆ ಓಕುಳಿ ಆರುತಿ ಮಾಡಿ ಒಳ ಕರೆದುಕೊಳ್ಳುತ್ತಾರೆ. ಬಂದವರು ಆಕೆಗೆ ಉಡುಗೊರೆ ಕೊಟ್ಟು ಹಾರೈಸಿ ಸಿಹಿ ಊಟವನ್ನು ಮಾಡಿಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ಈ ರೀತಿ ವಿಜೃಂಭಣೆಯಿಂದ ಕಾರ್ಯವನ್ನು ಮಾಡುವ ಅಗತ್ಯವಿರುವುದಿಲ್ಲವಾದರೂ ಇಂತವರ ಮನೆಯಲ್ಲಿ ಅಥವಾ ನಮ್ಮ ಮನೆಯಲ್ಲಿ ಮದುವೆಯ ವಯಸ್ಸಿಗೆ ಬಂದ ಸ್ತ್ರೀ ಇದ್ದಾಳೆಂಬ ಸಂಕೇತಕ್ಕೋಸ್ಕರವಾಗಿ ಆಡಂಬರವಾಗಿ ಮಾಡಲೇ ಬೇಕಾದ ಪರಿಸ್ಥಿತಿ ಇರುತ್ತದೆ. ಆ ಕಾರಣಕ್ಕೆ ಈ ಮುಖ್ಯ ಕಾರ್ಯವನ್ನು ಮಾಡುತ್ತಿರುತ್ತಾರೆ. ಅದು ಸಂಪ್ರದಾಯವಾಗಿ ಪರಿಣಮಿಸಿದೆ ಕೂಡ.

ವಿವಾಹ ಪೂರ್ವದಲ್ಲಿ ವಧು ವರಾನ್ವೇಷಣೆ ನಡೆಯುತ್ತದೆ. ವರನೇ ವಧು ಅನ್ವೇಷಣೆ ಮಾಡಿ ಮದುವೆಯಾಗುವುದು ಪಾಂಚಾಳರ ಪದ್ಧತಿ (ಇತರರ ಪದ್ಧತಿಯೂ ಕೂಡ) [illegible] ಮಧ್ಯಸ್ಥಿಕೆಯಿಂದ ಸಕುಟುಂಬಿತನಾಗಿ ವಧು[illegible] ಮನೆಗೆ ತೆರಳಿ ವಧುವನ್ನು ವರನ ಕಡೆಯವರು ನೋಡುತ್ತಾರೆ. ಇಷ್ಟಬಂದರೆ ಅಥವಾ ಒಪ್ಪಿಗೆಯಾಗದಿದ್ದಲ್ಲಿ ಊಟೋಪಚಾರ ನಡೆಯುವುದಿಲ್ಲ. ಅದು ಮೊದಲನೆಯ ಸಲ ವಾದ್ದರಿಂದ ಒಪ್ಪಿಗೆಯಾದರೆ ಅವರ ಕುಲಗೋತ್ರಗಳನ್ನು ಕೇಳುತ್ತಾರೆ. ಜೊತೆಗೆ ಆ ವಧುವಿನ ಹಸ್ತರೇಖೆ ನೋಡುವುದು ನಡಿಗೆ, ಅವಾ ಭಾವವನ್ನು ವೀಕ್ಷಣೆ ಮಾಡುವರು ಕೆಲಸವನ್ನು ಹಿರಿಯ ಹೆಣ್ಣು ಮಕ್ಕಳು ನೋಡುತ್ತಿರುತ್ತಾರೆ. ಗೋತ್ರಗಳು ಒಂದೇ ಆದರೆ ಅಂದರೆ ಸನತನ ಗೋತ್ರದವರು ಸನಾತನ ಗೋತ್ರ ಇದ್ದವರ ಮನೆಯಲ್ಲಿ ಮದುವೆಯಾಗುವಂತಿಲ್ಲ. ಏಕೆಂದರೆ ಅವರಿಬ್ಬರು ಅಣ್ಣ ತಮ್ಮಂದಿರಾಗುತ್ತಾರೆ. ಅದಕ್ಕೆ ಬದಲಾಗಿ ಬೇರೆ ಗೋತ್ರ ಇದ್ದಲ್ಲಿ ಮುಂದಿನ ಕಾರ್ಯಕ್ಕೆ ಕೈ ಹಾಕುತ್ತಾರೆ. ಮತ್ತು

ಹಿರೆಮನಿ, ಚಿಕ್ಕಮನೆ ಇವರ ನಡುವಿನ ವಿವಾಹಗಳು ನಿಷೇಧವಾಗಿವೆ. ಆದರೂ ಮೋಸ ಹೋಗಿ ಮದುವೆಯಾದ ಉದಾಹರಣೆಗಳೂ ಸಿಗುತ್ತವೆ.

ಎಲ್ಲಾ ಒಪ್ಪಿಗೆಯಾದ ಮೇಲೆ ಬಂಧುಮಿತ್ರರೊಡಗೂಡಿ ಗಂಡಿನ ಕಡೆಯವರು ಮಾತುಕತೆ ಮಾಡಿ ವರದಕ್ಷಿಣೆಯನ್ನು ಮಾತಾಡಿಕೊಳ್ಳುತ್ತಾರೆ. ಈ ಪಾಂಚಾಳರಲ್ಲಿ ಮೊದಲು ವರದಕ್ಷಿಣೆಯ ಪದ್ಧತಿ ಇರಲಿಲ್ಲ. ಬದಲಾಗಿ ವರನ ಕಡೆಯವರು ತೆರಕಟ್ಟಿ ಮದುವೆ ಯಾಗುವ ಕಾಲವು ಇತ್ತು ಅದರ ಬದಲಾಗಿ ವರದಕ್ಷಿಣೆ ಕೊಡುವ ಪದ್ಧತಿ ಬೆಳೆದುಕೊಂಡು ಬಂದಿದೆ. ಪಾಂಚಾಳರು ಆರಕ್ಕು ಏರದ ಮೂರಕ್ಕು ಇಳಿಯದ ಕಾರಣ ವರದಕ್ಷಿಣೆ ಕಡಿಮೆಯೇ. ಬಹಳ ಎಂದರೆ ೧೦,೦೦೦ ರೂ ಕೊಟ್ಟರೆ ಅತ್ಯಂತ ಶ್ರೀಮಂತರೆಂದು ಗುರುತಿಸುವ ಕಾಲವೊಂದಿತ್ತು. ಶಕ್ತಿ ಇದ್ದವರು ಕೊಡುತ್ತಿದ್ದರು. ಇಲ್ಲದವರು ಇಲ್ಲದವರಿಗೆ ಸಂಬಂಧವನ್ನು ಬೆಳೆಸುತ್ತಿದ್ದರು. ಮಾತು ಕತೆಯಲ್ಲಿ ಮಾತಾಡಿಕೊಂಡಂತೆ ಮದುವೆಗಳು ನಡೆಯುತ್ತವೆ. ಈ ಹಿಂದೆ ಹೆಣ್ಣಿನ ಮನೆಯ ಮುಂದೆ ನಡೆಯುತ್ತಿದ್ದವು ಧಾರವಾಡದ ಕಡೆಗೆ ಈಗಲೂ ಗಂಡಿನ ಮನೆಯ ಮುಂದೆಯೇ ವಿವಾಹಗಳು ಜರಗುತ್ತವೆ.

ಮದುವೆಯಲ್ಲಿ ಹಸಿರು ಚಪ್ಪರವನ್ನು ಹಾಕಿ ತಳಿರು ತೋರಣವನ್ನು ಕಟ್ಟಿ ಅದಕ್ಕೆ ಪಂಚಸ್ತ್ರೀಯರು ಪೂಜಿಸುತ್ತಾರೆ. ಆ ಕಂಬಗಳಿಗೆ ಸುಣ್ಣ ಕೆಮ್ಮಣ್ಣನ್ನು ಬಳಿಯುತ್ತಾರೆ. (೧೮೧೪ರ ಮುಂಚೆ ಪಾಂಚಾಳರು ಮದುವೆ ಚಪ್ಪರ ತಳಿರು ತೋರಣ ಹಾಕಿದಾಗ ಬ್ರಾಹ್ಮಣರು ಅಡ್ಡಿ ಪಡಿಸಿದ್ದರು ಎಂಬುದನ್ನು ನೆನೆಯಬಹುದು. ಇದು ಕೋರ್ಟನವರೆಗೂ ಹೋಯಿತು. ತೀರ್ಪು ಪಾಂಚಾಳರ ಪರವಾಗಿತ್ತು) ಈಶಾನ್ಯ ದಿಕ್ಕಿನ ಕಂಬಕ್ಕೆ ಒಂದು ಕಂಕಣವನ್ನು ಕಟ್ಟಿ ಅಂದರದ ಮಧ್ಯದಲ್ಲೊಂದು ಅಂತರಗಾಯಿಯನ್ನು ಕಟ್ಟಿ ಕುಂಕುಮ, ಅರಿಷಿಣ ಹಚ್ಚಿ ಆರತಿ ಬೆಳಗುತ್ತಾರೆ. ಆವಾಗ ಶಾವಿಗೆ ಮಣೆ, ಬೀಸುವ ಕಲ್ಲು, ಒಣಕೆಗಳನ್ನು ಪೂಜಿಸುತ್ತಾರೆ. ಪೂಜಿಸಿದ ನಂತರ ಶಾವಿಗೆ ಮಣೆಯಲ್ಲಿ ಶಾವಿಗೆ ಹೊಸೆಯುತ್ತಾರೆ. ಆ ಶಾವಿಗೆ ಚೆನ್ನಾಗಿ ಬಂದರೆ ಶುಭ ಸಂಕೇತವೆಂದು ಹರಿಹರಿದು ಬಂದರೆ ಕಷ್ಟದ ಸಂಕೇತವೆಂದು ಭಾವಿಸುತ್ತಾರೆ.

ಪಾಂಚಾಳರು ಲಗ್ನದ ಅಕ್ಕಿ ಕಟ್ಟುವುದು ರೂಢಿಯಲ್ಲಿದೆ. ಗಂಡಿನ ಕಡೆಯಿಂದ ಹೆಣ್ಣಿಗೆ ಹೆಣ್ಣಿನಿಂದ ಗಂಡಿನ ಕಡೆಯವರೆಗೆ ಲಗ್ನದಕ್ಕಿಯ ಗಂಟು ಪರಸ್ಪರ ವರ್ಗಾವಣೆ ಮಾಡಿಕೊಳ್ಳುತ್ತಾರೆ. ಲಗ್ನದ ಅಕ್ಕಿಯು ಐದು ಶೇರು ಅಕ್ಕಿ, ಐದು ಕೊಬ್ಬರಿಬಟ್ಟಲ, ಐದು ಉತ್ತುತ್ತಿ, ಐದು ನಿಂಬೆಹಣ್ಣು, ಐದು ಅರಿಸಿಣಕೊಂಬು, ಐದು ಚೋಲಿಪೀಸು ಇದರ ಜೊತೆಗೆ ಎರಡು ತೆಂಗಿನ ಕಾಯಿ ಮಧ್ಯದಲ್ಲಿ ಒಂದು ಪತ್ರವನ್ನು ಬರೆದಿರುತ್ತಾರೆ. ಆ ಪತ್ರದಲ್ಲಿ ವಧುವರರಿಗೆ ಅರಿಷಿಣ ಬಲಾಬಲಿ (ಹರಿದ್ರಾ) ಬಂದವರ ಹೆಸರನ್ನು ಪಂಚಾಂಗದಲ್ಲಿ ನೋಡಿ ಸೂಚಿಸಿರುತ್ತಾರೆ. ಅವರೇ ಮದುಮಕ್ಕಳಿಗೆ ಅರಿಷಿಣ ಹಚ್ಚುತ್ತಾರೆ. ನಂತರ ಗಂಡಿನ ಮನೆಯಲ್ಲಿ ಅಥವಾ ಗಂಡಿನ ಅತ್ತೆ, ಮಾವಂದಿರ ಮನೆಯಲ್ಲಿ ಮದುಮಕ್ಕಳನ್ನು ಮಾಡುವ ಪದ್ಧತಿಯ ನೆಡೆದುಕೊಂಡು ಬಂದಿವೆ. ಎರಡನೆಯ ದಿನದಲ್ಲಿ ಮದುಮಕ್ಕಳಿಗೆ ಕೂರೂಟವನ್ನು ಅಕ್ಕಪಕ್ಕದವರು ಬಂಧು ಬಾಂಧವರು ವರ ಅಥವಾ ವಧುವನ್ನು ಕೂರೂಟ ಮಾಡಿಸುವ ಪದ್ಧತಿಯು ಇವರಲ್ಲಿದೆ. (ಕೆಲವೊಂದು ಕಡೆ ಮದುವೆಯ ತಿಂಗಳ ಮುಂಚಿತವಾಗಿ ಕನ್ಯೆಗೆ ಪ್ರತಿದಿನ ತಮ್ಮ ತಮ್ಮ ಮನೆಗೆ ಕರೆದುಕೊಂಡು ಹೋಗುವ ರೂಢಿಯೂ ಇವರಲ್ಲಿದೆ) ಸಾಯಂಕಾಲ ಒಂಬತ್ತು ಮನೆಗಳಿಗೆ ಆರತಿಗೆ ಎಲೆಯನ್ನು ಕೊಟ್ಟು ಹೇಳಿ ಬರುತ್ತಾರೆ. ಆ ಮೇಲೆ ಬೀಗರು ಬಂದಮೇಲೆ ಅವರಿಗೆ ಮೊದಲು ನೀರುಬೆಲ್ಲ.(ಪಾನಕ)ವನ್ನು ಕೊಡುತ್ತಾರೆ. ನಂತರ ಆರತಿ ಸಮೇತವಾಗಿ ಸೋಬಾಯಿಯ ಮೂಲಕ ಎದುರುಗೊಳ್ಳಲಿಕ್ಕೆ ಹೋಗುತ್ತಾರೆ. ಎದುರುಗೊಳ್ಳುವಾಗ ಬಳ್ಳಾರಿ, ದಾವಣೆಗೆರೆ, ಗದಗ, ಧಾರವಾಡ, ಹಾವೇರಿ, ಶಿವಮೊಗ್ಗದ ಕಡೆಯಲ್ಲಿ ಗಂಡು ಹುಡುಗರಿಗೆ ಸೀರೆ ಉಡಿಸಿ ಅವರ ಕೈಯಲ್ಲಿ ಉಳಾಗಡ್ಡಿಸರ, ಬದ್ನಿಕಾಯಿಸರ, ಮಂಡಕ್ಕಿಸರ, ಬೆಂಡಿನ ಚಕ್ಕಡಿ, ಚಾಳಿಸು, ಕನ್ನಡಿ ಇತ್ಯಾದಿ ಆಭರಣಗಳನ್ನು ಎದುರುಗಡೆಯ ಬೀಗರಲ್ಲಿ ಐದು ಜನರನ್ನು ಕೂಡಿ ಅವರಿಗೆ ಹಾಕುವ ಪದ್ಧತಿಯು ಇದೆ. ಮತ್ತು ಬೀಗರಿಗೆ ಆರತಿ ಬೆಳಗುವ ಮುಂಚೆ, ಬೀಸುವ ಕಲ್ಲುಗೂಟದಿಂದ ತಿವಿದು, ಜರಡಿಯಲ್ಲಿ

ಜೋಳದ ಅಥವಾ ಗೋಧಿಯ ಹಿಟ್ಟನ್ನು ಹಾಕಿ ಅವರ ತಲೆಯ ಮೇಲೆ ಹಾಕುತ್ತಾರೆ. ಆದರೆ ಇದು ಒಂದು ರಸಘಳಿಗೆಯಾಗಿ ಮಾಡುವ ವಿಧಾನವಾಗಿ ಕಂಡುಬರುತ್ತದೆ. ಸೀರೆ ಉಟ್ಟಹುಡುಗರು ಅವರಿಗೆ ಕುಂಕುಮ ಹಚ್ಚಿ ಆರತಿ ಬೆಳಗುತ್ತಾರೆ. ಬೆಳಗುವಾಗ ಆರತಿ ತಟ್ಟ ಹಿಡಿದು ಗಂಡನೆಸರೇನು? ಎಂದು ಕೇಳಿದರೆ ಅವರು

"ಅರಿಮ್ಯೇಲೆ ಅರಿ

ಉಳಾಗಡ್ಡಿ ಪರಿ

ನನಗಂಡನೆಸರ್ ಕೇಳಿದ್ರ

ಮುಕುಳಿಮ್ಯೇಲೆ ಮೂರುಬರಿ"

ಈ ರೀತಿಯ ಹೇಳುತ್ತಾ ಇದ್ದ ಜನರೆಲ್ಲ ಹೊಟ್ಟೆ ಹುಣ್ಣಾಗುವಷ್ಟು ನಗುತ್ತಾರೆ. ಇಂಥಹ ಒಡಪುಗಳನ್ನು ಅತ್ಯಂತ ಅರ್ಥ ಗರ್ಭಿತವಾಗಿ ಶೀಲ ಅಶ್ಲೀಲ ಒಳ್ಳೆಯದು, ಕೆಟ್ಟದು ಯಾವುದು ಲೆಕ್ಕಕ್ಕೆ ಬರುವುದಿಲ್ಲ. ಒಂದು ತಾಸು ತಮಾಷೆಯಾಗಿಯೇ ಕಂಡು ಬಂದರೂ ಹಿಂದಿನಿಂದಲೂ ನೆಡೆಸಿಕೊಂಡು ಬಂದ ಸಂಪ್ರದಾಯವಾಗಿದೆ. (ಈ ಸಂಪ್ರದಾಯವನ್ನು ಇತರರು ಆಚರಿಸುವ ಪದ್ಧತಿಯೂ ಇದೆ) ಇದೆಲ್ಲ ಮುಗಿದ ಮೇಲೆ ವಧು ವರರನ್ನು ಕೂಡಿಸಿ ಆರತಿ ಬೆಳಗಿ ಮನೆಗೆ ಕರೆದುಕೊಂಡು ಬರುತ್ತಾರೆ. ವರನಾದರೆ ಆರತಿಮಾಡಿ ಒಳಗೆ ಕರೆದುಕೊಳ್ಳುತ್ತಾರೆ. ವಧುವಾದರೆ ಸೋದರ ಮಾವನಿಂದ ಪೂಜೆ ಮಾಡಿ ಹೊಸ್ತಿಲಿಗೆ ಮಳಿಯನ್ನು ಬಡಿಯುತ್ತಾರೆ. ಇದನ್ನು ಹೊಸಮನೆಗಿತ್ತಿಮಳಿ ಎಂದು ಕರೆಯುತ್ತಾರೆ. ನಂತರ ಬಂದ ಬೀಗರಿಗೆ ಸಿಹಿ ಭೋಜನ ಮಾಡಿಸುತ್ತಾರೆ. ಊಟವಾದ ಮೇಲೆ ಬೀಗರಿಗೆ ಬಿಡಾರ ಮನೆಯಲ್ಲಿ ಬಿಟ್ಟು ಬರುತ್ತಾರೆ. ರಾತ್ರಿ ಎಲ್ಲಾ ಕಾರ್ಯಕ್ರಮಗಳು ಮುಗಿದ ಮೇಲೆ ಮನೆಯನ್ನು ಕಸಗುಡಿಸಿ ನೆಲ ಬಳಿಯುತ್ತಾರೆ. ಕಸಗುಡಿಸುವಾಗ ಅರಬಿಯಿಂದ ಮಾತ್ರ ಗುಡಿಸುವ ಪದ್ಧತಿಯನ್ನು ಈ ಪಾಂಚಾಳರಲ್ಲಿ ಕಾಣಬಹುದು.

ಮರುದಿನ ಬೆಳಿಗ್ಗೆ ಐದು ಜನ ಮುತ್ತೈದೆಯರ ಸ್ನಾನ ಮಾಡಿಸಿ ಅವರಿಗೆ ಉಡಿ ತುಂಬಿ ಎರಣ್ಣಿ ಬೀರಲು ತರಲು ದೇವಸ್ಥಾನಕ್ಕೆ ಹೋಗುತ್ತಾರೆ. ಅಂದರೆ ತಾಮ್ರದ ಗಿಂಡಿಯ ಕಂಠಕ್ಕೆ ಮುತ್ತಿನ ಸರವನ್ನು ಹಾಕಿಕೊಂಡು (ಶ್ರೀಮಂತರಿದ್ದರೆ) ಉದ್ದರಣೆಯನ್ನು ಇಟ್ಟುಕೊಂಡು ಎಣ್ಣೆ ಹಾಕಲು ಹೋಗುತ್ತಾರೆ. ಮದುವೆ ಸಂದರ್ಭದಲ್ಲಿ ಹಸಿರುಗಂಬ, ಹಾಲಗಂಬ, ವನ್ನು ಸೋದರಮಾವನು ತರುವ ಪದ್ಧತಿ ಇವರಲ್ಲಿದೆ. ಆತನು ಮರದಿಂದ ಕಡಿದುಕೊಂಡು ಬರುವ ಜಾಗದಲ್ಲಿ ದಕ್ಷಿಣೆ ಇಟ್ಟು ದೇವಸ್ಥಾನದಲ್ಲಿ ತಂದು ಇಡುತ್ತಾನೆ. ನಂತರ ಸೊನಾಯಿ ಸಮೇತವಾಗಿ ಹೋಗಿ ಉಲ್ಪಿಯನ್ನು ಇಟ್ಟು ಆರತಿಮಾಡಿ ಮನೆಗೆ ತಂದು ಮುಂಚಿಬಾಗಲ ಬಲಗಡೆಯಲ್ಲಿ ತೆಗ್ಗು ತೆಗೆದು ಹಾಲು, ತುಪ್ಪ, ಮೊಸರು, ಗೋಮೂತ್ರ, ನೀರನ್ನು ಅದರಲ್ಲಿ ಹಾಕಿ ಅದಕ್ಕೆ ಅರಿಸಿಣ, ಕುಂಕುಮ, ಅಕ್ಷತೆಕಾಳನ್ನು ಹಾಕಿ ನಿಲ್ಲುಸುತ್ತಾರೆ. ಆ ಕಂಬಗಳಿಗೆ ಹಾಲಗಂಬ, ಹಸಿರುಗಂಬಕ್ಕೆ ಅರಿಸಿಣ ಕೊಂಬು, ಕೇರುಬೀಜ ಹಪ್ಪಳ, ಕೊಬ್ಬರಿ ಬಟ್ಟಲನ್ನು ಕಟ್ಟಿ ಆ ಗಿಡಕ್ಕೆ ಕಟ್ಟುತ್ತಾರೆ. ಈ ಪದ್ಧತಿಯ ಒಂದು ನಂಬಿಕೆಯನ್ನು ಹೊಂದಿರುವುದನ್ನು ಕಾಣಬಹುದು. ಅದು ಮದುವೆಯ ಸಂದರ್ಭದಲ್ಲಿ ಲೋಪ ದೋಷಗಳು ಮತ್ತು ಆಸರ (ದೃಷ್ಟಿ)ವಾಗುವುದಿಲ್ಲವೆಂಬ ನಂಬಿಕೆ ಇವರಲ್ಲಿ ಮೂಡಿ ಬಂದಿದೆ. ಆ ಶಕ್ತಿ ಆ ಮರಗಳಿಗೆ ಇರುತ್ತವೆಂಬ ಕಲ್ಪನೆಯೂ ಇದೆ.

ಹಾಗೆಯೇ 'ಐರಾಣಿ' ತರುವ ಕಾರ್ಯ ಮುಂದುವರೆಯುತ್ತದೆ. ಕುಂಬಾರರು ಈ ಐರಾಣಿಯನ್ನು ಶುಭಕಾರ್ಯಗಳಿಗಾಗಿಯೇ ಮಾಡಿರುತ್ತಾರೆ. ಇದಕ್ಕೆ ಉಲ್ಪಿ ಮತ್ತು ಜೋಳವನ್ನು ಕೊಟ್ಟು ಐರಾಣಿಯನ್ನು ತಂದು ಅವುಗಳನ್ನು ದೇವರ ಕೋಣೆಯಲ್ಲಿ ಇಡುತ್ತಾರೆ. ಅದರ ಕೆಳಗೆ ಅಕ್ಕಿಕಾಳುಗಳನ್ನು ಅದರ ಮೇಲೆ ದೀಪ ಹಚ್ಚುತ್ತಾರೆ. ಪಾಂಚಾಳರ ವಿವಾಹಗಳಲ್ಲಿ ಐರಾಣಿ ಅಥವಾ ಕೇಲುಗಳು ಬಹು ಪ್ರಾಮುಖ್ಯತೆಯನ್ನು ಪಡೆದಿರುತ್ತವೆ. ಮಧು

ಸಂಸ್ಕಾರ ಮಾಡುವ ಕ್ರಿಯೆಯಲ್ಲಿ ವಧು ವರಗಳ ತಂದೆ ತಾಯಿಗಳ ಜೊತೆ ಅರಿಷಿಣ ಹಚ್ಚುತ್ತಾರೆ. ಈ ಅರಿಷಿಣ ಕಾರ್ಯವನ್ನು ಒಂದು ರೀತಿಯಲ್ಲಿ ಆಟವಾದಂತೆ ಕಂಡು ಬರುತ್ತದೆ. ಮಾವ, ಅಳಿಯ, ಅತ್ತೆ, ಸೊಸೆ, ಹಾಗೂ ಆಟಗಾಟ ಮಾಡುವವರು ಹಚ್ಚುತ್ತಿರುತ್ತಾರೆ. ಅವರಿಗೆ ಗೊತ್ತಿಲ್ಲದೆ ಹಿಂಬದಿಯಿಂದ ಬಂದು ಹಚ್ಚುವುದು ಒಂದು [illegible]ಯಾಗಿ ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಗಂಡು ಹೆಣ್ಣೆಂಬ [illegible] ಭೇದಭಾವ [illegible]. [illegible] ವಧು ಅಥವಾ ವರನಿಗೆ ಅತ್ತೆಯೇ ಅರಿಷಿಣ ಹಚ್ಚುವುದನ್ನು ಕಾಣಬಹುದು. ಎಲ್ಲರೂ ಸೇರಿ ಗಂಗೆ ತರಲು ಹೋಗುತ್ತಾರೆ. ಗಂಗೆ ಎಂದರೆ ಕೆರೆ, ಬಾವಿ, ನಲ್ಲಿ ಕೂಡ ಆಗಿರಬಹುದು ಅಲ್ಲಿ ಐದು ತಂಬಿಗೆಯನ್ನು ಇಟ್ಟು ಅವಕ್ಕೆ ಕಂಕಣವನ್ನು ಕಟ್ಟುತ್ತಾರೆ. ಜೊತೆಗೆ ಐದು ಜನ ಉಡಿ ತುಂಬಿ ಕೊಳ್ಳುತ್ತಾರೆ. ಅದರಲ್ಲಿ ಎಳ್ಳು, ಚಿಗಳಿ, ಕಡ್ಲಿಬ್ಯಾಳಿ, ಎಲೆಅಡಿಕೆ, ಕೊಬ್ಬರಿಯನ್ನು ಬಳಸುತ್ತಾ ಅಂಗುನೂಲನ್ನು ಕೊರಳಲ್ಲಿ ಹಾಕಿಕೊಳ್ಳುತ್ತಾರೆ.

ಗಂಗೆಯಿಂದ ಬಂದ ಐದು ಚರಿಗೆಗಳನ್ನು ಹಂದರದಲ್ಲಿ ಇಡುತ್ತಾರೆ. ಇಡುವುದಕ್ಕೆ ಮೊದಲು ಪೂರ್ವಕ್ಕೆ ಮೂರು, ಪಶ್ಚಿಮಕ್ಕೆರಡು ಗೋಮಯ (ಸಗಣಿಯಗುಂಪು)ನ್ನಿಟ್ಟು ಅದರ ಮೇಲೆ ತಂಬಿಗೆಯನ್ನು ಇಡುತ್ತಾರೆ. ನಂತರ ಸುತ್ತಲು ಐದು ಸುತ್ತ ದಾರವನ್ನು ಸುತ್ತುತ್ತಾರೆ. ಸುತ್ತಿದ ಸಂದರ್ಭದಿಂದ ಕಾರ್ಯ ಮುಗಿಯುವ[illegible] ಜನರು ಸುತ್ತಲೂ ನಿಲ್ಲಲೇಬೇಕು ಏಕೆಂದರೆ ಯಾವುದೇ ತರಹದ ನಾಯಿ, ಬೆಕ್ಕು, ಅಪಶಕುನದ ಸಂಕೇತವಾದುದರಿಂದ ಜಾಗೃತವಾಗಿರುತ್ತಾರೆ. ಈ ಪಾಂಚಾಳರಲ್ಲಿ ವಿಧವೆಯು ಮದುವೆ ಅಥವಾ ಶುಭಕಾರ್ಯದಲ್ಲಿ ಭಾಗಿಯಾಗುವಂತಿಲ್ಲ. ಕಾರಣ ಆಕೆಯು ಅಪಶಕುನದ ಸಂಕೇತ ವಾಗಿರುತ್ತಾಳೆಂದು ನಂಬಿಕೆಯನ್ನಿಟ್ಟಿದ್ದಾರೆ. ಒಂದು ವೇಳೆ ಇವುಗಳು ಮತ್ತು ಆಕೆ ಬಂದರೆ ವಧು ಅಥವಾ ವರಗಳ ಜೀವನ ಕಷ್ಟದಿಂದ, ದೋಷದಿಂದ ಕೂಡಿರುತ್ತದೆ ಎಂದು ಹೇಳುತ್ತಾರೆ. ನಂತರ ಮದುಮಕ್ಕಳನ್ನು ಕರೆದುಕೊಂಡು ಬಂದು ಆ ಸುರಿಗೆಯ ಐದು ಸುತ್ತು ಪ್ರದಕ್ಷಣೆ ಮಾಡಿ ಏಳ್ಕೆದೆಲೆಯನ್ನಿಟ್ಟು ನಮಸ್ಕಾರ ಮಾಡಿ ಬಲಗಾಲಿಟ್ಟು ಒಳಗೋಗುತ್ತಾರೆ. ಅತ್ತೆಯಂದಿರು ಮೂಕ್ತಿನೀರು (ಮೂಗುತಿನೀರು)ನ್ನು ಹಾಕಿ ಸ್ನಾನ ಮಾಡಿಸುತ್ತಾರೆ. ಹೊಸ ಬಟ್ಟೆ ಉಡಿಸಿ ಒಳಕರೆದುಕೊಂಡು ಹೋಗುತ್ತಾರೆ. [illegible] ಈ [illegible]ಯಲ್ಲಿ [illegible] ಭಿನ್ನತೆ ಕಂಡುಬರುತ್ತದೆ. ಬಳ್ಳಾರಿ ಭಾಗದಲ್ಲಿ [illegible]ಯಲ್ಲಿ ಗಂಡು [illegible] [illegible] [illegible]ವಾಗಿ ಕೂಡಿ ಸುರಿಗೆ ಎರೆಯುತ್ತಾರೆ. ಆದರೆ ಈ ಪದ್ಧತಿಯು ಎಲ್ಲಾ ಕಡೆ ಬಹುತೇಕವಾಗಿ ಹಿಂದು ಮುಂದು ಕೂಡಿಸುವ ಸಂಪ್ರದಾಯ ಕಂಡುಬರುತ್ತದೆ.

ನಂತರ ವರನು ಕಾಶಿಯಾತ್ರೆಗೆ ಹೋಗುತ್ತಾನೆ. ಅಂದ್ರೆ 'ನಾನು ಬ್ರಹ್ಮಚಾರ್ಯವನ್ನು ಸ್ವೀಕರಿಸುತ್ತೇನೆಂದು' ಆ ಊರಿನ ಕಾಳಿಕಾದೇವಿಯ ಗುಡಿ ಅಥವಾ ಬನ್ನಿಮರಕ್ಕೆ ಹೋಗಿರುತ್ತಾರೆ. ಮದುವೆಯ ಸಂದರ್ಭದಲ್ಲಿ ಈ ಸ್ಥಳಗಳೇ ಕಾಶಿಯಾಗಿರುತ್ತದೆ. ಬ್ರಹ್ಮಚರ್ಯ ಸ್ವೀಕರಿಸುತ್ತೇನೆಂದು ಕೈಯಲ್ಲಿ ಕೋಲಿಡಿದು ಬಗಲಲ್ಲಿ ಜೋಳಿಗೆ ಹಾಕಿಕೊಂಡು ಅರೆಬೆತ್ತಲೆಯಾಗಿರುತ್ತಾರೆ. 'ಭಿಕ್ಷಾಂ ದೇಹಿ' ಎಂದು ಮಾವಂದಿರ ಹತ್ತಿರ ಹೋಗುತ್ತಾನೆ. ತಮಗೆ ತಿಳಿದಷ್ಟು ದಕ್ಷಿಣೆಯನ್ನು ಹಾಕುತ್ತಾರೆ. ಮುಂಚೆಯೇ ಗೊತ್ತು ಪಡಿಸಿದ ಹೆಣ್ಣಿನ ತಂದೆ ಬಂದು '[illegible] ಎಲ್ಲಿಗೋಂಟಿರಿ' ಎಂದು ಕೇಳುತ್ತಾರೆ. ಅದಕ್ಕವನು ಕಾಶಿಯಾತ್ರೆಗೆ ಹೋಗುತ್ತೇನೆಂದು ಹೇಳುತ್ತಿರುವಾಗ ಕುಲ, ಗೋತ್ರ, ಇತರ ವಿಚಾರ ಮಾಡಿ ನೋಡಿ ಸ್ವಾಮಿ ನೀವು ಕಾಶಿಯಾತ್ರೆಗೆ ಹೋಗಬೇಡಿ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆ. ನೀವು ಕೇಳಿದಷ್ಟು ಕೊಡುತ್ತೇನೆ. ದಯಮಾಡಿ ನನ್ನ ಮಗಳನ್ನು ಮದುವೆಯಾಗಿ ಸುಖವಾಗಿರಿ ಜೀವನದಲ್ಲಿ ಮಾನವನಿಗೆ ಆ ದೇವರು ಗೃಹಸ್ಥಾಶ್ರಮಕ್ಕೆ ಎಲ್ಲರಿಗೆ ಅವಕಾಶಕೊಟ್ಟು ಅದು ಶ್ರೇಷ್ಠ ಎಂದು ಹೇಳುತ್ತಾರೆ [illegible] ಎಂದು ಮನವಲಿಸುವ ಪ್ರಯತ್ನ ಮಾಡುತ್ತಾನೆ. ಅದಕ್ಕೆ ಪ್ರತಿಯಾಗಿ ಅವನು ಇಲ್ಲ ನಾನು [illegible] ದೇವರ ಸೇವೆಮಾಡಿಕ್ಕೆ ಬ್ರಹ್ಮಚಾರ್ಯ ಪಡೆಯುತ್ತೇನೆಂದು ಹೇಳುತ್ತಾನೆ ಕೊನೆ ಪಕ್ಕದಲ್ಲಿದ್ದರು ಮನವೊಲಿಸಿ [illegible] ಪಾದವನ್ನು ಮಾವ ಪೂಜೆ ಮಾಡಿ ಅಲ್ಲಿಂದ [illegible] ಮನೆಗೆ [illegible] [illegible] ನಗೆ [illegible] ಕ್ಷಣವಾಗಿಕಂಡುಬರುತ್ತದೆ ಈ ಪದ್ಧತಿಯು [illegible] [illegible]ವಾಗಿದೆ ನಂತರ ತಾಳಿಕಟ್ಟುವ ಸಮಯ. ಇತ್ತ ವಧು ಗೌರಿಪೂಜೆಯಲ್ಲಿ ತೊಡಗಿರುತ್ತಾಳೆ.

ಪುರೋಹಿತ ಮಂತ್ರ ಪಠಿಸುತ್ತಾ ವಧು ವರರನ್ನ ಕೂಡಿಸಿ ಅವರ ಕೈಯಲ್ಲಿ ತೆಂಗಿನ ಕಾಯಿ ಇಟ್ಟು ಅದರ ಮೇಲೆ ಹಾಲು ತುಪ್ಪ ಹಾಕಿ ಕನ್ಯಾಧಾನ ಮಾಡುತ್ತಾರೆ. ತಾಳಿಯನ್ನು ತೆಂಗಿನ ಕಾಯಿ ಮೇಲಿಟ್ಟು ಎಲ್ಲರಿಗೂ ಮುಟ್ಟಿಸುತ್ತಾರೆ. ಮುಟ್ಟಿದಾಗ ಅಗ್ನಿಸಾಕ್ಷಿಯಾಗಿ ತಾಳಿಯನ್ನು ಮೂರು ಗಂಟು ಕಟ್ಟುತ್ತಾನೆ ಒಂದು ಪಾತ್ರೆಯಲ್ಲಿ ಹಾಲು ಹಾಲಿನೊಳಗೆ ಮುತ್ತು ರತ್ನ ಹಾಕಿ ಗಂಡ ಹೆಂಡರು ಹಾಲಿನಲ್ಲಿನ ಮುತ್ತು ರತ್ನ ಹುಡುಕಿಸುತ್ತಾರೆ ಹೆಂಡತಿಗೆ ಸಿಕ್ಕರೆ.

ಅತ್ತಿ ಅತ್ತಿ ಹಾಲು ಕಂಡೆ
ಹಾಲಿನೊಳ ಮುತ್ತ ಕಂಡೆ
ರತ್ನ ಕಂಡೆ
ಮುತ್ತಿನಂತ ಗಂಡನ ಕಂಡೆ, ಎಂದು ಹೇಳಿಸುತ್ತಾರೆ ಗಂಡನಾದರೆ
ಅತ್ತಿ ಅತ್ತಿ ಹಾಲು ಕಂಡೆ
ಮುತ್ತು ಕಂಡೆ
ರತ್ನ ಕಂಡೆ
ರತ್ನದಂತೆ ಹೆಂಡ್ತಿಕಂಡೆ,

ಎಂದು ಹೇಳಿಸುವ ಭಾವನೆಗಳು ಇಬ್ಬರಲ್ಲಿ ಒಳ್ಳೆಯ ಬದುಕು ಸಾಗಲೆಂದು ಈ ಆಚರಣೆಗಳನ್ನು ಮಾಡುತ್ತಾರೆ ನಂತರ ಇಬ್ಬರಿಗೂ ಬ್ರಹ್ಮಗಂಟು ಹಾಕುತ್ತಾರೆ. ಈ ಅರ್ಥ ಜೀವನದ ಕೊನೆಯ ಹಂತದವರೆಗೂ ಸುಃಖ ದುಃಖಗಳಲ್ಲಿ ಭಾಗಿಯಾಗಿ ಸಮಾನರಾಗಿರುವುದು ಬ್ರಹ್ಮಗಂಟು ಹಾಕಿ ಅಗ್ನಿ ಕುಂಡದ ಸುತ್ತಲು ಸಪ್ತಪದಿ ತುಳಿಸುತ್ತಾ ಇದಾದ ಮೇಲೆ ಇಬ್ಬರನ್ನು ಹೊರಗಡೆ ಶೃಂಗರಿಸಿದ ಸ್ಥಳದಲ್ಲಿ ಕೂಡಿಸುತ್ತಾರೆ. ನರೆದವರೆಲ್ಲ ಅಕ್ಕಿ ಕಾಳನ್ನು ಹಾಕಿ ಶುಭಕೋರುವ ಪದ್ಧತಿಗಳು ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿರುವಂತೆ ಇವರಲ್ಲಿ ಬೆಳೆದುಕೊಂಡು ಬಂದಿದೆ.

ಸಾಯಂಕಾಲ ಮೆರವಣಿಗೆ ಮಾಡಿ ಮನೆಗೆ ಬಂದ ಮೇಲೆ ವರನ ತಂಗಿ ಅಥವಾ ಅಕ್ಕ ಕಾಲು ತೊಳೆದು ಹಾಲುಣಿಸುತ್ತಾಳೆ. ಅದಕ್ಕೆ ಅವಗೆ ಕೇಳಲಿ ಉಡುಗೊರೆಯನ್ನು ಕೊಡಿಸುವ ಭರವಸೆಯನ್ನು ಕೊಡುತ್ತಾನೆ. ನಂತರ ವಧುವು ಜೋಳ ತುಂಬಿದ ಸೇರನ್ನು ಮತ್ತು ತಟ್ಟೆ (ಗಂಗಾಳ) ಇಟ್ಟದನ್ನು ಮೂರು ಬಾರಿ ಎಡಗಾಲಿನಿಂದ ಒದ್ದ ಮೇಲೆ ಒಳಗಡೆ ಕರೆದುಕೊಳ್ಳುತ್ತಾರೆ. ಬುಧವಾರ ಅಥವಾ ಶನಿವಾರ ಮಾತ್ರ ಕಡೆಯ ನೀರು ಮಾಡಿದ ನಂತರ ಗೋದಿ ಉಡಕ್ಕಿ ಹಾಕಿಕೊಂಡು ತವರಿಗೆ ಹೋಗುತ್ತಾಳೆ. ತಾಳಿ ಕಟ್ಟಿದ (ಮರುದಿನ) ನಾಗೋಲಿಸುರಿಗೆ ಎರಡು ಗಂಗಯಿಂದ ಕೊಡ ಹೊತ್ತುಕೊಂಡು ಬಂದಾಗ ಗಂಡ ಬಲಗಾಲಿಗೆ ಮಳಿ ಬಡಯುತ್ತಾರೆ. ಒಂಬತ್ತು ಅಥವಾ ಹದಿನಾರನೇ ದಿನಕ್ಕೆ ಸೋಬಾನ ಕಾರ್ಯ ಇರುತ್ತದೆ. ಅದಕ್ಕೆ ತವರು ಮನೆಯ ಹಾಸಿಗೆಯೇ ಆಗಬೇಕು. ಈ ಕಾರ್ಯ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಅದರ ಹುಬ್ಬಳ್ಳಿ ಧಾರವಾಡದ ಕಡೆ ಗಂಡಿನ ಮನೆಯಲ್ಲಿ ಕಾರ್ಯ ಮಾಡುವ ಪದ್ಧತಿ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಹಾಸಿಗೆ ಪೂಜೆ ಮಾಡಿರುತ್ತಾರೆ. ರಾತ್ರಿ ಕಳೆದು ಬೆಳಿಗ್ಗೆ ಎದ್ದಕೂಡಲೇ ಮೊದಲೇ ಇಟ್ಟಿರುವ ತೆಂಗಿನ ಕಾಯಿ ಹೊಡೆದ ತಿಳಿದಷ್ಟು ರೊಕ್ಕ ಹಾಕಿ ಕದ ತೆಗೆಯುವ ಪದ್ಧತಿ ಇವರಲ್ಲಿದೆ. ನಂತರ ಇಬ್ಬರಿಗೂ ಸ್ನಾನ ಮಾಡಿಸಿ ಬಟ್ಟೆ, ಹಾಸಿಗೆಯನ್ನು ಅಗಸರಿಗೆ ಹಾಕುವ ರೂಢಿ ಬೆಳೆದುಕೊಂಡು ಬಂದಿದೆ. ಈ ಕಾರ್ಯವು ಕೇವಲ ಎರಡು ದಿನ ಎರಡು ಹಾಸಿಗೆ ಮಾತ್ರ ಸೀಮಿತವಾಗಿರುತ್ತದೆ. ಮೂರನೇ ದಿನಕ್ಕೆ ಅವಕಾಶ ಇರುವುದಿಲ್ಲ ಈ ಎರಡು ದಿನದ ಕಾರ್ಯ ಮುಗಿದ ತಕ್ಷಣ ತಮ್ಮ ಊರಿಗೆ ಮರುಳುತ್ತಾನೆ.

ಒಂಬತ್ತು ಅಥವಾ ಹದಿನಾರನೇ ದಿನದಲ್ಲಿ ಹೊಸಸೀರೆ ಉಟ್ಟು ಉಡಕ್ಕಿ ಹಾಕಿಕೊಂಡು ಹೊಸಮನೆಗಿತ್ತಿಯಾಗಿ ಗಂಡನ ಮನೆಗೆ ಬಂದು ಅತ್ತೆ ಮಾವಂದಿರೇ ತಂದೆ ತಾಯಿಗಳೆಂದು ಗಂಡ ದೇವರೆಂದು ತಗ್ಗಿ ಬಗ್ಗಿ ನಡೆಯುವ

ಪದ್ಧತಿಯನ್ನು ಇವರಲ್ಲಿ ಕಾಣಬಹುದು. ಹೀಗೆ ಒಟ್ಟಾರೆಯಾಗಿ ಪಾಂಚಾಳ ವಿವಾಹಗಳಲ್ಲಿ ಇಂತಹ ವಿಶಿಷ್ಟ ಸಂಪ್ರದಾಯಗಳು ಕಾಣುತ್ತೇವೆ. ಇನ್ನು ಮುಂತಾದ ಅಂಶಗಳನ್ನು ಕೆಳಗೆ ವಿವರಿಸಲಾಗಿದೆ.

- ವರನು ಚಪ್ಪಲಿಯನ್ನು ಮದುವೆಯ ನಂತರ ಆಳಿಯಂದಿರಿಗೆ ಕೊಡಬೇಕು. ಅದರೊಳಗೆ ಯಾರಾದರೂ ಹೇಳದೇ ಕೇಳದೇ ಹಾಕಿಕೊಳ್ಳಬಹುದು ಸಿಟ್ಟುಮಾಡಿಕೊಳ್ಳುವಂತಿಲ್ಲ.
- ಮದುಮಗನಿಗೆ ಮದುವೆಯ ಮೊದಲು ಮೂರು ಎಳೆ ಜನಿವಾರ ಇದ್ದರೆ ಮದುವೆಯ ನಂತರ ಆರು ಎಳೆ ಹಾಕಿಕೊಳ್ಳುತ್ತಾರೆ.
- ಮದುವೆಯ ಸಂದರ್ಭದಲ್ಲಿ ಕೈಯಲ್ಲಿ ತೆಂಗಿನ ಕಾಯಿಯನ್ನು ಎಲ್ಲಿಯೂ ಇಡುವಂತಿಲ್ಲ ದೇವರ ಜಗಲಿಯ ಮಾತ್ರ ಇಡಬೇಕು ಅಲ್ಲಿ ಬಿಟ್ಟು ಬೇರೆ ಕಡೆ ಉಪಾಯವಾಗಿ ತೆಗೆದುಕೊಂಡವರಿಗೆ ಕೇಳಿದಷ್ಟು ಹಣ ಕೊಡಬೇಕು.
- ತಾಳಿ ಪೋಣಿಸುವ ಮುತ್ತೈದಿಯರಿಗೆ ಎಲೆ ಅಡಿಕೆಯಲ್ಲಿ ಕಾಣಿಕೆಯಾಗಿ ದಕ್ಷಿಣೆ (ಹಣ) ಪ್ರೀತಿಯಿಂದ ಕೊಡಲೇಬೇಕು.
- ವಧು ವರರು ತಾಳಿಕಟ್ಟಿ ನಂತರ ಸರಿ ಬೆಸವಾಗಿ ಅಡಕಿಯಾಟ ಆಡುತ್ತಾರೆ. ಅದರಲ್ಲಿ ಗಂಡ ಗೆದೆಯಬೇಕು ಹೆಂಡತಿ ಸೋಲಬೇಕೆನ್ನುವ ನಂಬಿಕೆ ಬೆಳೆದುಕೊಂಡು ಬಂದಿದೆ.
- ವಧು ವರರು ಕೂಡಿಕೊಂಡು ತೊಟ್ಟಿಲು ಕಾರ್ಯ ನಡೆಯುತ್ತದೆ ಒಂದು ಗೊಂಬಿಯನ್ನು ಮಗುವೆಂದು ತಿಳಿದು ಹೆಂಡತಿ ಮಾಡುವ ಕೆಲಸ ಹೆಂಡತಿ ಮಾಡುತ್ತಾ ನಿಜವಾಗಿಯೂ ಹೆತ್ತ ತಂದೆತಾಯಿಯರ ನಡುವೆ ನಡೆಯುವ ಪ್ರಸಂಗವನ್ನು ಬಿಂಬಿಸುವಂತೆ ಮಾಡುತ್ತಾರೆ ಅಂದರೆ ಅವರಿಗೆ ಮಗುವನ್ನು ಪಡೆಯುವಿಕೆ, ಲಲಾನ ಪಾಲನೆಯ ನಿಯಮಗಳನ್ನು ಒಳಗೊಂಡಿರುತ್ತವೆ. ಅವರ ಅರಿವೆಗೆ ಬರುವುದಕ್ಕೆ ಈ ಸಂಪ್ರದಾಯವಿದೆ.
- ಮದುವೆಯ ದಿನವೇ ಹಂದರದ ದೀಪ ನೋಡಬಾರದು ಕೆಲವೊಬ್ಬರು ಮದುವೆಯ ಮೂರು ದಿನಗಳ ಕಾಲ ನೋಡುವಂತಿಲ್ಲ ಈ ರೀತಿಯಾಗಿ ಪಾಂಚಾಳ ಸಂಪ್ರದಾಯ ನಂಬಿಕೊಂಡು ಬಂದಿದ್ದಾರೆ.

೪)ಅಂತ್ಯಕ್ರಿಯೆ

ಹುಟ್ಟಿದ ಮನುಷ್ಯನಿಗೆ ಸಾವು ನಿಶ್ಚಿತ. ಸತ್ತ ಬಳಿಕ ಶವಕ್ಕೆ ಮಾಡುವ ಸಂಸ್ಕಾರಗಳು ಬೇರೆ ಬೇರೆ ಜಾತಿ ಸಮುದಾಯಗಳಲ್ಲಿ ಬೇರೆ ಬೇರೆ ರೀತಿಯದ್ದಾಗಿರುತ್ತವೆ. ಪಾಂಚಾಳರಲ್ಲಿ ಯಾರೊಬ್ಬರೂ ಸಾಯುವ ಸ್ಥಿತಿಯಲ್ಲಿರುವಾಗ ಮಕ್ಕಳು ಕುಟುಂಬದವರೆಲ್ಲ ಬಂದು ಸೇರುತ್ತಾರೆ. ಪ್ರಾಣ ಹೋಗುವ ಸಂದರ್ಭದಲ್ಲಿ ಬಾಯಿಗೆ ತುಳಿಸಿಧಳ ಅಕ್ಕಿ ಬೆರೆಸಿದ ನೀರನ್ನು ಬಿಡುತ್ತಾರೆ. ಇದು ಸ್ವರ್ಗಕ್ಕೆ ಹೋಗು ಎಂಬರ್ಥದಲ್ಲಿ ಕಂಡುಬರುತ್ತದೆ. ಸಾಯುವ ಸಂದರ್ಭದಲ್ಲಿ ಯಾರು ಇರದಿದ್ದರೆ ಇಂತಹ ಆಚರಣೆ ಇರುವುದಿಲ್ಲ. ಮರಣ ಹೊಂದಿದ ಮೇಲೆ ಬಿಳಿಬಟ್ಟೆಯಿಂದು ಮುಸುಕು ಹಾಕುತ್ತಾರೆ. ತಲೆ ಮತ್ತು ಕಾಲಿನ ಬಳಿ ಒಂದಿಷ್ಟು ಅಕ್ಕಿ ಅಥವಾ ಜೋಳವನ್ನು ಹಾಕಿ ತೆಂಗಿನ ಕಾಯಿ ಒಡೆದು ಅದರ ಹೋಳುಗಳನ್ನು ಈ ರಾಶಿಯಲ್ಲಿಟ್ಟು ಅದಕ್ಕೆ ಎಣ್ಣೆಹಾಕಿ ಬತ್ತಿ ಇಟ್ಟು ದೀಪ ಹಚ್ಚುತ್ತಾರೆ.

ಅಂಗಳದ ಮೂಲೆಯಲ್ಲಿ ಮಣ್ಣಿನ ಮಡಿಕೆ ಅಥವಾ ಪಾತ್ರೆಯಲ್ಲಿ ನೀರು ಕಾಯಿಸುತ್ತಾರೆ. ಅದಕ್ಕೆ ಮುಚ್ಚಳ ಇರುವುದಿಲ್ಲ ನೀರು ಬಿಸಿಯಾದ ಮೇಲೆ ಹೆಣವನ್ನು ತಂದು ಮರದ ಮಣೆಯ ಮೇಲೆ ಗಂಡಸರು ಸ್ನಾನ ಮಾಡಿಸುತ್ತಾರೆ. ಸ್ತ್ರೀಯರು ಮರಣ ಹೊಂದಿದರೆ ಸ್ತ್ರೀಯರು ಬಟ್ಟೆ ಹಾಕಲು ಮಾತ್ರ ಬರುತ್ತಾರೆ. ಆ ಹೆಣಕ್ಕೆ

ಉಡುಪು ತೊಡಿಸಿ ಶೃಂಗಾರ ಮಾಡಿ ತಲೆಗೆ ಮುಂಡಾಸು, ಪಂಚೆ, ಅಂಗಿಯನ್ನು ಹಾಕಿ ಸಿದಿಗಿ ಕೊಟ್ಟು ಗೋಡೆಗೆ ಕೂಡಿಸಿ ಅದಕ್ಕೆ ವಿಭೂತಿ ಕುಂಕುಮ ಊದಿನಕಡ್ಡಿಯನ್ನು ಹಚ್ಚುತ್ತಾರೆ. ಪಕ್ಕದಲ್ಲಿ ದೀಪ ಉರಿಯುತ್ತಿರುತ್ತದೆ. ಆ ಹೆಣಕ್ಕೆ ಬಾಯಿಗೆ ವೀಳ್ಯ ಜಜ್ಜಿ ಬಾಯಿಗಿಡುತ್ತಾರೆ. ಬಂದಿರುವ ನೆಂಟರಿಷ್ಟರು ಹೆಣಕ್ಕೆ ಹೂ, ಮಾಲೆ, ವಿಭೂತಿ, ತೆಂಗಿನಕಾಯಿ, ಊದಿನಕಡ್ಡಿ ಹಾಕಿ ನಮಸ್ಕಾರ ಮಾಡುತ್ತಾರೆ. ಹೆಣವನ್ನು ಚಟ್ಟದಲ್ಲಿ ಸ್ಮಶಾನಕ್ಕೆ ಹೊಯ್ಯುವ ರೂಢಿಯುಳ್ಳಿದೆ. ಬೀಗರು ಬಿಜ್ಜರು ಬಂದಮೇಲೆ ಹೆಣವನ್ನು ಸ್ಮಶಾನಕ್ಕೆ ಹೊಯ್ಯುತ್ತಾರೆ. ಹೊಯ್ಯುವಾಗ ಸತ್ತ ವ್ಯಕ್ತಿಯು ಪುರುಷನಾದರೆ ಮಗ ಕೆಟ್ಟ ಹಿಡಿಯುತ್ತಾನೆ. ಸ್ತ್ರೀಯಾದರೆ ಗಂಡ ಕಟ್ಟ ಹಿಡಿಯುತ್ತಾರೆ. ಮದುವೆಯಾಗದೆ ಇರುವವರಿಗೆ ತಂದೆ ಅಥವಾ ಹತ್ತಿರದ ಸಂಬಂಧಿಗಳು ಈ ಕ್ರಿಯೆ ಮಾಡುವ ಪದ್ಧತಿ ಇರುತ್ತದೆ. ಸತ್ತ ವ್ಯಕ್ತಿಯ ಕಿಚ್ಚಿಕ್ಕೆ ಒಬ್ಬಾತ ಮಣ್ಣಿನ ಮಡಿಕೆಯುಲ್ಲಿ ತೆಂಗಿನ ಸಿಪ್ಪೆಯಲ್ಲಿ ಬೆಂಕಿ ಕೆಂಡಹಾಕಿ ಮಡಿಕೆಯ ಬಾಯಿಗೆ ಹಗ್ಗ ಹಾಕಿ ಹೆಣದ ಮುಂದೆ ಹಿಡಿದುಕೊಂಡು ಹೋಗುತ್ತಾರೆ. ಸ್ಮಶಾನದಲ್ಲಿ ಹೆಣವನ್ನು ಉತ್ತರ ದಕ್ಷಿಣವಾಗಿ ಕಟ್ಟಿಗೆಯ ಮೇಲೆ ಇಡುತ್ತಾ ಬಳಿಕ ಮಗ ಬಂದು ನೀರು ತುಂಬಿದ ಬಿಂದಿಗೆಯನ್ನು ಹೊತ್ತುಕೊಂಡು ಮೂರು ಸುತ್ತು ಪ್ರದಕ್ಷಣೆ ಮಾಡುತ್ತಾನೆ. ಒಂದೊಂದು ಸುತ್ತಿಗೂ ಗಡಿಗೆಗೆ ಒಂದೊಂದು ತೂತು (ರಂಧ್ರ) ಮಾಡುತ್ತ ಕೊನೆಗೆ ಹಿಂಬದಿಯಿಂದಲೇ ಆ ಮಡಿಕೆಯನ್ನು ಕೈ ಬಿಡುತ್ತಾರೆ. ನಂತರ ಆ ಹೆಣಕ್ಕೆ ಹಿರಿಮಗನೇ ಬೆಂಕಿ ಹಚ್ಚುತ್ತಾರೆ. ಅದು ಪೂರ್ತಿಯಾಗಿ ಸುಡವವರಿಗೂ ಕೆಲವು ಜನ ಕಾಯುತ್ತಾರೆ.

ಮೊದಲೇ ಹೇಳಬೇಕಾದ ವಿಚಾರ ಎಂದರೆ ಸತ್ತ ವ್ಯಕ್ತಿಯ ಸಂಬಂಧಿಕರಿಗೆ ಸುದ್ದಿ ಮುಟ್ಟಿಸುವುದಕ್ಕೆ ಮನೆಯ ಒಕ್ಕಲು ಮಾದಿಗರನ್ನು ಕಳಿಸುತ್ತಾರೆ. ಅವರು ಊರೂರು ತಿಳಿಸಿ ಅವರ ಮನೆಯಿಂದ ಜೋಳ ಹಾಗೂ ಹಣವನ್ನು ಪಡೆಯುವುದನ್ನು ಕಾಣಬಹುದು. ಅವರು ಸುದ್ದಿ ಮುಟ್ಟಿಸಿ ಬಂದ ಮೇಲೆ ಬೀಗರು ಬರುವವರಿಗೂ ಹೆಣ ಎತ್ತುವುದಿಲ್ಲ. ಸತ್ತವರು ಪುರುಷರಾದರೆ ಆತನಿಗೆ ಮದುವೆಯಾಗಿದ್ದರೆ ಆತನ ಹೆಂಡತಿಯು ಮಸಣದಲ್ಲಿ ತಾಳಿ, ಕುಂಕುಮ ಬಳೆಯನ್ನು ಆ ಹೆಣದ ಮುಂದೆ ತೆಗೆಯುತ್ತಾರೆ. ಸ್ತ್ರೀಯಾದರೆ ಆಕೆಯನ್ನು ಮುತ್ತೈದಿಯಾಗಿ ಸುಡುತ್ತಾರೆ. ಈ ಪಾಂಚಾಳರಲ್ಲಿ ಸುಡುವ ಮತ್ತು ಉಗಿಯುವ ಪದ್ಧತಿಗಳಿವೆ. ಆದರೆ ಅದಕ್ಕೆ ತನ್ನದೇ ಆದ ನಿಯಮಗಳನ್ನು ಒಳಗೊಂಡಿವೆ. ಬಾಲ್ಯವಸ್ಥೆಯ ಅಥವಾ ಉಪನಯನ ಮಾಡದ ಋತುಮತಿಯಾಗದವರನ್ನು ಮಣ್ಣಿನಲ್ಲಿ ಉಗಿಯುತ್ತಾರೆ. ಉಪನಯನ ವಿವಾಹವಾದ ವ್ಯಕ್ತಿಗಳನ್ನು ಸುಡುತ್ತಾರೆ. ಈ ಪದ್ಧತಿ ಇವರಲ್ಲಿ ಕಂಡುಬರುವುದು.

ಸತ್ತ ವ್ಯಕ್ತಿಯ ಮನೆಯಲ್ಲಿ ಅಂದಿನಿಂದ ಮೂರು ದಿನಗಳ ಕಾಲ ಅಡಿಗೆ ಮಾಡುವಂತಿಲ್ಲ. ಪಕ್ಕದ ಮನೆಯವರು ಊಟವನ್ನು ತರುತ್ತಾರೆ. ಇವರಿಗೆ ಮೈಲಿಗೆಯವರು ಎಂದು ಕರೆಯುವ ವಾಡಿಕೆ ಇದೆ. ಅದಕ್ಕೆ ಯಾರ ಮನೆಯ ಒಳಗೆ ಹೋಗುವಂತಿಲ್ಲ ಅದು ಹನ್ನೊಂದು ದಿನದ ವರೆಗೆ ಅಡಿಗೆ ಮನೆ ಪ್ರವೇಶವಿಲ್ಲ ದೇವರ ಮುಖ ನೋಡುವಂತಿಲ್ಲ ಎಲ್ಲಾ ವ್ಯವಸ್ಥೆಯನ್ನು ಪಡಶಾಲೆಯಲ್ಲಿಯೇ ಮಾಡುತ್ತಾರೆ. ಅಡಿಗೆ ಮನೆಯ ಪ್ರವೇಶರದ್ದು. ಅಂತ್ಯಕ್ರಿಯೆ ನಡೆದ ಬಳಿಕ ವೈದಿಕಾಚರಣೆಯಗಳನುಸಾರವಾಗಿ ಮೂರು ಒಂಭತ್ತನೆಯ ದಿನದಿಂದ ಕ್ರಿಯೆಗಳು ಪ್ರಾರಂಭವಾಗುತ್ತವೆ. ಹನ್ನೊಂದನೆಯ ದಿನ ಶುದ್ಧ ಹನ್ನೆರಡನೆಯ ದಿನ ತಿಥಿ (ಉತ್ತರಕ್ರಿಯೆ) ಹದಿಮೂರನೇ ದಿನ ಸಮಾರಾಧನೆ ನಡೆಯುತ್ತದೆ. ಹನ್ನೊಂದನೇ ದಿನದಲ್ಲಿ ಉತ್ತರ ಕ್ರಿಯಗಳಲ್ಲಿ ಅಂತ್ಯಕ್ರಿಯೆಗೆ ಬಂದವರು ತಿಥಿಗೆ ಬರುತ್ತಾರೆ.ದಿನಕರ್ಮದಲ್ಲಿ ಪೂಜೆ ಪುರಸ್ಕಾರ ಮಾಡಿ ಮನೆಗೆಲ್ಲ ಗೋತೀರ್ಥವನ್ನು ಸಿಂಪಡಿಸಿ ಹಾಗೂ ಅಪವಿತ್ರದಿಂದ ಮುಕ್ತರಾಗಲು ಗೋತೀರ್ಥವನ್ನು ಕುಡಿಯುವ ಪದ್ದತಿ ಇವರಲ್ಲಿದೆ. ಸತ್ತವರ ಆತ್ಮಕ್ಕೆ ಶಾಂತಿ ಸಿಗಲೆಂದು ಎಳ್ಳು ನೀರು ಬಿಡುತ್ತಾರೆ ಅಂದಿನ ನೈವೇದ್ಯಕ್ಕೆ ಸತ್ತವರು ಏನೇನು ಇಷ್ಟು ಪಡುತ್ತಿದ್ದರೋ ಬೀಡಿ ಸೇದುತ್ತಿದ್ದರೆ ಬೀಡಿ, ಎಲೆ ಅಡಿಕೆ ತಿನ್ನುತಿದ್ದರೆ ಎಲೆಅಡಿಕೆ, ಹೋಳಿಗೆ ಪ್ರಿಯವಾಗಿದ್ದರೆ ಹೋಳಿಗೆ ಮೆಣಸಿನ ಕಾಯಿ ಇಷ್ಟವಾಗಿದ್ದರೆ ಹೀಗೆ ಅವರು ಹೆಚ್ಚಾಗಿ ಉಪಯೋಗಿಸುತ್ತಿದ್ದ ಇಷ್ಟಾರ್ಥಗಳನ್ನು ನೈವೇದ್ಯ ಮಾಡುತ್ತಾರೆ. ಸೋಗಿಯ ಬಡಿಗೇರ ಮಹೇಶಪ್ಪನ ತಂದೆ ಬೀಡಿ ಸೇದುತ್ತಿದ್ದನಂತೆ ತಿಥಿಯ ದಿನ ಬೀಡಿಯನ್ನೇ ಇಟ್ಟು ಪೂಜೆಮಾಡಿದರೆ ಆತ್ಮ ಶಾಂತಿಯಿಂದ ಇರುತ್ತದೆಂದು ಭಾವಿಸುತ್ತಾರೆ.

ಮುಂದೆ ಕಾಗಿಪಿಂಡಕ್ಕಾಗಿ ಊರ ಹೊರಗಡೆಗೆ ಹೋಯ್ದು ಇಡುತ್ತಾರೆ. ಸ್ನಾನ ಮಾಡಿಸಿ ಅದನ್ನು ಎತ್ತಿ ಎತ್ತಿ ಇಡುತ್ತಿರಬೇಕು ಮೊದಲು ಸ್ನಾನ ಮಾಡಿದರು ಮತ್ತೆ ಕೂಡ ಸ್ನಾನ ಮಾಡಬೇಕು. ಕಾಗಿ ಮುಟ್ಟಿದರೆ ಆ ಸತ್ತ ವ್ಯಕ್ತಿಯ ಆಸೆ ಅಕಾಂಕ್ಷೆಗಳು ಹೀಡೇರಿವವೆಂದರ್ಥ ಆತನ ಮೇಲೆ ಪ್ರೀತಿ ಇದ್ದವರು ಅಥವಾ ದ್ವೇಷ ಇದ್ದವರು ಕಾಗೆ ಪಿಂಡ ಮುಟ್ಟುತ್ತಿರುತ್ತಾರೆ. ಎಲ್ಲಾಪುರದ ಚೆನ್ನಪ್ಪಚಾರಿಯ ಸಾಯುವುದಕ್ಕೆ ಮೊದಲು ಅಳಿಯ ವೀರಾಚಾರಿಯ ಮೇಲೆ ವಿಚಿತ್ರ ಕೋಪ, ಇವರೆಂದರೆ ಹೊಡಿ ಬಡಿ ಎಂಬ ಮಾತುಗಳೇ ಕೇಳಿಸುತ್ತದ್ದವಂತೆ ಸತ್ತ ನಂತರ ಕುಟುಂಬದ ಎಲ್ಲಾ ಸದಸ್ಯರು ನಿನ್ನ ಮೇಲೆ ಪ್ರೀತಿ ಇದ್ದ ಆತನ ಮೇಲೆ ಪ್ರೀತಿ ಇದ್ದ ಅಂದು ಇದ್ದ ಬದ್ದವರೆಲ್ಲಾ ಸಣ್ಣ ಮಗುಕೂಡ ಮುಟ್ಟಿಸಿದರಂತೆ ಕಾಗೆ ಮುಟ್ಟಲೇ ಇಲ್ಲಂತೆ ಕೊನೆಗೆ ಅಳಿಯ ಕೆರೆಯಲ್ಲಿ ಮುಳುಗಿ ಮುಟ್ಟಿದ ತಕ್ಷಣ ಕಾಗೆ ಬಂದು ಮುಟ್ಟಿ ಹೋದಾಗ ಅಲ್ಲಿದ್ದವರು ಆಶ್ಚರ್ಯವಾಯಿತಂತೆ. ಸತ್ತ ಮೇಲೆಯಾದರೂ ಹೊಂದಾದರಲ್ಲ ಎಂಬ ನಂಬಿಕೆ ಬಂದಿತಂದು ಮಾಗಳದ ಶ್ರೀಮತಿ ರತ್ನಮ್ಮ ಹೇಳುತ್ತಾರೆ. ಕಾಗೆ ಮುಟ್ಟಿದರೆ ಮಾತ್ರ ಆತ್ಮಕ್ಕೆ ಶಾಂತಿ ಇಲ್ಲದಿದ್ದರೆ ಆತ ಮಗುವಾಗುತ್ತನೆಂಬ ನಂಬಿಕೆ ಇವರಲ್ಲಿ ಕಾಣಬಹುದು.

ಈ ಕಾರ್ಯಕ್ರಮ ಆದ ಮೇಲೆ ಎಲ್ಲರೂ ಸೇರಿ ಒಟ್ಟಿಗೆ ಊಟಕ್ಕೆ ಕೂಡುತ್ತಾರೆ. ಕುಳಿತಾಗ ಎಲ್ಲರೂ ಮೈಯಲ್ಲಿನ ಬಟ್ಟೆಯನ್ನು ಬಿಚ್ಚಿ. ಬಿಳಿ ಗಂಧವನ್ನು ಅರ್ಧಚಂದ್ರಾಕೃತಿಯಲ್ಲಿ ಧರಿಸುತ್ತಾರೆ. ಶುಭಕಾರ್ಯದಲ್ಲಿ ಕುಂಕುಮ ಹಾಕಿದ ಗಂಧ ತೆಯುತ್ತಾರೆ. ಅಶುಭ ದಿನಗಳಲ್ಲಿ ಬಿಳಿ ಗಂಧವನ್ನು ತೆಯುತ್ತಾರೆ. ಗಂಧವನ್ನು ಮಧ್ಯದ ಬೆರಳು ಮತ್ತು ಉಂಗುರ ಬೆರಳುಗಳಿಂದ ಕೂಡಿ ಹಣೆಗೆ ಅರ್ಧಚಂದ್ರಾಕೃತಿಯಲ್ಲಿ ಧರಿಸುವ ಪದ್ಧತಿ ತೀರ ಸಾಮಾನ್ಯವಾಗಿ ಕಾಣಬಹುದು. ಯಾವುದೇ ಸಮಾರಂಭಗಳಲ್ಲಿ ಊಟಕ್ಕೆ ಕೂತರೆ ಮೊದಲಿಗೆ ಎರಡು ತುತ್ತು ಅನ್ನ ಉಂಡಮೇಲೆಯೇ ನಂತರ ಸಿಹಿ ಊಟ ಮಾಡುವ ಪದ್ಧತಿ ಇದೆ.

ಹೀಗೆ ಆಚಾರಸ್ವಾಮಿಯ ಮೂಲಕ ಈ ಕಾರ್ಯಕ್ರಮಗಳು ನಡೆಯುತ್ತವೆ ಹಾಗೆ ಮುಂದುವರೆದು ತಿಂಗಳ ತಿಥಿ, ವರ್ಷದ ತಿಥಿ ಹಾಗೂ ಪ್ರತಿ ವರ್ಷ ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ. ಈ ರೀತಿಯಾಗಿ ಸತ್ತ ವ್ಯಕ್ತಿಗೆ ಅಂತ್ಯಕ್ರಿಯೆ (ಸೂತಕ) ಯಲ್ಲಿ ಹಲವಾರು ಆಚರಣೆ ನಂಬಿಕೆಗಳನ್ನು ಅವರ ಆಚರಣೆಯಲ್ಲಿ ಕಾಣಬಹುದು. ಇತರ ಸಮುದಾಯದವರಿಗಿಂತ ವಿಶಿಷ್ಟವಾದ ಆಚರಣೆ ಮಾಡಿದರೂ ವೈಧಿಕಾಚಾರಣೆಯಿಂದ ದೂರ ಉಳಿದಿಲ್ಲ ಎಂದು ತಿಳಿದುಬರುತ್ತದೆ. ಇನ್ನು ಅನೇಕ ಆಚರಣೆಗಳು ಈ ಪಾಂಚಾಳರಲ್ಲಿ ಕಾಣಬಹುದು.

೫) ಇತರೆ

- ಸತ್ತ ವ್ಯಕ್ತಿಯ ಮನೆಯ ಸ್ತ್ರೀಯರು ಹನ್ನೊಂದನೇಯ ದಿನದವರೆಗೂ ಕುಂಕುಮ ಹಚ್ಚಿಕೊಳ್ಳುವುದಿಲ್ಲ ದೇವರ ಪೂಜೆ ಮಾಡುವಂತಿಲ್ಲ. ಆಗ ಅಪಶಕುನದ ಸಂಕೇತ.
- ಸತ್ತ ವ್ಯಕ್ತಿಯ ಮಗ ಅಥವಾ ಸಂಬಂಧಿಕರು ತಲೆ ಬೋಳಿಸುತ್ತಾರೆ (ಕಿಚ್ಚಹಿಡಿದವರು).
- ಸ್ತ್ರೀಯರಿಗೆ ಪುನಃ ವಿವಾಹವಾಗುವಂತಿಲ್ಲ ಚಿಕ್ಕವಯಸ್ಸಿನಲ್ಲಿ ವಿಧುವೆಯಾದರೂ ಮರುಮದುವೆಗೆ ಅವಕಾಶವಿಲ್ಲ ಆದರೆ ಗಂಡಸರಿಗೆ ಸಂಪ್ರದಾಯಿಕವಾಗಿ ಇಲ್ಲವಾದರೂ ಮರುಮದುವೆಗೆ ಅವಕಾಶ ಇದೆ.
- ಮಕ್ಕಳು ಹೆಚ್ಚು ಅಳುತ್ತಿದ್ದರೆ ಉಪ್ಪನ್ನು ಇಳೆದೆಗೆದು (ನಿವಾಳಿ) ಒಲೆಯಲ್ಲಿ ಹಾಕುತ್ತಾರೆ. ಕಾರಣ ಯಾರೋ ಕಣ್ಣು ಬಿಟ್ಟಿದ್ದಾರೆಂದು ಕಸಬರಿಗೆಯಿಂದಲೂ ಇಳೆದೆಗೆಯುತ್ತಾರೆ.
- ಹೊಟ್ಟೆಬಾದಿಸಿವಾಗ ಮನೆಯಲ್ಲಿ ರಂಜು (ಕಾಲ್ದುಳಿ) ಹಾಕಿದರೆ ಹೊಟ್ಟೆನೋವು ಕಡಿಮೆಯಾಗುತ್ತದೆಂಬ ನಂಬಿಕೆ ಇದೆ.

- ಒಬ್ಬ ವ್ಯಕ್ತಿ ಚಪ್ಪಲಿಯಿಂದ ಹೊಡೆಸಿಕೊಂಡರೆ ಆತ ಯಾವುದೇ ಶುಭ ಅಶುಭ ಕಾರ್ಯಕ್ರಮದಲ್ಲಿ ಭಾಗವಹಿಸುವಂತಿಲ್ಲ. ಚಪ್ಪಲಿಯಿಂದ ಹೊಡಿಸಿಕೊಂಡವರಿಗೆ ಹೆಣ್ಣು ಕೊಡುವುದಿಲ್ಲ. ಆಚಾರಿಸ್ವಾಮಿಗಳ ಮುಖಾಂತರ ಶುದ್ಧಕಾರ್ಯ ನಡೆಯಬೇಕು.
- ಪಾಂಚಾಳರು ಪೂರ್ವ ದಕ್ಷಿಣ ಮುಖವಾಗಿ ಬಾಗಿಲು ಇಟ್ಟರೆ ಒಳ್ಳೆಯದು ಎಂಬ ನಂಬಿಕೆ ಇವರಲ್ಲಿದೆ.
- ಬಾಲ್ಯ ವಿವಾಹ ಇತ್ತಾದರೂ ಇತ್ತೀಚಿನ ದಿನಗಳಲ್ಲಿ ಸಂಪೂರ್ಣ ಕಳೆದುಹೋಗಿದೆ. ಬಹುಪತ್ನಿತ್ವ ಈ ಸಮಾಜದಲ್ಲಿ ಪ್ರಚಲಿತವಿತ್ತು.
- ಪಕ್ಕ ಶಾಖಾಹಾರವನ್ನು ಈ ಪಾಂಚಾಳರು ಉಪಯೋಗಿಸುತ್ತಾರೆ. ಮದ್ಯ, ಮಾಂಸದಿಂದ ದೂರವೇ ಇರುತ್ತಾರೆ.
- ಮನೆಯ ಮುಂದೆ ಬಾಳೆಗಿಡ ಬೆಳಸುವುದಿಲ್ಲ ಏಕೆಂದರೆ ಆ ಕದಳಿ ಗಿಡಿ ನಾ ಬಾಳ್ಯೆ ನೀ ಬಾಳ್ಯೆ ಎಂದು ಹೇಳುತ್ತದೆಯಂತೆ ಅದಿದ್ದರೆ ಮನೆಯ ಪ್ರಗತಿ ಹೊಂದುವುದಿಲ್ಲ ಎಂಬ ನಂಬಿಕೆ ಇದೆ.
- ಗೋವುಗಳು ದೈವಕ್ಕೆ ಸಮಾನವಾಗಿರುತ್ತವೆ
- ಕೆಲವು ಭಾಗದಲ್ಲಿ ಸ್ತ್ರೀಯರು ಕಚ್ಚೆ ಹಾಕುತ್ತಾರೆ. ಪುರುಷರು ದೋತರ ಅಂಗಿ ಸಾಮಾನ್ಯವಾಗಿ ಕಾಣಬಹುದು.
- ಮಾಟ ಮಂತ್ರಗಳಲ್ಲಿ ದೇವ ದೆವ್ವಗಳಲ್ಲಿ ಅಚಲ ನಂಬಿಕೆ ಇದ್ದರೂ ಹೋಮಹವನಗಳಲ್ಲಿ ಪ್ರಾಣಿಗಳನ್ನು ಬಲಿಕೊಡುವುದಿಲ್ಲ.

ಹೀಗೆ ಒಟ್ಟಾರೆಯಾಗಿ ಪಾಂಚಾಳರು ಮನುಷ್ಯ ಕೇಂದ್ರಿತ ಆಚರಣೆಗಳು ಮತ್ತು ನಂಬಿಕೆಗಳನ್ನು ಆಚರಿಸುತ್ತಾ ಬಂದಿದ್ದಾರೆ. ಈ ಎಲ್ಲಾ ಆಚರಣೆ ನಂಬಿಕೆಗಳು ಬದಲಾದ ಸಮಾಜಕ್ಕೆ ಹೊಂದಿಕೊಳ್ಳುವುದಕ್ಕೆ ಹೆಣಗುತ್ತಲೇ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಪಾಲಿಸುತ್ತಿರುವುದು ಅವರ ಸಂಸ್ಕೃತಿಗೆ ಹಿಡಿದ ಕನ್ನಡಿ. ಆದರೂ ಆಧುನಿಕ ಯುದ್ಧ ಹೊಳಪಿನಲ್ಲಿ ಈ ಸಂಸ್ಕೃತಿಯಮೇಲೆ ಬಿದ್ದು ಮಬ್ಬುಗತ್ತಲು ಆವರಿಸುವುದಕ್ಕೆ ದಾರಿಯಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಇವರ ನಂಬಿಕೆಗಳು, ಆಚರಣೆಗಳು ಹೊಸ ಹೊಸ ಶೈಲಿಯ ಜೀವನಕ್ಕೆ ಹೊಂದಿಕೊಳ್ಳ ತೊಡಗಿದ್ದಾರೆ. ಕಾರಣ ಕಾಲಬದಲಾದಂತೆ ಮುಂಚಿನಂತ ಪದ್ಧತಿಗಳು ಸಂಪ್ರದಾಯಗಳು ಈಗ ಆಚರಿಸುವುದು ಕಡಿಮೆ. ಆಡಂಬರದ ಆಚರಣೆಯನ್ನು ಇಂದು ದೂರ ತಳ್ಳಿ ಬಹಳ ಸಾಮಾನ್ಯವಾದ ರೀತಿಯಲ್ಲಿ ಆಚರಿಸುತ್ತಾ ತಮ್ಮ ಬದುಕಿನ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಹೀಗೆ ಮನುಷ್ಯ ಕೇಂದ್ರಿತ ಆಚರಣೆಗಳನ್ನು ಹುಟ್ಟಿನಿಂದ ಸಾವು, ಸಾವಿನಾಚೆಗಿನ ಆಚರಣೆಗಳನ್ನು ಈ ಪಾಂಚಾಳರಲ್ಲಿ ಕಾಣಬಹುದು.

ಆ) ನಿಸರ್ಗ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಭಾರತವರ್ಷ ಆಚರಣೆ, ಸಂಪ್ರದಾಯ, ನಂಬಿಕೆಗಳಿಗೆ ಈ ನೆಲೆ ಮಾನವರಿಗೆ ತಾಯಿಬೇರಿದ್ದಂತೆ. ಇವುಗಳಲ್ಲಿದೆ ಬದುಕುವುದು ಸುಲಭವಾದುದೇನಲ್ಲ. ಈ ನೆಲದ ಸಂಸ್ಕೃತಿಯೇ ಹಾಗೆ ಉಪವಾಸ ಇದ್ದಾದರೂ ಸಂಪ್ರದಾಯಗಳನ್ನು ಪಾಲಿಸುವ ಅಂತಹ ಔನ್ನತಿಯಲ್ಲಿ ಬಂದಂತ ಹಿಂದೂ ಸಂಸ್ಕೃತಿಯವರು ಪ್ರಪಂಚದಲ್ಲಿ ಎಲ್ಲೂ ಮಾಡಿದನ್ನು. ಆಚರಿಸಲಾರದ ನಂಬಿಕೆಗಳನ್ನು ಈ ಜನರು ಮೊದಲಿಸಿಂದಲೂ ಮೈಗೂಡಿಸಿಕೊಂಡಿದ್ದಾರೆ. ಅದರಲ್ಲೂ ಈ ಪ್ರಕೃತಿ ಆರಾಧನೆ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಕೃತಿಯ ಮುಂದೆ ಮಾನವ ಕುಬ್ಜ ಎಂಬ ಮಾತು ಸಾವಿರಕ್ಕೆ ಸಾವಿರ ಸತ್ಯ. ಪ್ರಕೃತಿಯನ್ನು ಬಿಟ್ಟು ಯಾರೂ ಬದುಕಲಿಕ್ಕೆ ಸಾಧ್ಯವಿಲ್ಲ. ಸೆಡ್ಡು ಹೊಡೆಯುವ ಶಕ್ತಿಯಂತೂ ಸಾಧ್ಯವಿಲ್ಲದ ಮಾತು. ನಾವು ಎಂತಹ ಯುಗದಲ್ಲಿಯೂ ಎಂತಹ ಅತ್ಯಾಧುನಿಕ ವೈಜ್ಞಾನಿಕವಾಗಿ ಮುಂದೆ

ನಾಪುಗಾಲು ಹಾಕಿದರೂ ಆ ಶಕ್ತಿಯ ಮುಂದೆ ಬೆಳೆಯಲಾರೆವು. ಏನೇ ಕಂಡು ಹಿಡಿದು ಸಾಧನೆಯನ್ನು ಮಾಡಿದ್ದರೂ ಅದು ಪ್ರಕೃತಿಗೆ ಹುಲ್ಲು ಕಡ್ಡಿಗೆ ಸಮವಾಗಲಾರವೇನೋ. ಶತ ಶತಮಾನದವರೆಗೂ ನಾವು ನಿರ್ಮಿಸಿಕೊಂಡ ಅವಶ್ಯಕತೆಗಳನ್ನು ಕ್ಷಣ ಮಾತ್ರದಲ್ಲಿ ನಾಶ ಮಾಡುವ ಶಕ್ತಿ ಇದೆ ಎಂಬ ಮಾತನ್ನು ಯಾರು ಅಲ್ಲಗಳೆಯಲಾರರು. ಅಂತಹದ್ದರಲ್ಲಿ ನಿಸರ್ಗವನ್ನು ಮೆಟ್ಟಿನಿಲ್ಲಲು ಸಾಧ್ಯವಿಲ್ಲದ ಮಾತು. ಪ್ರಕೃತಿ ಹೇಳುತ್ತದೆಯಂತೆ ಎಲೇ ಮಾನವ ನಾನು ಒಂದು ಅಗಾಧಶಕ್ತಿ, ನನ್ನನ್ನು ಎದುರು ಹಾಕಿಕೊಳ್ಳಬೇಡ ನನಗೆ ಸಮತೋಲನವನ್ನು ಕಾಪಾಡಿಕೊಂಡು ಹೋಗುವುದು ಗೊತ್ತಿದೆ. ಒಂದು ವರ್ಷ ಬರಬಂದಾಗ ಮುಂದಿನ ಸಾರಿ ಕಡಿಮೆಯಾದುದನ್ನು ತುಂಬುತ್ತೇನೆ. ನನಗೆ ಸರಿಸಮಾನಾರು? ನೀನು ಬರೀ ಒಂದು ನೂರು ವರ್ಷ ಬದುಕಿರಬಹುದು ನಾನು ಅಮರ. ಚಿರಂಜೀವಿ ಎಚ್ಚರವಾಗಿರು ... ಮಾತನ್ನು ತನ್ನ ನಿಯಮಗಳಿಂದ ಹೇಳುತ್ತದೆಯಂತೆ ಎಂದು ವರವಿಯ ಶ್ರೀ ಶ್ರೀನಾಚಾರ ... ಭಾವುಕತೆಯಿಂದ, ಭಕ್ತಿಯಿಂದ ಹೇಳುತ್ತಾರೆ.

ಈ ಕಾರಣಗಳಿಂದ ಪ್ರಕೃತಿಯನ್ನು ಹಿಂದೂ ಧರ್ಮದವರು ಮತ್ತು ಇತರ ಧರ್ಮದವರು ನಿಸರ್ಗವನ್ನು ಆರಾಧಿಸುತ್ತಾ, ಪೂಜಿಸಿ ಅದನ್ನು ನೋಡಿ ಸಂತೋಷ ಪಡುತ್ತಾ ಬಂದಿದ್ದಾರೆ. ಭಾರತದಲ್ಲಿ ಈ ಪ್ರಕೃತಿಯನ್ನು ಒಂದ ಶಕ್ತಿಯಾಗಿ ದೇವಾನು ದೇವತೆಗಳಾಗಿ ಪೂಜಿಸುತ್ತ ಬಂದವರು ಮನುಷ್ಯ ಹುಟ್ಟಿನಿಂದ ಇಲ್ಲಿಯವರೆಗೂ ಮುಂದೆ ಕೂಡ ನಿಸರ್ಗವನ್ನು ಪೂಜಿಸುತ್ತಾರೆ. ಧರೆಯ ಮಡಿಲಲ್ಲಿ ಗಂಗೆ, ಹೂ, ಮರ ಬಳ್ಳಿಗಿಡಗಳು, ಸೂರ್ಯ ಚಂದ್ರಾದಿ ನಕ್ಷತ್ರಗಳು ಅನಾದಿ ಕಾಲದಿಂದಲೂ ಆರಾಧಿಸುವ ಸಂಪ್ರದಾಯವನ್ನು ಜನರು ಬೆಳೆಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಜಾತಿ, ವರ್ಗ, ಧರ್ಮಗಳು ರೂಢಿಸಿಕೊಂಡು ಬಂದಿದ್ದಾರೆ. ಅಂತಹವರಲ್ಲಿ ಈ ಪಾಂಚಾಳರು ಪ್ರಮುಖವಾಗಿ ಕಂಡುಬರುತ್ತಾರೆ. ಈ ಪಾಂಚಾಳರೂ ಕೂಡ ಪ್ರಕೃತಿಯ ಆರಾಧಕರು ಮತ್ತು ಪ್ರಕೃತಿಯ ಅಂಗಗಳನ್ನು ಪೂಜ್ಯ ಭಾವನೆಯಿಂದ ನೋಡುತ್ತಾ ಬಂದವರಾಗಿದ್ದಾರೆ.

ನಿಸರ್ಗದಲ್ಲಿ ಬೆಳಗುವ ದೇವತೆಗಳಾದ ಸೂರ್ಯ, ಚಂದ್ರ, ನಕ್ಷತ್ರಗಳು, ಭೂಮಿಯನ್ನು ಗ್ರಹಗಳೆಂದು ಭಾವಿಸದೇ ದೇವರ ರೂಪದಲ್ಲಿ ಕಂಡುಕೊಂಡಿದ್ದಾರೆ. ಬೆಳಿಗ್ಗೆ ಸ್ನಾನಾದಿಗಳನ್ನು ಮುಗಿಸಿ ಪೂಜೆ ಮಾಡುವಾಗ ಮನೆಯಲ್ಲಿರುವ ದೇವರನ್ನು ಪೂಜಿಸುತ್ತಾ ಬಾಗಿಲಗಳನ್ನು ಪೂಜಿಸುತ್ತಾ ಹೊರ ಬಂದು ಅಡಿಗಲ್ಲು, ಅಡಿಬಡ್ಡಿಯನ್ನು, ಕುಲುಮೆಯನ್ನು ಪೂಜಿಸುತ್ತ ನಂತರ ಸೂರ್ಯನನ್ನು ನೀರಿನಿಂದ ಚುಂಬಿಸಿ ಉಂಗರ ಬಳ್ಳಿನಿಂದ ಗಂಧವನ್ನು ಸಿಂಪಡಿಸಿ ಊರಿನ ... ಬೆಳಗುತ್ತಾರೆ. ಬೆಳಗುವಾಗ ಪ್ರತಿದಿನ ಲೋಕವನ್ನು ಬೆಳಕು ನೀಡುವ ನೀನು ನಮ್ಮ ಜೀವನವನ್ನು ಬೆಳಕಾಗಿಸು ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಸೂರ್ಯೋದಯದಿಂದಲೇ ತಮ್ಮದಿನ ನಿತ್ಯದ ಬದುಕನ್ನು ಪ್ರಾರಂಭಿಸುತ್ತಾರೆ. ಅವನನ್ನು ಅತ್ಯಂತ ಪೂಜ್ಯತೆಯಿಂದ ಕಾಣುತ್ತಾರೆ. ಅದೇ ರೀತಿಯೂ ಕೂಡ ಚಂದ್ರನನ್ನು ರಾತ್ರಿಯಲ್ಲಿ ಪೂಜೆ ಮಾಡುವಾಗ ಅವನನ್ನು ಪೂಜಿಸಿ ಚಂದ್ರನ ಅಂದವನ್ನು ಮತ್ತು ನಕ್ಷತ್ರಗಳನ್ನು ಮಕ್ಕಳಿಗೆ ಆಡವಾಡುವ ಗೊಂಬೆಗಳಾಗಿರುತ್ತವೆ. ಈ ನಕ್ಷತ್ರಗಳು ದೇವತೆಗಳೆಂದು ಕೂಡ ಹಾಗೂ ನಮ್ಮ ಹಿರಿಯರು ಮರಣದ ನಂತರ ಅವರ ಆತ್ಮಗಳು ಮೇಲಕ್ಕೆ ಹೋಗಿ ನಕ್ಷತ್ರಗಳಾಗುತ್ತವೆಂಬ ಕಲ್ಪನೆಯೂ ಇದೆ. ನಕ್ಷತ್ರಗಳಲ್ಲಿ ನಮ್ಮ ಹಿರಿಯರು ಇದ್ದಾರೆ ಅದಕ್ಕ ಅವರನ್ನು ಪೂಜಿಸಬೇಕೆಂಬ ಪರಿಕಲ್ಪನೆಯೂ ಬೆಳದುಕೊಂಡು ಬಂದಿದೆ.

ಭೂಮಿಯು ನಮ್ಮ ತಾಯಿ. ಆಕೆಯಿಂದಲೇ ಜಗತ್ತಿನ ಎಲ್ಲರೂ ಬದುಕಿದ್ದಾರೆ. ಆಕೆ ಉಟ್ಟಿರುವ ಸೀರೆಯಿಂದ ಕಣ್ಣುಗಳಿಗೆ ತಂಗೊಳಿಸುತ್ತಾ ಇದ್ದಾಳೆ. ಹಸಿರು ಎಂಬುದು ಮುತ್ತೈದೆಯ ಸಂಕೇತವಾಗಿದೆ. ಒಂದು ಮಗುವಿಗೆ ತಾಯಿ ಇದ್ದಂತೆ ಧರೆಯ ಮೇಲಿರುವ ಜನರೆಗೆಲ್ಲಾ ಆಕೆಯೇ ತಾಯಿ. ಆಕೆ ನಮ್ಮ ಬದುಕಿನ ಕಷ್ಟ ಸುಖಗಳನ್ನು ಅನುಭವಿಸಿ ತನ್ನ ಉಡಿಯಲ್ಲಿ ಹಾಕಿ ಕಾಪಾಡುತ್ತಾಳೆಂಬ ನಂಬಿಕೆಗಳು ಈಕೆಯಿಂದಲೇ ಬದುಕಿನ ಆಗು ಹೋಗುಗಳು ನಡೆಯುತ್ತವೆ ಈಕೆಯನ್ನು ಸಂತೃಪ್ತಿಗೊಳಿಸಲು ಕೆಲವೊಂದು ಸಾರಿ ಭೂಮಿ ಪೂಜೆಯನ್ನುಮಾಡುತ್ತಾರೆ. ಕೆಲವು ಸಾರಿ ಆಕೆಗೆ ಹರಕೆಯ ಹೆಸರಿನಲ್ಲಿ ನೈವೇದ್ಯಮಾಡಿ ಶಾಂತಗೊಳಿಸುತ್ತಾರೆ. ಭೂಮಿತಾಯಿ ಮುನಿದು ಕೊಂಡರೆ

ಶಾಂತಗೊಳಿಸಲು ಸಾಧ್ಯವೆ ಇಲ್ಲ ಅದಕ್ಕಾಗಿ ಭೂಮಿಯನ್ನು ದೇವತೆಯೆಂದು ಆರಾಧಿಸುತ್ತಾರೆ.

ಮಾನವ ಪ್ರಕೃತಿಯಲ್ಲಿರುವ ಶಕ್ತಿಯನ್ನು ಕಂಡುಕೊಂಡ ಮೇಲೆ ಪ್ರಕೃತಿಯನ್ನು ದೇವರೆಂದು ಆರಾಧಿಸುತ್ತ ಬಂದರು. ಪ್ರಕೃತಿ ಆರಾಧನೆ ವ್ಯವಸ್ಥೆ ಇಂದು ಮುಂದುವರೆದುಕೊಂಡು ಬಂದಿದೆ. ಅನೇಕ ಗಿಡ-ಮರ ಹೂ-ಪಶುಪಕ್ಷಿಗಳನ್ನು ಮುಂತಾದವುಗಳನ್ನು ಪೂಜಿಸುವುದು ಪಾಂಚಾಳರಲ್ಲಿ ಕಂಡುಬರುತ್ತದೆ. ಮುಖ್ಯವಾಗಿ 'ಬನ್ನಿಮರ'ವನ್ನು 'ಬನ್ನಿಮಹಾಂಕಾಳಿ' ಎಂದು ಪೂಜಿಸುತ್ತಾರೆ. ಇವರಿಗೆ ಅತ್ಯಂತ ಶ್ರೇಷ್ಠವಾದ ಪತ್ರಿಗಳಲ್ಲಿ ಬನ್ನಿ ಪತ್ರಿಯೇ ಮುಖ್ಯವಾಗಿ ಪೂಜೆಗೆ ಬಳಸುತ್ತಾರೆ. ಇವರು ಪೂಜಿಸುವ ವೃತ್ತಿ ಸಾಮಾಗ್ರಿಗಳಿಗೆ, ದೇವರುಗಳಿಗೆ ಇತ್ಯಾದಿ ಎಲ್ಲಾ ಪೂಜೆಗೂ ಈ ಬನ್ನಿ ಪತ್ರಿಯೇ ಲೇಸೆಂಬ ಅಭಿಪ್ರಾಯ ಗಾಢವಾಗಿ ಬೆಳೆದುಕೊಂಡು ಬಂದಿದೆ. ಪ್ರತಿದಿನದ ಪೂಜೆಗೆ ಈಪತ್ರಿಯನ್ನು ಮುಡಿಸುತ್ತಾರೆ. ಮಹಾಭಾರತದಲ್ಲಿ ಪಾಂಡವರು ವನವಾಸಕ್ಕೆ ಹೋಗುವಾಗ ಬನ್ನಿಮರದಲ್ಲಿಯೇ ಆಯುಧಗಳನ್ನು ಇಟ್ಟುಹೋಗಿದ್ದರು. ಮತ್ತು ವನವಾಸದಿಂದ ಹಿಂದಿರುಗಿ ಬರುವಾಗ ಆಯುಧಗಳನ್ನು ಪೂಜಿಸಿ ವಿಜಯದಶಮಿಯ ದಿನ ಬನ್ನಿ ಮುಡಿದು ಬಂದಿರುವುದು ಆ ಮರದಿಂದಲೇ. ಆ ಮಲವನ್ನು ಪಾಂಚಾಳರು 'ಕಾಳಿ' ಎಂಬ ದೃಷ್ಟಿಯಿಂದ ಪೂಜಿಸುತ್ತಾ ಬಂದಿದ್ದಾರೆ. 'ಪಾಂಡವರು ವನವಾಸದಲ್ಲಿ ಊಟ ಮಾಡಿದ್ದು ಈ ಬನ್ನಿಎಲೆಯಲ್ಲಿಯೇ' ಎಂದು ಮೇಡ್ಲೇರಿಯ ಅಪ್ಪಾಜಪ್ಪಚಾರಿಯವರು ತಿಳಿಸುತ್ತಾರೆ.

ಪಾಂಚಾಳರು ವಿಜಯದಶಮಿಯ ದಿನ ಬನ್ನಿಮರಕ್ಕೆ ಹೋಗಿ ಮರದ ಬನ್ನಿಪತ್ರಿಯನ್ನು ತಂದು ಅದನ್ನು ಪೂಜಿಸಿ ಕಾಳಮ್ಮನಿಗೆ ಏರಿಸಿದ ಮೇಲೆ ಉಳಿದ ದೇವರಿಗೆ ಏರಿಸಿ ನಂತರ ಜನರಿಗೆ ಬನ್ನಿಕೊಡುವ ಸಂಪ್ರದಾಯವಿದೆ. ಈ ವಿಜಯದಶಮಿಯಲ್ಲಿ ಒಂಬತ್ತು ದಿನ ಪ್ರತಿದಿನ ಮಹಿಳೆಯರು ನಸುಕಿನಲ್ಲಿಯೇ ಬನ್ನಿಮರವನ್ನು ಪೂಜೆಮಾಡುತ್ತಾರೆ. ಪ್ರತಿ ಮನೆಯಲ್ಲಿ ದೇವಿಯ ಪುರಾಣವನ್ನು ಓದುತ್ತಾರೆ. ಆಯುಧ ಪೂಜೆಯ ದಿನ ತಮ್ಮ ಕಸುಬಿನ ಆಯುಧಗಳನ್ನು ಪೂಜಿಸಿ ಅವುಗಳಿಗೆ ಕುಂಬಳಕಾಯಿಯನ್ನು ಬಲಿಕೊಡುತ್ತಾರೆ. ಕುಂಬಳ ಕಾಯಿಯನ್ನು ಕೂಡ ಅತ್ಯಂತ ಶ್ರೇಷ್ಠವಾಗಿ ಕಾಣುತ್ತಾರೆ. ಬನ್ನಿಮರವನ್ನು ಕುಲದೇತೆಯನ್ನಾಗಿ ಸ್ವೀಕರಿಸಿರುವ ಪಾಂಚಾಳರು ಅದರ ಕಟ್ಟಿಗೆಯನ್ನು ಒಲೆಗೆ ಹಚ್ಚುವುದಿಲ್ಲ. ಮತ್ತು ಅದರಿಂದ ಈ ಮರ ಮುಟ್ಟಿನ ಕೆಲಸವನ್ನು ಮಾಡುವುದಿಲ್ಲ. ಅದಿರಲಿ ಅದನ್ನು ಕಾಲಿನಿಂದ ತುಳಿಯುವುದಿಲ್ಲ. ಅಷ್ಟು ಪವಿತ್ರವಾದ ವಸ್ತುವೆಂದು ಭಾವಿಸಿದ್ದಾರೆ. ಸಾಮಾನ್ಯವಾಗಿ ಬಿಲ್ವಪತ್ರಿಗಿಂತ ಬನ್ನಿಪತ್ರಿಯೇ ಶ್ರೇಷ್ಠ. ಬಿಲ್ವಪತ್ರಿ ಅದು ಬ್ರಹ್ಮ ವಿಷ್ಣು ಮಹೇಶ್ವರ ಈ ಮೂರು ದೇವತೆಗಳ ಸಂಕೇತ ಬನ್ನಿ ಪತ್ರಿ ಎಲ್ಲ ದೇವರ ಸಂಕೇತವೆಂದು ತಿಳಿದಿದ್ದಾರೆ.

ಕಣಗಿಲೆ ಹೂವು ಇದನ್ನು ಬಟ್ಟಲು ಹೂವು ಎಂತಲೂ ಕರೆಯುತ್ತಾರೆ. ಕಾಳಿಗೆ ಇದು ಅತ್ಯಂತ ಪ್ರಿಯವಾದ ಹೂವು. ಇದನ್ನು ಯಾರು ಮುಡಿದು ಕೊಳ್ಳುವುದಿಲ್ಲ. ಇದರ ಜೊತೆಗೆ ಮಲ್ಲಿಗೆ, ದಾಸವಾಳ, ಸೇವಂತಿಗೆ, ಚಂಡಿಹೂವು ಇತ್ಯಾದಿಗಳ ಮೂಲಕ ತಮ್ಮ ದೇವರಿಗೆ ಅಲಂಕರಿಸಿದರೆ ಅವರು ಅತ್ಯಂತ ಶಾಂತಳಾಗುತ್ತಾಳೆಂದು ಹೇಳುತ್ತಾರೆ. ಕಸ ಹೊಡೆಯಲು ಮನೆಯ ಹೊರಗಡೆ ಇಚಲ ಕಸಬರಿಗೆಯಿಂದ ಅಡಿಗೆ ಮನೆ ಮತ್ತು ದೇವರ ಮನೆಗೆ ಹುಲ್ಲಿನ ಕಸಬರಿಗಿಯನ್ನು ಬಳಸುತ್ತಾರೆ. ಇಚಲ ಬುಟ್ಟಿಯನ್ನು ಅಪ್ಪಿ ತಪ್ಪಿ ಒಳಗಡೆ ಹೊಯ್ಯುವುದಿಲ್ಲ. ದೇವರ ಕೋಣೆಯನ್ನು ಸ್ವಚ್ಚಗೊಳಿಸಲು ಪ್ರತ್ಯೇಕವಾದ ಹುಲ್ಲಿನ ಕಸಬರಿಗೆ ಇಲ್ಲವಾದರೆ ಅರಬಿ (ಅರಿವೆ) ಯಿಂದ ಸ್ವಚ್ಚಮಾಡುತ್ತಾರೆ. ಹುಲ್ಲು ಕೂಡ ಪ್ರಕೃತಿಯ ಮಧ್ಯದಲ್ಲಿ ಬಂದರು ಒಂದಕ್ಕೊಂದು ಸ್ಥಾನಮಾನ ಕೊಟ್ಟಿದ್ದಾರೆ.

ಪ್ರಕೃತಿಯ ಆರಾಧಕರಾದ ಪಾಂಚಾಳರು ಹಬ್ಬ ಹರಿದಿನಗಳಲ್ಲಿ ಅಥವಾ ಮುಂಜಿ ಮದುವೆಯ ಕಾರ್ಯಕ್ರಮಗಳಲ್ಲಿ ತೆಂಗಿನಗರಿ, ಮಾವಿನ ತೋರಣ, ಬಾಳೆಗಿಡಗಳಿಂದ ಅಲಂಕರಿಸುತ್ತಾರೆ. ದೀಪಾವಳಿ ಅಥವಾ ಗೌರಿ ಹುಣ್ಣಿಮೆಯ ಹಬ್ಬದಲ್ಲಿ ಹಟ್ಟ್ಯವ್ವ (ಗುರುಜಿ) ಹಾಕಬೇಕಾದರೆ ಆಕಳಿನ ಸಗಣಿಯಿಂದ ಗುರುಜಿಮಾಡಿ ಪ್ರತಿಯೊಂದು ಬಾಗಲಿಗೆ ಎರಡೆರಡರಂತೆ ತಯಾರಿಸಿ, ಹೊಲಗಳಿಗೆ ಹೋಗಿ ತರ ತರದ ಹೂವುಗಳಾದ ವನ್ನಾರ್ಕಿಹೂ, ಕೋಲಾಣಿಹೂ. ಬ್ರಹ್ಮದಂಡೆ, ಮೊಸರುಗಡುಗ, ಹಾಲುಗಡುಗ, ಎಕ್ಕಿ ಹೂವುಗಳಿಂದ ಶೃಂಗರಿಸಿ ಉದ್ದನೆಯ ಜೋಳದ ದಂಟನ್ನು

ತಂದು ಬಾಗಿಲಿಗೆ ಇಡುತ್ತಾರೆ. ಅಲ್ಲಿ ಗೋಪಿಕೃಷ್ಣನ ಹೆಜ್ಜೆಯ ಗುರುತುಗಳನ್ನು ಸುಣ್ಣದಿಂದ ಬರೆಯುತ್ತಾರೆ. ಆದಿನ ಕೃಷ್ಣ ತಮ್ಮ ಮನೆಗೆ ಬರುತ್ತಾನೆಂದು ನಂಬಿರುತ್ತಾರೆ.

ಯುಗಾದಿಯನ್ನು ಪಾಂಚಾಳರು ವಿಶೇಷವಾಗಿ ಆಚರಿಸುವುದು ಕಂಡು ಬರುತ್ತದೆ. ಕಾಳಿ ದುಷ್ಟರನ್ನು ಸಂಹರಿಸಿದ ಕಾಲ, ಹೊಸ ಸಂವತ್ಸರ, ತಿಥಿ ನಕ್ಷತ್ರಗಳ ಆರಂಭದ ಈ ದಿನವನ್ನು ಅತ್ಯಂತ ಸಂತೋಷ ಸಂಭ್ರಮವು ಸಡಗರದಿಂದ ಆಚರಿಸುತ್ತಾರೆ. ಯುಗಾದಿಯ ಅಮವಾಸ್ಯೆಯ ದಿನ ಸಮಾನ್ಯವಾಗಿ ಎಲ್ಲರೂ ಕಾಳಿಗೆ ಹೊಸ ಗೋದಿ ಅರ್ಪಿಸಲು ಹೋಗುತ್ತಾರೆ. ಮನೆಯನ್ನೆಲ್ಲ ಸಾರಿಸಿ ತಳಿರು ತೋರಣ ಬೇವಿನ ಸಪ್ಪಿನಿಂದ ಮನೆಯ ಬಾಗಿಲಿಗೆ ಕಟ್ಟುತ್ತಾರೆ. ಈ ದಿನ ಬೆಳಗ್ಗೆ ರತ್ನಪಕ್ಷಿ (ಸಂಬಾರ್‌ಗಾಗಿ)ಯ ದರ್ಶನವಾದರೆ ಶುಭದಿನವೆಂದು ಇವರ ಅಭಿಪ್ರಾಯವಾಗಿದೆ. ಅಂದು ಎಲ್ಲರೂ ಸುರ್ಯೋದಯ ವೀಕ್ಷಿಸಿ ಸೂರ್ಯನಿಗೆ ನಮಸ್ಕರಿಸಿ ವರ್ಷಕ್ಕೊಂದು ಸಾರಿಯಾದರೂ ರತ್ನಪಕ್ಷಿಯನ್ನು ನೋಡಿದರೆ ಜೀವನದ ಕಷ್ಟಗಳು ಇರುವುದಿಲ್ಲವೆಂದು ನಂಬಿದ ಕಾರಣ ಆವತ್ತು ಮೂಲೆ ಮೂಲೆಯಲ್ಲಿ ಅಡ್ಡಾಡಿ ಅಥವಾ ಹೊಲಗಳಿಗೆ ಹೋಗಿ ನೋಡುವುದು ರೂಢಿಯಾಗಿದೆ. ಈದಿನ ಬೀಸುವಕಲ್ಲು, ಒಳಕಲ್ಲು, ಒನಕೆ ತೊಳೆದು ಸುಣ್ಣ, ಉರುಮಂಜುವಿನಿಂದ ಪಟ್ಟೆ ಆಕಾರದಲ್ಲಿ ಬರೆಯುತ್ತಾರೆ. ಮಾವಿನ ತೋರಣ ಇಟ್ಟು ಎಲೆ ಅಡಿಕೆ, ಗೋದಿ, ಅಕ್ಕಿ ಹಾಕಿ ಉಡಿ ತುಂಬುತ್ತಾರೆ. ಎಲ್ಲರೂ ಬೇವಿನ ಸಪ್ಪು ಸೇರಿಸಿ ಎಣ್ಣೆಸ್ನಾನ ಮಾಡುತ್ತಾರೆ. ಇದರಿಂದ ಮೈಯಲ್ಲಿ ಚರ್ಮರೋಗ ಇದ್ದರೆ ವಾಸಿಯಾಗುತ್ತದೆ ಎಂದು ತಿಳಿದ್ದಾರೆ. ಇಂತಹ ನಂಬಿಕೆಗಳು ಯಾವುದೋ ಒಂದು ಕಾರಣಕ್ಕೆ ಇವುಗಳನ್ನು ಬಳಸುತ್ತಿರುತ್ತಾರೆ. ನಮ್ಮ ಜನಪದರೇ ಹಾಗೆ, ಪ್ರತಿಯೊಂದನ್ನು ಪ್ರಯೋಗ ಮಾಡಿಕೊಂಡು ಬಂದವರು, ಆ ನಂಬಿಕೆಗಳನ್ನು ಧಿಕ್ಕರಿಸುವ ಮನಸ್ಸು ಯಾರಿಗೂ ಬರುವುದಿಲ್ಲ. [illegible] ಮಾಡುವ ದಿನ ಬೀಸುವ ಕುಟ್ಟುವ ಕಾರ್ಯ ಮಾಡುತ್ತಾರೆ. ಅಲ್ಲಿಂದ ಐದು ದಿನಗಳವರೆಗೆ ಆ ಕೆಲಸಗಳನ್ನು ಮಾಡುವುದಿಲ್ಲ. ಈ ಆಚರಣೆಯು ಇಂದು ಸ್ವಲ್ಪ ಕಡಿಮೆಯಾಗಿದೆ ಎಂದು ಹೇಳಬಹುದು.

ಅಮಾವಾಸೆ ಮಾರನೇದಿನ ಹೊಸಗೋಧಿ ಪಾಯಸ, ಹೋಳಿಗೆ, ಕರಿಗಡಬು, ಶ್ಯಾವಿಗೆ ತಯಾರಿಸಿ ದೇವರಿಗೆ ನೈವೇದ್ಯ ಮಾಡುತ್ತಾರೆ. ಸಂಪ್ರದಾಯಸ್ಥರು ಗೋಧಿ ಹೊಲದಲ್ಲಿ ತಿರುಗುವುದನ್ನು ನಿಷೇಧಿಸುತ್ತಾರೆ. ಅಪ್ಪಿ ತಪ್ಪಿ ಗೊಧಿ ಹೊಲದಲ್ಲಿ ಸಂಚರಿಸಿದರೆ ಸ್ನಾನ ಮಾಡಿ ಕಾಳಮ್ಮನಿಗೆ ದೀಪ ಹಚ್ಚುತ್ತಾರೆ. ಗೋಧಿ ಹೊಲದಲ್ಲಿ ಬೆಳೆದ ಯಾವ ಬೇಳೆಯನ್ನು ಅವರು ಆಹಾರಕ್ಕಾಗಿ ಉಪಯೋಗಿಸುವುದಿಲ್ಲ. ಇದಕ್ಕಾಗಿ ಒಂದು ಕಥೆ ಇವರಲ್ಲಿ ಪ್ರಚಲಿತದಲ್ಲಿರುವುದು ಕಂಡುಬರುತ್ತದೆ.

ಒಂದು ದಿನ ಕಾಳಿ ಕುದುರೆಯನ್ನೇರಿ ದೈತ್ಯರನ್ನು ಸಂಹರಿಸಿ ತನ್ನ ಸ್ಥಳಕ್ಕೆ ಹೊಲದ ಮೇರೆಯಲ್ಲಿ ಹಾದು ಬರುವಾಗ ಆಕೆಯ ಕುದುರೆ ಅತ್ಯಂತ ಸುಂದರವಾಗಿ ಬೆಳೆದ ಗೋಧಿ ಪೈರಿಗೆ ಬಾಯಿ ಹಾಕುತ್ತದೆ. ಅದನ್ನು ನೋಡಿ ಸಿಟ್ಟಿಗೆದ್ದು ಕಾಳಮ್ಮ ಕುದುರೆಯ ನಾಲಿಗೆಯನ್ನೇ ಕತ್ತರಿಸುತ್ತಾಳೆ. ಅದಕ್ಕಾಗಿ ಇವರು ಆಹಾರಕ್ಕಾಗಿ ಉಪಯೋಗಿಸುವುದಿಲ್ಲ ಎಂದು ತಿಳಿದು ಬರುತ್ತದೆ. ಆದರೆ ಇದನ್ನು ಕೆಲವೇ ಜನ ಆಚರಿಸುತ್ತಾರೆ.

ನಿಸರ್ಗದಲ್ಲಿ ಹಚ್ಚ ಹಸಿರಾದ ಕರಿಕೆಯನ್ನು ಪತ್ರಿ ಎಂದು ಕೂಡ ಭಾವಿಸಿದ್ದಾರೆ. ಈ ಕರಿಕೆ ಪತ್ರಿಯನ್ನು ಗ್ರಹಣ ಹಿಡಿದಾಗ ಆಹಾರದಲ್ಲಿ ನೀರಿನಲ್ಲಿ ಹಾಕುತ್ತಾರೆ. ಇದರಲ್ಲಿ ಹಾಕಿದರೆ ಆ ಪದಾರ್ಥಗಳು ವಿಷವಾಗುವುದಿಲ್ಲ ಎಂಬ ನಂಬಿಕೆ ನಡೆದುಕೊಂಡು ಬಂದಿದೆ. ಗ್ರಹಣ ಗ್ರಹಣ ಹಿಡಿದ ಸಮಯದಿಂದ ಬಿಡುವ ಘಳಿಗೆಯವರೆಗೂ ಯಾರು ಬಾಯಲ್ಲಿ ನೀರನ್ನು ಹಾಕಿಕೊಳ್ಳುವುದಿಲ್ಲ. ಗ್ರಹಣ ಬಿಟ್ಟಮೇಲೆ ಮನೆಯಲ್ಲಿನ ನೀರನ್ನೆಲ್ಲ ಚೆಲ್ಲಿ ಹೊಸ ನೀರನ್ನು ತಂದು ಸ್ನಾನ ಮಾಡಿ ಪೂಜೆಯನ್ನು ಮಾಡಿ ಮತ್ತೆ ಆಹಾರ ತಯಾರಿಸಿಕೊಂಡು ಊಟ ಮಾಡುವ ಪದ್ಧತಿಯಂತೂ ಈ ಪಾಂಚಾಳರಲ್ಲಿ ಈಗಲೂ ಕಡ್ಡಾಯವಾಗಿ ಕಂಡುಬರುತ್ತದೆ. ಬಸಿರು ಹೆಂಗಸರನ್ನು ರೂಮಿನಲ್ಲಿ ಕೂಡಿ ಹಾಕುತ್ತಾರೆ. ಕಾರಣ ಆ ಸಂದರ್ಭದಲ್ಲಿ ಒಂದು ವೇಳೆ ಹೊರಗಡೆ ಬಂದರೆ ಮಗು ಅಂಗವಿಕಲನಾಗಿ ಹುಟ್ಟುತ್ತದೆಂಬ ನಂಬಿಕೆ ಇವರಲ್ಲಿ ಮನೆ ಮಾಡಿದೆ. ಆಕೆಯ ಕೈಲಿ ಏನನ್ನು ಕೆಲಸ ಮಾಡಿಸುವುದಿಲ್ಲ. ಕುಂತಲ್ಲೇ ಕುಂತಿರಬೇಕೆಂಬ

ನಿಯಮವನ್ನು ಪಾಲಿಸುತ್ತಾರೆ.

ಪ್ರಕೃತಿಯ ಪೂಜ್ಯರಾದ ಪಾಂಚಾಳರು ಮದುವೆ, ಉಪನಯನದಂತ ಕಾರ್ಯಕ್ರಮದಲ್ಲಿ 'ಹಸಿರುಗಂಬ ಹಾಲುಗಂಬ'ಗಳು ಅವಶ್ಯಕವಾಗಿ ಬಳಸುತ್ತಾರೆ. ಆಲದ ಮರ, ಆಲವಾಣ ಮರದ ಟೊಂಗೆಗಳನ್ನು ತಂದು ಕಂಬಗಳಿಗೆ ಕಟ್ಟುತ್ತಾರೆ. ಮಾವಿನ ತೋರಣ, ತೆಂಗಿನ ಗರಿಯನ್ನು ಇಂತಹ ಕಾರ್ಯಕ್ರಮದಲ್ಲಿ ಅವಶ್ಯಕವಾಗಿ ಬಳಸುತ್ತಾರೆ. ಬೇವಿನ ಮರ, ಆಲದ ಮರ, ಬನ್ನಿಮರಗಳು ಇವರ ಪಾಲಿಗೆ ದೇವರಿದ್ದಂತೆ ಇವುಗಳು ದಾರಿಯಲ್ಲಿ ಹೋಗುವಾಗ ಇದ್ದರೆ ಪೂಜಿಸಿಯೇ ಅಥವಾ ಕೈಮುಗಿದೋ ಮುಂದಿನ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಆ ಮರಗಳ ಕೆಳಗೆ ದುಂಡಾದ ಕಲ್ಲುಗಳಿಗೆ (ಬರ್ಮಪ್ಪ, ಒಡಕಮ್ಮ, ಆಲದಮ್ಮ) ಪೂಜೆ ಮಾಡುತ್ತಾರೆ. ಮೂರ್ತಿ ಉಪಸಕರಾದ ಇವರು ಮೊರ್ತಿಯನ್ನು ತಾವೇ ನಿರ್ಮಿಸಿ ಅದಕ್ಕೆ ಒಂದು ರೂಪ ಕೊಟ್ಟು ಪೂಜಿಸುವ ಪರಿಪಾಠ ಇಂದಿಗೂ ಕಾಣಬಹುದು.

ಪಾಂಚಾಳರು ಗೋವುಗಳ ಆರಾಧಕರೂ ಆಗಿದ್ದಾರೆ. ಗೋವು ಅತ್ಯಂತ ಶ್ರೇಷ್ಠವಾದ ಪ್ರಾಣಿ ಇವುಗಳ ಸಗಣಿಯು ಕೂಡ ಶ್ರೇಷ್ಠವಾದದ್ದು, ಸಗಣಿಯಿಂದ ನೆಲಸಾರಿಸಿ ಶುದ್ಧಮಾಡುತ್ತಾರೆ. ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಹನ್ನೊಂದನೇ ದಿನವಲ್ಲಿ ಇವರ ಅಪವಿತ್ರತೆಯನ್ನು ಕಳೆಯಲು ಆಕಳಿನ ಗೋಮಂತ್ರವನ್ನು ತಂದು ಮನೆಯನ್ನೆಲ್ಲ ಚಿಮುಕಿಸಿ ಅವರ ಮನೆಯವರಿಗೆ ಆಚಾರಸ್ವಾಮಿಗಳು ತೀರ್ಥಕೊಡುವಂತೆ ಕೊಡುತ್ತಾರೆ. ಅವರು ಅದನ್ನು ಸ್ವಾಹ ಮಾಡುತ್ತಾರೆ. ಆಗ ಪರಿಶುದ್ಧತೆಯನ್ನು ಹೊಂದುತ್ತಾರೆಂದು ನಂಬಿದವರು ಈ ಗೋಮಂತ್ರ ಸ್ವೀಕರಿಸುವುದರಿಂದ ದೇಹದಲ್ಲಿನ ರೋಗವು ವಾಸಿಯಾಗುತ್ತದೆ ಎಂಬ ಮನೋಭಾವವು ಇವರಲ್ಲಿ ಮೂಡಿ ಬಂದಿದೆ.

ತಿಥಿಯ ದಿನ ಆಕಳನ್ನು ಪೂಜೆ ಮಾಡಿ ಅದನ್ನು ಹೆಬ್ಬಾಗಿಲು ದಾಟಿಸಿ ಒಳಕರೆದು ನೈವೇದ್ಯವನ್ನು ತಿನ್ನಿಸುತ್ತಾರೆ. ಪ್ರಾಣಿಗಳು ಕೂಡ ಪಾಂಚಾಳರಿಗೆ ಆರಾಧ್ಯದೈವವಾಗಿ ಕಾಣುತ್ತವೆ. ನಾಯಿಯನ್ನು ನಾರಾಯಣನೆಂದು ಬೆಕ್ಕನ್ನು ಸಾಕುವ ಮೂಲಕ ಅವುಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಹಾಗೆ ಕಾಗೆ ಅಪಶಕುನದ ಪಕ್ಷಿಯಾದರೂ ಮನೆಯ ಮೇಲೆ ಕುಳಿತು ಕಾ ಕಾ ಎಂದು ಕೂಗಿದರೆ ಮನೆಗೆ ಯಾರೋ ಬರುತ್ತಾರೆಂಬ ಸಂಕೇತವೂ ಅಶುಭ ಸಂಕೇತವೆಂದು ಪರಿಭಾವಿಸುತ್ತಾರೆ. ಹಾಗೆಯೇ ಗೂಗಿಯು ಕೂಗಿದರೆ ಯಾರಾದರೂ ಸತ್ತಿರುತ್ತಾರೆ ಅಥವಾ ಸಾಯುತ್ತಾರೆಂಬ ನಂಬಿಕೆಯೂ ಇದೆ. ಕಾಗೆಯೂ ತಿಥಿಯ ಕೊನೆಯ ದಿನ ಹೊಳೆಯಲ್ಲಿ ಅಥವಾ ಕೆರೆಯಲ್ಲಿ ಪಿಂಡ ಬಿಟ್ಟು ಬರುವಾಗ ಅಲ್ಲಿ ಪಿಂಡವನ್ನು ಕಾಗಿಯು ಮುಟ್ಟಬೇಕಿದೆ. ಸತ್ತವರ ಆತ್ಮಕ್ಕೆ ಶಾಂತಿದೊರಕುತ್ತದೆಂದು ಮುಟ್ಟದಿದ್ದರೆ ಅವರ ಆಸೆ ಆಕಾಂಕ್ಷೆಗಳು ಪೂರ್ಣಗೊಂಡಿಲ್ಲವೆಂದು ಮತ್ತು ದೆವ್ವವಾಗಿ ಬಿಡುತ್ತಾರೆಂದು ಕೂಡ ಭಾವಿಸಿದವರು.

ಸಸ್ಯಹಾರಿಗಳಾದ ಇವರು ನಿಸರ್ಗವೇ ದೇವರು. ಈ ಪ್ರಕೃತಿಯಲ್ಲಿ ಬೆಳೆಯುವ ಫಲಪುಷ್ಪಗಳು ಶ್ರೇಷ್ಠವಾದವುಗಳಾಗಿವೆ. ಬಾಳೆಹಣ್ಣು, ಉತ್ತುತ್ತಿ, ತೆಂಗಿನಕಾಯಿ, ಬೆಳಲುಕಾಯಿಗಳು ಪೂಜೆಗೆ ಬಳಸುತ್ತಾರೆ. ಅಡಿಕೆ, ಎಲೆಗಳನ್ನು ಪೂಜೆ ಪುನಸ್ಕಾರ, ಮದುವೆ, ಉಪನಯನ ಇನ್ನಿತರ ಕಾರ್ಯಕ್ರಮಗಳಲ್ಲಿ ಇವುಗಳಿಲ್ಲದೆ ಕಾರ್ಯವೇ ಇಲ್ಲ. ಮುತ್ತೈದೆಯರಿಗೆ ಎಂಥವರಾದರೂ ಅಡಿಕೆಎಲೆ, ಕುಂಕುಮ ಕೊಟ್ಟರೆ ಸಂತೃಪ್ತಗೊಳ್ಳುತ್ತಾರೆ. ಪಾಂಚಾಳರು ಅಗ್ನಿಯ ಆರಾಧಕರೂ ಹೌದು ಅಗ್ನಿಯಿಂದಲೇ ಕುಲಕಸಬುಗಳು ಪ್ರಾರಂಭವಾಗುತ್ತವೆ. ಆ ಕಾಳಿ ಮತ್ತು ಅಗ್ನಿ ಕುಲದೇವತೆಗಳೆಂದು ತಿಳಿದಿದ್ದಾರೆ. ಇನ್ನು ಕೆರೆ, ಬಾವಿ, ನಲ್ಲಿ, ಹೊಳೆ ಇವುಗಳೆಲ್ಲ ಪಾಂಚಾಳರಿಗೆ ಗಂಗಮಾತೆಯಂತೆ. ಗಂಗಮ್ಮ ಎಂದು ಕರೆಯುವ ವಾಡಿಕೆ ಇದೆ. ಗರ್ಭಿಣಿ ಹೆಣ್ಣು ಮಗಳು ಮಗುವನ್ನು ಹೆತ್ತ ಮೇಲೆ ಹನ್ನೊಂದು ದಿನದಲ್ಲಿ ಗಂಗೆಗೆ ಹೋಗಿ ಪೂಜೆ ಮಾಡಿ ಕಂಕಣ ಕಟ್ಟಿಕೊಂಡು ಅರಿಸಿಣ, ಕುಂಕುಮ ಹಚ್ಚಿ ಅಡಿಕೆ, ಎಲೆ ಇಟ್ಟು ಗಂಗೆಗೆ ನಮಸ್ಕರಿಸಿ ಮನೆಗೆ ಹಿಂದಿರುಗುತ್ತಾರೆ. ಮತ್ತು ಹೆಣ್ಣು ಮಗು ಋತುಮತಿಯಾದಾಗ ಐದು ದಿನದಲ್ಲಿ ಆಕೆಯನ್ನು ಅರಿಸಿಣ ಹಚ್ಚಿ ಎಣ್ಣೆ ಸ್ನಾನ ಮಾಡಿಸಿ ಗಂಗೆಗೆ ಕರೆದುಕೊಂಡು ಬರುತ್ತಾರೆ. ಆಕೆಯ ಕೂಡವೇ ಗಂಗಾ ಪೂಜೆ ಮಾಡಿಸಿ ನನ್ನ ನೀರಿನಂತೆ ಪರಿಶುದ್ಧವಾದ ಜೀವನವನ್ನು ಸಾಗಿಸು ಎಂದು ಬೇಡಿಕೊಳ್ಳುವಂತೆ ಹೇಳುತ್ತಾರೆ. ಅಷ್ಟು ಪ್ರಾಮುಖ್ಯತೆಯನ್ನು

ಪಾಂಚಾಳರು ಗಂಗೆಗೆ ಋಣಿಯಾಗಿದ್ದಾರೆ. ಜೀವನದಲ್ಲಿ ಒಮ್ಮೆಯಾದರೂ ನದಿಯಲ್ಲಿ ಮುಳಗಬೇಕು ತುಂಗಾ ನದಿಯ ಕುಡಿಯಬೇಕು, 'ಗಂಗಾಸ್ನಾನ ತುಂಗಪಾನ' ಎಂಬ ಗಾದೆಯನ್ನು ಇವರು ಅನುಸರಿಸುತ್ತಾರೆ.

ವ್ಯವಸಾಯದ ಸಮಯದಲ್ಲಿ ಹೊಲವನ್ನು ಬಿತ್ತುವಾಗ ಕೂರುಗಿ ಪೂಜೆ ಮಾಡಿ ಹೊಲವನ್ನು ಎತ್ತುಗಳನ್ನು ಪೂಜಿಸುತ್ತಾರೆ. ದನಗಳನ್ನು ಸಾಕುತ್ತಾ ಅವುಗಳ ಹಾಲ್ಕರೆ ಮಾಡಿ ಅದರಿಂದ ಜೀವನ ಮಾಡುವವರೂ ಇದ್ದಾರೆ. ಆಕಳದ ತುಪ್ಪವೆಂದರೆ ಶ್ರೇಷ್ಠವೆಂದು ಭಾವಿಸಿದ್ದಾರೆ. ಹೀಗೆ ಪ್ರಕೃತಿಯ ಪ್ರತಿಯೊಂದನ್ನು ಆರಾಧಿಸುವ ಗುಣವನ್ನು ಬೆಳಸಿಕೊಂಡು ಬಂದಿದ್ದಾರೆ. ಪಾಂಚಾಳರು ನಿಸರ್ಗಕ್ಕೆ ಸಂಬಂಧಿಸಿದ ಸಂಪ್ರದಾಯಗಳನ್ನು ಇನ್ನೂ ಹಲವಾರು ರೀತಿಗಳಲ್ಲಿ ಆಚರಿಸುತ್ತಾ ಬಂದಿದ್ದಾರೆ. ಮೂಲತಃ ಭಾರತದವರು ಪ್ರಕೃತಿಯ ಆರಾಧಕರು ಪ್ರತಿಯೊಂದು ಜಾತಿ, ಮತ, ಪಂಗಡಗಳು ಪೂಜಿಸುತ್ತಾ ಬಂದಿದ್ದಾರೆ. ಅದರಂತೆಯೇ ಈ ವಿಶ್ವಕರ್ಮರೂ ನಿಸರ್ಗದ ಪ್ರಿಯರೇ. ಕೆಲವೊಂದು ನಂಬಿಕೆಗಳು ಈಗ ಮೂಡ ನಂಬಿಕೆಗಳಾಗಿ ಕಂಡರೂ ಹಿಂದೆ ಮಾಡಿಕೊಂಡು ಬಂದ ಸಂಪ್ರದಾಯಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವಂತೆ ಆ ಮರದಲ್ಲಿ ಹಾಕಿಕೊಳ್ಳುವುದು ಏನೋ ಒಂದು ರೀತಿಯ ಸುಖ ಇದೆ ಎಂದು ಭಾವಿಸಿದ್ದಾರೆ. ಅದರಂತೆ ಈ ಆಚರಣೆಗಳು ಸಂಪ್ರದಾಯಗಳು ಹಿಂದೆ ಬಂದಿನವರು ಅಂದಿಗೆ ಮಾಡಿದಂತೆ ಕೆಲವೊಂದು ಬದಲಾವಣೆಯೊಂದಿಗೆ ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಇ) ವೃತ್ತಿ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ದೇಶೀಯ ತಂತ್ರಜ್ಞಾನಗಳೆನಿಸಿದ ಬಡಿಗಿ, ಕಮ್ಮಾರಿಕೆ, ಶಿಲ್ಪ, ಕಂಚುಕೆಲಸ, ಸ್ವರ್ಣಗಾರಿಕೆ, ಕುಂಬಾರಿಕೆ, ಚಮ್ಮಾರಿಕೆ, ಕೃಷಿಕ, ಬುಟ್ಟಿ ಎಣೆಯುವವನು ಇತ್ಯಾದಿ ವೃತ್ತಿಗಳೆಲ್ಲ ವುಗಳಲ್ಲಿ ಕಸಬುಗಾರರು ಉಪಯೋಗಿಸುವ ಉಪಕರಣಗಳಿಗ ಸಂಬಂಧಿಸಿದ ದೈವ, ನಂಬಿಕೆ, ನಿಷೇಧಗಳು ಆಚರಣೆಗಳು ಕಂಡುಬರುತ್ತವೆ. ಇವರೆಲ್ಲ ಈ ವೃತ್ತಿ ಉಪಕರಣಗಳಲ್ಲಿ ದೈವಿಶಕ್ತಿಯನ್ನು ಕಾಣುತ್ತಾರೆ. ಎಲ್ಲಾ ಸಮುದಾಯಗಳಿಗೂ ತಾವು ಉಪಯೋಗಿಸುವ ಉಪಕರಣಗಳಿಗೆ ಸಂಬಂಧಿಸಿದಂತೆ ಜಾನಪದವೂ ಇರುತ್ತದೆ. ಇವರು ಆಚರಿಸುವ ನಂಬಿಕೆ, ದೈವಗಳು ಜನ ಜೀವನದಲ್ಲಿ ದಿನನಿತ್ಯದಲ್ಲಿ ಹಾಸುಹೊಕ್ಕಾಗಿವೆ. ಚಮ್ಮಾರನು ತಾನು ಉಪಯೋಗಿಸುವ ಚರ್ಮದ ದೋಣಿಯಲ್ಲಿನ ನೀರನ್ನು ಬರೀ ನೀರೆಂದು ಭಾವಿಸುವುದಿಲ್ಲ. ಚಮ್ಮಾರ ಮಾತ್ರ ಪವಿತ್ರ ಗಂಗೆಯನ್ನು ಕಾಣುತ್ತಾನೆ. ಆಕೆಯೇ ಅವನಿಗೆ ಸರ್ವಸ್ವ ಜೊತೆಗೆ ಬಳಸುವ ಉಪಕರಣಗಳು ದೈವಿ ಸಂಭೂತಿಗಳೇ.

ಅದೇ ರೀತಿ ಊರಿಗೊಬ್ಬ ಪಾಂಚಾಳರ ವೃತ್ತಿಗಳಲ್ಲಿಯೂ ನಂಬಿಕೆ, ಆಚರಣೆ, ನಿಷೇಧಗಳನ್ನು ಕಾಣಬಹುದಾಗಿದೆ. ಪಾಂಚಾಳ ಸಮುದಾಯವು ಸಮಾಜವನ್ನು ಹಲವು ರೀತಿಯಲ್ಲಿ ಭಾವಿಸಿರುತ್ತಾನೆ. ಸಮಾಜದಲ್ಲಿ ಸಾಮರಸ್ಯವನ್ನು ಹೊಂದಿರುತ್ತಾರೆ. ಅದು ಅವನಿಗೆ ಅನಿವಾರ್ಯವೂ ಹೌದು. ಸಮಾಜವನ್ನು ಬಿಟ್ಟರೆ ಅವನ ಬದುಕ್ಕೆ ತತ್ವೀರೆ ಗತಿಯಾಗುತ್ತದೆ. ಯಾರನ್ನು ಇವನು ಎದುರು ಹಾಕಿಕೊಳ್ಳುವಂತಿಲ್ಲ 'ಟೊಕ್ ಅಂದ್ರ ಅಕ್ಕವಾಡು' ಎಂಬಂತೆ ರೈತರು ಉಪಕರಣ ಮಾಡಿಸಲು ತಂದಾಗ ಇವರು ಕೆಲಸ ಮಾಡಲೇಬೇಕು ಅಕ್ಕಸಾಲಿಗಳಾಗಲಿ ಶಿಲ್ಪಿಗಳಾಗಲಿ ಇನ್ನುಳಿದ ಮೂರು ವೃತ್ತಿಯವರು ಕೊಡ್ತಿ ಅಥವಾ ಸುತ್ತಿಗೆಯಿಂದ ಬಡಿದರೆ ಮಾತ್ರ ಅವರಿಗೆ ಅನ್ನ ಇಲ್ಲವಾದರೆ ತಣ್ಣೀರು ಕುಡಿದು ಬೋರಲು ಮಲಗುವ ಪ್ರಸಂಗ ಬರಬಹುದು. ಇವರು ದಿನ ಕೆಲಸ ಮಾಡುತ್ತಿದ್ದರೂ ಆರ್ಥಿಕವಾಗಿ ಮುಂದೆ ಬಂದಿಲ್ಲ. ಅವರೇನೇ ಬೆವರಿಳಿಸಿದರೂ ಒಂದು ಗಟ್ಟಿಯಾದ ಸ್ಥಾನಗಳು ದೊರೆತಿಲ್ಲ ಅದಕ್ಕೆ 'ಮುಂಜಾನೆ ಮಾಡಿದ್ದು ಸಂಜೆಗಿಲ್ಲ ಸಂಜೆ ಮಾಡಿದ್ದು ಮುಂಜಾಗಿಲ್ಲ' ಎಂಬ ಗಾದೆಯಂತೆ ಇವರ ಬದುಕು ಸಾಗಿದೆ.

ಪಾಂಚಾಳರು ಬಳಸುವ ಉಪಕರಣಗಳೆಲ್ಲವೂ ಕಾಳಿ ದೈವವೇ ಅದನ್ನು ಶರ ಲಕ್ಷ್ಮಿಯೆಂದು ಕರೆಯುವರು. 'ಶರ' ಎಂದರೆ ದೈವ ಎಂದು ಕರೆಯುವರು ಕಾಳಮ್ಮ ದೇವತೆಯನ್ನು ಪಾಂಚಾಳರು ತಮ್ಮ ವೃತ್ತಿ ಆರಾಧ್ಯ ದೇವತೆ

ಈಕೆಯೇ ಇವರಿಗೆ ಸರ್ವಸ್ವ ಆಚರಣೆ, ನಂಬಿಕೆ, ದೈವ ಈ ಭಾಗದಲ್ಲಿ ಪಾಂಚಾಳರ ವೃತ್ತಿಗಳಿಗೆ ನಿರ್ದಿಷ್ಟ ನಂಬಿಕೆಗೆ ಸಂಬಂಧಿಸಿದ ಪದಗಳನ್ನು ಕಾಣಬಹುದು. ಈ ಪಾಂಚಾಳ ವೃತ್ತಿಯಲ್ಲಿ ಸಾಮಾನ್ಯವಾಗಿ ಒಂದೆ ತರನಾದ ನಂಬಿಕೆಗಳು ಸಮಾನವಾದರೂ ಕೆಲವೊಂದು ನಂಬಿಕೆಗಳು ಬೇರೆಯಾಗಿಯೂ ಕಂಡುಬರುತ್ತವೆ. ಉದಾ:- ಅಕ್ಕಸಾಲಿಗರು ತಮ್ಮ ಕೆಲಸ ಮಾಡುವ ಮನೆಯ ಬಾಗಿಲನ್ನು ಎತ್ತರಕ್ಕೆ ಇಟ್ಟುಕೊಳ್ಳುವುದಿಲ್ಲ ಆದರೆ ಇತರರು ಈ ನಿಯಮ ಪಾಲಿಸದಿದ್ದರೂ ನಡೆಯುತ್ತದೆ.

ಕಾಳಮ್ಮ, ಗಾಯಿತ್ರಿ, ಬ್ರಹ್ಮ ಈ ಮೂರು ದೇವತೆಗಳು ಪಾಂಚಾಳ ವೃತ್ತಿಯವರಿಗೆ ವೃತ್ತಿಯ ದೇವತೆಗಳೆಂದು ಕರೆದುಕೊಂಡಿದ್ದಾರೆ. ಪಾಂಚಾಳರು ಅಮವಾಸ್ಯೆಯ ದಿನ ವೃತ್ತಿಯನ್ನು ಮಾಡುವುದಿಲ್ಲ. ಆದರೆ ಅಕ್ಕಸಾಲಿಗಳು, ದೇವರಿಗೆ ಸಂಬಂಧಿಸಿದ ವಸ್ತುಗಳನ್ನು ಮಾಡಲು ಯಾವುದೇ ತರದ ನಿರ್ಬಂಧ ಇರುವುದಿಲ್ಲ. ಒಂದು ವಿಶಿಷ್ಟವಾದ ನಂಬಿಕೆ ಇದೆ. ಹುಸಿ ಪೆಟ್ಟು, ಕುಲುಮೆ, ಉರಿ ನಂಬಿಕೆ ನಿಷೇಧಗಳಲ್ಲಿ ಈ ತರದ ವಿಶಿಷ್ಟ ಪದಗಳಿವೆ. ಕಮ್ಮಾರರು ಕೆಲಸ ಮಾಡುವಾಗ ಸುತ್ತಿಗೆಯಿಂದ ವಸ್ತುವನ್ನು ಬಡಿಯುತ್ತಿರುವಾಗ ಏಟು ವಸ್ತುವಿಗೆ ಬೀಳದೆ ಬೇರೆ ಕಡೆ ಅಥವಾ ಅಡಿಗಲ್ಲಿಗೆ ಬಿದ್ದರೆ ಅಪಶಕುನವೆಂದು ಭಾವಿಸುತ್ತಾರೆ. ಈ ನಂಬಿಕೆ ಇದ್ದರೂ ಕೆಲವರು ಅಲ್ಲಗಳೆಯುತ್ತಾರೆ ಏಕೆಂದರೆ ಕಮ್ಮಾರ ಕೈ ಸುತ್ತಿಗೆಯಿಂದ ಪಟ ಪಟಪಟ ಎಂದು ಬಡಿಯುವಾಗ ಒಂದು ಏಟು ವಸ್ತುವಿಗೆ ಇನ್ನೊಂದು ಏಟು ಅಡಿಗಲ್ಲಿಗೆ ಬಡಿಯುತ್ತಾನೆ. ಒಂದು ಪೆಟ್ಟು ಕೊಟ್ಟ ಮೇಲೆ ಮತ್ತೆಲ್ಲಿ ಬಡಿಬೇಕೆಂಬುದನ್ನು ಕ್ಷಣಾರ್ಧದಲ್ಲಿ ತಿಳಿದು ಬೀಳಬೇಕಾದ ಜಾಗಕ್ಕೆ ಪೆಟ್ಟು ಕೊಡುತ್ತಾನೆ. ಆ ಕಾರಣಕ್ಕಾಗಿ ಹುಸಿ ಪೆಟ್ಟುಗಳು ಸಹಜವಾಗಿರುತ್ತವೆ. ಈ ಮಾತು ಬರೀ ಕಮ್ಮಾರ ಮಾತ್ರವಲ್ಲ ಕಂಚುಗಾರರು ಮತ್ತು ಅಕ್ಕಸಾಲಿಗಳಿಗೂ ಅನ್ವಯವಾಗುತ್ತದೆ. ಕಂಚುಗಾರರು ಬಡಿಯುವ ನಾದಕ್ಕೆ ತಲೆ ಅಲ್ಲಾಡಿಸುತ್ತಾ ಇರಬೇಕು ಆ ರೀತಿ ನಾದ ಹೊರ ಬರುತ್ತದೆ.

- ಕಮ್ಮಾರರ ತಿಧಿ, ಅಕ್ಕಸಾಲಿಗಳ ಅಗ್ಗಷ್ಟಿಕೆ, ಕಂಚುಗಾರರ ಬ್ಲೋರ್ ಕುಲುಮೆಯ ಉರಿ ವರ್ಷದ ಆರಂಭದಲ್ಲಿ ಕುಲುಮೆ ಹತ್ತಿಸಿದಾಗ ಉರಿ ಯಾವ ಕಡೆ ತಿರುಗುವುದೋ ಆ ಭಾಗದಲ್ಲಿ ಮಳೆ ಬೆಳೆ ಚನ್ನಾಗಿ ಆಗುತ್ತದೆ ಎಂದು ನಂಬುತ್ತಾರೆ.

- ಬಡಿಗೇರರು ತಾವು ಕೆಲಸ ಮಾಡುವ ಮರ ಬಡಿದಾಗ ಶಬ್ದಗಳು ಗಟ್ಟಿಬಂದರೆ ಒಳ್ಳೆಯದು ನಾದ ಸರಿ ಇಲ್ಲದಿದ್ದರೆ ಗಟ್ಟಿಮುಟ್ಟಾದ ಮರವಲ್ಲವೆಂದು ತೀರ್ಮಾನಕ್ಕೆ ಬರುತ್ತಾರೆ.

- ಮಾಡುವ ಉಪಕರಣಗಳಿಗೆ ಹುಳ ಹತ್ತದಂತೆ ಅಗಸಿ ಎಣ್ಣೆ, ಕೇಕಿಣಿ, ಅಥವಾ ಹುಣಿಸಿ ಬೀಜವನ್ನು ಉರಿದು ನೆನೆಸಿ ಆಮೇಲೆ ದುಂಡಿಯಿಂದ ಜಿಗುಟು ಬರುವಂತೆ ಮಾಡಿ ಹಚ್ಚಿದರೆ ಹುಳ ಹತ್ತುವುದಿಲ್ಲ. ಇವರನ್ನು ಸದಾ ಕಾಡುವ ಹುಳ ಅಂದರೆ ಗೆದ್ದಲ ಹುಳು, ದೊಣ್ಣೆಹುಳ ಇನ್ನೊಂದು ಮುಖ್ಯವಾಗಿ ಬೇವಿನ ಎಣ್ಣೆಯನ್ನು ಬಳಸುತ್ತಾರೆ.

- ಮರ ಅಥವಾ ಮಾಡಿದ ವಸ್ತುಗಳು ಬೇಗನೇ ಲಟ್ಟ ಆಗುವ ಸಂಭವದಿಂದ ತಪ್ಪಿಸಲು ಕೆಮ್ಮಣ್ಣು ಮತ್ತು ಸಗಣಿಯನ್ನು ಕಲಸಿ ಹಚ್ಚುತ್ತಾರೆ.

- ಬಡಿಗೇರರು ಬಹುಮುಖ್ಯವಾಗಿ ಬನ್ನಿ ಮರವನ್ನು ಕೆಲಸ ಮಾಡಲು ಉಪಯೋಗಿಸುವುದಿಲ್ಲ. ಕೆಲಸ ಮಾಡಲಷ್ಟೆ ಅಲ್ಲ ಇನ್ನಾವುದೇ ಬಳಕೆಗೂ ಅದನ್ನು ಬಳಸುವುದಿಲ್ಲ ಏಕೆಂದರೆ ಪಾಂಚಾಳರು ಈ ಮರದಲ್ಲಿ ಕಾಳಿಯನ್ನು ಕಾಣುತ್ತಾರೆ. ಈ ಮರವನ್ನು ಕಡಿದರೆ ತನ್ನ ಕುಲದೇವತೆಯನ್ನು ಕಡಿದಂತೆ ಎಂಬ ನಂಬಿಕೆಯಿಂದ ಸದಾ ಬನ್ನಿಮರವನ್ನು ಪೂಜಿಸುತ್ತಾರೆ ಒಲೆ ಹುರಿಯನ್ನು ಹಚ್ಚುವುದಿಲ್ಲ. ಅದರಂತೆ ಅರಳೆಮರ ಅಥವಾ ದೇವರ ಮರಗಳಿಂದ ವೃತ್ತಿ ಮಾಡುವುದಿಲ್ಲ.

- ಚೆರ್ಚಲ ಮರದಿಂದ ಇವರು ಕೆಲಸ ಮಾಡುವುದಿಲ್ಲ ಮಾಡಿದರೆ ಮಾಡಿದವರು ಮತ್ತು ಮಾಡಿಸಿಕೊಂಡವರು ಉದ್ಧಾರ ಆಗುವುದಿಲ್ಲವೆಂಬ ನಂಬಿಕೆ ಇದೆ. ಆದರೆ ಚೆರ್ಚಲ ಮರದಿಂದ ಮಾಡಿದ ವಸ್ತು ಸದಾ ತಿರುಗುತ್ತಾ ಇರಬೇಕು ಈ ಮರವನ್ನು ಬಂಡಿಯಲ್ಲಿ ಮಾತ್ರ ಬಳಸುತ್ತಾರೆ. ಹುಣಸೆ ಮರದಿಂದಲೂ ಮರ ಮುಟ್ಟುಗಳಿಗೆ ಬಳಸುವುದಿಲ್ಲ. ಸದಾ ಜಗಳ ವಾಗುತ್ತಿರುತ್ತವೆ ಎಂಬ ನಂಬಿಕೆ ಇದೆ.

- ಅಕ್ಕಸಾಲಿಗರು ಆಭರಣಗಳ ಕೆಲಸ ಮಾಡುವಾಗ ಸುತ್ತಿಗೆ ಪೆಟ್ಟು ಆಭರಣಗಳ ಮೇಲೆ ಬೀಳದೆ ಬೇರೆ ಕಡೆ ಬಿದ್ದರೆ ಹುಸಿಪೆಟ್ಟು ಎನ್ನುತ್ತಾರೆ ಇದು ಅಪಶಕುನ ಆ ವಸ್ತು ಸರಿಯಾಗುವುದಿಲ್ಲ ಎನ್ನುವ ನಂಬಿಕೆಇದೆ ಇದು ಕಮ್ಮಾರ ಮತ್ತು ಕಂಚುಗಾರರಿಗೂ ಅನ್ವಯವಾಗುತ್ತದೆ.

- ಬಡಿಗಿ ಮತ್ತು ಕಮ್ಮಾರರಿಗೆ ಮುಖ್ಯವಾಗಿ ಕಡಿದು ಬಳದು ಎನ್ನುವ ಪದ ಸದಾ ಬಳಕೆಯಲ್ಲಿರುತ್ತದೆ ಕುಂಟಿಯು ಹೊಲದಲ್ಲಿ ಅರಗಬೇಕಾದರೆ ಈ ಕಡದು ಬಳದು ಪ್ರಮುಖ ಪಾತ್ರ ವಹಿಸುತ್ತದೆ ಕಡದು ಮೇಲಕ್ಕೆ, ಬಳದು ಎಂದರೆ ಕೆಳಕ್ಕೆ ಎಂದರ್ಥ. ಕಡದಾಗಲು ಮೇಲೆ ಸೆಕ್ಕಿ ಕಟ್ಟಬೇಕು ಬಳುದಾಗಲು ಕೆಳಗೆ ಸೆಕ್ಕೆ ಕಟ್ಟಬೇಕು.

- ಅಕ್ಕಸಾಲಿಗರ ಹತ್ತಿರ ಕಿವಿಯಲ್ಲಿ ಮುರ ಮೂಗಿನಲ್ಲಿ ನತ್ತು ಇಟ್ಟುಕೊಳ್ಳಲು ಆಭರಣ ಧರಿಸಲು ರಂಧ್ರ ಮಾಡುವ ಕೆಲಸವನ್ನು ಮಾಡುತ್ತಾ ಇವರು ಚುಚ್ಚಿದರೆ ನೋವಾಗುವುದಿಲ್ಲವೆಂಬ ನಂಬಿಕೆ ಇದೆ ಇದನ್ನು ಅಕ್ಕಸಾಲಿಗಿತ್ತಿಯರು ಮಾಡುತ್ತಾರೆ.

- ಕಮ್ಮಾರರ ವೃತ್ತಿಯಲ್ಲಿ ಕುಲುಮೆ ಹುಟ್ಟಿದ ಮೇಲೆ ಕುಲ ಹುಟ್ಟಿತಂತೆ ಕುಲುಮೆಯ ಉರಿ ವರ್ಷದ ಆರಂಭದಲ್ಲಿ ಕುಲುಮೆಯ ಬೆಂಕಿ ಬಲಕ್ಕೆ ತಿರುಗಿದರೆ ಆ ವರ್ಷ ಬೆಳೆ ಚನ್ನಾಗಿ ಆಗುತ್ತದೆ ಎಡಕ್ಕೆ ತಿರುಗಿದರೆ ಸಾಧಾರಣ ಬೆಳೆ ಆಗುತ್ತದೆ ಎನ್ನುವುದು ನಂಬಿಕೆ ಇದೆ.

- ಕುಲುಮೆ ಕಮ್ಮಾರರ ಕುಲದೇವತೆ ಈಕೆಯ ಮೂರ್ತಿಯನ್ನು ತಾವು ಕೆಲಸ ಮಾಡುವ ಒಲೆಯ ಮೇಲೆ ಗೋಡೆಯಲ್ಲಿ ಸದಾ ಹತ್ತಿರವಿರುವಂತೆ ಇಟ್ಟಿರುತ್ತಾರೆ. ಒಂದು ವೇಳೆ ಮೂರ್ತಿ ಇಲ್ಲದಿದ್ದರೂ ಆ ಗೋಡೆಯೇ ಕಾಳಮ್ಮ. ಅಡಿಗಲ್ಲೇ ಮಹಾಕಾಳಿ ಎಂಬ ನಂಬಿಕೆ ಇದೆ.

- ದನಗಳ ಕಾಲಿಗೆ ಬಳೆ ಮಾಡುವಾಗ ಹುಸಿಪಟ್ಟು ಬಿದ್ದರೆ ಆ ವಸ್ತು ಕೆಲಸ ಮಾಡುವುದಿಲ್ಲವೆಂಬ ನಂಬಿಕೆ ಇದೆ.

- ಕಬ್ಬಿಣವನ್ನು ಚನ್ನಾಗಿ ಕಾಯಿಸಿ ಬಡಿಯುವಾಗ ಸಿಡಿಯುವ ಕಿಡಿಗಳು ಅಥವಾ ಅರಗ ಕಮ್ಮಾರರ ಮೇಲೆ ಬಿದ್ದರೆ ಸುಡುವುದಿಲ್ಲ. ಬೇರೆಯವರ ಮೇಲೆ ಬಿದ್ದರೆ ಚಟಪಡಿಸುತ್ತಾರೆಂಬ ನಂಬಿಕೆಯೂ ಇದೆ.

- ಶಿಲ್ಪಿಗಳು ಶಿಲೆಯನ್ನು ಕಡೆಯುವಾಗ ಮೊದಲು ನೋಡುವ ಶುಭಗಳಿಗೆಯನ್ನು ಪಂಚಾಂಗದಲ್ಲಿ ನೋಡಿಯೇ ಆರಂಬಿಸುತ್ತಾರೆ. ಆ ಶುಭಗಳಿಗೆ ಅಮೃತಗಳಿಗೆಯೇ ಆಗಿರಬೇಕೆಂಬ ನಂಬಿಕೆ ಇದೆ ದಿನ ಪವಿತ್ರ ದಿನವಾಗಿರುತ್ತದೆ.

- ಶಿಲ್ಪಿಗಳು ಕರ್ಮಯೋಗ ಸಾಧನದಿಂದ ದೇವರನ್ನು ಧ್ಯಾನಿಸಿ ಮೂರ್ತಿಯನ್ನು ಕಣ್ಮುಂದೆ ಕಲ್ಪಿಸಿಕೊಂಡು ಕೆಲಸಕ್ಕೆ ಪ್ರಾರಂಬಿಸುತ್ತಾರೆ.

- ಶಿಲ್ಪಿಯೇ ತಾಯಿ. ಸುವರ್ಣಮಗು, ಪೂಜಕರೆಲ್ಲ ಭಕ್ತರೆಂಬ ನಂಬಿಕೆ ಇದೆ. ಪ್ರತಿಯೊಂದು ವಸ್ತುವಿಗೂ ಆತ್ಮವಿರುತ್ತದೆ ಆದ್ದರಿಂದ ಮಂತ್ರ ತಂತ್ರಗಳನ್ನು ಬಲ್ಲುವ ಹಾಗೂ ಆಗಮಶಾಸ್ತ್ರಗಳಲ್ಲಿ ಪ್ರವೀಣನಾಗಿರುವ

ಶಿಲ್ಪೋತ್ತಮನಿಂದ ಪ್ರಾಣ ಪ್ರತಿಷ್ಠೆ ನಡೆಸಬೇಕು.

- ಶಿಲ್ಪಿಯು ಮೊದಲು ಪ್ರಾಣ ಪ್ರತಿಷ್ಠೆ ನಡೆಸಿದ ನಂತರ ಪೂಜಿಸಬೇಕು ಇಲ್ಲದಿದ್ದಲ್ಲಿ ಅದು ನಿರ್ಜೀವವಾಗಿದ್ದು ಯಾವುದೇ ಶುಭ ಫಲವನ್ನು ನೀಡುವುದರಲ್ಲಿ ಅಸಮಾಧಾನವಾಗಿರುತ್ತದೆ ಎಂಬ ನಂಬಿಕೆ ಇದೆ.

- ಮೂರ್ತಿ ಮಾಡುವಾಗ (ಪ್ರತಿಷ್ಠಾಪನೆ) ೨೫ ತತ್ವಗಳನ್ನು ಆವಾಹನೆ ಮಾಡುತ್ತಾರೆ. ಜೊತೆಗೆ ಮೂರ್ತಿಯನ್ನು ಶಿಲ್ಪಿಯಾದವರು ಅಂಗವಿಕಲನಾಗಿರಬಾರದು ಎಂದು ಶಿಲ್ಪಶಾಸ್ತ್ರದಲ್ಲಿ ಉಲ್ಲೇಖಗೊಂಡಿದೆ ಮೂರ್ತಿಯನ್ನು ಮಾಡಿಸುವವರ ಹೆಸರಿನ ಆಧಾರದ ಮೇಲೆ ನಕ್ಷತ್ರ, ಮುಹೂರ್ತ ನೋಡಿ ಕೆಲಸ ಪ್ರಾರಂಭಿಸಬೇಕೆಂಬ ನಿಯಮವಿದೆ.

- ಶಿಲ್ಪಿಗಳು ಗಣೇಶನ ನಿಂತ ಮೂರ್ತಿಗೆ ಬಲಗಡೆ ಸೊಂಡಿಲು ಇರುವ ಮೂರ್ತಿ ಮಾಡಬಾರದೆನ್ನುವ ನಂಬಿಕೆ ಇದೆ. ಏನಾದರೂ ಮಾಡಲೇಬೇಕಾದಲ್ಲಿ ಅಮೃತಗಳಿಗೆಯಲ್ಲಿ ತೊಯ್ದ ಬಟ್ಟೆಯಲ್ಲಿ ಮಾತ್ರ ಮಾಡಬೇಕಾಗುತ್ತದೆ.

- ಶಿಲ್ಪಿಗಳ ಮುಖ್ಯ ನಂಬಿಕೆಗಳಲ್ಲಿ ದೃಷ್ಟಿ ಇಡುವುದು. ಮೂರ್ತಿಯ ದೃಷ್ಟಿಗೆ ಸಂಬಂಧಿಸಿದಂತೆ ಯಾವ ಶಿಲ್ಪಿಯು ಮೂರ್ತಿಯನ್ನು ಕಡೆದಿರುತ್ತಾನೋ ಆತನೇ ಮೂರ್ತಿಯನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ದೃಷ್ಟಿ ಇಡಬೇಕು ಅಥವಾ ನೇತ್ರೋನ್ಮಿಲನವನ್ನು ಮಾಡಬೇಕು ಅದು ಮೂರ್ತಿ ನಿರ್ಮಾಣದ ಕಡೆಯ ಕೆಲಸವಾಗಬೇಕು. ಹಾಗೆ ಇಟ್ಟ ದೃಷ್ಟಿ ಸರಿಯಿಲ್ಲದಿದ್ದರೆ ಊರಿಗೆ, ದೃಷ್ಟಿ ಇಡುವವನಿಗೆ ಕೆಡುಕಾಗುತ್ತದೆ ಎಂದು ಭಾವಿಸುತ್ತಾರೆ.

ಈ ನಾಲ್ಕೈದು ನಂಬಿಕೆಗಳು ಕಂಚುಗಾರರಿಗೂ ಅನ್ವಯವಾಗುತ್ತದೆ ಅವರು ಮೂರ್ತಿ ಎರಕ ಹೊಯ್ಯುವ ಕಾಲಕ್ಕೆ ಅನುಸರಿಸುತ್ತಾರೆ. ಈ ರೀತಿಯಾದ ನಂಬಿಕೆಗಳು ಈಪಾಂಚಾಳರಲ್ಲಿ ಕೆಲವೊಂದು ನಿಯಮಗಳು ಬೇರೆ ಬೇರೆ ಯಾಗಿರುವ ಸಾಧ್ಯತೆ ಇರುವುದರಿಂದ ಅವರವರಿಗೆ ಸಂಬಂಧಪಟ್ಟ ವಿಷಯವನ್ನು ವಿವರಿಸಲಾಗಿದೆ. ಅವರ ಬಹುತೇಕ ಆಚರಣೆಗಳು ಮತ್ತು ನಂಬಿಕೆಗಳು ಒಂದೇ ಆಗಿರುತ್ತವೆ ಅವರು ಬಳಸುವ ಉಪಕರಣ ಮತ್ತು ತಯಾರಿಸುವ ಉಪಕರಣಗಳಿಗೆ ಸಂಬಂಧಿಸಿದಂತೆ ಆಚರಣೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಬಡಿಗಿಯವರು ಬಾಚಿ, ಕಮ್ಮಾರ ಕುಲುಮೆ, ಶಿಲ್ಪಿಯ ಉಳಿ, ಕಂಚುಗಾರರ ಪಡಿಹಚ್ಚು, ಅಕ್ಕಸಾಲಿಯ ಅಗ್ಗಷ್ಟಿಕೆಗಳು ವೃತ್ತಿಯಲ್ಲಿ ಪ್ರಮುಖ ಸ್ಥಾನ ಪಡೆದರೂ ಉಳಿದವುಗಳು ಅತ್ಯವಶ್ಯಕ. ಒಂದು ಉಪಕರಣದ ಕೊರತೆ ಇದ್ದರೆ ಕೆಲಸ ನಿಂತಹಾಗೆಯೇ ಸರಿ.

ಆರು ದರುಶನವೆಲ್ಲಾ ಎನ್ನ ಬಾಜಿಯ ಕಲೆ

ಮಿಕ್ಕದ ಮೀರಿದ ಅವದೂತರುಗಳೆಲ್ಲಾ

ಎನ್ನ ಉಳಿಯೊಳಗಣವೊಡಪು

ಇಂತಿವ ಮೀರಿ ಬೇಧಿಸಿ ಬೇಧಿಸಿದನೆಂಬುವರೆಲ್ಲ

ಎನ್ನ ಕೊಡತಿಯಡಿಯಲ್ಲಿ ಬಡಿಯಿಸಿಕೊಂಬ ಬಡಿಹೋರಿಗಳು–

(ಡಾ. ಆರ್.ಸಿ. ಹಿರೇಮಠ– ವಚನ ಸಂಕೀರ್ಣ ಸಂಪುಟ–೩, ಪುಟ–೮೨) ಎಲ್ಲರ ದರ್ಶನವು ತನ್ನ ಬಾಚಿಯಲ್ಲಿ ಅಡಗಿದೆ. ಉಳಿದವುಗಳು ಉಳಿಯೊಳಗೆ ಮಿಕ್ಕವುಗಳು ತನ್ನ ಕೊಡತಿಯಲ್ಲಿ ಅಡಗಿದೆ ಎಂಬ ಮಾತನ್ನು ೪೦೪ ನೇ ವಚನದಲ್ಲಿ ಬಾಚಿ ಕಾಯಕದ ಬಸವಣ್ಣ ಹೇಳಿದ್ದಾನೆ.

ಆಶೆಯುರುತ ಬಾಚಿಯಲ್ಲಿ ಭವಪಾಶವಿಲ್ಲದ ಜಂಗಮಕ್ಕೆ ತೆತ್ತು
ರೋಷವಿಲ್ಲದ ಉಳಿಯಲ್ಲಿ ನಿಜವಾಸವ ನೋಡಿ ಹುಗಿಲುದೆಗೆವುತ್ತ
ಭಾಷೆಗೆ ಋಣಯವಿಲ್ಲದ ಸದ್ಭಕ್ತರ ಆಶ್ರಯಕ್ಕೆ ನಿಜವಾಸವ ಮಾಡುವಕಾಯ
ಈ ಗುಣ ಬಾಚಿಕಾಯಕದ ಬಸವಣ್ಣ ನೇಮ.

ಈ ವಚನದಲ್ಲಿ ಉಪಕರಣಗಳ ಮಹತ್ವವನ್ನು ಕಾಣಬಹುದು. ಹೀಗೆ ಉಪಕರಣಗಳನ್ನೇ ಪಾಂಚಾಳರು ಅನ್ನವೆಂದು, ಮಹಾಕಾಳಿ ಎಂದು ದೈವವೆಂದು ಭಾವಿಸುವುದು ಸಹಜವಾಗಿದೆ. ಅವುಗಳನ್ನು ಜನಪದರು ನಂಬಿಕೆಗಳನ್ನು ರೂಪಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಅವುಗಳಿಗೆ ದ್ರೋಹ ಬಗೆದರೆ ಅವರು ಪಾಂಚಾಳರ ಜಾತಿಗೆ ಸೇರಿದವರಲ್ಲವೆಂದು ಹೇಳುತ್ತಾರೆ. ಇದರಿಂದ ವೃತ್ತಿ ಉಪಕರಣಗಳ ಮೇಲೆ ಎಷ್ಟು ನಂಬಿಕೆಗಳನ್ನು ಇಟ್ಟಿರಬಹುದೆಂಬ ಸತ್ಯಗೋಚರವಾಗುತ್ತದೆ.

ಪಾಂಚಾಳರಲ್ಲಿ ವಾರ, ತಿಥಿ, ನೇಮಾದಿಗಳುಂಟು ಇವುಗಳನ್ನು ಚಾಚುತಪ್ಪದೇ ಆಚರಿಸುತ್ತಾರೆ. ಅಮವಾಸ್ಯೆಯ ದಿನ ಪಾಂಚಾಳರು ವೃತ್ತಿಯನ್ನು ಮಾಡುವುದಿಲ್ಲ. ಕಾಳಿಗೆ ಶುಭದಿನವಾದರೂ ಅಮವಾಸೆಯ ದಿನ ಒಂದು ರೀತಿಯಿಂದ ಭಯದ ದಿನವೂ ಹೌದು. ಮಾಟ, ಮಂತ್ರ, ಸಿದ್ಧಿ ಇತ್ಯಾದಿಗಳೆಲ್ಲವು ಈ ದಿನದಂದೇ ನೆಡೆಸುತ್ತಾರೆ. ಅದಕ್ಕೆ ಆವತ್ತು ಈ ಐದು ವೃತ್ತಿಕಾರರು ಉಪಕರಣಗಳನ್ನು ಮುಟ್ಟುವುದಿಲ್ಲ. ಇದು ವಿಷಮಗಳಿಗೆಯ ದಿನವೆಂದು ನಂಬುತ್ತಾರೆ. ಈ ವಿಷಮ ಘಳಿಗೆಯ ದಿನ ಉಪಕರಣಗಳಿಂದ ನೋವಾದರೆ ಆ ದಿನ ರಕ್ತ ಬಲಿತೆಗೆದು ಕೊಳ್ಳುವುದು ಎಂಬ ನಂಬಿಕೆಯೂ ಇದೆ. ನೋವಾದರೆ ಅದು ಬೇಗನೇ ಮಾಯಿಯುವುದಿಲ್ಲ ಎಂಬ ಕಲ್ಪನೆಯನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ಉಪಕರಣಗಳಿಗೆ ವಿಶೇಷ ಪೂಜೆ ಸಲ್ಲಿಸಿ ಕೆಲಸಕ್ಕೆ ವಿರಾಮ ಕೊಡುತ್ತಾರೆ.

ಪಾಂಚಾಳರು ತಾವು ಬಳಸುವ ಉಪಕರಣಗಳನ್ನು ದಿನ ಬೆಳಗಾದರೆ ಮೈ ತೊಳೆದು ದೇವರ ಪೂಜೆ, ಉಪಕರಣಗಳಿಗೆ ಪೂಜೆ ಸಲ್ಲಿಸಿ ಕೆಲಸವನ್ನು ಪ್ರಾರಂಭಿಸುತ್ತಾರೆ. ಸ್ಸುಷುಪ್ತಾವಸ್ಥೆ, ಜಾಗೃತಾವಸ್ಥೆ, ಸ್ವಪ್ನವಸ್ಥೆ ಎಂದು ಮನುಷ್ಯನ ಮೂರು ಅವಸ್ಥೆಗಳಿರುತ್ತವೆ. ಅದರಲ್ಲಿ ಮಾನವರು ರಾತ್ರಿ ನಿದ್ರಾವಸ್ಥೆಯಲ್ಲಿ ವೀರ್ಯ ಸ್ಕಲನ ವಾಗಿರಬಹುದು. ಅಥವಾ ಲೈಂಗಿಕತನದ ಬಯಕೆಗಳನ್ನು ಅನುಭವಿಸುವುದು ರಾತ್ರಿಯೇ ಅದು ಮೈಲಿಗೆಯ ಸ್ಥಿತಿಯಾದ್ದರಿಂದ ಬೆಳಿಗ್ಗೆ ಸ್ನಾನಮಾಡಿ ಪೂಜಾದಿಗಳನ್ನು ಮುಗಿಸಿ ಉಪಕರಣಗಳನ್ನು ಮುಟ್ಟಬೇಕು. ಮಹಿಳೆಯರು ಮುಟ್ಟಾದಂತ ಸಂದರ್ಭವಲ್ಲಿ ಅವುಗಳನ್ನು ಮುಟ್ಟುವದಿರಲಿ ನೆರಳನ್ನು ಕೂಡ ತಾಗಿಸುವುದಿಲ್ಲ. ಮುಟ್ಟಾದ ಮಹಿಳೆಯು ಕೆಲವೊಂದು ಗಿಡಗಳನ್ನು ಮುಟ್ಟದರೆ ಒಣಗುತ್ತವೆಯಂತೆ ಅಷ್ಟು ಮೈಲಿಗೆತನವಂತೆ. ಅದಕ್ಕೆ ಮೂರು ದಿನಗಳ ನಂತರ ಸ್ನಾನವಾದ ಮೇಲೆ ಅವುಗಳನ್ನು ಮುಟ್ಟಬಹುದು. ಇಂತಹ ಸಂದರ್ಭದಲ್ಲಿ ಮೂರು ದಿನಗಳ ಕಾಲ ಅವರ ಊಟೋಪಚಾರಗಳು ಹೊರಗಡೆಯೇ ಅಗಿರುತ್ತದೆ. ಗಂಡ ಅಥವಾ ಹಿರಿಯರು ಯಾವುದಾದರೂ ಸಾಮಾನು ಕೊಡು ಎಂದು ಹೆಂಡತಿಗೆ ಹೇಳಿದರೆ ಅವರು ಕೊಡುವುದಿಲ್ಲ 'ನಾನು ಮುಟ್ಟಂಗಿಲ್ಲ ನೀವೆ ತಗೊಳ್ಳಿ' ಅಂತ ಹೇಳುತ್ತಾರೆ. ಅಷ್ಟು ಪಾವಿತ್ರ್ಯ ಸ್ಥಾನವನ್ನು ಈ ಉಪಕರಣಗಳಿಗೆ ಕೊಡುತ್ತೇವೆ ಎಂದು ಹರಿಹರದ ವೀರಭದ್ರಚಾರಿ ಯವರು ಹೇಳುತ್ತಾರೆ.

ದಸರಾ ಹಬ್ಬದ ಖಂಡ ಪೂಜೆಯ ದಿನ ವಿಶೇಷವಾಗಿ ಆಯುಧ ಪೂಜೆಯನ್ನು ಈ ದೇಶದ ಪ್ರತಿಯೊಬ್ಬ ಕುಲಕಸುಬಿನವರು ತಾವು ಉಪಯೋಗಿಸುವ ಸಾಮಾಗ್ರಿಗಳನ್ನು ಪೂಜಿಸುತ್ತಾರೆ. ಅದರಂತೆ ಈ ಪಾಂಚಾಳರು ಕೂಡ ಆಯುಧ ಪೂಜೆಯನ್ನು ಮಾಡುತ್ತಾರೆ. ಎಷ್ಟೇ ಕೊಟ್ಟರೂ ಸಾಮಾನುಗಳನ್ನು ಮುಟ್ಟುವುದಿಲ್ಲ ಐಶ್ವರ್ಯವನ್ನು ಸುರುಪೃತ್ತೇನೆಂದರೂ ಕೂಡ ಕಾರಣ ಆ ದಿನ ಪಾಂಡವರು ವನವಾಸ ಮುಗಿಸಿ ಬಂದು ಬನ್ನಿ ಮಹಾಂಕಾಳಿಯಲ್ಲಿಟ್ಟು ಹೋಗಿದ್ದ ಆಯುಧಗಳನ್ನು ವಿಶೇಷ ಪೂಜೆ ಮಾಡಿ ಅವುಗಳನ್ನು ತೆಗೆದು ಕೊಳ್ಳುತ್ತಾರೆ. ಆ ಕಾರಣಕ್ಕಾಗಿ ಎಲ್ಲಾ

ವೃತ್ತಿ ಕಾರರು ಆಯುಧ ಪೂಜೆಯನ್ನು ಮಾಡುತ್ತಾರೆ. ಅವುಗಳನ್ನು ಅಂದು ನೀರಿನಿಂದ ತೊಳೆದು ಕುಂಕುಮ. ವಿಭೂತಿ. ಗಂಧ ಬನ್ನಿಪತ್ರಿಯನ್ನು ಮುಡಿಸಿ ಊದಿನಕಡ್ಡಿ ಬೆಳಗಿ ತೆಂಗಿನ ಕಾಯಿಯನ್ನು ಒಡೆಯುತ್ತಾರೆ. ಇದು ವಿಶೇಷವೆಂದರೆ ಆ ಸಾಮಾಗ್ರಿಗಳಿಗೆ ಬಲಿಯಾಗಿ ಕುಂಬಳಕಾಯಿಯನ್ನು ಹೊಡೆದು ಅದರ ತುಂಬಾ ಕುಂಕುಮ ಹಾಕುತ್ತಾರೆ. ಯಾಕೆಂದರೆ ಅವುಗಳಿಗೆ ಪ್ರಾಣಿಗಳ ಬದಲಾಗಿ ಆಯುಧಗಳಿಗೆ ಬಲಿಯನ್ನು ಕೊಡುತ್ತಾರೆಂದು ಇದು ಹಿಂದಿನಿಂದಲೂ ಬಳಸಿಕೊಂಡು ಬಂದುದ್ದಾಗಿದೆ.

ಕೆತ್ತುವವನ ಮುಂದೆ ನಿಲ್ಲಬಾರದು ಬಡಿಯುವವನ ಹಿಂದೆ ನಿಲ್ಲಬಾರದೆಂಬ ಮಾತು ಕೇಳಿಬರುತ್ತದೆ. ಬಾಚಿಯಿಂದ ಕೆತ್ತುವುದು ಮುಂದಿನಿಂದ ಬಡಿಗಿಯಾದರೆ ಸುತ್ತಿಯಿಂದ ಕೆಲಸ ಮಾಡುವವರು ಯಾವಾಗಲು ಹಿಂದಿನಿಂದ ಬರುತ್ತದೆ. ಎದುರಿಗೆ ಮತ್ತು ಹಿಂಭಾಗ ನಿಲ್ಲಬಾರದೆಂಬ ಗಾದೆ ಮಾತುಗಳನ್ನು ಈ ಸಂದರ್ಭದಲ್ಲಿ ಬಳಸುತ್ತಾರೆ. ಮತ್ತು ತಾಗಿ ಗಾಯವಾದರೆ ಬೇಗನೆ ವಾಸಿ ಯಾಗುವುದಿಲ್ಲ ಎಂಬ ನಂಬಿಕೆ ಇದೆ. ಪಾಂಚಾಳರು ಕೆಲಸ ಮಾಡುವಾಗ ಉಪಕರಣಗಳನ್ನು ಕಾಲಿನಿಂದ ಒದೆಯಬಾರದು ಸಮಯ ಬಂದರೆ ಕಾಲು ಮೆಟ್ಟಿ ಕೆಲಸಮಾಡುತ್ತಾರೆ. ಆಕಸ್ಮಾತ್ತಾಗಿ ಕಾಲಿಗೆ ಬಡಿದರೆ ಅವುಗಳನ್ನೆ ನಮಸ್ಕಾರ ಮಾಡುತ್ತಾರೆ. ಕಾರಣ ಅವುಗಳು ಮಾತೃ ಸ್ವರೂಪವನ್ನು ಕೊಟ್ಟಿರುತ್ತಾರೆ. ಏಕೆಂದರೆ ಕಾಳಿ ಮಾತೆಯನ್ನು ಎಷ್ಟು ಸಾರಿ ನಮಸ್ಕಾರ ಮಾಡುತ್ತಾರೋ ಅಷ್ಟು ಅಲ್ಲದಿದ್ದರೂ ಒಂದು ಸಲ ಸ್ಲಾಮ್ ಮಾಡಿದರೆ ಫಲದೊರೆಯುತ್ತದೆ ಎಂಬುದನ್ನು ಈ ವಾಕ್ಯಗಳಲ್ಲಿ ಕಾಣಬಹುದು.

ಭೂಪ್ರದರ್ಶ ಷಷ್ಠೇನಾ ।

ಕೇತು ಸ್ನಾನ ಶತರ್ಯುಷ್ಯ ।

ಕಾಶಿಯಾತ್ರಿ ಹಿತೇನಿಚಾ ।

ತಾಸ್ಮ್ಸ್ಥ್ಮಾತೃ ವಂದನಾರ್ಥ ॥

ಎಂಬಂತೆ ಒಂದು ಸಲ ನಮಸ್ಕಾರ ಮಾಡಿದರೆ ಆರು ಸಾರಿ ಭೂಪ್ರದರ್ಶನ ಮಾಡಿದಷ್ಟು ಫಲ, ನೂರು ಸಾರಿ ಸಮುದ್ರ ಸ್ನಾನ ಮಾಡಿದಷ್ಟೆ ಪವಿತ್ರವಾಗಿರುವ ಫಲ ನಂತರ ಪದೇ ಪದೇ ಕಾಶಿಯಾತ್ರೆ ಮಾಡಿದಷ್ಟು ಫಲವು ಕಾಳಿಮಾತೆಯನ್ನು (ಉಪಕರಣ) ವಂದಿಸಿದರೆ ಇವೆಲ್ಲವುಗಳ ಫಲ ದೊರೆಯುತ್ತವೆ ಎಂಬ ವಿಶ್ವಾಸವನ್ನು ಉಪನಯನ ಸಂದರ್ಭದಲ್ಲಿ ಗುರುಗಳು ಬೋಧಿಸುತ್ತಾರೆ. ನಮ್ಮ ನಮ್ಮ ಆಚರಣೆಗಳು ನಂಬಿಕೆಗಳು ನಮ್ಮನ್ನು ಕಾಪಾಡುತ್ತವೆ ಎಂದು ಹಂಸನಂದಾಚಾರ್ಯರು ಹಡಗಲಿ ತಿಳಿಸುತ್ತಾರೆ.ಅಂತಹ ಪವಿತ್ರವಾದ ಸ್ಥಾನವನ್ನು ಉಪಕರಣಗಳಿಗೆ ಕೊಟ್ಟಿದ್ದಾರೆ

ಕೃಷಿಕರು ತಾವು ಬಳಸುವ ಉಪಕರಣಗಳಲ್ಲಿ ಕೂರಿಗೆ ವಿಶಿಷ್ಟ ಸ್ಥಾನವಿದೆ. ರೈತರು ಈ ಕೂರುಗಿ ಹಾಯಿಸಿ ಕೊಳ್ಳಲು ಬರುವಾಗ ಮೊದಲು 'ಊರಗುರುಬ' ರಿಂದಲೇ ಪ್ರತಿವರ್ಷ ಕೂರುಗಿ ತಾಳು, ಈಸು ಮತ್ತು ಬಡಿಗಿಯರ ಉಳಿ.ಬಾಚಿ, ಕೊಡ್ತಿ, ಗರಗಸ ಇತ್ಯಾದಿ ಉಪಕರಣಗಳನ್ನಿಟ್ಟು ಕುಂಕುಮ, ವಿಭೂತಿ, ಬಂಡಾರ ಹಚ್ಚಿ ಪತ್ರಿ, ಹೂ ಮಾಡಿಸಿ ಊದಿನಕಡ್ಡಿ ಬೆಳಗಿ ತೆಂಗಿನ ಕಾಯಿ ಒಡೆದು ನೈವೇದ್ಯ ಮಾಡುತ್ತಾರೆ. ನಂತರ ಪೂಜೆಯ ಸಂದರ್ಭದಲ್ಲಿ ಬಂದ ಜನರಿಗೆ ಕೊಬ್ರಿ ಮಂಡಕ್ಕಿಯನ್ನು ಕೊಡುತ್ತಾರೆ. ಇವೆಲ್ಲವನ್ನು ಕುರುಬರೆ ಮಾಡಬೇಕು ಅಲ್ಲಿಯವರೆಗೆ ಊರಲ್ಲಿ ಯಾರೂ ಕೂರಿಗೆ ಹಾಸುವಂತಿಲ್ಲ ನಂತರದಲ್ಲಿ ಎಲ್ಲರೂ ಹಾಸಬಹುದು. ಏಕೆಂದರೆ ಕುರುಬರು ಶುಭ ಸಂಕೇತವಾಗಿ ಹಳ್ಳಿಗಳಲ್ಲಿ ನೋಡುತ್ತಾರೆ. ಊರಿನಲ್ಲಿ ಏನಾದರೂ ವಿಶೇಷವಿದ್ದರೆ ಕುರುಬರಿಂದಲೇ ಪ್ರಾರಂಭವಾಗುತ್ತದೆ.

ಹೀಗೆ ಪಾಂಚಾಳರು ವೃತ್ತಿಗೆ ಸಂಬಂಧಿಸಿದ ಆಚರಣೆಗಳು ಮತ್ತು ನಂಬಿಕೆಗಳನ್ನಿಟ್ಟು ಕೊಂಡು ಬಂದಿದ್ದಾರೆ. ವೃತ್ತಿ ಮತ್ತು ವೃತ್ತಿಯ ಉಪಕರಣಗಳ ಶ್ರೇಷ್ಠ ದೇವತೆಗಳೆಂದು ನಂಬಿದವರು ವೃತ್ತಿ ಪ್ರಾರಂಭಿಸುವ ಮೊದಲು ತಮ್ಮ

ಉಪಕರಣಗಳನ್ನು ಮೂರು ಬಾರಿ ಸ್ವಾಮ್ ಮಾಡಿಯೇ ಕೆಲಸ ಮಾಡುತ್ತಾರೆ. ಮನಸ್ಸಿನಲ್ಲಿ ಕಾಳಿಯನ್ನು ನೆನೆದು ವೃತ್ತಿಯನ್ನು ಮುಂದುವರೆಸುತ್ತಾರೆ. ಪ್ರತಿ ದಿನವೂ ಈ ರೀತಿಯಾದ ಆಚರಣೆಗಳನ್ನು ಈ ಪಾಂಚಾಳರಲ್ಲಿ ಕಾಣಬಹುದು.

ಈ. ದೈವ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು

ಆದಿ ಮಾನವ ಬೇಟೆ ಹಂತದಿಂದ ಪಶುಪಾಲನೆ ಮತ್ತು ಕೃಷಿ ಪ್ರಾರಂಭಿಸಿದ ಮೊದಲ ಹಂತದಲ್ಲಿಯೇ ಮಾತೃ ಪ್ರಧಾನವಾದ ವ್ಯವಸ್ಥೆ ರೂಪ ಪಡೆಯ ತೊಡಗಿತು. ಪುರುಷರು ಆಹಾರ ಸಂಗ್ರಹಣೆ, ಮಕ್ಕಳ ಪಾಲನೆ ಪೋಷಣೆ ಮಾಡುತ್ತಿರಲಿಲ್ಲ ಕೇವಲ ಬೇಟೆಯಾಡುವುದೊಂದೇ ಅವನ ಪ್ರಮುಖ ಕೆಲಸವಾಗಿತ್ತು. ಆದಿ ಮಾನವ ಕೃಷಿಗೆ ಕಾಲಿಟ್ಟಾಗ ಸಂಘ ಜೀವನದ ಕಡೆಗೆ ಅಸ್ಥೆ ವಹಿಸಿದ. ಸಂಘ ಜೀವನ ಆರಂಭಿಸಿದಾಗ ಸ್ತ್ರೀ ಜವಾಬ್ದಾರಿ ಹೆಚ್ಚುತ್ತಾ ನಡೆಯಿತು. ಕುಟುಂಬ ಜವಾಬ್ದಾರಿ ಸ್ತ್ರೀಯ ಮೇಲೆ ಇತ್ತು. ಮನುಷ್ಯನ ಪ್ರಥಮ ಆಹಾರ ಚಟುವಟಿಕೆಯಾದ ಆಹಾರ ಸಂಗ್ರಹಣೆಯ ಹಂತದಲ್ಲಿ ಸ್ತ್ರೀ ಪಾತ್ರ ಪ್ರಾಧಾನವಾಗಿತ್ತು. ಎಲ್ಲ ಪದ್ಧತಿಗಳು ಸಾಂಸ್ಕೃತಿಕ ಲಕ್ಷಣಗಳು ಹೆಣ್ಣಿನ ಮೂಲಕವೇ ಸಂವಹನ ಗೊಳ್ಳುತ್ತಿದ್ದವು. ಹೆಣ್ಣು ಒಂದು ಜನಾಂಗದ ಸಂಕೇತವಷ್ಟೆ ಅಲ್ಲ ಜೀವೋತ್ಪತ್ತಿಯ ಮೂಲ ಶಕ್ತಿಯಾಗಿದ್ದಳು. ಸಮಾಜದ ಬೆಳವಣಿಗೆಯ ಮೊದಲ ಹಂತದಲ್ಲಿ ಮಾತೃವೇ ಧರ್ಮದ ಕೇಂದ್ರ ಸ್ಥಾನದಲ್ಲಿದ್ದಳು. ಸ್ತ್ರೀಯ ಸ್ಥಾನಮಾನ ಹೆಚ್ಚಿತು ಈ ಮಾನ್ಯತೆ ಆಕೆಯನ್ನು ದೈವತ್ವಕ್ಕೇರಿಸುವವರಿಗೆ ಹೋಯಿತು. ಸ್ತ್ರೀ ಮಾತೃದೇವತೆಯ ಸ್ಥಾನ ಪಡೆದು ಕೊಂಡಿದ್ದು ಆದಿ ಮಾನವನ ಸಂಘ ಜೀವನ ಪ್ರಾರಂಭಸಿದ ಹಂತದಲ್ಲಿ ಅಲೆಮಾರಿಯಾಗಿದ್ದಾಗ ಪ್ರಕೃತಿಯ ವಿಕೋಪದಿಂದ ಉಂಟಾದ ಗುಡುಗು, ಸಿಡಿಲು, ಬೆಂಕಿ, ಅತಿವೃಷ್ಟಿ, ಭೂಕಂಪ ಮುಂತಾದವುಗಳನ್ನು ಕಂಡು ಭಯ ಭೀತರಾಗಿದ್ದರು. ಮತ್ತು ಅವುಗಳ ಹಿಂದೆ ಒಂದು ಶಕ್ತಿ ಅಡಗಿದೆ ಎಂದು ಅರಿತುಕೊಂಡಿದ್ದ. ಬೇಟೆಯ ಹಂತದಲ್ಲಿ ಪ್ರಕೃತಿಯ ಆರಾಧಕನಾಗಿದ್ದ ಅದಿ ಮಾನವ ಕೃಷಿ ಹಂತಕ್ಕೆ ಬಂದಾಗ ಹೆಣ್ಣಿನ ಮತ್ತು ಭೂಮಿ ಇವೆರಡೂ ಪೂಜ್ಯ ವಸ್ತುಗಳೆಂದು ಭಾವಿಸಿದ, ಹೆಣ್ಣು ಮತ್ತು ಪ್ರಕೃತಿಯಲ್ಲಿ ಅಡಗಿರುವುದು ಒಂದೇ ಶಕ್ತಿ ಎಂದು ತಿಳಿದು ಶಕ್ತಿಯ ಆರಾಧನೆ ಪ್ರಾರಂಭಿಸಿದರು.

ಹಳೆ ಶಿಲಾಯುಗದಿಂದಲೇ ಮಾತೃ ದೇವತೆಗಳ ಆರಾಧನೆ ಪ್ರಾರಂಭವಾಗಿತ್ತು ಎಂಬುದಕ್ಕೆ ಅನೇಕ ಅಧಾರಗಳನ್ನು ವಿದ್ವಾಂಸರು ಪ್ರಕಟಪಡಿಸಿದ್ದಾರೆ. ಆ ಮಾತೃ ದೇವತಾ ಆರಾಧನೆ ಬೃಹತ್ ಶಿಲಾಯುಗದಲ್ಲಿ ವಿಕಾಸ ಹೊಂದುತ್ತಾ ನಡೆಯಿತು. ಸಿಂಧೂ ಸಂಸ್ಕೃತಿಯಲ್ಲಿ ಮಾತೃದೇವತೆಯನ್ನು ಭೂಮಿ ತಾಯಿಯೆಂದು, ಮಾನವರ ಮಾತೆಯೆಂದು ಪೂಜಿಸಲಾಯಿತು. ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃದೇವತೆಯ ಸಂಕೇತಗಳೆಂದು ಅವರು ಭಾವಿಸಿದ್ದರು. ಈ ಮೂರು ಅಂಗಗಳು ಮೂರು ಮುಖ್ಯ ಚಟುವಟಕೆಗಳನ್ನು ಮಾಡುತ್ತವೆ. ಅವು ಪಾಲನೆ, ಧಾರಣೆ ಮತ್ತು ಸೃಷ್ಟಿ (ಡಾ. ಸಿದ್ಧಲಿಂಗಯ್ಯ- ಗ್ರಾಮದೇವತಾರಾಧನೆ ಪುಟ-೩೩) ಮಾತೃದೇವತಾ ಆರಾಧನೆ ವಿಶ್ವದ ಅನೇಕ ಭಾಗಗಳಲ್ಲಿ ಆಚರಣೆಯಲ್ಲಿದ್ದ ಬಗೆಗೆ ಅನೇಕ ಉಲ್ಲೇಖಗಳನ್ನು ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಮತ್ತು ಪ್ರಪಂಚದಲ್ಲಿರುವ ಎಲ್ಲ ದೇವತೆಗಳು ಈ ದೇವತೆಯಿಂದ ಸೃಷ್ಟಿಯಾದವು ಎಂಬ ನಂಬಿಕೆಗಳು ಬೆಳೆಯತೊಡಗಿತು.

"ಮಾತೃಪ್ರಧಾನ ವ್ಯವಸ್ಥೆಯ ಅನೇಕ ಸಮಾಜಗಳ ಪಿತೃವಿಲ್ಲದ ನೂರಾರು ದೇವತೆಗಳು ಕಂಡು ಬಂದರೂ ಮಾತೃವಿಲ್ಲದ ಒಂದು ದೇವತೆಯನ್ನು ಕಾಣಲಾರವು" ಜೀವ ಸೃಷ್ಟಿಗೆ ಮಾತೆಯೇ ಕಾರಣ ಎನ್ನುವ ಮನೋಧರ್ಮವೇ ಇದಕ್ಕೆ ಕಾರಣವಿರಬಹುದು. ಹೀಗಾಗಿ ಪ್ರತಿಜನಾಂಗಕ್ಕೂ ಒಬ್ಬ ಮಾತೆ ಇರುತ್ತಾಳೆ. (ಡಾ. ಸಿದ್ಧಲಿಂಗಯ್ಯ ಗ್ರಾಮದೇವತಾರಾಧನೆ, ಪುಟ-೩೩) ಇವರ ವಾಕ್ಯಗಳಲ್ಲಿ ನೂರಕ್ಕೆ ನೂರು ಮಾತು ಸತ್ಯ. ಪ್ರತಿಯೊಂದು ಸಮುದಾಯದಲ್ಲಿ ಗಂಡು ದೇವತೆಗಳಿಗಿಂತ ಹೆಣ್ಣು ದೇವತೆಗಳ ಆರಾಧಕರಾಗಿರುವುದನ್ನು ಕಾಣಬಹುದು. ಅಂತಹ ಶಕ್ತಿ ಆಕೆಯಲ್ಲಿದೆ ಎಂಬ ಭಾವನೆಯಿಂದ ಆಕೆಯೇ ಶ್ರೇಷ್ಠವಾಗಿ ಬೆಳೆದು ನಿಂತಿದ್ದಾಳೆ.

ಹಾಗೆಯೇ ಈ ಪಾಂಚಾಳರಿಗೆ ಈ ಮಾತೆಯ ಸ್ಥಾನವನ್ನು ಕಾಳಿಕಾದೇವಿ ಅಲಂಕರಿಸಿದ್ದಾಳೆ. ಪುರಾಣದ ಕಲ್ಪನೆಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಆದಿಶಕ್ತಿಯೇ ಸೃಷ್ಟಿಸುತ್ತಾಳೆ. ಅವರಲ್ಲಿ ಒಬ್ಬನಾದ ಶಿವನನ್ನೇ ಮದುವೆಯಾಗುತ್ತಾಳೆ. ಅವಳು ಕೇವಲ ಪತ್ನಿಯಲ್ಲ ತಾಯಿಯೂ ಹೌದು. ಆದಿಶಕ್ತಿ ವಿಶಿಷ್ಠ ಶಕ್ತಿಗಳನ್ನು ನೀಡಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿ ಅವರಿಂದಲೇ ತಮಸ್ ರಜಸ್ ಸತ್ವಗಳನ್ನು ಪಡೆದುಕೊಳ್ಳುತ್ತಾಳೆ. ಈ ತ್ರಿಗುಣಾತ್ಮಕ ದೇವಿಯನ್ನು ಕಪ್ಪು ಬಣ್ಣದ ಕಾಳಿಯ ರೂಪದಲ್ಲಿ ಆರಾಧಿಸುತ್ತಾರೆ. ಕೃಷಿ ಸಂತತಿ ಇನೊಂದು ಲಕ್ಷಣ ದೇವತೆಯ ಜೊತೆ ಪುರುಷದೇವರು ನಿಂತಿರುವುದಿಲ್ಲ. ಇಲ್ಲಿ ಪುರುಷದೇವತೆ ಪಾತ್ರವೆಂದರೆ ಅವರು ಶಕ್ತಿದೇವತೆಯ ಪುತ್ರರಾಗಿಯೇ ಅಥವಾ ಸಹೋದರರಾಗಿಯೇ ಇರುತ್ತಾರೆ. ಶಕ್ತಿದೇವತೆಯ ಪಕ್ಕದಲ್ಲಿ ಪುರುಷ ದೇವತೆಗಳು ಇರುವುದಿಲ್ಲ. ಶಕ್ತಿ ದೇವತೆಯ ಪಕ್ಕದಲ್ಲಿ ದೇವಸ್ಥಾನದಲ್ಲಿ ಶಿವ, ಭೈರವ ಈ ದೇವರುಗಳನ್ನು ಪ್ರತಿಷ್ಠಾಪಿಸಿರುತ್ತಾರೆ.

ದ್ರಾವಿಡ ಸಮುದಾಯಕ್ಕೆ ಶಕ್ತಿ ಮತ್ತು ಶಿವ ಇಬ್ಬರೂ ಆರಾಧ್ಯ ದೈವಗಳು ಇವರಿಂದಲೇ ಮಾನವ ಸಂತತಿ, ಸೃಷ್ಟಿ ಮತ್ತು ಮೂಲ ಉದ್ಯೋಗಗಳ ಸೃಷ್ಟಿಕರ್ತರು ಎಂಬ ಭಾವನೆ ಇದೆ. ಭಾರತದಲ್ಲಿ ಪಾಂಚಾಳರು ಅಥವಾ ವಿಶ್ವಕರ್ಮರು ದ್ರಾವಿಡ ಸಂಸ್ಕೃತಿಯ ಮೂಲದವರು ಎಂಬ ಮಾತನ್ನು ಗಟ್ಟಿಯಾಗಿ ಕೂಗಿದರು ಕೇಳುವವರಿಗೆ ಅದರ ಸ್ಪಷ್ಟ ಅರ್ಥವಾದಂತಿಲ್ಲ. ಈ ಮಾತು ಅವಸರವಾದರೂ ನಿರ್ಣಯಕ್ಕೆ ಬರಲು ಇನ್ನೂ ಸಾಧ್ಯವಾಗುವ ದಿಕ್ಕಿನತ್ತ ಸಾಗಬೇಕಿದೆ. ಈ ಪಾಂಚಾಳರು ಕೂಡ ಮಾತೃದೇವತೆಯ ಆರಾಧಕರು ಇವರು ಆರಾಧಿಸುವ ಮಾತೃದೈವ ಕಾಳಮ್ಮ, ಕಾಳಿ, ಭದ್ರಕಾಳಿ, ಆದಿಶಕ್ತಿ ಹೀಗೆ ಹಲವಾರು ಹೆಸರುಗಳನ್ನು ಕರೆಸಿಕೊಳ್ಳುವ ಈ ದೇವತೆ ಪಾಂಚಾಳರಲ್ಲಿ ಆರಾಧ್ಯ ದೈವ ಈಕೆಯೇ ಎಲ್ಲಾ. ಶಿರಸಂಗಿಯ ಶಕ್ತಿ ಪೀಠ ವಿಶ್ವಕರ್ಮರ ಐದು ಪೀಠಗಳಲ್ಲಿ ಅತಿಮುಖ್ಯವಾದುದು ಅಷ್ಟೇ ಅಲ್ಲ ಭಾರತದ ಶಕ್ತಿ ಪೀಠಗಳಲ್ಲಿ ಶಿರಸಂಗಿ ಶಕ್ತಿ ಪೀಠವೂ ಒಂದು. ಆ ಪೀಠವು ಇಂದು ಪಾಂಚಾಳರ ಸಾಂಸ್ಕೃತಿಕ ಕೇಂದ್ರವೂ ಆಗಿದೆ. ಪಾಂಚಾಳರು ಕಾಳಿಯನ್ನು ಯಾವ ಘಟ್ಟದಿಂದ ತಮ್ಮ ಆರಾದ್ಯದೇವಿತೆಯಾಗಿ ಪಡೆದುಕೊಂಡರು ಎಂಬುದನ್ನು ನಾವು ನೋಡಬಹುದು.

ವಿಶ್ವಕರ್ಮರಿಗೆ ತಮ್ಮದೇ ಆದ ಮಠಮಾನ್ಯ ಗುರುಪೀಠ ಕಂಡು ಬರುತ್ತವೆ. ಗುಲಬರ್ಗಾ ಜಿಲ್ಲೆಯ ಯಾದಗಿರ ಏಕದಂಡಿ ಮಠ, ಶಿವಮೊಗ್ಗದ ಅಂತರವಳ್ಳಿ ಮಠ, ಶಿರಸಂಗಿ ಕಾಳಿಕಾಂಬ ಮಠ ಹೀಗೆ ಹಲವಾರು ಮಠಮಾನ್ಯಗಳಿದ್ದರೂ ಜನಸಾಮಾನ್ಯರು ಅವುಗಳಿಂದ ದೂರವಿದ್ದಂತೆ ಕಂಡರೂ ಈ ಮಠಗಳಿಗೆ ಸಮೀಪವಿದ್ದವರು ನಡೆದು ಕೊಳ್ಳುತ್ತಾರೆ. ದೂರ ದೂರದ ಊರುಗಳಿರುವುದರಿಂದ ಅಲ್ಲಿಗೆ ಹೋಗಿ ಬರುವುದು ಕಡಿಮೆ. ಆದರೆ ಶಿರಸಂಗಿಗೆ ಮಾತ್ರ ಪೂರ್ಣ ಪ್ರಮಾಣದಲ್ಲಿ ಬೇಟಿಕೊಟ್ಟು ಆಕೆಯ ದರ್ಶನ ಪಡೆದುಕೊಳ್ಳುತ್ತಾರೆ. ಇವು ಪಾಂಚಾಳರು ಆರಾದ್ಯ ದೈವವಾಗಿ ಕಂಡು ಬರುತ್ತವೆ.

ಆದಿ ಮಾನವ ಬೇಟೆಯಿಂದ ಕೃಷಿಯನ್ನು ತಲುಪಿದಾಗಲೇ ಹಂತ ಹಂತವಾಗಿ ತಮ್ಮ ಅಸ್ಥಿತ್ವವನ್ನು ಗುರುತಿಸಿ ಕೊಳ್ಳತೊಡಗಿದರು. ಆರಂಭದ ಹಂತದ ಕೃಷಿಗೆ ಬೇಕಾದ ಪ್ರಾಣಿಗಳ ಬೇಟೆಯಾಡಲು ಮಾನವನು ರಕ್ಷಣೆಗಾಗಿ ಆಯುಧ ಇತರೆ ಸಲಕರಣೆಗಳನ್ನು ಪೂರೈಸುವ ಕಾರ್ಯವನ್ನು ಇವರು ವಹಿಸಿಕೊಂಡರು. ಯಾವಾಗ ತಾಮ್ರ. ಓತ್ತಾಳೆ, ಕಬ್ಬಿಣ, ಬೆಳ್ಳಿ, ಬಂಗಾರದ ಅದಿರನ್ನು ಕಂಡು ಹಿಡಿದು ಅದನ್ನು ಬೆಂಕಿಯ ಮೂಲಕ ಶುದ್ಧಗೊಳಿಸುವಲ್ಲಿ ಇವರು ಶ್ರಮ ಆಗಾಧವಾದುದು. ಈ ತಂತ್ರ ಅವರ ಉತ್ಪಾದನಾ ವ್ಯವಸ್ಥೆ ವಿಶಿಷ್ಟರೂಪ ಪಡೆದು ಕೊಂಡಿತ್ತು ಈ ಸಂಶೋಧನೆಯಿಂದ ಅನೇಕ ವೃತ್ತಿಗಳು ಉದಯಿಸಿದವು. ಅವರ ಸಂಶೋಧನೆಗೆ ಕಾರ್ಯ ತಂತ್ರ ರೂಪಿಸಲು ಬೆಂಕಿ ಪ್ರಮುಖ ಪಾತ್ರ ವಹಿಸಿತು. ಬೆಂಕಿ ಅವರ ಅಸ್ಥಿತ್ವ ಗುರುತಿಸಿ ಕೊಳ್ಳಲು ಕಾರಣವಾದ ಹಿನ್ನಲೆಯಲ್ಲಿ ಬೆಂಕಿಯನ್ನು ಆರಾಧಿಸಲು ತೊಡಗಿದರು. ಬೆಂಕಿಯಲ್ಲಿ ಶಕ್ತಿ ಹೇಗೆ ಅಡಗಿದೆ ಎಂಬುದನ್ನು ತಮ್ಮ ಅನುಭವಗಳಿಂದ ಕಂಡುಕೊಂಡರು.

ಪಾಂಚಾಳರು ಕುಲುಮೆ ಮತ್ತು ಅಗ್ಗಿಷ್ಟಿಕೆಯನ್ನು ಕಾಳಮ್ಮ ಎಂದೇ ಪೂಜಿಸುವುದನ್ನು ಕಾಣುತ್ತೇವೆ. ಪಾಂಚಾಳರ ಪಂಚ ವೃತ್ತಿಗಳಿಗೆ ಬೆಂಕಿ ಅತ್ಯವಶ್ಯಕ ಇವರು ವಿಕಾಸದ ಮೊದಲ ಘಟ್ಟದಲ್ಲಿಯೇ ಅವರ ಖನಿಜಗಳನ್ನು ಪತ್ತೆಹಚ್ಚಿದ, ಅದನ್ನು ಸಂಕ್ರಮಣದ ಕಾಲವೆಂದು ಹೇಳಬಹುದು. ಈ ಹಂತಕ್ಕೆ ಅವರು ತಲುಪಬೇಕಾದರೆ ಅದೆಷ್ಟೋ ಕಾಲಮಾನಗಳು ಗತಿಸಿದವು. ತಾಮ್ರ, ಹಿತ್ತಾಳೆ, ಕಬ್ಬಿಣ, ಬೆಳ್ಳಿ, ಬಂಗಾರ, ಸೀಸ ಕರಗಿಸುವ ತಂತ್ರಜ್ಞಾನವನ್ನು ಇವರು ಕಂಡುಕೊಂಡು ಅನೇಕ ಆಯುಧ, ಕೃಷಿಗೆ ಬೇಕಾದ ಉಪಕರಣ, ಮೂರ್ತಿಶಿಲ್ಪ, ಶಿಲಾಶಿಲ್ಪಗಳ ರಚನೆಯನ್ನು ಅಭಿವೃದ್ಧಿ ಪಡಿಸುತ್ತಲೇ ಬಂದಿದ್ದರ ಪರಿಣಾಮವಾಗಿ ಹರಪ್ಪ ಮೆಹೆಂಜೋದಾರ ಕಾಲಕ್ಕೆ ಅನೇಕ ವಿಗ್ರಹಗಳು ಮತ್ತು ಪಳೆಯುಳಿಕೆಗಳು ಕಂಡು ಬಂದಿವೆ. ಈ ಬೆಂಕಿಯನ್ನು ಪ್ರಕೃತಿಯಲ್ಲಿ ಕಂಡ ಇವರು ಅದರ ಶಕ್ತಿ ಏನೆಂಬುದನ್ನು ಅರ್ಥೈಸಿಕೊಂಡರು. ಪ್ರಕೃತಿಯನ್ನೇ ಮಾತೃದೇವತೆ ಎಂಬ ಅರ್ಥದಲ್ಲಿ ಪೂಜಿಸುತ್ತಿದ್ದರು. ಪ್ರಕೃತಿಯೇ ನೀಡಿದ ವರದಾನವಾದ ಬೆಂಕಿಯನ್ನು ಶಕ್ತಿಮಾತೆ, ಶಕ್ತಿದೇವತೆ ಎಂದು ಆರಾಧಿಸ ತೊಡಗಿದರು. ಬೆಂಕಿ ಶುದ್ಧಗೊಳಿಸುವಂತೆ ನಾಶಗೊಳಿಸುವ ಮತ್ತು ಅತ್ಯಂತ ರೋಷದಿಂದ ಕೂಡಿರುವ ಗುಣಗಳನ್ನು ಅಂದರೆ ಸೃಷ್ಟಿಸುವ ಶುದ್ಧಗೊಳಿಸುವ ಪ್ರಜ್ವಲಿಸುವ ಅಭಿವೃದ್ಧಿ ಪಡಿಸುವ ಮತ್ತು ನಾಶಗೊಳಿಸುವ ಎಲ್ಲಾ ಅಂಶಗಳು ಶಕ್ತಿಯಲ್ಲಿ ಅಡಗಿದೆ ಎಂಬುದನ್ನು ಕಂಡುಕೊಂಡು ಆ ಶಕ್ತಿ ದೇವತೆಯನ್ನೇ ಕಾಳಿಮಾತೆ ಎಂದು ಹೆಸರಿಸಿದರು. ಈ ಕಾಳಿಯ ಗರ್ಭದಲ್ಲಿ ವಿಶ್ವವೇ ಅಡಗಿದೆ ಆಕೆಯ ಆದೇಶದಿಂದಲೇ ವಿಶ್ವ ಚಲಿಸುತ್ತದೆ. ಅಂದರೆ ಕಾಳಿಯಿಂದಲೇ ಕಾಲ ಚಲಿಸುತ್ತದೆ. ಆ ಕಾಲವೇ ಜಗತ್ತನ್ನು ಆಳುತ್ತವೆ. ಜಗತ್ತು ಕಾಲ ನಿಯಂತ್ರಣಕ್ಕೊಳ ಪಟ್ಟಿರುತ್ತದೆ ಎಂಬ ಪರಿಕಲ್ಪನೆಗಳಿವೆ. ಈ ಶಕ್ತಿ ಮಾತೆಯು ತನ್ನಲ್ಲಿರುವ ಆದಿಶಕ್ತಿ, ಪರಾಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿಗಳನ್ನು ಪಾಂಚಾಳರ ಮೂಲಕ ಸಾನಗ, ಸನಾತನ, ಅಹಭೂವನ, ಪತ್ನಸ, ಸುಪರ್ಣಸ್ಯ ಗೋತ್ರದ ಪಂಚ ಕರ್ಮಿಗಳಾದ ಕಬ್ಬಿಣ, ಕಟ್ಟಿಗೆ, ಲೋಹ, ಶಿಲ್ಪಿ, ಸುವರ್ಣಶಿಲ್ಪಿಗಳಿಗೆ ಕ್ರಮವಾಗಿ ನೀಡಿದ್ದಾಳೆಂದು ತಿಳಿದು ಬರುತ್ತದೆ. ಪ್ರತಿಯೊಬ್ಬ ವಿಶ್ವಕರ್ಮನಲ್ಲಿ ಕಾಳಿಯ ಶಕ್ತಿರೂಪಗಳಿವೆ. ಹೀಗಾಗಿ ವಿಶ್ವಕರ್ಮರು ಕಾಳಿಕಾದೇವಿಯನ್ನು ಕುಲದೇವತೆ ಎಂದು ಆರಾಧಿಸುವುದು ಕಂಡುಬರುತ್ತದೆ. ಆ ಕುಲದೇವತೆಗಳೇ ತಮ್ಮ ಕಸುಬಿನ ಉಪಕರಣಗಳೆಲ್ಲ ಆಕೆಯ ಶಕ್ತಿ ಅಡಗಿದೆ ಎಂದು ನಂಬಿಕೊಂಡಿದ್ದಾರೆ.

ಭಾರತದಲ್ಲಿ ಬುದ್ಧಿ ಜೀವಿಗಳು ಎಂದು ಕರೆಸಿಕೊಂಡವರು ಮಾತೃ ದೇವತಾರಾಧನೆಯನ್ನು ವಿರೋಧಿಸಿದರು. ಕಾಳಿ ಎಂದರೆ 'ಕ್ಷುದ್ರದೇವಿ' ಎಂದು ಅವರು ಅರ್ಥೈಸಿಕೊಂಡಿದ್ದನ್ನು ಕಾಣುತ್ತೇವೆ. 'ಸ್ವಾಮಿ ವಿವೇಕನಂದರು' Kali is Brahamana in action ಎಂದಿದ್ದಾರೆ. (ಶಿರಸಂಗಿ ಕಾಳಮ್ಮ ಆರಾಧನಾ ಪರಂಪರೆ– ಗಂ. ದೈವಜ್ಞ ಪುಟ– ೧೦) ಕಾರ್ಯ ಶೀಲವಾದ ಬ್ರಹ್ಮಶಕ್ತಿಯೇ ಕಾಳಿ, ಲಕ್ಷ್ಮಿ ಎಂದರೆ ಸೌಂದರ್ಯ ಮತ್ತು ಐಶ್ವರ್ಯಗಳಿರಬಹುದು ಗೌರಿ ಎಂದರೆ ಶುಭಮಂಗಳ ಕಾರ್ಯವಿರಬಹುದು. ಸರಸ್ವತಿ ಎಂದರೆ ವಿದ್ಯೆಜ್ಞಾನಗಳಿರಬಹುದು ಅಂದರೆ ಐಶ್ವರ್ಯ ಮಂಗಳ ವಿದ್ಯಾಜ್ಞಾನಗಳೆಲ್ಲವಕ್ಕು ಕ್ರಿಯಾಶಕ್ತಿ ಮೂಲ ಈ ಕ್ರಿಯಾಶಕ್ತಿಯೇ ಕಾಳಿ. ಶಕ್ತಿದೇವತೆ ಕುರಿತು ಅನೇಕ ಪುರಾಣಗಳಿವೆ ಅವುಗಳಲ್ಲಿ ಮಾರ್ಕಂಡೇಯ ಪುರಾಣದಲ್ಲಿ ಶಕ್ತಿದೇವತೆಯನ್ನು ಕುರಿತು ಶಕ್ತಿದೇವತೆಯ ಸೃಷ್ಟಿಮಾಡಲು ಮಹಾಕಾಳಿಯಾಗುತ್ತಾಳೆ. ಸಂಹಾರಕ್ಕೆ ಮಹಾಮಾರಿಯಾಗುತ್ತಾಳೆ. ಹಾಗೆ ಪರಶಕ್ತಿ ಒಂದೇ ಆದರೂ ಅದರಲ್ಲಿ ಹಲವಾರು ಶಕ್ತಿಗಳು ಅಡಕವಾಗಿವೆ. ಒಟ್ಟಿನಲ್ಲಿ ಈ ಶಕ್ತಿದೇವತೆಯು ರುದ್ರ, ಭದ್ರಕಾಳಿ. ಪಾಂಚಾಳರ ಆರಾಧ್ಯ ದೇವವಾಗಿ ಕಾಣಿಸಿಕೊಂಡಿದ್ದಾಳೆ. ಮಂತ್ರ, ತಂತ್ರಗಳಿಗೆ ಈಕೆಯನ್ನು ಇತರರು ಆರಾಧಿಸಿ ಸಿದ್ಧಿಯನ್ನು ಪಡೆಯುತ್ತಾರೆ. ಪಾಂಚಾಳರು ಮಾತೃದೇವೋಪಾಸಕರು ಪುರಾತನ ಕಾಲದಿಂದಲೂ ಕಾಳಮ್ಮ ಇವರ ಆದಿದೇವತೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿ ಗ್ರಾಮದೇವತೆಗಳಿವೆ. ದ್ಯಾಮವ್ವ, ದುರುಗವ್ವ, ಎಲ್ಲಮ್ಮ, ಹೊನ್ನೆತಮ್ಮ, ಮೈಲಾರಮ್ಮ ಹೀಗೆ ಪ್ರಸಿದ್ಧ ದೇವತೆಗಳು ಕಂಡು ಬರುತ್ತವೆ. ಈ ದೇವತೆಗಳನ್ನು ಪಾಂಚಾಳರೇ ರಚಿಸುವುದಲ್ಲದೆ ಪ್ರತಿಷ್ಠಾಪನೆ, ಪೂಜೆ, ಆರಾಧನೆ ಮಾಡುವುದನ್ನು ಪರಂಪರನುಗತವಾಗಿ ಸಾಗಿಸಿಕೊಂಡು ಬಂದಿದನ್ನು ಕಾಣಬಹುದು.

ಪಾಂಚಾಳರು ಇವತ್ತಿಗೂ ಗ್ರಾಮದೇವತೆಯ ಆರಾಧನೆಯ ಜತೆಗೆ ಪೂಜಾರಿಕೆಯನ್ನು ಬಹು ಹಿಂದಿನಿಂದಲೂ ನಿರ್ವಹಿಸಿಕೊಂಡು ಬಂದಿರುತ್ತಾರೆ. ಉದಾಹರಣೆಗೆ ಸೋಗಿಯ ಎಲ್ಲಮ್ಮ ದೇವತೆಯ ಪೂಜಾರಿಕೆಯ ಹಿಂದಿನಿಂದಲೂ ಬಡಿಗೇರರೇ ಮಾಡುತ್ತಾ ಬಂದಿದ್ದರು ಆದರೆ ಹಿರಿಯಜ್ಜ ಬಾರಿಕರ ಮನೆಯವರಿಗೆ ತೀರ ಹತ್ತಿರ ಇದ್ದನಂತೆ ಆ ಸಾಯುವ ಕಾಲಕ್ಕೆ ಬಾರಿಕರ ಅಜ್ಜಿಗೆ ಕೇಳಿದನಂತೆ ನಿನಗೆ ಏನುಬೇಕು? ಎಂದು ಎಲ್ಲಮ್ಮನ ಪೂಜೆಯನ್ನು ಬಿಟ್ಟುಕೊಡು ಎಂದಳಂತೆ ಆಕೆಯ ಕೋರಿಕೆಯ ಮೇರೆ ಎಲ್ಲಮ್ಮನ ಪೂಜಾರಿಕೆಯನ್ನು ಬಿಟ್ಟು ಕೊಟ್ಟರೂ ಜಾತ್ರೆಯ ಸಂದರ್ಭದಲ್ಲಿ ಅವರೇ ಅದನ್ನು ಬಣ್ಣ ಹಚ್ಚುವುದು, ಪೂಜೆಮಾಡುವುದು ಮತ್ತ ಅವರು ನೈವೇದ್ಯವನ್ನು ಮುಟ್ಟಿಸುವುದಿಲ್ಲ. ಬಡಿಗೇರರು ಗುಡಿಗೆ ಬಂದಾರೆಂದರೆ ಅವರು ಹೊರಬರುತ್ತಾರೆ. ಇಂತಹ ಉದಾಹರಣೆಗಳು ಕಂಡು ಬರುತ್ತವೆ. ಇಂತಹ ಸಂಗತಿಗಳು ಕೆಲವು ಕಡೆ ಇದ್ದರೆ ಬಹುತೇಕವಾಗಿ ಪಾಂಚಾಳರು ಗ್ರಾಮದೇವತೆಗಳ ಪೂಜಾರಿಕೆಯನ್ನು ಅವರೇ ಪರಂಪರೆಯಾಗಿ ಮಾಡುತ್ತಾ ಬಂದಿದ್ದಾರೆ ಹಾಗೆಯೇ ಮಾಗಳದ ಬಡಿಗೇರ ವೀರಾಚಾರಿ ಯವರು ದ್ಯಾಮವ್ವನ ಸಂಪೂರ್ಣ ಜವಾಬ್ದಾರನೂ ಅವರೇ ನಿರ್ವಹಿಸುತ್ತಾರೆ. ಇಂತಹ ನಿದರ್ಶನಗಳನ್ನು ಕರ್ನಾಟಕದ ತುಂಬಾ ನಾವು ಕಾಣಬಹುದು. ಸಾಮಾನ್ಯವಾಗಿ ಗ್ರಾಮದೇವತೆಗಳ ಪೂಜಾರಿಕೆ ಪಾಂಚಾಳರದೇ ಎಂಬುದನ್ನು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕಾಣಬಹುದು. ಅನ್ಯ ಸಮುದಾಯದವರೂ ಈ ಶಕ್ತಿದೇವತೆಗಳಿಗೆ ಪೂಜೆ, ಹರಕೆ, ಸಲ್ಲಿಸುತ್ತಾರೆ. ಆದರೆ ಪೂಜೆಯನ್ನು ಎಲ್ಲಿಯೂ ಅನ್ಯ ಜಾತಿಯವರು ಸಲ್ಲಿಸುವುದು ವಿಶೇಷವಾಗಿ ಕಂಡುಬರುವುದಿಲ್ಲ. ವಿಶ್ವಕರ್ಮರು ಆರಾಧಿಸುವ ಮಾತೃದೇವತೆಗಳಲ್ಲಿ ಕಾಳಿಯನ್ನು ಶಾಕ್ತ ಮೂಲದ ದೇವತೆಯೆಂದು ದ್ಯಾವಮ್ಮ, ದುರುಗವ್ವನನ್ನು ಜನಪದ ಮೂಲದ ದೇವತೆಯೆಂದು ವರ್ಗೀಕರಿಸಿದ್ದಾರೆ. ಸಾಮಾನ್ಯವಾಗಿ ಕಾಳಿ ದೇವತೆಯ ಮುಂದೆ ಅಥವಾ ಹಿಂದೆ ಬನ್ನಿಮರ ಮಾತ್ರ ಕಂಡುಬರುತ್ತದೆ. ಪಾಂಚಾಳರಿಗೆ ಕಾಳಿಯಷ್ಟೇ ಮಹತ್ವ ಬನ್ನಿಮರಕ್ಕೆ ಇದೆ. ಇದನ್ನೇ ಕಾಳಿಮಾತೆ ಎಂದು ಪೂಜಿಸುವ ರೂಢಿ ಬೆಳದುಕೊಂಡು ಬಂದಿದು.

ಪಾಂಚಾಳರು ತಮ್ಮ ಕುಲ ಕಸುಬುಗಳ ಮೂಲಕ ಮತ್ತು ಇವರ ವೃತ್ತಿಗಳಲ್ಲಿ ಒಂದೇ ತಂತ್ರದ ಬಳಕೆ ಇರುವುದರಿಂದ ಒಂದು ಕಾಲಕ್ಕೆ ಸಂಘಟಿತರಾಗಿಯೇ ಇದ್ದರು. ಇವರಲ್ಲಿ ಅಸಂಘಟನೆ ಎಂದು ಉದಯಿಸಿತೋ ಅಂದಿನಿಂದ ಇವರ ಅಸ್ಥಿತ್ವಗಳು ಅಡಿಪಾಯವಿಲ್ಲದ ಗೋಡೆಗಳಂತೆ ಅಲುಗಾಡ ತೊಡಗಿದವು. ಪಂಚ ವೃತ್ತಿಯನ್ನ ಅನುಸರಿಸುವ ಇವರು ಸಂಘಟಿತರಾದರೆ ಸಾದಿಸಬೇಕಾದ್ದನ್ನು ಸಾದಿಸಿಯೇತಿರುತ್ತಾರೆ. ಅಂತಹ ಛಲ, ಹಟವಾದಿತನ ಇವರಲ್ಲಿರುವುದನ್ನು ಕಾಣಬಹುದು. ಈ ಅಸಂಘಟನೆಗೆ ಪಾಂಚಾಳರಲ್ಲಿಯ ಆರ್ಥಿಕ ಅಸಮತೋಲನ ಮತ್ತು ವೃತ್ತಿಗೆ ಸಂಬಂಧಿಸಿದ ನೀತಿ ಕಾರಣವಾಗಿರಬಹುದೆಂದು ಮೇಲೆಯೇ ಗೋಚರಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಕಾರಣಗಳೂ ದೈವತ್ವದ ಮೇಲೆ ಹೊರಿಸುತ್ತಾ ಹೋಗುತ್ತಾರೆ. 'ವಿಶ್ವಕರ್ಮ ಆವಾಗ ಶಾಪಕೊಟ್ಟಿದ್ದಾನೆ. ಅದಕ್ಕೆ ನಾವು ಉದ್ಧಾರವಾಗಿಲ್ಲವೆಂಬ' ಮಾತಿನಲ್ಲಿಯೇ ನಂಬಿಕೆಗಳನ್ನಿಟ್ಟು ಮೇಲೇಳಲು ಧೈರ್ಯ ಮಾಡುವ ಶಕ್ತಿ ಇವರಲ್ಲಿ ಇದ್ದಂತೆ ಎಂದು ಹುಲಿಯೂರಿನ ವೀರಾಚಾರಿ ತನ್ನ ಅಸಾಯಕತೆಯನ್ನು ತೋಡಿಕೊಳ್ಳುತ್ತಾರೆ.

ಬಹುಮುಖ್ಯವಾಗಿ ಪಾಂಚಾಳರು ಪೂಜಿಸುವ ದೇವರುಗಳಲ್ಲಿ ಮೌನೇಶ್ವರ, ಮೋನಯ್ಯ, ಮಾನಪ್ಪ ಎಂದು ಕರೆಯುವ ಈ ದೇವರು ಪಾಂಚಾಳರ ಆರಾಧ್ಯ ದೈವ. ಸಾಮಾನ್ಯವಾಗಿ ಇವರಲ್ಲಿ ಆಚರಿಸುವ ಅಥಾವಾ ಪೂಜಿಸಲ್ಪಡುವ ದೇವರ ನಾಮಗಳಿರುವುದನ್ನು ಕಾಣಬಹುದು. ಪುರುಷರಿಗೆ ಮೌನೇಶ, ಮಾನಪ್ಪ, ಮಾನಾಚಾರಿ ಎಂದೂ ಸ್ತ್ರೀಯರಿಗೆ ಮಾನಪ್ಪ ಎಂಬ ಹೆಸರುಗಳು ಕೂಡ ಕೇಳಿಬರುತ್ತವೆ. ಅದರಂತೆ ಕಾಳಿಕಾದೇವಿಯ ನಾಮಗಳನ್ನು ಸಾಮಾನ್ಯವಾಗಿ ಬಹುತೇಕವಾಗಿ ಸ್ತ್ರೀ ಪುರುಷರಿಬ್ಬರಿಗೂ ನಾಮಕರಣ ಮಾಡಿರುತ್ತಾರೆ. ಸ್ತ್ರೀಯರಿಗೆ ಕಾಳವ್ವ, ಕಾಳಮ್ಮ ಹಾಗೂ ಪುರುಷರಿಗೆ ಕಾಳಪ್ಪ, ಕಾಳೇಶ, ಕಾಳಾಚಾರಿ ಎಂಬ ಹೆಸರುಗಳು ಅನ್ವಯವಾಗುವಂತೆ ಹೆಸರಿಡುತ್ತಾರೆ. ದೈವದ ಒಸ್ನಳಿಯಲ್ಲಿಯೇ ಈ ಪಾಂಚಾಳರ ಹೆಸರುಗಳು ಬಹುತೇಕವಾಗಿ ಕಂಡು ಬರುವುದೆಂದರೆ ಅವರು ಆಚರಿಸುವ ಅಥವಾ ಪೂಜೆಗೊಳ್ಳುವ ಆರಾಧಿಸುವ ದೈವದ ಹೆಸರುಗಳನ್ನು ನಾಮಕರಣ ಮಾಡಿರುತ್ತಾರೆ. ಆಯಾ ದೇವರ ವರದಿಂದ ಜನಿಸಿದರೆ ಆಯಾ ದೈವದ ಹೆಸರನ್ನು ಕರೆಯುತ್ತಾರೆ. ಇತರ ಬೇರೆ ಬೇರೆ ಹೆಸರುಗಳು ಕಂಡುಬರುತ್ತವೆ.

ಆದರೂ ಈ ಹೆಸರಿನವರನ್ನು ಕೇಳಿದರೆ ಇವರು ಪಾಂಚಾಳರು ಎಂದು ತೀರ್ಮಾನಕ್ಕೆ ಬಹುಬೇಗನೇ ಬರುತ್ತಾರೆ.

ಮೌನೇಶ ಅಥವಾ ಮಾನಯ್ಯ ಈ ದೇವರು ಬಹುತೇಕ ಪಾಂಚಾಳರ ಮನೆದೇವರಾಗಿರುವುದನ್ನು ನೋಡಬಹುದು. ಈ ಮಾನಯ್ಯ ಒಬ್ಬ ದೇವತಾ ಪುರುಷ. ವಿಶ್ವಕರ್ಮನಿಂದ ಮನು ಅಂದರೆ ಸೂರ್ಯನ ಅನುಗ್ರಹದಿಂದ ಜನಿಸಿದವನು. ಈ ಮಾನಯ್ಯನ ವೃತ್ತಿ ಕಮ್ಮಾರಿಕೆಯಾದರೂ ಈ ಪಂಚ ಜನಗಳಿಗೆ ಆರಾಧ್ಯದೈವ. ಈ ಮಾನಯ್ಯ ಸಾಂಸ್ಕೃತಿಕ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ತಿಂಥಿಣಿ ದಕ್ಷಿಣ ಕಾಶಿ ಎಂದೇ ಕರೆಯುವ ಈ ಮೌನೇಶ ಮುಸ್ಲಿಂರ ಮೊಹಿಂದಿನ್‌ನೂ ಕೂಡ ಆಗಿದ್ದಾನೆ. ಸುರಪುರ ತಾಲೂಕಿನ ತಿಂಥಿಣಿಯ ಮಾನಯ್ಯ ಹಿಂದು ಮುಸ್ಲಿಂರ ಭಾವೈಕ್ಯತೆಗೆ ಹೆಸರು ಪಡೆದಿದೆ. ಅದರಂತೆ ಗದಗ ಜಿಲ್ಲೆಯ ಶಿರಹಟ್ಟಿ ಪಕ್ಕಿರಸ್ವಾಮಿ, ವರವಿಯ ಮಾನಯ್ಯ ಇಬ್ಬರೂ ಇಂದಿಗೂ ಆ ಭಾಗದ ಜನರಿಗೆ ಭಾವೈಕ್ಯತೆಯ ಬೆಸುಗೆಯ ಕೊಂಡಿಯಾಗಿ ಮುಂದುವರೆದುಕೊಂಡು ಬಂದಿರುವುದನ್ನು ಕಾಣಬಹುದು. ಮಾನಯ್ಯ ಮತ್ತು ಮೊಹಿಂದಿನ್ ಎರಡು ಒಂದೇ ದೇವರು ಎರಡು ನಾಮಗಳಾಗಿವೆ ಎಂದು ಕೆಲವರು ಹೇಳುತ್ತಾರೆ. ಮೊಹಿಂದಿನ್ ಮಾನಯ್ಯನಾಗಿ ಮಾನಯ್ಯ ಮೊಹಿಂದಿನ್ ನಾಗಿ ಕಂಡುಬರುತ್ತಾರೆ ಎಂಬ ಮಾತುಗಳು ಕೇಳಿ ಬರುತ್ತವೆ. ಆದರೆ ಜಾತ್ರೆಯ ಸಂದರ್ಭದಲ್ಲಿ ಹಿಂದೂ ಮುಸ್ಲಿಂರು ಕೂಡಿ ಆಚರಿಸುತ್ತಾರೆ. ಇವೆರಡಕ್ಕು ಸಾಮ್ಯಗಳು ಒಂದೆ ಆಗಿರುತ್ತವೆ. ಮಾನಯ್ಯನ ಗುಡಿಗೋಪುರಗಳು ಎಲ್ಲಿ ನೋಡಿದರೂ ಇಸ್ಲಾಮಿಕ್ ಮಾದರಿಯಾದ ಕಟ್ಟಡಗಳನ್ನು ಕಾಣಬಹುದು ತಿಂಥಿಣಿ, ವರವಿ, ಹರಿಹರಗಳಲ್ಲಿ ಗುಡಿಯ ಮೇಲೆ ಬುರಜುಗಳನ್ನು ಕಾಣಬಹುದು. ಆಯಾ ದೇವಾಲಯದ ಮಾದರಿಗಳು ಅದರಂತೆಯೇ ನಿರ್ಮಾಣ ಗೊಂಡಿರುವುದನ್ನು ಕಾಣಬಹುದು. ಮೌನೇಶನು ಪಾಂಚಾಳರ ಆರಾಧ್ಯ ದೈವ ಎಂಬ ಮಾತನ್ನು ಒತ್ತಿ ಹೇಳುವ ಪ್ರಮೇಯ ಬರಬಾರದು. ಈ ಮೌನೇಶ್ವರನು ಒಬ್ಬ ಸಾಂಸ್ಕೃತಿಕ ವ್ಯಕ್ತಿಯಾಗಿ ವಚನಗಳನ್ನು ರಚಿಸುವಲ್ಲಿ ನಿರತನಾಗಿದ್ದನು.

ಈ ಪಾಂಚಾಳರಿಗೆ ಮಾನಯ್ಯನು ವಚನ ರೂಪದಲ್ಲಿ ಜೀವನದ ಗುಟ್ಟನ್ನು ಹೇಳಿದ್ದಾನೆಂಬುದು ಕಂಡುಬರುತ್ತದೆ.

"ಬಡಗಿ ಕಮ್ಮಾರರಿಗೆ ತುಡುಗುತನ ಸಲ್ಲದು

ಬಡವರಿಗೆ ಬಡಾಯಿ ಸಲ್ಲದು ಹೇಳಿದಂತೆ ಇರಬೇಕು

ಊಳಿಗದ ಒಕ್ಕುಲದಂತೆ ಇರಬೇಕು ಮುಂದೆ

ಆಳಾಗಿ ನಡೆದರು ಎನಗೊಂದು ತಾನಾಗಿ ಹೋಗುವುದು

ಮಾನಯ್ಯನ ಮಾತು ಜ್ಞಾನದ ಹದನದಂತೆ ಜ್ಞಾನ ವುಳ್ಳವರು

ತಿಳಿಕೊಳ್ಳಿ ಬಸವಣ್ಣ"

(ತಿಂಥಿಣಿ ಮೋನಪ್ಪಯ್ಯ ಒಂದು ಸಾಂಸ್ಕೃತಿಕ ಅಧ್ಯಾಯ- ಎಂ.ಎಂ. ಪಡಶೆಟ್ಟಿ -೭೪) ಈ ರೀತಿಯಾಗಿ ಪಾಂಚಾಳರು ಹೇಗಿರಬೇಕು ಹೇಗಿದ್ದರೆ ಜೀವನ ಚನ್ನಾಗಿರುತ್ತದೆ? ಯಾರ ಹತ್ತಿರ ಹೇಗಿರಬೇಕು ಇತ್ಯಾದಿ ಅಂಶಗಳನ್ನು ತಮ್ಮ ವಚನಗಳಲ್ಲಿ ಬಹಳ ಮಾರ್ಮಿಕವಾಗಿ ಪಾಂಚಾಳರನ್ನು ಎಚ್ಚರಿಸುತ್ತಾ ಸಾಗಿದ್ದಾನೆ. ಇವರು ಬಸವಣ್ಣ ಎಂಬ ಅಂಕಿತನಾಮ ಇಟ್ಟುಕೊಂಡು ಪವಾಡ ಪುರುಷನಾಗಿ ಪಾಂಚಾಳರ ಆರಾಧ್ಯ ದೈವನಾಗಿ ಇಂದಿಗೂ ಅತ್ಯಂತ ಹೆಚ್ಚು ಹೆಚ್ಚು ಪೂಜಿಸಲ್ಪಡುತ್ತಾನೆ.

ಪಾಂಚಾಳರಿಗೆ ದೇವರ ಬಗ್ಗೆ ಅತಿಯಾದ ನಂಬಿಕೆ, ಆಚರಣೆಗಳನ್ನು ಅಳವಡಿಸಿಕೊಂಡಿದ್ದಾರೆ. ವಿಶ್ವ ನಿರ್ಮಾಣದ ವಿಷಯ ಪ್ರಸ್ತಾಪ ಎಲ್ಲಿ ಬರುತ್ತದೆಯೋ ಅಲ್ಲಿ ಈ ವಿಶ್ವಕರ್ಮರು ಬರುತ್ತಾರೆ. ಈತನೇ ಎಲ್ಲವನ್ನು ನಿರ್ಮಾಣ ಮಾಡಿಹನು ಎಂಬ ಮಾತನ್ನು ಹೇಳುತ್ತಾರೆ. ಹೀಗೆ ಪಾಂಚಾಳರ ಗುರುವಾದ ದೈವ ಸ್ವರೂಪಿ ಜಗತ್ತಿನ ಸೃಷ್ಟಿಕರ್ತ ವಿಶ್ವಕರ್ಮನು ಕಾರಣ ಆತನ ಕೃಪೆಯಿಂದಲೇ ನಾವು ಭೂಮಿಯ ಮೇಲೆ ನಿಂತಿರುವುದು ಎಲ್ಲವೂ ಅವನಿಂದಲೇ

ಎಂದು ದೈವ ಶಕ್ತಿಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಇನ್ನು ವಚನ ಸಾಹಿತ್ಯದಲ್ಲಿ ಎಲ್ಲಾ ಕಾಯಕದ ಬಗ್ಗೆಯು ವಚನಗಳನ್ನು ನಾವು ನೋಡಬಹುದು. ಬಾಚಿ ಕಾಯಕದ ಬಸವಣ್ಣನೂ ಕೂಡ ವಿಶ್ವಕರ್ಮ ಮತ್ತು ಕಾಳಿಕಾದೇವಿಯನ್ನು ಸ್ಮರಿಸಿ ಲಿಂಗ ಕಟ್ಟಿ ಕೊಳ್ಳಬಹುದು ಮತ್ತು ಲಿಂಗದ್ರೋಹ ಮಾಡಿದವರಿಗೆ ಬೋಧಿಸಿದ ವಚನಗಳು ಕಂಡುಬರುತ್ತವೆ.

"...............................

ಕಿಂಚಿತ್ತು ಸುಖದಲ್ಲಿ ಲಿಂಗವ ಬಿಟ್ಟು
ಅಂಗನೆಯರ ರಸಲದಲ್ಲಿ ಅಂಗೀಕರಿಸಿ
ಅವರವರ ಪಾದಂಗಳ*ಮಾಡಿ ನಾ ಲಿಂಗಾಂಗಿ ಎಂದಡೆ
ಸರ್ವಸಂಗ ಪರಿತ್ಯಾಗವ ಮಾಡಿದ ಲಿಂಗಾಂಗಿಗಳೊಪ್ಪರು
ಬಸವಣ್ಣ ಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾ ಮಿಮಲ ರಾಜೇಶ್ವರ
ಲಿಂಗವು ಸ್ವಪ್ನದಲ್ಲಿ ಕುರುಹ ಕಾಣಿಸಿಕೊಳ್ಳ"

ಎಂದು ಬುದ್ಧಿ ಹೇಳಿದ್ದಾನೆ. ವಿಶ್ವಕರ್ಮನ ವಂಶಸ್ಥರೆಂದು ಹೇಳಿಕೊಳ್ಳುವ ಇವರು ಅವನಿಂದ ಸೃಷ್ಟಿಯಾದ ಮನು, ಮಯ, ತ್ವಷ್ಟ, ದೈವಜ್ಞ ಮತ್ತು ಶಿಲ್ಪಿ ಎಂಬ ಗೋತ್ರ ಋಷಿಗಳಿಂದ ಕಬ್ಬಿಣ, ಕಟ್ಟಿಗೆ, ಕಂಚು, ಚಿನ್ನ ಮತ್ತು ಶಿಲೆಯ ಕಾರ್ಯಗಳು ಮುಂದುವರೆದು ಕೊಂಡುಬಂದವು. ಇವರ ವೃತ್ತಿ ಸೂಚಕವಾದ ಉಪಕರಣಗಳನ್ನು ಕಾಳಿಯೆಂದು, ವೃತ್ತಿ ದೇವತೆಯನ್ನು ವಿಶ್ವಕರ್ಮನೆಂದು ಆರಾಧಿಸುವ ಪರಿಪಾಠವಿದೆ. ಇವರ ಮೂಲ ವೃತ್ತಿಗೆ ಅಗ್ನಿಯೇ ಕಾರಣವೆಂದು ಅದರ ಪ್ರತಿರೂಪವಾದ ದೇವಿಯನ್ನು ಆರಾಧಿಸುವ ದೇವತೆಯನ್ನಾಗಿ ಮಾಡಿಕೊಂಡರೆಂದು ಬಗೆದರೂ ತಮ್ಮ ಕುಲದೇವತೆ ಮತ್ತು ವೃತ್ತಿಗೂ ಸಂಬಂಧಗಳನ್ನು ಗುರುತಿಸಬಹುದು.

ಮುಖ್ಯವಾಗಿ ಯಂತ್ರ, ಮಂತ್ರ, ತಂತ್ರ ಮೊದಲಾದ ಸಿದ್ಧಿ ವಿದ್ಯೆಗಳ ದೇವತೆ ಈಕೆಯಾಗಿದ್ದಾಳೆ. ಈ ವಿದ್ಯೆಗಳಲ್ಲಿ ಪ್ರವೀಣರಾಗಲು ಸಿದ್ಧರು ಈಕೆಯನ್ನು ಆರಾಧಿಸುತ್ತಾರೆ. ಆಯುಧೋಪಕರಣ ಮೂರ್ತಿಶಿಲ್ಪಗಳ ತಯಾರಿಕೆಯಲ್ಲಿ ಈ ವಿದ್ಯೆಗಳು ಇವರಿಗೆ ಅವಶ್ಯವಾಗಿದ್ದವು. ಆದ್ದರಿಂದಲೇ ಶಂಬಾ ಜೋಷಿಯವರು ಹೇಳುವಂತೆ " ವಿಶ್ವಕರ್ಮ ಸಂಪ್ರದಾಯದವರು ಪ್ರಾಮುಖ್ಯರಿಂದ ಶೈವ ಸಂಪ್ರದಾಯರಾಗಿರುವಂತೆ ತೋರುತ್ತದೆ. ವೈಧಿಕ ಹಾಗೂ ಆಚಾರ್ಯ(ರಿ)! ಎಂಬ ಹೆಸರನೊಡನೆ ಉಪಪದವೂ ಇರುವುದುಂಟು. ಶೈವರಾದರೂ ಇವರು ಶಕ್ತಿಯ ಉಪಾಸಕರು. ಈಕೆ ಮೇಧಾವಿಯಾಗಿರಬೇಕು ನಿಜವಾಗಿ ಕಾಳಮ್ಮ ಹೆಸರಿನ ಕುಲದೈವವು ಇರುವುದು ಕಂಡುಬರುತ್ತದೆ. ಮಂತ್ರ, ಯಂತ್ರ, ತಂತ್ರ ವಿದ್ಯೆಯಲ್ಲಿ ವಿಖ್ಯಾತರಾಗಿದ್ದರೆಂದು" ಹೇಳುತ್ತಾರೆ. (ಹಾಲುಮತ ದರ್ಶನ ಶಂಬಾಕೃತಿ ಸಂಪುಟ-೩ ಮಲ್ಲೇಪುರಂ ಜಿ. ವೆಂಕಟೇಶ ಸಂ-೧) ಅಲ್ಲದೇ ವಿಶ್ವಕರ್ಮನು ದೇವತೆಗಳಿಗಾಗಿ ವಿಮಾನ, ನಗರ ರಚನೆ ಮಾಡಿದ್ದಲ್ಲದೇ ಯುದ್ಧ ದೇವತೆಗಳಿಗೆ ಅನೇಕ ಶಸ್ತ್ರಾಸ್ತ್ರಗಳನ್ನು ಮಾಡಿಕೊಡುತ್ತಾನೆ. ತಿಲೋತ್ತಮ ಎಂಬ ಅಪ್ಸರೆಯನ್ನು ಸೃಷ್ಟಿಸಿದ ಕಥೆ ಇದೆ. ಸುಂದೋಪ ಸುಂದರರು ಈಕೆಗಾಗಿ ಕಾಡಿ ಮಡಿದರು 'ತವಾಟಪುಟ ಭೇದನಾಭಿಚಾರ ಹೋಮ ಸಾಧಕರು, ಹೋಮ ಕುಂಡಲಚ್ಛಾಯಿನೇ ದೇವಾಕರ್ಷಣಂ' ಆಗುವವರೆಂದು ಆಧುನಿಕ ಶಾಸನಗಳಿಂದ ತಿಳಿಯುತ್ತದೆ. ಈ ಯಂತ್ರ ಮಂತ್ರ ವಿದ್ಯೆಗಳನ್ನು ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಇಂಥಹ ಸಿದ್ಧ ವಿದ್ಯೆಗಳನ್ನು ಗಳಿಸಲು ಕಾಳಿಯನ್ನು ಕುಲ ದೈವವೆಂದು ಮಾಡಿಕೊಂಡಿರುವ ಸಾದ್ಯತೆ ಇದೆ. ಕ್ರಿ ಪೂ ಮೊದಲೇ ಆಕೆಯನ್ನು ಕುಲದೇವತೆಯನ್ನಾಗಿ ಮಾಡಿಕೊಂಡಿದ್ದರೆಂಬುದಕ್ಕೆ ಆಗ ಆಳ್ವಿಕೆ ಮಾಡುತಿದ್ದ ಚೋಳರು ಕಾಳಿಯ ಉಪಸಕರಾಗಿದ್ದರೆಂದು ಚೋಳಮಹಾರಾಜರಿಗೆ ಪುರೋಹಿತರಾಗಿದ್ದರು ಎಂದು ತಿಳಿಯುತ್ತದೆ. ಇವರಿಬ್ಬರ ಮಾತುಗಳು ಸರಿಯಾದ ಮಾರ್ಗದತ್ತ ಸಾಗುತ್ತದೆ ಆಕೆ (ಕಾಳಿಯೆ) ಕುಲದೇವತೆ ಯಾಗಿದ್ದಳು, ಯಾಗಿರುತ್ತಾಳೆಂಬ ನಂಬಿಕೆಗೆ ಅವರು ಆಚರಿಸುವ ಪೂಜಿಸುವ ವಿಧಾನ, ಆರಾಧನೆಯಿಂದಲೇ ತಿಳಿದುಬರುತ್ತದೆ.

ಅಗ್ನಿಯ ಆರಾಧಕರಾದ ಪಾಂಚಾಳರು ಅದರ ಪ್ರತೀಕವಾಗಿ ಕುಲಮೆಯನ್ನು ಕಮ್ಮಟೇಶ್ವರನೆಂದು ಅದರಲ್ಲಿ ಪ್ರಜ್ವಲಿಸುವ ಬೆಂಕಿಯನ್ನು ಕಾಳಮ್ಮನೆಂದು ಕರೆಯುತ್ತಾರೆ. ಇಂದಿಗೂ ಈ ಕುಲುಮೆಗಳ ಮೇಲೆ ಕಾಳಮ್ಮನ ಮೂರ್ತಿಯನ್ನಿಡುತ್ತಾರೆ ಆದರಲ್ಲಿ ತಯಾರಿಸುವ ಲೋಹ ಮತ್ತು ಉಪಕರಣಗಳು ವಿಶ್ವಕರ್ಮ ಕೃಪೆಯಿಂದಲೇ ನಿರ್ಮಾಣ ವಾದುವುಗಳೆಂದು ತಿಳಿದು ಬರುತ್ತದೆ. "೧೫೫೪ ರ ವಿಜಯನಗರ ಅರಸರ ಸದಾಶಿವರಾಯನ ಕಾಲದಲ್ಲಿ ಛತ್ರದಹಳ್ಳಿ (ಹಗರಿಬೊಮ್ಮನಹಳ್ಳಿ)ಯ ಶಾಸನದಲ್ಲಿ ಹಂಪೆಯ ಮಾಲ್ಯವಂತ ರಘುನಾಥ ದೇವರ ಅಮೃತ ಪಡಿಗೆ ನೀರು ತುಂಬುವ ಏತದ ಬಾನೆಯನ್ನು ಶ್ರೀಮತು ಕಾಳಿಕಾದೇವಿ ಕಮಟೇಶ್ವರ ದೇವರವರ ಪ್ರಸಾದಿಗಳಾದಂಥ ಸೋಮಲ ಏಲ್ಲೋಜ ಗಟ ತಿಮ್ಮೋಜ ಗೋಪಲಿ ಮಲ್ಲೋಜ ಮತ್ತು ಮುಂತಾದ ವ್ರೋಜರು ಸೇರಿ ಮಾಡಿಕೊಟ್ಟರುವ್ರುದಾಗಿ ಹೇಳಿಕೊಂಡಿದ್ದಾರೆ". (ಶಿರಸಂಗಿ ಕಾಳಮ್ಮ –ವಾಸುದೇವರ ಬಡಿಗೇರ ಪುಟ– ೭೩) ಈ ರೀತಿಯಾದ ದೇವಿಯ ವರದಿಂದ ಹಲವಾರು ಕಾರ್ಯಗಳನ್ನು ಮಾಡಿರುವುದನ್ನು ಕಾಣಬಹುದು.

ಪಾಂಚಾಳರು ಉಗ್ರದೇವತೆಗಳಾದ ಶಿವ, ವೀರಭದ್ರ, ಭೈರವ, ಮೊದಲಾದವುಗಳನ್ನು ಮನೆದೇವತೆಗಳನ್ನಾಗಿ ಆರಾಧನೆ ಮಾಡುತ್ತಾ ಬಂದಿದ್ದಾರೆ. ವೀರಭದ್ರನ ಪುರವಂತಿಕೆ, ಗುಗ್ಗಳ ಸಂಪ್ರದಾಯಗಳೂ ಕಾಣಿಸಿಕೊಳ್ಳುತ್ತವೆ. ಬಹುಶಃ ಉಗ್ರದೇವತೆ ಮತ್ತು ಇವರಿಗೆ ಶಸ್ತ್ರಾಸ್ತ್ರ ನಿರ್ಮಾಣ ಕಾರ್ಯವೇ ಆರಾಧನೆಗೊಳಪಡಿಸಿರಬಹುದು. ಇತಿಹಾಸದುದ್ದಕ್ಕು ಅನೇಕ ರಾಜ ಮಹಾರಾಜರ ಕಾಲದಲ್ಲಿ ಇವರ ಮುಖ್ಯ ವೃತ್ತಿಗಳಲ್ಲಿ ಶಸ್ತ್ರಾಸ್ತ್ರಗಳ ನಿರ್ಮಾಣವೂ ಒಂದು. ತಾವು ತಯಾರಿಸುತ್ತಿದ್ದ ಶಸ್ತ್ರಾಸ್ತ್ರಗಳು ಯುದ್ಧ ದೇವತೆಗಳಾದ ಇವರ ಅಸ್ತ್ರಗಳಿಗೆ ಸಮಾನವಾಗಿರಲೆಂಬ ಕಲ್ಪನೆ ಮಾಡುವುದು ಸ್ವಭಾವಿಕ. ಇಂಥಹ ದೇವತೆಗಳನ್ನು ಆಗಿನ ರಾಜ ಮಹಾರಾಜರು ಆರಾಧಿಸುತ್ತ ಬಂದಿದ್ದರಿಂದ ಇವುಗಳ ಪ್ರಮುಖ್ಯತೆ ಹೆಚ್ಚಾಯಿತು.

ಈ ಪಾಂಚಾಳರು ದೈವತ್ವದಲ್ಲಿ ನಂಬಿಕೆ ಇಟ್ಟುಕೊಂಡುವರು. ಇವರು ಕಾಳಿಕಾದೇವಿಯನ್ನು ಅಥವಾ ಹಲವಾರು ಹೆಸರುಗಳುಳ್ಳ ದೇವಿಯನ್ನು ವಿಜಯ ದಶಮಿಯಲ್ಲಿ ಒಂಬತ್ತು ದಿನಗಳ ಕಾಲ ಪುರಾಣ ಓದುತ್ತಾರೆ. ಈ ದಿನಗಳಲ್ಲಿ ದೇವಿಯ ಪುರಾಣ ಓದಿದರೆ ಸಕಲ ಪುಣ್ಯ, ಐಶ್ವರ್ಯ, ಮಕ್ಕಳಿಲ್ಲದವರಿಗೆ ಮಕ್ಕಳ ಫಲವನ್ನು ಮತ್ತು ಬೇಕಾದವರಿಗ ಬೇಕಾಗುವುದನ್ನು ಕೊಡುತ್ತಾಳೆಂಬ ನಂಬಿಕೆಗಳಿವೆ. ಅಮವಾಸ್ಯೆ, ಮಂಗಳವಾರ, ಶುಕ್ರವಾರ ಮತ್ತು ಹಬ್ಬ ಹುಣ್ಣಿಮೆ ದಿನಗಳಲ್ಲಿ ಈ ದೇವಿಗೆ ಪ್ರಿಯವಾದ ದಿನಗಳಾಗಿವೆ. ದಸರ ಹಬ್ಬದ ದಿನ ಪಾಂಚಾಳರು ತಮ್ಮ ವೃತ್ತಿಯಲ್ಲಿ ಬಳಸುವ ಉಪಕರಣಗಳನ್ನು ದೇವತೆ ಅಥವಾ ಕಾಳಿ ಎಂಬ ನಂಬಿಕೆಗಳನ್ನಿಟ್ಟುಕೊಂಡು ಬಂದಿದ್ದಾರೆ. ದಸರ ಹಬ್ಬದ ಖಂಡ ಪೂಜೆಯ ದಿನ ವಿಶೇಷವಾಗಿ ಆಯುಧ ಪೂಜೆಯನ್ನು ಆಯಾ ಕುಲ ಕಸುಬಿನವರು ತಾವು ಉಪಯೋಗಿಸುವ ಸಲಕರಣೆಗಳಿಗೆ ಪೂಜೆ ಸಲ್ಲಿಸುತ್ತಾರೆ. ಅದರಂತೆ ಪಾಂಚಾಳರು ಕೂಡ ಆಯುಧ ಪೂಜೆಯನ್ನು ವಿಶಿಷ್ಟವಾಗಿ ಪೂಜಿಸುತ್ತಾರೆ. ಆ ದಿನ ಎಷ್ಟೆ ಕೊಟ್ಟರೂ ಸಾಮಾನುಗಳನ್ನು ಮುಟ್ಟುವುದಿಲ್ಲ ಕಾರಣ ಪಾಂಡವರು ವನವಾಸದಿಂದ ಬಂದು ಬನ್ನಿ ಮಹಾಂಕಾಳಿಯಲ್ಲಿದ್ದ ಆಯುಧಗಳನ್ನು ಪೂಜೆ ಮಾಡಿ ಅವುಗಳನನು ತೆಗೆದುಕೊಳ್ಳುತ್ತಾರೆ. ಆ ಕಾರಣಕ್ಕಾಗಿ ಎಲ್ಲಾ ವೃತ್ತಿಗಾರರು ಆಯುಧ ಪೂಜೆಯ ಮಾಡುತ್ತಾರೆ. ಅವುಗಳನ್ನು ಅಂದು ನೀರಿನಿಂದ ತೊಳೆದು ಕುಂಕುಮ, ಗಂಧ, ಅರಿಷಿಣ ಹಚ್ಚಿ ಹೂವು, ಬನ್ನಿಪತ್ರಿಯನ್ನು ಮುಡಿಸಿ ಊದಿನ ಕಡ್ಡಿ ಬೆಳಗಿ ತೆಂಗಿನಕಾಯಿ ಹೊಡೆಯುತ್ತಾರೆ. ಇನ್ನು ವಿಶೇಷ ಅಂದರೆ ಆ ಉಪಕರಣಗಳಿಗೆ ಕುಂಬಳ ಕಾಯಿಯನ್ನು ಹೊಡೆದು ಅದರ ತುಂಬಾ ಕುಂಕುಮವನ್ನು ಹಾಕುತ್ತಾರೆ. ಯಾಕೆಂದರೆ ಉಪಕರಣಗಳಿಗೆ ಪ್ರಾಣಿಗಳ ಬದಲಾಗಿ ಆಯುಧಗಳಿಗೆ ಬಲಿಯನ್ನು ಕೊಡುತ್ತಾರೆಂದು ಹಿರಿಯರು ಹಿಂದಿನಿಂದಲೂ ಬೆಳಸಿ ಕೊಂಡು ಬಂದಿದ್ದಾರೆ.

ಪಾಂಚಾಳರು ತಾವು ಮಾಡುವ ಕಾಯಕದಲ್ಲಿ ದೇವರನ್ನು ಕಾಣುತ್ತಾರೆ. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತನ್ನು ಜೀವನದಲ್ಲಿ ಅಳವಡಿಸಿಕೊಂಡಿರುವವರು ಇದ್ದಾರೆ. ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಊಟ, ನೀರು, ಬಿಸಿಲು, ದಣಿವು ಯಾವುದನ್ನು ಲೆಕ್ಕಕ್ಕೆ ಹಾಕಿಕೊಳ್ಳುವುದಿಲ್ಲ. ಅವರ ಮನಸ್ಸು ಮತ್ತು ದೇಹ ಕೆಲಸದಲ್ಲಿಯೇ

ವಿಶಾಗತೆಯನ್ನು ತಂದುಕೊಡಿರುವವರೂ ಇದ್ದಾರೆ. ಒಟ್ಟಾರೆಯಾಗಿ ಪಾಂಚಾಳರು ದೈವತ್ವದಲ್ಲಿ ನಂಬಿಕೆಗಳನ್ನು ಇಟ್ಟವರು. ಎಂದು ದೇವರ ಪೂಜೆ ಧ್ಯಾನವನ್ನು ಬಿಟ್ಟಿಲ್ಲ. ಒಂದು ವೇಳೆ ಬಿಟ್ಟರೆ ಅವರು ನಾಸ್ತಿಕ ಅವರು ಪಾಂಚಾಳರ ಹೊಟ್ಟೆಯಲ್ಲಿ ಹುಟ್ಟಬಾರದಿತ್ತು ಎಂದು ಶಪಿಸುತ್ತಾರೆ. ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂಬ ಮಾತನ್ನು ಅಕ್ಷರ ಸಹ ಪಾಲಿಸುವ ಸಾಲಿನಲ್ಲಿ ನಿಲ್ಲುವಂತವರು. ಕೆಟ್ಟದ್ದು ಮಾಡಿದ್ರೆ ಕೆಟ್ಟದ್ದಾಗುತ್ತೆ ಒಳ್ಳೇದು ಮಾಡಿದ್ರೆ ಒಳ್ಳೆದಾಗುತ್ತೆ ಎಂಬ ನುಡಿಯು ಮತ್ತೆ ಕೇಳಬರುತ್ತದೆ.

ಈ ಜನಾಂಗದವರ ಮನೆಯಲ್ಲಿ ಅನೇಕ ದೇವರ ಆರಾಧನೆಗಳು ನಡೆಯುತ್ತಿರುತ್ತವೆ. ಶ್ರೀ ಸತ್ಯಾನಾರಾಯಣ ಪುರಾಣವನ್ನು ಓದುತ್ತಾರೆ. ನೆರೆ ಹೊರೆಯವರನ್ನು ಕರೆದು ಸ್ವಾಮಿಯ ಸ್ತುತಿ ಮಾಡಿದರೆ ಒಳ್ಳೆಯದನ್ನು ಮಾಡಿ ಉದ್ಧಾರ ಮಾಡುತ್ತಾನೆಂಬ ನಂಬಿಕೆಗಳು ಇವರಲ್ಲಿ ಮನೆಮಾಡಿವೆ. ಓಣಿಯ ಜನರನ್ನು ಕರೆದು ಅವರಿಗೆ (ಮುತ್ತೈದಿಯರು) ಉಡಿ ತುಂಬಿ ಪ್ರಸಾದ ಕೊಟ್ಟು ಕಳುಹಿಸುವ ಪರಿಪಾಠ ನಡೆದು ಬಂದಿದೆ. ಹಾಗೆಯೇ ಶನಿದೇವರ ಪುರಾಣವನ್ನು ಓದುತ್ತಾರೆ. ಇವರ ಮನೆಗಳಲ್ಲಿ ಕಾಡಾಟಗಳಿದ್ದರೆ ಈ ಶನಿಮಹಾತ್ಮನನ್ನು ಆರಾಧಿಸಿದರೆ ಬಂದ ಕಷ್ಟಗಳನ್ನು ಪರಿಹರಿಸುತ್ತಾನೆಂಬ ನಂಬಿಕೆಗಳು ಇವೆ. ಶನಿವಾರದ ದಿನ ಶನಿಯ ಪುರಾಣವನ್ನು ಓದುತ್ತಾರೆ. ಆಗ ಶನಿಯ ಮಹತ್ವವನ್ನು ತಿಳಿದರೆ ನಿಮ್ಮ ಕಷ್ಟಗಳು ಮಾಯಾವಾಗುತ್ತವೆ ಎಂಬ ಉದ್ದೇಶದಿಂದ ಎಲ್ಲರನ್ನು ಕರೆಯಿಸಿ (ಅಕ್ಕಪಕ್ಕದವರನ್ನು) ಪ್ರಸಾದವನ್ನು ಕೊಡುತ್ತಾರೆ. ಒಂದು ವೇಳೆ ಪುರಾಣವನ್ನು ಅರ್ಧ ಕೇಳಿ ಹೊರಟರೆ ಈ ಶನಿ ದೇವರು ಹೆಗಲೇರಿ ಕುಳಿತುಕೊಳ್ಳುತ್ತಾನೆ. ಕೇಳಿದರೆ ಪೂರ್ಣಕೇಳಬೇಕು ಇಲ್ಲದಿದ್ದರೆ ಅಲ್ಲಿ ಸುಳಿದಾಡಲೇ ಬಾರದು ಎಂಬ ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ.

ಈ ರೀತಿಯಾದಂತ ನಂಬಿಕೆ, ಆಚರಣೆಗಳನ್ನು ಈ ಪಾಂಚಾಳರು ಮುಂದುವರೆಸಿಕೊಂಡು ಬಂದಿದ್ದಾರೆ. ಅತಿ ಮಡಿ ಉಡಿಯಿಂದ ದಿನನಿತ್ಯ ಮುಂಜಾನೆ ಸ್ನಾನಾದಿ ಪೂಜೆಯನ್ನು ಮಾಡಿ ನಂತರ ಊಟ ಮಾಡಿ ತನ್ನ ಕೆಲಸ ಕರ್ಮಗಳಲ್ಲಿ ಭಾಗಿಯಾಗುತ್ತಾರೆ. ಆಚರಣೆ ಮತ್ತು ಕೆಲಸ ಇವೆರಡು ಇವರಿಗೆ ಒಂದೇ. ಪೂಜೆಯ ಸಂದರ್ಭದಲ್ಲಿ ಗಂಧವನ್ನು ಹಚ್ಚಿಕೊಳ್ಳುವುದು ವಿಶೇಷ ವೆಂದರೆ ಹಣೆಯ ಮೇಲೆ ಅರ್ಧ ಚಂದ್ರಾಕೃತಿಯಂತೆ ಉಂಗುರ ಬೆರಳುಗಳಿಂದ ಧರಿಸುತ್ತಾರೆ. ಈ ಗಂಧವನ್ನು ಕುಂಕುಮ ಹಾಕಿಯೇ ತೇದು ಧರಿಸುತ್ತಾ ಬಿಳಿ ಗಂಧವನ್ನು ಕುಂಕುಮ ಹಾಕಿಯೇ ತೇದು ಧರಿದುತ್ತಾರೆ. ಬಿಳಿ ಗಂಧವನ್ನು ತಿಥಿಯ ದಿನಗಳಲ್ಲಿ ಹಚ್ಚಿಕೊಳ್ಳುವ ಪದ್ಧತಿಯು ರೂಢಿಯಲ್ಲಿದೆ.

ಈ ಪಾಂಚಾಳರು ದೈವತ್ವದಲ್ಲಿ ನಂಬಿಕೆ ಇಟ್ಟವರು ಎಂದೂ ದೇವರ ಪೂಜೆ, ಧ್ಯಾನ ಮಾಡುತ್ತಲೇ ಬಂದವರು. ದೈವತ್ವದ ಆಚರಣೆಯಲ್ಲಿ ಬಲವಾದ ನಂಬಿಕೆಗಳನಿಟ್ಟುಕೊಂಡವರು. ಸಾಮಾನ್ಯವಾಗಿ ಇವರು ವರವಿಯ ಮೌನೇಶ, ತಿಂಥಿಣಿಯ ಮೌನೇಶ, ಕಾಳಮ್ಮ, ವೀರಭದ್ರ, ಮೈಲಾರಲಿಂಗ ಇತ್ಯಾದಿ ದೇವತೆಗಳನ್ನು ಆರಾಧಿಸುತ್ತಾರೆ. ದ್ಯಾಮವ್ವ ದುರುಗಮ್ಮ, ಎಲ್ಲಮ್ಮ, ಹುಲಿಗೆಮ್ಮ ಈ ಉಗ್ರದೇವತೆಗಳು ಹೆಚ್ಚಾಗಿ ಮನೆದೇವತೆಗಳಾಗಿರುವುದಿಲ್ಲ ಬದಲಾಗಿ ಈ ದೇವರ ಪೂಜಾರಿಕೆಯನ್ನು ಹಲವು ಕಡೆ ಕಾಣಬಹುದು. ಇವರಲ್ಲಿ ಆರಾಧನೆ ಮಾಡುವ ದೇವರೇ ಬೇರೆ ಜೊತೆಗೆ ಮನೆ ದೈವವೇ ಬೇರೆಯಾಗಿರುತ್ತದೆ. ಸಾಮಾನ್ಯವಾಗಿ ಸ್ತ್ರೀದೈವ ಮನದೇವರಾಗಿರುವುದಿಲ್ಲ ಎಂಬುದನ್ನು ಕಂಡುಬರುತ್ತದೆ.

ಗಾಯಿತ್ರಿ ಆರಾಧನೆ, ಗಾಯಿತ್ರಿ ಶ್ಲೋಕ, ಸೂರ್ಯ ನಮಸ್ಕಾರ, ಸಂಧ್ಯಾವಂದನೆ ಇತ್ಯಾದಿಗಳನ್ನು ಈ ಪಾಂಚಾಳರು ಆಚರಿಸುತ್ತಾರೆ. ಆದರೆ ಇತ್ತೀಚಿಗೆ ಆಚರಣೆಗಳು ಮತ್ತು ಸಂಪ್ರದಾಯಗಳು ಸಡಿಲಗೊಂಡಿವೆ. ಬರೀ ಅದರಿಂದ ಜೀವನ ನಡೆಸಲು ಸಾಧ್ಯವಿಲ್ಲವೆಂಬ ಕಾರಣಕ್ಕೆ ಸಮಜ ಬದಲಾದಂತೆ ಇವರು ಬದಲಾಗುವುದು ಅನಿವಾರ್ಯವಾಗಿದೆ. ಈಗಿನ ಪೀಳಗೆ ಆಧುನಿಕ ಕಾಲಕ್ಕೆ ಮಣಿ ಹಾಕಿಕೊಳ್ಳುವತ್ತ ಸಾಗಿರುವುದು ಸಾಮಾನ್ಯವಾಗಿದೆ. 'ನಮ್ ಕಾಲ್ದಾಗ ಹಿಂಗೆ ಇರಲಿಲ್ಲಪ್ಪ ನಮ್ಮಪ್ಪ ಎಲ್ಲರನ್ನು ಹೆದ್ರಿಸಿ ಹದ್ದ ಬಸ್ತಕ ಇಟಗೊಂಡಿದ್ದ ಈ ನಮ್ಮಕ್ಳು ನಮ್ಮ ಮಾತು ಕೇಳಲ್ಲ' ಎಂದು ನಾಗರನೂರಿನ ಜಯಮ್ಮ ನವರು ವಿಷಾದ ವ್ಯಕ್ತಪಡಿಸುತ್ತಾರೆ. ಈ ರೀತಿಯಾಗಿ ಕಾಲಕ್ಕೆ ತಕ್ಕಂತೆ ಆಧುನಿಕ ಕಾಲದಲ್ಲಿ ನಂಬಿಕೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳು ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಈ ದೇವ

ಆಚರಣೆ ಮತ್ತು ನಂಬಿಕೆಗಳ ತಳಹದಿಯ ಮೇಲೆ ನಿಂತಿದೆ ಎಂಬುದು ತಿಳಿದ ಸಂಗತಿಯೇ. ಇದು ಹಳ್ಳಿಗಳ ದೇಶ ಇವತ್ತು ಸನಾತನತೆಯನ್ನು ಉಳಿಸಿಕೊಳ್ಳುವಲ್ಲಿ ಸಫಲವಾಗಿರುವುದು ಈ ಗ್ರಾಮೀಣ ಪ್ರದೇಶಗಳೇ ಆಗಿರುವುದರಿಂದ ದೈವತ್ವದ ನಂಬಿಕೆಗಳು ಹಳ್ಳಿಗಳಿಗಿರುವ ತನಕ ಆಚರಣೆ, ನಂಬಿಕೆಗಳು ನಡೆಯುತ್ತಲೆ ಇರುತ್ತವೆ.

ಹೀಗೆ ಈ ಸಮುದಾಯದವರು ಅನೇಕ ಬಗೆಯ ನಂಬಿಕೆ, ಆಚರಣೆ, ಸಂಪ್ರದಾಯಗಳ ಜೊತೆಗೆ ದೈವತ್ವಗಳ ಕಲ್ಪನೆಯನ್ನು ವಿಶೇಷವಾಗಿ ಭಾವಿಸಿ, ಅದರಲ್ಲಿ ತಮ್ಮ ಕಷ್ಟಗಳನ್ನು ಕಳೆದುಕೊಂಡು ಬದುಕುತಿದ್ದಾರೆ. ಒಟ್ಟಾರೆಯಾಗಿ ಪಾಂಚಾಳದ ಸಮಾಜದವರು ಆಚರಿಸುವ ಎಲ್ಲಾ ಬಗೆಯ ಆಚರಣೆಗಳನ್ನು ವಿವರಿಸಲಾಗಿದೆ. ಜೀವಿತದ ಅವಧಿಯಲ್ಲಿ ಆಚರಿಸುವ ಪದ್ಧತಿಗಳನ್ನು ನಿಸರ್ಗಕೇಂದ್ರಿತ, ದೈವಕೇಂದ್ರಿತ, ವೃತ್ತಿಕೇಂದ್ರಿತ, ಮನುಷ್ಯ ಕೇಂದ್ರಿತ ಆಚರಣೆಗಳನ್ನು ವಿವರಿಸಲಾಗಿದೆ.

***

ಮೂರನೇ ಪಾದ

ಅಧ್ಯಾಯ ೫

ಪಾಂಚಾಳ ಸಮಾಜದ ಜಾನಪದ ಸಾಹಿತ್ಯ

ಅಧ್ಯಾಯ ೬

ಆಯ ಪದ್ಧತಿ

ಅಧ್ಯಾಯ ೫

ಪಾಂಚಾಳ ಸಮಾಜದ ಜನಪದ ಸಾಹಿತ್ಯ

ಜನಪದ ಸಾಹಿತ್ಯ ಮನುಷ್ಯರ ಬದುಕಿನೊಂದಿಗೆ ಬೆರೆತು ಬಂದಿರುವುದು ತಿಳಿದಿರುವ ಸಂಗತಿಯೇ. ಇವೆರಡು ಅಂದರ ಜನಪದ ಸಾಹಿತ್ಯ ಮನುಷ್ಯರು ಒಂದಕ್ಕೊಂದು ಕೊಂಡಿ ಇದ್ದ ಹಾಗೆ. ಅವೆರಡು ಬೇರ್ಪಡಿಸಲು ಸಾಧ್ಯವಿಲ್ಲ. ಜನಪದರು ತಮ್ಮ ಚಾಣಕ್ಷತೆಯಿಂದ ಹರಿತವಾದ ಮಾತಿನಿಂದ ಬೆರಗುಗೊಳಿಸುವಂತೆ ಶಕ್ತಿ ಹೊಂದಿದ್ದಾರೆ. ಋತುಮಾನಕ್ಕೆ ತಕ್ಕಂತೆ ಬದಲಾಗುವ ತಮ್ಮ ಕೆಲಸ ಕಾರ್ಯಗಳು, ಮನರಂಜನಾ ಮೂಲದ ಚಟುವಟಿಕೆಗಳಲ್ಲಿ ಮದುವೆ, ಮುಂಜಿಗಳಲ್ಲಿ ವಿವಿಧ ಬಗೆಯ ಸಂಪ್ರದಾಯ, ಆಚರಣೆಗಳು, ಹಬ್ಬ, ಹರಿದಿನಗಳಲ್ಲಿ ತಮ್ಮ ಮನಸ್ಸಿನ ನೋವುನಲಿವುಗಳನ್ನು ಹಂಚಿಕೊಳ್ಳುತ್ತಾರೆ. ಹಾಡು, ಗಾದೆ, ಒಡಪುಗಳು ಇತ್ಯಾದಿಗಳನ್ನು ಬಳಸಿಕೊಂಡು ಬಿಡುವಿನ ವೇಳೆ ಅಥವಾ ಸಾಂಸ್ಕೃತಿಕ ಸಮಯದಲ್ಲಿ ಬಳಸಿಕೊಳ್ಳುತ್ತಾರೆ.

"ಅನುಭವ ಜನ ಚಿಂತನೆಯ ಅಗಾಧ ಕೊರತೆಯಿಂದ ನರಳುತ್ತಿರುವ ನಮ್ಮ ಪ್ರತಿಷ್ಠಿತ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳು ವಾಸ್ತವವಾಗಿ ಈ ಕಡೆಗೆ ಕಣ್ಣಾಡಿಸಬೇಕಾಗಿದೆ" ಎಂದು (ಕಾಳೆಗೌಡ ನಾಗವಾರ್ ಕಾಡುಗೊಲ್ಲರ ಜನಪದ ನಂಬುಗೆಗಳು ಪುಟ-೭೭ ಅಪ್ರಕಟಿತ ೧೯೮೪) ಕಾಳೇಗೌಡರು ಎಚ್ಚರಿಕೆಯ ಮಾತು ನಿವೇದಿಸುತ್ತದೆ. ಈ ಜನಪದ ಸಾಹಿತ್ಯವು ಜನರ ಬದುಕಿನೊಂದಿಗೆ ತಳಕು ಹಾಕಿಕೊಂಡು ಸಮಾಜದ ಅಂಕುಡೊಂಕುಗಳನ್ನು ಪ್ರತಿಬಿಂಬಿಸುವುದನ್ನು ಕಾಣಬಹುದು. ಒಂದೇ ಗಾದೆ ಮಾತು ಮನುಷ್ಯನು ಅರಿತುಕೊಳ್ಳುವಷ್ಟು ಪ್ರಭಾವಗೊಂಡಿರುತ್ತದೆ. 'ಗಾದೆ ವೇದಕ್ಕೆ ಸಮ' ಎಂದು ಹೇಳಿರುವುದು ಇದಕ್ಕೆ ಇರಬಹುದು. 'ಒಬ್ಬರು ಒಂದು ಮಾತು ಹೇಳ್ತಾರ ಅಂದ್ರೆ ಅವರು ಅಂಗೆ ಇರ್ತಾರೆ'. ಹೇಳುವ ಮನುಷ್ಯ ಸರಿ ಇಲ್ಲದಿದ್ದರೆ "ಆಚಾರ ಹೇಳೋರು ಮನ್ಯಾಗ ಆರು ಮಂದಿ ಬಜಿಕ್ಯಾರಿದ್ದಂತೆ' ಎಂಬ ಕೊಂಕು ನುಡಿಗಳು ಎದೆಗೆ ಚೂರಿ ತಿವಿದಷ್ಟು ನೋವಾಗುತ್ತವೆ. ಅಷ್ಟೊಂದು ಪ್ರಭಾವಶಾಲಿಯಾಗಿರುತ್ತವೆ. ಮಾತಿಗೊಂದು ಮಾತು ಬೆಳೆಯುತ್ತಲೇ ಸಮಯ, ಸಂದರ್ಭ ಕಾಲಕ್ಕನುಗುಣವಾದ ಆಯಾ ಸಾಹಿತ್ಯಗಳು ಹೊರಬೀಳುತ್ತವೆ.

ಅದರಂತೆ ಈ ಪಾಂಚಾಳರ ಸಾಹಿತ್ಯದಲ್ಲಿ ಕೂಡ ಕಾಣಬಹುದು. ಇವರ ಬದುಕಿನ ಅಂದರೆ ವೃತ್ತಿ, ಉಪಕರಣ, ಮತ್ತು ವೃತ್ತಿಕಾರನ ಸ್ವಭಾವಗಳನೊಳಗೊಂಡ ಗಾದೆ, ಒಡಪು, ಒಗಟು, ಹಾಡುಗಳು ಕಂಡು ಬರುತ್ತವೆ. ತಮ್ಮ ಮೂಲ ಬದುಕಿನೊಂದಿಗೆ ಇಂದಿನ ಬದುಕಿನ ರೀತಿ ನೀತಿಗಳನ್ನು ತುಳುಕು ಹಾಕುವ ಇವರು ಕಾಲದ ಗತಿಗೆ ಅನುಗುಣವಾಗಿ ಸ್ಪಂದಿಸುತ್ತಾ ಬಂದಿರುವುದರಿಂದ ಇವರು ಜನಪದ ಚಟುವಟಿಕೆಗಳು ಈ ಜನರ ಸಂಸ್ಕೃತಿಯ

ಜೀವನಾಡಿಯನ್ನು ಕಂಡುಕೊಳ್ಳಲು ಒಂದು ಹಾದಿಯನ್ನು ಹಾಕಿಕೊಡುತ್ತದೆ. ಇವರ (ಪಾಂಚಾಳ) ಜನಪದ ಸಾಹಿತ್ಯವು ಸಂಸ್ಕೃತಿ ಮತ್ತು ವೃತ್ತಿಗಳಿಗೆ ಸಂಬಂಧಿಸಿರುವುದು ಸತ್ಯ ಅಂದರೆ ಇವರ ಸಾಹಿತ್ಯಕ್ಕಿಂತ ಬೇರೆ ಜನಾಂಗ ಜನಪದ ಸಾಹಿತ್ಯ ಭಿನ್ನವಾಗಿರುತ್ತವೆ. ಅತ್ಯಂತ ಶ್ರೇಷ್ಠ ತಮರೆಂದು ಭಾವಿಸಿರುವ ಪಾಂಚಾಳರ ಸಾಹಿತ್ಯದಲ್ಲಿ ಅಶ್ಲೀಲತೆಗೆ ಹೆಚ್ಚು ಅವಕಾಶ ಇಲ್ಲ ಅದು ಗುಪ್ತವಾಗಿರಬೇಕೆಂಬ ಭಾವ ಇರಬಹುದು.

ಗಾದೆ

ಜನರ ಅನುಭವದ ಅಭಿವ್ಯಕ್ತಿಯೇ ಗಾದೆಗಳ ಸ್ವರೂಪವನ್ನು ಹೊಂದಿರುತ್ತವೆ. ಜನ ಸಮುದಾಯದ ಮನಸ್ಸುಗಳ ಪ್ರತಿಬಿಂಬವಾಗಿರುವ ಗಾದೆಗಳ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಅವಶ್ಯಕವಾದುದು. ಯಾವುದೇ ರೀತಿಯ ಜಾತಿ, ಪಂಥ, ಮತ, ಪಂಗಡ, ಧರ್ಮಗಳ ಪಕ್ಷಪಾತಕ್ಕು ಒಳಗಾಗದ ಗಾದೆಗಳು ನಿಜಕ್ಕೂ ನೇರಕ್ಕೆ ನಡೆದುಕೊಳ್ಳುವ ಗುಣದ ಸಾಹಿತ್ಯವನ್ನು ಗಾದಗಳಲ್ಲಿ ಕಾಣಬಹುದು. ಪಾಂಚಾಳರಲ್ಲಿಯೂ ಸಹ ವೃತ್ತಿ ಮತ್ತು ಸಮಾಜ, ವೃತ್ತಿ ಮತ್ತು ಉಪಕರಣ ವೃತ್ತಿ ಮತ್ತು ಗುಣಗಳು (ವೃತ್ತಿಕಾರ) ಗಾದೆಯಲ್ಲಿ ಕೊಂಕು ನುಡಿಗಳಾಗಿಯೂ ಕಂಡು ಬರುತ್ತವೆ. ಗಾದೆ ಮಾತು ಅತ್ಯಂತ ಗುಪ್ತವಾದ ಅರಿತವಾದ ತಿಳಿವ ಹಾದಿಯನ್ನು ಮಾರ್ಗದರ್ಶನ ಮಾಡುತ್ತವೆ. ಹೊಡೆಯುವುದಕ್ಕಿಂತ ಮಾತಿನ ಹೊಡೆತ ದೇಹಕ್ಕೆ ನೋವಾಗದಿದ್ದರೂ ಮನಸ್ಸಿನಲ್ಲಿ ಸಾವಿನವರೆಗೂ ಮಾಯಲಾರದಂತಹ ಅನುಭವದ ಶಕ್ತಿ ಈ ಗಾದೆಗಳಿಗಿವೆ. ಬಡವನ ಕೋಪ ದವಡೆಗೆ ಮೂಲ ಎಂಬ ಮಾತು ಬಡವನ ಏನೇ ಕೋಪಮಾಡಿಕೊಂಡರು ಅದನ್ನು ಅವನೇ ನುಂಗಿ ಕೊಳ್ಳಬೇಕು ಪಾಪ ಅದನ್ನು ಶ್ರೀಮಂತನ ಮೇಲೆ ತೋರಿಸಲು ಶಕ್ತಿ ಕುಂದಿರುತ್ತದೆ. ಮನುಷ್ಯನನ್ನು ಬಡವ ಎಂಬ ಪದ ಅವನ ಎಲ್ಲಾ ಶಕ್ತಿಯನ್ನು ಕುಂದಿಸಿಬಿಡುತ್ತದೆ. ಇಂತಹ ಮಾತು ಎಷ್ಟು ಅರ್ಥಗರ್ಭಿತ. ಅದರಂತೆ ಗಾದೆ ಮಾತುಗಳು ಈ ಪಾಂಚಾಳರ ಬದುಕಿನ ಸುತ್ತ ಮುತ್ತ ಹಾದು ಹೋಗಿರುವುದನ್ನು ಕಾಣಬಹುದು.

'ಆಚಾರಿ ಆಳಲ್ಲ ಅಂಬಲಿ ಪಾಯಸ ಅಲ್ಲ ಸೋಪು ಸೇಂಟಲ್ಲ' ಎಂಬ ಗಾದೆ ಮಾತಿನ ಅರ್ಥ ಆಚಾರಿಗಳು ವೃತ್ತಿಕಾರರಾಗಬಹುದು, ಆಯಗಾರರಾಗಿರಬಹುದು. ವೃತ್ತಿಯನ್ನೇ ನಂಬಿಕೊಂಡು ಬದುಕಬಹುದು. ಅಂದರೆ ಸೋಪು ಹೇಗೆ ಸೇಂಟಲ್ಲೊ ಅಂಬಲಿ ಪಾಯಸ ಎಂದು ಯಾರು ಕರೆಯುವುದಿಲ್ಲ. ಅಂಬಲಿ ಅಂಬಲಿಯೇ ಹಾಗೆಯೇ ಆಚಾರಿ ಕೂಡ ವೃತ್ತಿಕಾರನೇ ಹೊರತು ಆಳಲ್ಲ. ಇತರರೇಳಿದ ಹಾಗೆ ಆಳಿನಂತೆ ಕಾಣುವುದಿಲ್ಲ ಏಕೆಂದರೆ ಈ ಆಚಾರಿಯ ಅವಶ್ಯಕತೆ ಸಮಾಜಕ್ಕಿದೆ ಅದಕ್ಕೆ ಆಚಾರಿ ಆಳಲ್ಲ ನಮಗೆ ಸಮಾನರು ಎಂಬ ಮಾತು ಸತ್ಯವಾಗಿದೆ.

"ಆಚಾರಿಗೆ ಊಟದ ಚಿಂತ್ರೆ ಆದ್ರೆ ಕುದುರಿಗೆ ಗೂಟದ ಚಿಂತೆ" ಈ ಗಾದೆಗಳು ಎಷ್ಟು ನಿರ್ಭೀತಿಯಿಂದ ಗಂಭೀರ ಹಾಗೂ ಹಾಸ್ಯಮಯವಾಗಿರುತ್ತವೆಂಬುದಕ್ಕೆ ಇಂತಹವುಗಳೇ ಸಾಕ್ಷಿ. ಆಚಾರಿಗಳ ವೃತ್ತಿಯು ಮಳೆಗಾಲದಲ್ಲಿ ಜೀವನ ಅಸ್ತವ್ಯಸ್ಥವಾಗುವ ಸಂಭವವೇ ಹೆಚ್ಚು. ಬೇಸಿಗೆ ಹಾಗೂ ಮಳೆಗಾಲ ಪ್ರಾರಂಭವಾಗುವ ಸಂದರ್ಭದಲ್ಲಿ ಬಿಡುವಿಲ್ಲದ ಕೆಲಸ ಮಳೆ ಬಂತು ಅಂದರೆ ಕೈಯಲ್ಲಿ ಕಾಸಿರುವುದಿಲ್ಲ, ಮನೆಯಲ್ಲಿ ಸೇರು ಜೋಳ ಇರುವುದಿಲ್ಲ ಅಂತಹ ಸಂದರ್ಭದಲ್ಲಿ ಆಚಾರಿಯು ಹೆಂಡತಿ ಮಕ್ಕಳನ್ನು ಸಾಕುತ್ತಿರುವಾಗ ಇಂತಹ ಚಿಂತೆ ಬರುವುದು ಸಹಜವೇ. ಕುದುರೆ ಓಡಿ ಓಡಿ ಸುಸ್ತಾದಾಗ ವಿಶ್ರಾಂತಿ ಬೇಕಿರುವಂತೆ ಆಚಾರಿಗೆ ಕಷ್ಟದಲ್ಲಿ ಊಟಕ್ಕೆ ಚಿಂತೆ ಮಾಡುವ ಪ್ರಸಂಗಗಳು ಇರುತ್ತವೆ.

"ಇದ್ದಾಗ ಹಿರಿಯಣ್ಣ ಇಲ್ಲದಾಗ ತಿರಿಯಣ್ಣ" ಇದು ಪಾಂಚಾಳ ಬದುಕಿನಲ್ಲಿ ಸದಾ ಇರುವಂತ ಪರಿಸ್ಥಿತಿ. ಏಕೆಂದರೆ ಬೇಸಿಗೆಯಲ್ಲಿ ಹಿರಿಯಣ್ಣನಾದರೆ ಹೊಲದಲ್ಲಿ ಪೈರು ಬೆಳೆದು ನಿಂತಾಗ ಬೇಡುತ್ತ ಇರುತ್ತಾರೆ. ಸೀನ್ ನಾಕಸೇರು ಜೋಳ ಕೊಡು ಎಂದು ಕೇಳುವ ಪರಿಸ್ಥಿತಿ ಇದೆ. ಕೆಲಸ ಇದ್ದಾಗ ಮಾಡಿ ನಾಳೆಗೆ ಎಂದು ಯೋಚಿಸದೇ

ಇರುವುದು ಒಂದು ದುಸ್ಥಿತಿ. ಉಳಿಸಿಕೊಂಡು ಜೀವನ ಮಾಡಬೇಕೆಂಬುದು ಒಟ್ಟಾರೆ ಈ ಗಾದೆ ಅರ್ಥವಾಗಿದೆ. ಪರಿಸ್ಥಿತಿಗನುಗುಣವಾಗಿ ಬದುಕಬೇಕು ಅರ್ಥೈಸಬಹುದು.

"ಪಾಂಚಾಳ ದೇಶದ ಪಾಲಕನಾದರೆ ಪಂಚಾಂಗದವನಿಗೇನು?" ಈ ಪಾಂಚಾಳರು ದೇಶದ ಪಾಲಕನಾಗಿದ್ದ ಅಂದರೆ ಸಕಲ ವಿದ್ಯೆಯು ಆತನ ಬಳಿ ಇರುವಾಗ ಇತರರು ಮೂಗು ತೂರಿಸುವಾಗ ಈ ಅರ್ಥ ಬರುತ್ತದೆ. ರಾಜ್ಯದ ಆಯುಧಗಳನ್ನು ಈ ಪಾಂಚಾಳರೇ ಮಾಡುವಾಗ ಆಯುಧಗಳಿಂದ ಸಾಮ್ರಾಜ್ಯದ ಭದ್ರತೆ ಹೆಚ್ಚುತ್ತಿತ್ತು. ರಾಜ ಮನ್ನಣೆ ಪಡೆದ ಇವರು ದೇಶದ ಪಾಲಕರಾಗಿದ್ದರು ಸಕಲ ವಿದ್ಯೆಯೂ ಇವರ ಬಳಿ ಇತ್ತು .

ಹೀಗೆ ಒಟ್ಟು ಪಾಂಚಾಳ ಸಮುದಾಯದವರಿಗೆ ಸಂಬಂಧಪಟ್ಟ ಗಾದೆಗಳು ಅವರ ಬದುಕಿನೊಂದಿಗೆ ಬೆಳೆದು ಹೋಗಿವೆ. ಅವು ಅವರ ನೈಪುಣ್ಯತೆಯನ್ನು ತೋರಿಸುವ ಗಾದೆಗಳಾಗಿವೆ. ಇನ್ನು ಅನೇಕ ಗಾದೆಗಳನ್ನು ನೋಡಬಹುದು.

* ವಾಜರ ಮಾತು ಗೊಜು ಗೊಜು.

* ಆಚಾರಿ ಮಾತು ಆಚ್ಗೊಂದು ಈಚ್ಗೊಂದು.

* ಪಂಚಮುದವರ ಕಂಚು ಪಂತಕ್ಕೆ ಸಿಕ್ಕೀತೆ.?

* ವಾಜರು ಎಮ್ಮೆ ಕೊಟ್ಟು ಹಮ್ಮುಯಿಳಾಸ್ಕೊಂಡ್ರು

* ಕಬ್ಬಿಣ ಯಾರಿಗೆ ಬಗ್ಗೋದು ಅಂದ್ರೆ ಆಚಾರಿಗೆ.

ಇನ್ನು ಈ ಪಾಂಚಾಳರ ಪಂಚ ವೃತ್ತಿಗಳನ್ನು ವಿಂಗಡಿಸಿ ಹೇಳುವ ಗಾದೆಗಳು ಸಿಗುತ್ತವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂತಹ ಗಾದೆಗಳು ಪಾಂಚಾಳರ ಜನಪದ ಸಾಹಿತ್ಯಕ್ಕೆ ಸಹಾಯವಾಗಿವೆ. ಕಮ್ಮಾರ, ಬಡಿಗಿ. ಕಂಚುಗಾರ, ಅಕ್ಕಸಾಲಿ, ಶಿಲ್ಪಿಗಳ ಪ್ರತ್ಯೇಕವಾಗಿ ಅವರು ಮಾಡುವ ವೃತ್ತಿ ಮತ್ತು ಅವರ ಮನೋಭಾವ ಹಾಗೂ ಸಮುದಾಯ ದೃಷ್ಟಿಯಲ್ಲಿ ಇವರ ಗುಣಾವಗುಣಗಳು ಈ ಗಾದೆಗಳಲ್ಲಿ ಪ್ರತಿಬಿಂಬಿತವಾಗಿವೆ. ಅವು ಕೆಲವೊಂದು ಸಾರಿ ಹಾಸ್ಯಕ್ಕೂ ಹಾಗಿರಬಹುದು. ಅಥವಾ ಅವರ ಗುಣಗಳೂ ಇರಬಹುದು. ಮತ್ತು ವೃತ್ತಿಯು ನಿಷ್ಠೆಯಲ್ಲಿ ಬೇಧಭಾವ ಇಲ್ಲದೇನೇ ಇರಬಹುದು. ಇಂತಹ ಗಾದೆಗಳನ್ನು ಕ್ರಮಕ್ಕನುಸಾರವಾಗಿ ಅಂದರೆ ಕಮ್ಮಾರ, ಬಡಿಗಿ. ಕಂಚುಗಾರ, ಅಕ್ಕಸಾಲಿಗ, ಶಿಲ್ಪಿ ಈ ರೀತಿಯಾಗಿ ವಿವರಿಸಲಾಗಿದೆ.

'ಠೊಕ್ ಅಂದ್ರೆ ಅಕ್ಕಿಬಾನ' ಈ ಗಾದೆ ಈ ಪಂಚ ವೃತ್ತಿಗೂ ಅನ್ವಯವಾಗುತ್ತದೆ. ಈ ಐದು ವೃತ್ತಿಯವರು ಠಕ್ ಠಕ್ ಎಂದು ಬಡಿಯುವುದು ಸಾಮಾನ್ಯ. ಪ್ರತಿಯೊಬ್ಬರು ಸುತ್ತಿಗೆ, ಕೊಡತಿಯ ಹೊಡೆತದ ಶಬ್ದವಾಗಿದೆ. ಇವರು ಕೆಲಸ ಮಾಡಿದರೆ ಮಾತ್ರ ರಾತ್ರಿ ಅನ್ನ ಕಾಣಬೇಕು. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ವಚನವು ಈ ಮೇಲಿನ ಗಾದೆಗೆ ಹೊಂದಿಕೆಯಾಗುತ್ತದೆ. ದುಡಿಯದಿದ್ದರೆ ಇವರ ಬದುಕು ಸಂಕಷ್ಟದಲ್ಲಿ ಸಿಕ್ಕುತ್ತದೆ. ಅದಕ್ಕೆಂದು ಮುಂಜಾನೆ ಮಾಡಿದ್ರೆ ಸಂಜೆಗಿಲ್ಲ ಸಂಜೆಗೆ ಮಾಡಿದ್ರೆ ಮುಂಜಾಗ್ನಿಲ್ಲ ಎಂಬಂತೆ ಸದಾ ವೃತ್ತಿಯಲ್ಲಿ ನಿರತರಾಗಿರುತ್ತಾರಾದರೂ ಇನ್ನು ಹಿಂದೆಯೇ ಉಳಿದಿದ್ದಾರೆ. ಶ್ರಮಕ್ಕೆ ತಕ್ಕ ಪ್ರತಿಫಲ ಇದ್ದೇ ಇದೆ. ಅದಕ್ಕೆ ಇವರು ಸದಾ ಠೊಕ್ ಠೊಕ್ ಎಂದು ಬಡಿದರೆ ಮಾತ್ರ ಅಕ್ಕಿಬಾನನ್ನು ಸವಿಯಬಹುದು.

'ಕಬ್ಬಿಣ ಯಾರಿಗೆ ಬಗ್ಗೋದು ಅಂದ್ರೆ ಕಮ್ಮಾರಿಗೆ' ನಾನು ಮಾಡ್ತೀನಿ ನೀನು ಮಾಡ್ತೀನಿ ಅಂದ್ರೆ ಸಾಧ್ಯವಿಲ್ಲ. ಯಾರ್‍ಯಾರು ಯಾವ ಕೆಲಸದಲ್ಲಿ ಪ್ರವೀಣರಾಗಿರುತ್ತರೋ ಅವರೇ ಮಾಡುವುದು ವಾಡಿಕೆ. ಕಬ್ಬಿಣದ ಕೆಲಸ ಕಮ್ಮಾರಿಗೆ ಸರಿ ಅವನೇಳಿದ ರೀತಿಯಲ್ಲಿ ಕಬ್ಬಿಣ ಆಕಾರ ಹೊಂದುತ್ತದೆ. ಅಂದರೆ ಅವನ ಶಕ್ತಿಯಿಂದ ಕಬ್ಬಿಣದಲ್ಲಿ ಪ್ರವೀಣನಾದವರಿಗೆ ಹೇಗೆ ಬೇಕೋ ಹಾಗೆ ಬಗ್ಗಿಸುತ್ತಾರೆ. ಕಾಸಿ ಕಮ್ಮಾರನಾದ ಎಂಬ ಮಾತು ನಿಜಕ್ಕೂ ಸಂದೇಹ. ಹೇಗೆ ಕಾಯಿಸುತ್ತಾನೆ, ಅವನ ತಲೆಯಲ್ಲಿ ಹೇಗೆ ಮಾಡಬೇಕೆಂದು ನಿರ್ಧರಿಸುತ್ತಾನೋ ಹಾಗೆ ಆಕಾರಕ್ಕೆ ಸಿದ್ಧಪಡಿಸುತ್ತಾನೆ.

ಕಮ್ಮಾರನಿಗೆ ಕಬ್ಬಿಣ ಹೇಳಿದಾಗೆ ಕೇಳುತ್ತದಂತೆ.

'ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ' ಕಬ್ಬಿಣದ ಅಂಗಡಿ ಅಂದ್ರೆ ಕುಲುಮೆ ಎಂದರ್ಥ. ನೊಣಕ್ಕೆ ಬೆಲ್ಲದಂಗಡಿಯಲ್ಲಿ ಕೆಲಸ ಕುಲುಮೆಯಲ್ಲೇನು ಕೆಲಸ ಎಂಬ ಮಾತು ನೊಣಕ್ಕ ಹೇಳಿದ ಮಾತಲ್ಲ ಯಾರು ಯಾವ ಕೆಲಸ. ಎಲ್ಲಿ ಕೆಲಸ ಮಾಡಬೇಕೋ ಅಲ್ಲೇ ಮಾಡಬೇಕು ಇವರ ವೃತ್ತಿಯಲ್ಲಿ ನಿರತರಾದಾಗ ಬೇರೆಯವರು ಹಸ್ತಕ್ಷೇಪಮಾಡಬಾರದು ಏಕೆಂದರೆ ಅವರು ಏಕಾಗ್ರತೆಗೆ ಬುದ್ದಿಗೆ ಮಂಕು ಬಡಿದು ಬಿಡಬಹುದು ಎಂಬ ಮಾತಿನ ಗೂಡಾರ್ಥ ಈ ಗಾದೆಯಲ್ಲಿ ಅಡಗಿದೆ. ಆಗ ಆಯಾ ವೃತ್ತಿ ಬಾಂಧವರು ಅವರವರ ವೃತ್ತಿಯಲ್ಲಿಯೇ ಮುಂದುವರೆಯಬೇಕೆಂಬ ಮಾತಿನ ಅರ್ಥವಾಗಿದೆ.

"ಇರುವೆ ಬುದ್ಧಿ ಕಮ್ಮಾರಗ ಗೊರವನ ಬುದ್ಧಿ ಮಡಿವಾಳಗ" ಅತ್ಯಂತ ಚಿಕ್ಕದಾದ ಇರಿವಿ ಬಹಳ ಬುದ್ಧಿಶಕ್ತಿಯಿಂದ ನೆಲ ಕೆದರಿ ತೆಳುವಾದ ಮಣ್ಣನ್ನು ಹೊರಹಾಕಿ ತನ್ನ ಬದುಕಿಗೆ ಹಾದಿಮಾಡಿಕೊಂಡು ಸಾಲುಗಟ್ಟಿರುತ್ತವೆ. ಹಾಗೆ ಇರುವೆ ಬುದ್ಧಿ ಕಮ್ಮಾರನಿಗೆ ಎಂದು, ಮೂರ್ತಿ ಚಿಕ್ಕದಾದರೂ ಕೀರ್ತಿದೊಡ್ಡದೆಂಬ ಮಾತಿನ ಒಂದೆ ಮರ್ಮ ಇದೆ. ಜನಪದರು ತತ್ತಿ ಕಟ್ಟಿಕೊಂಡು ಸಾಲುಗಟ್ಟಿದರೆ ಮನೆಯಲ್ಲಿ ಶುಭದಿನಸಂಕೇತ ಎಂದು ನಂಬುತ್ತಾರೆ. ಗೊರವನ ಬುದ್ಧಿ ತಿರುಗುವುದೊಂದೆ ಅದರ ಕೆಲಸ, ಇವರಿಬ್ಬರು ಆಯಗಾರರೆನಿಸಿಕೊಂಡರೂ ತಮ್ಮ ಕಾಯಕದಲ್ಲಿ ಬುದ್ಧಿಶಕ್ತಿಯನ್ನು ಹೊಂದಿರುತ್ತಾರೆ.

"ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ" ಈ ಮಾತು ಅಕ್ಷರ ಸಹ ಸತ್ಯವಾದುದು. ಕುಲುಮೆಯಲ್ಲಿ ಕಬ್ಬಿಣವನ್ನು ಹದ ಬರುವರೆಗೂ ಕಾಯಿಸಿ ತನ್ನ ಆಕಾರಕ್ಕೆ ಕಮ್ಮಾರ ತಂದುಕೊಳ್ಳುತ್ತಾರೆ. ಕಾಸಿ ಅಂದರೆ ಜೀವನದ ಕುಲುಮೆಯಲ್ಲಿ ಕಾದು ಕಾದು ಕಮ್ಮಾರನಾದ ಕಬ್ಬಿಣವು ಯೌವ್ವನ ಇದ್ದ ಹಾಗೆ, ಕುಲುಮೆ ಅನುಭವ ಇದ್ದಂತೆ ಅವರಲ್ಲಿ ಕಾದು ಹದಕ್ಕೆ ಬಂದರೆ ಮನುಷ್ಯನ ಜೀವನ ಸಾರ್ಥಕ ವಾದಂತೆ ಬೀಸಿ ಮಡಿವಾಳ ವಾದನೆಂದರೆ ಅಗಸ ಬಟ್ಟೆಯನ್ನು ಕಲ್ಲಿಗೆ ಎತ್ತಿ ಎತ್ತಿ ಬಡಿಯುತ್ತಾನೆ ಅವರು ಮಾಡುವ ಕಾರ್ಯಕನಯಸಾರವಾಗಿ ಈ ಗಾಧೆ ಹುಟ್ಟಿಕೊಂಡಿದೆ.

ಹೀಗೆ ಪಾಂಚಾಳರ ಗಾದೆಗಳನ್ನು ಒಂದೊಂದಾಗಿ ವಿವರಿಸುವ ಅಗತ್ಯ ಇಲ್ಲ ಗಾದೆಯನ್ನು ಓದಿದರೆ ಅವುಗಳ ಗೂಡಾರ್ಥ ತಿಳಿದುಬರುತ್ತದೆ ಎಂಬ ಕಾರಣಕ್ಕೆ ಒಟ್ಟಾಗಿ ಬರೆಯಲಾಗಿದೆ.

* ಕಟ್ಟಿಗಿ ಇಟ್ಟುನೋಡಬೇಕು ಕೆಬ್ಣ ಕಡ್ದು ನೋಡಬೇಕು.

* ಕೈತಪ್ಪಿ ಕೆತ್ತಿದ್ರೆ ಕಾಲಿಗೆ ಮೂಲ.

* ಬಡಗಿ ಬಾಯಿಂದ ಕೆಟ್ಟ ಕೊಡುಗ ಕೈಯಿಂದ ಕೆಟ್ಟ.

* ಕಮ್ಮಾರನಿಗೆ ತುಂಡು ಕಬ್ಣಬೇಕು ಬಡಿಗಿಗೆ ಉದ್ದ ಮರಬೇಕು.

* ಉದ್ಯೋಗ ಇಲ್ಲದವ ಬಡಿಗಿ ಮಗನ -----ಕೆತ್ತಿದಂತೆ.

* ಪಂಚಮದವರ ಕಂಚು ಪಂತಕ್ಕೆ ಸಿಕ್ಕೀತೆ?

* ಕಂಚುಗಾರನಿಗೇಕೆ ಕಂಚಿಯ ಆಟ.

* ಅಕ್ಕಸಾಲಿಗನನ್ನು ಕಂಡಾಗ ಕಪ್ಪೆಯೂ ಮೂಗುತಿ ಬೇಡಿತಂತೆ.

* ಬಂಗಾರಕ ಅಂಗಾರ ಸಾಕ್ಷಿ.

* ಬಂಗಾರಕ್ಕಾದರೂ ಬೆಳಗಾರಬೇಕು.

* ಅಕ್ಕನ ಚಿನ್ನವಾದರೂ ಅಕ್ಕಸಾಲಿ ತೊನೆಯದೆ ಬಿಡ.

* ಅಕ್ಕಸಾಲಿ ಅಕ್ಕನ ಬಂಗಾರನೂ ಬಿಡಲ್ಲಂತೆ.

* ಅಗಸ ಮಾಡಿದ್ದು ಬಟ್ಟೆಗೆ ಅಕ್ಕಸಾಲಿ ಮಾಡಿದ್ದು ಅಗ್ಗಷ್ಟಿಕೆಗೆ.

* ಚಿನ್ನ ನಮ್ಮದಾದರೂ ಚಿನಿವಾರ ನಮ್ಮವನೆ?

* ಬಂಗಾರವನ್ನು ಬೆಂಕಿಯಲ್ಲಿ ಪರಿಕ್ಷಿಸು ಸ್ನೇಹಿತರನ್ನು ಕಷ್ಟದಲ್ಲಿ ಪರಿಕ್ಷಿಸಬೇಕು.

* ಅಕ್ಕಸಾಲಿಗಿಂತ ಕಳ್ಳನಿಲ್ಲ ಮೆಕ್ಕ ಗದ್ದೆಗಿಂತ ಬೆಳೆ ಇಲ್ಲ.

* ದಣಿ ಹೇಳಾಟ ಬಡಿಗಿ ಮಾಡಾಟ.

* ಗಣಪನ ಮಾಡಂದ್ರೆ ಅವರಪ್ಪನ ಮಾಡಿದ್ನಂತೆ.

* ಕೂಲಿಕಾರರಿಗೆ ಕೂಲಿಕಾರ ಸೇರ ಆಯಾಗಾರರಿಗೆ ಆಯಗಾರ ಸೇರ.

* ಕೆತ್ತುವವನ ಮುಂದೆ ನಿಲ್ಲಬಾರದು ಬಡಿಯುವವನ ಹಿಂದೆ ನಿಲ್ಲಬಾರದು.

ಕೆಲವೊಂದು ಗಾದೆಗಳು ಅವರಿಗೆ ಅಪವಾದ ವೆನಿಸಿದರೂ ಅವು ತಮಾಸೆಯಾಗಿ ಇತರ ಸಮುದಾಯದೊಂದಿಗೆ ಅಂಕುಡೊಂಕು ತಿದ್ದಲು ಅತ್ಯಂತ ಅವಶ್ಯಕತೆಗಳಾಗುತ್ತವೆ. 'ಉದ್ಯೋಗ ಇಲ್ಲದ ಬಡಿಗಿ ....ಕೆತ್ತಿದಂತೆ' ಎಂಬ ಮಾತು ಮೇಲು ನೋಟಕ್ಕೆ ಬೇರೆಯೇ ಕಂಡರೂ ಅದರೊಳಗಿನ ಅರ್ಥಗಳೇ ಬೇರೆ ಇರುತ್ತವೆ. ಬಡಗಿ ಕೆಲಸ ಇಲ್ಲದಾಗ ಕೂಡಲು ಮಣೆ ಮಾಡಿದ್ದಕ್ಕೆ ಈ ಮೇಲಿನ ಮಾತು ಬಂದಿರಲು ಸಾಧ್ಯ. ಅಂತಹ ಅನೇಕ ಗಾದೆಗಳು ಇತರ ವೃತ್ತಿಕಾರರಿಗೂ ಇವೆ. ಅವೆಲ್ಲವು ತಪ್ಪು ಅಂತನೂ ಅಲ್ಲ ಕೆಲವೊಂದು ಅನಿವಾರ್ಯತೆಗೆ ತಕ್ಕಂತೆ ಈ ರೀತಿಯ ಗಾದೆಗಳು ಬರುವುದು ಸಹಜವಾಗಿರಬಹುದು. ಜಾತಿ ಕಟ್ಟಿನ ಬಿಗಿ ಸಾಕಷ್ಟು ಗಟ್ಟಿಯಾಗಿರುವ ಹಳ್ಳಿಗಳಲ್ಲಿ ಇಂತಹ ಗಾದೆಗಳನ್ನು ವಿನೋದಕ್ಕಾಗಿ, ಕೀಟಲೆಗಳಿಗಾಗಿ ಈ ಬಗೆಯಾಗಿ ಬಹಿರಂಗವಾಗಿಯೇ ಜನಪದರು ಸಾಮಾನ್ಯೀಕರಿಸಿ ಗಾದೆಗಳ ಮೂಲಕ ಪ್ರಕಟಿಸುತ್ತಾರೆ. ಆದರೆ ಈ ಸಂಗತಿಗಳಿಗೆ ಅಪವಾದದ ಅಂಶಗಳು ಇರುತ್ತವೆ ಎಂಬುದನ್ನು ಅವರೆಲ್ಲರೂ ಬಲ್ಲವರೇ ಆಗಿರುತ್ತಾರೆ. ಬದುಕನ್ನು ನೇರಗೊಳಿಸುವಲ್ಲಿ ಜೀವನದ ಹಾದಿಯ ಜೀವನಾಡಿಗಳನ್ನು ಹಿಡಿದು ಮೀಟುವಲ್ಲಿ ಈ ಗಾದೆಗಳ ಪಾತ್ರ ನಿಜಕ್ಕೂ ಹಿರಿದಾದುದು.

ಒಡಪು

"ಹೆಸರೇಳುತೀನಿ ಒಡಪುಕಟ್ಟಿ" ಎಂಬ ಮಾತನ್ನು ನೋಡಿದರೆ ಸಾಕು ತಟ್ಟನೇ ಮದುವೆ ಮುಂಜಿ, ಶುಭಕಾರ್ಯಗಳು ನೆನಪಿಗೆ ಬರುತ್ತವೆ. ಈ ಒಡಪಿನ ಒಳಗಡೆ ಒಳಗೊಂಡಿರುವ ಹರಿತವಾದ, ನಯವಾದ, ಗಂಡದಿರುಗಳ ಗುಣಾವಗುಣಗಳು ಹಾಗೂ ವೃತ್ತಿಯ ನಿರಂತತೆಯನ್ನು ಈ ಪಾಂಚಾಳರ ಒಡಪುಗಳಲ್ಲಿ ಕಾಣಬಹುದು. ಈ ಒಡಪು ಎಲ್ಲಾ ಸಮುದಾಯಗಳಲ್ಲಿ ಸಮಯ, ಸಂದರ್ಭ, ಕಾಲಕ್ಕನುಗುಣವಾಗಿ ಮಾರ್ಮಿಕವಾಗಿ ಕಂಡುಬರುತ್ತವೆ. ಹೆಂಡತಿ ಮದುವೆಯಲ್ಲಿ ಅಥವಾ ಶುಭಕಾರ್ಯಗಳಲ್ಲಿ ಆರತಿ ಬೆಳಗಲು ತಟ್ಟೆ ಎತ್ತಿದಾಗ ಅರತಿಗಾಗಿಯೇ ಮಣಿಯನ್ನು ಇಟ್ಟಿರುತ್ತಾರೆ. ಅದನ್ನು ಒಬ್ಬಾಕೆ ತೆಗೆದುಕೊಂಡು ಬಿಡುತ್ತಾಳೆ. ಅರತಿ ಬೆಳಗಿ ತಟ್ಟೆಯನ್ನು ಇಡುವಾಗ ಮಣಿ ಇರುವುದಿಲ್ಲ. ಅಲ್ಲಿದ್ದವರು ಹೆಸರೇಳು ಅಣ್ಣನ ಹೆಸರೇಳು, ಮಾವನ ಹೇಸರೇಳು ಅಂತ ಅಂದಾಗ ಆರತಿ ಬೆಳಗುವಾಕೆಯ ಮುಖ ಆಗಲೇ ಕೆಂಪಾಗಿರುತ್ತದೆ. ನಾಚಿಕೊಂಡು ನಿಮಗೆ ಗೊತ್ತಲ್ಲ ಬಿಡು ಎಂದರೂ ಬಿಡುವುದಿಲ್ಲ. ಬರೀ ಹೆಸರಲ್ಲ ಒಡಪು ಕಟ್ಟಿ ಹೇಳು ಎಂದು ಪೀಡಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಗಂಡನ ವೃತ್ತಿ, ಗುಣ ಇನ್ನಿತರ ಸನ್ನಿವೇಶಕ್ಕೆ ತಕ್ಕಂತ ಒಡಪು ಕಟ್ಟಿ ಹೇಳುತ್ತಾರೆ.

ಅಂತಹ ಸಂಪ್ರದಾಯ ಹಳ್ಳಿಗಳಲ್ಲಿ ಅದು ಅನಕ್ಷರಸ್ಥರ ಹತ್ತಿರವೇ ಹೆಚ್ಚು ಎಂದರೆ ಅತಿಶಯವಾಗಲಾರದು. ಸಂಸ್ಕೃತಿ ಉಳಿದಿರುವುದು ಹಳ್ಳಿಗಳಲ್ಲಿಯೇ ಆದರೆ ನಗರಗಳಲ್ಲಿ ಇಲ್ಲ ಅಂತಲ್ಲ, ಒಡಪು ಕಟ್ಟಿ ಹೇಳುವುದು ಪ್ರಾಚೀನ ಅದರ ಗ್ರಾಮೀಣರಿಗೆ ಸಂಸ್ಕೃತಿ ಅದು ವಿಶೇಷವೇನು ಅಲ್ಲ. ಆ ಸ್ತ್ರೀಯರು ಬಹು ಸೊಗಸಾಗಿ ಆ ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಸೋಬಾನದ ಹಾಡುಗಳನ್ನು ಎಷ್ಟು ಇಂಪಾಗಿ ಸೊಗಸಾಗಿ ಹಾಡುತ್ತಾರೆಂದರೆ ಅದನ್ನು ಕೇಳಬೇಕು. ಜನಪದ ಆಚರಣೆ ನಂಬಿಕಗಳು ಜನಪದರ ಜೀವನಾಡಿಯಲ್ಲಿ ಅಡಕವಾಗಿವೆ. ಎಂಬುದನ್ನು ಮನಗಾಣಬಹುದು. ಅಂತಹ ಜಾನಪದ ಪ್ರಕಾರಗಳಲ್ಲಿ ಒಂದಾದ ಒಡಪು ಈ ಪಾಂಚಾಳರಲ್ಲಿ ಬೆಸೆದುಕೊಂಡಿವೆ. ಆಯಾ ಕೆಲಸ, ಆಯಾಗುಣ ವಿಶೇಷಗಳನ್ನು ಈ ಒಡಪುಗಳಲ್ಲಿ ಕಾಣಬಹುದು.

- ಅಸೆ ಹಾಲು
  ಬಿಸೆ ಅನ್ನ
  ಖುಷಿಲುಂಡು ಕುಲುಮ್ಯಾಕ ಹೊಕ್ಕನಾ............ರಾಮಚಾರಿ.

- ಅಡಿಕೆ ಬೆಟ್ಟಿ
  ತುಳಿಸಿಕಟ್ಟಿ
  ಗಂಟು ಬಡ್ಡಿ ಕೆತ್ತಾಕ ಬಲುಗಟ್ಟಿ..............ವೀರಚಾರಿ.

- ಅರಿಸಿಣ ನಂಬರ್
  ಪಾಟ್ಲಿ ಸಂಬಾರ್
  ಕಟಿಗಿ ಕೆಲ್ಸದಾಗ
  ಒನ್ನೆ ನಂಬರ್..............ಬ್ರಹ್ಮಚಾರಿ

- ಮಲ್ಲಿಗೆ ಹೂವಿನ ಮಂದಾರ
  ಶ್ರೀಗಂಧದ ಬಜಾರ
  ನಮ್ಮವರು ಮಾಡೋದು
  ಕಬ್ಬಿಣದ ಕಾರಬಾರ (ಆಯಾ ಕೆಲಸಕ್ಕೆ).............ಗುಡ್ಡಾಚಾರಿ.

- ಬಳಪದ ಕಲ್ಲಾಗ
  ಶಿಲೆ ಕೆತ್ತಂದ್ರ
  ನನ್ನ ಮಗ್ಗಲಿಗೆ ಬರ್ತಾನಾ....ಮಲ್ಲಾಚಾರಿ.

- ಎರಕ ಹೊಯ್ದ
  ಮೂರ್ತಿ ಮಾಡ್ತಾರ
  ಪಂಜಿ ಹರಕ್ಕೊಂಡು
  ಮನಿಗೆ ಬರ್ತಾರ..........ಮೌನಚಾರಿ.

- ಮದ್ವಿಗೆ ಮೊದ್ಲು ಮೂರುದಾರ
  ಮದ್ವಿ ಆದ್ಮೇಲೆ ಆರುದಾರ
  ನನ್ನ ಕೊಳ್ಳಿಗಾಕ್ಯಾನ ಮೂಗುದಾರ.......... ಸಿದ್ಧಾಚಾರಿ.

- ಪತ್ಲ ತಂಬಾ ಅಂದರೆ
  ಕಾವು ಹುಚ್ಚುತಾನ
  ಸೊನ್ನಿ ಮಾಡಿದರ
  ಮೆತ್ತಗಾಕನ...........ಕಾಳಚಾರಿ.

- ಮೇಜಿನ ಮೇಲೆ ಹಾಕುವುದು ರೇಷ್ಮಿಪಂಜೆ
  ನನಗಿಂತ ಚಿಕ್ಕವಳಿರುವಳು ಜಯಮ್ಮ ತಂಗಿ
  ವೀರಾಚಾರಿ ಹೆಸರೇಳುವೆನು ರುದ್ರಾಚಾರಿ ತಂಗಿ....

ಈ ರೀತಿಯಾಗಿ ಒಡಪಿನ ಕೊನೆಯಲ್ಲಿ ತಮ್ಮ ಗಂಡನ ಹೆಸರನ್ನು, ಆಯಾ ವೃತ್ತಿ ಮತ್ತು ಅವಗುಣ, ಸ್ವಭಾವ ಹಾಗೂ ಸಿಟ್ಟು, ನೋವು–ನಲಿವು, ಅಕ್ಕತಂಗಿ, ಅಣ್ಣಂದಿರು ಜೊತೆಗೆ ಪಾಂಚಾಳರಿಗೆ ಕರೆಯುವ ಆಚಾರಿ ಎಂಬ ಪದಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಪ್ರತಿಯೊಂದು ವಡಪಿನ ಕೊನೆಯಲ್ಲಿ ವಡಪುಗಾರ್ತಿಯ ಪತಿಯ ಹೆಸರನ್ನು ಹೇಳುವುದು ಕಂಡುಬರುತ್ತದೆ. ಹೀಗೆ ಬೇರೆ ಬೇರೆ ಸಮುದಾಯದವರಲ್ಲಿ ಇಂಯಹ ವಿಶಿಷ್ಟ ಜನಪದ ಸಾಹಿತ್ಯದ ಸೊಗಡನ್ನು ಕಾಣಬಹುದಾಗಿದೆ.

ಒಗಟು

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಗಟುಗಳಿಗೆ ಇನ್ನೊಂದು ರೀತಿಯ ಸ್ಥಾನವಿದೆ. ಜನಪದರಲ್ಲಿ ಸಿಗುವ ಒಗಟುಗಳು ಅವರ ಬುದ್ಧಿ ಮತ್ತೆ ಮತ್ತು ಚಾತುರ್ಯಗಳನ್ನು ಪರಿಚಯಿಸುತ್ತವೆ. ತಮ್ಮ ದೃಷ್ಟಿಗೆ ಗೋಚರಿಸಿದ ಯಾವುದೇ ಆಗಿರಲಿ ಕುತುಹಲವೆನಿಸಿದ ವಸ್ತು ವಿಷಯಗಳನ್ನು ಜನಪದರು ಚಮತ್ಕಾರಿಕವಾಗಿ ವರ್ಣಿಸಿದ ಬಗೆಯು ಅಚ್ಚರಿಯನ್ನು ತರುವಂಥದ್ದು. ಬಯಲಲ್ಲಿ, ಹುಣ್ಣಿಮೆಯ ಚಂದ್ರನ ಬೆಳ್ದಿಂಗಳಲ್ಲಿ ಕೊನೆಗೆ ತಮ್ಮ ನಿರಂತರವಾದ ಶ್ರಮದಾಯಕ ಕೆಲಸಗಳ ಮದ್ಯ ಉಲ್ಲಾಸಕ್ಕೆ ಮನರಂಜನೆ ತರುವುದಕ್ಕೆಯೇ ಎಂಬಂತೆ ಒಗಟುಗಳನ್ನು ಹೇಳುವ ಚಮತ್ಕಾರಿಕೆ ಉತ್ತರಗಳನ್ನು ಪಡೆಯುವಲ್ಲಿ ಆಕಸ್ಮಾತ್ ಉತ್ತರ ಹೇಳದೇ ಪೇಚಿಗೆ ಸಿಕ್ಕಿಕೊಂಡವರ ಗೋಳು ಯುದ್ಧದಲ್ಲಿ ಉಭವಿಸಿದಂತೆ ಆಗುತ್ತದೆ. ರೇಗಿಸಿ ಕೊನೆಗೆ ತಾವೇ ಉತ್ತರ ಹೇಳಿ ರಾಜ್ಯ ಗೆದ್ದವನ ಭಾವದಲ್ಲಿ ಕೇಕೆ ಹಾಕಿ ಉಲ್ಲಾಸ ಪಡುವುದನ್ನು ಕಾಣಬಹುದು. ತಮ್ಮ ದಿನನಿತ್ಯದ ಬಡನಾಟದ ವಸ್ತುಗಳನ್ನೇ ವೈಭವಯುತವಾಗಿ ವರ್ಣಿಸಿ ಒಗಟುಗಳನ್ನು ಬಿಡಿಸಲು ಬಂದವರಿಗೆ ಮತ್ತಷ್ಟು ಅಚ್ಚರಿಯನ್ನುಂಟು ಮಾಡುತ್ತಿರುತ್ತಾರೆ. ಅದರಂತೆ ಪಾಂಚಾಳರು ಸಮಯ ಸಂದರ್ಭಕ್ಕೆ ತಕ್ಕಂತೆ ಒಗಟುಗಳನ್ನು ಹೇಳುವುದು, ಕೇಳುವುದು ಕಂಡುಬರುತ್ತದೆ. ಈ ಒಗಟಿಗೆ ಜಾತಿ, ಪಂಥ, ಮೇಲು, ಕೀಳು ಎಂಬ ಭಾವವೇ ಇರುವುದಿಲ್ಲ. ಹಾಸ್ಯ ಮತ್ತು ಆಶ್ಚರ್ಯವನ್ನುಂಟು ಮಡುವ ತಲೆ ಕೆರೆದುಕೊಳ್ಳುವ ವಿಚಾರಗಳನ್ನು ಒಳಗೊಂಡಿರುತ್ತವೆ. ಅವು ಪಾಂಚಾಳರ ಹತ್ತಿರವೂ ಸುಳಿದಾಡುವುದನ್ನು ಕಾಣಬಹುದು. 'ಒಗಟಿಗೊಂದು ಒಗಟು' ಎಂಬಂತೆ ಪೈಪೋಟಿಯಲ್ಲಿ ನಿರತರಾಗಿರುತ್ತಾರೆ.

- ಕತ್ರಗುಂಟು ಕಾಗೆಯಲ್ಲ, ತೂಕವುಂಟು ಬಂಗಾರವಲ್ಲ, ಬಾಯಿವುಂಟು ಮನುಷ್ಯನಲ್ಲ' ಈ ಒಗಟಿನ ಒಳಗಡೆ ಬೇಗ ಅರ್ಥವಾಗದ ರೀತಿಯಲ್ಲಿ ಇದರ ಅರ್ಥ ಅಡಗಿಕೊಂಡಿದೆ. ಕಾಗೆಯು ಬಣ್ಣ [illegible] ಅದರಂತೆ ಕಜ್ಜಿಯೂ ಕಟ್ಟಿರುತ್ತದೆ. ಬಂಗಾರ ತೂಕ ಇದ್ದಂತೆ ಕಜ್ಜಿಯೂ [illegible] ತೂಕ [illegible].

ಜ್ಞಾನವನ್ನು ಹೊಂದದ ಮನುಷ್ಯನಲ್ಲವೆಂದರೆ ಕಬ್ಬಿಣಕ್ಕೆ ಅಗಲುವ (ಒಡಗಣ್ಣು) ಕಬ್ಬಿಣ ಬಡಿದಂತೆ ಜಾಯಿಬಿಡುತ್ತದೆ. ಎಷ್ಟೊಂದು ನಿಗೂಢವಾಗಿ ಈ ಒಗಟನಲ್ಲಿ ಅಡಗಿದೆ. ಆ ನಿಗೂಢತೆಯು ವೈಶಿಷ್ಟ್ಯವೇ ಒಗಟು.

- ತಾಯಿ ತೆರಿಕಿ ಮಗ ಸಂಪನ್ನ' ಪಾಂಚಾಳರಲ್ಲಿ ತಾಯಿ ಮತ್ತು ಮಗನ ಗುಣಾವಗುಣಗಳ ಬಗ್ಗೆ ಕಂಡುಬರುವ ಒಗಟು. ಇಂತವುಗಳು ಇವರಲ್ಲೇ ಇರುತ್ತವೆಂದಲ್ಲ ಇತರರೂ ಬಳಸುವುದುಂಟು. ತಾಯಿ ತೆರಿಕಿ ಎಂದರೆ ಜಾಲಿ ಮುಳ್ಳು ಮುಟ್ಟದರೆ ಕೈ ಹರಿದು ಕೊಳ್ಳಬೇಕಾಗುತ್ತದೆ. ಅದೇ ಮರದಲ್ಲಿ ಜಾರಿಹಣ್ಣನ್ನು ಮಗನಿಗೆ ಹೋಲಿಕೆ ಮಾಡುತ್ತಾರೆ. ಅದಕ್ಕೆ ಈ ತರದ ಹೋಲಿಕೆಯ ಒಗಟುಗಳು ಗುಣಗಳ ಮೇಲೆ ನಿರ್ಧಾರಿತವಾಗಿರುತ್ತವೆ.
- ಅವ್ವ ಆಕಾಶಕ್ಕೊದ್ಲು
  ಅಪ್ಪ ಭೂಮಿಗೋದ
  ಅಕ್ಕ ಮದ್ದಿಗೋದ್ಲು
  ಅಣ್ಣ ಸಂತಿಗೋದ – ಯಾರು ನಾನು?

ತುಂಬಾ ತಲೆ ಕೆಡಿಸಿಕೊಂಡು ಏನು ಏನು ಅಂತ ಪೇಚಾಟಕ್ಕೆ ಸಿಕ್ಕಿಕೊಂಡು ಕೊನೆಗೆ ಸೋತೆನೆಂದು ಹೇಳಿದಾಗ ಒಡಚಿಗ ತೆಂಗಿನಮರ ಎಂದು ಹೇಳುತ್ತಾನೆ. ಆಮೇಲೆ ಅಯ್ಯೋ ಇಷ್ಟೇನಾ ಹೇಗೆ ಎಂದು ಕೇಳಿದರೆ ಅವ್ವ ಆಕಾಶಕ್ಕೋದ್ಲು ಎಂದರೆ ತೆಂಗಿನಮರದ ಗರಿಗಳು, ಅಪ್ಪ ಭೂಮಿಗೋದ ಎಂದರೆ ಬೇರು, ಅಕ್ಕ ಮದ್ವಿಗೋದ್ಲು ಎಂದರೆ ತೆಂಗಿನ ಗರಿಯನ್ನು ಮದುವೆ ಅಂದರ ಹಾಕುವುದಕ್ಕೆ ಅಣ್ಣ ಸಂತಿಗೋದ ಎಂದರೆ ತೆಂಗಿನ ಕಾಯಿ ಮಾರಲು ತೆಗೆದುಕೊಂಡು ಹೋಗಿದ್ದು ಹಬ್ಬಾ ಎಷ್ಟು ಅದ್ಭುತವಾಗಿವೆ ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಇಂತಹ ಒಡಪುಗಳು ಈ ಪಾಂಚಾಳರು ಬಳಸುತ್ತಿರುತ್ತಾರೆ.

ತನ್ನನ್ನೇ ತಾನು ಕತ್ತರಿಸಿಕೊಳ್ತಾನೆ ಯಾರು? ಈ ಒಗಟಿನ ಹಿಂದೆ ಕಮ್ಮಾರನು ಬಳಸುವ ಉಪಕರಣಗಳಲೊಂದಾದ ಚಾಣ ಕಬ್ಬಿಣದಿಂದಲೇ ಕಬ್ಬಿಣವನ್ನು ಕತ್ತರಿಸುವುದು ಎಂದರ್ಥ. ಈ ಒಗಟಿನ ಪದ ಚಾಣ (ಕಬ್ಬಿಣ) ಅಷ್ಟೆ ಅದರ ಒಂದೆ ಗೌಪ್ಯವಾಗಿರುವುದು ಒಗಟಿನಲ್ಲಿ ಕಾಣಬಹುದು. ಇಂತಹ ಅನುಭವಗಳಲ್ಲಿ ದಕ್ಕಿದ ಸಾವಿರಾರು ವಸ್ತು, ವಿಷಯಗಳನ್ನು ಕುರಿತು ಒಗಟುಗಳನ್ನು ಕಟ್ಟಿ ಅವುಗಳ ನೆಪದಲ್ಲಿ ತಾವು ನೋಡಿದ ಮುಟ್ಟಿದ ಉಪಯೋಗಿಸಿದ ವಸ್ತುಗಳನ್ನು ಸೊಗಸಾಗಿ ವರ್ಣಿಸುತ್ತಾರೆ.

- ಒಬ್ಬನು ನಿಲ್ಲುತ್ತಾನೆ ಇನ್ನೊಬ್ಬನು ಬಡಿಯುತ್ತಾನೆ (ಉಳಿ, ಕೊಡ್ತಿ).
- ತಾನುಂಟು ತನ್ನ ಮರಿ ಉಂಟು ಮುಟ್ಟಕೋದ್ರೆ ಮಂಗ ಮಾಯಾ (ನೊಣ).
- ನೆಲದಾಗ ಉರುಳಾಡುತ್ತೆ ಮುಳ್ಳಿನ ಮ್ಯಾಲೆ ಮಲಗುತ್ತೆ (ಬಟ್ಟೆ).
- ಒಂದು ಮುಳುಗುತ್ತೆ ಒಂದು ತೇಲುತ್ತೆ ಒಂದು ಕರಗುತ್ತೆ (ಅಡಕಿ, ಎಲೆ, ಸುಣ್ಣ).
- ಅಂಗಿ ಚಣ್ಣ ಉಚ್ಚೋದು ಬಾವ್ಯಾಕ ಹಾರೋದು (ಬಾಳೆಹಣ್ಣು).

ಹೀಗೆ ಬುದ್ಧಿ ಪ್ರಧಾನವಾದ ಹಲವು ಬಗೆಯಲ್ಲಿ ಇಂತಹವುಗಳು ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಕಂಡುಬರುವಂತೆ ಈ ಪಾಂಚಾಳ ಸಮುದಾಯದಲ್ಲಿ ಕಾಣಬಹುದು. ಇಂತ ಜಾನಪದ ಸಾಹಿತ್ಯವು ಕ್ಷೇತ್ರಕಾರ್ಯ ನಡೆಸುವಾಗ ಕೇಳಿಬಂದಂಥವುಗಳು. ಈ ಸಾಹಿತ್ಯ ಸಹಜವಾಗಿಯೇ ಇತರ ಗ್ರಾಮೀಣ ಪ್ರದೇಶದ ಜನರಿಗೆ ಪರಿಚಿತವೆನ್ನುವಂತ ಅಂಶಗಳು ಕಂಡುಬರುತ್ತವೆ. ಹಾಗೆ ಇಲ್ಲಿ ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ

ಕೊಡಕೊಳ್ಳುವಿಕೆ ಸಹಜವಾಗಿ ನಡೆದಿರುವ ಸಂಭವವೇ ಹೆಚ್ಚು.

ಜನಪದ ಹಾಡು

ಜನಪದ ಹಾಡು ಜಾನಪದ ಸಾಹಿತ್ಯದಲ್ಲಿ ಮೊದಲನೆಯದಾಗಿ ಕಂಡುಬರುತ್ತದೆ. ಜನಪದ ಹಾಡುಗಳನ್ನು ಜನಪದರು ವ್ಯವಸಾಯದ ಸಮಯದಲ್ಲಿ ಅಂದರೆ ರಂಟೆ ಹೊಡೆಯುವಾಗ ಬಿತ್ತುವಾಗ ಕಳೆ ತೆಗೆಯುವಾಗ ಹಂತಿಹೊಡೆಯುವಾಗ ಮತ್ತು ಸುಗ್ಗಿಯ ಸಮಯ ಹಾಗೂ ಸಾಂಸ್ಕೃತಿಕ ದಿನಗಳಲ್ಲಿ ಜನಪದ ಹಾಡುಗಳನ್ನು ಹಾಡುತ್ತಾರೆ. ಅದರಂತೆ ಈ ಪಾಂಚಾಳರು ಕೂಡ ಜನಪದ ಹಾಡುಗಳನ್ನು ಹಾಡುವುದನ್ನು ಕೇಳಬಹುದು.

ಪಾಂಚಾಳರಿಗೆ ದೇವರ ಬಗ್ಗೆ ಅತಿಯಾದ ನಂಬಿಕೆ,ಆಚರಣೆಗಳನ್ನು ರೂಢಿಸಿಕೊಂಡಿರುವುದು ಕಂಡುಬರುತ್ತದೆ. ಈ ಕೆಳಗಿನ ಜನಪದ ಹಾಡು ಸಕಲ ಸೃಷ್ಟಿಕರ್ತನು ವಿಶ್ವಕರ್ಮನಿಂದಲೇ ಎಂಬುದನ್ನು ತಿಳಿಸುತ್ತದೆ. ಈ ಹಾಡಿನ ಮೊದಲನೆ ಸಾಲು ಸಕಲ ದೇವರನ್ನು ನಿರ್ಮಾಣ ಮಾಡಿದ್ದಾನೆಂಬುದನ್ನು ತಿಳಿಸುತ್ತದೆ. ಅದು ಪಲ್ಲವಿಯಾಗಿ ಕಂಡುಬರುತ್ತದೆ.

ನಾನಾ ದೇವರನೂ ನಿರ್ಮಾಣ ಮಾಡಿದ ಗುರು
ಮೌನಯ್ಯ ನೊರೆತು ಮತ್ಯಾರಿಲ್ಲವೋ ।
ಮಾನವ ಮೊದಲಾಗಿ ಪಶುಪಕ್ಷಿಗಳನೆಲ್ಲಾ
ತಾನೆ ಸಲಹದ ಸಕಲ ರೂಪದಿಂದಾ$
ಕಡಲೊಳು ಹಡಗವಾ ನಡೆಸಿದ ಶಿಲಿಯನು
ಹೊಡೆದು ಮಾಡಿದ ದೊಡ್ಡಗುಡಿಗೋಪುರವಾ$ ॥ ೧ ॥

ಈ ಸಾಲುಗಳಲ್ಲಿ ಮಾನವನ ಮೊದಲುಗೊಂಡು ಪಶುಪಕ್ಷಿಗಳನ್ನು ರೂಪಿಸಿ ಅವುಗಳನ್ನು ತಾನೆ ಸಲಹುದನ್ನು ಕಾಣುತ್ತೇವೆ. ಕಡಲಲ್ಲಿ ಹಡಗವನ್ನು ನಡೆಸಿದ, ಶಿಲೆಯನ್ನು ಗುಡಿಗೋಪುರ ಕಟ್ಟಿದವನು ಎಂದು ಅರ್ಥೈಸುತ್ತದೆ.

ಕೋಟಿಕೊತ್ತಲು ಸಾಲುಮಳಿಗೆ ತಕ್ಕಡಿ ತ್ರಾಸು
ರಾಟಿ ಕದರೂ ಸೂಜಿ ಮನಿಮಾಡಿದಾ ।
ತೋಟ ಪೈರಿಗೆ ತಕ್ಕ ಮೇಟಿ ಕೂರಿಗೆ ಕುಂಟಿ
ಮಾತುಳ್ಳ ಬಂಡಿಯು ಕದ ಮಾಡಿದಾ ॥ ೨ ॥

ರಾಜರ ಅನುಕೂಲಕ್ಕಾಗಿ ರಾಜ್ಯದ ಭದ್ರತೆಗೆ ಕೋಟೆಗಳನ್ನು ಸಾಲಾಗಿ ಕಟ್ಟಿಸಿ ತೂಗುವ ತಕ್ಕಡಿ. ರಾಟಿ. ಕದರು. ಸೂಜಿ ಮನಿಯನ್ನು ಮಾಡಿದನು ಹಾಗೂ ತೋಟಕ್ಕೆ ಪೈರು ಬೆಳೆಯಲು ಅನುಕೂಲಕ್ಕಾಗಿ ರಂಟೆ. ಕೂರಿಗೆ. ಕುಂಟೆ. ಬಂಡಿ ಮನೆಗೆ ಕದವನ್ನು ನಿರ್ಮಾಣ ಮಾಡಿದವನು ಎಂದು ತಿಳಿದು ಬರುತ್ತದೆ.

ಕತ್ತರಿ ಕುರ್ಚಿಗಿ ಗುದ್ದಲಿ ರೆಂಪಿಗಿ ಲೆಕ್ಕಣಿಕೆ
ಹೊನ್ನರೊಕ್ಕವ ಮಾಡಿದಾ ।
ಕತ್ತಿ ಕಠಾರಿ ಬಿಲ್ಲು ಬಾಣ ಟೂಬಕಿ ತೊಪು
ಮುತ್ತಿನಾಭರಣ ಮೂಗುತಿ ಮಾಡಿದಾ$ ....॥ ೩ ॥

ಈ ಮೇಲಿನ ಸಾಲುಗಳಲ್ಲಿ ಕತ್ತರಿ, ಕುರ್ಚಿಗಿ, ಬಗೆಯುವ ಗುದ್ದಲಿ, ಚಮ್ಮಾರನ ರೆಂಪಿಗೆ, ಬರೆಯುವ ಲೆಕ್ಕಣಿಕೆ, ಹೊನ್ನಿನ ನಾಣ್ಯ ಮಾಡಿ ಯುದ್ಧಕ್ಕೆ ಕತ್ತಿ, ಕಠಾರಿ, ಬಿಲ್ಲು ಬಾಣ, ಬಾಂಬುಗಳನ್ನು ಮತ್ತು ಮುತ್ತಿನಾಭರಣಗಳು ಮೂಗುತಿ ಮಾಡಿದ ಇವುಗಳನೆಲ್ಲ ಈ ಮಾನಯ್ಯನಿಂದಲೇ ಹುಟ್ಟಿದವುಗಳೆಂದು ತಿಳಿದುಬರುತ್ತದೆ

ಆನೆ ಅಂಕುಶವಳ್ಳಿ ವೀಣೆ ತಂಬೂರಿ ತಾರೆ

ಜಾಣಗ ತಾಳ ಮದ್ದಳೆ ಮಾಡಿದಾ ।

ಕಾಣದ ಕಣ್ಣಿಗೆ ಹಗಲೇ ಚಾಳಿಸ ಮಾಡಿ

ಕೋಣೆಗೆ ಬೀಗ ಮುದ್ದುರಿ ಮಾಡಿದಾಽ ..... ॥ ೪ ॥

ಆನೆಯನ್ನು ಪಳಗಿಸುವುದಕ್ಕೆ ಬಳಸುವ ಅಂಕುಶ, ಸಂಗೀತ ಉಪಕರಣಗಳಾದ ವೀಣೆ, ತಂಬೂರಿಗಳನ್ನು ಜಾಣನಿಗೆ ಅಂದರೆ ತಾಳಕ್ಕೆ ತಕ್ಕಂತೆ ಬಳಸುವ ಬಯಲಾಟ ಯಕ್ಷಗಾನದಲ್ಲಿ ಪ್ರಮುಖ ಪಾತ್ರ ವಹಿಸುವ ತಾಳ, ಮದ್ದಳೆ ಮಾಡಿ ಕಾಣದ ಮುದುಕರ ಕಣ್ಣಿಗೆ ಚಾಳಿಸ ಮಾಡಿದ ಮತ್ತು ಕೋಣೆಗಳಿಗೆ ಬೀಗ ಮಾಡಿ ಅದಕ್ಕೆ ಬೀಗದ ಕೈಯನ್ನು ಮಾಡಿದ ಎಂದು ಹಾಡುತ್ತಾರೆ.

ತಳಿಗಿ ತಂಬಿಗಿ ಮೂರ್ತಿಗಳಗಂಟಿ ಜಾಗಟೆ

ಬೆಳಗುವ ಅರತಿ ದರ್ಪಣ ಮಾಡಿದಾ ।

ಇಳೆಯೊಳು ವರವಿಯ ನಿಲುವಿಲ್ಲ ಮಹಾಪ್ರಭು

ತಿಳಿದು ಮಾಡಿದ ಮಂಗಳ ಸೂತ್ರವಾಽ ......॥ ೫ ॥

ಮನೆಯ ಬಳಕೆಯ ವಸ್ತುಗಳಾದ ಲೋಟ, ತಂಬಿಗೆ, ಪೂಜಿಸುವ ಗಳಗಂಟಿ, ಜಾಗಟಿ, ದೇವರಿಗೆ ಬೆಳಗುವ ಆರತಿ. ಸೌಂದರ್ಯಲೇಪನಕ್ಕೆ ಕನ್ನಡಿ ಮಾಡಿದ ಭೂಮಿಯಲ್ಲಿ ವರವಿಯ ಸ್ಥಳದಲ್ಲಿ ವಾಸವಾದ ದೇವರು ತಿಳಿದು ಸ್ತ್ರೀಗೆ ಮಂಗಳ ಸೂತ್ರ (ತಾಳಿ) ಮಾಡಿದ ಎಂದು ಹಾಡುತ್ತ ಮುಂದುವರೆಯುತ್ತಾರೆ.

ಅರಸಿ ಗಂಧಣ ಛತ್ರಿ ಚಾಮರಾ ಪಾತಕಿಯೂ

ಅರಮನೆ ಮೇಲು ಮಂದಿರಾ ಮಾಡಿದಾ ।

ಕರಿತೂಗ ಹೊನ್ನು ಮಾಡಿ ನಗಾರಿ ಹೊತ್ತ

ಕಹಳೆ ಕರ್ನೆದು ಮಾಡಿದಾಽ ॥ ೬ ॥

ಈ ಹಾಡಿನ ಸಾಲುಗಳಲ್ಲಿ ಅರಸಿಗೆ ಬೇಕಾದ ಗಂಧಣ, ಛತ್ರಿ, ಚಾಮರ, ಪಟಾಕ್ಷಿಯನ್ನು ಮತ್ತು ಅರಮನೆಯ ಮೇಲೆ ಉಪ್ಪರಿಗೆ ಮಾಡಿ ತೂಗುವ ಜೋಕಾಲಿಯನ್ನು ಚಿನ್ನದಲ್ಲಿ ಮಾಡಿ ನಗಾರಿಯನ್ನು ಕಹಳೆಯನ್ನು ಮಾಡಿದನೆಂದು ತಿಳಿಯುತ್ತದೆ.

ಈ ಪರಿ ಎಲೆಮಾರ ಲೋಕೋಪ ಸಾರಕ

ಅನೇಕ ರೂಪವಮಾಡಿ ತೋರಿದಾನೋ ।

ಬೇಕಾಗಿ ಸೃಷ್ಟಿಯ ಸಾಕುವ ಸದ್ಗುರು

ಶ್ರೀ ವಿಶ್ವಕರ್ಮಣ ನಿತನೊ ॥ ೭ ॥

ನಾನಾದೇವರನೂ ನಿರ್ಮಾಣ ಮಾಡಿದ ಗುರು

ಮಾನಯ್ಯ ನೊರೆತು ಮತ್ಯಾರಿಲ್ಲವೊ ॥

ಎಲ್ಲವನ್ನು ಅಂದರೆ ಪಾತಳ ಭೂಲೋಕ ದೇವಲೋಕವನ್ನು ರೂಪಿಸಿ ಅದರ ಅನೇಕ ರೂಪಗಳನ್ನು ಗಿಡಮರ ಪ್ರಕೃತಿಯನ್ನು, ಜಗತ್ತನ್ನು ಸೃಷ್ಟಿಸಿ ಅವುಗಳನೆಲ್ಲಾ ಸಾಕು ಸಲಹುದನ್ನು ಇವನೇ ಹೊತ್ತುಕೊಂಡಿದ್ದಾನೆಂದು ಹಾಡಿನ ಭಾವಾರ್ಥದಲ್ಲಿ ಕಂಡು ಬರುತ್ತದೆ. ಈ ಹಾಡನ್ನು ನೋಡಿದರೆ 'ಜಗತ್ತಿನ ಸೃಷ್ಟಿಕರ್ತ' ಇವನೆ ಎನ್ನುವುದು ಕೂಡ ತೋರಿಬರುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಹಾಡನ್ನು ಚಂದ್ರಮ್ಮ ಹಡಗಲಿಯವರು ಬಹು ಇಂಪಾಗಿ ಹಾಡಿ ತೋರಿಸಿದ್ದಾರೆ.

ಈ ರೀತಿಯಾಗಿ ಜನಪದ ಹಾಡುಗಳು ಪಾಂಚಾಳರಲ್ಲಿ ಕಂಡುಬರುತ್ತವೆ. ಬೇರೆ ಬೇರೆ ಹಾಡುಗಳು ಇತರ ಸಮುದಾಯಗಳಲ್ಲಿ ಕಂಡುಬಂದಂತೆ ಇವರಲ್ಲಿ ಕೂಡ ಕಂಡುಬರುವುದು ಸಹಜ. ಜೋಗುಳ ಹಾಡು, ಲಾವಣಿ, ಭಕ್ತಿಹಾಡುಗಳು ಕೇಳಿಬರುತ್ತವೆ. ಈ ಸಮುದಾಯದಲ್ಲಿ ಜಾನಪದ ಮಹಾಕಾವ್ಯವು ಕಂಡುಬರುವುದಿಲ್ಲ. ಸಾಂಸ್ಕೃತಿಕ ನಾಯಕರುಗಳಾದ ಮಂಟೇಸ್ವಾಮಿ, ಜುಂಜಪ್ಪನಂತವರು ಈ ಸಮುದಾಯದಲ್ಲಿ ಕಾಣುವುದಿಲ್ಲ. ಹಾಗೂ ಜಾನಪದ ಮಹಾ ಕಾವ್ಯವು ಸಿಗುವುದಿಲ್ಲ. ಜಾನಪದ ಪ್ರಕಾರದ ಸಾಹಿತ್ಯ ಮಾತ್ರ ಇವರಲ್ಲಿ ಕಾಣಬಹುದಾಗಿದೆ. ಆದರೆ ಇನ್ನಿತರ ಮಹಾಕಾವ್ಯಗಳಲ್ಲಿ ಇವರ ಉಲ್ಲೇಖಗಳು ಕಾಣುತ್ತವೆ.

ಕಬ್ಬಿಣ ಮಾಡ ಹುಡ್ಗ ಕುಲ್ಮ ಈಚೆಗೆ ಬಾರೋ

ಬುತ್ತಿ ತಂದಿವ್ನಿ ಉಣಬಾರೋ ನಿನಗಾಗಿ

ಕಬ್ಬ ತಂದಿವ್ನಿ ತಿನಬಾರೋ ॥

ಜನಪದ ಸಾಹಿತ್ಯದಲ್ಲಿ ಇಂತಹ ಹಾಡುಗಳು ಸಿಗುವುದು ಸಹಜ. ಹಾಗೆಯೇ ಪಾಂಚಾಳರ ಒಂದು ವೃತ್ತಿಯಾದ ಕಮ್ಮಾರಿಕೆ ಹುಡುಗನು ಕುಲುಮೆಯಲ್ಲಿ ನಿರತನಾದಾಗ ಹಸಿವಿನ ವೇಳೆಯಲ್ಲಿ ಅವನೆಂಡತಿ ಈ ರೀತಿಯಾಗಿ ಹಾಡಿನ ಮೂಲಕ ಕರೆಯುವ ಪ್ರಸಂಗ ಕಂಡುಬರುತ್ತದೆ. ಮುಂದುವರೆದು ಅದಕ್ಕೆ ತಿರುಗಿ ಕಮ್ಮಾರ ಹೇಳುತ್ತಾನೆ.

ಕಬ್ಬಿಣ ಮಾಡ ಕೈಯ ಕೆಬ್ಣದಷ್ಟೆ ಗಟ್ಟಿ

ಮಗ್ಗಲಿ ಹಾಕಿ ಒತ್ತಿದರೆ । ನನ್ನ ಚಲುವೆ

ತಿದಿಯಾ ಒತ್ತಿದಂಗೆ ತಿಳಿಬಾರೆ ।

ಸದಾ ಕಬ್ಬಿಣದಲ್ಲಿ ಕೆಲಸಮಾಡುವ ಕೈಗಳು ದಡ್ಡು ಬಿದ್ದು ಕೆಬ್ಣದಷ್ಟು ಗಟ್ಟಿಯಾಗಿರುತ್ತವೆ. ಅದಕ್ಕೆ ಮಗ್ಗಲಿ ಹಾಕಿ ಒತ್ತಿದರೆ ನನ್ನ ರಾಣಿ ಕುಲುಮೆಯಲ್ಲಿ ಬಳಸುವ ಉಪಕರಣವಾದ ತಿದಿಯಾ ಒತ್ತಿದಂಗೆ ಆಗುತ್ತದೆ ಎಂದು ರಸಿಕತೆಯಿಂದ ಹೇಳುತ್ತಾನೆ. ರಸಿಕತೆಗೆ ಇಂತಹ ಹಾಡುಗಳಲ್ಲಿ ಹೆಚ್ಚು ಕಾಣಬಹುದು. ಜನಪದ ಹಾಡುಗಳಲ್ಲಿ ನವರಸಗಳು ಮಿಂಚುತ್ತ ಇರುತ್ತವೆ ಅವುಗಳಿಗೆ ಇಲ್ಲಿ ಪ್ರಮುಖ ಸ್ಥಾನವಾಗಿರುತ್ತದೆ.

ಕೆಂಪಾದ ಸೀರೆ ಉಟಗಂಡು

ಕೆರೆಮ್ಯಾಲೆ ನಿಂತಗೊಂಡು

ಕರಿಮೀಸೆ ಹುಡುಗಾನ ಕರೆದಳೋ

ನಾರಿ ಕರೆದಾಳೋ ವಾರೀಗೆ

ಜನಪದರು ಹಾಡಿನಲ್ಲಿ ನಾರಿಯು ಉಡುವ ಸೀರೆ ಬಣ್ಣ ಕೆರೆಯ ಮೇಲೆ ನಿಂತುಕೊಂಡು ಯೌವ್ವನದ ಹುಡುಗನನ್ನು ಆಸೆಗಣ್ಣಿನಿಂದ ಕರೆಯುವ ಸಂಗತಿ ತಿಳಿದು ಬರುತ್ತದೆ

ಕುಡುಗೋಲು ಮಾರಾಕಂತ

ಕೂಡ್ಲೀಗಿ ಸಂತೆಗೋದ

ಕುಡುಗೋಲಿಲ್ಲ ಕುಡಿಕಿ ರೊಕ್ಕಿಲ್ಲ

ನನ ಗಂಡನ ಲಂಗೋಟಿ ಎಲ್ಲೋ ಮಾಯಾದ್ವೊ.....

ಎಂಬ ಹಾಡನ್ನು ಸುಮ್ಮಕ್ಕ ಬಡಿಗೇರ ರವರು ಹೇಳಿದ್ದಾರೆ ಈ [illegible] ಕೂಡ್ಲಿಗಿ [illegible] ಬಹುದು. ಅಲ್ಲಿನ ಸಂತೆಗೆ ಪಾಂಚಾಳರು ಕುಡಗೋಲು ಮಾರಲಿಕ್ಕೆ ಹೋಗಿ ಎಲ್ಲಾ ಮಾರಿ ಹಣ ತರದೇ ಬರಿಗೈಲಿ ಬಂದಾಗ ಹೆಂಡತಿ ಅಸಹಾಯಕತೆಯಿಂದ ಈ ಹಾಡನ್ನು ಹೇಳುತ್ತಾಳೆ. 'ನನ ಗಂಡನ ಲಂಗೋಟಿ ಎಲ್ಲೋ ಮಾಯಾದ್ವೋ' ಎಂಬ ಸಾಲು ಸ್ವಲ್ಪ ಭಿನ್ನವಾಗಿ ಯೋಚಿಸಬಹುದು. ಕೂಡ್ಲಿಗಿಯಲ್ಲಿ ಸೂಳೆ ಗೇರಿಗ ಹೆಸರಾಗಿದ್ದರೂ ಇರಬಹುದು ಕುಡಗೋಲನ್ನು ಮಾರಿ ಹಣದಲ್ಲಿ ತನ್ನ ಆಸೆಯನ್ನು ತೀರಿಸಿಕೊಳ್ಳಲಿಕ್ಕೆ ಕೊಟ್ಟು ಬಂದಿರುವ ಸಾಧ್ಯತೆಯನ್ನು ಊಹಿಸಿಕೊಳ್ಳಹುದು.

ಬಡಗಿಯರು ತೇರುಕಟ್ಟುವ ಕಾಯಕದಲ್ಲಿ ನಿಷ್ಣಾತರಾದವರು. ಊರಿನ ದೇವರ ಗುಡಿಗೆ ತೇರು ಮಾಡಿಸುವ ಸಂಕಲ್ಪ ಇಟ್ಟುಕೊಂಡು ಜನರು ಈ ಕೆಳಗಿನ ವೃತ್ತಿಕಾರರ ಗುಣಗಳನ್ನು ಜನಪದ ಹಾಡಿನಲ್ಲಿ ನೋಡಬಹುದು.

ಬಾಗೂರ ಬಡಗೀಯ ಬೇಗನೇ ಬರಹೇಳಿ

ಬಾರೀ ಉಳಿಬಾಚಿ ಸಹವಾಗಿ । ರಂಗಯ್ಯ

ಬಾರೀಯ ತೇರ ಕಡೆದಾರು ॥

ತಿಟ್ಟೂರ ಬಡಗಿಯ ಥಟ್ಟನೆ ಬರಹೇಳಿ

ಕಟ್ಟೆ ಉಳಿಬಾಚಿ ಸಹವಾಗಿ । ರಂಗಯ್ಯ

ಬಾರೀಯ ತೇರ ಕಡಿದಾರು ॥

ಬಡಿಗೇರ ಬಂದನವನ ಬಡಿವಾರ ನೋಡೀರೇ

ಬಡಬಾಯ ತುಂಬಾ ಎಲಿ ಅಡಿಕೆ । ಅಣಿ ಮ್ಯಾಲೆ

ಬಂಡಿಗಾಲೆಂಥ ಗಂಧವಾ ॥

ಎಂದು ಜನಪದರು ಅವರು ಮಾಡುವ ವಸ್ತು ಮತ್ತು ಉಪಕರಣ ಹಾಗೂ ಅವರ ಗುಣವನ್ನು ತುಂಬಾ ಸೊಗಸಾಗಿ ಮೂಡಿ ಬಂದಿದೆ. ಹಾಗೆ ಮುಂದುವರೆದು

ಕಂದವ್ವ ನೆತ್ತಿಕೊಂಡು ಕಂಡೆ ಬಡಿಗರ ಮನೆಯ

ಸದ್ಯಕ್ಕೆ ಬೇಕಣ್ಣ ಕಡಗೋಲು । ನಮ್ಮನಿಯ

ಕಾಳಮ್ಮ ಹಾಲು ಕೊಡೋದೈತಿ ॥

ಬಡಿಗೇರ ಓಣ್ಯಾಗ ಸೆಡಗಿನ್ನೇನ್ದೇಳಲಿ

ಬಿಳಿಯಂಗಿ ಬೆಳ್ಳಿ ಉಡುದಾರ । ಹಾಕ್ಕೊಂಡು

ಬಡಿಗೆಣ್ಣ ಸೆಡ್ಡೆ ಬಿಗುದಾನೋ ॥

ಉಕ್ಕಿನ ಉಳಿಬಾಚಿ ಹತ್ತಳೆಯ ಜನಿವಾರ

ಮುತ್ತು ಸುರಾದ್ವಾಂಗ ಬೇವತಾನ । ಈರಣ್ಣ

ಅಚ್ಚ ಬಡಿಗ್ಯಾರ ಮಗನವ್ವ

ಮುಂತಾಗಿ ಕೆಲವು ತ್ರಿಪದಿಗಳಲ್ಲಿ ಬಡಗಿಯ ಸೇವೆ, ಸಂಬಂಧ ಹಾಗೂ ಆತನ ಬಗಗಿರುವ ಮೆಚ್ಚುಗೆ ಈ ಹಾಡಿನಲ್ಲಿ ಮೂಡಿಬಂದಿದೆ.

ಈ ರೀತಿಯಾಗಿ ಪಾಂಚಾಳರ ಜನಪದ ಸಾಹಿತ್ಯದಲ್ಲಿ ಹಲವಾರು ಪ್ರಕಾರಗಳು ಕಂಡುಬರುತ್ತವೆ. ಕಥೆ, ಐತಿಹ್ಯ, ಒಗಟು, ಒಡಪು, ಭಕ್ತಿಹಾಡು, ಜನಪದ ಹಾಡುಗಳು ಹೀಗೆ ಮುಂದುವರೆದುಕೊಂಡು ತನ್ನ ಸಾಂಸ್ಕೃತಿಕ ಬದುಕನ್ನು ಕಳೆಯುತ್ತಾ ಬಂದಿದ್ದಾರೆ. ಇಂತಹ ಸಮುದಾಯಗಳಷ್ಟೆ ಅಲ್ಲದೇ ಎಲ್ಲಾ ಸಮುದಾಯಗಳಲ್ಲಿ ಈ ಪ್ರಕಾರಗಳನ್ನು ಕಾಣಬಹುದು. ಇವರ ಸಾಹಿತ್ಯವೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಉಳಿದುಕೊಂಡಿರುವುದು ಸಂತೋಷದಾಯಕವೇ. ಆಧುನಿಕ ಬದುಕಿಗೆ ಹೊಂದಿಕೊಂಡು ಬದುಕುವ ಸ್ಥಿತಿ ಬಂದಿರುವುದರಿಂದ ಇಂತಹ ಪ್ರಕಾರಗಳು ಸಿನಿಮಾ, ಧಾರಾವಾಹಿ, ಪಾಪ್ ಸಾಂಗ್‌ಗಳಲ್ಲಿ ಮುಳುಗುವ ಕಾಲದಲ್ಲಿ ಈ ತರದ ಸಂಸ್ಕೃತಿ ನಶಿಸುವ ಭಯದ ವಾತಾವರಣ ಕಂಡುಬರುತ್ತದೆ.

***

ಅಧ್ಯಾಯ ೬

ಆಯ ಪದ್ಧತಿ

ನಮ್ಮ ದೇಶ ಕೃಷಿ ಪ್ರಧಾನವಾದ ದೇಶ ಅದು ಹಳ್ಳಿಗಳ ದೇಶ ಈ ಹಳ್ಳಿಗಳಲ್ಲಿರುವ ಜನಸಂಖ್ಯೆಯ ಪೈಕಿ ಸುಮಾರು ಶೇಕಡ ೫೦-೫೨ ರಷ್ಟು ಬೇಸಾಯ ಮಾಡಿಕೊಂಡಿರುವವರು. ಸುಮಾರು ೩೦ ಪ್ರತಿಶತ ವ್ಯವಸಾಯ ಕಾರ್ಮಿಕರು, ಉಳಿದ ಶೇ ೧೮-೧೯ ರಷ್ಟು ಜನ ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಪೌರಾಹಿತ್ಯ ಇತ್ಯಾದಿ ವೃತ್ತಿಗಳನ್ನು ಅವಲಂಬಿಸಿ ಕೊಂಡಿರುವವರು, ಕೃಷಿ ಪ್ರಧಾನ ದೇಶವಾದ್ದರಿಂದ ಭೂಮಿಗೆ ಮಹತ್ವ ಹೆಚ್ಚು. ಈ ಭೂಮಿಯ ಒಡೆಯನಾದ ರೈತನನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ವೃತ್ತಿಗಳು ರೂಪಗೊಂಡವು. ರೈತ ಕುಟುಂಬ ಎಲ್ಲರಿಗೂ ಬೇಕಾದ ಆಹಾರವನ್ನು ಉತ್ಪಾದಿಸಿದರೆ ಈ ರೈತ ಕುಟುಂಬಕ್ಕೆ ಬೇಕಾದ ಸರಕುಗಳನ್ನು, ಸೇವೆಗಳನ್ನು ಉಳಿದ ಕುಟುಂಬಗಳು ಅಂದರೆ ಕೈ ಕಸುಬಿನವರು, ಊಳಿಗದವರು ಇತ್ಯಾದಿ ಸಲ್ಲಿಸುತ್ತಾರೆ. ಉದಾಹರಣೆಗೆ ರೈತರಿಗೆ ಬೇಕಾದ ನೇಗಿಲು, ಕುಂಟ, ಬಂಡಿ ಇತ್ಯಾದಿ ರೈತೋಪಕರಣಗಳನ್ನು ಬಡಗಿ ಪೂರೈಸಿದರೆ ಕುಡುಗೋಲು, ಸಲಿಕೆ ಕುಡ, ಕೊಡ್ಲಿ ಇತ್ಯಾದಿ ಉಪಕರಣಗಳನ್ನು ಕಬ್ಬಿಣದ ವಸ್ತುಗಳನ್ನು ಕಮ್ಮಾರ ಒದಗಿಸುತ್ತಾನೆ. ಚಮ್ಮಾರನು ಮೆಟ್ಟು, ಕುಂಬಾರನು ಅಡಿಗೆಗೆ ಬೇಕಾದ ಮಡಿಕೆಗಳನ್ನು ಹಬ್ಬಹರಿದಿನಗಳಲ್ಲಿ ಹಚ್ಚುವ ಮಣ್ಣಿನ ಹಣತೆಗಳನ್ನು ಮಾಡಿಕೊಡುತ್ತಾನೆ. ಕ್ಷೌರಿಕನು ತಲೆಗೂದಲು ತೆಗೆಯುವ ಸೇವೆ ಮಾಡಿದರೆ, ಊರಿನ ಅಗಸರು ಮಂಗಳ ಅಮಂಗಳ ಸಂದರ್ಭಗಳನ್ನು ಬಟ್ಟೆಗಳನ್ನು ಮಡಿ ಮಾಡಿಕೊಡುತ್ತಾನೆ, ಕೊರವರು ಬುಟ್ಟಿ ಕಸಬರಿಗೆ, ತಟ್ಟಿಗಳನ್ನು ಮಾಡಿಕೊಡುತ್ತಾರೆ. ಹೀಗೆ ಇವರು ಸಲ್ಲಿಸುವ ಸೇವೆಗೆ ಸಂಪ್ರದಾಯದಂತೆ ರೈತ ಕುಟುಂಬದವರು ತಾವು ಬೆಳೆದಿದ್ದರಲ್ಲಿ ಒಂದು ಪಾಲನ್ನು ಸಂಭಾವನೆಯಾಗಿ ಕೊಡುತ್ತಾರೆ. ಇದೇ ಮುಂದೆ ಆಯ ಆಯಿತು ಈ ಆಯ ವನ್ನು ತೆಗೆದು ಕೊಳ್ಳುವವರಿಗೆ ಆಯಗಾರರು ಎಂದು ಕರೆಯುತ್ತಾರೆ.

ಆಯ ಪದ್ಧತಿಯನ್ನು ಪ್ರದೇಶದಿಂದ ಪ್ರದೇಶಕ್ಕೆ ತನ್ನ ಹೆಸರನ್ನು ಬದಲಿಸಿಕೊಳ್ಳುತ್ತದೆ. ಉತ್ತರ ಕರ್ನಾಟಕದ ಕಡೆ ಅದನ್ನು ಬಾರಾ ಬಲೂತೆ ಎಂದು ಕರೆಯುತ್ತಾರೆ. ಮಂಡ್ಯ, ಮೈಸೂರುಗಳ ಕಡೆ ಅಡದೆ ಎಂದು ಹೆಸರಿದೆ. ಆಯಗಾರರಿಗೆ ಅಲ್ಲಿ ಅಡದೆಯವರು ಎಂದು ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲದ ಕಡೆ ಆಯದ ಪ್ರತಿರೂಪಕ್ಕೆ ಎಚ್ಚ ಎನ್ನುತ್ತಾರೆ. ಆಯಗಾರರನನ್ನು 'ಎಚ್ಚಗಾರರು' ಎಂದು ಕರೆಯುವರು. ಬಳ್ಳಾರಿಯ ಕಡೆ ಆಯಗಾರರು ಆಯ್‌ದಾರರು ಎಂದು ಕರೆಯುವುದುಂಟು. ಹೀಗೆ ಹಕ್ಕುದಾರರು, ಬಾಬುದಾರರು, ಗುತ್ತಿನವರು

ಇತ್ಯಾದಿ ಶಬ್ದಗಳಿಂದ ಕರೆಯುವರು.

ಆಯ ಪದ್ಧತಿ 'ಬಲೂತಾ' ಎಂಬ ಹೆಸರಿನಿಂದ ಮಹಾರಾಷ್ಟ್ರದಲ್ಲಿ ಸಾರ್ವತ್ರಿಕವಾಗಿ ಕಂಡು ಬಂದಿದೆ. ಬಲೂತಾ ಎಂದರೆ ಗ್ರಾಮೀಣ ಕೈ ಕಸಬಿನವರಿಗೆ ಹಾಗೂ ಗ್ರಾಮದ ಊಳಿಗದವರಿಗೆ ಕೊಡುವ ಧಾನ್ಯರೂಪದ ಸಂಭಾವನೆ ಅಥವಾ ಪಾಲು ಇಂಥ ಸಂಭಾವನೆ ಪಡೆಯುವುದನ್ನು ಆಲೂತೆದಾರ ಮತ್ತು ಬಲೂತೆದಾರರೆಂದು ಕರೆಯುವುತ್ತಾರೆ. (ಜಾನಪದ ಸಾಹಿತ್ಯ ದರ್ಶನ ೭, ಡಾ. ವೃಷಭೇಂದ್ರ ಸ್ವಾಮಿ, ಪುಟ-೪೫) ಇನ್ನು ದೇಶದ ಇತರ ಭಾಗದಲ್ಲಿ ಗ್ರಾಮದ ಸೇವಕರಿಗೆ ಧಾನ್ಯ ರೂಪದ ಸಂಭಾವನೆ ಕೊಡುವ ಪದ್ಧತಿ ಕಂಡುಬರುತ್ತದೆ. ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬ್, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ಕೇರಳದ ಮಲಬಾರ ಮುಂತಾದ ಭಾಗಗಳಲ್ಲಿ ಸಾಕಷ್ಟು ವ್ಯಾಪಕವಾಗಿ ಇದು ಕಂಡುಬಂದಿದೆ. ಉತ್ತರ ಭಾರತದ ಹಲವು ಕಡೆ ಅದನ್ನು ಜಜಮಾನಿ ಎಂದು ಕರೆಯುತ್ತಾರೆ. ಆಯ ಪಡೆಯುವ ಹಕ್ಕನ್ನು 'ಜಜಮಾನಿಕ್' ಎಂದು, ಆಯದ ಕುಳಗಳಿಗೆ ಜಜಮಾನ್ ಎಂದು ಆಯಗಾರರನ್ನು ಕಾಮೀನ್, ಪರ್ಜಿನ್, ಪರ್ಧಾನ್, ಕಾಮವಾಲ, ಕಾಮ್‌ಕರನೇವಾಲೇ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವುದು ರೂಢಿಯಾಗಿರುವುದುಂಟು.

ಆಯದ ಪ್ರಾಚೀನತೆ

ಗ್ರಾಮೀಣ ಪ್ರದೇಶದಲ್ಲಿ ಈ ಆಯ ಪದ್ಧತಿ ಬಹು ಪ್ರಾಚೀನ ಕಾಲದಿಂದಲೂ ಇದ್ದಿರಬಹುದೆಂದು ನಂಬಲಾಗಿದೆ. ಕುಲಕಸಬಿನವರಿಗೆ ಆಶ್ರಯವಾಗಿದ್ದ ಜೀವನೋಪಾಯಕ್ಕೆ ಕೊಡುಕೊಳ್ಳುವಿಕೆಯು ನಡೆಯುತ್ತ ಬಂದಿತು. ಆ ಕೊಡುಕೊಳ್ಳುವಿಕೆಯ ವೃತ್ತಿಕಾರರಿಗೆ ಆಶ್ರಯವಾಗಿದ್ದ ಕೃಷಿವರ್ಗ ಈ ವೃತ್ತಿ ವರ್ಗವನ್ನು ಅವಲಂಬಿಸಿತ್ತು. ಇವರಿಬ್ಬರ ನಡುವೆ ಸಾಮಾಜಿಕ ಒಪ್ಪಂದ ಮಾಡಿಕೊಂಡಿದ್ದರು. ಆ ಒಪ್ಪಂದಗಳು ಆಯ ಪದ್ಧತಿಯಾಗಿಯೂ ಬೆಳೆಬಿತು. ಆಯದ ಪ್ರಾಚೀನತೆಯನ್ನು ನಾವು ನಿರ್ಧಿಷ್ಟವಾಗಿ ಹೇಳಲು ಸಾಧ್ಯವಿಲ್ಲ ಕೃಷಿ ಹುಟ್ಟು ಮತ್ತು ಬೆಳವಣಿಗೆ ಹಾಗೂ ಕೃಷಿಯನ್ನಾಶ್ರಯಿಸಿದ ಉಪಕರಣಗಳು ಕೃಷಿ ಹುಟ್ಟಿನೊಂದಿಗೆ ಬೆಳೆದುಕೊಂಡು ಬಂದಿರಬಹುದು. ಒಂದನ್ನು ಬಿಟ್ಟು ಒಂದು ಇರಲಾರದು, ಹಣದ ಚಲಾವಣೆ ಇಲ್ಲದ ಸಮಯದಲ್ಲಿ ರೈತರು ಬೆಳೆದಿದ್ದನ್ನು ವೃತ್ತಿಕಾರರಿಗೆ ವರ್ಷಕ್ಕೆ ಇಂತಿಷ್ಟು ಧಾನ್ಯದ ರೂಪದಲ್ಲಿ ಕೊಡುತ್ತಿದ್ದರು ಅದೇ ಮುಂದೆ ಆಯವಾಗಿ, ಆಯಗಾರರಾಗಿ ಬೆಳೆದುಕೊಂಡು ಬಂದಿರಬಹುದು.

ಪಶ್ಚಿಮ ಭಾರತದ ಗ್ರಾಮ ಸಮುದಾಯಗಳ ಇತಿಹಾಸವನ್ನು ಸಮೀಕ್ಷಿಸಿದ ಡಾ. ಎ.ಎಸ್. ಅಲ್ತೇಕರ್ ರವರು 'ಬಲೂತಾ ಪದ್ಧತಿ' ಆರ್ಯರ ಕಾಲಕ್ಕೆ ಹುಟ್ಟಿರಬೇಕೆಂದೂ ಅದು ಅವರಿಂದಲೇ ಕ್ರಮೇಣ ದಕ್ಷಿಣ ಭಾರತದ ಕಡೆ ಹಬ್ಬಿರಬೇಕೆಂದು ಬರೆಯುತ್ತಾರೆ. (ಜಾನಪದ ಸಾಹಿತ್ಯ ದರ್ಶನ-೭, ಡಾ. ವೃಷಭೇಂದ್ರಸ್ವಾಮಿ ಪುಟ-೪೫) ಆದರೆ ಈ ಮಾತನ್ನು ರಾಧಕಮಲ ಮುಖರ್ಜಿಯವರು ಇದಕ್ಕೆ ವಿರುದ್ಧವಾಗಿ ತಮ್ಮ ನಿಲುವನ್ನು ಪ್ರಸ್ತಾಪಿಸುತ್ತಾರೆ. 'ಪೂರ್ವದ ಪ್ರಜಾಸತ್ತೆಗಳು' ಎಂಬ ಗ್ರಂಥದಲ್ಲಿ ಇವರು ಜಜಮಾನಿ ಪದ್ಧತಿಯು ಅಕ್ಕಿ ಬೆಳೆಯುವ ದಕ್ಷಿಣ ದ್ರಾವಿಡ ಜನಾಂಗಗಳಲ್ಲಿ ಮೊದಲಿಗೆ ಬಳಕೆಗೆ ಬಂದಿರಬೇಕೆಂದು ಅದು ನಿಧಾನವಾಗಿ ಉತ್ತರಕ್ಕೆ ಹರಡಿತೆಂದು ಅಭಿಪ್ರಾಯ ಪಡುತ್ತಾರೆ.

ಕ್ರಿ.ಶ. ೧೧ ನೇ ಶತಮಾನದಿಂದ ಈಚೆಗೆ ಆಯಗಾರ ಬಗ್ಗೆ ಹಲವು ಶಾಸನಗಳು ಸಿಕ್ಕಿವೆ. ಅವುಗಳಲ್ಲಿ "೧೨ ಆಯಗಾರರನ್ನು ಒಟ್ಟಾಗಿ ತಿಳಿಸುವ ಶಾಸನಗಳಲ್ಲಿ ಗಾವುಂಡ, ಶಾನುಭೋಗ, ತಳಾರ, ಅಂಬಗ, ಬಾರಿಕ, ತೋಟಿಗ, ಕಲ್ಲುಕುಟಿಗ, ಕಮ್ಮಾರ, ಅಕ್ಕಸಾಲಿಗ, ಬಡಿಗಿ, ಕ್ಷೌರಿಕ ಮತ್ತು ಜ್ಯೋತಿಷ್ಯಿಗಳ ಹೆಸರಿವೆ". ಎಂದು ಡಾ. ಜಿ.ಪಿ. ದೀಕ್ಷಿತ್ ರವರು ತಿಳಿಸುತ್ತಾರೆ. ಇವರ ಅಭಿಪ್ರಾಯಗಳು ಈಗಲೂ ಕೂಡ ಈ ವೃತ್ತಿಕಾರರು ಆಯಪದ್ಧತಿಯಿಂದ ಜೀವಿಸುವುದನ್ನು ಕಾಣಬಹುದಾಗಿದೆ. ಆದರೆ ಬಾರಿಕ, ಕಮ್ಮಾರ, ಬಡಿಗ, ಕ್ಷೌರಿಕರುಗಳು ಹೆಚ್ಚಾಗಿ ಈ ಆಯವನ್ನು ಪಡೆಯುವವರಲ್ಲಿ

ಮೊವಲಿಗರಾಗಿದ್ದಾರೆ. ಇವರೆಲ್ಲರೂ ವರ್ಷಕ್ಕೆ ಇಂತಿಷ್ಟು ದವಸ ಧಾನ್ಯವನ್ನು ಪಡೆಯುತ್ತಿದ್ದರು ಎಂಬ ಅಂಶಗಳು ತಿಳಿದುಬರುತ್ತವೆ.

"ಪ್ರಾಚೀನ ಕಾಲದಲ್ಲಿಯೂ ಆಯಗಾರರ ಪದ್ಧತಿ ಇತ್ತೆಂದು ಮನುಸ್ಮೃತಿಯಿಂದ, ವಿಷ್ಣು ಪುರಾಣದಿಂದ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದು ಬರುವುದಾಗಿ ಡಾ. ಎ.ಎಸ್. ಅಲ್ತೇಕರ್ ರವರು ಅಭಿಪ್ರಾಯ ಪಡುತ್ತಾರೆ" (A.S. Althekar - A Hsitory of Village Communication in western india, page-93-94)

ಧಾರವಾಡ ಜಿಲ್ಲೆಯ ಹೊಸೂರು ಗ್ರಾಮದ ಕ್ರಿ.ಶ. ೧೧೮೬ರ ಶಿಲಾಶಾಸನದಲ್ಲಿ ಬಡಗಿಯರನ್ನು ಕುರಿತು ಹೇಳಿಕೆ ಈ ರೀತಿ ಇದೆ."........ಬಡಗಿ ಕಲೋಜ ಮೊರಕೇಶ್ವರ ದೇವರ ತೋಟಕಯ್ಯಿ ಮನೆಯಗೆಯ್ದು ಕೂಲಿಂಬನೇತುಂಟನಿತುವಂ ದೇವರ ನೈವೇದ್ಯಕ್ಕೊವುನ ಅಕ್ಕಿಯು ನಡಿವಂತಾಗಿ ತನ್ನ ಪುತ್ರದಾಯಿಯಾಗಿ...........ಕೊಟ್ಟಯಲ್ಲಿ ಬಡಗಿತನಕ್ಕಾರು ನಿಂದವರ ಹಿಟ್ಟು ಕಾರು ಬಡಗಿ ಕಲೋಜ ಜಿಟ್ಟ ಧರ್ಮವಂ ಏಳು ನೂರ್ವರುಂ ಪ್ರಜಾ ಮಹಾಬಳ ಗಾವುಂಡನಂ ಪ್ರತಿ ಪಾಲಿಸುವನು" (South indian Inscriptions XV No-69) .ಹಾಗೆಯೇ ಹೊಯ್ಸಳ ಬಲ್ಲಾಳರಾಯನ ಕಾಲದಲ್ಲಿ ಕ್ರಿ.ಶ. ೧೦೦೩ ರ ಕೊಲ್ಲಾಪುರದ ತಾಮ್ರ ಶಾಸನದಲ್ಲಿ "..........ಆ ಊರಿಂಗೆ ಹಿಟ್ಟಿನ ಸಲವಾಗಿ ಮಾರಗಾಯಕ ಆತಂಗೆ೬........ಹಿಟ್ಟುಕಾರೆ ಬಡಗಿ ಹಿಲೇಜಗೆ ಮತ್ತರು ೪. ಹಿಟ್ಟಿನ ಕಂಮ್ಮಾರ ದೇವೋಜಂಗೆ ಮತ್ತರ ೪, ಹಿಟ್ಟಿನ ಅಕ್ಕಸಾಲೆ ಪಾರಿಸೋಜಂಗ ಮತ್ತರು ೪......" ಎಂಬ ಭೂಮಿ ಪಡೆದ ವಿವರಗಳು ದೊರಕುತ್ತವೆ. ಈ ಶಾಸನದಲ್ಲಿ ಬಡಗಿ ಮತ್ತು ಕಮ್ಮಾರರು ಆಯಗಾರರ ಪಟ್ಟಿಗೆ ಸೇರಿರುವ ಮತ್ತು ಭೂಮಿಯನ್ನು ಪಡೆದ ಅಂಶಗಳು ತಿಳಿದು ಬರುತ್ತವೆ. ಕ್ರಿ.ಶ. ೧೧೩೫ ರ ಧಾರವಾಡ ಜಿಲ್ಲೆಯ ಚಿಕ್ಕ ಹಂದಿಗೋಳ ಗ್ರಾಮದ ಶಿಲಾ ಶಾಸನವನ್ನು ಬರೆಸಿದ್ದಾರೆ. ಹಿಟ್ಟಿನ ಸೇನಬೋದ, ಬಡಗಿ, ಕಮ್ಮಾರ, ಅಕ್ಕಸಾಲೆ. ಸೇನಬೋವ, ತಲವಾರಿ ಮುಂತಾದವರಿಗೆ ಹಿಟ್ಟಿನ ಹಾಗೂ 'ಹಿಟ್ಟಕಾರ' ಎಂಬ ಹಿಟ್ಟು ಪದ ವಿಶೇಷಣ ರೂಪಗಳನ್ನು ಬಳಸಲಾಗುತ್ತಿದ್ದಿತೆಂದು ತಿಳಿದು ಬರುತ್ತದೆ (ಜಾನಪದ ಸಾಹಿತ್ಯ ದರ್ಶನ-೭., ಡಾ. ವೃಷಭೇಂದ್ರ ಸ್ವಾಮಿ ಪುಟ-೧೫೭)

"ಮರಾಠ ಕಾಲದ ಮಹಾರಾಷ್ಟ್ರ ರೂಢಿಯಲ್ಲಿದ್ದ 'ಬಾರಬಲೂತ' ಎಂಬ ಪದ್ಧತಿಗನುಗುಣವಾಗಿ ಹಳ್ಳಿಯ ಶ್ರಮಜೀವಿಗಳ ಹಾಗೂ ಆಡಳಿತಗಾರರ ಹನ್ನೆರಡು ವರ್ಗಗಳವರು ಜನತೆಯ ಅಗತ್ಯಗಳನ್ನು ಪೂರೈಸಿಕೊಟ್ಟು ರಾಶಿಯ ಸಮಯದಲ್ಲಿ ತಮ್ಮ ಪಾಲಿನ ಧಾನ್ಯವನ್ನು ಪಡೆದು ತನ್ಮೂಲಕ ಉಪಜೀವನ ಸಾಗಿಸುತ್ತಿದ್ದರು" (ಜಾನಪದ ಸಾಹಿತ್ಯ ದರ್ಶನ ೭, ವೃಷಭೇಂದ್ರಸ್ವಾಮಿ ಪುಟ-೧೫೭) ಎಂದು ತಿಳಿದು ಬರುತ್ತದೆ. ಈ ಹನ್ನೆರಡು ಆಯಗಾರರಲ್ಲಿ ಈ ಪಾಂಚಾಳ ಎಂದರೆ ಬಡಗಿ, ಕಮ್ಮಾರ, ಅಕ್ಕಸಾಲಿಗರು ಮಾತ್ರ ಕಂಡುಬರುತ್ತಾರೆ. ಆದರೆ ಕಂಚುಗಾರ ಹಾಗೂ ಶಿಲ್ಪಗಾರರ ಹೆಸರು ಈ ಆಯಗಾರರ ಪಟ್ಟಿಯಲ್ಲಿ ಕಂಡು ಬರುವುದಿಲ್ಲ. ಆದರೆ ಈ ಶಿಲ್ಪಿಗಾರರಿಗೆ ಪ್ರತ್ಯೇಕವಾಗಿ ಹೊಲಗದ್ದೆ ಕೊಟ್ಟ ನಿದರ್ಶನಗಳಿವೆ. ಅವು ಆಯಗಾರ ಸಾಲಿನಲ್ಲಿ ಸೇರಿರುವುದು ಬಹುತೇಕವಾಗಿ ಕಂಡುಬರುವುದಿಲ್ಲ. ವಿಜಯನಗರದ ಅರಸರ ಕಾಲದಲ್ಲಿ ರೂಢಿಯಲ್ಲಿದ್ದ ಆಯಗಾರರ ಪದ್ಧತಿಯೂ ಮೇಲಿನ ಸ್ವರೂಪದ್ದಾಗಿತ್ತು ಎಂದು ಬಿ. ಎಸ್. ವೆಂಕಟರಮಣಯ್ಯನವರು ಅಭಿಪ್ರಾಯ ಪಡುತ್ತಾರೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಮುಂಚೆಯೂ ಕರ್ನಾಟಕದಲ್ಲಿ ಕುಶಲ ಕೆಲಸಗಾರರಿಗೆ ಅವರ ಸೇವೆಗೆ ಪ್ರತಿಯಾಗಿ ಧಾನ್ಯ ರೂಪದಲ್ಲಿ ಕೂಲಿಯನ್ನು ಕೊಡಲಾಗುತ್ತಿದ್ದ ಸಂಗತಿಗಳು ಶಿಲಾ ಶಾಸನಗಳಿಂದ ತಿಳಿದು ಬರುತ್ತದೆ. ಮೇಲೆ ಹೇಳಿದ ಹೊಸೂರಿನ ಶಿಲಾಶಾಸನದಲ್ಲಿ 'ಹಿಟ್ಟುಕಾರ ಬಡಿಗ, ಕಮ್ಮಾರ, ಅಕ್ಕಸಾಲಿಗ, ಕ್ಷೌರಿಕ, ಕಲೋಜುಮೊರಕೇಶ್ವರ ದೇವರ ತೋಟ,ಕಂಬಿ ಮನೆಯಗೆಯ್ದ ಕೂಲಿಯನಿತುಂಟ ನಿತುಮಂ ದೇವರ ನಿವೆದ್ಯಕೊಯ್ಯನ ಅಕ್ಕಿಯ ನೆಡವಂತಾಗಿ.......ಕೊಟ್ಟ' ಎಂದು ಉಲ್ಲೇಖವಾಗಿದೆ.

ಬಕ್ಕುಂದಿಯ ಶಿಲಾಶಾಸನದಲ್ಲಿ ಬೆಳ್ಳಿಗಮ್ಮಟದ ವ್ಯಕ್ತಿಯೊರ್ವನು ಹಣದ ರೂಪದಲ್ಲಿಯೇ ಕಮ್ಮಾರ ಮತ್ತು ಬಡಗಿಯರಿಗೆ ಧಾನ್ಯರೂಪದಲ್ಲಿ ಧಾನವನ್ನು ಕೊಟ್ಟರೆಂದು ಹೇಳಿದುದು ಗಮನಾರ್ಹವಾಗಿದೆ. (ಜಾನಪದ ಸಾಹಿತ್ಯ

ದರ್ಶನ೭, ಡಾ. ವೃಷಭೇಂದ್ರಸ್ವಾಮಿ ಪುಟ-೪೭) ಮೇಲಿನವುಗಳೆಲ್ಲವನ್ನು ಗಮನಿಸುವುದಾದರೆ ಆಯಗಾರಿಕೆಯ ಪ್ರಾಚೀನತೆ ಮತ್ತು ಆಯಗಾರರು ಯಾರ್‍ಯಾರು ಹಾಗೂ ಆಯಗಾರಿಕೆಯಿಂದ ಪಡೆಯುವ ವಿಧಾನಗಳು ತಿಳಿದು ಬರುತ್ತದೆ. ಈ ಆಯದ ಪ್ರಾಚೀನತೆಯನ್ನು ನಾವು ಇಲ್ಲಿಂದಲೇ ಪ್ರಾರಂಭವಾಯಿತೆಂದು ನಿರ್ಧಿಷ್ಟವಾಗಿ ಹೇಳಲು ಸಾಧ್ಯವಿಲ್ಲವಾದರೂ ಕೃಷಿ ಮತ್ತು ಕೃಷೋಪಕರಣಗಳು ಎಂದು ಜನಿಸಿದವೋ ಅಂದಿನಿಂದ ಈ ಆಯಗಾರಿಕೆ ಒಂದು ಸಾಮಾಜಿಕ ಒಪ್ಪಂದವಾಗಿ ಕಂಡುಬರುತ್ತದೆ.

ಇತಿಹಾಸದ ದಾಖಲೆಗಿಂತ ಮುಖ್ಯವಾಗಿ ಜನಪದರು ರೂಢಿಸಿಕೊಂಡು ಬಂದ ಪದ್ಧತಿಯನ್ನು ಅವಲೋಕಿಸುವುದು ಬಹುಮುಖ್ಯವಾಗಿದೆ. ದಾಖಲೆಗಳಲ್ಲಿ ವೃತ್ತಿಕಾರರು ರಾಜರ ಆಶ್ರಯ ಪಡೆದು ಅವಕಾಶದ ಆರತ್ತಿನ ಮೇಲೆ ಕೆಲಸ ಮಾಡಿ ತದನಂತರ ಯಾವುದೇ ರೂಪದಲ್ಲಿ ಸಂಭಾವನೆ ಪಡೆದಿರುವುದನ್ನು ಕಾಣಬಹುದು. ಆದರೆ ಯಾವ ಶಾಸನಗಳಲ್ಲಿಯೂ ಕೃಷಿಕರು ಮತ್ತು ವೃತ್ತಿಕಾರರ ನಡುವಿನ ಒಪ್ಪಂದ ಅಥವಾ ಕೊಡುಕೊಳ್ಳುವಿಕೆ ದಾಖಲಿಸಿರುವುದು ಅಪರೂಪ. ಗ್ರಾಮೀಣ ಪ್ರದೇಶದಲ್ಲಿ ಪಾಂಚಾಳರು ಆಯಗಾರಿಕೆಯಲ್ಲಿ ಪಾಲುದಾರರಾಗಿ ಕಂಡು ಬರುತ್ತಾರೆ. ಬಡಗಿ, ಕಮ್ಮಾರರೇ ಇಂದು ಆಯಗಾರಿಕೆಯನ್ನು (ವಿಶೇಷವಾಗಿ ಪಾಂಚಾಳರಲ್ಲಿ) ಪಡೆಯುತ್ತಾರೆ. ಕೃಷಿಕರು ಬಡಗಟಗಿ, ಕುಲುಮೆಗೆ ಬಂದು ತಮ್ಮ ಅವಶ್ಯಕತೆಗನುಗುಣವಾಗಿ ವ್ಯವಸಾಯದ ಉಪಕರಣಗಳನ್ನು ಮಾಡಿಸಿಕೊಂಡು ಹೋಗುತ್ತಾರೆ. ಒಂದು ಕೂರಿಗೆ, ಒಂದು ಕುಂಟೆಯನ್ನು ಆಯಿಸಿಕೊಂಡರೆ ನಾಲ್ಕುಗಿದ್ನ ಜೋಳವನ್ನು ಪಡೆಯುತ್ತಿದ್ದರು. ಇದನ್ನು ಉತ್ತರ ಕರ್ನಾಟಕದ 'ಪಡಿ' ಎಂಬ ಅರ್ಥವನ್ನು ಕೇಳಬರುತ್ತದೆ. ಒಂದೊಂದು ಉಪಕರಣಗಳಿಗೂ ಇಂತಿಷ್ಟು ಧವಸಧಾನ್ಯ ಪಡೆಯುವ ಪದ್ಧತಿ ಇಂದಿಗೂ ಹಳ್ಳಿ ಪ್ರದೇಶಗಳಲ್ಲಿ ಕಾಣಬಹುದು.ಆದರೆ ಇಲ್ಲಿ ಆಯಪದ್ಧತಿಗನುಗುಣವಾಗಿ ವರ್ಷಕ್ಕೆ ೬೦ ಸೇರು ಜೋಳವನ್ನು ಮತ್ತು ಒಂದರೆಡು ಸೇರು ಇತರ ಕಾಳನ್ನು ಪಡೆಯುತ್ತಾ ಜೀವನ ಮಾಡುತ್ತಾರೆ ಈ ಆಯದಿಂದ ಸಮಾಜದಲ್ಲಿ ಒಬ್ಬರಿಗೊಬ್ಬರ ಸಹಾಕಾರದಿಂದ ಕಂಡು ಕೂಡಿ ಬದುಕುವುದನ್ನು ಕಾಣಬಹುದು.

ಪಾಂಚಾಳ ಸಮುದಾಯಗಳಲ್ಲಿ ಹೆಚ್ಚಾಗಿ ಬಡಗಿ ಮತ್ತು ಕಮ್ಮರರು ಹೆಚ್ಚು ಆಯಗಾರಾಗಿ ಕಂಡು ಬರುತ್ತಾರೆ. ಇವರು ವೃತ್ತಿಯನ್ನು ಜೀವನೋಪಾಯಕ್ಕಾಗಿ ಮುಂದುರಿಸಿಕೊಂಡು ಬಂದಿದ್ದಾರೆ. ಇವರ ಕೆಲಸದ ಪ್ರಮಾಣವು ಕಮ್ಮಾರನಿಗಿಂತ ಕಾಷ್ಟ ಕೆಲಸಕ್ಕೆ ಹೆಚ್ಚು ಶ್ರಮದಾಯಕವಾಗಿದೆ. ಒಂದು ದಿನ ಎರಡು ಕುಂಟೆ ಹಾಯಿಸಬಹುದು ಕಮ್ಮಾರ ಸಣ್ಣ ಪುಟ್ಟ ಕುಡುಗೋಲು, ಕೊಡ್ಲಿ, ಕುಡ ಅಣಿಯಬಹುದು ಆಯಾ ಕೆಲಸದ ಪ್ರಮಾಣದ ಮೇಲೆ ಕೃಷಿಕರು ಅಷ್ಟೋ ಇಷ್ಟೊ ದವಸ ಧಾನ್ಯವನ್ನು ನೀಡುತ್ತಿದ್ದರು ಒಂದು ಕುಂಟೆ ಹಾಯಿಸಿದರೆ ಒಂದು ಪಡಿ, ಗಿದ್ನ (ನಾಲ್ಕ ಸೇರು ಒಂದು ಪಡಿ, ಎಂದು ಉತ್ತರ ಕರ್ನಾಟಕದ ಕಡಗೆ ಅದಕ್ಕೆ ಪರ್ಯಾಯವಾಗಿ ಬಳ್ಳಾರಿಯ ಕಡೆ ಗಿದ್ನ ಎಂದು ಕರೆಯತ್ತಾರೆ)ಜೋಳವನ್ನು ಸಂಭಾವನೆಯಾಗಿ ಪಡೆಯುತ್ತಾರೆ ಪ್ರತಿದಿನವು ಹೀಗೆ ಬಂದರೆ ಅವರ ಜೀವನ ಮಟ್ಟ ಸುಧಾರಿಸುಬಹುದು ಆದರೆ ಒಂದುಸಲ ಮಾಡಿದ ಉಪಕರಣಗಳು ಮೂರುನಾಲ್ಕು ವರ್ಷಗಳು ತಾಳಿಕೆ ಬರುವಾಗ ಕೆಲಸದ ಪ್ರಮಾಣ ಕಡಿಮೆಯಾಗುತ್ತದೆ. ತಂದರೂ 'ಕಡ್ಡು ಬಳ್ಡು' ನೋಡಿ ಸೆಕ್ಕಿ ಕಟ್ಟಿಸಿಕೊಂಡು ಹೋಗುತ್ತಾರೆ. ಹೀಗಿರುವಾಗ ಕೆಲಸದ ಪ್ರಮಾಣ ಕಡಿಮೆಯಾಗಿ ಬರುವ ಆದಾಯವೂ ಕಡಿಮೆಯಾಗಿರುತ್ತದೆ. ಆಯಗಾರರಲ್ಲಿ ಒಂದು ವರ್ಷ ಪೂರ್ತಿಯಾಗಿ ಕೃಷಿಉಪಕರಣಗಳನ್ನು ಮಾಡಿದರೆ ಮಾತ್ರ ಅದಕ್ಕೆ ಆಯಗಾರರೆಂದು ಕರೆಯುತ್ತಾರೆ. ಒಂದು ವರ್ಷಕ್ಕೆ ಕೆಲವು ಕಡೆ ೬೦ ಸೇರು ಅಥಾವ ೯೦ ಸೇರು ಜೋಳನ್ನು ಹಾಗೂ ಇನ್ನಿತರ ಧಾನ್ಯಗಳನ್ನು ಕೊಡುತ್ತಾರೆ ಮಳೆ ಬೆಳೆ ಸರಿಯಾಗಿ ಆದರೆ ಅವರ ಜೀವನೋಪಾಯಕ್ಕೆ ಕೊರತೆ ಇರುವುದಿಲ್ಲ ಪ್ರಕೃತಿ ಮುಗಿಸಿಕೊಂಡರೆ ಅಲೆಮಾರಿಯಾಗಿ ನಗರದತ್ತ ಮುಖಮಾಡುವುದು ಕಂಡುಬರುತ್ತದೆ.

ವರ್ತಮಾನ ಕಾಲದಲ್ಲಿ ಇವರ ಪರಿಸ್ಥಿತಿ ತುಂಬಾ ಕಷ್ಟದಿಂದ ಕೂಡಿರುತ್ತದೆ. ವಾರ್ಷಿಕ ಆದಾಯ ಒಂದು ಗ್ರಾಮದಲ್ಲಿ ಒಂದು ಕುಟುಂಬಕ್ಕೆ ಮೂರು ನಾಲ್ಕು ಆಯ ಗಳಿದ್ದರೆ ವರ್ಷಕ್ಕೆ ೧೫೦ಸೇರು ೨೦೦ ಸೇರು

ಜೋಳಬರಬಹುದು ಹಿಂದೆ ಪೂರ್ತಿ ಆಯುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾಗ ಈ ಪಾಂಚಾಳರು ಇನ್ನೊಬ್ಬರಿಗೆ ಪಾತ ಕೊಡುತ್ತಿದ್ದರು ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಸಣ್ಣ ಪುಟ್ಟಕೆಲಸಗಳು, ಕಾವು ಹಾಸುವುದು, ಕುಡುಗೋಲು, ಅರಿಯುವುದು ಕೊಡ್ಲಿ ಅಣಿಯುವುದು ಇತ್ಯಾದಿ ಆಯದಲ್ಲದವರ ಕೆಲಸಗಳು ಲೆಕ್ಕಕ್ಕೆ ಬರುವುದಿಲ್ಲ. ಜೆಕ್ಕೊಡಿಯ ಕಮ್ಮಾರ ಕಾಳಪ್ಪ ಎಂಬುವರು ಬಡಗಿ ಕೆಲಸ ಮಾಡುತ್ತಿದ್ದ. ರೈತರು ಆತನತ್ತಿರವೇ ಹೆಚ್ಚು ಕೆಲಸ ಮಾಡಿಸುತ್ತಿದ್ದರು. ಆತನಿಗೆ ಮೊದಲಿಗೆ ರೈತರು ಚಹಾ ದಂಗಡಿಗೆ ಕರೆದುಕೊಂಡು ಹೋಗಿ ಒಂದು ಚಹಾಕುಡಿಸಿದರೆ ಮುಂದಿನ ಕೆಲಸ ಮಾಡಿಕೊಳ್ಳುತ್ತಿದ್ದನು ಆತ ಪಡೆಯುತ್ತಿದ್ದ ಸಂಭಾವನೆಯಾಗಿತ್ತು. ಅಂತವರು ಈ ಪಾಂಚಾಳರಲ್ಲಿ ಕಂಡುಬರುತ್ತಾರೆ ಸಮಾಜದಲ್ಲಿ ಒಬ್ಬರಿಗೊಬ್ಬರೂ ಸಹಕರಿಸುತ್ತಾ ಬಂದಿರುವುದು ಕಂಡುಬರುತ್ತದೆ. ಹಣವೇ ಮುಖ್ಯವಲ್ಲ ಎಂಬ ಅಂಶವನ್ನು ಗಮನಿಸಬಹುದು. ವರ್ಷಕ್ಕೆ ಎರಡು ಚೀಲ ಜೋಳ ಬಂದರೆ ಅವು ವರ್ಷಪೂರ್ತಿ ಸಾಕಾಗಲಾರವು ಅದಕ್ಕೆ ಇಂದು ಹೆಚ್ಚು ಕೃಷಿ ಉಪಕರಣಗಳಿಗಿಂತ ಗೃಹೋಪಕರಣದ ಕೆಲಸಹಿಡಿದರೆ ಅವನ ಖರ್ಚಿಗಿಂತ ಆದಾಯ ಹೆಚ್ಚುತ್ತದೆ ಇಲ್ಲವಾದರೆ ಅದಾಯಕ್ಕಿಂತ ನಷ್ಟವೇ ಹೆಚ್ಚು ಎಂದು ಎಮ್ಮಿಗನೂರಿನ ಮಾನಪ್ಪನವರ ಅಸಹಾಕತೆಯಿಂದ ಹೇಳುತ್ತಾರೆ.

ಈಗಿನ 'ಆಯ' ದಿಂದ ವೃತ್ತಿ ಕಾರರಿಗೆ ಅಥಾವ ಆಯಗಾರರಿಗೆ ಲಾಭ ಇಲ್ಲ, ಏಕೆಂದರೆ ಹಿಂದೆ ಎಷ್ಟು ಕೊಡುತ್ತಿದ್ದರೂ ಅಷ್ಟೇ ಸಂಭಾವನೆ ಅಥಾವಾ ಧಾನ್ಯವನ್ನು ಈಗಲೂ ಕೊಡುತ್ತಾರೆ. ಆದರೂ ಆಯುಗಾರರು ಮುಂದುರಿಸಿಕೊಂಡುಬಂದಿದ್ದಾರೆ. ಕಾರಣ ನಮ್ಮ ಹಿರಿಯರು ಹಿಂದಿನಿಂದಿಲೂ ನೆಡಸಿಕೊಂಡು ಬಂದಿದ್ದು ಸಮಾಜದಲ್ಲಿ ತಮ್ಮನ್ನು ಅನನ್ಯ ಸಂಬಂಧಗಳು ಮತ್ತು ಅದನ್ನು ಬಿಡಬಾರದು ಎಂಬ ನಂಬಿಕೆಯಿಂದ.ಆ ಕಾಲದಲ್ಲಿ ಒಂದು ಹೊಸ ದಿಂಡು ಕತ್ತಿ ಹಾಸಿ ಕೊಡುವುದಕ್ಕೆ ೮ ಮೌನ, ಗಿದ್ನ, ಪಡಿ ಜೋಳವನ್ನು ಆಯವಾಗಿ ರೈತರು ಕೊಡುತ್ತಿದ್ದರು. ಬಂಡಿ, ಮಡಿಗಿ ಇತ್ಯಾದಿ ಕೆಲಸಗಳಿಗೆ ಕೂಲಿ ಕೊಡುತ್ತಿದ್ದರು. ಬಂಡಿ ತಯಾರಿಸಲಿಕ್ಕ ೧೦೦೦ ರೂ ಇತ್ತು. ಇಂದು೩೫೦೦ ರೂ ಆಗಿದೆ ನೇಗಿಲು ಮಾಡುವುದಕ್ಕೆ ೩೫ ರೂ ಹೀಗಿ ಈ ವೃತ್ತಿಕಾರರು ತಮ್ಮ ಕೆಲಸಕ್ಕೆ ಪ್ರತಿಯಾಗಿ ಇಂತಿಷ್ಟು ಜೋಳ ಅಥಾವಾ ಹಣ ತೆಗೆದು ಕೊಳ್ಳುವ ಪದ್ದತಿಯನ್ನು ಮುಂದುರಿಸಿಕೊಂಡು ಬಂದಿದ್ದಾರೆ ಮತ್ತು ಇತರ ಎಲ್ಲಾ ಪದಾರ್ಥಗಳು ಪುಗಸಟ್ಟೆಯಾಗಿ ಕೇಳಿದ ತಕ್ಷಣ ಕೊಡುತ್ತಿದ್ದರು ಬೆಲೆಯೂ ಕಡಿಮೆ ಇತ್ತು. ಇಂದು ಅದೇ ಮಾಪನ ಬೆಲೆ ಹೆಚ್ಚುತ್ತಾ ಗಗನಕ್ಕೆರುವ ಸಂದರ್ಭದಲ್ಲಿ ಇವರ ಜೀವನ ಕಷ್ಟಕರವಾಗಿದೆ ಅದಕ್ಕೆ ಪರ್ಯಾಯವಾಗಿ ಈ ಪಾಂಚಾಳರು ಸಮಯ ಸಂದರ್ಭ ಪರಿಸ್ಥಿತಿ ಮತ್ತು ಬೇಡಿಕೆಯನುಗುಣವಾಗಿ ತಮ್ಮನ್ನೇ ತಾವೇ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.

ಕೃಷೋಪಕರಣಗಳಿಂದ ರೈತರನ್ನು ಆಶ್ರಯಿಸಿ ಬದುಕುವ ಒಬ್ಬ ಬಡಗಿಗೆ ಕೊಡುವ ಧಾನ್ಯಗಳಿಂದಲೇ ನೆಡೆಯುತ್ತಿತ್ತು. ವರ್ಷಕ್ಕೆ ಒಬ್ಬ ರೈತನಿಂದ ಪಡೆಯವ ವಿವರಗಳು ಈ ಕೆಳಗಿನಂತಿವೆ. ಒಂದು ವರ್ಷದ ಅವಧಿಯಲ್ಲಿ ಉಪಕರಣವನ್ನು ತಯಾರಿಸಿ ಕೊಟ್ಟರೆ ವರ್ಷಕ್ಕೆ ೬೦ ಸೇರು ಜೋಳ ವನ್ನು ಪಡೆಯವ ಪದ್ದತಿ ಇತ್ತು ಮತ್ತು ಬಿಡಿಬಿಡಿ ಯಾದ ಉಪಕರಣಗಳಿಗೆ ಪ್ರತ್ಯೇಕವಾದ ಸಂಭಾವನೆ ಪಡೆಯುವ ವಿವರಗಳು ಇಂತಿವೆ.

ಒಂದು ಕೂರಿಗಿ ದಿಂಡಿಗೆ	–	೮ ಪಡಿ,
ಕುಂಟಿ ದೀಡಿಗೆ	–	೪ ಪಡಿ,
ಎಡೆಕುಂಟಿ	–	೧ ಪಡಿ,
ರಂಟಿಗೆ	–	೨ ಪಡಿ,

ಈ ರೀತಿಯಾಗಿ ಇಂತಹ ಉಪಕರಣಗಳಿಗೆ ಇಂತಿಷ್ಟು ಎಂದು ನಿಗದಿಯಂತೆ ಪಡೆಯುತ್ತಿದ್ದರು. ಇತರ ಸಣ್ಣ ಪುಟ್ಟ ಕೆಲಸಗಳು ಲೆಕ್ಕಕ್ಕೆ ಬರುತ್ತಿರಲಿಲ್ಲ ಇದು ಬಡಗಿಯು ಪಡೆಯುವ ಸಂಭಾವನೆಯಾಗಿದೆ [illegible]

ಕಮ್ಮಾರಿಕೆ ಕೆಲಸ ಮಾಡಿ ಆಯಗಾರನೆನಿಸಿಕೊಂಡಿದ್ದಾನೆ. ಈ ಎರಡು ಕಸಬಿನವರು ಹೆಚ್ಚು ಆಯಗಾರರ ಪಟ್ಟಿಯಲ್ಲಿ ಬಂದರೂ ಬಡಗಿ ಮತ್ತು ಕಮ್ಮಾರರಷ್ಟು ಉಳಿದವರು ಪ್ರಭಾವಶಾಲಿ ಪಾತ್ರವಹಿಸುವ ಹಾಗೆ ಕಂಡು ಬರುವುದಿಲ್ಲ ಆದರೆ ರಾಜಶ್ರಯದಲ್ಲಿ ಇವರು ಪಾತ್ರ ಪ್ರಮುಖ ವಾಗಿರಬಹುದು ಸಮಾಜದಲ್ಲಿ ಕೃಷಿಕಬಂಧುಗಳೊಂದಿಗೆ ಇವರ ಒಡನಾಟ ಎಲ್ಲಿಯು ಕಂಡು ಬರುವುದಿಲ್ಲ ಹಾಗೂ ಈ ಪಾಂಚಾಳರಲ್ಲಿ ಆಯಗಾರರಾಗಿ ಇಂದಿಗೂ ಕಾಣಸಿಗುವುದು ಬಡಗಿ ಮತ್ತು ಕಮ್ಮಾರರು ಮಾತ್ರ.

ಹೀಗೆ ಪ್ರತಿಯೊಂದು ಉಪಕರಣಗಳಿಗೆ ನಿಗದಿತ ಬೆಲೆ ಇದ್ದರೂ ಸಾಮಾಜಿಕ ಸಂಬಂಧದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಸ್ವಲ್ಪ ಹೆಚ್ಚು ಕಡಿಮೆ ಕೊಟ್ಟರೂ ನಡೆಯುತ್ತದೆ. ಇಷ್ಟೆ ಕೊಡಬೇಕೆಂಬ ಹಟ ಇರುವುದಿಲ್ಲ, ಹಣ ಇಲ್ಲದಿದ್ದರೂ ಅವರ ಮನೆಯಲ್ಲಿನ ಇದ್ದಿಲು ತಂದರೆ ಉಚಿತವಾಗಿ ತಯಾರಿಸಿಕೊಡುತ್ತಾರೆ. ಆದರೆ ಕೆಲಸ ಮಾಡುವ ನೈಪುಣ್ಯತೆ, ಕೌಶಲ್ಯತೆಯ ಮೇಲೆ ಕೆಲವು ಬಾರಿ ಬೆಲೆ ನಿಗದಿಯಾಗಿರುತ್ತದೆ. ಕುಡುಗೋಲು ಅಣಿಯುವುದರಲ್ಲಿ ಹಲವು ನಮೂನೆಗಳಿವೆ. ಹಣ ಕೊಡುವವನ ಮುಖ ನೋಡಿಯೂ ಕೆಲವು ಬಾರಿ ಕೆಲಸ ಮಾಡುತ್ತಾರೆ. ಕಮ್ಮಾರನು ಪ್ರತ್ಯೇಕವಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಹಣ ಅಥವಾ ಧಾನ್ಯವನ್ನು ಪಡೆಯುತ್ತಿದ್ದ ಎಂಬುದನ್ನು ಈ ಕೆಳಗೆ ನಿಗದಿತ ಬೆಲೆಯನ್ನು ನೀಡಲಾಗಿದೆ.

ಬಂಡಿ ಹಳಿ ಕಟ್ಟಲಿಕ್ಕೆ	–	೫೦ ರೂ
ಕುಡ ಅಣಿಯಲಿಕ್ಕೆ	–	೧೦ ರೂ
ರಂಟೆ ಕುಳ ಅಣಿಯಲಿಕ್ಕೆ	–	೦೫ ರೂ
ಕುಡುಗೋಲಿಗೆ	–	೨೦ ರೂ
ಗುದ್ದಲಿಗೆ	–	೦೫ ರೂ
ಈಳಿಗೆ ಮಣಿ	–	೨೦ ರೂ
ಕೊಡ್ಲಿ ಅಣಿಯಲಿಕ್ಕೆ	–	೦೩ ರೂ

ಈ ರೀತಿಯಾಗಿ ಕಮ್ಮಾರನು ಸಂಭಾವನೆಯಾಗಿ ಪಡೆಯುತ್ತಿದ್ದನು. ಪಾಂಚಾಳರಲ್ಲಿ ಅಕ್ಕಸಾಲಿಗ ಶಾಸನಗಳಲ್ಲಿ ಆಯಗಾರನೆನಿಸಿಕೊಂಡರೂ ಗ್ರಾಮೀಣ ಕೈಗಾರಿಕೆಯಲ್ಲಿ ಮುಖ್ಯವಾಗಿ ಕಾಣಿಸಿ ಕೊಳ್ಳುವುದಿಲ್ಲ. ಕಮ್ಮಾರ, ಬಡಿಗ, ಕೊರವ, ತಳವಾರ ಇತ್ಯಾದಿ ವೃತ್ತಿಕಾರರು ಇಂದು ಆಯಗಾರರಾಗಿ ಕಂಡುಬರುತ್ತಾರೆ. ಅಂದು ಆಯಗಾರರಾಗಿ ಕಂಡು ಬಂದ ವೃತ್ತಿ ಜನಾಂಗಗಳು ಅತ್ಯಂತ ಸುಖದ ಜೀವನ ನಡೆಸುತ್ತಿದ್ದರು. ವರ್ತಮಾನ ಮತ್ತು ಭವಿಷತ್ ಕಾಲದಲ್ಲಿ ಈ ವೃತ್ತಿಕಾರರ ಬದುಕು ಅಥವಾ ಆಯಗಾರಿಕೆ ಒಂದು ಕಥೆಯಾಗಬಹುದು. 'ಹಿಂದೆ ಹೀಗಿತ್ತಂತೆ' ಎಂದು ಮುಂದಿನ ಪೀಳಿಗೆಗೆ ಹೇಳಬೇಕಾಗುತ್ತದೆ. ಯಾಕೆಂದರೆ ತಂತ್ರಜ್ಞಾನದ ಬೆಳವಣಿಗೆ ದಿನೇ ದಿನೇ ಬೆಳೆಯುತ್ತಲೇ ಇದೆ ವಿಶ್ವವನ್ನು ಹಳ್ಳಿಯಾಗಿ ನೋಡುವ ಸಂದರ್ಭ ಬಂದೊದಗಿದೆ. ಹಾಗಿರುವಾಗ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿಗೆ ಜೋತು ಬೀಳುವುದು ಸರಿಯಲ್ಲದಿರಬಹುದಾದರೂ ಸಾಮಾಜಿಕ ಒಪ್ಪಂದವು ಗ್ರಾಮೀಣರ ಬದುಕಿನಲ್ಲಿ ರಕ್ತಗತವಾಗಿ ಬಂದಿದೆ. ಇಂದಿಗೂ ಕೂಡ ಸ್ವಲ್ಪ ಮಟ್ಟಿಗೆ ಈ ಆಯ ಪದ್ಧತಿ ಉಳಿದು ಕೊಂಡುಬಂದಿದೆ. ಈ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವ ಪರಿಸ್ಥಿತಿಯೂ ಇಲ್ಲ. ಏಕೆಂದರೆ ಇವರ ಕರಕುಶಲಗಾರಿಕೆಯು ನಶಿಸಿ ಹೋಗುವ ಪರಿಸ್ಥಿತಿ ಬಂದಿದೆ. ಪಾಂಚಾಳರು ಬರೀ ವ್ಯವಸಾಯೋಪಕರಣಗಳನ್ನು ತಯಾರಿಸಿ ಜೀವಿಸುವುದು ಬಹುಕಷ್ಟ ಜೊತೆಗೆ ಅವರು ಬೇರೆ ಬೇರೆ ಆಲೋಚನ ಕ್ರಮದಿಂದ ಹೊಸ ಹೊಸ ಮಾದರಿಯ ಕಾಲಕ್ಕನುಗುಣವಾಗಿ ವೃತ್ತಿಯನ್ನು ಮುಂದುವರೆಸಿಕೊಂಡು ಬರಬೇಕಾಗಿದೆ. "ಈಗ ನಮ್ಮ ಜೀವನ

ಕಷ್ಟತ್ತಿಂಬಪ್ಪ ಈ ಕೆಲಸಯಾಕಾದ್ರು ಕಲ್ತಿನೋ, ನನ್ ಮಗ್ಗ ಈ ವೃತ್ತಿನಾ ದೇವರಾಣೆಗೂ ಮಾಡಬ್ಯಾಡಂತ ಹೇಳಿನ. ಈಗಿನ ಕಾಲಬ್ಯಾರೆ, ಈಗಿನ ಕಾಲ ಬ್ಯಾರೆ, ಅದಕ ನನ್ ಮಗ ಬೆಂಗ್‌ಲೂರನ್ಯಾಗ ಅದೆಲ್ಲೋ ಕೆಲ್ಸ ಮಾಡಿ ಬೋಕ್ಕ ಕಳ್ಸತಾನ ಈಗ ಚೆಂದಾಗದಿನ" ಎಂದು ತನ್ನ ಅಸಾಹಯಕ ಪರಿಸ್ಥಿತಿಯನ್ನು ಮತ್ತಿಹಳ್ಳಿ ಗುಡ್ಡಾಚಾರಿ ಹೇಳಿಕೊಳ್ಳುತ್ತಾರೆ. ಹೀಗೆ ಸಮಾಜದಲ್ಲಿ ಎಲ್ಲರಲ್ಲೂ ಬೆರತು ಹೋಗಿರುವ ಪಾಂಚಾಲರು ತನ್ನ ಉಪಜೀವನವನ್ನು ನಗರಗಳಲ್ಲಿ ಕೆಲಸಮಾಡುತ್ತ ಇನ್ನಿತರ ಬೇರೆ ಬೇರೆ ವೃತ್ತಿಗಳ ಮೂಲಕ ಜೀವನೋಪಾಯ ಮಾಡುತ್ತಿರುವುದು ಕಂಡುಬರುತ್ತದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಈ ಆಯ ಪದ್ಧತಿಯು ತನ್ನ ಸ್ಥಿತಿಯನ್ನು ಕಳೆದುಕೊಳ್ಳತ್ತಾ ಸಾಗಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಅಲ್ಲೊಂದು ಇಲ್ಲೊಂದು ಕಂಡು ಬರುವ ಆಯಗಾರರು ಸಂಪೂರ್ಣವಾಗಿ ನಿಲ್ಲುವ ಹಂತ ತಲುಪಿದೆ ಎಂದು ಹೇಳಬಹುದು. ಹಿಂದೆ ಆಯದಿಂದಲೇ ಸಂಪೂರ್ಣ ಜೀವನೋಪಾಯ ಮಾಡುತ್ತಿದ್ದ ಆಯಗಾರರು ಇಂದು ಅದರಿಂದ ಬದುಕುವುದು ಕಷ್ಟದಾಯಕವಾಗಿ ಕಂಡು ಬಂದುದರಿಂದ ಹಾಗೂ ಆಧುನಿಕ ಉಪಕರಣಗಳ ಹುಟ್ಟಿನಿಂದ ಈ ಪದ್ಧತಿ ನಶಿಸಿ ಹೋಗುತ್ತಿರುವುದನ್ನು ಕಾಣಬಹುದು.

ತೆರಿಗೆ ಪದ್ಧತಿ

ಬಡಗಿ, ಕಮ್ಮಾರ, ಅಕ್ಕಸಾಲಿಗ, ಶಿಲ್ಪಿ, ಕಂಚುಗಾರ ಎಂಬ ಪಂಚ ವೃತ್ತಿಯನ್ನಾಶ್ರಯಿಸಿ ಬದುಕುತಿದ್ದ ಪಾಂಚಾಳರಿಗೆ ವೃತ್ತಿಯ ಮೇಲೆ ಮತ್ತು ವೃತ್ತಿಯ ಉಪಕರಣಗಳ ಮೇಲೆ ತೆರಿಗೆ ವಿಧಿಸಿದ ವಿವರಗಳು ಉಲ್ಲೇಖ ಗೊಂಡಿರುವುದನ್ನು ಕಾಣಬಹುದು. ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಂಚುಗಾರ ಮತ್ತು ಶಿಲ್ಪಿ ಎಂಬ ಐದು ವಿಧವಾದ ಕೆಲಸಗಾರರನ್ನು ಒಂದುಗೂಡಿಸಿ ಪಾಂಚಾಳರು, ಪಂಚಕಾರರು, ವಿಶ್ವಕರ್ಮರು, ಓಜರು, ಆಚಾರಿಗಳು ಎಂಬ ಸಾಮಾನ್ಯ ಪಂಚಕಗಳಿಂದ ಅನೇಕ ಶಾಸನಗಳಿಂದ ಉಲ್ಲೇಖ ಗೊಂಡಿದೆ. ಇವರೆಲ್ಲರನ್ನು ಒಟ್ಟುಗೂಡಿಸಿ 'ಪಾಂಚಾಳ ತೆರಿಗೆ' (ಎ.ಕ. V ಟೀ ನರಸಿಪುರ ೧೩೮) ಎಂದು ಮತ್ತು 'ಪಂಚಕಾರುಕಜಿವೆ' (ಎ.ಕ. VIII ಹೊಳೆ ನರಸಿಪುರ ೭೨ ಕ್ರಿ.ಶ. ೧೨೩೮) ಎಂಬ ಪದಗಳು ಈ ಐದು ಕಸಬುಗಾರರನ್ನು ಒಂದು ಎಂದು ಪರಿಗಣಿಸಿ ವೃತ್ತಿ ತೆರಿಗೆಯನ್ನು ವಿಧಿಸುತ್ತಿದ್ದರು ಎಂಬ ಅಂಶ ನಮ್ಮ ಗಮನಕ್ಕೆ ಬರುತ್ತವೆ. ಡಾ. ಎ.ವಿ ವೆಂಕಟರತ್ನಂ ರವರು ಈ ಮಾದರಿಯ ತೆರಿಗೆಯನ್ನು ಐದು ವಿಧದ ಕೆಲಸಗಾರರ ಮೇಲಿನ ತೆರಿಗೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. (ವೆಂಕಟರತ್ನಂ ಎ.ವಿ. –ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳಿಯ ಸರ್ಕಾರ ಪುಟ–೧೧೨) ಓಜವರಿ, ವೋಜ ತೆರಿಗೆ (ಎ.ಕ. III ಗುದ್ಲುಪೇಟೆ ೧೫೦ ಕ್ರಿ.ಶ. ೧೫೨೧) ಎಂದು ಉಲ್ಲೇಖಗೊಂಡಿರುವುದರಿಂದ ಈ ಪಾಂಚಾಳರಿಗೆ ತೆರಿಗೆ ವಿಧಿಸುತ್ತಿದ್ದರು ಎಂಬ ಅಂಶ ಗಮನಕ್ಕೆ ಬರುತ್ತದೆ.

ಇವರು ಕಸುಬಿನ ಮೇಲೆ ಹಲವಾರು ತರದ ತೆರಿಗೆಯನ್ನು ವಿಧಿಸುತ್ತಿದ್ದ ವಿವರಗಳು ಸಿಗುತ್ತವೆ. 'ಪಂಚಕಾರುಕಹಣ', ಪಂಚ್ಯಾಕಾರು' (ಎ.ಕ VIII ಅರಕಲಗೋಡು ೪೫ ಕ್ರಿ.ಶ. ೧೨೭೫) ಕಂಚುಗಾರುಕ ವಡಿಕೆ ಎಂಬ ಪದ ಪ್ರಯೋಗ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಹೊಯ್ಸಳರ ಕಾಲದಲ್ಲಿ ಮತ್ತು ವಿಜಯನಗರ ಕಾಲದಲ್ಲಿ ತೆರಿಗೆ ವಿಷಯ ಹೆಚ್ಚು ಪ್ರಸ್ತಾಪಗೊಂಡಿವೆ. ಪಾಂಚಾಳರ ತೆರ ಎಂಬುದು ಕ್ರಿ.ಶ. ೯, ೧೦ ನೇ ಶತಮಾನದಲ್ಲಿ ಉಕ್ತವಾಗಿದೆ. ಕ್ರಿ.ಶ. ೧೩೨೯ ರಲ್ಲಿ 'ಪಂಚಾಳವಟಿಕೆ' ಎಂಬ ಪದವು ಬಳಕೆಯಾಗಿದೆ. ಕೆಲವು ಕಡೆ 'ಓಜ ತೆರಿಗೆ' ಎಂಬ ಪದವೂ ಬಳಕೆಯಾಗಿದೆ. ವೋಜದೆ ಜಿಗೆ ಎಂಬ ತೆರಿಗೆ ಪದ್ಧತಿಯು ವಿಜಯನಗರದ ಕೃಷ್ಣ ದೇವರಾಯನ ಕಾಲದಲ್ಲಿ ಜಾರಿಯಲ್ಲಿತ್ತು (ವೆಂಕಟರತ್ನಂ ಎ.ವಿ ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳಿಯ ಸರ್ಕಾರ ಪುಟ–೧೧೬) ಎಂದು ತಿಳಿಸುತ್ತಾರೆ.

ಎಲ್ಲರನ್ನು ಒಟ್ಟುಗೂಡಿಸಿ ವಿಧಿಸುತ್ತಿದ್ದ ತೆರಿಗೆ ವಿವರಗಳು ಸಿಗುವುದರ ಜೊತೆಗೆ ಈ ವೃತ್ತಿಕಾರರ ಪ್ರತ್ಯೇಕವಾದ ತೆರಿಗೆ ಹಾಗೂ ವೃತ್ತಿಕಾರರು ಉಪಯೋಗಿಸುವ ಉಪಕರಣಗಳ ಮೇಲೂ ತೆರಿಗೆಯನ್ನು ಹೇರುತ್ತಿದ್ದರು ಎಂದು

ನಿದರ್ಶನವು ನಮಗೆ ದಾಖಲೆಗಳ ಮೂಲಕ ಸಿಗುತ್ತವೆ. 'ಬಡಗಿದೆಜ,' 'ಕಮ್ಮಾರ ಸುಂಕ', 'ಕಂಚುಗಾರದೆರ' ಎಂಬ ಪ್ರತ್ಯೇಕವಾದ ತೆರಿಗೆಯನ್ನು ವಸೂಲಿ ಮಾಡುತಿದ್ದರು. ಕಮ್ಮಾರನ ಮೇಲೆ 'ಕಮ್ಮಾಟಿಕೆಯ ದಶವನ್ನ' (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ XVIII, ಪುಟ–೨೩೩ ನಂ. ೧೭೨ ಕ್ರಿ.ಶ. ೧೧೦೨) ಎಂಬ ಸುಂಕ ಅಂದರೆ ಕಮ್ಮಾರನ ಸಂಪಾದನೆಯಲ್ಲಿ ಹತ್ತನೇ ಒಂದು ಭಾಗವನ್ನು ಸುಂಕದ ರೂಪದಲ್ಲಿ ಕೊಡಬೇಕಾಗುತ್ತಿತ್ತು. ಈ ಐದು ಮಂದಿ ಕಿರಕುಶಲ ಕರ್ಮಿಕರಲ್ಲಿ ಕಮ್ಮಾರ ಅತಿಹೆಚ್ಚು ಸುಂಕ ಕೊಡುತ್ತಿದ್ದ ಹಾಗೂ ಅಕ್ಕಸಾಲಿಯು ಎರಡನೆಯ ಸಾಲಿನಲ್ಲಿ ಬರುತ್ತಿದ್ದ ವಿವರಗಳು ನಮಗೆ ಸಿಗುತ್ತವೆ.

ಪಂಚ ಕಸುಬಿನ ಉಪಕರಣಗಳ ಮೇಲೆ ಹಾಗೂ ಕಚ್ಚಾವಸ್ತುಗಳ ಮೇಲು ತೆರಿಗೆ ಕಟ್ಟುತ್ತಿದ್ದ ವಿವರಗಳು ಗೋಚರಿಸುತ್ತವೆ. ಬಡಗಿಗಳ 'ಕೊಡತಿವಣ' ಕೊಡತಿಗೆ ಹಣ ಒಂದು (ಕರ್ನಾಟಕದಲ್ಲಿ ಶಿಲ್ಪಾಚಾರಿಯರು –ಡಾ. ಕುಮಾರಸ್ವಾಮಿ ಪುಟ–೧೧೦) ಎಂದು ಉಲ್ಲೇಖಿಸಿದ್ದಾರೆ. ಈ ಕೊಡತಿಯು ಬಡಗಿ ಉಪಯೋಗಿಸುವ ಒಂದು ಸಾಧನ. ಮರದ ಸುತ್ತಿಗೆ ಅದೇ ಬಡಗಿಗಳ ಪ್ರಮುಖವಾದ ಸಾಧನವಾಗಿದೆ. 'ಕುಲುಮದೆಜೆ', 'ಅಡೆಕಲುವಣ' ಎಂಬ ಪದಗಳು ಕಮ್ಮಾರರು ಬಳಸುವ ಉಪಕರಣಗಳು. ಕುಲುಮೆ ಎಂದರೆ ಕೆಲಸಮಾಡುವ ಸ್ಥಳ, ಅಡೆಕಲುವಣ ಎಂದರೆ ಕಮ್ಮಾರನ ಮುಖ್ಯವಾದ ಸಾಧನ ಅಡಿಗಲ್ಲು. ಬಡಗಿಗೆ ಕೊಡ್ತಿ, ಕಮ್ಮಾರನ ಅಡಿಗಲ್ಲು, ಅಕ್ಕಸಾಲಿಯ ಕಮ್ಮಟ ಒಲೆಯು ಮುಖ್ಯವಾದವುಗಳು. ಅವರು ಉಪಯೋಗಿಸುವ ಉಪಕರಣಗಳ ಮೇಲೆ ತೆರಿಗೆ ವಿಧಿಸಿದ ವಿವರಗಳು ಸಿಗುತ್ತವೆ. ಅಕ್ಕಸಾಲಿಯ ಕಮ್ಮವದೆರೆ ಹಾಗೂ ಕತ್ತರಿವಣ ಎಂಬ ತೆರಿಗೆಯನ್ನು ವಿದಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ.

ಈ ವೃತ್ತಿಕಾರರ ಮೇಲೆ ಹಾಕುತ್ತಿದ್ದ ತೆರಿಗೆಗಳ ಬಗೆಗಿನಲ್ಲಿ ಕಬ್ಬುನದ ಸುಂಕ (ಎ.ಕ. XII, ಗುಬ್ಬಿ ೪೫, ಕ್ರಿ.ಶ. ೧೨೩೩) 'ಕಬುನದೆಜು' ಕಬ್ಬಿಣದ ಪೊಂಮು ಎಂಬ ಮಾತುಗಳು ಕೇಳಿಬರುತ್ತಿತ್ತು. ಕಚ್ಚಾ ವಸ್ತುವಿನ ಮೇಲೂ ತೆರಿಗೆಯನ್ನು ವಿಧಿಸುತ್ತಿದ್ದರೆಂಬುದು ತಿಳಿದು ಬರುತ್ತದೆ. ಕಟ್ಟಿಗೆದೆರ ಹೀಗೆ ಕಚ್ಚಾ ವಸ್ತುವಿನ ಮೇಲು ವೃತ್ತಿಯ ಮೇಲು ತೆರಿಗೆ ಪದ್ಧತಿ ಇರುವುದು ಕಂಡು ಬರುತ್ತದೆ. ವೃತ್ತಿ ಮತ್ತು ಆ ವೃತ್ತಿಯಲ್ಲಿ ಬಳಸುವ ಉಪಕರಣಗಳು ಹಾಗೂ ಕಚ್ಚಾವಸ್ತುವಿನ ಮೇಲೆ ತೆರಿಗೆ ಹಾಕುತ್ತಿದ್ದ ವಿವರಗಳು ದೊರೆಯುತ್ತವೆ. ಇನ್ನೊಂದು ಅಂಶವನ್ನು ಗಮನಿಸುವುದನೆಂದರೆ ರಾಜ ವರ್ಗದವರು ಈ ವೃತ್ತಿಕಾರರ ಮೇಲೆ ತೆರಿಗೆ ವಿಧಿಸುತ್ತಿದ್ದರು. ಈ ವೃತ್ತಿಕಾರರಿಗೆ ಬಹು ಬೇಡಿಕೆ ಇರಬೇಕು ಹಾಗೂ ಆ ವೃತ್ತಿಯಿಂದ ಹೆಚ್ಚು ಆದಾಯ ಬರುತ್ತಿರಬೇಕು ಮತ್ತು ಅವರ (ಪಾಂಚಾಳರ) ಜೀವನ ಮಟ್ಟ ಮೇಲ್ಮಟ್ಟದ ಬದುಕು ನಡೆಸುತ್ತಿದ್ದಿರಬಹುದೆಂಬ ಅಂಶಗಳು ಗಮನಕ್ಕೆ ಬರುತ್ತವೆ. ಆಗ ಈ ಪಾಂಚಾಳರು ಸಮಾಜದಲ್ಲಿ ಉನ್ನತ ವರ್ಗವಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಆದರೆ ಅದು ರಾಜವರ್ಗದ ಮೇಲೆ ಅವಲಂಬಿತವಾಗಿರುವುದು ಕೂಡ ಗಮನಿಸಬೇಕಾದ ಅಂಶ. ಎಲ್ಲಾ ಆಡಳಿತದಲ್ಲಿ ಈ ಪದ್ಧತಿ ಕಂಡುಬರುವುದಿಲ್ಲ. ಆಯಾ ಕಾಲದಲ್ಲಿ ಆಯಾ ವರ್ಗ ಉನ್ನತ ಸ್ಥಾನದಲ್ಲಿರುವವರಿಗೆ ತೆರಿಗೆ ವಿಧಿಸುತ್ತಿದ್ದರಬಹುದು. ಕಾಲನಂತರ ಹಾಗೂ ಪ್ರಾಚೀನ ಕಾಲದಿಂದಲೂ ಈ ಪದ್ಧತಿ ಇರಬಹುದು ಪ್ರಸ್ತುತ ಸಂದರ್ಭದಲ್ಲಿ ಇಂತಹ ಪರಿಸ್ಥಿತಿ ಇರುವುದಿಲ್ಲ. ಬೆಂಗಳೂರಿನಲ್ಲಿ ಮೌನೇಶ ಎಂಬಾತನನ್ನು ಬಡಿಗಿ ಕೆಲಸ (ಆಧುನಿಕ ರೀತಿಯ) ಮಾಡುತ್ತಾರೆ. ಪರ್ನಿಚರ್ ಮಾಡುತ್ತಿರುವಾಗ ಅಲ್ಲಿಗೆ ವ್ಯಾಟ್ ಅಧಿಕಾರಿಗಳು ಬಂದು 'ನೀವು ವ್ಯಾಟಗೆ ಒಳಪಡುವುದರಿಂದ ಬಿಲ್, ಸೀಲ್ ಇತ್ಯಾದಿಗಳನ್ನು ಮಾಡಿಸಿ ತೆರಿಗೆ ಕಟ್ಟಬೇಕೆಂದರಂತೆ' ಆದಕ್ಕೆ ಅವರು 'ಹೋಗ್ರಿ ಪುರಾತನ ಕಾಲದಿಂದ ಕಸುಬು ಮಾಡಿದ ಜನ ನಾವು ನಾವ್ಯಾಕ ತೆರಿಗೆ ಕಟ್ಟಬೇಕು ನಾವು ಕಟ್ಟುವುದಿಲ್ಲ ಅದೇನ್ ಮಾಡಿಕೊಳ್ಳುತ್ತೀರೋ ಮಾಡ್ಕೋಳ್ಳಿ' ಎಂದು ಸಿಡಿಮಿಡಿಗೊಂಡನಂತೆ. ಅದರೆ ಗ್ರಾಮೀಣ ಪ್ರದೇಶದಲ್ಲಿ ಅಂತಹ ವಿವರಗಳು ದೊರೆಯುವುದಿಲ್ಲ. ಇದು ರಾಜಾಡಳಿತವಲ್ಲ, ರಾಜ್ಯಡಳಿತ. ಕುಶಲಕರ್ಮಿಗಳು ಯಾರೇ ಆಗಿರಲಿ ಅವರ ಜೀವನ ನೆಡೆಸುವುದೇ ಕಷ್ಟವಾದ ಮೇಲೆ ಅವರೆಲ್ಲಿಂದ ತೆರಿಗೆ ಕಟ್ಟಬೇಕು, ಈ ದೇಶಿಯ ತಂತ್ರಜ್ಞಾನಗಳಿಗೆ ಉತ್ತೇಜನ ಕೊಡುತ್ತಲೇ ಬಂದಿದ್ದಾರೆ. ಅವರ ಮೇಲೆ ಯಾವುದೇ ತರದ ಭಾರ ಹಾಕಿಲ್ಲ ಹಾಕಿದರೆ ಭಾರ ಹೋರುವ ಶಕ್ತಿ ಇಲ್ಲವಾಗಿದೆ.

ನಾಲ್ಕನೇ ಪಾದ

ಅಧ್ಯಾಯ ೭

ಪಾಂಚಾಳ ಸಮಾಜದ ಸಮಕಾಲೀನ ಸವಾಲು ಮತ್ತು ಅಸ್ತಿತ್ವ

ಅಧ್ಯಾಯ ೮

ಪಾಂಚಾಳ ಸಮಾಜದ ನಾಳಿನ ಸಾಧ್ಯತೆಗಳು ಮತ್ತು ದೇಶೀಯ ತಂತ್ರಜ್ಞಾನ

ಉಪಸಂಹಾರ

ಅನುಬಂಧ

ಅಧ್ಯಾಯ ೭

ಪಾಂಚಾಳ ಸಮಾಜದ ಸಮಕಾಲೀನ ಸವಾಲುಗಳು ಮತ್ತು ಅಸ್ಥಿತ್ವ

ಸಮುದಾಯಗಳು ತಮ್ಮ ಅಸ್ಥಿತ್ವ ಉಳಿಸಿಕೊಳ್ಳಬೇಕಾದರೆ ಅದು ಸದಾ ಪುನರ್‌ಸೃಷ್ಟಿಗೆ ಬೇಕಾದ ಬಹುರೂಪಿ ಅವಕಾಶಗಳನ್ನು ಉಳಿಸಿ ಸಾಗಬೇಕಾಗುತ್ತದೆ. ಸಮುದಾಯಗಳು ತನ್ನ ಅಸ್ಥಿತ್ವಕ್ಕಾಗಿ ಇನ್ನೊಂದು ಅಸ್ಥಿತ್ವದ ಅಮೂರ್ತರೂಪವನ್ನು ಒಪ್ಪಿಕೊಂಡು ಪ್ರತಿರೋಧವನ್ನು ಒಡ್ಡುತ್ತದೆ. ಜಗತ್ತಿನ ಯಾವುದೇ ಸಮುದಾಯ ಪ್ರಾಚೀನ ಕಾಲದಿಂದ ಆಧುನೀಕರಣದ ಯುಗದಲ್ಲಿ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗುತ್ತವೆ. ಕಾರಣ ಅವು ಕಟ್ಟಿಕೊಂಡ ಸಂಪ್ರದಾಯಗಳು, ಅವರು ನಿರ್ವಹಿಸುವ ವೃತ್ತಿಗಳು, ಬದುಕಿ ಬಾಳುವ ಪ್ರದೇಶ, ಅವರಾಡುವ ಮಾತು, ನಂಬಿರುವ ನಂಬಿಕೆಗಳು ಇವತ್ತಿನ ಹೊಸ ಜಗತ್ತಿನಲ್ಲಿ ತಮ್ಮ ನೆಲೆಯನ್ನು ಗುರುತಿಸಿಕೊಳ್ಳಲಾರದಷ್ಟು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಾಗುತ್ತಿವೆ ಎಂಬುದನ್ನು ಆ ಸಮುದಾಯಗಳ ವಸ್ತುಸ್ಥಿತಿಗಳು ಕಣ್ಣಮುಂದೆ ಮಂಜಿನಂತೆ ಕರಗುತ್ತಿವೆ.

ಸಮುದಾಯಗಳ ಸಾಂಸ್ಕೃತಿಕ ಆತ್ಮಕಥನವೇ ಮೌಖಿಕ ಇತಿಹಾಸ. ಜನಪದರು ತಮ್ಮ ತಮ್ಮ ಅಸ್ಥಿತ್ವದ ಮೂಲ ನೆಲಗಳನ್ನು ಮತ್ತು ನೆಡೆದುಬಂದ ದಾರಿಯನ್ನು ಸಾಂಸ್ಕೃತಿಕ ನಿರೂಪಣೆಗಳ ಮೂಲಕ ಬಹುರೂಪಿಯಾಗಿ ಕಟ್ಟಿಕೊಳ್ಳತ್ತಾ ಬಂದಿದ್ದಾರೆ. ಸುಪ್ತ ಪ್ರಜ್ಞೆಯಲ್ಲಿ ಮೌಖಿಕತೆಯು ರೂಪಗೊಂಡು ಸಾಮಾಜಿಕವಾದ ಆಯಾಮವನ್ನು ಪಡೆದುಕೊಂಡಿರುತ್ತದೆ. ಹೀಗಾಗಿ ಮೌಖಿಕ ಚರಿತ್ರೆಯು ಆಯಾ ಸಮುದಾಯದ ಅಸ್ಥಿತ್ವದ ಜೊತೆಗೆ ಅವರ ಚಹರೆಯನ್ನು ಹೇಳುತ್ತಿರುತ್ತದೆ ಎಂದು ಡಾ. ಮೊಗಳ್ಳಿಯವರು (ಡಾ. ಪ್ರೋ. ಲಕ್ಷಣ್ ತೆಲಗಾವಿ-ಚರಿತ್ರೆ ಅಧ್ಯಯನ. ಪು-೭) ಹೇಳಿದ ಮಾತುಗಳು ಸಮುದಾಯದ ಇರುವಿಕೆಯನ್ನು ಹಾಗೂ ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಸಾಂಸ್ಕೃತಿಕ ಚರಿತ್ರೆಯನ್ನು ಹೊಂದಿರುತ್ತದೆ. ಅದು ಮೌಖಿಕ ಪರಪರೆಯಾಗಿರಬಹುದು, ಲಿಖಿತ ರೂಪದಲ್ಲಿಯೂ ಇರಬಹುದು. ಅದು ತನ್ನ ಸುತ್ತಾ ಹೆಣೆದುಕೊಂಡಿರುವ ಸಂಸ್ಕೃತಿಯ ಪ್ರತಿಬಿಂಬ ಆ ಸಮುದಾಯಗಳ ಸುತ್ತಲೂ ಬಿಟ್ಟಿರುತ್ತವೆ. ಕಾಲಾನಂತರದಲ್ಲಿ ಸಮುದಾಯಗಳು ತಮ್ಮ ಅಸ್ಥಿತ್ವವನ್ನು ಕಳೆದುಕೊಳ್ಳುವತ್ತ ಸಾಗುತ್ತಿರುವುದನ್ನು ಕಾಣಬಹುದು.

ಯಾವುದೇ ಸಮುದಾಯದ ಸಂಸ್ಕೃತಿ ವಿಕಾಸವಾಗುತ್ತಾ ಅನೇಕ ಕಾಲಘಟ್ಟಗಳ ಜೊತೆ ಮುಖಾಮುಖಿಯಾಗುತ್ತಾ ತಮ್ಮ ಅಸ್ಥಿತ್ವವನ್ನು ರೂಪಿಸಿಕೊಳ್ಳುತ್ತವೆ. ಸಾಂಸ್ಕೃತಿಕ ಪ್ರತಿರೋಧ ಶಕ್ತಿಯ ಬಹುರೂಪಗಳು ಯಾವುದೇ ಸಂಸ್ಕೃತಿಯಲ್ಲಿ

ಜೀವಂತಿಕೆಯನ್ನು ವಿಕಸಿಸುತ್ತವೆಯೋ ಅಂತಹ ಯಾವುದೇ ಸಮುದಾಯಗಳು ಮುಳುಗಿಯೋಗುವುದಿಲ್ಲ. ವೈಜ್ಞಾನಿಕ ಅನ್ವೇಷಣೆಗಳು ಅಂತಹ ಸಂಸ್ಕೃತಿಗಳಲ್ಲಿ ನಿರಂತರವಾದ ಬದಲಾವಣೆಗಳನ್ನು ಬಯಸುತ್ತಾ ನಾಗರೀಕತೆಯ ಕಡೆಗೆ ವೇಗವಾಗಿ ಪ್ರಯಾಣಿಸುತ್ತಿರುತ್ತವೆ. ಈತರದ ಸಮುದಾಯಗಳ ಭೌದ್ಧಿಕದಾಹ ಈ ಬಗೆಯ ಸಾಂಸ್ಕೃತಿಕ ಗರ್ಭದಿಂದಲೇ ತನ್ನ ರೂಪಗಳನ್ನು ಆಧುನಿಕತೆಯ ಜೊತೆಗೆ ಬೆಳೆಯಲು ತೀವ್ರವಾದ ಹೋರಾಟ ಮಾಡುತ್ತವೆ. ತನ್ನ ಹಳೆಯ ಸಾಂಸ್ಕೃತಿಕ ಸಂವೇಧನೆಯು ರೂಪಿಸುವ ಬದುಕಿನ ಮೌಲ್ಯಗಳನ್ನು ಹೊಸಕಾಲದ ಜೊತೆ ಹೊಂದಿಕೊಳ್ಳಲು ಪಾರಂಪರಿಕ ಸಮುದಾಯಗಳ ಅದು ಕರಕುಶಲ ಸಮುದಾಯಗಳು ತೀವ್ರತರದ ಬೆಳವಣಿಗೆಯ ಹಿನ್ನೆಲೆಯಲ್ಲಿ ಸುಲಭವಾದ ಕಾಲವಾಗಿಲ್ಲವೆಂದು ಹೇಳಬಹುದು. ವಿಜ್ಞಾನ, ತಂತ್ರಜ್ಞಾನ, ಸಂಸ್ಕೃತಿ ಇವೆಲ್ಲವನ್ನು ಜೊತೆಯಲ್ಲಿಯೇ ಸೂಕ್ತವಾಗಿ ಹೊಂದಿಸಿಕೊಳ್ಳುತ್ತಾ ಸಮುದಾಯಗಳ ಅನನ್ಯತೆಯನ್ನು ಉಳಿಸಿಕೊಳ್ಳುವ ವಿಚಿತ್ರ ಸವಾಲುಗಳು ಯಾವುದೆಂದು ಸಮುದಾಯಗಳಿಗೆ ಈ ಶತಮಾನದ ಕೊನೆಯಲ್ಲಿ ಪ್ರಪಂಚದ ರಭಸದ ಮುಂದೆ ಕಾಲುವೆಗಳನ್ನು ಕಟ್ಟಿಕೊಂಡು ತೆವಳುತ್ತಾ, ಕುಂಟುತ್ತಾ ಕುರುಡನಂತೆ ಕೂರಬೇಕಾಗಿದೆ.

ಆಧುನಿಕತೆಯ ವಿವಿಧ ಹಂತದ ಆಯಾಮಗಳಲ್ಲಿ ಸಮುದಾಯಗಳು ತಮ್ಮನ್ನೆ ಅನೇಕ ಸಂಕೀರ್ಣ ಸವಾಲುಗಳ ಜೊತೆ ತನ್ನ ಅನನ್ಯತೆಯ ಅಸ್ಥಿತ್ವದ ಸಂಪೂರ್ಣವಾಗಿ ವಿಕಾಸಕ್ಕಾಗಿ ತೊಡಗಳು ಸಜ್ಜಾಗಿರಲು ಸಾಧ್ಯವಾದಂತೆ ಕಾಣುವುದಿಲ್ಲ. ಯಾವುದೇ ಆಧುನಿಕತೆಯು ಸುಲಭವಾಗಿ ಒಂದು ಸಂಸ್ಕೃತಿಯನ್ನು ನುಂಗಿಹಾಕಲು ಸಾಧ್ಯವಾಗುವುದಿಲ್ಲ. ಯಾವ ಆಧುನಿಕತೆಯು ಸಂಪೂರ್ಣವಾಗಿ ತಳ ಸಮುದಾಯಗಳ ರಕ್ಷಿತ ಒಳಕೋಟೆಗಳನ್ನು ನಾಶಮಾಡಿ ಅಲ್ಲಿ ತನ್ನ ಅಸ್ಥಿತ್ವವನ್ನು ಸ್ಥಾಪಿಸಲು ಶತಮಾನಗಳೇ ಬೇಕಾಗುತ್ತವೆ. ಒಂದು ಕಾಲದಲ್ಲಿ ಒಂದು ಸಮುದಾಯ ಉನ್ನತಸ್ಥಾನ ಹೊಂದಿದ್ದ ಸಂದರ್ಭದಲ್ಲಿ ಸಂಸ್ಕೃತಿ, ಆಚಾರ–ವಿಚಾರ ಹಾಗೂ ಆ ಸಮುದಾಯ ಹೊಂದಿರುವ ವೃತ್ತಿಗಳು ವೈಶಿಷ್ಟ್ಯ ಸ್ಥಾನ–ಮಾನ ಹೊಂದಿದ್ದವು. ಅಂತಹ ಸಮುದಾಯಗಳಲ್ಲಿ ಈ ಪಾಂಚಾಳ ಸಮುದಾಯವೂ ಒಂದು. ಮಧ್ಯಕಾಲಿನ ಕರ್ನಾಟಕದಲ್ಲಿ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಈ ಸಮುದಾಯವು ಬಹು ಪ್ರಮುಖ ಸ್ಥಾನವನ್ನು ಹೊಂದಿದ್ದವು. ಈ ಸಮುದಾಯಗಳು ತಾನು ನಿರ್ವಹಿಸಿಕೊಂಡು ಕರಕುಶಲಕರ್ಮಿಗಳ ಸ್ಥಿತಿ ಉನ್ನತ ಸ್ಥಾನಹೊಂದಿದ್ದು ಕಂಡುಬರುತ್ತದೆ. ಆ ಕಾಲದಲ್ಲಿ ಕೃಷಿಯೇ ಪ್ರಧಾನವಾಗಿದ್ದು ಆ ಕೃಷಿಯನ್ನು ನಂಬಿಕೊಂಡ ಜನರೂ ಕೂಡ ಹೆಚ್ಚಾಗಿದ್ದರು. ಕೃಷಿ ಪ್ರಧಾನವಾಗಿದ್ದರ ಹಿನ್ನೆಲೆಯಲ್ಲಿ ಕೃಷಿ ಉಪಕರಣಗಳು ಅವಶ್ಯಕವಾಗಿದ್ದವು ಕೃಷಿ ಉಪಕರಣಗಳನ್ನು ತಯಾರಿಸುವ ಒಂದು ವರ್ಗ ಮೀಸಲಾಗಿತ್ತು. ಆ ಮೀಸಲು ಈ ಪಾಂಚಾಳ ಸಮುದಾಯದವರ ಕಾಯಕವನ್ನು ಅವರಿಂದ ಅವುಗಳಷ್ಟೇಅಲ್ಲ ವಾಸಿಸುವ ಮನೆಗಳಿಗೆ ಉಪಯುಕ್ತವಾದ ವಸ್ತುಗಳನ್ನು ಮಾಡುವ ಕುಶಲತೆ ಈ ಸಮುದಾಯಗಳು ನಡೆಸಿಕೊಡುತ್ತಿದವು. ಮಧ್ಯಕಾಲಿನ ಯುಗವಷ್ಟೇ ಅಲ್ಲ ಅದರ ಹಿಂದಿನಿಂದಲೂ, ಈಗಲೂ ಕೂಡ ವೃತ್ತಿಯನ್ನು ಉಳಿಸಿಕೊಂಡು ಬಂದರೂ ಆ ವೃತ್ತಿಗಳನ್ನು ಮಾಡಲು ಈ ಸಮುದಾಯಗಳಿಗೆ ಸರಿಯಾದ ಸ್ಥಾನದೊರೆತಿಲ್ಲ.

ಪ್ರಾಚೀನ ಕರ್ನಾಟಕದಲ್ಲಿ ಪಾಂಚಾಳ ಸಮುದಾಯವನ್ನು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಾಶ್ರಯದ ವ್ಯವಸ್ಥೆಯಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದ್ದರು ಎಂಬ ಅಂಶವನ್ನು ಗಮನಿಸುವುದಾದರೆ ಬಡಗಿ ಮತ್ತು ಕಮ್ಮಾರರು ಕೃಷಿ ಉಪಕರಣಗಳ ಒಡೆತನವನ್ನು ಲೀಲಾಜಾಲವಾಗಿ ಮುಂದುವರೆಸಿ ಜೊತೆಗೆ ರಾಜರ ಆಜ್ಞೆಯ ಮೇರೆಗೆ ಕತ್ತಿ, ಗುರಾಣಿ ಹಾಗೂ ಯುದ್ಧೋಪಕರಣಗಳನ್ನು ಮತ್ತು ಬಡಗಿಯು ಸಾಮ್ರಾಜ್ಯಕ್ಕೆ ಅಲಂಕಾರಿಕ. ಬಹುಪಯೋಗಿ ಉಪಕರಣಗಳನ್ನು ಮಾಡಿ ತನ್ನ ಸೇವೆಯನ್ನು ಶ್ರಮಿಸುತ್ತಿದ್ದರು ಎಂಬ ಅಂಶಗಳ ಜೊತೆಗೆ ಅಕ್ಕಸಾಲಿಗ ಸೌಂದರ್ಯೋಪಾಸಕ ಆಭರಣಗಳು, ರಾಜ್ಯಗಳ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ನಾಣ್ಯಗಳನ್ನು, ತಾಮ್ರ ಶಾಸನಗಳನ್ನು ತಯಾರಿಸುತ್ತಿದ್ದರು. ಕಂಚುಗಾರ ದಿನಬಳಕೆಯ ವಸ್ತುಗಳ ಜೊತೆಗೆ ಗಂಟೆ, ಜಾಗಟೆಯಂತಹ ಸಾಂಸ್ಕೃತಿಕ ಉಪಕರಣ ನಿರ್ಮಾಣ ಮಾಡುವ ಕಾರ್ಯವನ್ನು ಹೊಂದಿದ್ದನು. ಹಾಗಿಯೇ ರಾಜ್ಯದ ಸಾಂಸ್ಕೃತಿಕ ಪ್ರತಿಬಿಂಬಕ್ಕೆ ಗುಡಿಗೋಪುರ, ಮೂರ್ತಿಗಳ ನಿರ್ಮಾಣ ಕಾಯಕದಲ್ಲಿ ಭಾಗಿಯಾಗಿ ತಮ್ಮದೇ ಆದ ಸೇವೆ.

ಕಾಯಕದಲ್ಲಿ ಲೀನವಾಗಿ ಕಂಡುಬರುತ್ತಾರೆ. ಇವು ಕೇವಲ ರಾಜ ದರ್ಬಾರಕ್ಕೆ ಸಂಬಂಧಿಸಿದವುಗಳಾದರೆ ಆ ರಾಜ್ಯದ ಕೃಷಿ ಉಪಕರಣ, ಬಳಸುವ ಉಪಕರಣ, ಧಾರ್ಮಿಕ ಮಂದಿರದ ಶಿಲ್ಪಕಲೆ ಹಾಗೂ ದಿನನಿತ್ಯದಲ್ಲಿ ಜನರು ಬಳಸುವ ಉಪಯುಕ್ತ ಉಪಕರಣಗಳ ತಯಾರಿಸುವ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ತಯಾರಿಸುತ್ತಿದ್ದರು. ಈ ವೃತ್ತಿ ಸಮುದಾಯಗಳ ಸಮಾಜಿಕ ಒಪ್ಪಂದಕ್ಕೆ ಒಳಗಾಗಿ ಇತರ ಸಮುದಾಯಗಳೊಂದಿಗೆ ಸಹಕರಿಸುತ್ತಾ ಬಂದು ತಮ್ಮ ಅಸ್ಥಿತ್ವವನ್ನು ಪಡೆಯುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು.

ದಿನಕಳೆದಂತೆ ಈ ಸಮುದಾಯ ವೃತ್ತಿಗಳು ಹಾಗಿಯೇ ಮುಂದುವರೆಯುತ್ತಾ ಸಾಗಿ ಬಂದು ತಮಗೆ ಗೊತ್ತಿಲ್ಲದಂತೆ ಆರ್ಥಿಕವಾಗಿ ನೆಲೆನಿಲ್ಲದೇ ಪ್ರಯತ್ನಿಸುತ್ತಿದ್ದಂತೆ ವರ್ತಮಾನದ ಬಿರುಗಾಳಿಗೆ ಈ ನೆಲೆಯು ಅಲುಗಾಡ ತೊಡಗಿತು ಆಧುನಿಕ ಯುಗದ ಭರಾಟೆಯಲ್ಲಿ ಈ ಸಮುದಾಯಗಳ ಅಸ್ಥತ್ವ ಕೈಗಾರಿಕರಣಕ್ಕೆ ಮುಖಾಮುಖಿಯಾಗಿ ಬಂದು ಹೋರಾಡುವ ಶಕ್ತಿಯನ್ನು ಕಳೆದುಕೊಂಡು ಅತಂತ್ರ, ಅಸ್ಥಿತ್ವವನ್ನು ಕಳೆದುಕೊಂಡ ದುರಂತದ ಕಥೆಗಳನ್ನು ಕಾಣುತ್ತೇವೆ. ಕರಕುಶಲ ಸಮುದಾಯಿಗಳು ತಮ್ಮ ಅಸ್ಥಿತ್ವಮೂಲವಾದ ವೃತ್ತಿ ಕೌಶಲ್ಯವನ್ನು ಅತ್ಯಂತ ಯಶಸ್ವಿಪೂರ್ಣವಾಗಿ ನಿಂತು ತಮ್ಮ ಪರಮಾವಧಿಯನ್ನು ಸ್ಥಾಪಿಸಿದ ಕಾಲದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದು ಉನ್ನತ ಶಿಖರ ಏರಿದ್ದವು. ಇದಕ್ಕೆ ಇತರ ಸಮುದಾಯಗಳ ವೃತ್ತಿಗಳು ಮತ್ತು ಕಾಲಕ್ಕೆ ತಂಕ್ಕಂತೆ ಉಪಕರಣಗಳ ಕಲೆಯು ಈ ಸಮುದಾಯಗಳಿಗೆ ಕರಗತವಾಗಿದ್ದವು.

ವೃತ್ತಿ ಸಮುದಾಯಗಳು ಸಮಾಜದಲ್ಲಿ ತಮ್ಮ ಅಸ್ಥಿತ್ವ ಉಳಿಸಿಕೊಳ್ಳಲು ಪ್ರಯತ್ನಿಸಿ ತೆವಳುತ್ತಾ ಸಾಗಿಬರುತ್ತಿವೆ. ಯಶಸ್ಸಿನ ಕುದುರೆಯ ಮೇಲೆ ಹಿಂದುಳಿದ ವರ್ಗಗಳು ಸವಾರಿ ಮಾಡುತ್ತಲೇ ಬೀಳುತ್ತಾ ಏಳುತ್ತಾ ಸಾಗುವುದನ್ನು ಕಾಣಬಹುದು. ಒಂದು ಸಮುದಾಯ ತನ್ನ ಅಸ್ಥಿತ್ವಕ್ಕಾಗಿ ನಾಗರೀಕತೆಯ (ನವೀನ) ವಿರುದ್ಧ ಹೋರಾಡುತ್ತಲೇ ಬರಬೇಕಾಗುತ್ತದೆ. ಈ ವೃತ್ತಿಸಮುದಾಯಗಳಾದ ಬಡಗಿ ಕಾಷ್ಠದಲ್ಲಿ, ಕಮ್ಮಾರ ಕುಲುಮೆಯಲ್ಲಿ, ಅಕ್ಕಸಾಲಿಯೂ ಅಗ್ಗಿಷ್ಟಿಕೆಯಲ್ಲಿ ನಂದಿ ಹೋಗುವ ಸಂದರ್ಭಗಳು ಹಾಗೂ ಶಿಲ್ಪಿಗಳು ಕಲ್ಲಿನಲ್ಲಿ ಶಿಲೆಯನ್ನು ಕೆತ್ತಲು ಬಳಸುವ ಉಳಿಗಳು ಬಗ್ಗುತ್ತಲೇ ಇವೆ. ಕಂಚುಗಾರರಂತೂ ತಮ್ಮ ಪಂಕದ ರೆಕ್ಕೆಗಳಿಗೆ ಸಿಕ್ಕು ಸಂಪೂರ್ಣವಾಗಿ ನುಚ್ಚುನೂರಾಗಿರುವುದು ಕಣ್ಣುಮುಂದೆ ಸುಳಿದುಹೊಗುತ್ತಿವೆ. ಈ ವೃತ್ತಿಗಳ ಅಸ್ಥಿತ್ವವು ಉಳಿದುಕೊಂಡರೆ ಅದನ್ನು ನಂಬಿಕೊಂಡ ಸಮುದಾಯಗಳು ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಬಹುದು. ಇವರ ಬದುಕು ನಿಂತಿರುವುದು ನಿರ್ವಹಿಸುವ ಕಾಯಕದಿಂದಲೇ ಹೊರೆತು ಇನ್ನಾವುದರಿಂದಲೂ ನೆಲೆನಿಲ್ಲಲು ಸಾಧ್ಯವಾದಂತೆ ಕಾಣುವುದಿಲ್ಲ.

ಕ್ರಿ.ಪೂ. ಯುಗದಿಂದ ವಿಶ್ವಕ್ಕೆ ಉತ್ಪಾದನಾ ವ್ಯವಸ್ಥೆಗೆ ತನ್ನದೇ ಆದ ಕೊಡುಗೆಯನ್ನು ವಿಶ್ವಕರ್ಮರು ಕೊಡುತ್ತಲೇ ಬಂದವರು. ಆದಿ ಮಾನವ ಕೃಷಿಯ ಮೂಲಕ ಆಹಾರ ಉತ್ಪಾದನೆ ಪ್ರಾರಂಭಿಸಿದ್ದನ್ನು ಸೃಷ್ಟಿಸುವ ಮೂಲಕ ತನ್ನ ಅಸ್ಥಿತ್ವವನ್ನು ಈ ಸಮುದಾಯದವರು ಬೆಳ್ಳಿಚುಕ್ಕೆಯಂತೆ ಎಲ್ಲರಿಗೂ ಕಂಡರು. ಖನಿಜ ಸಂಪತ್ತುಗಳ ಶೋಧನೆ ಮತ್ತು ಸಂಸ್ಕರಣೆ ಕಂಡುಕೊಂಡಮೇಲೆ ಉತ್ಪಾದನಾ ವ್ಯವಸ್ಥೆ ಮತ್ತು ಪಾಂಚಾಳರ ಘನತೆ ಗೌರವಗಳು ಅಭಿವೃದ್ಧಿ ಹೊಂದತೊಡಗಿದವು. ಬೆಂಕಿಯ ಉಪಯೋಗ ಕಂಡುಕೊಂಡ ಮೇಲೆ ಈ ವೃತ್ತಿಗಳ ದಿಕ್ಕ ಬದಲಾಯಿತು ಹೀಗಾಗಿ ಇವರು ಬೆಂಕಿಯನು ಶಕ್ತಿದೇವತೆಯೆಂದು ಆರಾಧಿಸತೊಡಗಿದರು. ತಾಮ್ರ, ಹಿತ್ತಾಳೆ, ಬೆಳ್ಳಿ, ಬಂಗಾರ, ಕಂಚು. ಕಬ್ಬಿಣ, ಕಟ್ಟಿಗೆ ಮುಂತಾದ ಕಚ್ಚಾವಸ್ಥುಗಳನ್ನು ಕಂಡುಕೊಂಡಮೇಲೆ ಅನೇಕ ವೃತ್ತಿಗಳು ಇವರಲ್ಲಿ ಹುಟ್ಟಿಕೊಂಡವು. ಈ ಎಲ್ಲಾ ವೃತ್ತಿಗಳು 'ರಾಷ್ಟ್ರೀಯ ಉತ್ಪಾದನಾ ವ್ಯವಸ್ಥೆ' ಎಂದು ಕರೆಯಿಸಿಕೊಂಡವು. ಈ ರೀತಿಯಾಗಿ ಸಮಾಜದಲ್ಲಿ ಭದ್ರತೆಯನ್ನು ಕಾಪಾಡಿಕೊಳ್ಳುವ ಹಂತವನ್ನು ತಲುಪಿದರು. ಸಂಪೂರ್ಣವಾಗಿ ಸಾಮಾಜಿಕ ಒಪ್ಪಂದವ ಒಳಗಡೆ ಇದ್ದುಕೊಂಡು ಬಂದು ಉಪಯುಕ್ತ ವ್ಯಕ್ತಿಗಳಾಗಿ ಕಂಡುಕೊಂಡರು. ಆಧುನಿಕ ಹೊಸ ಗಾಳಿಗೆ ಕರಕುಶಲ ಕರ್ಮಿಗಳ ಕೈಗಳು ಕೆಲಸಮಾಡಲು ಹಿಂಜರಿದವು. ಏಕೆಂದರೆ ಹಿಂಜರಿಕೆಯ ಕೈಗಳತುಂಬ ಕೆಲಸವಿಲ್ಲ, ಕೈತುಂಬಾ ಪ್ರತಿಫಲವಿಲ್ಲ, ಬದುಕಿನ ದೋಣಿಯನ್ನು ಉಟ್ಟುಹಾಕಲು ಶಕ್ತಿಯ ಕೊರತೆ ಅಥವಾ ಆ ಉಟ್ಟುಗಳು ಮುರಿದು

ಬದಲಿ ಉಟ್ಟುಗಳಿಗೆ ಹುಡುಕಾಡುತ್ತಿದ್ದಾರೆ. ಆ ಹುಡುಕಾಟದಲ್ಲಿ ಈ ಸಮುದಾಯಗಳು ತಮಗೆ ಹೊತ್ತಿಲ್ಲದಂತೆ ಮುಳುಗುತ್ತೇವೆ ಎಂಬ ಅರಿವು ಹಾಗೂ ಆ ಸಮುದಾಯದ ದೋಣಿ ಮುಳುಗುತ್ತದೆ ಎಂಬ ಅರಿವು ಯಾರ ಕಣ್ಣಿಗೂ ಕಾಣಿಸುವುದಿಲ್ಲ. ಅಂತಹ ಪರಿಸ್ಥಿತಿಯಲ್ಲೂ ತಮ್ಮ ವೃತ್ತಿಗಳೇ ತಮಗೆ ಅನ್ನ ಹಾಕುತ್ತವೆ ಎಂದು ನಂಬಿಕುಳಿತಿರುವ ಈ ಸಮುದಾಯಗಳು ಕಾದು ಕುಳಿತ ದುರಂತವನ್ನು ಕಾಣಬಹುದು.

ಪಾಂಚಾಳ ಸಮುದಾಯವು ಪ್ರಾಚೀನ ಕಾಲದಿಂದ ತಮ್ಮ ಇರುವಿಕೆಯನ್ನು ಸಾಂಸ್ಕೃತಿಕ, ಧಾರ್ಮಿಕವಾಗಿ ಆಚರಿಸುವ ಸಂಪ್ರದಾಯಗಳಲ್ಲಿ ತಮ್ಮದೇ ಆದ ಸ್ಥಾನಹೊಂದಿದ್ದರು ಎಂಬ ಅಂಶವನ್ನು ಕಾಣಬಹುದು. ೧೭-೧೮ನೇ ಶತಮಾನದ ಕಾಲದಲ್ಲಿ ಈ ಸಮುದಾಯಗಳು ಮುಮ್ಮುಖವಾಗಿ ಸಾಗಲು ಪ್ರಯತ್ನ ಪಡುತ್ತಿದ್ದ ಸಂದರ್ಭದಲ್ಲಿ ಅಥವಾ ಯಾವುದೇ ಒಂದು ಕಾಲಾವಧಿಯಲ್ಲಿ ಸಾಮೂಹಿಕವಾಗಿ ಮೇಲ್ಮುಖವಾಗಿ ಚಲಿಸುವ ತಂತ್ರದ ಜೊತೆಗಿರಬೇಕು ಇವರಿಗೆ ನಾಗರೀಕರಣದ ಒಲವು ಮತ್ತು ಯಾವ ರಾಜರ ರಾಜ ಭಂಡಾರಕ್ಕೆ ಇವರಿಂದ ಲಾಭವಿತ್ತೊ ಅಂತವರ ಶ್ರೀರಕ್ಷೆ, ಬೆಂಬಲ ಸಿಕ್ಕಿರಬೇಕು ಎಂಬ ಅಂಶಗಳನ್ನು ಗಮನಿಸಿದರೆ ಪಾಂಚಾಳರಿಗೆ ಪಣ ಸಮರ ಸಾಮಾಜಿಕವಾಗಿ ಸ್ವಲ್ಪ ಮೇಲೇರಿವು ಮಟ್ಟಲಾಯಿತೆಂದು ಕಂಡುಬರುತ್ತದೆ. ಇದಕ್ಕಿಂತ ಮೊದಲು ಈ ಪಾಂಚಾಳ ಸಮುದಾಯದವರು ಸಾಮಾಜಿಕ ತೊಂದರೆಗೆ ಒಳಗಾಗಿರುವ ಅಂಶಗಳು ಕಂಡುಬರುತ್ತವೆ. ಭಾರತದ ನಾನಾ ರಾಜ್ಯಗಳಲ್ಲಿ ೧೮೧೮ರಿಂದ ೧೯೩೦ನೇ ಸಾಲಿನವರೆಗೂ ನೆಡೆದ ವಿವಿಧ ವಾದ ವಿವಾದಗಳನ್ನು ಪರಿಶೀಲಿಸಿ ಪಾಂಚಾಳರ ಪರವಾಗಿಯೇ ನ್ಯಾಯಾಲಯಗಳು ತೀರ್ಪು ನೀಡಿರುವ ದಾಖಲೆಗಳು ಸಿಗುತ್ತವೆ. ಅಂತಹ ಉದಾಹರಣೆಯನ್ನು ಇಲ್ಲಿ ನೋಡಬಹುದಾಗಿದೆ.

೧೮೧೬ರಲ್ಲಿ ಹಬ್ಬದ ಪ್ರಯುಕ್ತ ತಮ್ಮ ಮನೆಗಳಿಗೆ ಸುಣ್ಣ ಬಳಿಯಲು ಹಾಗೂ ತೋರಣ ಕಟ್ಟಲು ನಿರ್ಧರಿಸಿದರು ಇದಕ್ಕೆ ಬಲಗೈಯವರು ಆಕ್ಷೇಪಿಸಿ ಮ್ಯಾಜಿಸ್ಟ್ರೇಟರ್‌ರಿಂದ ತಡೆಯಾಜ್ಞೆ ತರಲು ಪ್ರಯತ್ನಿಸಿದರು ನ್ಯಾಯಾಲಯ ಇದಕ್ಕೆ ಒಪ್ಪದೇ ಹೋದುದರಿಂದ ಸರಕಾರಕ್ಕೆ ತಂತಿರವಾನಿಸಿದರು. ತಂತಿಯಲ್ಲಿ ವಿಶ್ವಕರ್ಮರು ತಮ್ಮ ಜಾತಿಗೆ ಒರತಾದ ಈ ರೀತಿ ನೀತಿಗಳನ್ನು ಆಚರಿಸಲು ಮುಂದಾಗಿರುವುದನ್ನು ಕೂಡಲೇ ತಡೆಯಬೇಕೆಂದು ಕೋರಲಾಹಿತು. ಆದರೆ ಸರಕಾರ ನ್ಯಾಯಾದಿಕರಣದ ಕ್ರಮವನ್ನೆ ಎತ್ತಿ ಹಿಡಿದು ಪಾಂಚಾಳರಿಗೆ ಉಳಿದವರಂತೆ ತಮ್ಮ ಮನೆಗಳಿಗೆ ಸುಣ್ಣ ಬಳಿಯಲು ಹಕ್ಕಿದೆ ಎಂದು ಸ್ಪಷ್ಟಪಡಿಸಿತು. (ಸಿಂದ್‌ಮಾದಿಗರ ಸಂಸ್ಕೃತಿ-ಕೊಟಗನಹಳ್ಳಿ ರಾಮಣ್ಣ. ಪು-೬೭) ಎಂದು ತಿಲಿದು ಬರುತ್ತದೆ. ಅಂದರೆ ಈ ಪಾಂಚಾಳರಿಗೆ ತಮ್ಮದೇ ಆದ ಪೂರ್ಣ ಸ್ವತಂತ್ರ ಪಡೆಯುವ ಉತ್ಸಾಹ ಕಂಡರೂ ಅದಕ್ಕೂ ಮೊದಲು ತಮ್ಮ ಆಚರಣೆಗಳಿಗೆ ತಮ್ಮ ಅಸ್ಥಿತ್ವವನ್ನು ಕಾಪಾಡಿಕೊಳ್ಳಲು ಇನ್ನೊಬ್ಬರ ಅನುಮತಿಯನ್ನು ಪಡೆಯುವುದನ್ನು ನೋಡಿದರೆ ಅವರಿನ್ನು ತಮ್ಮ ಅಸ್ಥಿತ್ವವನ್ನು ಪಡೆಯುವಲ್ಲಿ ನಿರತರಾಗಿದ್ದರು ಎಂಬ ಅಂಶಗಳು ಕಂಡುಬರುತ್ತವೆ. ಇಂತಹ ಅನೇಕ ರೀತಿಯ ಸಮಸ್ಯೆಗಳಿಗೆ ಕೋರ್ಟಿನ ಮೆಟ್ಟಿಲೇರಿ ತಮ್ಮ ಪರವಾದ ತೀರ್ಪನ್ನು ಪಡೆಯುವುದನ್ನು ಕಂಡರೆ ತಮ್ಮ ಸಮುದಾಯವನ್ನು ಮುಖ್ಯವಾಗಿ ಬೆಳೆಸುವ ಮಾರ್ಗದಲ್ಲಿದ್ದರೂ ಎಂಬ ದೋರಣೆಗೆ ಬರಬಹುದು. ಇಲ್ಲಿ ಸಾಮಾಜಿಕ ಹಿನ್ನೆಲೆಯಲ್ಲಿ ಸಮುದಾಯಗಳು ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳುವ ವಿಧಾನವಾದರೆ ಮುಖ್ಯವಾಗಿ ಜಾಗತೀಕರಣದ, ಆಧುನೀಕರಣದ ಸಂದರ್ಭದಲ್ಲಿ ವೃತ್ತಿಗಳ ಮುಖಾಮುಖಿಗೆ ಒಳಪಟ್ಟು ಸ್ಥಿರತೆಯನ್ನು ಹೇಗೆ ಕಾಪಾಡುತ್ತಾರೆ ಆ ಮೂಲಕ ಇವರ ಅಸ್ಥಿತ್ವವನ್ನು ಹೇಗೆ ಸ್ಥಾಪಿಸಲು ಹೆಣಗಾಡುತ್ತಿದ್ದಾರೆಂಬ ಅಂಶಗಳನ್ನು ಗಮನಿಸ ಬಹುದು.

ಈ ದೇಶದ ಉತ್ಪಾದನಾ ಘಟಕಗಳಿಂದ ದೇಶೀಯ ತಂತ್ರಜ್ಞಾನಗಳೆನಿಸಿದ ಕುಂಬಾರಿಕೆ, ನೇಕಾರಿಕೆ, ಚಮ್ಮಾರಿಕೆ, ಕಮ್ಮಾರಿಕೆ, ಬಡಗಿತನ, ಕಂಚುಗಾರಿಕೆ, ಶಿಲ್ಪಗಾರಿಕೆ, ಸ್ವರ್ಣಗಾರಿಕೆ ಇನ್ನೂ ಅನೇಕ ರೀತಿಯ ವೃತ್ತಿಗಳನ್ನು ನಿರ್ವಹಿಸಿಕೊಂಡುಬಂದ ಕರ ಕುಶಲ ಕರ್ಮಿಗಳು ಜಾಗತೀಕರಣದ ಬಲೆಯೊಳಗೆ ಸಿಕ್ಕುಬಿದ್ದಿದ್ದಾರೆ. ಆಡು ಹುಲಿಯೊಂದಿಗೆ ಹೋರಾಟಮಾಡಲು ಸಾಧ್ಯವೇ ಆಡು ದೇಶೀಯ ವೃತ್ತಿಗಳಾದರೆ ಹುಲಿ ಜಾಗತೀಕರಣವಾಗಿದೆ.

ಹುಲಿಯ ಬಾಯಿಯೊಳಗೆ ಆಡು ಸಿಲುಕಿದೆ ಆದರಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುವಂತಿಲ್ಲ. ಬಾಯಿಯೊಳಗೆ ಸಿಕ್ಕಿರುವಾಗ ಅದರಿಂದ ಪಾರಾಗಿ ಏನು ಮಾಡಬೇಕೆಂಬುದು ತಿಳಿಯದಂತಾಗಿದೆ. ಹಾಗಾದರೆ ಆಡು ಬದುಕುವ ಆಸೆಯನ್ನು ಬಿಟ್ಟುಬಿಡುವುದು ಸರಿಯೇ ಎಂಬ ಪ್ರಶ್ನೆಗೆ ಅದೇ ಉತ್ತರ ಕಂಡುಕೊಳ್ಳಬೇಕಿದೆ ಅದಕ್ಕೆ ತನ್ನದೇ ಆದ ತಂತ್ರಗಳನ್ನು ಚಾಣಾಕ್ಷತನದಿಂದ ರೂಪಿಸಿಕೊಳ್ಳ:ಬೇಕಿದೆ. ಆ ಬುದ್ಧಿ ಶಕ್ತಿಯನ್ನು ಆಡಿನ ಸಮುದಾಯಗಳು ಕಂಡುಕೊಳ್ಳಲು ಸಾಧ್ಯವಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿರುವ ಕರಕುಶಲ ಸಮುದಾಯಗಳು ಜಾಗತೀಕ ಮಟ್ಟದಲ್ಲಿ ನಿಂತು ಹೋರಾಡುವುದು ಸಾಧ್ಯವಾಗುವುದಿಲ್ಲ ಆಗ ಈ ಕಾಲದಲ್ಲಿ ತಮ್ಮ ಅಸ್ಥಿತ್ವ ಉಳಿಸಿಕೊಳ್ಳುವ ಪ್ರಯತ್ನ ವಿಫಲವಾಗುತ್ತದೆ. ಕುಂಬಾರರ ಮಡಿಕೆಗೆ ಬದಲಾಗಿ ಪ್ಲಾಸ್ಟಿಕ್ ಸಾಮಾನುಗಳನ್ನು ಅತೀ ಕಡಿಮೆ ದರದಲ್ಲಿ ದೊರೆಯುವುದರಿಂದ ಅದರ ಬಳಕೆ ಹೆಚ್ಚಾಗುತ್ತದೆ. ಆದ್ದರಿಂದ ಈ ಕುಂಬಾರಿಕೆಯ ವೃತ್ತಿಕಾರ ರಸ್ತೆಯಲ್ಲಿ ನೋಡುಗರ ಕಣ್ಣಿಗೆ ಕಾಣುವಂತೆ ಇಟ್ಟು ಬಿಸಿಲಿನ ಬವಣೆಯಲ್ಲಿ ದಿನಕಳೆದರೂ ಒಂದು ಮಡಿಕೆಯೂ ವ್ಯಾಪಾರವಾಗಿಲ್ಲದಿರುವಾಗ ಆ ಕುಶಲಕರ್ಮಿ ಹೇಗೆ ಬದುಕಲು ಸಾಧ್ಯವಾಗುತ್ತದೆ, ಅಂತಹ ಪರಿಸ್ಥಿತಿ ಈ ಎಲ್ಲಾ ಕರಕುಶಲ ಕರ್ಮಿಗಳಿಗೂ ಬಂದೊದಗಿದೆ.

ಕಮ್ಮಾರರು ತಯಾರಿಸುವ ಉಪಕರಣಗಳ ಬದಲಾಗಿ ಕಾರ್ಖಾನೆಗಳಲ್ಲಿ ನಿರ್ಮಾಣವಾಗುವುದರಿಂದ ಕುಲುಮೆಯಲ್ಲಿ ನಾಯಿ ಮಲಗಿಕೊಂಡಿರುತ್ತವೆ. ಆ ಕುಲುಮೆಯಲ್ಲಿ ಬೆಂಕಿಯನ್ನು ಹಾಕದೆ ಬೂದಿಯಷ್ಟೆ ಹರಡಿಕೊಂಡು ಬೆಂಕಿಗಾಗಿ ಕಾಯುತ್ತಿದೆ. ಬಡಗಿಯರ ಬಾಚಿ, ಉಳಿಗಳು, ತುಕ್ಕು ಹಿಡಿದು ಮೂಲೆಯಲ್ಲಿ ಕುಳಿತಿವೆ. ಇನ್ನು ಕಂಚುಗಾರ ಕಾಯಕವಂತು ಸಂಪೂರ್ಣವಾಗಿ ನಿಂತಿವೆ. ಅವರ ಪಂಕದ ರೆಕ್ಕೆಗಳು ಮುರಿದು, ಎರಕಹೊಯುವ ಅಚ್ಚುಪಡಿ ತೂತುಬಿದ್ದು ದಿಕ್ಕಿಲ್ಲದೇ ಕಳೆದುಹೋಗಿವೆ. ಮತ್ತೆ ಪುನಃ ಅವುಗಳನ್ನು ಹುಡುಕಿ ತರಲು ಸಾಧ್ಯವಿಲ್ಲ. ಅಕ್ಕಸಾಲಿಗ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಸಣ್ಣ ಪುಟ್ಟ ಆಭರಣಗಳಿಗೆ ಬೆಸಿಗೆ ಹಾಕಿಕೊಂಡು ಕುಳಿತಿದ್ದಾರೆ. ಶ್ರೀಮಂತರ ಅಥವಾ ಮಾರವಾಡಿಗಳ ಕೈಯಲ್ಲಿ ಈ ಅಕ್ಕಸಾಲಿಗಳು ಕೂಲಿ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಹೆಚ್ಚು ಬಂಡವಾಳ ಹೂಡದ ಶಕ್ತಿ ಅವರನ್ನು ನೆಲಕಚ್ಚುವಂತೆ ಮಾಡಿ ತೊತೆಗೆ ಆಭರಣಗಳು ಕೂಡಾ ಕಾರ್ಖಾನೆಗಳಲ್ಲಿ ಸಿದ್ದ ವಸ್ತುಗಳಾಗಿ ಮಾರ್ಪಟ್ಟವೆ. ಅವರ ಅಗ್ಗಿಷ್ಟಿಕೆಯಲ್ಲಿ ಬಂಗಾರ ಕಾಣದೇ ಬಡವಾಗಿದೆ. ಶಿಲ್ಪಿಗಳು ಸಾಂಸ್ಕೃತಿಕ, ಧಾರ್ಮಿಕ ಸೊಬಗನ್ನು ನಿರ್ಮಿಸಲು ಈ ಕಾಲದಲ್ಲಿ ಸಾಧ್ಯವಿಲ್ಲ. ಈಗಿರುವ ಶಿಲ್ಪಕಲೆಯನ್ನು ನೋಡುವುದಕ್ಕೆ ಸಮಯ ಸಾಲುವುದಿಲ್ಲ ಬದಲಾಗಿ ಸಾಂಸ್ಕೃತಿಕವಾಗಿ ಇಡೀ ಜಗತ್ತೇ ನಿಬ್ಬೆರಗಾಗುವಂತೆ ಸೌಂದರ್ಯ ಹೊಂದಿದ್ದು ಇನ್ನು ಹೆಚ್ಚು ಶಿಲ್ಪಕಲೆಯು ಬೇಕಾಗಿಲ್ಲ ಎನಿಸುತ್ತದೆ. ಶಿಲ್ಪಕಲೆ ಒಂದು ಶಾಸ್ತ್ರವಾಗಿ ಬೆಳೆಯುತ್ತದೆಯೇ ಹೊರತು ಜೀವನೋಪಾಯವನ್ನು ನೆಡೆಸಲು ಕಷ್ಟವಾಗಿದೆ.

ಈ ಕರಕುಶಲ ಕರ್ಮಿಗಳ್ಳ ಅಸ್ತಿತ್ವವು ಮಾಯವಾಗುವತ್ತ ಅಥವಾ ಕಳೆದುಕೊಳ್ಳುವತ್ತ ಸಾಗಿಬರುವುದನ್ನು ಜಾಗತೀಕರಣದ ಸಂದರ್ಭದಲ್ಲಿ ಅವು ದಿಕ್ಕು ದಸೆಇಲ್ಲದೇ ಹೋಗಬಹುದು ಎಂಬ ಆತಂಕ ಆವರಿಸುತ್ತದೆ. ಈ ವೃತ್ತಿಗಳಿಗೆ ಹೊಸ ಯುಗವು ಮಾರಕವಾಗಿ ಪರಿಣಮಿಸಿ ದೇಶೀಯ ತಂತ್ರಜ್ಞಾನಗಳು ತಮ್ಮ ದುರಂತ ಕಥೆಯನ್ನು ನಿರೂಪಿಸಿಕೊಡುತ್ತವೆ. ಜಾಗತೀಕರಣದ ಅಸ್ತಿತ್ವಕ್ಕೆ ತನ್ನ ವೃತ್ತಿಗಳ ಅಸ್ಥಿತ್ವದ ಅಮೂರ್ತರೂಪವನ್ನು ಒಪ್ಪಿಕೊಂಡು ಪ್ರತಿರೋಧ ಒಡ್ಡುತ್ತದೆ. ಜಾಗತೀಕರಣದ ಪೂರ್ವದಲ್ಲಿ ಜೀವನದ ಭದ್ರತೆಯನ್ನೇ ಹೊಂದಿರುವುದಿಲ್ಲ ಎಂಬುದು ಇವರ ಸ್ಥಿತಿಯನ್ನು ನೋಡಿದರೆ ಗೊತ್ತಾಗಬಹುದು. ತಮ್ಮ ವೃತ್ತಿಯಲ್ಲಿ ತಮ್ಮ ಜೀವನ ಎಂದು ಭಾವಿಸಿರುವಾಗ ಅಥವಾ ವೃತ್ತಿಯನ್ನೇ ನಂಬಿ ಜೀವಿಸುವುದನ್ನು ಕಾಣಬುದು. ಅಂತಹ ಜಾಗತೀಕರಣ ಸನ್ನಿವೇಶದಲ್ಲಿ ಜೀವನ ಅಭದ್ರ ಸ್ಥಿತಿಗೆ ಒಳಗಾಗುವುದನ್ನು ಕಣ್ಣುಗಳ ಮುಂದೆ ಹಾದುಹೋಗುತ್ತದೆ.

ಜಾಗತೀಕರಣ ಮನುಷನಿಗೆ ಆಧುನಿಕ ಮೆರಗನ್ನು ನೀಡುತ್ತಾ ಹೋಗುತ್ತದೆ. ಈ ಆಧುನಿಕತೆ ಎನ್ನುವುದು ಮನುಷ್ಯನ ಬಯಕೆಗಳನ್ನು ನವೀಕರಿಸುತ್ತವೆ. ಇಂತಹ ಹೊಸ ಬಯಕೆ ಗಳನ್ನು ಈಡೇರಿಸುವಲ್ಲಿ ಕರಕುಶಲ

ಕರ್ಮಿಗಳು ಹಿಂದೆ ಬೀಳುತ್ತಾರೆ ಅಥವಾ ಯಂತ್ರೋಪಕರಣಗಳೊಂದಿಗೆ ಪೈಪೋಟಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲೇ ಜೀವನ ಭದ್ರತೆಹೊಂದಿರದ ಕರಕುಶಲ ಕರ್ಮಿಗಳು ದುಡಿಮೆಯ ಪ್ರಮಾಣ ಕಡಿಮೆಯಾಗುವುದರೊಂದಿಗೆ ಆರ್ಥಿಕ ಸಂಕಷ್ಟಕ್ಕೆ ಒಳಗಾದರೆ ಸಂಪ್ರದಾಯಗಳನ್ನು ಮೊಟಕುಗೊಳಿಸುವುದರೊಂದಿಗೆ ಸಾಮಾಜಿಕ ಅಸ್ಥಿರತೆಯನ್ನು ಹೊಂದುತ್ತಾರೆ. ಮೂಲ ಆಚರಣೆಗಳಿಗೆ ಮಹತ್ವ ಕೊಡದೇ ಸಾಂಸ್ಕೃತಿ ಗೊಂದಲಕ್ಕೆ ಹೊಳಗಾಗುತ್ತಾರೆ. ಹೀಗೆ ಮುಂದುವರೆಯುತ್ತಿರುವ ಭಾರತದಂತಹ ದೇಶಗಳದಲ್ಲಿ ಪಾಂಚಾಳ ಸಮುದಾಯದವರು ಆರ್ಥಿಕವಾಗಿ. ಸಾಮಾಜಿಕವಾಗಿ ಅದಃಪತನಕ್ಕೆ ಒಳಗಾಗುತ್ತಾರೆ ಹೀಗಾಗಿ ಆರ್ಥಿಕ ಅಭದ್ರತೆಯಲ್ಲಿ ಪಾಂಚಾಳ ಸಮುದಾಯದ ಅಸ್ತಿತ್ವಕ್ಕಾಗಿ ಮೂಲ ವೃತ್ತಿಗಳನ್ನು ಉಳಿಸಿಕೊಳ್ಳಲು ವಿಫಲವಾಗಿರುವುದು ಕಂಡುಬರುತ್ತದೆ.

